ಡಾಕ್ಟರ್ ಅಘೋರ

ನುಲ್ಲಿಕಾ

ಡಾಕ್ಟರ್ ಅಘೋರ

ಮಲ್ಲಿಕಾ

ಯಸ್ಮಿನ್ಸರ್ವಂ ಯತಸ್ಸರ್ವಂ
ಯಸ್ಸರ್ವಂಸರ್ವತಶ್ಚಯಃ
ಯಶ್ಚ ಸರ್ವಮಯೋ ದೇವಃ
ತಸ್ಮೈ ಸರ್ವಾತ್ಮನೇ ನಮಃ

Doctor Aghora in Kannada by 'Mallika'
Published by Lakshmi Prakashana,
170, Langford Road, Bangalore-560 025.

ಪ್ರಥಮ ಮುದ್ರಣ : ೧೯೬೭
ದ್ವಿತೀಯ ಮುದ್ರಣ : ೧೯೯೧

ಬೆಲೆ : ಎಪ್ಪತ್ನಾಲ್ಕು ರೂಪಾಯಿಗಳು

ಮುದ್ರಕರು :

ನ್ಯೂ ಐಡಿಯಸ್
ನಂ. 30, 15ನೇ ಮುಖ್ಯ ರಸ್ತೆ
ಪೂರ್ವದಿಕ್ಕಿನ ವಿಭಾಗ, ಜಯನಗರ
ಬೆಂಗಳೂರು–560 011

॥ ಶ್ರೀ ಕೃಷ್ಣಾರ್ಪಣಮಸ್ತು ॥

ಡಾಕ್ಟರ್ ಅಘೋರ

ಮಲ್ಲಿಕಾ

ಲಕ್ಷ್ಮೀ ಪ್ರಕಾಶನ
170, ಲ್ಯಾಂಗ್ ಫೋರ್ಡ್ ರೋಡ್
ಬೆಂಗಳೂರು–560 025

ನಿವೇದನೆ

ಈ ಕಾದಂಬರಿಗೆ ಆರಿಸಿಕೊಂಡ ಕಥಾವಸ್ತು ನನ್ನ ತಿಳಿವಳಿಕೆಯ ವ್ಯಾಪ್ತಿಗೆ ಮೀರಿದ್ದು. ಇದಕ್ಕೆ ಅಗತ್ಯವಾಗಿ ಬೇಕಾಗಿದ್ದ ಕೆಲವು ಆಪರೇಶ‌ಗಳ ವಿವರಗಳನ್ನು ಡಾಕ್ಟರ್ ಹೆಚ್. ಎ. ಗಂಗಪ್ಪನವರಿಂದ ಪಡೆದುಕೊಂಡಿದ್ದೇನೆ. ಇದರಲ್ಲಿ ಲೋಪದೋಷಗಳೇನಾದರೂ ಇದ್ದರೆ ಅವು ನನ್ನ ಜ್ಞಾನ ದೋಷವೇ ಹೊರತು ಡಾಕ್ಟರದಲ್ಲ. ವಿಷಯುಗಳನ್ನೊದಗಿಸಿ ಉಪಕಾರ ಮಾಡಿದ ಶ್ರೀ ಗಂಗಪ್ಪನವರಿಗೆ ನನ್ನ ಸಸ್ನೇಹ ವಂದನೆಗಳನ್ನರ್ಪಿಸುವುದು ನನ್ನ ಮೊದಲ ಕರ್ತವ್ಯ. ಅಲ್ಲದೆ, ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಸ್ಮೃತಿಗೆ ಸಂಬಂಧ ಪಟ್ಟ ಲೇಖನವೊಂದನ್ನು ಈ ಕೃತಿಗೆ ಅಳವಡಿಸಿಕೊಳ್ಳಲು ಅನುಮತಿ ನೀಡಿದ ಸಂಪಾದಕರು ಮತ್ತು ಲೇಖಕರುಗಳಿಗೂ ಸವಿನಯ ವಂದನೆಗಳು. ಆ ಲೇಖನದ ಮೊದಲ ತುಣುಕನ್ನು ಮಾತ್ರ ಈ ಕಾದಂಬರಿಯಲ್ಲಿ ಸೇರಿಸಿಕೊಳ್ಳಲಾಗಿದೆ. ಉಳಿದ ಭಾಗವನ್ನು ನನ್ನ ಮುಂಬರಲಿರುವ ಕೃತಿ "ಡಾಕ್ಟರ್ ಕಮಲೇಶ್" ಎಂಬ ಕಾದಂಬರಿಯಲ್ಲಿ ಹಾಸು ಹೊಕ್ಕಾಗಿ ಹಣೆದು ಕೊಳ್ಳಲಾಗಿದೆ. ಈ ಹೊತ್ತಿಗೆಯ ಹಸ್ತ ಪ್ರತಿಯನ್ನು ಓದಿ ನೋಡಿ ಮೆಚ್ಚಿಗೆ ಸೂಚಿಸಿ "ಕನ್ನಡಕ್ಕಿದ್ದ ಕೊರತೆಯೊಂದು ಇಂದು ನಿವಾರಣೆಯಾಯಿತು." ಎಂದ ಹಿರಿಯ ಬಂಧುಗಳಿಗೂ ನನ್ನ ಸವಿನಯ ವಂದನೆಗಳನ್ನರ್ಪಿಸುವೆ. ಆದರೆ, ಅದು ಎಷ್ಟರ ಮಟ್ಟಿಗೆ ಸಾಧ್ಯವಾಗಿದೆ ಎಂಬುದರ ವಿಮರ್ಶೆ ಪಾಠಕ ಮಹಾಶಯರಿಗೆ ಸೇರಿದ್ದು.

ಡಾಕ್ಟರು ಮಹಾಶಯರುಗಳಲ್ಲಿ ವಿನಂತಿ: ಈ ಕೃತಿಯ ಬಗ್ಗೆ ಉತ್ತಮ ಸಲಹೆಗಳನ್ನು ನೀಡಿದಲ್ಲಿ ಹೃತ್ಪೂರ್ವಕವಾಗಿ ಸ್ವಾಗತಿಸುವೆ.

ಪ್ಲವಂಗನಾಮ ಸಂವತ್ಸರ ಯುಗಾದಿ

ಮಲ್ಲಿಕಾ
೧೦-೪-೧೯೬೭

ನಿವೇದನೆ

ಸಾಹಿತ್ಯವು ವಾಙ್ಮಯ ಶರೀರಿಯಾಗಿರುವುದರಿಂದ ಅದರಲ್ಲಿ ರಾಗ ರಸಭಾವಗಳು ಮಾತ್ರವಲ್ಲ. ಸಾಮದಾನ ಭೇದಾದಿ ಸಕಲೋಪಾಯಂಗಳೂ ಕೂಡಿ ಸಾಹಿತ್ಯಸೃಷ್ಟಿಯಾಗುವುದು ಸಹಜ. ಸ್ವಾನುಭವದಿಂದಾಚೆಯ ವಿಜ್ಞಾನಸಪೂರ್ಣ ಕಥಾಶೈಲಿಯನ್ನು ಹೆಣೆಯುವಾಗ ಭಾವಸ್ಫೂರ್ತಿಯು ಮೊಳೆಯಬೇಕು. ವ್ಯಕ್ತದ ಅಂಚಿನಿಂದ ಅವ್ಯಕ್ತದ ಹಿರಿಮೆಯ ದರ್ಪಣವನ್ನು ಇಣಿಕಿ ನೋಡುವ ಸ್ಥೈರ್ಯವೂ ಇರಬೇಕು. ಹುಟ್ಟು–ಸಾವುಗಳ ನಡುವೆ ಬಾಳು-ಬದುಕನ್ನು ನಿರೂಪಿಸುವಲ್ಲಿ ಶಾಂತಿ–ಸಮಾಧಾನಗಳ ಛಟ್ಟಿಯನ್ನು ಇಳಿಸುವುದೂ ಸಹ ಅತ್ಯಾವಶ್ಯಕ.

ಕಾದಂಬರಿಯ ಕಥಾವಸ್ತು ಸರ್ವೇಸಾಮಾನ್ಯವಾಗಿ ಸಾಮಾಜಿಕ ವಲಯದಲ್ಲಿನ ರೂಪುರೇಷೆಗಳ ಎಳೆಎಳೆಯನ್ನು ನವಿರಾಗಿ ಹೆಣೆದುಕೊಳ್ಳುವುದು ಸಹಜ. ಆದರೆ, ಡಾ|| ಅಘೋರದಲ್ಲಿ ಬರುವ ಭಾವನಿರೂಪಣೆ ಮತ್ತು ಕಥನ ಶೈಲಿ ಎರಡೂ ತೀರಾ ವಿಭಿನ್ನವೇ. ಅಲ್ಪಸ್ವಲ್ಪ ವೈಜ್ಞಾನಿಕ ವಿಶೇಷವೂ ಅಡಕವಾಗಿದೆ ಇದರಲ್ಲಿ. ಸಾಹಿತ್ಯವು ಜೀವಕಳೆ ತುಂಬಬೇಕಾದರೆ ಭಾವ ಕಲ್ಪನೆ ಮಾತ್ರವಿದ್ದರೆ ಲಘುವಾಗುತ್ತದೆ. ಆಳವಾದ ಮತ್ತು ಗಾಢವಾದ ಆಲೋಚನೆಯ ದಿವ್ಯ ತಳಹದಿಯು ಇದ್ದಲ್ಲಿ, ತತ್ತ್ವಶಾಸ್ತ್ರದ ಕಾರ್ಯ–ಕಾರಣ ಸುಖ–ದುಃಖಗಳ ಚಿಂತನೆ ಇವುಗಳಿಂದ ಸಾಹಿತ್ಯವು ಕಳೆ ಕಟ್ಟುತ್ತದೆ. ಕೇವಲ ಆನಂದ ರಸಾಬ್ಧಿಯಲ್ಲಿ ಈಸುವ ಉದ್ದಿಶ್ಯದಿಂದ ಬರೀ ಸುಖದ ಅಂಕಣವನ್ನೇ ಸೃಷ್ಟಿಸುತ್ತಾ ಹೋದರೆ ಅದು ಎಲ್ಲರ ಮನಮತಿಗಳನ್ನು ರಂಜಿಸುತ್ತದೆ ಎಂದು ದೃಢವಾಗಿ ಹೇಳಲಾಗದು. ಬುದ್ಧಿಮತ್ತೆಯ ಚಿಂತನಾದ್ರವ್ಯ ಒಂದನ್ನು

ಬಿಟ್ಟು ಒಂದನ್ನು ಹಿಡಿಯುವುದು ಸಾಧ್ಯವೂ ಇಲ್ಲ. ಪ್ರಪಂಚದ ಘನ ಆಲೋಚಕರನ್ನು ಕುರಿತು ಯೋಚಿಸಿದರೆ ಯಾರೊಬ್ಬರ ಮಹಾಕೃತಿಗಳೂ ಬೂರುಗದ ಅರಳೆಯಂತೆ ಹಗುರವಾಗಿಲ್ಲ. ಸುಖದುಃಖಭರಿತ ಭಾರಾಕ್ರಾಂತ ಕೃತಿಗಳೇ ಆಗಿವೆ ಎಂಬುದರಲ್ಲಿ ಸಂಶಯವಿಲ್ಲ. ಉತ್ತಮ ಸಾಹಿತ್ಯಕ್ಕೆ ತೇಜಸ್ಸು ತಪಸ್ಸುಗಳೆಂತು ಅವಶ್ಯಕವೋ ಅಂತೆಯೇ ಸಾಮಾಜಿಕ ಪ್ರಜ್ಞೆಯೂ ಆವಶ್ಯಕ. ಅಂದಮೇಲೆ, ಸುಖದುಃಖಗಳ ಭಂಡಾರ ಇದ್ದೇ ಇರುತ್ತದೆ.

ಬಹಳ ದಿನಗಳನಂತರ ಈ ಕೃತಿಯು ಪುನರ್ಮುದ್ರಣಗೊಂಡಿದೆ. ಇತಿಮಧ್ಯೆ ಹೊಸಹೊಸ ಕೃತಿಗಳಿಗೆ ಗಮನಕೊಟ್ಟುದುದರ ಫಲವಾಗಿ ಇದು ಹಿಂದೆ ಉಳಿಯಲು ಕಾರಣವಾಯಿತು. ಇದರ ಗುಣದೋಷಗಳ ವಿಮರ್ಶೆ ವಾಚಕ ಮಹಾಶಯರಿಗೆ ಸೇರಿದ್ದು.

ಶ್ರೀ ಈಶಾನುಗ್ರಹ, ಗುರುಬಾಂಧವರ ಕೃಪೆ ಇಷ್ಟಮಿತ್ರರ ಸಹಾಯ ಮತ್ತು ರಸಜ್ಞರ ಅವ್ಯಾಜಪ್ರೇಮ-ಇವುಗಳು ನನ್ನನ್ನು ಅತ್ಯಂತ ಕಠಿಣಾತಿ ಕಠಿಣ ಪ್ರಸಂಗಗಳಲ್ಲಿ ಎದೆಗೆಡದೆ ಸಾಧನೆಯ ಹಾದಿಯಲ್ಲಿ ನಡೆಸಿವೆ. ಆದ್ದರಿಂದ ನಾನು ಈ ಎಲ್ಲರಿಗೂ ಭಕ್ತಿಯಿಂದ ನಮಿಸುವೆ ಮತ್ತು ಈ ಜೀವಮಾನ ಪರ್ಯಂತ ಕೃತಜ್ಞತೆಯಿಂದ ನೆನೆಯುತ್ತಿರುವೆ.

ಪ್ರಜೋತ್ಪತ್ತಿ ಸಂವತ್ಸರದ ಭಾದ್ರಪದ ಶುಕ್ಲ ಚೌತಿ ಗುರುವಾರ — **ಮಲ್ಲಿಕಾ**
೧೨-೯-೧೯೬೧

ಅಧ್ಯಾಯ

೧

ಡಾಕ್ಟರ್ ಅಘೋರ

ಮದನ್ ಮಿತಾಳಿ ಹಾದಿಯ ನೇರಕ್ಕೆ ಹೆಜ್ಜೆ ಹಾಕಿದ್ದ. ರಂಗು ರಂಗಿನ ಉಡಿಗೆತೊಟ್ಟ ಅವನು ಜಯನಗರದಿಂದ ಸಂಜೆಯ ಸೊಂಪನ್ನು ಸವಿಯುತ್ತಾ ಲಾಲ್‌ಬಾಗಿನ ಹಾದಿ ತುಳಿದಿದ್ದ. ಅಲ್ಲಿಂದ ಇನ್ನೇನು ಹಾಸುಗಲ್ಲಿನ ದಿಬ್ಬವನ್ನೇರಬೇಕು. ಅಷ್ಟರಲ್ಲಿ ಸಿಳ್ಳು ಹಾಕಿ ಹಿಂದಿನಿಂದ ಯಾರೋ ಹೆಸರಿಡಿದು ಕೂಗಿದಂತಾಯಿತು. ಯಾರಿರಬಹುದೆಂದು ಅರಿಯಲು ಮೈಯೆಲ್ಲಾ ಚಕಮಕಿಯಾಗಿ ಹುಡುಕಾಡಿದ. ಅಲ್ಲಿ ಇಲ್ಲಿ ಪೊದೆಗಳ ಹಿಂದೆ ಎಲ್ಲಾ ಕಡೆ ಅಲೆದಾಡಿದರೂ ಕರೆದವರ ಸುಳಿವು ಹತ್ತಲಿಲ್ಲ. ಮದನ್ ತುಸು ಯೋಚಿಸಿ, ಮತ್ತೆ ದಿಬ್ಬವನ್ನೇರಲು ಮೊದಲು ಮಾಡಿದೊಡನೆ ಹಿಂದಿನಿಂದ ಮತ್ತೆ ಅದೇ ದನಿ ಮೊಳಗಿತು "ಓ ಮದನ್ ಮಿತಾಳಿ !"

ಆಶ್ಚರ್ಯಚಕಿತನಾಗಿ ಮದನ್ ಎಲ್ಲ ಕಡೆಯೂ ನಿರಿನಿರಿ ನಿಟ್ಟಿಸ ತೊಡಗಿದ. ಯಾರೂ ಕಣ್ಣಿಗೆ ಬೀಳಲಿಲ್ಲ. ಕಣ್ಣನೋಟ ಹರಿಯುವವರೆವಿಗೂ ನೋಡಿದ. ರಸ್ತೆಯ ನೇರಕ್ಕೆ ಎಡಬಲಗಳಲ್ಲಿ ಗಿಡ ಮರ ಪೊದೆಗಳು ತುಂಬಿದ್ದುದರಿಂದ ತಕ್ಷಣ ದನಿಯ ಜಾಡು ಹತ್ತಲಿಲ್ಲ. ಸಂಶಯ ತೋರಿದೆಡೆಗಳಲ್ಲೆಲ್ಲಾ ಹುಡುಕಾಡಿ ಸಿಕ್ಕದಿರಲು ನಿರಾಶನಾಗಿ ಮತ್ತೆ ದಿಬ್ಬದ ಕಡೆ ಹೆಜ್ಜೆ ಹಾಕಿದರೆ ಪುನಃ ಅದೇ ದನಿ ! ನಸು ದೂರದಲ್ಲಿ ಬೋಗನ್‌ವಿಲಾ-ದ ದುಂಡನೆಯ ದೊಡ್ಡ ಪೊದೆಯ ಹಿಂದೆ ನಾಯಿಯೊಂದು ದೊಡ್ಡ ದನಿಯಲ್ಲಿ ಬೊಗಳತೊಡಗುತ್ತಲೂ ನಿರಾಯಾಸವಾಗಿ ದನಿಯ ಜಾಡು ಹತ್ತಿತು....ಎಲಾ ಇದರ ! ಆಗೊಮ್ಮೆ ಅಲ್ಲೆಲ್ಲಾ ನೋಡಿದರೂ ಕಾಣಿಸಲಿಲ್ಲವಲ್ಲಾ ....? ಮೈಯೆಲ್ಲಾ ಅಚ್ಚರಿಯಮಯವಾಗಿ ಅಲ್ಲಿಗೆ ಹೋಗಿ ನೋಡಿದರೆ ಅಘೋರ ತನ್ನೆಲ್ಲಾ ಹಲ್ಲುಗಳನ್ನೂ ಬಿಟ್ಟುಕೊಂಡು ನಗುತ್ತಾ ನಿಂತಿದ್ದ. ತಕ್ಷಣ ಇಬ್ಬರ ಕೈಗಳೂ

ಹೆಣೆದುಕೊಂಡವು. ಪರಸ್ಪರ ದರ್ಶನಲಾಭದಿಂದ ಎಳೆಯರ ಮುಖಗಳು ಹೂವಿನಂತರಳಿದುವು, ಪ್ರಸನ್ನ ತೇಜವುಕ್ಕುವಂತೆ.

"ಏ ! ಕಳ್ಳಾ ! ಎಷ್ಟುಹುಡುಕಿದರೂ ಕಾಣಿಸಲಿಲ್ಲ? ದನಿಯು ಗುರುತೂ ಹತ್ತಲಿಲ್ಲ ?"

ಕಣ್ಣುಗಳನ್ನರಳಿಸಿ ನಗುತ್ತಾ ತಮಾಷೆಯ ಧಾಟಿಯಲ್ಲಿ-"ನೋಡಪ್ಪಾ, ಹೇಗಿದೆ ಚಮತ್ಕಾರ !"

ಅಘೋರ ಮಾಂಬಿಯ ಸರಪಳಿಯನ್ನು ಬಿಗಿ ಹಿಡಿದುಕೊಂಡಿದ್ದ. ರೋಷ ಪೂರ್ಣವಾದ ಅದು ಅತ್ತಿತ್ತ ಜಿಗಿದಾಡುತ್ತಾ ತನ್ನ ಪೌರುಷವನ್ನು ಪ್ರದರ್ಶಿಸು ತಿತ್ತು. ದೊಡ್ಡ ಸರಪಳಿಯನ್ನು ಬಿಗಿಹಿಡಿದ ಅಘೋರನ ಎಳೆಯ ಹಸ್ತಗಳು ಅದರ ಜಿಗಿದಾಟದಿಂದ ಕೆಂಪು ಕೆಂಪಾಗಿದ್ದುವು. ಉರಿಯುತಿದ್ದ ಕೈಯನ್ನು ಉಜ್ಜಿಕೊಳ್ಳುತ್ತಾ ಅಘೋರ–"ಶುದ್ಧ ತುಂಟನಾಯಿ! ನಿಂತಲ್ಲಿ ನಿಲ್ಲುವುದಿಲ್ಲ. ನನ್ನ ಕೈ ನೋಡು ಹೇಗಾಗಿದೆ !"

ಮದನ್ ಅವನ ಕೈಗಳ ಕಡೆಗೆ ದಿಟ್ಟಿ ಹೊರಳಿಸಿದ. ಹಸ್ತಗಳು ನೆತ್ತರನ್ನು ಚೆಲ್ಲುವಂತಿದ್ದುವು.

"ಸರಪಳಿ ತಂದರೆ ಆಗುವುದೇ ಹೀಗೆ. ನೀನು ಬೆಲ್ಟ್ ತರಬೇಕಾಗಿತ್ತು."

"ಓ! ಇದಕ್ಕೆ ಸಾಮಾನ್ಯ ಬೆಲ್ಟ್ ಸಾಕೆ? ದೈತ್ಯ ಬೆಲ್ಟ್ ಬೇಕು ಎಲ್ಲಿಂದ ತರಲಿ ?" ನಸುನಕ್ಕು ಅಘೋರ ಪುನಃ ಅಂದ "ಮದನ್, ದಿನವೂ ಇದನ್ನು ಹೊರಗಡೆ ಕರೆದುಕೊಂಡು ಹೋಗುವುದೆಂದರೆ ಸಾಕು ಸಾಕಾಗುತ್ತೆ."

"ಆಲ್ಸೇಶಿಯನ್ ನಾಯಿಗಳೇ ಹಾಗೆ !"

"ಅದರಲ್ಲೂ ಇದು ಅಸಾಮಾನ್ಯ ಕಣಯ್ಯಾ !"

"ಇಲ್ಲಿಕೊಡು. ನಾನು ಸ್ವಲ್ಪ ಹೊತ್ತು ಹಿಡಿದುಕೊಳ್ಳುವೆ."

ಅವನಿಂದ ಸರಪಳಿಯನ್ನು ತೆಗೆದುಕೊಂಡ ಮದನ್. ಮೊದಲಿನಿಂದಲೂ ಗೆಳೆಯರು ಆಗಾಗ್ಗೆ ಕೂಡುತಿದ್ದುದರಿಂದ ಅದಕ್ಕೆ ಮದನನ ಪೂರ್ಣ ಪರಿಚಯ ವಿತ್ತು. ಅವನು ಸರಪಳಿಯನ್ನು ತೆಗೆದುಕೊಳ್ಳುತ್ತಲೂ ಬಾಲ ಅಲ್ಲಾಡಿ ಸುತ್ತಾ ಅದು ಪ್ರೀತಿಯನ್ನು ವ್ಯಕ್ತಪಡಿಸಿತು, ಸಾನಂದ ಪೂರ್ವಕವಾಗಿ.

ಅಘೋರ ಹಸನಾದ ನಗುವನ್ನು ಬೀರಿ- "ಹಾಸುಗಲ್ಲಿನ ದಿಬ್ಬದ ಮೇಲೆ ಹತ್ತಿಕುಳಿತುಕೊಳ್ಳೋಣ."

ಸರಿ, ಇಬ್ಬರೂ ದಿಬ್ಬವನ್ನು ಏರತೊಡಗಿದರು. ದಿಬ್ಬದ ತಪ್ಪಲಿನ ರಸ್ತೆಯಲ್ಲಿ ಆಗಲೇ ಜನರು ಜಮಾಯಿಸ ತೊಡಗಿದ್ದರು. ಬಣ್ಣಬಣ್ಣದುಡುಪಿನ ಜನ ಜಂಗುಳಿಯ ಕಡೆ ಆಗಾಗ್ಗೆ ದಿಟ್ಟಿಯನ್ನು ಹೊರಳಿಸುತ್ತಾ ನೆತ್ತಿಯ ಮೇಲಕ್ಕೆ ಏರಿದರು–ಹುಡುಗರು. ನಾಯಿಗೆ ಅವರ ಕೈಯಿಂದ ಬಿಡಿಸಿಕೊಂಡು ಅತ್ತಿತ್ತ ಜಿಗಿದಾಡುವ ಹುಮ್ಮಸ್ಸು. ಆದರೆ ಅಂದು ಭಾನುವಾರವಾಗಿದ್ದುದರಿಂದ ಆಗಲೇ ಅಪಾರವಾದ ಜನಸಂದಣಿ ಸೇರಿತ್ತು. ಜನಸಂದಣಿಯ ಕಡೆ ದಿಟ್ಟಿಯನ್ನು ಹೊರಳಿಸಿ ಅಘೋರ ಅಂದ "ಸರಪಳಿ ಬಿಡಬೇಡ ಗಟ್ಟಿಯಾಗಿ ಹಿಡಿದುಕೊ."

"ನೋಡಿಲ್ಲಿ!"

ಅಘೋರ ಅತ್ತ ದಿಟ್ಟಿ ಹೊರಳಿಸಿದ. ಮದನ್ ಸರಪಳಿಯನ್ನು ಕೈಗೊಂದು ಸುತ್ತುಹಾಕಿ ಹಿಡಿದಿದ್ದುದನ್ನು ನೋಡಿ ಅಘೋರ ಕಿಲಕಿಲ ನಕ್ಕು "ಅಯ್ಯೋ, ಎಷ್ಟು ಹೊತ್ತು ಹಾಗೆ ಹಿಡಿಯಲಾದೀತು?"

"ನೋಡುತ್ತಿರು."

"ಅದರ ಜಗಿದಾಟಕ್ಕೆ ಕೈ ತರಿದುಹೋದೀತು ಜೋಕೆ!"

ಮದನ್ ಸುತ್ತು ಬಿಚ್ಚಿ ಹಿಡಿದ. ಇಬ್ಬರೂ ದಿಬ್ಬದ ಮೇಲೇರಿ ಕೆಂಪೇಗೌಡನ ಕಾವಲು ಗೋಪುರದಲ್ಲಿ ಕುಳಿತುಕೊಂಡರು. ಮಾಂಬಿ ಅವರ ಬಳಿಯಲ್ಲಿ ನಾಲಿಗೆಯನ್ನು ಉದ್ದಕ್ಕೆ ಚಾಚಿ ರಸ್ತೆಯನ್ನೇ ನೋಡುತಿತ್ತು. ಹುಡುಗರು ಗೊತ್ತುಗುರಿಯಿಲ್ಲದ ಹರಟೆಯನ್ನು ಸ್ವಚ್ಛಂದವಾಗಿ ಹರಿಯಬಿಟ್ಟರು. ನಡುನೆ ದಿಟ್ಟಿಯನ್ನು ಪ್ರಕೃತಿಯೈಸಿರಿಯಲ್ಲಿ ನೆಟ್ಟು ಮನಕ್ಕಾನಂದವನ್ನು ತುಂಬಿ ಕೊಳ್ಳೋಣವೆಂದರೆ ಮಾಂಬಿ ಸುಮ್ಮನಿರಬೇಕಲ್ಲ? ಅದು ಅತ್ತಿತ್ತ ಜಿಗಿದಾಡುವ ಚಪಲತೆಯಿಂದ ಹುಡುಗರನ್ನು ಕೂರಗೊಡದಂತೆ ಎಳೆದಾಡುವುದು. ಅಘೋರ ಸಿಟ್ಟಿನಿಂದ ಗದರಿಸಿದ "ಮಾಂಬಿ!"

ಒಡೆಯನ ದನಿಕೇಳಿ ಅದು ಸ್ವಲ್ಪಹೊತ್ತು ನಾಲಿಗೆಯನ್ನು ಇಳಿ ಬಿಟ್ಟು ಕುಳಿತುಕೊಂಡರೂ ಅದರ ಮನಸ್ಸೆಲ್ಲಾ ಬಯಲ ಮೇಲೆಯೇ. ದಿಬ್ಬದ ಕೆಳಗಿನ ರಸ್ತೆಯಲ್ಲಿ ಆಗಲೇ ಅನೇಕ ಕಾರುಗಳು ಜಮಾಯಿಸಿವೆ. ಪ್ರವಾಸಿಗರೂ ಗಾಳಿಯ ಸೇವನೆಗಾಗಿ ಬಂದವರೂ ಕೂಡಿದ ಸ್ಥಳವೆಲ್ಲ ಜನಭರಿತ.

ಅವರಲ್ಲಿ ಅನೇಕರು ದಿಬ್ಬವನ್ನೇರಿ ಅಲ್ಲಲ್ಲಿ ಕುಳಿತುಕೊಂಡರು. ಉಳಿದವರು ಅಲ್ಲಲ್ಲೇ ಸುತ್ತಾಡುತಿದ್ದಾರೆ. ಎಲ್ಲಿ ನೋಡಿದರೂ ಜನವೇ ಜನ.

ಸಂಜೆಯ ಸೊಂಪನ್ನು ಬದಿಗೊತ್ತಿ ಚಂಚಲ ಮನಸ್ಸು ಜನರಾಶಿಯ ಕಡೆ ಹರಿಯಿತು. ಅತ್ತಲೇ ನೋಡುತ್ತಾ ಅಘೋರ-

"ಇಲ್ಲಿಗೆ ನೀನು ಬಂದು ಎಷ್ಟೊತ್ತಾಗಿತ್ತು ?"

"ನಾನು ಆಗಷ್ಟೆ ಬಂದಿದ್ದೆ."

"ಓ ! ನಿನಗೇನು ? ಜಯನಗರ ಒಂದೇ ಮಾರು !"

"ಡಬ್ಬಲ್ ರೋಡಿನಿಂದ ತಮಗೂ ಒಂದೇ ಮಾರು !"

ಮಾತು ಹೊರ ಬಿದ್ದೊಡನೆಯೇ ಇಬ್ಬರ ಮುಖದಲ್ಲೂ ಮಂದಹಾಸ ಮಿನುಗಿತು. ಎದೆಯಲ್ಲಿ ಸ್ನೇಹ ಸಲಿಲ ತುಂಬಿತು.

"ಸ್ವಲ್ಪ ಹೊತ್ತಾದರೂ ತಣ್ಣಗಿರೋಣ ಎಂದರೆ ಇಲ್ಲಿಗೂ ಬಂದು ತುಂಬಿಬಿಟ್ಟರಲ್ಲಾ ಈ ಜನ !" ಜನರತ್ತ ದಿಟ್ಟೆ ಬೀರಿ ಜುಗುಪ್ಸೆಯಿಂದ ನುಡಿದ ಅಘೋರ–ಮುಖ ಭಾವದಲ್ಲಿ ಒಗರನ್ನು ಸ್ಫುರಿಸಿ.

"ಅವರನ್ನು ಬರಬೇಡ ಎನ್ನುವುದಕ್ಕೆ ಇದೇನು ನಮ್ಮಪ್ಪನ ಸೊತ್ತೇ ?"

ಅಘೋರ ಮಂದಸ್ಮಿತನಾದ. ಮದನ್ ಮುಂದುವರಿದ "ನೋಡು, ಅವರಲ್ಲಿ ಬಹುಮಂದಿ ಹೆಂಗಸರು ಮಕ್ಕಳೇ ಇದ್ದಾರೆ. ನಾಲ್ಕು ಗೋಡೆ ಯೊಳಗೆ ಗಾಳಿ ಬೆಳಕಿಲ್ಲದೆ ಬದುಕುವವರಿಗೆ ದಿನಕ್ಕೊಂದೆರಡು ಗಂಟೆಗಳಾದರೂ ಇಂತಹ ಬಿಡುವಿನ ವೇಳೆ ಇದ್ದರೆ ಅನುಕೂಲ ಅಲ್ಲವೇ ?"

"ಬಿಡೋ ! ಇವರು ಗಾಳಿ ಕುಡಿದು ಬದುಕಿ ದೇಶೋದ್ಧಾರ ಮಾಡು ವುದು ಅಷ್ಟರಲ್ಲೇ ಇದೆ !"

"ಅಯ್ಯೊ....ಅದೇನು ಹಾಗಂದ್ರೇ ? ಎಲ್ಲರಿಗೂ ಅವರವರ ಬಾಳು-ಬದುಕು ದೊಡ್ಡದು."

"ಹೌದಪ್ಪಾ ! ಒಂದು ಇರುವೆಯೂ ಬಹುಕಾಲ ಬದುಕುವುದನ್ನು ಬಯಸುತ್ತದೆ !" ಅಷ್ಟೇ ಲೀಲಾಜಾಲವಾಗಿ ಬಿತ್ತರಿಸಿದ ಅಘೋರ.

"ಇರಬಹುದು."

"ಮತ್ತೆ ಇವರು ಬದುಕುವುದರಲ್ಲೇನು ವಿಶೇಷ ? ರಕ್ತ ಮಾಂಸ ಸಂಮೃದ್ಧಿಯಾಗಿದೆ ವಿನಾ ಮತ್ತೇನಿಲ್ಲ ಇವರಲ್ಲಿ !" ಗೋಣು ಅಲ್ಲಾಡಿಸುತ್ತಾ ಅಘೋರ ನುಡಿದ.

"ಹಾಗಿದ್ದರೆ ನಿನ್ನಲ್ಲೇನಿದೆ ಎಂದು ಕೇಳಬಹುದೋ?" ಮಾತು ಮುಗಿಯುವುದರೊಳಗಾಗಿ ದೃಷ್ಟಿ ರಸ್ತೆಯ ಕಡೆ ಹರಿಯಿತು. ಡಾ|| ಘನ ಶ್ಯಾಮ್ ಹೆಂಡತಿ ಮಕ್ಕಳೊಡನೆ ಒಳ್ಳೆಯ ಠೀವಿಯಿಂದ ಹೆಜ್ಜೆಹಾಕುತಿದ್ದುದು ಕಾಣಬಂತು. ಮುಖದಲ್ಲಿ ಎಳೆ ನಗು ಬೀರಿ ಮದನ್ ಹೇಳಿದ "ನೋಡೋ, ನಿಮ್ಮ ಡಬ್ಬಲ್ ರೋಡಿನ ಭೂಪ!"

ಅಷ್ಟರೊಳಗಾಗಿ ಅಘೋರನ ದಿಟ್ಟಿಯೂ ಅತ್ತ ಹರಿಯಿತು. ಡಾ|| ಘನಶ್ಯಾಮ್ ಡಬ್ಬಲ್‌ರೋಡ್ ಶಾಂತಿನಗರಗಳಲ್ಲಿ ಮಾತ್ರವಲ್ಲದೆ ಬೆಂಗಳೂರಿ ನಲ್ಲೇ ಹೆಸರಾಂತ ಡಾಕ್ಟರು. ಅಘೋರ ಬಾಯಿ ಕಿರಿದುಮಾಡಿ ನಸುನಕ್ಕು- "ಹೌದು ಕಣೋ, ನಾನಾಗಲೇ ನೋಡಿದೆ."

ಜಿಗಿದಾಡಿ ತೊಂದರೆಕೊಡುತ್ತಿದ್ದ ಮಾಂಬಿಯ ತಲೆಯಮೇಲೆ ಒಂದು ಏಟು ಹಾಕಿ, ಅಘೋರ ಕುಚೋದ್ಯದಿಂದ- "ತಮ್ಮ ಹೆಂಡತಿಯ ಒಲವನ್ನು ಸಂಪಾದಿಸುವುದಕ್ಕಾಗಿ ಬಹಳ ಕಷ್ಟದಿಂದ ಬಿಡುವು ಮಾಡಿಕೊಂಡಿದ್ದಾರೆ ಘನಶ್ಯಾಮ್!"

ಇಬ್ಬರ ಮುಖದಲ್ಲೂ ನಗು ಮಿನುಗಿತು. ನಗುನಗುತ್ತಾ ಅಘೋರ ಮುಂದುವರಿದ "ಘನಶ್ಯಾಮ್ ಒಬ್ಬರೇ ಅಲ್ಲ. ಅವರ ವಂಶಾವಳಿಯೆಲ್ಲಾ ಡಾಕ್ಟರ್‌ಮಯ ಕಣಯ್ಯಾ, ಅವರನ್ನು ನೋಡುವಾಗಲೆಲ್ಲಾ ನಾನೂ ಡಾಕ್ಟರಾದರೆ? ಎನ್ನಿಸುತ್ತೆ."

"ನೀನು ಪ್ರಚಂಡಪುರುಷ! ನಿನಗೇತಕ್ಕೆ ಮೆಡಿಸಿನ್? ಹೇಗೂ ನಿಮ್ಮ ಪ್ಪನ ವ್ಯಾಪಾರವಿದೆ. ಒಂದಕ್ಕೆ ನಾಲ್ಕರಷ್ಟು ಬೆಲೆಯೇರಿಸಿ ಚೆನ್ನಾಗಿ ಸಂಪಾದಿಸು!"

ಅಘೋರ ಮಾತಾಡದೆ ನಕ್ಕುಬಿಟ್ಟ. ತೆಂಕಣ ದಿಕ್ಕಿನಿಂದ ಬೀಸಿಬಂದ ಕೊಂಕಣ ಗಾಳಿ ಜೋರಾಗಿ ನುಗ್ಗಿದಾಗ ನುಣ್ಣಗೆ ಬಾಚಿಕೊಂಡಿದ್ದ ಹುಡುಗರ ಕೂದಲು ಕೆದರಿ ಹಣೆಯನ್ನು ಮುಚ್ಚಿತು. ಧೂಳಿನ ಸ್ನಾನವಾಗಿ ಮರಳಿನ ಕಣಗಳು ಕಣ್ಣು ಮೂಗು ಕಿವಿಗಳಲ್ಲಿ ತೂರಿದುವು. ಕಣ್ಣುಗಳನ್ನು ಭದ್ರವಾಗಿ ಮುಚ್ಚಿಕೊಂಡ ಹುಡುಗರು ಬಿರುಗಾಳಿ ಸಾಗಿಹೋಗುವವರೆಗೆ ಸುಮ್ಮನೆ ಕುಳಿತಿದ್ದು, ಅನಂತರ ಮೈಕೊಡವಿಕೊಂಡೆದ್ದರು. ಮೈಕೈಯೆಲ್ಲಾ ಧೂಳು ಮುಚ್ಚಿತ್ತು. ಜೇಬಿನಲ್ಲಿದ್ದ ಕರವಸ್ತ್ರದಿಂದ ಮುಖವನ್ನು ಒರಿಸಿಕೊಳ್ಳುವುದ

ರೊಳಗಾಗಿ ಧೂಳು ಕವಿದು ಕೊಳಕುಮಯವಾಯಿತು. ಇನ್ನೇನು ಮಾಡುವು ದೆಂದು ಹುಡುಗರು ಒಬ್ಬರ ಮುಖ ಒಬ್ಬರು ನೋಡಿಕೊಂಡು ನಕ್ಕರು.

ಇಬ್ಬರ ದೃಷ್ಟಿಯೂ ರಸ್ತೆಯ ಮೇಲಿದ್ದ ಜನರ ಕಡೆ ಹರಿಯಿತು. ಕಾರಿದ್ದವರೆಲ್ಲಾ ಒಳಗಡೆ ಸೇರಿಕೊಂಡು ಕನ್ನಡಿಯೇರಿಸಿಕೊಂಡಿದ್ದರು. ಉಳಿದವರು ಗಾಳಿ ಬಂದ ದಿಕ್ಕಿಗೆ ಬೆನ್ನುಮಾಡಿ ಕುಳಿತಿದ್ದರು. ಮಕ್ಕಳಿಗೆ ಸೆರಗು ಮುಚ್ಚಿ ಹಿಡಿದು ತಾಯಂದಿರು ರಕ್ಷಣೆ ನೀಡಿದ್ದರು. ನೋಡು ನೋಡುತ್ತಾ ಅಘೋರ ಶರಟು ಕಳಚಿ ಕೊಡವಿ ಒಳಗಿನ ಬನೀನನ್ನು ಕಳಚಿ ಅದರಿಂದ ಮೈ ಕೈ ಒರಿಸಿಕೊಂಡ. ತಲೆ ಮತ್ತು ಕಿವಿಗಳಲ್ಲಿ ಧೂಳು ಹೇರಳ ವಾಗಿ ಕವಿದಿತ್ತು. ಮತ್ತೊಮ್ಮೆ ತಿರುವುಮುರುವು ಮಾಡಿ ಒರಿಸಿ ಸ್ವಚ್ಛ ಗೊಳಿಸಿ ಶರಟು ತೊಟ್ಟು, ಕೊಳಕು ಬನೀನನ್ನು ಕೊಡವಿ ಪ್ಯಾಂಟಿನ ಕಿಸೆ ಯಲ್ಲಿ ತುರುಕಿ ಹುಬ್ಬುಹಾರಿಸಿ ನಕ್ಕು–"ಏನು ನೋಡುತ್ತೀಯೋ ಮಂಕು ?"

ಆಗಲೇ ಮದನನಿಗೆ ಬೆಪ್ಪನಂತೆ ಅವನನ್ನು ನೋಡುತ್ತಲೇ ಇದ್ದೇನೆ ಎಂಬುದರ ಅರಿವಾದುದು ! ನಕ್ಕು– "ನೀನು ಜಾಣ ಕಣೋ !" ಎಂದ ಮುಖ ಬಿಂಬ ಅರಳಿ ಮಂದಾರವಾಯಿತು.

ಮದನ್ ತಾನೂ ಅದೇ ರೀತಿ ಬಟ್ಟೆಗಳಚಿ ಒರಿಸಿಕೊಂಡ. ಕೆದರಿ ಹರ ಡಿದ ಕೂದಲನ್ನು ಹಿಂದಕ್ಕೆ ತೀಡಿ ಇಬ್ಬರೂ ಕಿಲಕಿಲನೆ ನಕ್ಕು ಪುನಃ ಕುಳಿತು ಕೊಂಡರು. ಇನ್ನೇನು ಭಗವಾನ್ ಭಾಸ್ಕರ ಮುಳುಗುವುದರಲ್ಲಿದ್ದ.

ದೂರದಲ್ಲಿ ಪುಟ್ಟಮಗನ ಕೈ ಹಿಡಿದುಕೊಂಡು ತಮ್ಮನೇರಕ್ಕೆ ಬಂಡೆಗಲ್ಲಿನ ದಿಬ್ಬವನ್ನು ಹತ್ತಿಬರುತ್ತಿದ್ದ ಶಾಲೆಯ ಮುಖ್ಯೋಪಾಧ್ಯಾಯರು ಹತ್ತಿರ ಬರುತ್ತಲೂ ಹುಡುಗರಿಬ್ಬರೂ ದಿಗ್ಗನೆದ್ದು ನಿಂತರು. ನಾಯಿ ಮುಂದೋಡುವ ಚಪಲತೆಯಿಂದ ಜಿಗಿದಾಡ ಹತ್ತಿತು. ಅದನ್ನು ಏರಿದ ದನಿಯಲ್ಲಿ ಗದರಿ ಅಘೋರ ಸುಮ್ಮನಾಗಿಸಿದ. ಇಬ್ಬರೂ ಉಪಾಧ್ಯಾಯರತ್ತ ಕೈಜೋಡಿಸಿದರು.

"ಏನ್ರಯ್ಯಾ, ಸಿನಿಮಾಕ್ಕೆ ಎಂದಿನಿಂದ ಮಣ್ಣು ಹಾಕಿದಿರಿ ?" ತಮಾ ಷೆಯ ದನಿಯಲ್ಲಿ ಉಪಾಧ್ಯಾಯರು ಕೇಳಿದರು.

"ದಿನಾ ಎಲ್ಲಿ ಹೋಗುವುದಕ್ಕಾಗುತ್ತೆ, ಸಾರ್ ?"

"ಇಂದು ವಾರದ ಕೊನೆ!" ಹುಬ್ಬುಹಾರಿಸಿ ನುಡಿದರು ಉಪಾಧ್ಯಾಯರು.

ಹುಡುಗರಿಬ್ಬರೂ ನಕ್ಕು ಬಿಟ್ಟರು. ತುಸು ದೂರದಲ್ಲಿದ್ದ ಕೆಂಪು ಬೀದಿ ನಾಯಿಯು ಸುಳಿವು ಹತ್ತಿ ಮಾಂಬಿ ಕೈಹಿಡಿತವನ್ನು ಸರಕ್ಕನೆ ಕಳಚಿಕೊಂಡು ಒಂದೇ ನೆಗೆತಕ್ಕೆ ಜಿಗಿದು ಓಡಿತು. ಉಪಾಧ್ಯಾಯರಿಗೆ ಹೇಳುವುದನ್ನೂ ಮರೆತು ಹುಡುಗರಿಬ್ಬರೂ ನಾಯಿಯನ್ನು ಹಿಂಬಾಲಿಸಿ ಓಡಿದರು. ಕಲ್ಲು ಮುಳ್ಳೆನ್ನದೆ ಬೀದಿನಾಯಿ ಓಡಿತು! ಅದರ ಹಿಂದೆ ಮಾಂಬಿ! ಅದರ ಹಿಂದೆ ಹುಡುಗರು! ಓಡಿ ಓಡಿ ದಣಿದ ಹುಡುಗರಿಗೆ ಮೇಲುಸಿರು ಬರಹತ್ತಿತು. "ಮಾಂಬೀ! ಮಾಂಬೀ!" ಅಘೋರ ಏರಿದ ದನಿಯಲ್ಲಿ ಕೂಗಿದ ಆದರೆ ಹಿಡಿತ ತಪ್ಪಿದ ಅದು ಕೇಳಬೇಕೇ? ಓಡೇ ಓಡಿತು.

ಬೀದಿನಾಯಿಯನ್ನು ಹಿಡಿದು ಅಡಿಹಾಕಿ ಒಂದೇ ಸಮನೆ ಮಾಂಬಿ ಕಚ್ಚತೊಡಗಿದಾಗ ಹುಡುಗರು ಅದನ್ನು ಸಮೀಪಿಸಿ ಸರಪಳಿಯನ್ನು ಹಿಡಿದು ಕೊಂಡರು. ಮಾಂಬಿಯ ಬಾಯಿಯಿಂದ ಅದನ್ನು ಬಿಡಿಸಬೇಕಾದರೆ ಸಾಕು ಸಾಕಾಯಿತು. ದಷ್ಟ ಪುಷ್ಟ ಮಾಂಬಿಯ ಬಾಯಿಗೆ ಸಿಕ್ಕಿ ನೆಜ್ಜುಗುಜ್ಜಾದ ಬೀದಿ ನಾಯಿ ಹೊರಳಾಡಿ ಚೀರಿಡುತಿದ್ದರೂ ಬಿಡದೆ ಅಘೋರ ಅದರ ಮೇಲೆ ಕಲ್ಲುಬೀಸಿದ- "ಶ್ಯ್! ಇದೆಲ್ಲಿಂದ ಬಂದಿತ್ತೋ ಕೆಟ್ಟ ನಾಯಿ!"

"ಅಯ್ಯೋ, ಪಾಪ! ಶುದ್ಧ ತಿಳಿಗೇಡಿ ಕಣಯ್ಯಾ. ಅದರ ಕಾಲು ಮುರಿದೇ ಬಿಟ್ಟೆಯಲ್ಲಾ? ಆದೇನು ಮಾಡಿತು ನಿನಗೆ? ಅದಕ್ಕಾಗಿರುವ ಹಿಂಸೆಯೇ ಹೆಚ್ಚಾಗಿತ್ತು. ಸ್ವಲ್ಪವೂ ಕರುಣೆಯಿಲ್ಲ ನಿನಗೆ!" ಮದನ್ ಸಿಟ್ಟಿ ನಿಂದ ತುಟಿ ಕಚ್ಚಿದ. ಕಣ್ಣುಗಳು ರಂಗೇರಿದುವು. ಹುಬ್ಬುಗಳು ಗಂಟಿಕ್ಕಿದುವು.

"ಹಾಳು ನಾಯಿ! ಅದೇಕೆ ಇಲ್ಲಿಗೆ ಬರಬೇಕು?" ಅಘೋರ ಹಲ್ಲು ಕಚ್ಚಿದ. ಒಡಲಿನ ಕಿಚ್ಚು ಮುಖಬಿಂಬಕ್ಕೆ ನುಗ್ಗಿ ಬಂದಿತು.

"ಪಾಪ, ಅದು ನಾವಿದ್ದ ಕಡೆ ಬರಲೇ ಇಲ್ಲ. ಅನ್ಯಥಾ ಅದರ ಕಾಲು ಮುರಿದೆಯಲ್ಲಾ?" ಎಂದ ಮದನನ ದೃಷ್ಟಿ ಮುರಿದ ಕಾಲನ್ನು ಎಳೆದು ಕೊಳ್ಳುತ್ತಾ ಹೋಗಲಾರದೆ ಹೋಗುತಿದ್ದ ನಾಯಿಯಕಡೆ ಹರಿದಿತ್ತು. ಅದರ ನರಳುವ ಚೀರುದನಿ ಎದೆಯಾಳದಲ್ಲಿ ತಳಮಳವೆಬ್ಬಿಸಿತು.

"ಮದನ್, ಕಾಲು ಮುರಿಯುವುದಷ್ಟೇ ಅಲ್ಲ! ಅವಕಾಶವಿದ್ದಿದ್ದರೆ ಸಾಯಿಸಿಯೂ ಬಿಡುತಿದ್ದೆ! ಅಷ್ಟರಲ್ಲೇ ತಪ್ಪಿಸಿಕೊಂಡಿತು, ಕೆಟ್ಟನಾಯಿ!"

ಮಾಂಬಿಯನ್ನು ಎಳೆದುಕೊಂಡು ಹೆಜ್ಜೆ ಹಾಕುತ್ತಾ ಪುನಃ ಮುಂದು ವರಿದ ಅಘೋರ "ನಮ್ಮ ಮುನಿಸಿಪಾಲಿಟಿ ಸತ್ತು ಹೋಗಿದೆ! ಇವರೆಲ್ಲಾ ಅಲ್ಲಿ ಮಣ್ಣು ಮುಕ್ಕುತ್ತಾರೆಂತ ತೋರುತ್ತೆ. ನಮ್ಮ ನಗರ ನೋಡು! ಎಲ್ಲಿ ನೋಡಿದರೂ ರೋಗ ರುಜಿನಗಳಿಗೆ ತುತ್ತಾದ ಬೀದಿ ನಾಯಿಗಳು! ಇವು ಗಳಿಂದ ನಾಯಿಗಳ ಉತ್ತಮ ತಳಿ ಉಳಿಯುವುದಾದರೂ ಹೇಗೆ? ಮೇಲಾಗಿ ಮಂಗ ನೊಣಗಳ ಹಾವಳಿ ಹೇಳತೀರದು! ಇಂಥ ನಗರದಲ್ಲೂ ಹಾದಿಯಲ್ಲಿ ಬೀದಿಯಲ್ಲಿ ಹಸು, ಎಮ್ಮೆ, ಕತ್ತೆ! ಇಸ್ಸಿಸ್ಸೀ! ಈ ಕರ್ಮಕ್ಕೆ ಮುನಿಸಿ ಪಾಲಿಟಿ ಬೇರೆ ಬೇಕು!! ಎಲ್ಲಿ ನೋಡಿದರೂ ಕೊಳಕುಮಯ."

ಹಾದಿ ಸಾಗುತಿತ್ತು. ಅದರೊಂದಿಗೆ ಮಾತುಕತೆಯೂ ಮುಂದುವರಿ ಯಿತು.

"ಅದಕ್ಕೂ ಇದಕ್ಕೂ ಎಲ್ಲಿಯ ಸಂಬಂಧ ಅಘೋರ್!"

"ಓ! ಒಳ್ಳೆ ಚೆನ್ನಾಯಿತು? ನಾಳೆ ನೀನು ಬೆಳದ ಮೇಲೆ ನೀನೆ ಮುನಿಸಿ ಪಲ್ ಕೌನ್ಸಿಲರ್ ಆಗಲಿಕ್ಕೂ ಸಾಕು. ಇಂಥಹವರಿಂದಲೇ ನಮ್ಮ ದೇಶಕ್ಕೆ ಈ ದುರ್ಗತಿ ಬಂತು ಕಣೋ! Careless!"

"ಸರಿಯಪ್ಪಾ, ಸರಿ."

"ಮದನ್, ನನಗೇನಾದರೂ ಅಧಿಕಾರವಿದ್ದಿದ್ದರೆ ಒಂದು ಬೀದಿ ನಾಯಿ! ಒಂದೇ ಒಂದು ಮಂಗ! ಕೊನೆಗೆ ಒಂದು ಕಾಗೆಯೂ ಇಲ್ಲದಂತೆ ನಿರ್ನಾಮ ಮಾಡಿಬಿಡುತಿದ್ದೆ!"

"ಎಮ್ಮೆ, ಹಸು, ಕತ್ತೆ?" ಮದನ್ ಕಿಲಕಿಲನೆ ನಗತೊಡಗಿದ.

"ಅವು ಕೂಡಾ! ಅವನ್ನೆಲ್ಲಾ ನಗರದಿಂದಾಚೆ ಗಡಿಪಾರ್ ಮಾಡಿ ಜನ ಜೀವನಕ್ಕೆ ನೆಮ್ಮದಿ ತರುತ್ತಿದ್ದೆ! ಈಗ ನೋಡು, ಎಲ್ಲಿ ಹೆಜ್ಜೆ ಇಟ್ಟರೂ ಅಡ್ಡಿ! ಆತಂಕ!! ಕೊಳಕು. ಶುದ್ಧೀಕರಣ ಇಲ್ಲವೇ ಇಲ್ಲ."

"ಅಷ್ಟೇ ಅಲ್ಲ; ಈ ಕುರುಡರು! ಕುಂಟರು! ಇವರೆಲ್ಲಾ ಏಕೆ ಬದುಕ ಬೇಕು, ಹೇಳು? ಇವರು ಬಾಳುದ್ದಕ್ಕೂ ನರಳಿ ಇತರರಿಗೆ ಹೊರೆಯಾಗಿ ಬದುಕುವುದಕ್ಕಿಂತ ಈಗಲೇ ಸತ್ತು ಪುನರ್ಜನ್ಮ ತಳೆದು ಸುಖಿಯಾಗುವುದಾದರೆ ಯಾರಿಗೆ ಬೇಡ?" ದನಿಯಲ್ಲಿ ಆವೇಶವಿತ್ತು. ಅಘೋರ ಪುನಃ ಮುಂದು

ವರಿದ "ನನಗೇನಾದರೂ ಅಧಿಕಾರ ಬಂದರೆ ದೇಶವನ್ನು ಚೊಕ್ಕ ಬಂಗಾರ ಮಾಡುವೆ !"

"ಬೇಡಪ್ಪಾ, ಬೇಡ ! ನಿನ್ನ ಸಾಹಸ ಸಾಕು ! ನಮ್ಮ ದೇಶ ಮಟ್ಟ ಬಂಗಾರವಾಗಿದ್ದರೂ ಚಿಂತೆಯಿಲ್ಲ ! ಚೊಕ್ಕ ಬಂಗಾರ ಮಾಡುವ ಗೋಜಿಗಿಳಿಯದೆ ನೀನು ದವಸ ಧಾನ್ಯ ಮಾರಿ ಸುಖ ಜೀವನ ನಡೆಸು. ಅಷ್ಟಾದರೆ ಪುಣ್ಯಕಣೊ!" ಮದನನ ಗೌರವರ್ಣದ ಮುಖ ತುಸು ಗಂಭೀರವಾಗಿ ಭಾವಾವೇಶದಿಂದ ಮುದ್ರಿತವಾಯಿತು.

"ನೀನು ಏನೇ ಅನ್ನು ಮದನ್, ಈಗಿನ ರೀತಿ ನೀತಿಗಳೊಂದೂ ಸರಿಯಲ್ಲ. ಈ ದೇಶ ಮುಂದುವರಿಯಬೇಕಾದರೆ ಡಿಕ್ಟೇಟರ್‌ಷಿಪ್ ಬರಲೇ ಬೇಕು !"

"ಹೂಂ, ಮತ್ತೆ ?" ಕಣ್ಣುಗಳನ್ನರಳಿಸಿ ಕೇಳಿದ ಮದನ್, ಮುಖದಲ್ಲಿ ತುಂಟ ನಗು ಪಸರಿಸಿದ.

"ರೂಲ್ಸ್ ಅಂದರೆ ರೂಲ್ಸ್! ದೇಶಕ್ಕೆ ಅಗತ್ಯವಾಗಿ ಏನೇನು ಬೇಕೋ ! ಅದು ಮಾತ್ರ ಇರಬೇಕು ! ಉಳಿದದ್ದೆಲ್ಲಾ ಏಕೆ ? ಸುಮ್ಮನೆ ಇವುಗಳಿಂದ ಎಲ್ಲರಿಗೂ ತಲೆ ನೋವು! ಹಾವೂ ಸಾಯಬಾರದು, ಕೋಲೂ ಮುರಿಯಬಾರದು ! ಇದೆಂಥಾ ನೀತಿ ?

"ನೀನು ಹೇಳುತ್ತಾ ಇರು, ನಾನು ಕೇಳುತ್ತಾ ಇರುವೆ. ಹೂಂ. Go on. !"

"ಮದನ್ ! ನನಗೆ ಯಾರಮೇಲೂ ದ್ವೇಷವಿಲ್ಲ. ನೀನು ದೇಶ ಚೊಕ್ಕವಾಗುವ ಬಗೆಯನ್ನು ಕುರಿತು ಯೋಚಿಸು. ಕೋತಿಯನ್ನು "ದೇವರು" ಎಂದು ಆರಾಧಿಸುವುದರಿಂದ ನಾವು ಬೆಳೆದ ಬೆಳೆಯಲ್ಲೊಂದು ಪಾಲು ಅವುಗಳಿಗೆ ಇದಕ್ಕೇನೆನ್ನುತ್ತಿ ? ನಮ್ಮ ದೇಶದ ಬಡ ಮಕ್ಕಳು ಹೊಟ್ಟೆ ಹಸಿವಿನಿಂದ ಛೀಳಿಡುತ್ತಿರುವಾಗಲೂ ನಾವು ಕೋತಿಗಳಿಗೊಂದು ಪಾಲು ನೀಡುತಿದ್ದೇವೆ ! ಛೀ ! ಎಂತಹ ಅನ್ಯಾಯ ? ಮೈಮುರಿದು ಬೆಳೆದವರಿಗಿಲ್ಲದ ಪಾಲು ಕೋತಿಗಳಿಗೆ !"

"ಮದನ್ ! ಇನ್ನೂ ಕೇಳು. "ಪಾಪ" ಎನ್ನುವುದರಿಂದ ಕಂತ್ರಿ ನಾಯಿಗಳಿಂದ ಒಳ್ಳೆಯ ನಾಯಿಗಳ ತಳಿಯೇ ಇಲ್ಲವಾಗಿದೆ ! "ಅಯ್ಯೊ"

ಎನ್ನುವುದರಿಂದ ನಗರದಲ್ಲಿ ಪರಿಶುದ್ಧತೆಯನ್ನು ಕಾಪಾಡಿಕೊಳ್ಳುವುದು ಹೇಗೆ? ನಾವು ಇವುಗಳನ್ನೆಲ್ಲಾ ಉಳಿಸಿಕೊಂಡಿರುವುದರಿಂದಲೇ ಅಲ್ಲವೇ, ಆಹಾರದ ಕೊರತೆ? ಅವು ಬಾಳುವುದಾದರೆ ಮನೆ ಮನೆಗಳಲ್ಲಿ ಬಾಳಲಿ, ಊರುಗಳಲ್ಲೇಕೆ ಅವುಗಳಿಗೆ ಅವಕಾಶ?"

"You carry on!"

ಅಘೋರ ವಿಚಲಿತನಾಗದೆ ಮುಂದುವರಿದ "ಮುದುಕರು, ಕುರುಡರು, ಕುಂಟರು ಕುಷ್ಠರೋಗಿಗಳು ಇವರೆಲ್ಲಾ ದೇಶಕ್ಕೆ ಬೇಕೆ?"

ಒಮ್ಮೆಲೆ ಮದನ್ ಮುಳ್ಳು ತುಳಿದಂತೆ ಮಿಡುಕಿ ಬಿದ್ದು ಕಣ್ಣರಳಿಸಿದ.

"ಅಯ್ಯೊ, ರಾಮಾ! ಅವರನ್ನೆಲ್ಲಾ ಎಲ್ಲಿಗೆ ಹೋಗು ಅನ್ನುತ್ತಿ?"

ಮಂದಸ್ಮಿತನಾದ ಅಘೋರ ಮಾತಾಡದೆ ವಿದ್ಯುಚ್ಛಕ್ತಿಯ ಕಂಬದಕಡೆ ಬೆರಳು ತೋರಿದ. ತುಂಟತನ ದೇಹದಾದ್ಯಂತ ನಲಿಯಿತು.

"ಶ್ಯ್! ಶುದ್ಧ ಕಿರಾತ ಕಣಯ್ಯಾ!"

"ನನಗೆ ಅಧಿಕಾರ ಕೊಟ್ಟು ನೋಡು!" ಹುಬ್ಬುಗಳು ಏರಿಳಿದುವು.

"ನಿನಗೆ ಅಧಿಕಾರ ಕೊಡುವುದಕ್ಕೆ ದೇಶದ ಧೀರರೆಲ್ಲಾ ಸತ್ತು ಹೋಗಿದ್ದಾರೇನು?"

"ಯಾರಿಗೆ ಗೊತ್ತು? ಅತ್ತೆಗೊಂದು ಕಾಲ! ಸೊಸೆಗೊಂದು ಕಾಲ!" ಅಘೋರ ತುಂಟನಗೆ ಬೀರಿದ.

"ಸಭ್ಯ, ನಿನ್ನ ವ್ಯಾಪಾರ ಸುಖವಾಗಿರುವುದೊಂದನ್ನು ನೋಡಿಕೊ. ದೇಶದ ಕಥೆ ನಿನಗೆ ಬೇಡವೇ ಬೇಡ."

"ಏಕೆ? ನಿನಗೆ ಭಯವೇ ಮದನ್?"

"ನನಗೇಕೆ ಭಯ? ಇದೊಳ್ಳೇ ಚೆನ್ನಾಗಿದೆ."

"ಒಂದು ವೇಳೆ, ನೀನೇ ಕುಂಟನೋ, ಕುರುಡನೋ, ಮುದುಕನೋ, ರೋಗಿಯೋ ಆದಾಗ ಅಘೋರ-ವಿದ್ಯುಚ್ಛಕ್ತಿಗೆ ಕೊಟ್ಟುಬಿಟ್ಟಾನೆಂಬ ಭಯ?"

ಅಘೋರ ಕಿಲಕಿಲನೆ ನಗ ತೊಡಗಿದ.

"ನಿನ್ನಂಥಹವರು ಬಹಳ ಮಂದಿ ಇದಾರೆ ಕಣೊ!"

"ಒಪ್ಪಿಕೊಳ್ಳುವೆ."

"ಆದರೂ, ನಮ್ಮ ದೇಶ ಇದ್ದ ಹಾಗೇ ಇದೆ", ಮದನ್ ನಸುನಕ್ಕು ಪುನಃ ಮುಂದುವರಿದ "ಈ ಜೀವನ ಘೋರ ಎಂಬುದನ್ನು ಬಲ್ಲೆ. ನಿನ್ನಂತಹ ಘೋರ-ಅಘೋರರನ್ನೂ ನೋಡುತ್ತಿದ್ದೇನೆ. ಇದಕ್ಕೆಲ್ಲಾ ಯಾರಾದರೂ ಹೆದರಿಕೊಳ್ಳುತ್ತಾರೇನಪ್ಪಾ ಘೋರ್ !"

ಅಘೋರ ಗೆಳೆಯರ ಕೂಟದಲ್ಲಿ "ಘೋರ್" ಎಂಬ ನಾಮಾಂಕಿತವನ್ನು ತಳೆದಿದ್ದ. ಅದಕ್ಕೆ ಅವನ ವಿರೋಧವೇನೂ ಇರಲಿಲ್ಲ.

ಇಬ್ಬರೂ ಹಳ್ಳದಿಣ್ಣೆಗಳನ್ನು ದಾಟಿ ಹಾದಿಯನ್ನು ಸವೆಸಿ ಮೊದಲಿದ್ದ ಬಂಡೆಯ ದಿಬ್ಬಕ್ಕೆ ಬಂದಾಗ ಕತ್ತಲೆಯ ತೆರೆ ಇಳೆಯನ್ನು ಮೆಲ್ಲನೆ ಮುಸು ಗುತ್ತಿತ್ತು. ಬಂಡೆಯ ಅಂಚಿನ ಮೇಲೆ ಕುಳಿತು ಅಘೋರ ಗೆಳೆಯನ ಕೈಯನ್ನು ಅದುಮಿ ಹಿಡಿದು "ಮದನ್, ನೀನೇನೋ ಒಂದೇ ಒಂದು ನೆಗೆತಕ್ಕೆ ಜಯ ನಗರ ಸೇರಿ ಬಿಡುವೆ. ನಾನು ಉದ್ದಕ್ಕೂ ಸ್ಮಶಾನದ ಹಾದಿ ನಡೆದು ಶಾಂತಿನಗರ ಸೇರಬೇಕು."

"ಏನು ! ನಿನಗೂ ಭಯವೇ ?" ಮದನ್ ಆಶ್ಚರ್ಯ ಸೂಸಿ "ಖಂಡಿತಾ....ನೀನಿದ್ದಲ್ಲಿ ಭೂತ ಪಿಶಾಚಿಗಳೂ ಸುಳಿಯುವುದಿಲ್ಲ ನೋಡು!"

ಇಬ್ಬರೂ ಕಿಲಕಿಲನೆ ನಕ್ಕರು.

"ಭಯ ಇಲ್ಲಪ್ಪಾ, ಒಂದಲ್ಲ ಒಂದು ಹೆಣದ ಸಂಸ್ಕಾರ ನಡೆಯು ತ್ತಿರುತ್ತೆ. ಅಳು ಗೋಳು ಗದ್ದಲ ಗಲಾಟೆಯಲ್ಲಿ ಎಷ್ಟೋ ಹೊತ್ತು ಹೋಗಿ ಬಿಡುತ್ತೆ." ಅಘೋರ ಒಂದುಗಳಿಗೆ ತಡೆದು ಪುನಃ ಮುಂದುವರಿದ "ನಾನು ನಾಳೆ ಅಜ್ಜಿಯ ಮನೆಗೆ ಹೋಗುವೆ. ಬ......"

ಅವನನ್ನು ಮಾತಾಡಗೊಡದಂತೆ ಮದನ್, ನಡುವೆ ಬಾಯಿ ಹಾಕಿದ– "ನಿನ್ನ ಅಜ್ಜಿಯನ್ನು ವಿದ್ಯುಚ್ಛಕ್ತಿಗೆ ಕೊಟ್ಟು ಬರುತ್ತೀಯೇನು ?"

ತಕ್ಷಣ ಇಬ್ಬರ ಮುಖದಲ್ಲೂ ನಗುಚಿಮ್ಮಿ ಹರಿಯಿತು. ನಗುವಿನ ಆ ವೇಗ ತುಸು ಕಡಿಮೆಯಾಗುತ್ತಲೂ ಮಾಂಬಿಯ ಸರಪಳಿಯನ್ನು ಇನ್ನಷ್ಟು ಬಿಗಿ ಹಿಡಿದು–'ಮದನ್ ಮಹಾಶಯಾ ? ನಮ್ಮ ಅಜ್ಜಿ ಗಟ್ಟಿಯಾಗಿದ್ದಾರೆ ?'

ಇಲ್ಲವಾದರೆ ಕೊಟ್ಟುಬಿಡುತಿದ್ದೆ ಅನ್ನು ? ಈಗಲೇ ಅವರಿಗೆ ಹೇಳಿ ಬಿಡು. ಮುಂದೆ ನಿಮ್ಮನ್ನು ವಿದ್ಯುಚ್ಛಕ್ತಿಗೆ ಕೊಟ್ಟು ಬಿಡುವೆ ! ಅಂತ.

ಮೊದಲು ಅಜ್ಜಿ ! ಅನಂತರ ಅಪ್ಪ ! ಅಮ್ಮ ! ಯಾರನ್ನಾದರೂ ಉಳಿಸೀಯಾ ಮತ್ತೆ !" ಹುಬ್ಬೇರಿಸಿದ ಮದನ್.

ಪುನಃ ಇಬ್ಬರೂ ಕಿಲಕಿಲನೆ ಹೊಟ್ಟೆ ಹುಣ್ಣಾಗುವಂತೆ ನಗತೊಡಗಿದರು. ಹೊಟ್ಟೆಯನ್ನು ಕೈಯಿಂದ ಅದುಮಿ ಹಿಡಿದುಕೊಂಡು ಅಘೋರ "ಶ್ಶ್ ! ನನ್ನನ್ನು ನಗಿಸೀ ನಗಿಸೀ ಸಾಯಿಸಿಬಿಡುತ್ತಿ ಕಣೋ!"

"ಒಳ್ಳೆಯದು ! ವಿದ್ಯುಚ್ಛಕ್ತಿಗಿಂತ ಇದು ಲೇಸು."

"ನಿನ್ನ ಕೈಗೆ ಅಧಿಕಾರ ಬರುವ ಮೊದಲೇ ನಿನ್ನನ್ನು ಮುಗಿಸಿಬಿಟ್ಟರೆ ಅನುಕೂಲ ಕಣೋ !"

"ಚಲೋ ಕೆಲಸ !" ಹುಬ್ಬು ಹಾರಿಸಿದ ಅಘೋರ.

"ಅದೊಂದೇ ದಾರಿ !"

ಇಬ್ಬರೂ ಕೈಕೈ ಹಿಡಿದುಕೊಂಡು ಎದ್ದುನಿಂತರು. ಅಘೋರ ಅವನ ಕೈಯನ್ನು ಅದುಮಿ ಹೇಳಿದ "ನಾನು ಆನಂದಪುರದಲ್ಲಿ ಎರಡು ವಾರಗಳಿದ್ದು ಬರುವೆ."

"ಅಷ್ಟರೊಳಗಾಗಿ ನಮ್ಮ ರಿಜಲ್ಟ್ ಬರುತ್ತೆ."

"ನಾನು ತೇರ್ಗಡೆಯಾಗಿದ್ದರೆ ನನಗೆ ತಂತಿ ಕಳುಹಿಸು, ಮದನ್."

"ಇಲ್ಲದಿದ್ದರೆ ?"

"ಬೇಡ."

ಮದನ್ ಮಾತಾಡದೆ ಒಪ್ಪಿಗೆ ಸೂಚಿಸಿದ.

"ನಾನೀಗಲೇ ನಿನಗೆ ಕಂಗ್ರಾಟ್ಸ್ ಹೇಳಿಬಿಡುವೆ."

"ನಾನು ಮಾತ್ರ......." ಮಾತು ಅರ್ಧಕ್ಕೆ ತುಂಡುಗಡಿಯಿತು. ಮದನ್ ತುಂಟನಗೆ ಬೀರಿದ.

"ಅದೇನು ? ಪೂರ್ತಿ ಹೇಳಿ ಬಿಡು."

"ಶುಭ ಹಾರೈಸಲಾರೆ !" ಅರಳಿದ ಅಣ್ಣುಗಳಲ್ಲಿ ತುಂಟತನ ನಲಿಯಿತು.

"ಅದೇಕೆ ?"

"ಏಟು ಬಿದ್ದಲ್ಲದೆ ಕಲ್ಲು ವಿಗ್ರಹವಾಗಲಾರದು."

"ಓ ಹೋ ಹೋ !" ಎನ್ನುತ್ತಾ ಅಘೋರ ನಕ್ಕುಬಿಟ್ಟ.

"ಹೌದು ಕಣಯ್ಯಾ."

"ಇರಲಿ, ಒಳ್ಳೆ ವಯೋವೃದ್ಧನಂತೆ ಮಾತಾಡುತ್ತಿ ?"

"ಅಲ್ಲ ; ಜ್ಞಾನವೃದ್ಧನಂತೆ."

"ಒಟ್ಟಿನಲ್ಲಿ ನಿನ್ನ ಉದ್ದೇಶವೇನು ಹೇಳಿಬಿಡು. ಮುಚ್ಚುಮರೆಬೇಡ."

"ನಿನಗೆ ಅಧಿಕಾರ ಬರಬಾರದು ಅಂತ !"

ಪುನಃ ಗೆಳೆಯರಿಬ್ಬರೂ ಮನವಾರೆ ನಕ್ಕರು. ಹಾದಿ ಸವೆಯುತಿದ್ದಂತೆ ಇಬ್ಬರ ದಾರಿಯೂ ಕವಲೊಡೆಯಿತು. ದೂರದ ತಿರುವಿನಲ್ಲಿ "ಚೀರಿಯೋ" ಎಂದ ಮದನ್ ಮಿತಾಳಿ. ಅದೇ ಘಾಟಿಯಲ್ಲಿ ಅಘೋರನ ಪ್ರತಿಧ್ವನಿ ಹೊರಬಿತ್ತು "ಚೀರಿಯೋ !"

ಒಲುಮೆಯಿಂದ ದನಿ ದನಿಯನ್ನು ಬೀಳ್ಕೊಟ್ಟಿತು. ಸಂಜೆಯ ತಂಗಾಳಿ ತಣ್ಣನೆ ಬೀಸಿತು. ಮರದ ಹೊದರುಗಳಲ್ಲಿ ಅಡಗಿ ಕುಳಿತು ಕೋತಿಗಳು ಚೀರಾಟ ನಡೆಸಿದ್ದುವು. ಅಘೋರ ಡಬ್ಬಲ್ ರೋಡಿನ ಸಾಲು ದೀಪಗಳನ್ನೇ ದಿಟ್ಟಿಸುತ್ತಾ ಹಾದಿ ತುಳಿದ.

— ೦ —

ಅಧ್ಯಾಯ

೨

ಅಘೋರ ಟಾರು ಬಳಿದ ಹಾದಿಯಲ್ಲಿ ಸರಸರನೆ ಹೆಜ್ಜೆ ಹಾಕುತಿದ್ದ. ನಡಿಗೆಯ ಮಧ್ಯೆ ಕಣ್ಣುಗಳೊಮ್ಮೆ ಕೈಗಡಿಯಾರದತ್ತ ಹೊರಳಿದುವು. ಹೊತ್ತು ನಾಲ್ಕರ ಅಂಚನ್ನು ದಾಟಿದುದನ್ನು ನೋಡಿದೊಡನೆಯೇ ನಡಿಗೆಯನ್ನಿಷ್ಟು ಚುರುಕುಗೊಳಿಸಿದ. ಅವನ ಹದಿನಾರರ ಎಳಸು ದೇಹ ಬಿಸಿಲ ಝಳವನ್ನು ಲೆಕ್ಕಿಸದೆ ಮುಂದುವರಿಯುತಿತ್ತು. ಇನ್ನಷ್ಟು ದೂರ ಹೋಗುವುದರೊಳಗಾಗಿ ಗೆಳೆಯ ಸುಧೀರ್ ಎದುರಾದ. ಅವನು ಒಮ್ಮೆಲೆ ಉಕ್ಕಿ ಬಂದ ಸಂತೋಷದಿಂದ ಅಘೋರನ ಬಳಿಗೆ ಕುಪ್ಪಳಿಸಿ ಕೈಹಿಡಿದು ಕುಲುಕಿ "ಅಘೋರ್ ಹೃತ್ಪೂರ್ವಕವಾದ ಅಭಿನಂದನೆಗಳು!" ಎಂದ. ಮುಖ ಮಂಡಲಗಳೆರಡೂ ಹೂವಿದಂತರಳಿದವು. ಅಘೋರ ಅವನನ್ನು ಪ್ರತಿವಂದಿಸಿದ.

"ನಾನೇನೋ ನೀನು ಆರ್ಡಿನರಿ ಪಾಸಾಗಬಹುದು ಎಂದುಕೊಂಡಿದ್ದರೆ, ನೀನು ಫಸ್ಟ್ ಕ್ಲಾಸೇ ಗಿಟ್ಟಿಸಿ ಬಿಟ್ಟಿದ್ದೀಯೆ!"

"ದೇವರು ದೊಡ್ಡವನು ಸುಧೀರ್!"

"ನಿನಗೆ ದೇವರಲ್ಲಿ ನಂಬಿಕೆಯುಂಟೇ ಅಘೋರ್?"

"ಅಘೋರ ಎಂದೂ ನಾಸ್ತಿಕನಲ್ಲ."

"ನಾಸ್ತಿಕನಲ್ಲದಿದ್ದರೂ ಘೋರ ಮಹಾಶಯ!"

ಇಬ್ಬರ ಮುಖದಲ್ಲೂ ನಗು ಮಿನುಗಿತು. ಅಘೋರ ಕೇಳಿದ "ಸುಧೀರ್ ಯಾವಕಡೆ ಹೊರಟಿದ್ದಿ?"

"ಎಲ್ಲಿಗೂ ಇಲ್ಲ, ಸುಮ್ಮನೆ ತಿರುಗಾಡಿ ಬರಲು ಹೊರಟೆ. ನೀನು?"

"ನಾನು ಮದನನ ಮನೆಗೆ. ಅವನೂ ತೇರ್ಗಡೆಯಾಗಿದ್ದಾನೆ. ಅವನು ಯಾವ ಸಬ್ಜೆಕ್ಟ್ ತೆಗೆದುಕೊಳ್ಳುತ್ತಾನೊ ತಿಳಿದುಕೊಳ್ಳಬೇಕಿತ್ತು. ನಾನು ಇಷ್ಟುದಿನ ಆನಂದಪುರದಲ್ಲಿದ್ದುದರಿಂದ ಅವನನ್ನು ನೋಡಲಿಲ್ಲ. ಬಾ, ಇಬ್ಬರೂ ಹೋಗೋಣ."

ಅಲ್ಲಿಂದ ಇಬ್ಬರೂ ಕೂಡಿ ಹೆಜ್ಜೆ ಹಾಕಿದರು. ಹಾದಿ ನಡೆಯುತ್ತಾ

"ಅಘೋರ್, ನೀನು ಮುಂದೆ ಏನು ಮಾಡಬೇಕೆಂದಿದ್ದಿ? ಯಾವ ಸಬ್ಜೆಕ್ಟ ತೆಗೆದುಕೊಳ್ಳುವೆ?"

"ಮೆಡಿಸಿನ್ ತೆಗೆದುಕೊಳ್ಳುವುದು ನನ್ನ ಇಷ್ಟ. ನಮ್ಮಪ್ಪನ ಮಟ್ಟಿಗೆ ಅದು ಸಮಾಧಾನವಿಲ್ಲ. ಏನೇ ಬರಲಿ, ನಾನು ಮೆಡಿಸಿನ್ ತೆಗೆದುಕೊಳ್ಳುವುದು ಶತಸ್ಸಿದ್ಧ."

"ಏಕೆ ಬೇಡವೆನ್ನುತ್ತಾರೆ ಅವರು?"

"ತುಂಬ ಹಣ ಖರ್ಚು. ನಾನೆಲ್ಲಿಂದ ತರಲಿ ಎನ್ನುತ್ತಾರೆ. ಮೇಲಾಗಿ ಅವರ ವ್ಯಾಪಾರವೇ ಇದೆಯಲ್ಲಾ ಮತ್ತೇಕೆ ಬೇರೆ ಕಸುಬು? ಎಂಬುದು ಅವರ ವಾದ."

"ನೀನೇನು ಹೇಳುತ್ತಿ?"

"ಊಹೂ, ನನಗದು ಇಷ್ಟವಿಲ್ಲ." ತಲೆಯಾಡಿಸಿದ ಅಘೋರ.

"ಆದರೂ ಅವರು ಒಪ್ಪದಿದ್ದರೆ ಹೇಗೆ?"

"ಓ! ಅದು ಹೇಗಾದರೂ ಅದೀ..." ಮಾತು ಮುಗಿಯುವುದರೊಳಗಾಗಿ ಇಬ್ಬರೂ ಮದನನ ಮನೆಯನ್ನು ಮುಟ್ಟಿದ್ದರು. ಅವನ ಕೊಠಡಿಯಲ್ಲಿ ಯಾರೋ ಬಹಳ ಮಾತಾಡುತ್ತಿದ್ದ ಗದ್ದಲ ಕೇಳಿಸಿತು.

"ಸಧ್ಯ, ಹುಡುಗ ಮನೆಯಲ್ಲಿದ್ದಾನೆ," ಎಂದ ಅಘೋರ.

ಇಬ್ಬರೂ ಮೆಟ್ಟಿಲು ಹತ್ತಿ ಒಳಹೋಗಿ ಬಾಗಿಲನ್ನು ಮೆಲ್ಲಗೆ ತಟ್ಟಿ ಕಟಕಟ ಸದ್ದುಮಾಡಿದರು. ಮದನ್ "ಓ!" ಎನ್ನುತ್ತಾ ಎದ್ದು ಬಂದು ಕದ ತೆರೆದ. ಗೆಳೆಯರನ್ನು ಕಾಣುತ್ತಲೂ ಆನಂದ ತುಂದಿಲನಾಗಿ ಒಳಬರಮಾಡಿಕೊಂಡು ಆತ್ಮೀಯತೆಯಿಂದ ಅಭಿನಂದಿಸಿದ "ಪರವಾಯಿಲ್ಲ, ಜಾಣಕಣಯ್ಯಾ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದೀಯೆ!"

"ಭಗವಂತನ ದಯೆ!" ಕಣ್ಣುಗಳಲ್ಲಿ ಛವಿ ಥಳಥಳಿಸಿತು.

"ಸಧ್ಯ, ನಿನ್ನ ದಯೆ ಭಗವಂತನ ಮೇಲಿದ್ದರೆ ಸಾಕಾಗಿದೆ!"

ಎಲ್ಲರೂ ಗೊಳ್ಳನೆ ನಕ್ಕರು. ಅಘೋರ ಕಣ್ಣುಗಳನ್ನು ಎಲ್ಲೆಡೆಯೂ ಹರಿಸಿದ. ಒಳಗಡೆ ಇನ್ಯಾರೂ ಇರಲಿಲ್ಲ. ಅಘೋರ್ ಮತ್ತು ಸುಧೀರ್ ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಯಾರೊಂದಿಗೆ ಇವನು ಇಷ್ಟೊಂದು ಮಾತಾಡಿ ಗದ್ದಲ ಮಾಡುತಿದ್ದ ಎಂಬುದು ಅಚ್ಚರಿಯನ್ನುಂಟು ಮಾಡಿತು.

ಅಘೋರ ಕೇಳಿದ "ಮದನ್ ಯಾರೊಂದಿಗೆ ಅಷ್ಟೊಂದು ಮಾತಾಡುತ್ತಿದ್ದೆ ಗದ್ದಲ ರಸ್ತೆಯವರೆಗೂ ಕೇಳಿಸುತ್ತಿತ್ತು ?"

"ಯಾರೂ ಇಲ್ಲವಲ್ಲಾ ?" ಮದನ್ ಕಳ್ಳ ನಗೆ ಬೀರಿದ.

"ನನಗೊತ್ತು ಯಾರೋ ಇದ್ದರು."

ಮೂವರೂ ಕುಳಿತುಕೊಂಡರು. ತುಸು ಹೊತ್ತಿನೊಳಗಾಗಿ ಶೌಚದ ಕೊಠಡಿಯಿಂದ ಜಾನಕೀರಾಂ ಹೊರ ಬಂದ. "ಹೋ ! ಅಂಕಲ್ ಜಾರ್ಜ್ !" ಎಂದ ಅಘೋರ.

"ಘೋರ್ ! ಅಧೀರ್ ! ಅಂಕಲ್ ಜಾರ್ಜ್ ! ಒಟ್ಟಿಗೆ ಕೂಡುವುದೆಂದರೆ ತ್ರಿಮೂರ್ತಿಗಳು ಕೂಡಿದಂತೆ. ಬಹುಶಃ ನನಗೆ ಹಿಡಿದಿದ್ದ ಪೀಡೆ ಪಿಶಾಚಿಗಳೆಲ್ಲಾ ಇನ್ನು ಬಿಟ್ಟು ಹೋಗುತ್ತವೆ !" ಮದನನ ದನಿಯಲ್ಲಿ ಶಿಳಿ ಹಾಸ್ಯವಿತ್ತು.

ಎಲ್ಲರೂ ಜೋರಾಗಿ ನಗತೊಡಗಿದರು. ನಗುವಿನ ಗದ್ದಲ ಮಾಡು ಮುಟ್ಟುವಂತೆ ಮೊಳಗಿತು. ಜಾನಕೀರಾಂ ಆನೇಕಲ್‌ನವನಾಗಿದ್ದುದರಿಂದ ಅವನು ಶಾಲೆಯಲ್ಲಿ "ಅಂಕಲ್ ಜಾರ್ಜ್" ಎಂದು ಪ್ರಸಿದ್ಧನಾಗಿದ್ದ. ಸುಧೀರನ ನಾಮಾಂಕಿತವು "ಅಧೀರ" ಎಂದು ಮಾರ್ಪಟ್ಟಿತ್ತು. ಸುಧೀರ ಕಳೆದ ಸಾಲಿನಲ್ಲಿ ಪಿ.ಯು.ಸಿ ಮುಗಿಸಿ ಬಿ.ಎಸ್‌ಸಿ., ಸೇರಿಕೊಂಡಿದ್ದ. ಜಾನಕೀರಾಂ ಮದನ್ ಅಘೋರರೊಂದಿಗೆ ಈ ಸಾಲಿನಲ್ಲಿ ಪಿ. ಯು. ಸಿ. ಮುಗಿಸಿದ ವಿದ್ಯಾರ್ಥಿ.

"ನೀವಿಬ್ಬರೇ ಅಷ್ಟೊಂದು ಗದ್ದಲ ಮಾಡುತ್ತಿದ್ದಿರೇನೋ ?" ಸುಧೀರ್ ಆಶ್ಚರ್ಯ ವ್ಯಕ್ತಪಡಿಸಿದ. ಅಘೋರ ಪ್ರಶ್ನಾರ್ಥಕ ದೃಷ್ಟಿ ಬೀರಿ ಉತ್ತರವನ್ನು ನಿರೀಕ್ಷಿಸಿದ.

"ಅಷ್ಟೊಂದು ಗದ್ದಲವಿದ್ದಿತೇ ?"

"ನಾನೇನೋ ದೊಡ್ಡ ಪಾರ್ಟಿ ಇದ್ದಿರಬಹುದು ಎಂದುಕೊಂಡಿದ್ದೆ."

"ತೇರ್ಗಡೆಯಾದವರ ಕೂಟ ಎಂದಮೇಲೆ ಕೇಳಬೇಕೆ ?"

ಮದನ್ ಒಳಗಡೆ ಹೋಗಿ ಗೆಳೆಯರಿಗೆ ತಣ್ಣನೆಯ ಪಾನೀಯ ತೆಗೆದುಕೊಂಡು ಬಂದ. ಅದನ್ನು ನೋಡಿದೊಡನೆಯೇ "ಈಗೇಕಪ್ಪಾ ತೊಂದರೆ ತೆಗೆದುಕೊಂಡೆ ?" ಎಂದರು ಎಲ್ಲರೂ.

"ಇದೊಂದು ತೊಂದರೆಯೇ?" ಎನ್ನುತ್ತಾ ಎಲ್ಲರಿಗೂ ಶರಬತ್ತನ್ನು ನೀಡಿದ ಮದನ್, ಅತಿಥೇಯನಾಗಿ.

ಶರಬತ್ತು ಕೈಯಿಂದ ಬಾಯಿಗೆ ಚಲಿಸಿ ಧಗೆಯ ಬೇಗೆಗೆ ತಣಿವನ್ನು ನೀಡಿತು. ಮೊದಲೇ ಅಕಾರಣವಾಗಿ ಕಿಲಕಿಲ ನಗು ಮೂಡುವ ವಯಸ್ಸು, ಜೀವನದ ಹೆದ್ದಾರಿಗೆ ಪುಟಿದು ಹಾರಲು ಪುಟಪುಟಿಯುವ ಜೀವ ಅಂದಮೇಲೆ ಇನ್ನು ಕೇಳಬೇಕೆ? ನಾಲ್ವರೂ ನಕ್ಕು ನಲಿದು ಲೋಟಗಳನ್ನು ಖಾಲಿ ಮಾಡಿದರು. ಮದನ್ ಲೋಟಗಳನ್ನು ಒಳಗೊಯ್ದು ಇಟ್ಟು ಬಂದು ಕೇಳಿದ,

"ಅಘೋರ್, ಮುಂದೆ ಯಾವ ಹಾದಿ ಹಿಡಿಯುತ್ತಿ?"

"ಮೆಡಿಸಿನ್."

"ನೀನು ಮೆಡಿಸಿನ್?" ಆಶ್ಚರ್ಯದಿಂದ ಕೇಳಿದ ಮದನ್.

"ನಿನಗೇಕೆ ಅಷ್ಟೊಂದು ಆಶ್ಚರ್ಯ?"

"ಸರಿ, ಬಿಡು. ಇನ್ನು ಯಾರೂ ಬದುಕುವುದೇ ಇಲ್ಲ! ನಿನ್ನವರಿಗಾಗಿ ಸದಾ ಸ್ವರ್ಗದ ಬಾಗಿಲು ತೆರೆದೇ ಇರಬೇಕು!" ಎಲ್ಲರೂ ಗೊಳ್ಳನೆ ನಗ ತೊಡಗಿದರು. ನಗುವಿನ ಆವೇಗ ತುಸು ಕಡಿಮೆಯಾಗುತ್ತಲೂ ಅಘೋರ ಕೇಳಿದ "ಮದನ್, ನೀನೇನು ತೆಗೆದುಕೊಳ್ಳುತ್ತಿ?"

"ನಿನ್ನದೇ."

"ಮೆಡಿಸಿನ್?"

"ಹೌದು."

"ಸರಿ, ಬಿಡು. ಇನ್ಯಾರೂ ಸಾಯೋದೇಯಿಲ್ಲ!" ತಲೆಯಲ್ಲಾಡಿಸುತ್ತಾ ಅಘೋರ ತಿಳಿಹಾಸ್ಯದ ಚಟಾಕಿ ಹಾರಿಸಿದ.

"ಹಾಗಿದ್ದರೆ ಸ್ವರ್ಗದ ಬಾಗಿಲು ಮುಚ್ಚಿಬಿಡುತ್ತೆ."

"ಅದು ಹೇಗಾದೀತು? ಅಘೋರನ ಮುಂದಿಗಾಗಿ ತೆರೆಯಬೇಕು! ಮದನನ ಮುಂದಿಗಾಗಿ ಮುಚ್ಚಬೇಕು! ಯಮಧರ್ಮರಾಯನಿಗೀಗ ಕಷ್ಟಕ್ಕೆ ಬಂತು." ಎಂದ ಜಾನಕೀರಾಂ.

"ಅಘೋರ, ನೀನು ಏನಾದರೂ ತೆಗೆದುಕೊಂಡು ಸುಖವಾಗಿರು. ಮೆಡಿಸಿನ್ನಿಗೆ ಮಾತ್ರ ಬರಬೇಡ." ಎಂದ ಮದನ್.

"ಏನಪ್ಪಾ ? ಹಾಗೆನ್ನುತ್ತಿ ?" ಸುಧೀರನ ಪ್ರಶ್ನೆ.

"ಜೀವನ್ಮರಣಗಳ ಹೊರಾಟವೇ ಮೆಡಿಸಿನ್. ಮೆಡಿಸಿನ್ ತೆಗೆದು ಕೊಳ್ಳುವ ವ್ಯಕ್ತಿ ದಯಾದ್ರ್ರಹೃದಯನಾಗಿರಬೇಕು. ನಮ್ಮ ಘೋರ ಎಂದೂ ಸೌಮ್ಯನಾಗಲಾರ."

"ಮದನ್ ರೋಗಿಗಳ ಮೇಲೆ ಅಮೃತ ವರ್ಷವನ್ನೇ ಕರೆಯುತ್ತಾನೆ ; ನಿಮಗೆ ಗೊತ್ತೇ ?"

ಅಘೋರ ನಗುತ್ತ ಹುಬ್ಬುಹಾರಿಸಿದ.

"ಅದೇನೇ ಇರಲಿ, ನೀನು ವೈದ್ಯವೃತ್ತಿಗೆ ಸರಿಯಲ್ಲಪ್ಪಾ."

"ನೀನು ಮಿಲಿಟರಿಗೆ ಸರಿಹೊಂದುತ್ತಿ. ಅದಕ್ಕೇ ಸೇರು ಅಘೋರ್"

"ನಿಜ ಅಘೋರ್"

"ಡಾಕ್ಟರಾಗುವವನಿಗೆ ಸಹನೆ ಇರಬೇಕು."

"ಇದೊಳ್ಳೇ ಚೆನ್ನಾಗಿದೆ !" ನಕ್ಕುನುಡಿದ ಅಘೋರ.

"ಯಾರಿಗೆ ಗೊತ್ತು ? ಓದುತ್ತಾ ಓದುತ್ತಾ ಅಘೋರ ಹೂವಿಗಿಂತ ಮೃದುವಾಗಬಹುದು."

"ಪಾಪ, ಅವನನ್ನೇಕೆ ಗೋಳುಹುಯ್ಯುತ್ತೀರಿ ?" ಎಂದ ಸುಧೀರ್.

"ಆಗಲೇ ಹೇಳಿದೆನಲ್ಲಾ ಸುಧೀರ್. ಜೀವನ್ಮರಣಗಳ ಹೋರಾಟವೇ ಮೆಡಿಸಿನ್."

"ಇಷ್ಟಕ್ಕೂ ಅವನ ಅಪ್ಪ ಒಪ್ಪುತ್ತಿಲ್ಲವಂತೆ."

"ಅಂಕಲ್ ಜಾರ್ ! ನೀನು ಅವನ ತಂದೆಗೆ ಹೇಳಪ್ಪ. ಅವನನ್ನು ಬೇರೆ ದಾರಿಗೆ ಹಚ್ಚಲಿ."

"ಅಂಕಲ್ ಜಾರ್ ಒಬ್ಬನೇ ಏಕೆ ? ಸುಧೀರ್ ಮದನ್ ಮೂವರು ಕೂಡಿಕೊಂಡರೂ ಇದು ಆಗುವ ಪ್ರಶ್ನೆಯೇ ಅಲ್ಲ." ಅಘೋರ ತಲೆಯಲ್ಲಾಡಿಸುತ್ತಾ ಹೇಳಿದ.

"ನಾನು ಕಳೆದವರ್ಷವೇ ಮೆಡಿಸಿನ್ನಿಗಾಗಿ ಪ್ರಯತ್ನಪಟ್ಟಿದ್ದೆ. ಸೀಟು ಸಿಕ್ಕಲಿಲ್ಲ. ದೇವರ ದಯದಿಂದ ಈ ಸಲವಾದರೂ ಸಿಕ್ಕಿದರೆ ಸೇರಿಕೊಳ್ಳುವೆ." ಎಂದ ಸುಧೀರ್.

"ನನಗೆ ಮೊದಮೊದಲು ಮೆಡಿಸಿನ್ನಿನಲ್ಲಿ ಆಸೆ ಇರಲಿಲ್ಲ. ಈಚೆಗೆ ಮನಸ್ಸು ಮಾಡಿದ್ದೇನೆ."

"ಡಾ|| ಘನಶ್ಯಾಮರನ್ನು ನೋಡಿ ನೋಡಿ ಬಾಯಿಯಲ್ಲಿ ನೀರೂರಿತು ಅಲ್ಲವೇ ?" ಅಣಕದ ದನಿಯಲ್ಲಿ ನುಡಿದ ಮದನ.

"ಓ ! ನೀನು ಘನಶ್ಯಾಮರನ್ನು ನೋಡಿ ಡಾಕ್ಟರಾಗಲು ಹೊರಟಿದ್ದೀಯೇನು ?"

"ಹೌದಪ್ಪಾ, ಅದರಲ್ಲಿ ತಪ್ಪೇನು ? ಒಬ್ಬರನ್ನು ನೋಡಿ ತಾನೆ ಇನ್ನೊಬ್ಬರು ಕಲಿಯಬೇಕು ?" ಬೇಕೆಂತಲೇ ನುಡಿದ ಅಘೋರ.

"ಹ್ಞೂ, ಆಗಪ್ಪಾ ಆಗು. ನಾನೂ ನೋಡುವೆ ನಿನ್ನ ಡಾಕ್ಟರಿಕೇನ."

"ಆಗು-ಹೋಗುಗಳಿಗೆ ಇನ್ನೂ ಬಹಳ ಕಾಲವಿದೆ." ಎಂದ ಜಾನಕೀರಾಂ.

"ಇರಲಿ, ಮುಂದೆ ನೀನು ಪ್ರೈವೇಟ್ ಡಾಕ್ಟರೋ ಅಥವಾ ಸರಕಾರಿ ಡಾಕ್ಟರೋ ?"

"ಒಂದ್ಸಲ ಡಾಕ್ಟರಾಗೋಣ. ಅನಂತರ ಅದರ ಯೋಚನೆ." ಎಂದ ಅಘೋರ ಸ್ವಲ್ಪ ತಡೆದು ಪುನಃ ಅಂದ "ನಾನೆಲ್ಲಿದ್ದರೂ ನೀನಲ್ಲಿರುವೆ ಮದನ್ ಅದೊಂದನ್ನು ಮಾತ್ರ ತಿಳಿದಿರು !"

"ಶ್ಯ! ನಿನ್ನ ಜೊತೆ ನಾನಿರುವುದೇ? ಅದ್ಹೇಗಪ್ಪಾ ? ನಿನಗೂ ನನಗೂ ಹಗಲೂ ರಾತ್ರಿಯ ಅಂತರವಿದೆ !"

"ಅಂತಹವರೇ ಕೂಡಿರುವುದು ಕಣಯ್ಯಾ !" ಎಂದ ಸುಧೀರ್.

"ಹೌದು ! ನೋಡಿದವರಿಗೆ ಆಶ್ಚರ್ಯವಾಗುವಂತೆ." ಅನುಮೋದಿಸಿದ ಜಾನಕೀರಾಂ.

ಮದನ್ ಮಾತಾಡದೆ ಅಘೋರನನ್ನೇ ನಿಟ್ಟಿಸಿ ನೋಡತೊಡಗಿದೊಡನೆಯೇ ಅಘೋರನಿಗೆ ನಗುವುಕ್ಕಿಬಂತು ಹಾಸ್ಯದ ಧಾಟಿಯಲ್ಲಿ–"ತೀರ ಹೆದರಿಕೊಳ್ಳಬೇಡಯ್ಯಾ"

"ಅಂಕಲ್ ಜರ್ಾ ! ನಿನ್ನ ಮುಂದಿನ ಕಾರ್ಯಕ್ರಮವೇನು ?" ಸುಧೀರ್ ಕೇಳಿದ.

"ಏನೂ ಇಲ್ಲ. ನಾನಿಂದು ಮದನನ ಬಾಡಿಗಾರ್ಡ್ !"

"ಅದೇನು ?" ಅಘೋರನ ಪ್ರಶ್ನೆ.

"ನಮ್ಮ ಮನೆಯವರೆಲ್ಲಾ ಮೈಸೂರಿಗೆ ಹೋಗಿದ್ದಾರೆ."

"ಯಾರೂ ಇಲ್ಲವೇ ಮದನ್ ?"

"ಯಾರೂ ಇಲ್ಲ."

"ಓ ! ಅದರಿಂದಲೇ ಅಷ್ಟೊಂದು ಗದ್ದಲ ಮಾಡುತ್ತಿದ್ದಿರಿ." ರಾಗವಾಗಿ ನುಡಿದ ಸುಧೀರ್.

"ನಾನೂ ಇರಲೇನಪ್ಪಾ ?"

"ಬೇಡ ಅಘೋರ್."

"ಮದನನಿಗೆ ನನ್ನಲ್ಲಿ ನಂಬಿಕೆಯಿಲ್ಲ."

"ಅದೇನು, ಹಾಗೆನ್ನುತ್ತಿ ? ಇಬ್ಬರೂ ಪ್ರಾಣ ಗೆಳೆಯರು ?"

"ಅಘೋರನ ಮಾತು ನಂಬುವುದುಂಟೇ ? ಜರ್ಕ !" ಎಂದ ಮದನ್ ತುಸು ತಡೆದು ಅಘೋರನನ್ನು ಕೇಳಿದ "ಹೇಗಿತ್ತಪ್ಪಾ ಅಜ್ಜಿ ಮನೆ ? ಅಲ್ಲಿ ಸಂತೋಷದಿಂದ ಕಾಲ ಕಳೆದಿರಬಹುದಲ್ಲವೇ ?"

"ಓಹೋ !" ಹುಬ್ಬು ಹಾರಿಸಿ ಮುಖದಲ್ಲಿ ಸಂತಸವನ್ನು ಸೂಸಿ- "ಮದನ್ ! ಆ ದಿನ ಊರಿಗೆ ನಿನ್ನಿಂದ ತಂತಿ ಬಂದಾಗ ನಮ್ಮ ಅಜ್ಜಿಗಾದ ಸಂತೋಷ ಅಷ್ಟಿಷ್ಟಲ್ಲ. ಮೊಮ್ಮಗ ಪ್ರಥಮ ವರ್ಗ ಪಡೆದುದಕ್ಕೆ ಎಷ್ಟೊಂದು ದೇವರಿಗೆ ಕಾಯೊಡೆಸಿದರೋ ಏನೋ ! ಅದು ಅವರಿಗೆ ಗೊತ್ತು. ಎಲ್ಲಾ ದೇವರಿಗೂ ಕೈ ಮುಗಿದಿದ್ದೇ."

"ನಿನಗೆ ಬೆಣ್ಣೆ ತುಪ್ಪ ಒತ್ತಿ ಒತ್ತಿ ಇಕ್ಕಿರಬಹುದು !"

"ನೀನು ಫೇಲ್ ಅಂತ ತಂತಿ ಕೊಡಬಹುದಾಗಿತ್ತು. ನನಗಾಗ ಹೊಳೆಯಲಿಲ್ಲ."

"ನೀನು ಹಾಗೆ ಕೊಟ್ಟಿದ್ದಿದ್ದರೆ ನಮ್ಮಜ್ಜಿ ಕಥೆ ಮುಗಿದೇ ಹೋಗುತಿತ್ತು !"

ಎಲ್ಲರ ಮುಖದಲ್ಲೂ ನಗು ಮಿನುಗಿತು. ಮದನ್ ಕೇಳಿದ "ನಾನು ನಾಳೆ ಬೆಳಿಗ್ಗೆ ಅಪ್ಲಿಕೇಷ್ ಫಾರಂ ತರಲು ಹೋಗುವೆ. ನೀನೂ ಬರುತ್ತೀಯೇನು ?"

"ಹ್ಞೂ." ಎಂದ ಅಘೋರ.

"ನಾನಾಗಲೇ ಹಾಕಿದ್ದೇನೆ." ಎಂದ ಸುಧೀರ್.

"ನೀನೇನಪ್ಪಾ ಮಾಡುತ್ತಿ, ಜರ್ಾ ?"

"ಫಾರಂ ತಂದಿದ್ದೇನೆ," ಎಂದ ಜಾನಕೀರಾಂ ಸ್ವಲ್ಪ ತಡೆದು ಪುನಃ ಹೇಳಿದ "ಮೆಡಿಸಿನ್ ತುಂಬ ಕಷ್ಟದ ಕೋರ್ಸ್ ; ಅದೇ ನೇರಕ್ಕೆ ತುಂಬ ಖರ್ಚಿನ ಕೋರ್ಸ್ ಕೂಡಾ. ಸಾಮಾನ್ಯನು ಕಲಿಯುವ ವಿದ್ಯೆಯಲ್ಲ ಅದು."

"ಹೌದಪ್ಪಾ, ನಮ್ಮ ತಂದೆಗೆ ಅದೇ ಯೋಚನೆ ಹಣ ಎಲ್ಲಿಂದ ತರಲಿ ಎನ್ನುತಿದ್ದಾರೆ. ಅವರಿಗೆ ನಾನು ವ್ಯಾಪಾರವನ್ನು ಮುಂದುವರಿಸಿಕೊಂಡು ಹೋಗುವುದು ಇಷ್ಟ."

"ಮತ್ತೆ ನಿನ್ನ ಓದು ಸಾಗುವ ಬಗೆ ಹೇಗೆ ಅಘೋರ್ ?"

"ಸ್ಕಾಲರ್‌ಷಿಪ್, ಬಂದರೆ ಪರವಾಯಿಲ್ಲ." ಎಂದವನೇ ಅಘೋರ್ ಹೇಳಿದ "ಎಲ್ಲರೂ ಬನ್ನಿ ಒಂದು ಸುತ್ತು ಹೋಗಿ ಬರೋಣ. ಎಲ್ಲರಿಗೂ ಒಂದೊಂದು ಐಸ್‌ಕ್ರೀಮ್ ಕೊಡಿಸುವೆ."

"ಅಷ್ಟರಲ್ಲೇ ಸ್ವೀಟ್ ಮುಗಿಸಿ ಬಿಡುತ್ತೀಯೇನು ?"

"ನನ್ನಲ್ಲಿ ಇಪ್ಪತ್ತು ರೂಪಾಯಿ ಇದೆ.ಅಷ್ಟರಲ್ಲಿ ಏನು ಬರತ್ತೋ ಅದು."

ಮದನ ಮನೆಗೆ ಬೀಗ ಹಾಕಿ ಗೆಳೆಯರೊಂದಿಗೆ ಕೂಡಿ ಹೊರಟ. ನಾಲ್ವರೂ ಸಾಲಾಗಿ ಸಿಸ್ತಿನಿಂದ ಹೆಜ್ಜೆ ಹಾಕಿದರು. ದಾರಿಯುದ್ದಕ್ಕೂ ವಾಹನ ಗಳ ಗಡಗಡ ಸದ್ದು ಜನಗಳ ಗುಜುಗುಂಪಲು ಕಿವಿಯನ್ನು ಚಿಟ್ಟು ಹಿಡಿಸು ವಂತಿತ್ತು. ಎಲ್ಲರೂ ಹತ್ತಿರದಲ್ಲಿದ್ದ ಹೋಟೇಲಿಗೆ ಹೋದರು. ಮಾಣಿ ಬಂದು ಹಲ್ಕಿರಿದು ನಿಂತಾಗ ಅಘೋರ ನಾಲ್ಕು ಐಸ್‌ಕ್ರೀಂ ತರಲು ಹೇಳಿದ. ದುಂಡ ನೆಯ ಮೇಜಿನ ಸುತ್ತಲೂ ಕುಳಿತುಕೊಂಡರು. ಜಾನಕೀರಾಂ ಪಕ್ಕದಲ್ಲಿ ಕುಳಿತಿದ್ದ ಮದನನ ಕೈಹಿಡಿದುಕೊಂಡು ಹಸ್ತರೇಖೆಗಳನ್ನು ನೋಡತೊಡಗಿದ. ಅದನ್ನು ನೋಡಿ ಎಲ್ಲರಿಗೂ ಎಲ್ಲಿಲ್ಲದ ಆಶ್ಚರ್ಯ ಮತ್ತು ಕುತೂಹಲ.

"ಸುಮ್ಮನೆ ನಾಟಕ ಆಡುತಿದ್ದೀಯೋ ಅಥವಾ ನಿಜವಾಗಿಯೂ ನೋಡುತಿದ್ದೀಯೋ ?" ಅಘೋರ ಕೇಳಿದ ಮನವನ್ನು ಅತ್ತಲೇ ಕೇಂದ್ರೀಕರಿಸಿ.

"ಚಿಕ್ಕಪ್ಪನಿಂದ ಸ್ವಲ್ಪ ತಿಳಿದುಕೊಂಡಿದ್ದೇನೆ". ಜಾನಕೀರಾಂ ತಲೆ ಯೆತ್ತದೆ ಹೇಳಿದ. ಹಸ್ತ ರೇಖೆಗಳು ಅವನ ಗಮನವನ್ನು ಸಂಪೂರ್ಣ ಸೆಳೆ ದಿದ್ದುವು-ಕಬ್ಬಿಣವನ್ನು ಸೆಳೆಯುವ ಸೂಜಿಗಲ್ಲಿನಂತೆ.

"ಸುಮ್ಮನೆ ನಮ್ಮ ಕುತೂಹಲವನ್ನೇಕೆ ಕೆರಳಿಸುತ್ತಿ ? ಸುಳ್ಳೋ ಪೊಳ್ಳೋ ಏನಾದರೂ ಹೇಳಿಬಿಡು." ಎಂದ ಸುಧೀರ್.

ಎಲ್ಲರ ಮುಖದಲ್ಲೂ ನಗು ಮಿನುಗಿತು. ಜಾನಕೀರಾಂ ತುಸು ತಡೆದು ಹೇಳಿದ "ಮದನ್ ಸುಖಜೀವಿ. ಬಾಳು ವೃತ್ತಿ ಎರಡರಲ್ಲೂ ಪೂರ್ಣ ಆತ್ಮ ತೃಪ್ತಿ ಇರುತ್ತೆ."

"ಭೇಷ್ !" ಎಂದ ಅಘೋರ. ಸ್ವಲ್ಪ ತಡೆದು ಪುನಃ "ಜರ್ರಾ, ನೀನು ಹಾಗೆಂದು ಹೇಳಿದರೆ ಅವನು ಕಷ್ಟಪಟ್ಟು ಓದುವುದನ್ನೂ ಬಿಟ್ಟು ಬಿಟ್ಟಾನು!"

ನೋಡು ನೋಡುತ್ತಾ ಪುನಃ ಹೇಳಿದ ಜಾನಕೀರಾಂ "ನೀನು ಸುಖ ಪುರುಷ ಮಾತ್ರನಲ್ಲ ಕೀರ್ತಿಶಾಲಿಯೂ ಆಗುತ್ತಿ ಮದನ್ !"

ತಕ್ಷಣ ರುಧೀರ್ ತನ್ನ ಕೈಮುಂದೆ ನೀಡಿ ಹೇಳಿದ "ನನ್ನ ಕೈಯನ್ನಿಷ್ಟು ನೋಡಿ ಹೇಳು".

"ಐಸ್‌ಕ್ರೀಂ ಬಂದಿದೆ. ಮೊದಲು ಇದಾಗಲಿ." ಎಂದ ಅಘೋರ.

"ಭವಿಷ್ಯ ಕೇಳಿ ಮದನನಿಗೆ ಹೃದಯ ಉಕ್ಕೇರಿದೆ. ಇನ್ನು ಅವನಿಗೇಕೆ ಐಸ್‌ಕ್ರೀಂ.?"

"ಕೊಡಿಸಿದವನಿಗೆರಡು, ಹಾಗಾದರೆ !"

"ಡಬ್ಬಲ್ ನೀನೇ ಹೊಡೆಯೋಣ ಎಂತಲೋ? ಒಳ್ಳೆಯ ಉಪಾಯ!"

"ಒಂದು ವೇಳೆ ಮದನನಿಗೆ ಬೇಡವಾದರೆ ಅದು ಭವಿಷ್ಯಗಾರನಾದ ನನಗೆ ಸಲ್ಲಬೇಕು." ಹುಬ್ಬು ಹಾರಿಸಿ ನಸುನಕ್ಕ ಜಾನಕೀರಾಂ.

"ಕೊಡಿಸಿದವನಿಗೆ ಮೊದಲನೆಯ ಛಾನ್ಸ್."

"ನೀನು ಇಷ್ಟೇ ಅಲ್ಲ. ಇನ್ನೂ ಗ್ರ್ಯಾಂಡ್ ಪಾರ್ಟಿ ಕೊಡಬೇಕಿತ್ತು ! ಅಷ್ಟಲ್ಲದೆ ಇದನ್ನೇ ವಾಪಸು ಪಡೆಯುವ ಹೊಂಚಿಕೆ ಹಾಕುತಿದ್ದೀಯೆ !"

"ಡಾಕ್ಟರಾದ ಮೇಲೆ ಗ್ರ್ಯಾಂಡ್ ಪಾರ್ಟಿ."

ಐಸ್‌ಕ್ರೀಂ ಮೆದ್ದು ಹುಡುಗರು ಹೊರ ಹೊರಟಾಗ ಹೊತ್ತು ಮುಳುಗುವುದರಲ್ಲಿತ್ತು. ಬಿಲ್ಲಿನ ಹಣವನ್ನು ಕೊಟ್ಟು ಚಿಲ್ಲರೆ ಪಡೆದು ಅಘೋರ ಹಿಂಬಾಲಿಸಿದ. ಹಾದಿಯಲ್ಲಿ ಭರ್ತಿಯಾದ ಕೈಗಾಡಿಯನ್ನು ತಳ್ಳಲಾರದೇ ತಳ್ಳುತಿದ್ದ ಇಬ್ಬರನ್ನು ನೆಟ್ಟದಿಟ್ಟಿಯಿಂದ ನೋಡಿ ಮದನ್-"ಪಾಪ, ಕಷ್ಟ ಜೀವಿಗಳು."

ಅಘೋರ ಜಾನಕೀರಾಮನಿಗೆ ಗೇಲಿ ಮಾಡಿದ-"ಜರ್ರಾ, ಅವರ ಹಸ್ತ

ರೇಖೆಯನ್ನಿಷ್ಟು ನೋಡು ಅವರಿಗೆಂದು ಒಳ್ಳೆಯದಾಗುತ್ತೆ ?"

"ನೀನೊಂದು ವಿಚಿತ್ರ ವ್ಯಕ್ತಿ ಕಣಯ್ಯಾ."

"ಹಾಲೋಗರ ಉಂಡವನಿಗೆ ಅವರ ಬಗ್ಗೆ ಕರುಣೆ ಮೂಡುವುದಾದರೂ ಹೇಗೆ ?"

ಅಘೋರ ಮಾತಾಡದೆ ಮುಗುಳು ನಗೆ ಬೀರಿದ.

ಹಾದಿಯಲ್ಲಿ ಕೈಯೊಡ್ಡಿದ ಭಿಕ್ಷುಕನಿಗೆ ಕಾಸನ್ನು ಹಾಕಿ ಮುಂದುವರಿದ ಸುಧೀರನನ್ನು ನೋಡಿ, ಅಘೋರ ಇಂತೆಂದ "ಸುಧೀರ್, ನಾವೇ ಇವರಿಗೆ ಭಿಕ್ಷುಕವೃತ್ತಿ ಕಲಿಸುತಿದ್ದೇವೆ ಎಂದರೂ ತಪ್ಪಾಗಲಿಕ್ಕಿಲ್ಲ, ಭಿಕ್ಷುಕ ವೃತ್ತಿಯಿಂದ ಜೀವನ ಸಾಗುವುದಾದರೆ ಕೆಲಸ ಮಾಡಲು ಮನಸ್ಸು ಬಂದೀತೆ ? ಈ ಭಂಡ ಜನ್ಮಕ್ಕಿಂತ ಸಾವು ಲೇಸು." ದನಿಯಲ್ಲಿ ಜುಗುಪ್ಸೆ ಸ್ಫುರಿಸಿತು.

"ನಿನ್ನಂಥಾವನು ಡಾಕ್ಟರಾದರೆ...?"

"ಅರ್ಧಕ್ಕೇಕೆ ನಿಲ್ಲಿಸಿದೆ ? ಅಭಿಪ್ರಾಯ ಸಂಪೂರ್ಣ ಹೊರಬೀಳಲಿ."

"ಈಗಲೇ ಹೇಳುವುದು ಸರಿಯಲ್ಲ." ಮದನ್ ತಲೆಯಲ್ಲಾಡಿಸುತ್ತಾ ಅಂದ.

"ಕಾದು ನೋಡುವುದು ಲೇಸಲ್ಲವೇ ಸುಧೀರ್ ?"

"ಕಾಯುವುದೇಕೆ ? ಅಂಕಲ್ ಜರ್ಾನನ್ನು ಕೇಳಿದರೆ ಇಂದೇ ಗೊತ್ತಾಗುತ್ತೆ."

ಇನ್ನಷ್ಟು ಹೊತ್ತಿನೊಳಗಾಗಿ ಎಲ್ಲರೂ ಮದನನ ಮನೆಯನ್ನು ಸೇರಿದರು. ಅಘೋರ ಜಾನಕೀರಾಮನ ಮುಂದೆ ಕೈನೀಡಿ ಹೇಳಿದ "ಇಂದೇ ಎಲ್ಲರ ಮನಸ್ಸಿನ ಮೇಲಿನ ಸಂಶಯವೂ ನಿವಾರಣೆಯಾಗಲಿ. ನನ್ನ ಭವಿಷ್ಯ ಹೇಗಿದೆಯೋ ಹೇಳಿಬಿಡು, ಜರ್ಾ !"

ದುಂಡು ಮೇಜಿನ ಪರಿಷತ್ತಿಗೆ ನೆರೆದವರಂತೆ ಮೇಜಿನ ಸುತ್ತ ಸುತ್ತುವರಿದು ಎಲ್ಲರೂ ಕುಳಿತುಕೊಂಡರು. ಅವನ ಹಸ್ತವನ್ನು ಕೈಗೆ ತೆಗೆದುಕೊಂಡು ನೋಡಿ ಬೆಳಕು ಸಾಲದೆನ್ನಿಸುತ್ತಲೂ ಎದ್ದು ಸ್ವಿಚ್ ಹಾಕಿ ಕುಳಿತುಕೊಂಡು ನೋಡತೊಡಗಿದ–ಜಾನಕೀರಾಂ. ಅವನು ಬಹಳ ಹೊತ್ತು ಏನನ್ನೂ ಹೇಳದೆ ಅತ್ತಿತ್ತ ತಿರುಗಿಸಿ ನೋಡುತ್ತಾ ಕುಳಿತುಕೊಂಡುದುದನ್ನು

ನೋಡುನೋಡುತ್ತಿದಂತೆ ಇತರರಿಗೆ ಕುತೂಹಲವು ಕೆರಳಿತು. ಸುಧೀರ್ ಜಾನಕೀರಾಮನ ಬೆನ್ನನ್ನು ತಟ್ಟಿ–"ಜರ್ಾ, ಸ್ವಲ್ಪ ಬಾಯಿಬಿಡಯ್ಯಾ"

"ಎಲ್ಲವೂ ಅಸ್ಪಷ್ಟ. ಏನು ಹೇಳಬೇಕೋ ಗೊತ್ತಾಗುತ್ತಿಲ್ಲಪ್ಪಾ." ಜಾನಕೀರಾಂ ಸ್ವಲ್ಪ ಯೋಚಿಸಿ–"ಬೇರೇ ಏನೇ ಇರಲಿ, ನೀನು ವಿದ್ಯಾವಂತನಾಗುವುದರಲ್ಲಿ ಅನುಮಾನವಿಲ್ಲ. ಆದರೆ, ಜೀವನದಲ್ಲೂ ವೃತ್ತಿಯಲ್ಲೂ ನೀನು ಅಸುಖಿ ಎಂದು ಹೇಳದೆ ವಿಧಿಯಿಲ್ಲ." ಮಾತು ಹೊರಬಿದ್ದರೂ ಜಾನಕೀರಾಂ ತಲೆಯೆತ್ತದೆ ಪುನಃ ನೋಡುವುದರಲ್ಲೇ ತಲ್ಲೀನನಾಗಿದ್ದ. ಅಘೋರನ ಅಥವಾ ಇನ್ನುಳಿದವರ ಪ್ರತಿಕ್ರಿಯೆಯೇನೆಂಬುದನ್ನು ಅರಿಯುವ ಅಭಿಲಾಷೆಯೂ ಅವನಿಗೆ ಉಂಟಾಗಲಿಲ್ಲ. ಬಹಳ ಹೊತ್ತು ತಿರುತಿರುಗಿಸಿ ನೋಡಿ ಅಂದ "ನೀನು ಅದೃಷ್ಟಹೀನ. ನಿನಗೆ ಪ್ರಿಯವಾದ ವಸ್ತುವನ್ನು ಕಳೆದು ಕೊಳ್ಳುವೆ."

"ಆಗಲೇ ಎಲ್ಲವೂ ಅಸ್ಪಷ್ಟ ಎಂದೆಯಲ್ಲಾ ?"

"ನಿಜ, ಆದರೂ ನನಗೆ ತೋಚಿದಷ್ಟು ಹೇಳಿದ್ದೇನೆ."

"ಇನ್ನೂ ಕೆಲವು ದಿನ ಹೋದರೆ ಅವು ಸ್ಪಷ್ಟವಾದಾವೇ ?" ಮದನ್ ಕೇಳಿದ.

"ಓಹೋ !"

"ಏನೇನು ಆಗಲಿದೆಯೋ ಅದು ಆಗಿಯೇ ತೀರುತ್ತದೆ. ಮುಂದಾಗಿ ತಿಳಿಯುವುದರಿಂದ ಆಗುವುದೇನು ?" ಎಂದ ಸುಧೀರ್.

ನಗು ಮುಖದಿಂದ ಗೆಳೆಯರ ಮಾತುಕತೆಗಳನ್ನು ಕೇಳುತ್ತಾ ಕುಳಿತಿದ್ದ ಅಘೋರ ನಸುನಕ್ಕು "ಅಂಕಲ್ ಜರ್ಾ! ನಿನ್ನ ಭವಿಷ್ಯವಾಣಿಯಲ್ಲಿನ 'ಅಸುಖಿ' ಎಂಬ ಪದವನ್ನು ತೆಗೆದುಹಾಕಿಬಿಡು."

ಎಲ್ಲರ ದಿಟ್ಟಿಯೂ ಅಘೋರನ ಕಡೆ ಹೊರಳಿತು.

ಅಧ್ಯಾಯ

೩

ಮಟಮಟ ಮಧ್ಯಾಹ್ನ. ಉರಿಯುವ ಸುಡುಬಿಸಿಲು ನೆತ್ತಿಯಮೇಲೆ.

ಇಂದು ಎರಡು ಗಂಟೆಗೆ ಮೆಡಿಕಲ್ ಕಾಲೇಜಿನಲ್ಲಿ ಇಂಟರ್‌ವ್ಯೂ ಇತ್ತು. ಇದ್ದುದರಲ್ಲಿ ಶುಭ್ರವಾದ ಉಡುಪು ತೊಟ್ಟು ಅಂದವಾಗಿ ತಲೆಬಾಚಿ ಅಘೋರ ಮೆಡಿಕಲ್ ಕಾಲೇಜಿನ ಹಾದಿ ತುಳಿದಿದ್ದ. ಬಿಸಿಲು ಬೇಗೆಯ ಒತ್ತಡದಿಂದ ಬೆವರಿನ ಹನಿಗಳು ತುಂತುರು ತುಂತುರಾಗಿ ಮುಖದ ಮೇಲೆ ಮೂಡ ತೊಡಗಿದುವು. ಕರವಸ್ತ್ರದಿಂದ ಒರೆಸಿಕೊಳ್ಳುತ್ತಾ ಮುಂದುವರಿದ. ಕಾಲೇಜಿನ ಆವರಣವನ್ನು ಸೇರುವ ಮೊದಲು ದೃಷ್ಟಿಗೆ ಬಿದ್ದುದು ಕುಷ್ಠರೋಗಿಯಾದ ಭಿಕ್ಷುಕನ ಘೋರ ಚಿತ್ರ. ಅವನನ್ನು ನೋಡಿ ಅಘೋರ ಜುಗುಪ್ಸೆಯಿಂದ ಗೊಣಗಿಕೊಂಡ...ಈ ಹಾಳು ಭಿಕ್ಷುಕರು ಎಲ್ಲೆಲ್ಲೂ ಇರುತ್ತಾರೆ. ಹಾಯಾಗಿ ಕೆರೆ ಭಾವಿ ಹಾರಿಕೊಳ್ಳಬಾರದೆ? ತಿರಿದು ತಿಂಬುವ ಭಂಡ ಜನ್ಮ. ಬದುಕು ಸಾರ್ಥಕವಾಗದ ಮೇಲೆ ಬದುಕುವುದಾದರೂ ಏಕೆ?...

ಕಾಲೇಜಿನ ಆವರಣದಲ್ಲಿ ಆಗಲೇ ಬಹುಮಂದಿ ಹುಡುಗರು ನೆರೆದಿದ್ದರು. ಅವರೊಳಗೆ ಜಾನಕೀರಾಮನ ನೀಳವಾದ ಶರೀರ ತಕ್ಷಣ ಕಣ್ಣಿಗೆ ಬಿತ್ತು. ಎಲ್ಲರಿಗಿಂತ ಗೇಣು ಎತ್ತರವಾಗಿ ಯೋಧನಂತೆ ನಿಂತಿದ್ದ ಅವನನ್ನು ಅಲ್ಲಿಂದಲೇ ಸಣ್ಣಗೆ ಸಿಳ್ಳು ಹಾಕಿ ಅಘೋರ ಕೂಗಿದ "ಅಂಕಲ್ ಜಾರ್ಜ್!" ದನಿ ಕಿವಿಗೆ ಬೀಳುತ್ತಲೂ ಜಾನಕೀರಾಮನ ದೃಷ್ಟಿ ಇತ್ತ ಹೊರಳಿತು. ಮುಗುಳು ನಗುತ್ತಾ ಅವನು ಗುಂಪಿನಿಂದ ಹೊರಬಂದ. "ನಿನಗೆ ಶುಭವಾಗಲಿ!" ಜಾನಕೀರಾಮನ ದನಿ ಹೊರಬೀಳುವುದರೊಳಗಾಗಿ ಅಘೋರ "ನಿನಗೂ ಒಳ್ಳೆಯದಾಗಲಿ!" ಎಂದ. ಇಬ್ಬರ ಮುಖಮಂಡಲಗಳೂ ಹೂವಿನಂತರಳಿದುವು.

ಇಬ್ಬರ ಕೈಗಳೂ ಕೂಡಿಕೊಂಡವು. ಅಘೋರ ಕೇಳಿದ "ಮದನ್ ಸುಧೀರ್ ಬಂದಿದ್ದಾರೇನು?"

"ಎಲ್ಲೂ ಕಾಣಿಸಲಿಲ್ಲ."

"ಅವರಿಗೂ ಇಂದೇ ಇಂಟರ್‌ವ್ಯೂ ಇದೆ."

"ಹಾಗಿದ್ದರೆ ಒಳಗಡೆ ಸೇರಿಕೊಂಡಿರಬಹುದು."

"ನಿನ್ನ ಇಂಟರ್‌ವ್ಯೂ ಯಾವಾಗ ?"

"ಮೂರು ನಲವತ್ತೈದಕ್ಕೆ."

"ನನ್ನದು ಎರಡು ಮೂವತ್ತಕ್ಕಿದೆ."

ಇಬ್ಬರೂ ಒಳಗಡೆ ಬಂದರು. ಇಂಟರ್‌ವ್ಯೂ ನಡೆಯುತ್ತಿದ್ದ ದೊಡ್ಡ ಕೊಠಡಿಯ ಪಕ್ಕದಲ್ಲಿದ್ದ ಕಾರಿಡಾರಿನಲ್ಲಿ ಸಾಲಾಗಿ ಹುಡುಗರೂ ಹುಡುಗಿಯರೂ ಕುಳಿತುಕೊಂಡಿದ್ದರು. ಅತ್ತ ದೃಷ್ಟಿಯು ನಿರಾಯಾಸವಾಗಿ ಹೊರಳಿತು. ಎಲ್ಲಿಯೂ ಮದನ್ ಸುಧೀರ್ ಕಣ್ಣಿಗೆ ಬೀಳಲಿಲ್ಲ. ಅದೇತಾನೆ ಇಂಟರ್‌ವ್ಯೂ ಮುಗಿಸಿದ ಹುಡುಗಿಯೊಬ್ಬಳು ಹೊರ ಬಂದಳು. ಅವಳ ಪರಿಚಿತರು ಅವಳನ್ನು ಸುತ್ತುವರಿದು ನಿಂತು ತವಕದಿಂದ ಕೇಳಿದರು "ಏನೇನು ಕೇಳಿದರು ?"

ಅನೇಕ ಮಂದಿ ಅವಳ ಉತ್ತರವನ್ನು ಕೇಳಲು ಕಾದುನಿಂತರು. ಅವಳು ತುಸು ಏರಿದ ದನಿಯಲ್ಲಿ ಹೇಳತೊಡಗಿದಳು. "ಕೇಳುವುದೇನು ? ಇದೆಲ್ಲಾ ಶುದ್ಧ ಕಪಟ ನಾಟಕ ! ನಾವು ಮಾಡುತ್ತೇವೆ ಎಂಬುದನ್ನು ತೋರಿಸಿ ಕೊಳ್ಳಲು ಅವಶ್ಯವಾಗಿ ಬೇಕಾದ ಬೂಟಾಟಿಕೆಯ ರೂಪಕ ! ಶ್ಯ ! ಯಾರ ಎದೆಯನ್ನು ಸೀಳಿದರೂ ಹೃದಯವಿಲ್ಲ !......" ಮುಂದೆ ಮಾತಾಡಗೊಡಿ ಸದೆ ಇನ್ನೊಬ್ಬ ಹುಡುಗಿ ಕೇಳಿದಳು "ಏನು ಕೇಳಿದರು ? ಹೇಳು ಮೊದಲು."

ಅವಳ ಉತ್ತರಕ್ಕಾಗಿ ಕಾದು ನಿಂತ ಇತರರೊಂದಿಗೆ ಅಘೋರನ ಕಿವಿಗಳೂ ನಿಮಿರಿದುವು. ಅವಳು ಸಿಟ್ಟಿನಿಂದ ಹೇಳತೊಡಗಿದಳು. "ನೀನು ಯಾವ ಉದ್ದೇಶದಿಂದ ಡಾಕ್ಟರಾಗಲು ಬಯಸಿದ್ದೀಯೋ ?"

"ಜನಸೇವೆ."

"ಹೆಣ್ಣಿಗೆ ಈ ವೃತ್ತಿ ಕಷ್ಟವೆಂಬುದು ನಿನಗೆ ಗೊತ್ತೊ ?"

"ಗೊತ್ತು."

"ನೀನು ಡಾಕ್ಟರಾದರೆ ನಿನ್ನ ಸಂಸಾರವನ್ನು ಯಾರು ನೋಡಿಕೊಳ್ಳುತ್ತಾರೆ ?"

"ನನಗೆ ಮದುವೆಯಾಗುವ ಬಯಕೆಯಿಲ್ಲ."

"ಒಂದು ವೇಳೆ ಹಳ್ಳಿಗಾಡಿಗೆ ನಿನ್ನನ್ನು ವರ್ಗ ಮಾಡಿದರೆ ಹೇಗೆ ನಿಭಾ

ಯಿಸುತ್ತಿ ? ಅನೇಕ ಸಂದರ್ಭಗಳಲ್ಲಿ ಹಳ್ಳಿಗಳಲ್ಲಿ ವಾಹನ ಸೌಕರ್ಯವಿಲ್ಲದೆ ತೊಂದರೆಗೆ ಸಿಕ್ಕಬಹುದು. ವಸತಿ ಸೌಕರ್ಯಗಳೂ ಇಲ್ಲದೆ ಹೋಗಬಹುದು. ಅಂತಹ ಕಡೆ ನೀನು ಕೆಲಸ ಮಾಡುವುದು ಹೇಗೆ ?"

"ನಾನು ದೂರದ ಹಾದಿಯನ್ನು ನಡೆಯ ಬಲ್ಲೆ."

"ಹೆಂಗಸರಿಗೆ ಏಕಾಂತವಾಸ ಕಷ್ಟ."

"ಯಾರಾದರೊಬ್ಬ ಹೆಂಗಸರನ್ನು ಜೊತೆಗೆ ಇಟ್ಟುಕೊಳ್ಳುವೆ."

"ನಿನ್ನ ಯಜಮಾನರು ಸಂಪಾದಿಸಿ ತಂದುದರಲ್ಲಿ ಸುಖವಾಗಿ ಸಂಸಾರ ಸಾಗಿಸಲಾರೆಯಾ ? ಈಗ ನಿನ್ನ ತಾಯಿ ಹೊರಗಡೆ ದುಡಿಯುತಿದ್ದಾರೆಯೆ ?"

"ಆಗಲೇ ಹೇಳಿದ್ದೇನೆ. ನಾನು ಜನ ಸೇವೆಯ ದೃಷ್ಟಿಯಿಂದ ಡಾಕ್ಟರಾಗ ಬಯಸುವೆ. ನನ್ನ ತಾಯಿ ಹೊರಗಡೆ ದುಡಿಯುವಷ್ಟು ವಿದ್ಯಾವತಿಯಲ್ಲ."

"ಅವರ ಬಗೆಗೆ ನಿನಗೇನೆನಿಸುತ್ತೆ ? ಹೆಣ್ಣು ಹೊರಗಡೆ ದುಡಿಯುವುದು ಕ್ಷೇಮವೊ ಅಥವಾ ಭೂಷಣವಾಗಿ ಮನೆಯಲ್ಲಿರುವುದು ಕ್ಷೇಮವೋ ?"

"ನನಗೆ ಎರಡರಲ್ಲೂ ಸಮ ಭಾವನೆಯಿದೆ."

"ಹ್ಞು. ಹೋಗಮ್ಮ."

ಅಲ್ಲಿ ನಡೆದ ಸಂಭಾಷಣೆಯನ್ನು ಹೊರಗೆಡಹಿದ ತರುಣಿ ಸಿಟ್ಟಿನಿಂದ ಹೇಳಿದಳು "ಯಾರಿಗೂ ಪ್ರೋತ್ಸಾಹ ನೀಡುವ ಮನಸ್ಸಿಲ್ಲ. ಅಬ್ಬಾ ! ನಾವು ಹೆದರಿ ಹಿಮ್ಮೆಟ್ಟಿದರೆ ಅವರ ಸಂಬಂಧಕರಿಗೆ ಒಂದು ಸೀಟು ದೊರೆಯುತ್ತದೆಂಬ ದುರಾಸೆ ! ಈ ಇಪ್ಪತ್ತನೆಯ ಶತಮಾನದಲ್ಲಿಯೂ ನಮ್ಮಲ್ಲಿ ಹೆಣ್ಣಿಗೆ ದೊರೆಯುವ ಪ್ರೋತ್ಸಾಹ ನೋಡಿರಿ !"

ಹಿಂದಿನಿಂದ ಇನ್ನೊಬ್ಬ ಹುಡುಗಿ ಹೊರ ಬಂದಳು. ಮೊದಲಿನವಳನ್ನು ಸುತ್ತುವರಿದಿದ್ದ ಹುಡುಗಿಯರ ದಿಟ್ಟಿ ಅತ್ತ ಹೊರಳಿತು. ಇದುವರೆವಿಗೆ ಕಥೆ ಹೇಳುತ್ತಿದ್ದ ಹುಡುಗಿಯ ಗಮನವೂ ಅತ್ತ. ಹೊರಳಿತು. ತಕ್ಷಣ ಅಣಕದ ದನಿಯಲ್ಲಿ ಕೇಳಿದಳು "ಹೇಗಿತ್ತಮ್ಮ, ನಾಟಕ ?"

"ಯಥಾ ರೀತಿ," ದನಿಯಲ್ಲಿ ಕೋಪ ದುಗಡಗಳ ಮಿಶ್ರಣವಿತ್ತು.

"ಇರಲಿ ಹೇಳು. ಅದನ್ನೂ ಸ್ವಲ್ಪ ಕೇಳಿಬಿಡೋಣ."

ಹುಡುಗಿ ಕೆಮ್ಮಿ ದನಿಯನ್ನು ಸರಿಪಡಿಸಿಕೊಂಡಳು.

"ಡಾಕ್ಟರಾಗುವವರು ಗಟ್ಟಿಮುಟ್ಟಾಗಿರಬೇಕೆಂಬುದು ನಿನಗೆ ಗೊತ್ತೊ?"

"ಗೊತ್ತು."

"ಮತ್ತೆ ನಿನ್ನಂಥಹವಳು ಡಾಕ್ಟರಾಗಿ ಕೆಲಸ ಮಾಡುವುದು ಹೇಗೆ ?"

"ಮುಂದೆ ನನ್ನ ಮೈಕಟ್ಟನ್ನು ಉತ್ತಮಪಡಿಸುಕೊಳ್ಳುವೆ."

"ಅದುಹೇಗೆ ಸಾಧ್ಯ? ಕುಳ್ಳು ದೇಹ ಎಂದಾದರೂ ಬೆಳೆಯುವುದುಂಟೇ?"

"ಬೆಳೆಯುವ ವಯಸ್ಸು ಇನ್ನೂ ಮೀರಲಿಲ್ಲವೆಂಬುದನ್ನು ನಾನೇ ಹೇಳಿಕೊಳ್ಳಬೇಕೆ ?"

"ಆದರೂ ದೇಹ ಧಾರ್ಢ್ಯತೆ ಸಾಲದು."

"ನಾನು ಕ್ರಮೇಣ ಉತ್ತಮಪಡಿಸಿಕೊಳ್ಳುವೆ."

"ನೀನು ಬಿ.ಎ.ಗೆ ಏಕೆ ಹೋಗಬಾರದು ?"

"ಡಾಕ್ಟರಾಗಿ ಜನಸೇವೆ ಮಾಡುವುದು ನನ್ನ ಗುರಿ."

"ಡಾಕ್ಟರಾಗಿ ಮಾತ್ರವಲ್ಲ. ನಾನಾ ಮುಖಗಳಲ್ಲಿ ಸೇವೆ ಮಾಡಬಹುದು."

"ಆಗಲೇ ಹೇಳಿದ್ದೇನೆ, ನನ್ನ ಬಯಕೆ ಡಾಕ್ಟರಾಗುವುದು."

"ಹ್ಞೂ. ಹೋಗಮ್ಮ."

ಇನ್ನೊಬ್ಬ ವಿದ್ಯಾರ್ಥಿ ಇಂಟರ್‌ವ್ಯೂ ಮುಗಿಸಿಕೊಂಡು ಹೊರಬಂದ ಅವನಿಂದ ಏನೇನು ಕೇಳಿದರೆಂಬುದನ್ನು ತಿಳಿದುಕೊಳ್ಳಬೇಕೆಂಬ ಉದ್ದೇಶವಿದ್ದರೂ ಅಘೋರನಿಗೆ ಕೇಳಲಾಗಲಿಲ್ಲ. ತನ್ನ ಸರದಿ ಬಂದುದರಿಂದ ಒಳಹೋದ. ಸಾಲಾಗಿ ಡಾಕ್ಟರುಗಳು ಕುಳಿತಿದ್ದರು. ಅವರಲ್ಲಿ ಡಾ|| ಘನಶ್ಯಾಮರೂ ಒಬ್ಬರು.

"ನಿನ್ನ ತಂದೆಯ ಹೆಸರೇನು ?"

"ವಿಮಲ್ ದಾಸ್."

"ಅವರು ಯಾವ ಉದ್ಯೋಗ ಮಾಡುತ್ತಾರೆ ?"

"ವ್ಯಾಪಾರ."

"ನೀನೇಕೆ ಅದನ್ನು ಕೈಕೊಳ್ಳಬಾರದು ?"

"ವ್ಯಾಪಾರದಲ್ಲಿ ನನಗೆ ಆಸಕ್ತಿಯಿಲ್ಲ."

"ನೀನು ತೊಟ್ಟಿರುವ ಶರಟು ಯಾತರದ್ದು ?"

"ಟೆರಿಲೀ"

"ಅದನ್ನು ತೊಡುವ ಉದ್ದೇಶವೇನು ?"

"ಅದು ಬಹುಕಾಲ ಬಾಳಿಕೆ ಬರುತ್ತೆ."

"ಹ್ಞೂ ಹೋಗಪ್ಪ."

ಅಘೋರ ಒಳಗಿಂದೊಳಗೇ ಮುಸು ಮುಸು ನಗುತ್ತಾ ಹೊರಬಿದ್ದ. ತನಗೆ ಸೀಟು ಸಿಕ್ಕುವ ನಂಬಿಕೆಯೂ ಉಳಿಯಲಿಲ್ಲ. ಆದರೆ ಮೊದಲ ತರಗತಿಯಲ್ಲಿ ತೇರ್ಗಡೆಯಾದ ವಿಷಯ ಸ್ವಾಭಿಮಾನವನ್ನು ಕೆರಳಿಸಿ ನಿಲ್ಲಿಸುತ್ತಿತ್ತು. "ಕೊಡದೆ ಇರುವುದಕ್ಕೆ ಅದೇನು ಅವರ ಅಪ್ಪನ ಮನೆ ಗಂಟಲ್ಲ !" ಎಂದುಕೊಂಡು ಗುಂಪನ್ನು ದಾಟಿ ಈಚೆಗೆ ಬಂದ. ಜಾನಕೀರಾಮನ ಸರದಿ ಆಗುವವರೆಗೂ ಕಾಯುವುದೆಂದು ನಿರ್ಧರಿಸಿದ್ದ. ಗುಂಪಿನಲ್ಲಿ ಮದನ್ ಮತ್ತು ಸುಧೀರರನ್ನು ನೋಡಿ ಒಂದೇ ಬಾರಿಗೆ ಅವರೆಡೆಗೆ ಜಿಗಿದ ಅಘೋರ.

"ಘೋರ ! ನಿನ್ನದು ಮುಗಿಯಿತೇನಪ್ಪಾ ?" ಮದನ್ ಕೇಳಿದ.

"ಇದೇ ತಾನೇ ಮುಗಿಸಿ ಬಂದೆ." ಎಂದವನೇ ಅೂಘೇರ್ ಪುನಃ ಕೇಳಿದ "ನಿನ್ನದು ಯಾವಾಗ ಸುಧೀರ್ ?"

"ನನ್ನದು ಆಗಲೇ ಆಯಿತು. ಎಲ್ಲರದ್ದೂ ನೋಡೋಣ ಎಂದುಕೊಂಡು ಇಲ್ಲೇ ಇದ್ದೇನೆ."

"ನಿನ್ನನ್ನು ಏನು ಕೇಳಿದರು ಸುಧೀರ್ ?

"ಕೆಲವರಿಗೆ ಸರ್ವೇ ಸಾಮಾನ್ಯವಾದ ಪ್ರಶ್ನೆಗಳನ್ನು ಕೇಳಿದರಂತೆ. ನನಗೇನೋ ಸರಿಯಾಗಿಯೇ ಕೇಳಿದರು."

"ಏನೆಂದರು ?"

"ನೀನು ಡಾಕ್ಟರಾಗುವ ಉದ್ದೇಶವೇನು ?" ಎಂದು ಡಾ|| ಘನಶ್ಯಾಮ್ ಮೊದಲು ಕೇಳಿದರು.

"ಜನಸೇವೆ," ನಾನೆಂದೆ.

"ನಿಮ್ಮ ವಂಶಜರಲ್ಲಿ ಯಾರಾದರೂ ಡಾಕ್ಟರಿದ್ದಾರೆಯೇ ? ನಿನಗೆ ಡಾಕ್ಟರಾಗುವ ಬಯಕೆ ಹೇಗೆ ಬಂತು ?"

"ನಮ್ಮ ವಂಶೀಕರಲ್ಲಿ ಡಾಕ್ಟರಾರೂ ಇಲ್ಲದಿರುವುದರಿಂದಲೇ ನನಗೆ ಡಾಕ್ಟರಾಗುವ ಬಯಕೆ."

"ಆಲ್ ಇಂಡಿಯಾ ಮೆಡಿಕಲ್ ಕೌನ್ಸಿಲ್ಲಿನ ಪ್ರೆಸಿಡೆಂಟರಾರು ?"

"ಸುರೇಂದ್ರನಾಥ ಬ್ಯಾನರ್ಜಿ."

"ಇಂಡಿಯಾದಲ್ಲಿ ಅತ್ಯುತ್ತಮ ಸ್ಯಾನಿಟೋರಿಯಂ ಯಾವುದು ?"

"ನನಗೆ ತಿಳಿಯದು."

ಅಷ್ಟರಲ್ಲಿ ಅವರ ಕಡೆಗೆ ಬರುತ್ತಿದ್ದ ವಿದ್ಯಾರ್ಥಿಯೊಬ್ಬನನ್ನು ಪರಿಚಯ ಮಾಡಿಸಲು ಅವನನ್ನು ಹತ್ತಿರ ಕರೆದು ಸುಧೀರ್ "ಅಘೋರ್, ಇವನು ನಮ್ಮ ಬೀದಿಯಲ್ಲೇ ಇದ್ದಾನೆ. ಹೆಸರು ರತನ್ ಮಿಶ್ರ, ತುಂಬ ಬ್ರಿಲಿಯಂಟ್, ಉದ್ದಕ್ಕೂ ಮೊದಲನೆಯ ತರಗತಿ ಇವನಿಗೆ ಕಾದಿಟ್ಟದ್ದು." ಎಂದ ಸುಧೀರ್. ಅದೇ ನೇರಕ್ಕೆ ಅಘೋರನನ್ನೂ ಪರಿಚಯ ಮಾಡಿಕೊಟ್ಟ. ಇಬ್ಬರೂ ಪರಸ್ಪರ ಸಂತಸದಿಂದ ಮುಗುಳ್ನಗು ಬೀರಿ ಕೈಕುಲುಕಿದರು. ಅಘೋರ ಕೇಳಿದ "ನಿಮ್ಮ ಇಂಟರ್‌ವ್ಯೂ ಮುಗಿಯಿತೇ ?"

"ಹೌದು."

"ಏನು ಕೇಳಿದರು ?"

"ನಿಮ್ಮ ಅಚ್ಚುಮೆಚ್ಚಿನ ಚಲನಚಿತ್ರ ತಾರೆ ಯಾರು ?"

"ಆ ಪ್ರಶ್ನೆ ಕೇಳಿ ನನಗೆ ಏನೋ ಒಂದು ಬಗೆಯೆನಿಸಿತು. ಒಂದು ಕ್ಷಣ ಸುಮ್ಮನಿದ್ದು ನಾನೆಂದೆ ನಾನು ಯಾರನ್ನೂ ಅಷ್ಟಾಗಿ ಮೆಚ್ಚಿಕೊಂಡಿಲ್ಲ."

"ನಿನ್ನ ಕಾಲರ್ ಓರೆಯಾಗಿದೆಯಲ್ಲಾ ಏಕೆ ?"

"........."

"ನೀನು ಬಿಗಿಯಾದ ಉಡುಪು ಧರಿಸುವುದಿಲ್ಲವೇ ?"

"ಇಲ್ಲ."

"ಅಘೋರ್ ! ನೋಡಪ್ಪಾ ಇಷ್ಟೇ ನನ್ನ ಇಂಟರ್‌ವ್ಯೂ !" ರತನ್ ಮಿಶ್ರ ನಗುತ್ತಾ ನುಡಿದ.

ಅಘೋರ ಸುಧೀರರು ಕಣ್ಣರಳಿಸಿ ಕೇಳಿದರು.

"ನಿಜವಾಗಿಯೂ ಇಂಟರ್‌ವ್ಯೂ ಎಂಬುದು ನಾಟಕವೆಂಬುದರಲ್ಲಿ ಅನುಮಾನವಿಲ್ಲ. ನಮಗೆ ಹೆಚ್ಚಿನ ಅಂಕವಿದ್ದರೂ ಯಾವುದಾದರೊಂದು ಸಣ್ಣ

ಕಾರಣ ತೋರಿ ತಳ್ಳಿಹಾಕಿ ತಮ್ಮವರಿಗೆ ಹೆಚ್ಚಿನ ಅಂಕಗಳನ್ನು ಕೊಟ್ಟು ಸೀಟು ಕೊಡಲು ಇದೊಂದು ಅವಕಾಶ ಕಲ್ಪಿಸುಹ ಕಾರಾಗಾರ ! ನಮ್ಮವರ ಗಮನ ಜಾತೀಯತೆಯ ಎಲ್ಲೆಯನ್ನು ಇನ್ನೊಂದು ಜನ್ಮಕ್ಕೂ ದಾಟಲಾರದು. ಎಲ್ಲಿ ನೋಡಿದರೂ ಸ್ವಾರ್ಥ !"

"ಛಿಃ ! ಅಸಹ್ಯ ! ಅವಮಾನ !"

"ಆದರೂ, ಹಾಗೆಂದು ಈ ನಾಟಕವಿಲ್ಲದೆಯೂ ಆರಿಸುವುದು ಸಾಧ್ಯವಿಲ್ಲ. ಹೆಚ್ಚಿನ ಅಂಕಗಳಿಸಿದ ವಿದ್ಯಾರ್ಥಿಗಳಲ್ಲಿ ಕುಂಟರು ಕುರುಡರು ಹೆಳವರು ಇದ್ದರೂ ಇರಬಹುದು. ಆದ್ದರಿಂದ ಸ್ವತಃ ಕಣ್ಣಿನಿಂದ ನೋಡಿ ಅಭ್ಯರ್ಥಿಗಳನ್ನು ಆರಿಸುವುದು ಸೂಕ್ತವಲ್ಲವೇ !"

"ಅದು ಸರಿಯಾದರೂ, ಇಂಟರ್‌ವ್ಯೂನಲ್ಲಿ ಅಂಕಗಳನ್ನು ನೀಡಲು ಇವರಿಗೆ ಅವಕಾಶ ನೀಡಿದುದು ತಪ್ಪು ! ಸ್ವಾರ್ಥವು ಹುಚ್ಚೆದ್ದು ನರ್ತಿಸುವ ಈ ಕಾಲದಲ್ಲಿ ಹೀಗೊಂದು ಅವಕಾಶ ನೀಡುವುದೇ ? ಯಾವುದೇ ಕ್ಷೇತ್ರ ತೆಗೆದುಕೊ. ಅಲ್ಲಿ ನಡೆಯುತ್ತಿರುವುದು ಕೂಪಕೂರ್ಮ ನ್ಯಾಯ ! ವಿಶಾಲ ಮನೋಭಾವನೆ ಬೆಳೆಯದ ಹೊರತು ಈ ದೇಶ ಮುಂದುವರಿಯುವುದು ಸಾಧ್ಯವೇಯಿಲ್ಲ ! ದೇಶಕ್ಕೆ ಭೂಷಣವಾದವರೇ ಸ್ವಾರ್ಥದ ಹಾದಿ ಹಿಡಿದರೆ ಹೇಗೆ ? ನಾವು ದೊಡ್ಡವರನ್ನು ಶಂಕಿಸುವುದು ಸರಿಯಲ್ಲವಾದರೂ ತಿಳಿದೂ ತಿಳಿದೂ ಇವರ ಸ್ವಾರ್ಥ ಸಾಧನೆಗೆ ಸರಿಯಾದ ದಾರಿಯನ್ನು ಸರಕಾರ ಮಾಡಿ ಕೊಟ್ಟಿರುವುದನ್ನು ನೆನೆಸಿಕೊಂಡರೆ ಮೈಯಲ್ಲಿ ಬೆಂಕಿಯ ಝರಿ ಹರಿದಾಡುತ್ತೆ. ಅಷ್ಟೇ ಅಲ್ಲ. ಸೇಡಿನ ಮನೋಭಾವ ಬೆಳೆಯುತ್ತೆ !" ಅಘೋರನ ದನಿಯಲ್ಲಿ ಆವೇಶವಿತ್ತು. ಕಣ್ಣುಗಳು ಮಿಂಚಿನಂತೆ ಫಳಫಳನೆ ಹೊಳೆದುವು.

"ಜಗತ್ತೇ ಒಂದು ನಾಟಕ. ಅಂದಮೇಲೆ ಪ್ರತಿಯೊಂದು ಸಣ್ಣಪುಟ್ಟ ಘಟನೆಗಳೂ ಈ ಬೃಹತ್ ನಾಟಕದ ಅವಿಭಾಜ್ಯ ಅಂಗವಲ್ಲವೇ ?"

"ಅದೇನೇ ಇರಲಿ, ಇದು ಅನೀತಿಯ ಕಾರಾಗಾರ !"

"ನಾವು ಪೂಜಿಸುವ ಭಗವಂತನಿಗೆ ಕಪಟ ನಾಟಕ ಸೂತ್ರಧಾರಿ ಎನ್ನುವುದಿಲ್ಲವೇ ? ಅಂದಮೇಲೆ ಇನ್ನೇನು ? ಇದೂ ಒಂದು ಮನರಂಜನೆ ಅಂತ ಇಟ್ಕೊಕೊ."

"ಇದು ಕೆಲವರಿಗೆ ಮನರಂಜನೆಯಾಗಬಹುದಾದರೂ ಬಹು ಮಂದಿಗೆ ವಜ್ರಾಘಾತ!"

"ನಾವು ಯಾವುದನ್ನು ಸರಿಹೊಂದಿಸಲಾರೆವೋ ಅದನ್ನು ಅನು ಭೋಗಿಸಲೇಬೇಕು, ಅಘೋರ್."

"ಹಾಗೆಂದರೆ ನ್ಯಾಯ ದೊರಕುವುದೇಯಿಲ್ಲ."

"ಭಗವಂತನೇ ರಕ್ಷೆ!"

ಹುಡುಗರು ಹೊರಬಿದ್ದರು. ಮೆಡಿಕಲ್ ಕಾಲೇಜು ಬೀಳ್ಕೊಟ್ಟಿತು.

ಅಘೋರ್ ಸುಧೀರ್ ಮದನ್ ರತನ್ ಜಾನಕೀರಾಂರವರುಗಳು ಸಾಲಾಗಿ ಹೊರಟರು. ಹಾದಿಯುದ್ದಕ್ಕೂ ಕುಲು ಕುಲು ನಗುವಿನೊಡನೆ ಇಂಟರ್‌ವ್ಯೂ ನಾಟಕದ ಪುನರ್ ಪರಿಶೀಲನೆ ನಡೆಯುತಿದ್ದಂತೆ ಕಿವಿಗಿಂಪಾಗಿ ದೂರದ ಬಾನುಲಿಯ ಇನಿಗಾನವು ಕಿವಿಗೆ ಬಿತ್ತು.

ಏಕಂ ಹನ್ಯಾನ್ನವಾ ಹನ್ಯಾ । ದಿಷುರ್ಮುಕ್ತೋ ಧನುಷ್ಮತಾ ।
ಬುದ್ಧಿರ್ಬುದ್ಧಿ ಮತೋತ್ಸೃಷ್ಟಾ ಹನ್ಯದ್ರಾಷ್ಟ್ರಂಸರಾಜಕಂ ॥

ಒಮ್ಮೆಲೆ ತನುಮನಗಳು ವೀಣೆಯಂತೆ ಮಿಡಿದುವು. ನಿಜ, ನಿಜ. ಬಿಲ್ಲುಗಾರನಿಂದ ಬಿಡಲ್ಪಟ್ಟ ಅಂಬು ಒಬ್ಬನನ್ನು ಕೊಲ್ಲುವುದು ಅಥವಾ ತಪ್ಪಿ ಹೋಗುವುದು. ಬುದ್ಧಿವಂತನಿಂದ ಪ್ರಯೋಗಿಸಲ್ಪಟ್ಟ ಬುದ್ಧಿಯು ಅರಸ ನನ್ನೂ ರಾಜ್ಯವನ್ನೂ ಸಹ ನಾಶಪಡಿಸುವುದು.

ಹಾ! ಇಂದಿಗೂ ಎಂದೆಂದಿಗೂ ವೇದವಾಕ್ಯಗಳು ಪುಸ್ತಕಗಳಲ್ಲೇ ಉಳಿಯಲಿವೆ.

ಅಧ್ಯಾಯ

೪

ಅದೃಷ್ಟವಶಾತ್ ಅಘೋರನ ಗೆಳೆಯರೆಲ್ಲರೂ ಮೆಡಿಕಲ್ ಕಾಲೇಜಿನಲ್ಲಿ ಸೀಟುಗಳಿಸಿದ್ದರು. ಸುಧೀರ್ ಮತ್ತು ರತನ್‌ಮಿಶ್ರರು ಮಂಗಳೂರು ಮತ್ತು ಮೈಸೂರುಗಳಲ್ಲಿ ಸೀಟು ಪಡೆದಿದ್ದುದರಿಂದ ಅಲ್ಲಿಗೆ ಹೋದರು. ಜಾನಕೀರಾಂ ಅಘೋರ ಮದನ್‌ಮಿತಾಳಿ ಬೆಂಗಳೂರಿನಲ್ಲಿ ಉಳಿದರು. ಮೊದಲ ವರ್ಷದ ಓದು ಹೆಚ್ಚಿನ ವ್ಯತ್ಯಾಸವಿಲ್ಲದೆ ಸಾಗಿತು. ಅಘೋರ ಏಕಮಾತ್ರ ಪುತ್ರನಾದುದರಿಂದ ಅವನನ್ನು ಮೆಡಿಕಲ್ ಕಾಲೇಜಿಗೆ ಸೇರಿಸುವುದು ಇಷ್ಟವಿರಲಿಲ್ಲವಾದರೂ ಅವನ ಹಠದ ಮುಂದೆ ಏನೂ ಸಾಗುವಂತಿಲ್ಲದೆ ವಿಮಲ್‌ದಾಸ್ ಸುಮ್ಮನಾಗಿದ್ದ.

ಅದೇ ಬೀದಿಯಲ್ಲಿದ್ದ ಡಾ|| ಘನಶ್ಯಾಮರ ವೈಭವಯುತ ಜೀವನ ಮನವನ್ನಾಕ್ರಮಿಸಿತ್ತೋ ಅಥವಾ ವಿಧಿವತ್ತಾಗಿ ಮನತೆತ್ತಿದ್ದನೋ ಎಂಬುದನ್ನು ಬಹುಶಃ ಅಘೋರನೇ ಊಹಿಸಲಾರನಾಗಿದ್ದಿರಲೂ ಸಾಕು. ಒಟ್ಟಿನಲ್ಲಿ ಅಘೋರ ತನ್ನ ದಿನಚರಿಯಲ್ಲಿ ಸುಖಿಯಾಗಿದ್ದ. ಒಮ್ಮೊಮ್ಮೆ ಜಾನಕೀರಾಮನ ಭವಿಷ್ಯವಾಣಿ ಕಿವಿಯಲ್ಲಿ ಮಾರ್ನುಡಿದು ಮನಸ್ಸಾಗರದ ಸುಪ್ತತರಂಗಗಳನ್ನು ಹೊಡೆದೆಬ್ಬಿಸುವುದು. ಮರುಕ್ಷಣದಲ್ಲಿ ಎಲ್ಲಿಯಾದರುಂಟೇ? ಎಂದು ತನಗೆ ತಾನೇ ನಕ್ಕು ಅದನ್ನು ನಿವಾರಿಸಿ ಬಿಡುತಿದ್ದ.

ಇನ್ನೇನು, ಇಷ್ಟರಲ್ಲೇ ಕ್ರಿಸ್‌ಮಸ್ ರಜೆ ಪ್ರಾರಂಭವಾಗಲಿತ್ತು. ಮೂವರೂ ಮದರಾಸಿನಲ್ಲಿ ಚಳಿಗಾಲದ ರಜೆಯನ್ನು ಕಳೆಯುವುದೆಂದು ತೀರ್ಮಾನಿಸಿಕೊಂಡರು. ಬೀಚಿನಲ್ಲಿ ಅಡ್ಡಾಡುವ ಸುಂದರ ಸನ್ನಿವೇಶಗಳನ್ನು ಈಗಿನಿಂದಲೇ ಕಲ್ಪಿಸಿಕೊಂಡು ಹುಡುಗರು ಬಾಯಿಯಲ್ಲಿ ನೀರೂರಿಸಿಕೊಂಡಿದ್ದರು. ಬಡವನಾದ ಜಾನಕೀರಾಮನ ಖರ್ಚನ್ನು ತಾನು ವಹಿಸಿಕೊಳ್ಳುವುದಾಗಿ ಅಘೋರ ಭರವಸೆ ನೀಡಿದ ಮೇಲೆ ಜಾನಕೀರಾಂ ಹೊರಡಲು ಒಪ್ಪಿಕೊಂಡಿದ್ದ.

ಅನಿರೀಕ್ಷಿತವಾಗಿ ಅವರ ಯೋಜನೆಯು ಬುಡ ಮೇಲಾಗುವ ಪ್ರಸಂಗವೊಂದು ಬಂದೊದಗಿತು. ಅಘೋರನ ಅಜ್ಜಿ ಅನಾರೋಗ್ಯದಿಂದಾಗಿ ಆಸ್ಪತ್ರೆ ಸೇರಿದ್ದಳು. ಮನೆಯಲ್ಲಿ ಮತ್ಯಾರೂ ಸಹಾಯಕರಿಲ್ಲವಾದುದರಿಂದ ಅಘೋರ ಹೊರಡಲಾಗಲಿಲ್ಲ. ಸಪ್ಪೆ ಮೋರೆಯಿಂದ ಗೆಳೆಯರು ಹೋಗುವ ಯೋಚನೆಯನ್ನು ಬಿಟ್ಟರು. ಮುಗಿಲನೆತ್ತರಕ್ಕೆ ಚಿಮ್ಮಿದ್ದ ಮನಸ್ಸು ಒಮ್ಮೆಲೆ ಕುಸಿದು ಬಿದ್ದು ಭೂಗತವಾಯಿತು.

ಅಂದು ಅಘೋರನೊಂದಿಗೆ ಆಸ್ಪತ್ರೆಯ ಅಭಿಮುಖವಾಗಿ, ಮದನ್ ಮಿತಾಲಿ ಜಾನಕೀರಾಂ ಹೆಜ್ಜೆ ಹಾಕಿದ್ದರು "ನಾವೊಂದು ನೆನೆದರೆ ದೈವವೊಂದು ನೆನೆದಿತ್ತು." ಎಂಬುದು ಸುಳ್ಳಲ್ಲ. ಎಂದು ಮಾತಿನ ನಡುವೆ ಸುಧೀರನೆಂದ.

"ನೀನು ದೇವರು ದಿಂಡರನ್ನು ನಂಬುವೆಯೇನು ?"

"ನಂಬದಿರುವುದು ಹೇಗೆ? ಈ ಬೃಹತ್ ಜಗತ್ತಿನ ಭವ್ಯ ನಿರ್ಮಾಣವೇ ಭಗವಂತನಿರುವುದಕ್ಕೆ ಸಾಕ್ಷಿ ಜರ್ಾ," ಅಘೋರನೆಂದ.

"ಆದರೂ ನಾಸ್ತಿಕ ವಾದಿಗಳಿದ್ದಾರೆ, ಅಘೋರ್."

ಮೂವರೂ ಅಜ್ಜಿಯ ಕೊಠಡಿಗೆ ಕಾಲಿಟ್ಟಾಗ ಕಳೆಗುಂದಿದ ನಯನ ದ್ವಯಗಳೆರಡೂ ಇತ್ತಲೇ ನಿರುಕಿಸುತ್ತಿದ್ದುವು. ಸೊರಗಿ ಸುಕ್ಕುಕಟ್ಟಿದ ಮುಖದ ಮೇಲೆ ಎಳೆನಗುವನ್ನು ತೇಲಿಸಿ ಅಜ್ಜಿಯೆಂದಳು "ಈ ಬಿಸಿಲು ಹೊತ್ತಿನಲ್ಲಿ ನಡೆದು ಬಂದಿರಾ ?"

"ನಮಗೆ ನಡೆಯದೇನು ಧಾಡಿ !"

"ಹೇಗಿದ್ದೀರಿ ಅಜ್ಜೀ ?" ಮದನ್ ಮಿತಾಳಿ ಕೇಳಿದ.

"ಇಂದು ಸ್ವಲ್ಪ ಉತ್ತಮ."

"ಇವನು ನನ್ನ ಗೆಳೆಯ. ಹೆಸರು ಅಂಕಲ್ ಜರ್ಾ," ಎಂದು ಜಾನಕೀರಾಮನ ಕಡೆಗೆ ಬೆರಳು ತೋರಿದ ಅಘೋರ.

"ನೀನು ಯಾವ ಕಡೆಯವನು ಮಗೂ ?" ಅಜ್ಜಿ ಕೇಳಿದಳು.

"ನಮ್ಮ ಊರು ಆನೇಕಲ್ಲು."

"ಕುಳಿತುಕೊಳ್ಳಿ ಮಕ್ಕಳಿರಾ" ಎಂದ ಅಜ್ಜಿ "ಅವರಿಬ್ಬರಿಗೂ ಕುಳಿತುಕೊಳ್ಳಲು ಕುರ್ಚಿ ಕೊಡಪ್ಪಾ ಅಘೋರ್" ಎಂದಳು.

ಇಬ್ಬರೂ ಕುಳಿತುಕೊಂಡರು. ಅಘೋರ್ ಮನೆಯಿಂದ ತಂದಿದ್ದ

ಕಾಫಿಯನ್ನು ಲೋಟಕ್ಕೆ ಬಗ್ಗಿಸಿ ಅಜ್ಜಿಯ ಮುಂದೆ ಹಿಡಿದ. ಬಾಯಿ ರುಚಿ ಕೆಟ್ಟಿದ್ದ ಅವಳು ಒಂದು ಗುಟುಕನ್ನು ಮಾತ್ರ ಕುಡಿದು- "ಅಯ್ಯಪ್ಪಾ, ತುಂಬ ಕಹಿ.''

ಅಘೋರ ನಕ್ಕು ನುಡಿದ- "ಅಮ್ಮ ನಿಮಗಾಗಿ ಸೊಗಸಾಗಿ ಮಾಡಿದ್ದಾರೆ."

"ನೀವೇ ಕುಡಿಯಿರಿ ಮಕ್ಕಳಿರಾ."

ಎಲ್ಲರ ಮುಖದಲ್ಲೂ ನಸು ನಗು ಮಿನುಗಿತು. ಅಜ್ಜಿ ಮುಖ ಒಗರು ಮಾಡಿಕೊಂಡಳು.

ಜಾನಕೀರಾಮನನ್ನು ನಿಜವಾಗಿಯೂ ಕ್ರಿಶ್ಚಿಯನ್ನನೇ ಎಂದುಕೊಂಡಿದ್ದ ಅಜ್ಜಿ ಕೇಳಿದಳು "ನೀನು ಬೆತ್ಲೆಹೆಮ್ ನೋಡಿದ್ದೀಯಾ ?"

ಮೂವರೂ ಕಿಲಕಿಲನೆ ನಗತೊಡಗಿದರು. ಅಘೋರ ವಿಷಯವನ್ನು ಮುಂದಿಟ್ಟ.

"ಅವನು ಕ್ರಿಶ್ಚಿಯನ್ ಅಲ್ಲ, ಅಜ್ಜಿ !"

"ನೀನೇನು ಹೇಳುತ್ತೀಯೋ ನನಗೊಂದು ಅರ್ಥವಾಗುವುದಿಲ್ಲ."

"ಅಂಕಲ್ ಜಾರ್ಜ್ ಎಂಬುದು ಅಡ್ಡ ಹೆಸರು. ಅವನ ನಿಜವಾದ ಹೆಸರು ಜಾನಕೀರಾಂ, ಅವನೂ ನಮ್ಮವನೇ," ನಗುತ್ತಾ ವಿವರಿಸಿದ ಅಘೋರ.

"ನಿಮ್ಮ ಮೊಮ್ಮಗನಿಗೂ ಒಂದು ಅಡ್ಡ ಹೆಸರಿದೆ ನಿಮಗೆ ಗೊತ್ತೇ ಅಜ್ಜಿ ?"

ಅಜ್ಜಿ ನಸು ನಕ್ಕು- "ಎಷ್ಟೆಂದರೂ ಹುಡುಗರ ಕೂಟ. ನೀವೇನು ಮಾಡಿದರೂ ಚೆನ್ನ. ನಾವೇನಾದರೂ ಹಾಗೆಂದರೆ ನೋಡಿ ಯಾರಾದರೂ ನಕ್ಕಾರು."

"ಅವನು "ಘೋರ್" ಎಂತ ಕಾಲೇಜಿನಲ್ಲಿ ಪ್ರಸಿದ್ಧನಾಗಿದ್ದಾನೆ."

ಎಲ್ಲರ ಮುಖದಲ್ಲೂ ನಸುನಗು ನಲಿಯಿತು.

ಪಾದರಕ್ಷೆಗಳ ಪಟ ಪಟ ಸದ್ದು ಕೇಳ ಬರುತ್ತಲೂ ಹುಡುಗರು ಎದ್ದು ನಿಂತರು. ಡಾ|| ಗಂಗಾಧರರು ತನ್ನ ಸಂಗಡಿಗ ಡಾಕ್ಟರೊಡನೆ ಒಳಬಂದರು. ಅಜ್ಜಿಯ ದೇಹಸ್ಥಿತಿಯನ್ನು ಪರೀಕ್ಷಿಸಿ, ಔಷಧಿ ಕೊಟ್ಟ ಕ್ರಮವನ್ನು ತಿಳಿದು

ಕೊಂಡು ಚಾರ್ಟನ್ನು ನೋಡಿ ಬೇರೆ ಔಷಧಿಯನ್ನು ಬರೆದಿಟ್ಟು "ಇನ್ನು ನೀವು ಸುಧಾರಿಸಿ ಕೊಳ್ಳುತ್ತೀರಿ ಅಜ್ಜಿ !" ಎಂದರು–ಮುಖದಲ್ಲಿ ಎಳೆ ನಗುಹರಿಸಿ.

ಅವರು ಹೊರಟು ಹೋದನಂತರ ಅಘೋರ ನಗುತ್ತಾ–"ಒಳ್ಳೇ ರಜಾ ದಿನಗಳಲ್ಲೇ ಕಾಹಿಲೆ ಬಿದ್ದಿರಲ್ಲಾ ಅಜ್ಜಿ ? ನಾವು ಮದರಾಸಿನಲ್ಲಿ ರಜೆ ದಿನಗಳನ್ನು ಕಳೆಯಬೇಕೆಂದು ಯೋಚಿಸಿದ್ದೆವು. ಅದಕ್ಕೂ ಕಲ್ಲು ಹಾಕಿ ಬಿಟ್ಟಿರಿ." ಕಣ್ಣ ನೋಟದಲ್ಲಿ ತುಂಟತನ ಇಣಿಕಿ ಹಾಕಿತು.

"ನಾನೇನಪ್ಪಾ ಮಾಡಲಿ ? ವಿಧಿ ಸಂಕಲ್ಪ."

ಅಘೋರ ಮನೆಯಿಂದ ತಾಯಿ ಬರುವವರೆಗೂ ಇದ್ದು ಗೆಳೆಯರೊಂದಿಗೆ ಹೊರಬಿದ್ದ. ಹೊತ್ತು ಆರರ ಅಂಚನ್ನು ಮುಟ್ಟುವುದರಲ್ಲಿತ್ತು. ತಣ್ಣನೆಯ ಚಳಿಗಾಳಿ ಬೀಸತೊಡಗಿತು. ಮದನ್‌ಮಿತಾಳಿ ಅಂದ "ಸ್ವಲ್ಪ ಕಾಫಿ ಕುಡಿಯೋಣವೇ ಚಳಿಯಾಗುತ್ತೆ."

"ಹ್ಞೂ," ಎಂದ ಅಘೋರ.

ಅದೇ ದಾರಿಯಲ್ಲಿದ್ದ ಕಾಫಿ ಮಂದಿರವನ್ನು ಮೂವರೂ ನಗು ಮುಖದಿಂದ ಹೊಕ್ಕರು. ಅಘೋರ ಮೂರು ಕಾಫಿ ತರಲು ಹೇಳಿದ. ಮಾಣಿ ಒಳಹೋದವನು ತುಸು ಹೊತ್ತಿನೊಳಗಾಗಿ ಬಿಸಿ ಬಿಸಿ ಕಾಫಿಯೊಡನೆ ಹಿಂದಿರುಗಿದ. ಮೂವರೂ ನಿಧಾನವಾಗಿ ಗುಟುಕಿಸ ಹತ್ತಿದರು. ಕಾಫಿಯ ರುಚಿ ಸರ್ವೇಸಾಮಾನ್ಯವಾಗಿದ್ದರೂ ಆದರಲ್ಲೇ ಪೂರ್ಣ ತನ್ಮಯನಾಗಿದ್ದ ಅಘೋರನನ್ನು ನಿಟ್ಟಿಸಿ ನೋಡುತ್ತಾ ಮದನ್‌ಮಿತಾಳಿ ನಕ್ಕು ನುಡಿದ–"ಜಾರ್ಜ್, ಅಘೋರನನ್ನು ಅಸುಖಿ ಎಂದು ಭವಿಷ್ಯ ನುಡಿದಿದ್ದೀಯೆ ? ನೋಡು, ಈ ಕೀಳು ದರ್ಜೆಯ ಕಾಫಿಯಲ್ಲೂ ಅವನು ಪೂರ್ಣ ಸುಖಿ !"

ಆದರೂ, ಅಘೋರ ಮಾತಾಡದೆ ನಸುನಗುತ್ತಾ ಗುಟುಕಿಸುತಿದ್ದ.

ಜಾನಕೀರಾಂ ಅಘೋರನನ್ನು ನಿಟ್ಟಿಸಿ ನೋಡಿ ಹುಬ್ಬೇರಿಸಿ–"ಭವಿಷ್ಯದ ಗರ್ಭದಲ್ಲಿ ಏನೇನಿದಿಯೋ ? ಕಾಲಕ್ರಮೇಣ ಅಭಿರುಚಿಯೆತ್ತ ಸಾಗಲಿದೆಯೋ ? ದೇವರಿಗೇ ಗೊತ್ತು."

ಅಘೋರ ಹಾಗೇ ಯೋಚಿಸಿದ. ಮನದಲ್ಲಿ ಡಬ್ಬಲ್ ರೋಡಿನ ಭೂಪ ಡಾ|| ಘನಶ್ಯಾಮ್ ಮೂಡಿ ನಿಂತರು. ಅವರ ಅತುಳೈಶ್ವರ್ಯ ಸಂಪ

ದ್ಭರಿತವಾದ ಜೀವನ ಚಲನಚಿತ್ರದಂತೆ ಮನದಲೆಯಲ್ಲಿ ಹಾದುಹೋಯಿತು. ಡಾಕ್ಟರಾದವರು ಅಸುಖಿಯಾಗುವುದು ಹೇಗೆ? ಎಂಬ ಪ್ರಶ್ನೆ ಹಿಂದೆಯೇ ಮನದಲೆಯಲ್ಲಿ ಮೂಡಿ ನಿಂತಿತು. ಏನನ್ನೂ ನಿಟ್ಟಿಸದ ಅವನ ಶೂನ್ಯದೃಷ್ಟಿ ನೋಟಕ್ಕೆದುರಾಗಿ ಹರಿದಿತ್ತು. ಮಿನುಮಿನುಗುವ ಕಣ್ಣಾಲಿಗಳ ಹಿಂದೆ ಅಡಗಿದ ಸಮಸ್ಯೆ ಹೊರಹೊಮ್ಮಲು ಪಂಜರದ ಪಕ್ಷಿಯಂತೆ ತವಕಿಸುತ್ತಿದ್ದರೂ ಅದನ್ನು ಅದುಮಿ ಹಿಡಿದು ಅಘೋರ ನುಡಿದ–"ಅಂಕಲ್ ಜಾರ್ಜ್, ಇಲ್ಲಿ ಕೇಳು ಅತೀ ಆಸೆಯಿದ್ದವನು ಜೀವನದಲ್ಲಿ ಅಸುಖಿಯಾಗುವುದು ಸಹಜ. ನಾನು ಯಾವುದನ್ನೂ ಅತಿಯಾಗಿ ಬಯಸುವುದಿಲ್ಲ. ನನ್ನ ಗಳಿಕೆಯಿಂದ ಈ ಹೊಟ್ಟೆ ತುಂಬಿದರೆ ಸಾಕು. ಅದಕ್ಕೂ ಕೊರತೆ ಬಂದಂದು ನಾನು ಸಹ ಲೋಕದಲ್ಲಿರಲು ಬಯಸುವುದಿಲ್ಲ." ದನಿಯಲ್ಲಿ ಗಾಂಭೀರ್ಯವಿತ್ತು. ಮುಖ ದಲ್ಲಿ ಎಳೆನಗು ಮಿನುಗುತ್ತಿತ್ತು.

"ಯಾರು ಅಸುಖಿಯಾದರೂ ಅಘೋರ್ ಅಸುಖಿಯಾಗುವುದು ಸಾಧ್ಯವೇ ಯಿಲ್ಲ. ಅವನು ನಾನಾ ಮುಖಗಳಲ್ಲಿ ಸುಧಾರಣೆಗಾಗಿ ಹೋರಾಡುವ ವ್ಯಕ್ತಿ ಎಷ್ಟೆಂದರೂ ಸುಧಾರಣಾರಂಗದಲ್ಲಿ ತೃಪ್ತಿಯ ಕಿಡಿ ಮೂಡಲೇಬೇಕು."

"ಮದರ್, ನನ್ನೊಬ್ಬನಿಂದ ಹೇಗೆ ಸುಧಾರಣೆಯಾದೀತು? ಮಾನವ ಜೀವನ ಸುಧಾರಿಸಿಕೊಳ್ಳಲೇಬೇಕೆಂಬ ಹಿರಿಯ ಬಯಕೆ ಇರುವುದೇನೋ ನಿಜ. ಆದರೆ ನನ್ನೊಬ್ಬನಿಂದ ಏನಾದೀತು?" ತಲೆಯಲ್ಲಾಡಿಸುತ್ತಾ ಅಘೋರ ತನ್ನ ಅಸಹಾಯಕತೆಯನ್ನು ಮುಂದಿಟ್ಟ.

"ನೀನು ಇಷ್ಟೊಂದು ಸಪ್ಪೆಯಾದುದು ಹೇಗೆ?"

"ಸಪ್ಪೆಯಾಗುವ ಪ್ರಶ್ನೆಯೂ ಇಲ್ಲ, ಸುಧಾರಣೆಯ ದಾಹ ಅಡ ಗುವುದೂ ಇಲ್ಲ. ಆದರೆ ಸಾಧನೆ ಸಾಸುವೆಯಷ್ಟು ಎಂಬುದನ್ನು ಅರಿತು ಕೊಂಡಿದ್ದೇನೆ."

ಮೂವರೂ ಕಾಫಿಯನ್ನು ಮುಗಿಸಿ ಹೊರಬಂದರು. ಚಳಿಗಾಲದ ಹಿಮಭರಿತ ಗಾಳಿ ತಣ್ಣಗೆ ಬೀಸತೊಡಗಿತು. ಸಾಲಾಗಿ ಫುಟ್‌ಪಾತಿನ ಮೇಲೆ ಹೆಜ್ಜೆ ಹಾಕತೊಡಗಿದರು, ಫುಟ್‌ಪಾತಿನ ಬದಿಯಲ್ಲಿದ್ದ ಕಸದ ತೊಟ್ಟಿ ತುಂಬಿ, ಕಸ ಕೆಳಗಡೆ ಚೆಲ್ಲಾಪಿಲ್ಲಿಯಾಗಿ ಚೆಲ್ಲಿ ಹರಡಿಬಿದ್ದಿದ್ದು ಹೆಜ್ಜೆ ಯಿಡಲೂ ತಾವಿಲ್ಲದಷ್ಟು ಅಸಹ್ಯವಾದ ತಾಣ. ನಾಲ್ಕಾರು ಬೀದಿ ನಾಯಿಗಳು

ಅದರೊಳಗಿನ ಎಂಜಲೆಲೆಗಾಗಿ ಕಚ್ಚಾಡುತ್ತಿದ್ದುವು. ಅವುಗಳ ಕಚ್ಚಾಟ ಚೀರಾಟಗಳು ಮೇರೆ ಮೀರಿದುವು. ಮೂವರೂ ರಸ್ತೆಗಿಳಿದು ಆ ಕೊಳಕು ಸ್ಥಳವನ್ನು ದಾಟಿದ ನಂತರ ಪುನಃ ಫುಟ್‌ಪಾತಿನ ಮೇಲಕ್ಕೆ ಬಂದರು. ಮೂಗುಮುರಿಯುತ್ತಾ ಅಘೋರ ಅಸಹ್ಯ ಜಿಗುಪ್ಸೆಗಳಿಂದ-"ಇಸ್ಸಿಸ್ಸೀ ! ಈ ಒಂದು ದೃಶ್ಯವೇ ಸಾಕು. ಮುನಿಸಿಪಾಲಿಟಿ ಬದುಕಿದೆ ಎಂಬ ಉದಾಹರಣೆಗೆ. ನನಗೇನಾದರೂ ಅಧಿಕಾರವಿದ್ದಿದ್ದರೆ ಇವುಗಳಿಗೆಲ್ಲ ಮೊದಲು ಗಡಿಪಾರು ಮಾಡುತ್ತಿದ್ದೆ । ಬೀದಿನಾಯಿ ನೊಣ ಕೋತಿಗಳು ನಿರ್ನಾಮವಾಗದ ಹೊರತು ಜನಜೀವನಕ್ಕೆ ನೆಮ್ಮದಿ ಬರುವುದೇ ಇಲ್ಲ. ಈ ಕಸ ಕೊಳಕುಗಳ ನಿರ್ಮೂಲನೆಗೆ ಆದ್ಯಗಮನ ಕೊಡದಿದ್ದ ಮೇಲೆ ಮುನಿಸಿಪಾಲಿಟಿ ಏಕಿರಬೇಕು ?" ನಯನಗಳು ನಕ್ಷತ್ರಗಳಾದುವು. ಸಿಟ್ಟಿನಿಂದ ಹುಬ್ಬುಗಳು ಗಂಟಿಕ್ಕಿದುವು.

ದಾರಿಯಲ್ಲಿ ಬಸವನನ್ನು ಆಡಿಸುವವನೊಬ್ಬ ಬಡಕಲು ಎತ್ತಿಗೆ ಮಣಿಗೆಜ್ಜೆಗಳಿಂದ ಅಲಂಕಾರಮಾಡಿ ಮೇಲೆ ಬಣ್ಣದ ಬಟ್ಟೆ ಹೊದಿಸಿ ಭಿಕ್ಷಾಟನೆಗಾಗಿ ಹೊರಟಿದ್ದ. ಮನೆ ಮನೆ ತಿರುಗುವ ಹವ್ಯಾಸದಲ್ಲಿ ಅದರ ಹುಲ್ಲು ನೀರುಗಳ ಕಡೆ ಗಮನ ಹರಿಯದೆ ಎತ್ತು ಬಡವಾಗಿತ್ತು. ಅದರ ಗೋಳನ್ನು ನೋಡಿ ಅಘೋರ ನುಡಿದ ದನಿಯಲ್ಲಿ ಆವೇಶ ತುಂಬಿಬಂತು-"ಇಂತಹವರಿಗೆ ಚಾಟಿ ಏಟು ಬೀಳಬೇಕು ! ಸರಕಾರ ಹೀಗೇ ಸತ್ತು ಸಪ್ಪೆಯಾಗಿದ್ದರೆ ಇವರು ಜನ್ಮ ಜನ್ಮಕ್ಕೂ ಇದೇ ಕಸುಬು ಮಾಡುತ್ತಾರೆ ! ಛಿಃ ! ನಾಚಿಕೆಗೇಡು ! ಕರಡಿ, ಕೋತಿ, ಬಸವ, ಹಾವುಗಳ ಮರೆಯಲ್ಲಿ ಬದುಕುವ ಹೇಸು ಜೀವನಕ್ಕಿಂತ ಸಾವು ಲೇಸು ! ಸೋಮಾರಿತನ ಮನುಷ್ಯನನ್ನು ಕಳ್ಳತನಕ್ಕೆ ಹುರಿದುಂಬಿಸುವುದಿಲ್ಲವೇ ? ಮೈಗಳ್ಳರಾದ ಇವರು ಒಂದು ಹೊತ್ತು ಹೊಟ್ಟೆ ತುಂಬಿದರೆ ದಿನವೆಲ್ಲಾ ನಿದ್ದೆ ಹೋಗಿಯಾರು ! ಇಂತಹ ಜನರಿಗಾಗಿ ಎಷ್ಟು ಶ್ರಮ ತೆಗೆದುಕೊಂಡರೂ ನೀರಿನಲ್ಲಿ ಹೋಮ ಮಾಡಿದಂತೆಯೇ ಸರಿ ! ಅಂದಮೇಲೆ ಡಿಕ್ಟೇಟರ್‌ಷಿಪ್ ಹೊರತು ಬೇರೆ ದಾರಿಯೇ ಇಲ್ಲ. ಹೆಜ್ಜೆ ಹೆಜ್ಜೆಗೂ ಹೊಡೆತ ಬಿದ್ದರೇನೇ ಸುಧಾರಣೆ ಇಲ್ಲದಿದ್ದರೆ ಆ ಯೋಚನೆಯನ್ನೇ ಬಿಟ್ಟುಬಿಡಬೇಕು." ಮುಖಮಂಡಲವು ಒಮ್ಮೆಲೆ ಗಂಭೀರವಾಯಿತು. ಕಣ್ಣುಗಳು ಫಳಫಳನೆ ಹೊಳೆದುವು. ಅಘೋರ ಹಲ್ಲು

ಕಚ್ಚಿ ಕಟಕಟನೆ ಸದ್ದು ಮಾಡಿದ.

"ನೀನೆಂದಂತೆ ಚಾಟಿ ಏಟಿನ ಮೇಲೆ ಸುಧಾರಣೆ ಮಾಡುವುದಾದರೆ ಸರಕಾರ ರಾಕ್ಷಸೀಕೃತ್ಯಕ್ಕೆ ಇಳಿಯಬೇಕು ! ಇವರೇ ಏಕೆ ? ಗುಡ್ಡಗಾಡಿನ ಜನರನ್ನು ತೆಗೆದುಕೊ. ಅವರ ಸುಧಾರಣೆ ಹೇಗಾಗಬೇಕು ? ವಿದ್ಯೆಬುದ್ಧಿ ಕಲಿತು ಜನ ಜಾಗೃತರಾಗಬೇಕೆ ವಿನಃ ಹೊಡೆದು ಬಡಿದು ಸಾಧಿಸುವುದು ಸಾಧ್ಯವಿಲ್ಲ ಅಘೋರ್." ಎಂದ ಜಾನಕೀರಾಂ. ದನಿ ಎದೆಯಾಳದಿಂದ ಹೊರಬಿತ್ತು-ಹರಿವ ಹುಚ್ಚು ಪ್ರವಾಹಕ್ಕೆ ಅಡ್ಡಗಟ್ಟೆ ಹಾಕಿದಂತೆ.

"ಈ ಜಗತ್ತಿನಲ್ಲಿ ತಮ್ಮ ತಮ್ಮ ಇಚ್ಛಾನುಸಾರವಾಗಿ ಬಾಳಲು ಎಲ್ಲರೂ ಸ್ವತಂತ್ರರು. ಇನ್ನೊಬ್ಬರ ಇಚ್ಛೆಗೆ ನಾವು ಅಡ್ಡ ಬರುವುದು ಹೇಗೆ ? ಕಾಗೆ ಕೋತಿಗಳ ವಿಚಾರವೂ ಅಷ್ಟೆ. ಪ್ರಾಣಿಗಳಾದ ಮಾತ್ರಕ್ಕೆ ಅವುಗಳಿಗೆ ಬದುಕು ಬೇಡವೇ ? ಸುಧಾರಣೆಯ ಸೋಗಿನಲ್ಲಿ ಇನ್ನೊಬ್ಬರ ಮೇಲೆ ಬಲಾತ್ಕಾರ ಹೇರುವುದು ಸರಿಯಲ್ಲ ಅಘೋರ್."

"ನೀನು ಏನೇ ಅನ್ನು ಮದನ್. ನಾವು ಇತರ ರಾಷ್ಟ್ರಗಳೊಂದಿಗೆ ಸರಿ ಸಮಾನರಾಗಿ ಹೆಜ್ಜೆ ಹಾಕಬೇಕೆಂದರೆ ಈ ಜನರ ಮಟ್ಟ ಸುಧಾರಿಸಿದ ಹೊರತು ಸಾಧ್ಯವಿಲ್ಲ. ದೇಶದ ಅಡಿಗಲ್ಲು ಭದ್ರವಾಗಿರಬೇಕೆಂದರೆ ಜನ ಸಾಮಾನ್ಯರ ಮಟ್ಟ ಸುಧಾರಿಸಲೇಬೇಕು. ಇಲ್ಲವಾದರೆ ಮರಳಿನ ತಳಹದಿಯ ಮೇಲೆ ಗೋಡೆ ಕಟ್ಟಿದಂತಾದೀತು."

"ಸುಧಾರಣೆ ಎಂಬುದು ಕಾಲಕ್ರಮೇಣ ಆಗಬೇಕೇ ಹೊರತು ಒಮ್ಮೆಲೆ ಎಂದೆಂದೂ ಆಗಲಾರದು. ಕಾದು ನೋಡುವ ತಾಳ್ಮೆ ಇರಬೇಕು. ಅಘೋರ್."

"ಸುಧಾರಣೆ ಎಂದ ಮೇಲೆ ಅದು ನಮ್ಮ ಜೀವಿತದಲ್ಲಿಯೇ ಕೈಗೂಡಿದರೆ ಕಿಂಚಿತ್ ಸಮಾಧಾನ. ಅಲ್ಲದ ಮೇಲೆ ಸುಧಾರಣೆಗಾಗಿ ಹೆಣಗುವುದೇಕೆ ?"

"ಅಘೋರ್, ನಾವು ನೆಟ್ಟಮರಗಳು ನಮ್ಮ ಕಾಲಾನಂತರವೇ ಫಲಗಳನ್ನು ಬಿಡುತ್ತವೆ. ಹಾಗೆಂದು ನೆಡದಿರುವುದಾದೀತೇ ?"

"ಆದರೂ............"

"ಅದೇಕೆ ಅರ್ಧಕ್ಕೆ ನಿಲ್ಲಿಸಿದೆ ?"

"ಕಾದು ನೋಡುವುದು ನನ್ನ ಅಭಿಮತವಲ್ಲ."

"ತಕ್ಷಣ ಆಗುವುದು ಸಾಧ್ಯವೇ ಇಲ್ಲ. ಅಂದಮೇಲೆ ಕಾದುನೋಡಲೇ ಬೇಕು."

"ಪರದೇಶೀಯರ ಆಳ್ವಿಕೆಯಲ್ಲಿ ಅಜ್ಞಾನದ ಅಂಧಕಾರದಲ್ಲಿ ಮುಳುಗಿದ್ದ ನಮ್ಮವರು ಸುಧಾರಿಸಕೊಳ್ಳಬೇಕಾದರೆ ದೀರ್ಘಕಾಲಾವಧಿ ಬೇಕು."

"ಹಾಗೆಂದರೆ ನಮ್ಮ ಜೀವಿತದಲ್ಲಿ ಜನ ಸಾಮಾನ್ಯರು ಸುಧಾರಿಸಿಕೊಳ್ಳುವುದನ್ನು ನಾವು ನೋಡಲಾರೆವು."

"ಸಾಧ್ಯವೇ ಇಲ್ಲ," ತಲೆಯಲ್ಲಾಡಿಸುತ್ತಾ ನುಡಿತ ಜಾನಕೀರಾಂ.

ಹಾದಿ ಸವೆಯುತಿತ್ತು. ಮೂವರೂ ಸಾಲಾಗಿ ನಡೆದು ಅಘೋರನ ಮನೆ ಸೇರಿದರು. ಅಘೋರ ಗೆಳೆಯರನ್ನು ಆದರದಿಂದ ಒಳಗಡೆ ಬರಮಾಡಿಕೊಂಡ. ಕೊಠಡಿಯಲ್ಲಿ ಕತ್ತಲು ಮುಸುಗಿತ್ತು. ಸ್ವಿಚ್ ಹಾಕಿ ದೀಪ ಹತ್ತಿಸಿ ರೇಡಿಯೋ ತಿರುಗಿಸಿದ ಅಘೋರ. ಗಾಂಧೀಜಿಯವರ ನೆಚ್ಚಿನ ಗೀತೆಯಾದ "ರಘುಪತಿ ರಾಘವ ರಾಜಾರಾಂ । ಪತಿತ ಪಾವನ ಸೀತಾರಾಂ । ಈಶ್ವರ ಅಲ್ಲಾ ತೇರೇನಾಂ । ಸಬಕೋ ಸನ್ಮತಿ ದೇ ಭಗವಾನ್॥"ಎಂಬ ಗೀತೆ ಹಾಲ್ಜೇನಿನ ಹೊಳೆಯಂತೆ ಹರಿದು ಬಂತು. ಕೇಳು ಕೇಳುತ್ತಾ ಮದನ್ ಅಂದ. "ಈಶ್ವರ ಅಲ್ಲಾ ತೇರೆ ನಾಮ್ ಸಬಕೋ ಸನ್ಮತಿ ದೇ ಭಗವಾನ್ ॥" ಎಂದು ಗಾಂಧೀಜಿಯವರು ಸುಮ್ಮನೆ ಪ್ರಾರ್ಥಿಸಲಿಲ್ಲ, ಅಘೋರ್!" ದನಿ ಎದೆಯಾಳದಿಂದ ಹೊರಬಿತ್ತು.

"ಈ ದೇಶಕ್ಕಾಗಿ ಜೀವನವನ್ನೇ ತೇಯ್ದು ಅವರಿಗೆ ಈ ವಿಷಯ ಎಷ್ಟು ತಲೆಭಾರವಾಗಿದ್ದಿರಬಹುದು ಎಂಬುದನ್ನು ಯೋಚಿಸಿನೋಡು."

"ಪಾಪ ! ಅಂಥಹವರ ಎದೆಗೂ ಗುಂಡಿಟ್ಟರು ನಮ್ಮವರು !"

ಅಘೋರ ಹಾಗೇ ಯೋಚನಾಪರನಾದ. ತನುಮನಗಳು ತುಯ್ಯಾಡಿದುವು.

"ಗಾಂಧೀ ತತ್ವ ಪರಿಪಾಲಕರಿಂದಲ್ಲದೆ ನಿನ್ನಂಥವರಿಂದ ದೇಶದ ಸುಧಾರಣೆಯಾಗದು."

ಅಘೋರ ಮಾತಾಡಲಿಲ್ಲ. ಮನದಲೆಯಲ್ಲಿ ಗಾಂಧೀಜಿಯ ಜೀವನಧಾರೆ ಚಲನಚಿತ್ರದಂತೆ ತೇಲಿ ನಲಿಯಿತು. ಹಾಗೇ ಯೋಚಿಸಿದ...ಅವರ

ಎದೆಗೆ ಗುಂಡಿಕ್ಕಿದ ಹೇಯ ಕೃತ್ಯ ಎದೆಯಲ್ಲಿ ಸಂತಾಪದ ಬಿಸಿಯುಸಿರನ್ನು ಮೂಡಿಸಿತು. ಮಾತಿಲ್ಲದೆ ಮೌನವಾಗಿ ಕುಳಿತುಕೊಂಡ.

"ಎಂಥೆಂಥ ಮಹಾ ವಿಭೂತಿ ಪುರುಷರು ಜನ್ಮ ಎತ್ತಿ ತಮ್ಮ ಜೀವನ ಧಾರೆಯನ್ನು ದೇಶಾಭ್ಯುದಯಕ್ಕಾಗಿಯೇ ಮೀಸಲಿಟ್ಟಿದ್ದರೂ ನಮ್ಮ ದೇಶ ಇನ್ನೂ ಸುಧಾರಿಸಿಕೊಳ್ಳುವುದರಲ್ಲಿಯೇ ಇದೆ. ಅಂದಮೇಲೆ ಡಿಕ್ಟೇಟರ್ ಷಿಪ್‌ನಿಂದ ಇನ್ನೇನಾದೀತು ?"

"ಇದು ನಮ್ಮ ದೇಶದ ದೌರ್ಭಾಗ್ಯ."

"ಕ್ರಮ ಕ್ರಮೇಣ..."

"ಶ್ ! ಸುಮ್ಮನಿರಪ್ಪಾ, ಹಾಳಾಗಿಹೋಗಲಿ,"

ಮದನ್ ಮತ್ತು ಜಾನಕೀರಾಮರು ಫಕಫಕನೇ ನಕ್ಕುಬಿಟ್ಟರು. ಅಘೋರನ ಮುಖದಲ್ಲೂ ಪ್ರತಿನಗು ಮೂಡಿತು.

ಬಾನುಲಿಯಲ್ಲಿ ಹೆಣ್ದನಿಯೊಂದು ಭಗವಾನ್ ಶ್ರೀಕೃಷ್ಣ ಪರಮಾತ್ಮನ ಸಂದೇಶವನ್ನು ಕಿವಿಗಿಂಪಾಗಿ ಹಾಡಿತು, ಕೇಳು ಕೇಳುತ್ತಾ ಅಘೋರ ತಲೆ ದೂಗಿದ.

ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ।
ಮಾ ಕರ್ಮಫಲಹೇತುರ್ಭೂರ್ಮಾ ತೇ ಸಂಗೋಽಸ್ತ್ವ ಕರ್ಮಣಿ ॥

"ಕೇಳಿದ್ಯೋ ?" ಹುಬ್ಬುಹಾರಿಸಿ ಅಂದ ಜಾನಕೀರಾಂ.

"ಕರ್ಮ ಫಲದಲ್ಲಿ ಆಸಕ್ತಿ ಇಲ್ಲದೆ ಕರ್ಮ ಮಾಡುವುದು ನಿತ್ಯ ಕರ್ತವ್ಯ ಅಘೋರ್. ಭಗವಂತನ ಸಂದೇಶವೇ ಹಾಗಿರುವಾಗ ಇನ್ನೇಕೆ ಕರ್ಮ ಫಲದಲ್ಲಿ ಆಸಕ್ತಿ ?"

"ನಿಜ ; ಮದನ್." ಅಘೋರನ ದನಿ ಸಮಾಧಾನದಿಂದ ಹೊರಬಿತ್ತು.

ತುಸು ಹೊತ್ತಿನ ನಂತರ ಗೆಳೆಯರಿಬ್ಬರೂ ಎದ್ದು ನಿಂತು ಹೇಳಿದರು– "ನಾವಿನ್ನು ಹೊರಡೋಣವೇ ?"

ಅಘೋರ ತಲೆಬಾಗಿಲವರೆವಿಗೂ ಹೋಗಿ ಗೆಳೆಯರನ್ನು ನಗುಮುಖ ದಿಂದ ಬೀಳ್ಕೊಟ್ಟ. ನೋಟ ನೋಟವನ್ನು ಬೀಳ್ಕೊಟ್ಟಿತು. ದನಿ ದನಿ ಯನ್ನು ಬೀಳ್ಕೊಟ್ಟಿತು.

ಅಧ್ಯಾಯ

೫

ಅಘೋರನಿಗೆ ಮೊದಮೊದಲು ಹೆಣಗಳ ಬಳಿಯಲ್ಲಿ ನಿಲ್ಲಲು ಎದೆಯಳು ಕಿದರೂ ಕ್ರಮ ಕ್ರಮೇಣ ಅದು ಅಭ್ಯಾಸವಾಗುತ್ತಾ ಬಂತು. ಹೆಣಗಳ ದುರ್ವಾಸನೆ ಒಮ್ಮೆ ಮೂಗನ್ನು ಸೇರಿತೆಂದರೆ ದಿನವೆಲ್ಲಾ ಅದೇ ವಾಸನೆಯನ್ನು ಉಸಿರಾಡುತ್ತಿರುವಂತೆ ಭಾಸವಾಗುವುದು. ಎಷ್ಟೋ ಸಲ ಹತ್ತಾರು ಬಾರಿ ಧೀರ್ಘವಾಗಿ ಉಸಿರನ್ನು ಹೊರಬಿಟ್ಟು ಅನುಮಾನವನ್ನು ಪರಿಹರಿಸಿಕೊಂಡರೂ ಅದೇ ವಾಸನೆ ಮೈಗಂಟಿಕೊಂಡಂತೆ ತೋರತೊಡಗಿ ಪುನಃ ಸ್ನಾನ ಮಾಡಿದುದೂ ಉಂಟು. ಕಣ್ಮುಚ್ಚಿದರೂ ಅಕ್ಷಿ ಪಟಲದ ಮೇಲೆ ಮೂಡುತಿತ್ತು—ಜೀರ್ಣಿತ ಹೆಣ !

ತಾನು ಯಾವುದೋ ಅಪೂರ್ವ ಸಾಹಸ ಕಾರ್ಯದಲ್ಲಿ ತೊಡಗಿರುವಂತೆ ಭಾವಿಸಿ ಒಮ್ಮೊಮ್ಮೆ ಸಂತಸದಿಂದ ಮುಗಿಲಿನೆತ್ತರಕ್ಕೆ ಏರಿದರೂ ಇನ್ನೊಮ್ಮೆ ಅಷ್ಟೇ ಜಿಗುಪ್ಸೆಯಿಂದ ಕುಸಿದು ಬೀಳುತ್ತದೆ. ಸಾಲಾಗಿನ ನಗ್ನ ದೇಹಗಳು ಅಂದವಳಿದು ರೂಪುಗೆಟ್ಟು ಸೆಟೆದು ಬಿದ್ದು ದುರ್ವಾಸನೆ ಬೀರುವ ಘೋರರೂಪ ಕ್ಷಣಕ್ಷಣಕ್ಕೂ ಕಣ್ಮುಂದೆ ಸುಳಿಸುಳಿಯುತ್ತದೆ. ಊಟ ಮಾಡುವಾಗಲೂ, ನಿದ್ದೆ ಮಾಡುವಾಗಲೂ ಅದೇ ಯೋಚನೆ ಬಂದು.... "ಅಯ್ಯೋ, ಎಷ್ಟು ಅಸಹ್ಯ !.... ಎಂತಹ ಹಿಂಸೆ !... ಆತ್ಮದ ಪ್ರತಿಹಿಂಸೆ ! ನನ್ನಿಂದಾಗದು !" ಎಂದು ತಳಮಳಿಸುತ್ತಿದ್ದುದೂ ಉಂಟು. ಆದರೂ ಮರುಘಳಿಗೆಯಲ್ಲಿ ಪ್ರಯತ್ನಪೂರ್ವಕವಾಗಿ ಅದನ್ನು ನಿವಾರಿಸಿ ಧೈರ್ಯ ತಳೆಯುತ್ತಿದ್ದ. ಒಂದೆಡೆ ಬಡತನದ ಬವಣೆಯಿಂದ ಧರ್ಮ ಕರ್ಮಗಳನ್ನು ಬದಿಗೊತ್ತಿ ತುತ್ತು ಕೂಳಿಗಾಗಿ ಹೆಣವನ್ನು ಮಾರಿಹೋದ ಕುಟುಂಬಿಗರ ಜೀವನದ ದಾರುಣ ದೃಶ್ಯ—ಇನ್ನೊಂದೆಡೆ ಜಾಳಿನ ಕೋಟಲೆಯಲ್ಲಿ ಸಿಲುಕಿ ಜರ್ಜರಿತವಾದ ದೇಹವನ್ನು ತ್ಯಜಿಸಿ ಆತ್ಮ ಸಗ್ಗವೇರಿದರೂ ದೇಹ ಸಂಸ್ಕಾರವಿಲ್ಲದೆ ಹೆಣದ ಮನೆಯಲ್ಲಿ ಕೊಳೆತು ಒಣಗಿ ನಾರುವ ಬಗೆ ಎದೆಯನ್ನು ನಡುಗಿಸುತ್ತಿದ್ದುದೂ ಉಂಟು. ತನ್ನೆಲ್ಲಾ ಪ್ರಯತ್ನದಿಂದ ಪುನಃ ಯೋಚನೆಯನ್ನು ಬದಿಗೊತ್ತಿ "ಹೋ ! ಅದೇನೇ ಬರಲಿ, ನಾನು ಡಾಕ್ಟರಾಗುವೆ...

ಡಾಕ್ಟರ್ ಆಗಲೇಬೇಕು ! ಜನಸೇವೆಗಾಗಿ–ದೀನ ದಲಿತರಿಗಾಗಿ ಡಾಕ್ಟರಾಗ ಲೇಬೇಕು !" ಎಂದು ಉದ್ಗಾರ ತೆಗೆಯುತಿದ್ದ. ಒಡನೆಯೇ ಅಳಕು ಅಳಿದು ವಿವೇಕ ಪ್ರಜ್ವಲಿಸಿ ಅಘೋರ ಕಾರ್ಯೋನ್ಮುಖನಾಗಿ ತನ್ನ ಹುಚ್ಚು ಹೊಳೆಗೆ ಅಡ್ಡಗಟ್ಟೆಹಾಕುತಿದ್ದ.

ಒಳಗುದಿ ಯುದ್ಧ ನಡೆಯುತ್ತಿದ್ದಂತೆಯೇ ಅಘೋರ ಓದಿನಲ್ಲಿ ತೀವ್ರ ಮಗ್ನನಾಗುತ್ತಿದ್ದರೂ ಮನಸ್ಸಿಗೆ ಬೇಸರವಾದಾಗ–ಅಹಿತವೆನಿದಾಗ ಒಂದಾದ ಮೇಲೊಂದರಂತೆ ಸಿಗಾರುಗಳು ಉರಿದು ಬೂದಿಯಾಗುತ್ತಿದ್ದುವು. ಆರಾಮ ಕುರ್ಚಿಯ ಮೇಲೆ ಬಿದ್ದುಕೊಂಡು ಕಾಲುಚಾಚಿ ಸಿಗಾರುಗಳ ಸೇವನೆಯಲ್ಲಿ ಮೈಮರೆತುದೂ ಉಂಟು. ಅನಂತರ ಮೈ ತಿಳಿದಾಗ "ಇದೆಂತಹ ಹೇಡಿತನ ! ಎಷ್ಟು ಅಸಹ್ಯಕರವಾದ ಕೆಲಸದಲ್ಲಿ ತೊಡಗಿರುವೆ !" ಎನ್ನುತ್ತ ಸಿಗಾರಿನ ತುಣುಕಗಳನ್ನು ನೋಡಿ ಜುಗುಪ್ಸೆ ಪಟ್ಟುಕೊಂಡುದುದೂ ಉಂಟು. ಅನಂತರ ಬೂದಿಯನ್ನೂ ತುಣುಕುಗಳನ್ನೂ ಆಚೆಗೆ ತೂರಿ ಓದಿನಲ್ಲಿ ತೀವ್ರ ಮಗ್ನ ನಾಗುತ್ತಿದ್ದ.

ಒಮ್ಮೊಮ್ಮೆ ತಂದೆಯ ವ್ಯಾಪಾರದ ಕಡೆ ಗಮನ ಹರಿದು "ಅದೆಷ್ಟು ಸುಲಭವಾದ ಜೀವನ ! ಸಗ್ಗದ ಬಾಗಿಲು ವಿಶಾಲವಾಗಿ ತೆರೆದಿದ್ದರೂ ಬೆಳ ಕಿಂಡಿಯಿಂದ ತೂರಿ ಹೋಗುವ ಸಾಹಸ ಮಾಡುತಿದ್ದೇನೇಕೆ?" ಎಂಬ ಪ್ರಶ್ನೆ ಮನದಲ್ಲಿ ನಿಮಿರಿ ನಿಲ್ಲುತ್ತದೆ. ಜೀವನ ಹಲ್ಕಿರಿದು ಅಣಕಿಸುವಂತೆ ತೋರಿ ಅಘೋರ ಅಗಾಧವಾದ ಯೋಚನೆಗೊಳಗಾಗುತಿದ್ದ. ಘಳಿಗೆ ಘಳಿಗೆಗಳು ನಿಮಿರಿ ನಡೆದು, ತಾಸು ತಾಸುಗಳು ಉರುಳಿದರೂ ಊಟ ನಿದ್ದೆಗಳನ್ನು ಮರೆತು ಕುಳಿತುಕೊಳ್ಳುತಿದ್ದ. ಮರುಕ್ಷಣದಲ್ಲಿ ವ್ಯಾಪಾರ ಕ್ಷೇತ್ರದಲ್ಲಿನ ಮೋಸ ಅನ್ಯಾಯಗಳು ಮೈವೆತ್ತು ಗರಿತಳೆದು ಅಕ್ಷಿ ಪಟದ ಮುಂದೆ ಮೂಡಿ ಲಾಸ್ಯವಾಡಿದಾಗ "ಇಸ್ಸಿಸೀ" ಎನ್ನಿಸುತಿತ್ತು. ತಕ್ಷಣ "ನಾನು ಹಜ್ಜೆ ಹಾಕಿದ ಪಥವೇ ಸುಪಥ !" ಎಂದು ಹರ್ಷೋನ್ಮತ್ತನಾಗಿ ಕೂಗಿದುದೂ ಉಂಟು. ಅನಂತರ ಡಾ॥ ಘನಶ್ಯಾಮರ ಚಿತ್ರ ಮನದಲೆಯಲ್ಲಿ ಮೂಡಿ ನಿಂತು ಆಶೀರ್ವದಿಸಲು ಬಂದ ಹಿರಿಯ ವ್ಯಕ್ತಿಯಂತೆ ತೋರಿ ಅಘೋರ ಭಾವ ಪರವಶನಾಗಿ ಮೈಯೆಲ್ಲಾ ಸಂತಸದ ಬೀಡಾಗಿ ಉಲ್ಲಸಿತನಾಗಿ ಬಿಡುವ.

ಹಾಗೂ ಹೀಗೂ ದಿನಗಳ ಗಾಲಿಗಳುರುಳುತ್ತಿದ್ದಂತೆ ಅಘೋರ ಕಲಿಕೆಯ ಪಥದಲ್ಲಿ ಯೋಧನಂತೆ ಸಾಗತೊಡಗಿದ.

ಅಂದು ಡಿಸೆಕ್ಷನ್ ಥಿಯೇಟರಿನಲ್ಲಿ ಕಲಿಕೆಯ ಸಲುವಾಗಿ ಅನೇಕ ಹುಡುಗ ಹುಡುಗಿಯರು ಸೇರಿಕೊಂಡಿದ್ದರು. ಮೂರು ನಾಲ್ಕು ಮಂದಿಗೊಂದರಂತೆ ಹೆಣವನ್ನು ಒದಗಿಸಲಾಗಿತ್ತು. ಕೆಲವರು ದಿಟ್ಟತನದಿಂದ ಕೊಯ್ಯಲು ಕೈ ಹಚ್ಚಿದ್ದರೂ ಹೊಸದಾಗಿ ಬಂದಿದ್ದ ಹುಡುಗಿಯರಲ್ಲಿ ಒಂದೆರಡು ಮಂದಿ ಎದೆಯಳುಕಿ ಜ್ಞಾನ ತಪ್ಪಿ ದೊಪ್ಪನೆ ಬಿದ್ದರು. ಅವರನ್ನು ಉಪಚರಿಸಲು ತಕ್ಷಣ ಸೇವಿಕೆಯರು (Nurse) ಬಂದು ಎತ್ತಿಕೊಂಡು ಹೋದರು. ಅವರನ್ನೇ ನೋಡುತ್ತಾ ಅಣಕದ ನಗೆ ಬೀರಿ ಅಘೋರ ನುಡಿದ. "ಈ ಬಣ್ಣದ ಬೊಂಬೆಗಳಿಗೆ ಇದೆಲ್ಲಾ ಏಕೆ ಬೇಕು? ಅಪ್ಪ ಅಮ್ಮ ದುಡಿದುದನ್ನು ತಿಂದುಕೊಂಡು ಮನೆಯಲ್ಲಿ ಸುಖವಾಗಿ ಬಿದ್ದಿರಬಾರದೇ ?

ಹುಡುಗಿಯರ ಗುಂಪಿನಲ್ಲಿ ಗುಜುಗುಂಪಲು ಮೂಡಿತು. ಅನೇಕರಿಗೆ ಅಘೋರನ ಪ್ರತಿಕ್ರಿಯೆ ಸರಿಬೀಳಲಿಲ್ಲ. ಗುಂಪಿನ ಮಧ್ಯದಿಂದ ಈಚೆ ಬಂದ ಸೌಮಾ ಎಂದಳು "ನಿಮ್ಮ ಧೋರಣೆ ಸಭ್ಯರಿಗೆ ಹೇಳಿಸಿದುದಲ್ಲ."

"ನೋಡಿ ಸೌಮಾ, ನನ್ನ ಮಾತಿನಲ್ಲಿ ನಯವಿಲ್ಲವೆಂಬುದನ್ನು ನಿಮ್ಮಲ್ಲಿ ಯಾರೆಂದರೂ ಒಪ್ಪಿಕೊಳ್ಳುವೆ. ನನಗೆ ಮುದ್ದಾದ ಶೈಲಿಯಲ್ಲಿ ಮಾತಾಡಲು ಬರುವುದಿಲ್ಲ. ನನ್ನಿಂದ ನಿಮಗೆ ನೋವಾಗಿದ್ದರೆ ದಯವಿಟ್ಟು ಕ್ಷಮಿಸಿರಿ. ಹೆಣ್ಣಿನ–ಅಲ್ಲ, ಅಲ್ಲ. ಹೇಡಿಗಳ ಸ್ಥಾನ ಮನೆಯಲ್ಲಿ ಎಂಬ ಅಭಿಮತಕ್ಕೆ ನಾನು ತಲೆಬಾಗುವೆ."

"ಸರಿ ಬಿಡಿರಿ, ನಿಮ್ಮ ಅಭಿಪ್ರಾಯಕ್ಕೆ ನಾನು ಅಡ್ಡ ಬರಲಾರೆ. ಆದರೂ ತುಂಬಿದ ಕೊಡ ತುಳುಕುವುದು ಸರಿಯಲ್ಲ ಎಂದು ಹೇಳದೇ ವಿಧಿಯಿಲ್ಲ."

"ನಿಮ್ಮ ಮನಸ್ಸಿಗೆ ನೋವಾಗಿದ್ದರೆ ದಯವಿಟ್ಟು ಕ್ಷಮಿಸಿರಿ." ಎನ್ನುತ್ತ ಅಘೋರ ಕೈಜೋಡಿಸಿ ಬಿಟ್ಟ. ಸೌಮಾ ಮಾತು ಮುಂದುವರಿಸದೆ ಸುಮ್ಮನಾದಳು. ಹುಡುಗಿಯರಿಬ್ಬರು ಪ್ರಜ್ಞೆ ತಪ್ಪಿ ಬಿದ್ದೊಡನೆಯೇ ಹೆಣಗಳನ್ನು ಅಷ್ಟಕ್ಕೆ ಬಿಟ್ಟು ಅತ್ತ ಹೋಗಿದ್ದ ಹುಡುಗಿಯರು ಪುನಃ ಹಿಂದಿರುಗಿ ಬಂದು ತಮ್ಮ ತಮ್ಮ ಕಾರ್ಯಕಲಾಪಗಳಲ್ಲಿ ನಿರತರಾದರು. ಅಘೋರ ಕೈತೋಳಿನ

ನರವೊಂದನ್ನು ಅರಸುತ್ತಿದ್ದ. ಅದೇ ಹೆಣದ ತೊಡೆಯೊಂದನ್ನು ಕೊಯ್ದು ಅದರ ರೀತಿ ನೀತಿಗಳನ್ನು ಕಂಡು ಕೊಳ್ಳುತ್ತಿದ್ದ ಸೌಮಾ ಅತ್ತಿತ್ತ ನೋಡದೆ ತನ್ನ ಕೆಲಸದಲ್ಲಿ ಗಂಭೀರ ಗಮನೆಯಾಗಿದ್ದಳು.

ಅಘೋರ ಅರಸುತ್ತಿದ್ದ ನರ ಇನ್ನೇನು ಸಿಕ್ಕುವುದರಲ್ಲಿತ್ತು. ಅಷ್ಟರಲ್ಲಿ ಮುಂಗೈ ಮೇಲೆ ಸಣ್ಣದಾಗಿ ಏನೋ ಗುಳುಗುಳು ಹರಿದಾಡಿದಂತೆ ಭಾಸವಾಗಿ ಮನಸ್ಸಿಗೆ ಅಸಹ್ಯವಾಯಿತು. ಅದನ್ನು ಅಷ್ಟಕ್ಕೆ ಬಿಟ್ಟು ಕೈ ಕೊಡವಿಕೊಂಡ. ಪುನಃ ಕೊಯ್ಯಲು ಆರಂಭಿಸಿದಾಗಲೂ ಅದೇ ಅನುಭವವಾಯಿತು. ಹೆಣವು ಹುಳಿತಿದ್ದು ಆ ಕ್ರಿಮಿಗಳೇ ಹಾಗೆ ಕೈಮೇಲೆ ಓಡಾಡುತ್ತಿವೆ ಎಂಬ ಯೋಚನೆ ಬಂದು ಕಲಿಕೆಯನ್ನು ಅಷ್ಟಕ್ಕೇ ಬಿಟ್ಟುಕೊಟ್ಟು ಸುಮ್ಮನೆ ನಿಂತು ಬಿಟ್ಟ. ಅವನ ಗೋಳನ್ನು ನೋಡಲಾರದೆ ಸೌಮಾ ಕೇಳಿದಳು "ನಾನಿಷ್ಟು ಸಹಾಯ ಮಾಡಬಹುದೇ ?"

"ತುಂಬ ಉಪಕಾರವಾದೀತು," ಎಂದ ಅಘೋರ ತನ್ನ ಕೆಲಸವನ್ನು ಪುನಃ ಮುಂದುವರಿಸಿದ. ತುಸು ಹೊತ್ತು ಉರುಳಿತು. ಆ ದುರ್ವಾಸನೆ ಮನಸ್ಸಿಗೆ ಎಂದಿಲ್ಲದ ಅಹಿತವನ್ನು ನೀಡತೊಡಗಿ ಜಿಗುಪ್ಸೆ ಮೂಡಿ ಅವನು ಕೆಲಸವನ್ನು ಮುಂದುವರಿಸದಾದ. ಕಣ್ಣು ಮುಚ್ಚಿನಿಂತರೂ ದುರ್ವಾಸನೆ ಬೀರುವ ನಗ್ನ ಶರೀರಗಳ ವಿಕೃತ ರೂಪ ಅಕ್ಷಿಪಟದ ಮೇಲೆ ಅಚ್ಚಳಿಯದೆ ಉಳಿಯಬೇಕೇ ? ಅಘೋರ ಅಲ್ಲಿ ನಿಲ್ಲಲಾರದೆ ಯಾರಿಗೂ ಏನನ್ನೂ ಹೇಳದೆ ನೇರವಾಗಿ ಹೊರಬಿದ್ದ. ಅನೇಕ ಕಣ್ಣಾಲಿಗಳು ಅವನು ನಡೆದು ಹೋದ ರೀತಿಯನ್ನು ಅಚ್ಚರಿಯಿಂದ ನಿಟ್ಟಿಸಿ ನೋಡಿದವು. ಅನಂತರ ಎಲ್ಲರೂ ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಉತ್ಸಾಹದಿಂದ ಕೊಯ್ಯುತ್ತಿದ್ದ ಮದನ್ "ಅಘೋರ ಅಧೀರನಾದುದು ಹೇಗೆ ?" ಎಂದು ಅಚ್ಚರಿ ವ್ಯಕ್ತಪಡಿಸಿದ. ಎಲ್ಲರ ಮುಖದಲ್ಲೂ ಮುಸು ಮುಸು ನಗು ಲಾಸ್ಯವಾಡಿತು.

ಹೊರಬಂದ ಅಘೋರ ಕೈತೊಳೆದುಕೊಂಡು ಬಾಯಿ ಮುಕ್ಕಳಿಸಿ ಮುಖ ಮುಜ್ಜನ ಮಾಡಿ ನೀಳವಾದ ಉಸಿರು ಬಿಟ್ಟ. ಕಾಫಿಗಾಗಿ ಕ್ಯಾಂಟೀನಿಗೆ ಹೋಗಲೂ ಮನಸ್ಸಾಗಲಿಲ್ಲ. ಹೃದಯ ಭಾರವಾಗಿತ್ತು. ಜ್ಞಾನತಪ್ಪಿ ಬಿದ್ದ ಹುಡುಗಿಯರ ಬಗ್ಗೆ ಅಣಕದ ನುಡಿಗಳನ್ನಾಡಿದುದು ಈಗ ಎದೆಗೆ ಈಟಿಯಿಂದ ಇರಿದಂತಾಯಿತು. ಎದೆಯಾಳದಲ್ಲಿನ ತಳಮಳವನ್ನು ಹತ್ತಿಕ್ಕಲು

ಕಾರಿಡಾರಿನಲ್ಲಿ ಶತಪಥ ತಿರುಗತೊಡಗಿದ. ಹೊತ್ತು ಆವನಿಗರಿಯದಂತೆಯೇ ಉರುಳ ತೊಡಗಿತು. ಮನಸ್ಸು ಅಣಕಿಸಿತು. ವಿಧಿ ನಕ್ಕಿತು.

ಡಾ|| ಘನಶ್ಯಾಮ್ ಅದೇ ದಾರಿಯಲ್ಲಿ ಬಂದರು. ಅವರ ಹಿಂದೆ ಹತ್ತಾರು ಮಂದಿ ಡಾಕ್ಟರುಗಳಿದ್ದರು. ಬಿಳಿಯ ಕೋಟು ಸ್ಟೆತೊಸ್ಕೋಪಿನ ಕೊರಳ ಹಾರಗಳಿಂದ ಅಲಂಕೃತರಾದ ಅವರ ದಳ ಗೌರವಪೂರ್ಣವಾಗಿ ತೋರಿತು. ತಲೆ ಬಾಗಿದ.

"ಏನಪ್ಪಾ ?" ಎಂದರು ಡಾ|| ಘನಶ್ಯಾಮ್.

"ಏನೂ ಇಲ್ಲ, ಸುಮ್ಮನೆ."

"ಇಂದು ಕ್ಲಾಸ್ ಇರಲಿಲ್ಲವೇ ?"

"ಡಿಸೆಕ್ಷನ್ ಇತ್ತು."

"ಹೆದರಿ ಬಂದು ಬಿಟ್ಟೆಯೇನು ?" ಅವರು ಗಟ್ಟಿಯಾಗಿ ನಗುತ್ತಾ ಕೇಳಿದರು.

"ಇಲ್ಲ ; ಬೇಸರದಿಂದ."

"ಹುಡುಗಿಯರೆಲ್ಲಾ ಮಾಡುತ್ತಾ ಇದ್ದಾರೆ ! ನೀನಿಲ್ಲಿ ?"

ಅಘೋರ ತಲೆತಗ್ಗಿಸಿ ನಿಂತ ಮಾತಾಡಲಿಲ್ಲ. ತನ್ನ ಹೇಡಿತನ ತನಗೇ ಲಜ್ಜೆಯನ್ನು ಮೂಡಿಸಿತು. ಅವರ ಪ್ರತಿಕ್ರಿಯೆ ಏನೆಂಬುದನ್ನರಿಯಲು ಹುಬ್ಬೆತ್ತಿ ನೋಡಿ ತಕ್ಷಣ ತಲೆ ತಗ್ಗಿಸಿದ. ಎಲ್ಲಾ ಮುಖಗಳೂ ಗಹಗಹಿಸಿ ನಗುತ್ತಿವೆ ! ನೋಡಿದೊಡನೆ ತನ್ನೊಳಗೇ ತಾನು ಹುಗಿದು ಹೋಗು ವಂತಾಯಿತು. ಒಮ್ಮೆಲೆ ಹುಡುಗಿಗಿಂತ ಹುಡುಗಿಯಾಗಿ ಲಜ್ಜೆಯ ಭರದಲ್ಲಿ ಕೆಂಪು ಕೆಂಪಾಗಿ ಬಿಟ್ಟ.

"ಗಂಡಾಗಿ ಹುಟ್ಟಿ ಹೇಡಿಯಂತೆ ಬಾಳುವುದೇ ? ಒಂದೆರಡು ದಿನ ಮಾಡಿದರೆ ಸರಿಹೋಗುತ್ತೆ. ಹೋಗು." ಎಂದರು ಡಾ|| ಘನಶ್ಯಾಮ್.

ಹಿರಿಯರ ದಳ ಮುಂದುವರಿಯುತ್ತಲೂ ಅಘೋರ ಅಲ್ಲಿಂದ ನೇರವಾಗಿ ಡಿಸೆಕ್ಷನ್ ಥಿಯೇಟರಿಗೆ ಹೋದ. ಹೆಜ್ಜೆಯ ಸದ್ದನ್ನು ಕೇಳಿ ಅನೇಕ ಕಣ್ಣಾಲಿ ಗಳು ಇತ್ತ ಹೊರಳಿದುವು.

"ಬಾರಯ್ಯಾ, ಘೋರ, ! ನಿನಗೆ ಸುಸ್ವಾಗತ !" ಮದನ್‌ಮಿತಾಳಿ ತಿಳಿ ಹಾಸ್ಯದ ಚಟಾಕಿಯನ್ನು ಹಾರಿಸಿ ಸ್ವಾಗತಿಸಿದ. ಹುಡುಗಿಯರ ಮುಖ

ಗಳಲ್ಲಿ ನಗೆ ಮಲ್ಲಿಗೆ ಬಿರಿಯಿತು. ಅಘೋರ ಮಾತಾಡದೆ ತನ್ನ ಕೆಲಸವನ್ನು ಮುಂದುವರಿಸಿದ. ಆಗಲೇ ಸೌಮಾ ತನ್ನ ಕಲಿಕೆಯ ಜಾಡನ್ನು ಕಂಡು ಕೊಂಡಿದ್ದಳು. ಅವಳ ಉತ್ಸಾಹವನ್ನು ನೋಡು ನೋಡುತ್ತಾ ತನ್ನ ಕರ್ತವ್ಯದಲ್ಲಿ ತನ್ಮಯನಾದ. ಈ ಸಲ ತಾನು ಅರಸಬೇಕಾಗಿದ್ದ ನರ ಪ್ರಯಾಸ ವಿಲ್ಲದೇನೇ ದೊರೆಯಿತು. ಮೂಗಿಗೆ ವಾಸನೆ ಬಡಿಯುತ್ತಿದ್ದರೂ ಅದನ್ನು ಗಮನಿಸದೆ ಕಲಿಕೆಯನ್ನು ಮುಂದುವರಿಸಿದ. ಮತ್ಸ್ಯಗಂಧ ಮತ್ಸ್ಯಗಾರ ನಿಗೆ ಹಿತಕರವಾಗಿರುವಂತೆ ಕ್ರಮೇಣ ಈ ವಾಸನೆ ನನಗೆ ಹಿತಕರವಾಗಬಹು ದೇನೋ ಎನ್ನಿಸಿದಾಗ ತನ್ನಷ್ಟಕ್ಕೆ ತಾನೇ ನಗುವುಕ್ಕಿ ಬಂತು. ಚಾಕುವಿನ ಸಹಿತ ಕೈ ಸರಸರ ಓಡಾಡಿತು. ಚರಚರ ಕೊಯ್ದು ಮಾಂಸದ ಖಂಡ ಪೊದರು ಪೊದರಾಗಿ ಇಳಿ ಬಿದ್ದಿತು. ಹಾಗೇ ಯೋಚಿಸಿದ...ಒಂದು ವೇಳೆ ಈ ವ್ಯಕ್ತಿ ಜೀವಂತವಾಗಿದಿದ್ದದ್ದರೆ ? ಅಥವಾ ಇದರ ಪ್ರೇತ ನಮ್ಮನ್ನು ಗಮನಿಸುವಂತಿ ದ್ದರೆ ಪರಿಣಾಮ ಎಷ್ಟು ಕ್ರೂರವಾಗಿರುತಿತ್ತು ? ಪಾಪ, ಈ ಜಡದೇಹ ಯಾವುದನ್ನೂ ಗಮನಿಸದಿದೆ...ಎನ್ನಿಸಿದಾಗ ಹೃದಯ ಭಾರವಾಯಿತು. ಮರುಕ್ಷಣದಲ್ಲಿ ತಾನು ಯಾವುದೋ ಮಹಾ ಕಾರ್ಯದಲ್ಲಿ ನಿರತನಾಗಿರು ವಂತೆ ಭಾವಿಸಿ ಪ್ರಯತ್ನ ಪೂರ್ವಕವಾಗಿ ಮನೋವಿಪ್ಲವವನ್ನು ಹತ್ತಿಕ್ಕಿದ.

ಕ್ಯಾಂಟೀನಿನಲ್ಲಿ ದುಂಡನೆಯ ಮೇಜಿನ ಸುತ್ತ ಜಾನಕೀರಾಂ ಮದನ್ ವಿ ತಾಳಿ ಅಘೋರರು ಕಾಫಿಯ ಆಗಮನವನ್ನು ನಿರೀಕ್ಷಿಸುತ್ತಾ ಕುಳಿತಿದಾರೆ. ತುಸು ಹೊತ್ತಿನೊಳಗಾಗಿ ಹಬೆಯೇಳುವ ಬಿಸಿ ಬಿಸಿ ಕಾಫಿ ಆಗಮಿಸಿತು. ಅದು ತಣ್ಣಗಾಗುವ ಮುನ್ನ ಹರಟೆಗೊಂದು ವಿಷಯವೂ ದೊರೆಯಿತು. ಅಘೋರ ಕೇಳಿದ "ಸೌಮಾಗೆ ಮದುವೆಯಾಗಿದೆಯಂತೆ ನಿಮಗೆ ಗೊತ್ತೆ ?"

"ನನಗೂ ಯಾರೋ ಹಾಗೆಂದರು ಅಘೋರ್."

"ಗಂಡನನ್ನು ಬಿಟ್ಟು ಬಂದಿದ್ದಾಳಂತೆ !"

"ಅಥವಾ ಅವನೇ ಬಿಟ್ಟಿದ್ದರೂ ಬಿಟ್ಟಿರಬಹುದು !"

"ಅವಳ ಧೈರ್ಯ ನೋಡಿದರೆ ಅವಳೇ ಬಿಟ್ಟಿದ್ದಿರಲಿಕ್ಕೂ ಸಾಕು !"

"ಡಾ|| ಘನಶ್ಯಾಮರ ಸಂಬಂಧಿಯಂತೆ ಅವಳು."

"ಗಂಡನನ್ನು ಏಕೆ ಬಿಟ್ಟಳೋ ?"

"ಅವನೆಲ್ಲೋ ಪೆದ್ದ ಇರಬೇಕು."

"ಗಂಡನೇ ಅವಳನ್ನು ಓದಲು ಪ್ರೋತ್ಸಾಹಿಸಿರಬಾರದೇಕೆ ?"

"ಇಲ್ಲವೇ ಇಲ್ಲ."

"ಏನೆಂದರೂ ಕಾಲ ಕೆಟ್ಟು ಹೋಗಿದೆ ಬಿಡು."

ಕಾಫಿಯಾರಿತು. ಮೂವರ ತುಟಿಗಳೂ ಲೋಟಿಯನ್ನು ನಲ್ಮೆಯಿಂದ ಒತ್ತಿದುವು. ಬಾಗಿಲ ಕಡೆಯಿಂದ ಕಿಲಕಿಲನೆ ನಗುವಿನ ನಿನಾದದೊಂದಿಗೆ ನಾಲ್ಕಾರು ಮಂದಿ ತರುಣಿಯರ ಇನಿದನಿಗಳೂ ಕೇಳಿಬಂದುವು. ಮೂವರ ದಿಟ್ಟಿಯೂ ಅತ್ತ ಹೊರಳಿತು. ಓರಗೆಯ ಹುಡುಗಿಯರು ಕಾಫಿಯ ಚಪಲತೆಯಿಂದ ಅಲ್ಲಿಗೆ ಬಂದಿದ್ದರು. ಅವರನ್ನು ನೋಡು ನೋಡುತ್ತಾ ಅಘೋರ ಹಲ್ಕಿರಿದ–"ಹುಡುಗಿಯರಿಗೆ ಇಷ್ಟೊಂದು ಕಾಫಿಯ ಚಟವಿದ್ದರೆ ಮುಗಿದೇ ಹೋಯಿತು. ಮುಂದೆ ಅವರ ಗಂಡಂದಿರಿಗೆ ಕಾಫಿ ದೊರಕಿದಂತೆಯೇ ?"

ಎಲ್ಲರ ಮುಖದಲ್ಲೂ ನಗೆ ಮೆಲ್ಲಗೆ ಅರಳಿತು. ಹುಡುಗಿಯರ ದಂಡು ಒಳ ಬಂದು ಪಕ್ಕದ ಮೇಜನ್ನು ಆಕ್ರಮಿಸಿತು. ಮದನ್ ಅವರ ಕಡೆ ದೃಷ್ಟಿ ಬೀರಿ ತಲೆಯಲ್ಲಾಡಿಸುತ್ತಾ ಹೇಳಿದ "ಕಾಫಿ ಚೆನ್ನಾಗಿಲ್ಲ."

ಏನೂ ಮಾಡುವುದೆಂದು ಹುಡುಗಿಯರು ಒಬ್ಬರ ಮುಖ ಒಬ್ಬರು ನೋಡಿಕೊಂಡರು.

"ಎಲ್ಲರೂ ಅಲ್ಲೇ ಕುಳಿತು ಬಿಡುವುದೇ ? ಒಬ್ಬರಾದರೂ ನಮ್ಮ ಕೂಟಕ್ಕೆ ಕೂಡಿರಿ. ಹಾಗೆ ದೂರ ಕುಳಿತುಕೊಳ್ಳುವುದು ನಮಗೆ ಅಗೌರವ ತೋರಿದಂತಾಗುತ್ತೆ. ಒಂದು ಕುರ್ಚಿ ಖಾಲಿ ಇದೆ. ಯಾರಾದರೂ ಬನ್ನಿರಿ." ಜಾನಕಿರಾಂ ಆಹ್ವಾನ ನೀಡಿದ.

ಹುಡುಗಿಯರು ಒಬ್ಬರ ಮುಖ ಒಬ್ಬರು ನೋಡಿಕೊಂಡರು. ನಸು ನಗುತ್ತಾ "ನಾನವರ ಕೂಟಕ್ಕೆ ಕೂಡಿಕೊಳ್ಳುವೆ." ಎಂದಳು ಸೌಮಾ ಇತರ ಹುಡುಗಿಯರು ಹುಬ್ಬು ಹಾರಿಸಿ ಸಮ್ಮತಿ ಸೂಚಿಸಿದರು. ಸೌಮಾ ಎದ್ದು ಬಂದು ಮದನನ ಪಕ್ಕದಲ್ಲಿದ್ದ ಕುರ್ಚಿಯಲ್ಲಿ ಕುಳಿತುಕೊಂಡಳು. ಮರು ಕ್ಷಣದಲ್ಲಿ ಎದೆಯಲ್ಲಿನ ಅಳುಕು ತನುಮನಗಳನ್ನು ವ್ಯಾಪಿಸಿ ಮುಖ ಒಂದೇ ಸಮನೆ ಬೆವರ ಹತ್ತಿತ್ತು. ನಸುನಕ್ಕು ಅಘೋರ ಅವಳನ್ನು ಕೇಳಿದ "ನೀವೇನು ಕುಡಿಯುತ್ತೀರಿ ?"

"ಚಹ." ಇನಿದನಿ ಹೊರ ಬೀಳಲಾರದೆ ಹೊರಬಿತ್ತು.

ಚಹ ಬರುವವರೆಗೆ ಮೂವರೂ ಕಾಫಿ ಕುಡಿಯದೆ ಕುಳಿತರು. ಸೌಮಾ ಕರವಸ್ತ್ರದಿಂದ ಮುಖದ ಮೇಲಿನ ಬೆವರಿನ ತುಂತುರುಗಳನ್ನು ಒರಿಸಿಕೊಂಡ ನಂತರ ಕೈಬೆರಳುಗಳನ್ನು ಒರಿಸಿಕೊಳ್ಳಹತ್ತಿದಳು. ಮೂವರೂ ಅವಳ ಮುಖದ ಕಡೆ ದಿಟ್ಟಿಸುವ ಧೈರ್ಯ ಮಾಡದೆ ತಲೆಬಾಗಿ ಕುಳಿತರು. ನಿಮಿಷ ಕಾಲ ಅವಳ ಸುಂದರ ಬೆರಳ ಚಿನ್ನಾಟದ ಕಡೆ ದಿಟ್ಟಿಸಿ ಕ್ಷಣಕಾಲ ಸಂಕೋಚ ವನ್ನು ಬದಿಗಿಟ್ಟು ಮದನ್–"ಸೌಮಾ, ನಿಮಗೆ ಹಸ್ತ ಸಾಮುದ್ರಿಕೆಯಲ್ಲಿ ನಂಬುಗೆ ಇದ್ದರೆ ಹೇಳಿರಿ. ಅಂಕಲ್ ಜಾರ್ಜ ಅದರಲ್ಲಿ ನುರಿತ ವ್ಯಕ್ತಿ."

ಸೌಮಾ ತುಸು ಹೊತ್ತು ಅವಾಕ್ಕಾದಳು. ಏನು ಹೇಳಬೇಕೋ ಗೊತ್ತಾಗಲಿಲ್ಲ. ತೋರಿಕೊಳ್ಳುವುದು ಸರಿಯಲ್ಲ ಎಂಬ ನಿರ್ಧಾರಕ್ಕೆ ಬರುವುದರೊಳಗಾಗಿ ಅಘೋರ ತುಂಟ ನಗೆ ಬೀರಿ–"ಅವನ ಬುದ್ಧಿ ಬಲು ಸೂಕ್ಷ್ಮ. ನೀವು ತೋರಿಸಿಕೊಳ್ಳಲಿಚ್ಛಿಸದಿದ್ದರೂ ನಿಮ್ಮ ಹಸ್ತರೇಖೆ ಗಳನ್ನಾಗಲೇ ಅವನು ಕಂಡುಕೊಂಡಿದ್ದಾನೆ. ಅಂದ ಮೇಲೆ ಮುಚ್ಚಿಟ್ಟೇನು ಪ್ರಯೋಜನ ?"

ತುಂಟ ನಗು ಮೂವರ ಮುಖದ ಮೇಲೂ ನಲಿಯ ತೊಡಗಿತು. ಸೌಮಾ ತಕ್ಷಣ ಜಾನಕೀರಾಮನ ಕಡೆ ಕಣ್ಣು ಹೊರಳಿಸಿದಳು. ನಿಜ ವಾಗಿಯೂ ಅವನ ದಿಟ್ಟಿ ತನ್ನ ಹಸ್ತದ ಮೇಲೆ ಹರಿದಿತ್ತು. ಬೆವರಿನಿಂದ ತೊಯ್ದ ಹಸ್ತವನ್ನು ಕರವಸ್ತ್ರದಿಂದ ಒರಿಸಿಕೊಳ್ಳಲು ಬಿಡಿಸಿ ಹಿಡಿದು ಕೊಂಡಿದ್ದ ಅವಳು ತಕ್ಷಣ ಮುಚ್ಚಿಕೊಂಡಳು. ಮೂವರೂ ಕಿಲಕಿಲನೆ ನಗ ತೊಡಗಿದರು. ಅವಳಿಗೀಗ ತುಸು ಫಜೀತಿಗಿಟ್ಟುಕೊಂಡಿತು....ಹೇಗೂ ನೋಡಿಬಿಟ್ಟಿದ್ದಾನೆ ಎಂದ ಮೇಲೆ ತೋರಿಸಿಕೊಳ್ಳುವುದೂ ಕ್ಷೇಮ...ಎಂಬ ನಿರ್ಧಾರಕ್ಕೆ ಬಂದ ಅವಳು ಒಂದು ಘಳಿಗೆ ಯೋಚಿಸಿ ಹಸ್ತವನ್ನು ಮುಂದಕ್ಕೆ ನೀಡಿ ಹೇಳಿದಳು "ಹಾಗಿದ್ದರೆ ನೋಡಿರಿ. ನೀವು ಕೆಟ್ಟದ್ದು ಹೇಳಿದರೂ ಸರಿಯೆ. ಒಳ್ಳೆಯದು ಹೇಳಿದರೂ ಸರಿಯೆ. ಎರಡನ್ನೂ ಸಂತೋಷದಿಂದ ಸ್ವೀಕರಿಸುವೆ."

ಇಬ್ಬರಿಗೂ ಮಧ್ಯೆ ಕುರ್ಚಿಯಲ್ಲಿ ಕುಳಿತಿದ್ದ ಅಘೋರ–"ಈ ಕೊಳಕು ಮೇಜಿನ ಮೇಲೇಕೆ ಹಸ್ತವನ್ನಿಡುತ್ತೀರಿ ? ಅದರಲ್ಲಿ ಇನ್ನೆಷ್ಟು ಬಗೆಯ

ಕ್ರಿಮಿಗಳಿವೆಯೋ ಏನೋ." ಎದ್ದು ನಿಂತು ಪುನಃ ಅಂದ "ಜರ್ಾ ಪಕ್ಕದಲ್ಲಿ ಕುಳಿತರೆ ನೋಡಲು ಅನುಕೂಲವಾಗುತ್ತದೆ. ನಾನು ಎದುರುಗಡೆ ಕುಳಿತು ಕೊಳ್ಳುವೆ."

ನುಡಿ ಕೇಳಿ ಸೌಮಾ ಸಮ್ಮತಿಸಿದಳು. ಜಾನಕೀರಾಂ ಮತ್ತು ಅಘೋರರು ಸ್ಥಳ ಬದಲಾಯಿಸಿಕೊಂಡರು. ಅರ್ಧ ಕುಡಿದಿದ್ದ ತಮ್ಮ ತಮ್ಮ ಕಾಫಿಯನ್ನೂ ಮರೆಯಲಿಲ್ಲ. ಸೌಮಾಳಿಗೆ ಚಹ ಬಂದಿತು. ಅವಳು ಎಡಗೈಯಲ್ಲಿ ಚಹ ತೆಗೆದುಕೊಂಡು ಬಲಗೈಯನ್ನು ಜಾನಕೀರಾಮನ ಮುಂದೆ ಹಿಡಿದಳು. ಅವನು ಸೂಕ್ಷ್ಮವಾಗಿ ನೋಡತೊಡಗಿದ. ಏನೂ ಹೇಳದೆ ನೋಡುತ್ತಲೇ ಕುಳಿತಿದ್ದ ಅವನ ರೀತಿ ಎಲ್ಲರ ಕುತೂಹಲವನ್ನೂ ಮೆಲ್ಲನೆ ಕೆರಳಿಸುತ್ತಿತ್ತು. ನೋಡು ನೋಡುತ್ತಾ ಜಾನಕೀರಾಂ "ನೀವು ಹಿಡಿದಿರುವ ರೀತಿ ಸರಿಯಾಗಿಲ್ಲ. ನಾನೊಂದಿಷ್ಟು ನಿಮ್ಮ ಕೈಯನ್ನು ಹಿಡಿದುಕೊಂಡು ನೋಡಬಹುದೇ ?" ಎಂದು ಅವಳ ಅಪ್ಪಣೆ ಕೇಳಿದ. ನೋಟ ಅವಳ ಮುಖ ಮುದ್ರೆಯನ್ನು ಕ್ಷಣ ಕಾಲ ನಿರ್ಭಯದಿಂದ ನಿಟ್ಟಿಸಿತು.

ಅವಳು ಮಾತಾಡದೆ ತಲೆಯಲ್ಲಾಡಿಸುತ್ತಾ ಆಗಬಹುದೆಂದು ಸಮ್ಮತಿ ಸೂಸಿದಳು. ಅವಳ ಅರಳೆಯಂತ ಮೃದುವಾದ ಹೂ ಹಸ್ತವನ್ನು ತನ್ನ ಒರಟು ಬೆರಳುಗಳಿಂದ ಹಿಡಿದುಕೊಂಡು ಅತ್ತಿತ್ತ ತಿರುಗಿಸಿ ನೋಡ ತೊಡಗುತ್ತಲೂ ಮದನ್ ನಕ್ಕು ನುಡಿದ "ಅಂಕಲ್ ಜರ್ಾ ಅದೃಷ್ಟಶಾಲಿ ! ಒಂದಲ್ಲ ಒಂದು ಹೂ ಹಸ್ತಗಳ ಸ್ಪರ್ಶ ಸುಲಭವಾಗಿ ಲಭ್ಯವಾಗುತ್ತೆ."

"ಸೌಂದರ್ಯ ನಿಧಿಯಾದ ಮದನನ ಮುಂದೆ ಜರ್ಾ ಅದೃಷ್ಟಶಾಲಿಯಾಗುವುದು ಹೇಗೆ ?"

"ಓ ! ನಿಮ್ಮಿಬ್ಬರ ನಡುವೆ ನಾನೇನಾಗಬೇಡ ? ನಿಮ್ಮ ಜೋತಿಷ್ಯವೂ ಬೇಡ, ಏನೂ ಬೇಡ." ಎಂದ ಸೌಮಾ ಸರಕ್ಕನೆ ಕೈಯನ್ನು ಹಿಂದಕ್ಕೆ ಎಳೆದು ಕೊಂಡಳು.

ಅದುವರೆವಿಗೂ ಮಾತಾಡದಿದ್ದ ಜಾನಕೀರಾಂ ನಸುನಕ್ಕು ನುಡಿದ. "ದಯವಿಟ್ಟು ಕ್ಷಮಿಸಿ, ನೀವು ಜೀವನದಲ್ಲಿ ಅಸುಖಿ. ವೃತ್ತಿಯಲ್ಲಿ ವಿಜಯಶ್ರೀ ನಿಮಗೊಲಿಯಲಿದ್ದಾಳೆ."

"ಸರಿ, ಮುಂದೆ ಹೇಳಿರಿ."

"ನಾನು ಕಂಡುಕೊಂಡದ್ದು ಅಷ್ಟೆ. ಅಷ್ಟರೊಳಗಾಗಿ ನೀವು ಕೈಯನ್ನು ಎಳೆದುಕೊಂಡಿರಿ." ಜಾನಕೀರಾಂ ನುಡಿದ. ದನಿಯಲ್ಲಿ ಗಾಂಭೀರ್ಯವಿತ್ತು.

ಚಹದ ಬಸಿಯನ್ನು ಮೇಜಿನ ಮೇಲಿಟ್ಟು ದುಡ್ಡಿಗಾಗಿ ಅವಳು ಪರ್ಸಿಗೆ ಕೈ ಹಾಕಿದಾಗ ತಡೆದು ಅಘೋರ ಹೇಳಿದ "ನಾನಾಗಲೇ ಕೊಟ್ಟಿದ್ದೇನೆ. ಇನ್ನೊಮ್ಮೆ ನಿಮ್ಮಿಂದ ಅದರ ಬಡ್ಡಿ ಸಹಿತ ಬರಮಾಡಿಕೊಳ್ಳುವೆ."

"ಥ್ಯಾಂಕ್ಸ್ !" ಎಂದೆನ್ನುತ್ತಾ ಎದ್ದು ನಿಂತ ಸೌಮಾ ಜಾನಕೀ ರಾಮುನಿಗೆಂದಳು "ಇಂದಿಗೆ ನಿಮ್ಮ ಭವಿಷ್ಯ ಸಾಕು ಅಂಕಲ್ !"

ಎಲ್ಲರೂ ಕಿಲಕಿಲನೆ ನಗ ತೊಡಗಿದರು. ಅವಳು ಜಾನಕೀರಾಮುನಿಗೆ ವಂದನೆಯನ್ನರ್ಪಿಸಿ, ಅಲ್ಲಿಂದ ಹೋಗಿ ಗೆಳತಿಯರ ಕೂಟದಲ್ಲಿ ಕೂಡಿ ಕೊಂಡಳು.

ಅಧ್ಯಾಯ

೬

ಗೆಳೆಯರ ತಂಡದೊಂದಿಗೆ ಅಘೋರ ಆಸ್ಪತ್ರೆಯ ಹಾದಿ ಹಿಡಿದಿದ್ದ. ಬೆಳಗಿನ ಹವಾ ಹಿತಕರವಾಗಿತ್ತು. ಬಾಲರವಿ ಆದೇ ತಾನೆ ಬಾನೇರುತ್ತಿದ್ದ. ಗಿಡಮರಗಳ ಮೇಲೆ ಜಿಗಿದು ಹಾರುತ್ತಾ ಉಲಿಯುವ ಪಕ್ಷಿಗಳ ಕಲಕಲರವ ಕಿವಿಗಿಂಪಾಗಿದ್ದರೂ ನಡುನಡುವೆ ಕೇಳಿಬರುತ್ತಿದ್ದ ಕಾಗೆಗಳ ಕರ್ಕಶ ಕೂಗೂ ಮನಸ್ಸನ್ನು ಈಟಿಯಂತೆ ಇರಿಯುತ್ತಿತ್ತು. ಅದನ್ನೇ ಯೋಚಿಸುತ್ತಾ ಅಘೋರ–"ನಮ್ಮವರಿಗೆ ಸುಖೀ ರಾಜ್ಯವನ್ನು ಕಾಣುವ ಯೋಗ ಇನ್ನೊಂದು ಶತಮಾನಕ್ಕೂ ಬರಲಾರದು. ನಮ್ಮ ದೇಶ ನಾನಾ ಉಪದ್ರವಗಳ ಬೀಡಾಗಿದೆ. ಆಳುವವರು ವಿಶಾಲವಾಗಿ ಕಣ್ತೆರೆಯದ ಹೊರತು ದೇಶದ ಕ್ಷಿಪ್ರ ಸುಧಾರಣೆ ಸಾಧ್ಯವೇ ಇಲ್ಲ." ದನಿಯಲ್ಲಿ ದುಗುಡವಿತ್ತು.

"ನೀನೇ ಒಮ್ಮೆ ಆಳುವವರ ಸ್ಥಾನ ಆಕ್ರಮಿಸಿಕೊ. ನಾವೆಲ್ಲಾ ನಿನಗೆ ಏನೇನು ಅನುಕೂಲ ಬೇಕೋ ಮಾಡಿ ಕೊಡುತ್ತೇವೆ." ಜಾನಕೀರಾಮನೆಂದ.

"ಜರ್ಕ್ ! ನಿಜಕ್ಕೂ ಹೇಳುವೆ ಕೇಳು. ಹಿಂದೂಸ್ಥಾನದಲ್ಲಿ ಕಲ್ಲು ಮಣ್ಣು ಬೆಂಕಿ ನೀರು ಗಾಳಿ ಪ್ರಾಣಿ ಪಕ್ಷಿ ಮನುಷ್ಯ ಹಾವು ಗಿಡ ಮರ ಎಲ್ಲರೂ ಪೂಜನೀಯರೇ | ಅಂದ ಮೇಲೆ ರೂಲ್ಸ್ ಬಾಳುವುದಾದರೂ ಹೇಗೆ? ನೀನೇ ಯೋಚಿಸು : ಡಿಕ್ಟೇಟರ್‌ಷಿಪ್ ಬಂದ ಹೊರತು ನಾವು ನಮ್ಮ ಜೀವಿತ ದಲ್ಲಿ ಸುಧಾರಿಸಿಕೊಳ್ಳುತ್ತೇವೆಂಬುದು ಕನಸಿನ ಮಾತು. ಪಾಶ್ಚಾತ್ಯ ದೇಶಗಳ ಕಡೆ ನೋಡು, ಹೇಗೆ ಅವರು ತೀವ್ರಗತಿಯಲ್ಲಿ ಮುಂದುವರಿಯುತಿದ್ದಾರೆ ? ಆ ಹಿರಿಮೆ ಇಲ್ಲದಿದ್ದರೆ ಮನುಷ್ಯನಾಗಿ ಹುಟ್ಟಿ ಏನು ಪ್ರಯೋಜನ ?"

"ಅಲ್ಲಿಯ ಕಾಲ ದೇಶ ವಾತಾವರಣ ಧರ್ಮ ಒಂದಕ್ಕೊಂದು ಹೊಂದಿ ಕೊಂಡಿವೆ. ಅವರು ಧರ್ಮಚ್ಛೇದನಮಾಡಿ ಮುಂದುವರಿಯುತ್ತಿಲ್ಲ ಘೋರ್!"

"ಏನೇ ಇರಲಿ, ನಮ್ಮ ಪ್ರಗತಿ ನಮ್ಮ ಕೈಯಲ್ಲಿದೆ."

"ಅಷ್ಟೊಂದು ಸುಲಭವಾಗಿ ಭಾವಿಸಬೇಡ ಮಗೂ ?"

"ನಾವು ವಿಧಾತನ ಕೈಗೊಂಬೆಗಳು."

"ನಮ್ಮಿಂದ ಏನೂ ಆಗುವುದಿಲ್ಲ. ನಾವು ನಿಮಿತ್ತ ಮಾತ್ರ."

"ಕೆಲಸ ಮಾಡುವುದು ಮಾತಾಡಿದಷ್ಟು ಸುಲಭವಲ್ಲ ಘೋರ್ !"

ಓ ! ಎಲ್ಲರೂ ವಯೋವೃದ್ಧರಂತೆ ಮಾತಾಡುತಿದ್ದೀರಿ !"

ಒಡನೆ ಕಿಲಕಿಲ ನಗುವಿನಲೆಯೆದ್ದಿತು. ಹುಡುಗರು ಮುಂದುವರಿದರು. ನಸು ದೂರದಲ್ಲಿ-ಹೆಮ್ಮರಗಳ ಹಿಂಬದಿಯಲ್ಲಿ ಕಣ್ಣಿಗೆಸೆಯುತಿದ್ದ ರಾಣೀ ಜಗತ್ತಾರಣೀ ಆಸ್ಪತ್ರೆ ವಿರಾಟ್ ಪುರುಷನಂತೆ ತೋರುತಿತ್ತು–ಅಲ್ಲ–ವಿಶಾಲವಾದ ಭೂ ಪ್ರದೇಶವನ್ನು ಹೊಂದಿದ್ದ ಅದು ಮೈಲುದ್ದಕ್ಕೆ ಹಬ್ಬಿ ಬಹು ಮಕ್ಕಳ ತಾಯಿಯಂತೆ ಗೌರವ ಪೂರ್ಣವಾಗಿ ಕಂಗೊಳಿಸುತಿತ್ತು. ಮೂವರೂ ಪ್ರಾಕಾರದ ಬಾಗಿಲನ್ನು ದಾಟಿ ಆವರಣಕ್ಕೆ ಕಾಲಿಟ್ಟರು. ರಾಣೀ ಜಗತ್ತಾರಣೀ ಆಸ್ಪತ್ರೆಯು ಸಮಸ್ತ ರೋಗಿಗಳಿಗೂ ಆಸರೆ ನೀಡಿದ ಧರ್ಮದೇವತೆ. ಒಂದೆಡೆ ಮಕ್ಕಳ ವಿಭಾಗ. ಇನ್ನೊಂದೆಡೆ ಸ್ತ್ರೀಯರ ವಿಭಾಗ. ಮಧ್ಯೆ ಪುರುಷರ ವಿಭಾಗ. ಏನಿಲ್ಲೆಂದರೂ ನೂರಾರು ಮಂದಿ ಡಾಕ್ಟರುಗಳು ಕೆಲಸ ಮಾಡುತ್ತಿದ್ದರೂ ಮುಗಿಯಲಾರದಷ್ಟು ಕೆಲಸದ ರಾಶಿ. ಡಾಕ್ಟರುಗಳ ಮತ್ತು ಸೇವಿಕೆ (Nurse) ಯರ ದೈನಂದಿನ ಕೆಲಸ ಕಾರ್ಯಗಳನ್ನು ಗಮನಿಸಲು ಮೈಯೆಲ್ಲಾ ಮನಸ್ಸಾಗುತಿತ್ತು–ವಿದ್ಯಾರ್ಥಿ ವೃಂದ.

ಹುಡುಗರು ಮೆಟ್ಟಿಲನ್ನು ಹತ್ತಿ ದೊಡ್ಡ ಸಭಾಂಗಣವನ್ನು ದಾಟಿ ಕಾರಿಡಾರಿನ ಮೂಲಕ ಡಾ|| ಅಬ್ದುಲ್‌ಗಫಾರ್‌ರವರ ಯೂನಿಟ್ ಕಡೆ ಹೆಜ್ಜೆ ಹಾಕಿದರು. ಹಾದಿಯುದ್ದಕ್ಕೂ ನರಳುವವರ ನರಳುವಿಕೆ ಅಳುವವರ ಕ್ರಂದನ ಚೀರುವವರ ಚೀರುದನಿಯೊಂದಿಗೆ ಔಷಧಿ ಲೋಷನ್‌ಗಳ ವಾಸನೆಯು ಬೆರತು ಕಿವಿ ಮೂಗುಗಳಿಗೆ ಕರ್ಕಶವಾಗಿದ್ದರೂ ಶಾರೀರಿಕ ವಿಜ್ಞಾನವನ್ನು ಅಭ್ಯಸಿಸುವ ಉತ್ಸಾಹ ಮೈಮನಸ್ಸುಗಳಿಗೆ ಚೇತನವನ್ನೂಡಿಸುತ್ತದೆ. ಪಾದರಕ್ಷೆಗಳ ಪಟಪಟ ಸದ್ದು ಮಾಡುತ್ತಾ ವಿದ್ಯಾರ್ಥಿಗಳ ತಂಡ ಮುಂದುವರಿಯುತ್ತಿದ್ದಂತೆ ಮದನ್‌ಮೀತಾಳಿ–"ಇಂದು ನಮ್ಮ ಬೀದಿಯಲ್ಲಿ ಹಾದಿಗರೊಬ್ಬರಿಗೆ ಡಿಕ್ಕಿ ಹೊಡೆದ ಕಾರು ನಿಲ್ಲದೆ ಹೊರಟು ಹೋಗಿದೆ. ಅವರಿಗೆ ಪ್ರಜ್ಞೆ ಇಲ್ಲದಿರುವುದರಿಂದ ಯಾರೆಂಬುದೇ ತಿಳಿಯುವಂತಿಲ್ಲ. ಅವರನ್ನು ನೋಡಿದರೆ 'ಪಾಪ' ಎನ್ನಿ

ಸುತ್ತೆ." ದನಿಯಲ್ಲಿ ಅನುಕಂಪವಿತ್ತು. ವ್ಯಸನದ ಕಪ್ಪುಛಾಯೆ ಮುಖದಲ್ಲಿ ಸುಳಿದಳಿಯಿತು.

"ದಿನೇ ದಿನೇ ನಮ್ಮ ದೇಶದ ರೀತಿ ನೀತಿಗಳು ಪತನ ಹೊಂದುತ್ತಿವೆ."

"ನೋಡು ! ಇಂಥ ಜನರನ್ನು ಸರಿಮಾಡುವುದೆಂದರೆ ಡಿಕ್ಟೇಟರ್‌ಷಿಪ್ ಬರಲೇಬೇಕು."

"ಸರಿ ; ನಿನ್ನ ಭಾಷಣವನ್ನು ಇಲ್ಲಿ–ಆಸ್ಪತ್ರೆಯಲ್ಲಿ–ಶುರುಮಾಡ ಬೇಡಪ್ಪಾ !" ಮದನ್‌ಮಿತಾಳಿಯ ದನಿ ಹೊರ ಬೀಳುತ್ತಲೂ ಎಲ್ಲರ ಮುಖ ದಲ್ಲೂ ನಸು ನಗು ಮೂಡಿತು. ಅಘೋರ ನಕ್ಕು ಸುಮ್ಮನಾದ. ಎದುರು ಗಡೆಯಿಂದ ರಾತ್ರಿಯ ಡ್ಯೂಟಿ ಮುಗಿಸಿ ಹೊರ ಹೋಗಲಿದ್ದ ನೂರಾರು ಮಂದಿ ಶ್ವೇತ ವಸ್ತ್ರಧಾರಿಣಿಯರು ಮಾತಿನ ಮೋಡಿಯೊಂದಿಗೆ ಎಳೆ ನಗುವಿನ ಹೊನಲನ್ನು ಹರಿಸುತ್ತಾ ನಡೆದಿದ್ದರು–ಕಾರಿಡಾರಿನುದ್ದಕ್ಕೂ ಹಾಲಿನ ಪ್ರವಾಹ ಪ್ರವಹಿಸಿದಂತೆ !

ಅಘೋರ ಬಾಗಿದ ತಲೆಯೆತ್ತದೆ "Hush ! silence please." ಎಂದ.

ಆ ಹುಡುಗಿಯರ ದಳ ಸಾಲಾಗಿ ಸಾಗಿ ಹೋದಮೇಲೆ ಸುಧೀರ್ ಕೇಳಿದ "ಪಾಪ, ಅವರ ಮೇಲೇಕೆ ಬಿತ್ತು ನಿನ್ನ ವಕ್ರದೃಷ್ಟಿ ?"

"ಇದು ಆಸ್ಪತ್ರೆ !"

ಕಾರಿಡಾರಿನಲ್ಲಿ ತುತ್ತ ತುದಿಯಲ್ಲಿ ಇತ್ತ ಕಡೆ ಬರುತ್ತಿದ್ದ ಡಾ||ಭಾರ್ಗವಾ ಡಾ|| ರೆಹಮಾನ್ ಡಾ|| ಘನಶ್ಯಾಮ್ ರವರನ್ನು ಕಾಣುತ್ತಲೂ ಹುಡುಗರ ದಳ ತಲೆಬಾಗಿ ಮುಂದುವರಿಯಿತು. ಅವರು ಹತ್ತಿರ ಬರುತ್ತಲೂ ಏಕ ಕಂಠದಿಂದ ಹುಡುಗರ ದನಿ ಹೊರಬಿತ್ತು "ನಮಸ್ಕಾರ ಸಾರ್ !"

ಡಾ|| ಭಾರ್ಗವಾ ಕೇಳಿದರು "ಎಲ್ಲಿಗೆ ಹೊರಟಿದ್ದೀರಿ ?"

"ಡಾ|| ಅಬ್ದುಲ್ ಗಫಾರರ ಕ್ಲಿನಿಕ್ ಇದೆ."

"ಓಹೋ ! ಅವರು ನಿಮಗೆ ಸರಿಯಾದ ಭಾಷಣ ಮಾಡಬಲ್ಲರು !"

ಹುಡುಗರು ಹಿರಿಯರಿಗೆ ವಂದಿಸಿ ಮುಂದುವರಿದರು. ಎರಡನೆಯ ವಿಭಾಗದಿಂದ ಬಂದ ಹುಡುಗಿಯರ ತಂಡವೂ ಅವರನ್ನು ಹಿಂಬಾಲಿಸಿತು. ಹತ್ತು ಹೆಜ್ಜೆ ಹೋಗುವುದರೊಳಗಾಗಿ ಥನ್! ಥನ್! ಥನ್! ಥನ್! ಘಂಟಾ

ನಿನಾದ ಸುಪ್ತವಾಗಿದ್ದ ಚೇತನ ಸಮಸ್ತವನ್ನೂ ಹೊಡೆದೆಬ್ಬಿಸುವಂತೆ ಮೊಳಗಿತು. ಕೋಡ್ ನಂಬರ್ ಒಂಭತ್ತು ಅಪಾಯದ ಸುದ್ದಿಯನ್ನು ಸಾರಿತು !

ಏನಿರಬಹುದು ?

ಎಲ್ಲರೂ ತಟ್ಟನೆ ಒಂದು ಹೆಜ್ಜೆ ಹಿಮ್ಮೆಟ್ಟಿ ನಿಂತರು. ಎಲ್ಲರ ಮುಖಮುದ್ರೆಗಳಲ್ಲೂ "ಏನಿರಬಹುದು?" ಎಂಬ ಪ್ರಶ್ನೆ ಮೂಡಿ ನಿಂತಿತು. ಭಯ ದುಃಖಗಳ ಕಪ್ಪುಛಾಯೆ ಮುಖಮಂಡಲವನ್ನಾರಿಸಿತು. ಕಾರಿಡಾರಿನುದ್ದಕ್ಕೂ ಅಲ್ಲಲ್ಲಿ ಕೆಂಪು ದೀಪಗಳು ಹತ್ತಿ ಹತ್ತನೆ ವಾರ್ಡಿನ ನಂಬರನ್ನು ಸೂಚಿಸಿ ಮಾಯವಾದವು. ಎಲ್ಲರ ದಿಟ್ಟಿಯೂ ಕೆಂಪು ದೀಪಗಳತ್ತ ಹರಿಯಿತು.

ರಾಣೀ ಜಗತ್ತಾರಿಣಿಯ ತುರ್ತು ಕರೆ !

ಯಾವುದೇ ರೋಗಿಯ ಪರಿಸ್ಥಿತಿಯು ಏಕಾ ಏಕಿ ಉಲ್ಬಣಿಸಿದಲ್ಲಿ ಡಾಕ್ಟರುಗಳಿಗೂ ಸೇವಿಕೆಯರಿಗೂ ತುರ್ತು ಕರೆ ನೀಡುವುದಕ್ಕಾಗಿ ಕೋಡ್ ನಂಬರ್ ಒಂಭತ್ತರ ತುರ್ತು ಶಾಸನ ಜಾರಿಯಲ್ಲಿತ್ತು. ಅದು ಅವಶ್ಯ ಬಿದ್ದಾಗ ಅಪಾಯದ ಗಂಟೆ ಬಾರಿಸಿ ಕೆಂಪು ದೀಪಗಳು ಹತ್ತಿ ವಾರ್ಡ್ ನಂಬರನ್ನು ಸೂಚಿಸುತ್ತದೆ.

ಆ ತಕ್ಷಣ ತುಸು ಕೈಬಿಡುವು ಇರುವ ಡಾಕ್ಟರುಗಳು ಅತ್ತ ಧಾವಿಸಿ ತಮ್ಮ ಕೈಯಲ್ಲಾದ ಪ್ರಯತ್ನಪಟ್ಟು ಒಂದುದಿನ, ಅಥವಾ ಅರ್ಧದಿನ,ಅಥವಾ ಒಂದು ಗಂಟೆಯಷ್ಟಾದರೂ ರೋಗಿಯ ಪ್ರಾಣವನ್ನು ಉಳಿಸಲು ಮೃತ್ಯುವಿನೊಡನೆ ಹೋರಾಟಕ್ಕಿಳಿಯುತಿದ್ದರು. ಅದೃಷ್ಟವಿದ್ದವರು ಗಂಡಾಂತರವನ್ನು ದಾಟಿ ಬದುಕುವುದರಲ್ಲಿ ಆಶ್ಚರ್ಯವೂ ಇರಲಿಲ್ಲ.

ಹತ್ತನೆಯ ವಾರ್ಡನ್ನು ಕೆಂಪು ದೀಪ ಪುನಃ ಪುನಃ ಸೂಚಿಸಿತು. ಓಡುವವರಿಗೆ ದಾರಿ ಬಿಟ್ಟು ಹುಡುಗರು ಬದಿಗೆ ಸರಿದು ನಿಂತರು. ಇದೇ ತಾನೆ ಅತ್ತ ಹೋಗಿದ್ದ ಡಾ|| ಘನಶ್ಯಾಮ್ ಡಾ|| ರೆಹಮಾನ್‌ರವರು ಪುನಃ ಬಂದ ನೇರಕ್ಕೆ ಓಡತೊಡಗಿದರು. ಸಂದಿಗೊಂದಿಗಳಿಂದ ಔಷಧಿಯ ಟ್ರೇಗಳ ಸಹಿತ ಸೇವಿಕೆಯರು ಓಡೋಡಿ ಬಂದರು. ಔಷಧಿ ಶೀಸೆಗಳ ಜಿಣಿ ಜಿಣಿ ಸದ್ದಿನೊಂದಿಗೆ ಎಲ್ಲಿ ನೋಡಿದರೂ ಪಾದರಕ್ಷೆಗಳ ಸದ್ದು ಪಟ. ಪಟ. ಪಟ. ಪಟ.

ಹುಡುಗರು ಬೆಕ್ಕಸ ಬೆರಗಾಗಿ ನೋಡುತ್ತಾ ನಿಂತರು. ಕಾರಿಡಾರಿನ

ತುತ್ತ ತುದಿಯಲ್ಲಿ ಹಿರಿಯ ವೈದ್ಯರ ದೇಹ ಕಿರಿದಾಗುತ್ತಾ ಕಣ್ಮರೆಯಾಗುವ ವರೆಗೂ ವಿದ್ಯಾರ್ಥಿಗಳು ದಿಟ್ಟಯನ್ನಟ್ಟಿ ನಿಂತರು. ಈಗಾಗಲೇ ನಾವೂ ವೈದ್ಯರಾಗಿದ್ದಿದ್ದರೆ? ಎಂಬ ಪ್ರಶ್ನೆ ಅನೇಕರ ಮನದಲೆಯಲ್ಲಿ ಮೂಡಿ ನಿಂತಿತು.

ವಿದ್ಯಾರ್ಥಿನಿಯರ ತಂಡದಲ್ಲಿದ್ದ ಶಾರದಾ ಅಂದಳು "ಈ ಆಸ್ಪತ್ರೆ ಕೆಲಸ ವೆಲ್ಲಾ ಗಂಡೆದೆಯವರಿಗೆ ಸರಿ ನಮ್ಮಂಥಹವರಿಗಲ್ಲ." ಅವಳ ಏರಿ ಇಳಿಯು ತಿದ್ದ ಎದೆಯನ್ನು ನೋಡಿ ಸೌಮಾ ನಸುನಕ್ಕು ನುಡಿದಳು "ಡಾಕ್ಟರಾಗಲು ಬಂದವರು ಹೆದರಿಕೊಂಡರಾಗುತ್ತದೆಯೆ ?"

"ದಿನವೂ ಗಂಡಾಂತರವನ್ನೆದುರಿಸುವುದೆಂದರೆ ಕಷ್ಟ ಸೌಮಾ."

ಹುಡುಗರ ತಂಡದಿಂದ ಗಂಡು ದನಿಯೊಂದು ಹೊರಬಿತ್ತು "ರೀ ! ಶಾರದಮ್ಮಾ, ಹೋಗಿ ಸೊಗಸಾದ ಅಡುಗೆಯನ್ನಾದರೂ ಮಾಡಿರಿ. ಅದ ರಿಂದ ನಿಮ್ಮ ಮನಸ್ಸೂ ತಣಿಯುತ್ತೆ ! ನಮ್ಮ ಜಿಹ್ವೆಯೂ ತಣಿಯುತ್ತೆ !"

ಅತ್ತಿತ್ತ ತಿರುಗಿ ನಿಂತ ಹುಡುಗರಲ್ಲಿ ಯಾರು ಹಾಗೆಂದರೋ ತಿಳಿಯ ಲಿಲ್ಲ. ಎಲ್ಲರ ಮುಖದಲ್ಲೂ ನಸುನಗು ಮೂಡಿ ಮಾಯವಾಯಿತು. ಎಲ್ಲರೂ ಮುಂದೇನು ಮಾಡುವುದೆಂದು ಯೋಚಿಸತೊಡಗಿದರು. ಡಾ|| ಅಬ್ದುಲ್ ಗಫಾರ್ ಬರುವವರೆಗೆ ಕಾಯುವುದೋ ? ಅಥವಾ ಹಿಂದಿರುಗಿ ಹೋಗು ವುದೋ ?

"ಹೇಗೂ ಬಂದಿದ್ದೇವೆ ಸ್ವಲ್ಪ ಹೊತ್ತು ಕಾಯುವುದೇ ಲೇಸು."

ಸರಿ. ಬಿಡುವಿನ ವೇಳೆಯಲ್ಲಿ ವಿಷಯವೊಂದು ನುಸುಳಿ ಬಂತು.

"ಗೋರಿಯಲ್ಲಿದ್ದ ಹೆಣವೊಂದನ್ನು ತೆಗೆದು ಇಂದು ಪೋಸ್ಟ್‌ಮಾರ್ಟಂ-ಗಾಗಿ ತಂದಿದ್ದಾರೆ !"

"ನಿಜವಾಗಿ ?"

"ಹೌದು. ಒಂದು ವಾರದ ಕೆಳಗೆ ಹೂತ ಹೆಣ."

"ಶಿವ, ಶಿವಾ !...ಇದು ಜಗತ್ತು."

"ಅಯ್ಯೋ, ಆ ಪೋಸ್ಟ್‌ಮಾರ್ಟಂ ಮಾಡುವವರ ಗೋಳು ಯಾರಿಗೂ ಬೇಡ." ಎಂದ ಸೌಮಳ ಮೈಯೆಲ್ಲ ನಸು ಕಂಪನದ ಅಲೆ ಹರಿದಾಡಿ ಹೋಯಿತು.

"ಸತ್ತವಳು ಒಂದು ಮಗುವಿನ ತಾಯಿ. ಅವಳ ಗಂಡ ವಿಷವೂಡಿಸಿದು ದಲ್ಲದೆ ಕತ್ತು ಹಿಸುಕಿ ಸಾಯಿಸಿದ್ದಾನಂತೆ ! ಅವಳು ವಿಷವೇರಿ ಮರಣಾಂತಿಕ ವಾಗಿ ನರಳ ತೊಡಗಿದಾಗ ನೆರೆಯವರಿಗೆ ಗೊತ್ತಾದೀತೆಂದು ಕತ್ತು ಹಿಸುಕಿ ಬಿಟ್ಟಿದ್ದಾನಂತೆ. ತೌರು ಮನೆಯವರು ಸುದ್ದಿ ಮುಟ್ಟಿ ಬರುವ ಮುಂಚೆ ಅವಳನ್ನು ಹೂಳಿ ಹೃದಯಾಘಾತದಿಂದ ಸತ್ತಳು ಎಂದಿದ್ದಾನೆ !"

"ಅಬ್ಬಾ ! ಇನ್ನೆಂಥಾ ಕಟುಕನಿರಬಹುದು ?"

"ಬನ್ನಿ ಅದನ್ನಿಷ್ಟು ನೋಡಿ ಬರೋಣ."

"ಶ್ ! ಎಂಥಾ ಕಟು ಧೈರ್ಯ ?"

"ಮತ್ತೆ ಇಲ್ಲಿ ನಿಂತು ಮಾಡುವುದೇನು ?"

"ನಿಂತು ನಿಂತು ಕಾಲು ದಣಿದರೂ ಪರವಾಗಿಲ್ಲ. ಅದನ್ನು ನೋಡು ವಂಥಾ ಕುತೂಹಲ ಬೇಡ."

"ಡಾಕ್ಟರಾದ ಮೇಲೆ ಕೈಹಚ್ಚುವುದು ಇದ್ದೇ ಇದೆಯಂತೆ, ಈಗ ನೋಡುವುದರಿಂದೇನು ನಷ್ಟ ?"

"ಬಿಡಪ್ಪಾ ನಿನಗೆ ಯಮಧೈರ್ಯ !"

ಕಾರಿಡಾರಿನ ತುತ್ತ ತುದಿಯಲ್ಲಿ ಡಾ|| ಅಬ್ದುಲ್ ಗಫಾರ್ ಖಾನರು ಕಾಣಿಸಿದರು. ಅವರನ್ನು ನೋಡುತ್ತಲೂ ಹುಡುಗರು ಶಿಸ್ತಿನಿಂದ ನಿಂತು ಕೊಂಡರು. ಅವರು ಹತ್ತಿರ ಬರುತ್ತಲೂ ಹುಡುಗರ ದೃಷ್ಟಿ ಪ್ರಶ್ನಾರ್ಥಕವಾಗಿ ಅವರೆಡೆಗೆ ಹರಿಯಿತು. ಅವರು ಮುಂದೆ ಸಾಗಿಹೋಗುತ್ತಾ–"ಹ್ಞೂಂ. ಎಲ್ಲರೂ ಬನ್ನಿರಿ." ಎಂದರು.

ಎಲ್ಲರೂ ಅವರನ್ನು ಹಿಂಬಾಲಿಸಿದರು. ಹುಡುಗರು ಮುಂದೆ. ಹುಡುಗಿ ಯರು ಹಿಂದೆ. ಪಾದರಕ್ಷೆಗಳ ಸದ್ದು ಮಾಡಿನ ತನಕ ಮರ್ಮರಿಸಿತು. ಅವರು ಲೆಕ್ಚರನ್ನು ಮುಗಿಸಿ ಹೊರಬೀಳುವಷ್ಟರಲ್ಲಿ ಸುಡು ಬಿಸಿಲು ನೆತ್ತಿಯ ಮೇಲೆ ಉರಿಯುತಿತ್ತು.

ಸುಧೀರ್ ಅಂದ "ಇಡ್ಲಿ ಮಾಡಿಟ್ಟಿರಲು ಹೋಟೆಲಿನಲ್ಲಿ ಹೇಳಿದ್ದೇನೆ. ಮೊದಲಿಷ್ಟು ಹೊಟ್ಟೆಗೆ ಹಾಕದಿದ್ದರೆ ಗತ್ಯಂತರವಿಲ್ಲ."

"ತುಂಬ ಥ್ಯಾಂಕ್ಸ್." ಎಂದ ಅಘೋರ.

"ನಿನ್ನ ಥ್ಯಾಂಕ್ಸೂ ಬೇಡ ! ಏನೂ ಬೇಡ. ತಿಂದುಬಿಟ್ಟು ಥ್ಯಾಂಕ್ಸ್ ಹೇಳಿ ಬಿಲ್ಲು ನನ್ನ ಕಡೆಗೆ ಎಸೆದು ಬಿಟ್ಟೇಯೇ !"

ಅಘೋರ ಕಿಲ ಕಿಲ ನಕ್ಕು ಬಿಟ್ಟ.

"ನಿನ್ನ ಮಾಂಬಿ ಸತ್ತು ಹೋಯಿತೇ ? ಯಾರೋ ಹಾಗೆಂದರಲ್ಲಾ ?"

"ಪಾಪ, ನನ್ನಿಂದಾದುದನ್ನೆಲ್ಲಾ ಮಾಡಿದೆ. ಬದುಕಲಿಲ್ಲ." ಕ್ಷಣಕಾಲ ಮುಖದಲ್ಲಿ ದುಃಖದ ಕಪ್ಪುಛಾಯೆ ಮಿನುಗಿ ಮಾಯವಾಯಿತು.

"ನೀನು ಅದಕ್ಕೆ ಚಿಕಿತ್ಸೆ ಮಾಡಿದ್ದರೆ ಇನ್ನು ಹೇಗಿರಬೇಡ ? ಮತ್ತೆ ಅದೆಂದಾದರೂ ಬದುಕುವುಂಟೇ ?"

ಒಡನೆ ನಗುವಿನ ಲಹರಿ ತುಂಬಿ ಹರಿಯಿತು.

"ನಾನು ಚಿಕಿತ್ಸೆ ಮಾಡಲಿಲ್ಲ. ಸೇವೆ ಮಾಡಿದೆ."

"ಡಾಕ್ಟರಿಗೆ ತೋರಿಸಬೇಕಾಗಿತ್ತು."

"ಡಾಕ್ಟರನ್ನು ಕರೆತಂದು ತೋರಿಸಿದೆ. ಅವರು ನೋಡಿ ಮದ್ದು ಕೊಟ್ಟರು. ಏನು ಮಾಡಿದರೂ ಪ್ರಯೋಜನವಾಗಲಿಲ್ಲ. ಪಾಪ ! ಇನ್ನೂ ಎಳೆಯ ನಾಯಿ. ಬಹಳ ಚೆನ್ನಾಗಿ ಮನೆ ಕಾಯುತ್ತಿತ್ತು. ಈಗ ಮನೆಗೆ ಹೋದರೆ 'ಬಿಕೋ' ಎನ್ನುತ್ತೆ. ನನಗಂತೂ ಮನೆಯವರೊಬ್ಬರನ್ನು ಕಳೆದು ಕೊಂಡಂತಾಗಿದೆ." ಅಘೋರ ಮುಖ ಹಿಂಡಿದ.

"ಹೌದಪ್ಪ ಬಹಳ ಚುರುಕು ನಾಯಿ."

"ನಮ್ಮಮ್ಮನ ದುಃಖವಂತೂ ಹೇಳತೀರದು."

ಹುಡುಗರ ದಳ ಕಾರಿಡಾರಿನಲ್ಲಿ ಹೊರಾಂಗಣಕ್ಕೆ ಕಾಲಿಡುತ್ತಿದ್ದಾಗ ಹತ್ತನೆಯ ವಾರ್ಡಿನಿಂದ ಹೆಣವೊಂದನ್ನು ಸಾಗಿಸುತ್ತಿದ್ದುದು ಕಾಣಬಂತು. ಸತ್ತವನು ಇನ್ನೂ ಹದಿನಾಲ್ಕು ಹದಿನೈದರ ಬಾಲಕ. ನೋಡಿದೊಡನೆಯೇ ಎಲ್ಲರ ಹೃದಯಗಳೂ ಮರ್ಮರ ಮರುಗಿದವು.

"ಈ ಜಗತ್ತೇ ಒಂದು ವಿಚಿತ್ರ ! ನಮಗೆ ಬೇಕಾದುದೆಲ್ಲಾ ಎಲ್ಲೋ ಗಾಳಿಯಲ್ಲಿ ತೂರಿ ಹೋಗುತ್ತೆ ; ನಮಗೆ ಬೇಡವಾದುದೆಲ್ಲಾ ರಾಶಿ ರಾಶಿಯಾಗಿ ಬಿದ್ದಿರುತ್ತೆ ! ಒಮ್ಮೊಮ್ಮೆ ಜೀವನವೆಂದರೆ ಜಿಗುಪ್ಸೆ ಬರುವಂತಾಗುತ್ತೆ— ಈ ಅವಾಂತರಗಳನ್ನೆಲ್ಲಾ ನೋಡುವಾಗ."

"ಜೀವನ ಅಂದರೆ ಹೂವಿನ ಹಾಸಿಗೆ ಅಂದುಕೊಂಡಿದ್ದೆಯೇನು ?"

"ಎಷ್ಟೆಂದರೂ ಹಗುರ ಮಾಡಿಕೊಳ್ಳುವುದು ನಮ್ಮ ಕೈಯಲ್ಲಿದೆ."

"ಮಾಡಿಕೊ, ಅಘೋರ್. ನೀನು ಮಾಡಿಕೊಳ್ಳುವುದನ್ನು ನೋಡಲು ಹೇಗೂ ನಾವು ಇರುತ್ತೇವಷ್ಟೆ ?"

ಅಘೋರ ಮಾತಾಡದೆ ನಸು ನಗುತ್ತಾ ಹೆಜ್ಜೆ ಹಾಕಿದ. ಕಣ್ಣುಗಳು ನಸು ದೂರದಲ್ಲಿ ಹೆಣದ ಹಿಂದೆ ಹೋಗುತ್ತಿದ್ದ ತಾಯಿಯ ಮೇಲೆ ಹರಿದುವು. ಆಕೆಯ ಗೋಳು ವರ್ಣನಾತೀತವಾಗಿತ್ತು...ಪಾಪ, ಅವನ ಮೇಲೆ ಎಷ್ಟು ಪ್ರೀತ್ಯಾದರಗಳಿದ್ದುವೋ ? ಭವಿಷ್ಯದ ಹೊರೆ ಇನ್ನೆಷ್ಟಿತ್ತೋ ? ಹೊಟ್ಟೆ ಬಟ್ಟೆ ಕಟ್ಟಿ ಎಷ್ಟು ಖರ್ಚು ಮಾಡಿದ್ದರೋ ? ಎಲ್ಲವೂ ಗಾಳಿ ಪಟದಂತೆ ಹಾರಿ ಹೋದುವು...ಎನ್ನಿಸಿದಾಗ ಅಘೋರನ ಹೃದಯ ಅನುಕಂಪದಿಂದ ಮಿಡಿಯಿತು.

ಅವರು ಶವವನ್ನೊಯ್ದು ಗಾಡಿಯಲ್ಲಿಟ್ಟು ಬಳಿಯಲ್ಲಿ ನತದೃಷ್ಟ ತಾಯಿಯನ್ನು ಕುಳ್ಳಿರಿಸಿದರು. ಗಾಡಿ ಮುಂದುವರಿಯಿತು. ಹಿಂದೆ ಗಂಡಸರಿಬ್ಬರು ಸೈಕಲ್ ಹತ್ತಿದರು.

"ಪಾಪ, ಯಾರೋ ಬಡವರಿರಬಹುದು."

"ಮಗನೇ ಒಂದು ಆಸ್ತಿ. ಅದನ್ನೂ ವಿಧಿ ಕಿತ್ತುಕೊಂಡಿತು."

ಅಘೋರ ಮಾತಾಡಲಿಲ್ಲ. ತಲೆಬಾಗಿ ಹೆಜ್ಜೆ ಹಾಕಿದ.

"ಸೈನ್ಸ್ ಮುಂದೆ ಹೋದಷ್ಟೂ ಸಾವು ದೂರವಾಗುತ್ತಿದೆ. ದೇಶ ದೇಶಗಳಲ್ಲೂ ಆಯುಸ್ಸನ್ನು ಹೆಚ್ಚಿಸಿಕೊಂಡಿದ್ದಾರೆ. ಆದರೂ ನಾವೊಂದು ರೀತಿಯಲ್ಲಿ ಸಾಧನೆ ಮಾಡಿದರೆ ಭಗವಂತ ಇನ್ನೊಂದು ರೀತಿಯಲ್ಲಿ ಸಾಧಿಸುತ್ತಾನೆ. ಹುಟ್ಟಿದವರೆಲ್ಲಾ ಸಾಯದುಳಿದರೆ ಗತಿಯೇನು ? ಈಗಿರುವ ಜನಸಾಂದ್ರತೆಯೇ ಅತಿಯಾಯಿತು."

"ಅದು ನಿಜವಾದರೂ ಬದುಕಲೇಬೇಕಾದವರು ಹೋಗಬಾರದು."

"ಎಲ್ಲಾ ಪೂರ್ವಾರ್ಜಿತ."

"ವಿಜ್ಞಾನದ ಬೆಳವಣಿಗೆ ನಮ್ಮಲ್ಲಿ ಸಾಕಷ್ಟಿಲ್ಲ."

"ಓ, ವಿಜ್ಞಾನ ಸಾವನ್ನು ತಡೆಗಟ್ಟೀತೆ ?"

"ಯಾರಿಗೆ ಗೊತ್ತು? ಕಾಲಾಂತರದಲ್ಲಿ ಏನೇನು ಆಗಲಿದೆಯೋ? ಪುರಾಣಗಳಲ್ಲಿ ಬಹುಕಾಲ ಬಾಳಿದವರ ಸುದ್ದಿಯುಂಟು. ಸತ್ತವರನ್ನು ಬದುಕಿಸಿದ ಸುದ್ದಿಯುಂಟು. ಅಂದಮೇಲೆ ವಿಜ್ಞಾನಯುಗದಲ್ಲಿ ಇದೊಂದು ಹೆಚ್ಚಲ್ಲ."

ಎಲ್ಲರೂ ಆಸ್ಪತ್ರೆಯ ಆವರಣವನ್ನು ದಾಟ ಬೀದಿಗಿಳಿದರು. ಜಾನಕೀರಾಂ ಎಂದ "ನಮ್ಮ ಭಾವ ಒಂದು ದೊಡ್ಡ ಹಗರಣ ಮಾಡಿದ್ದಾರೆ."

"ಏನು?"

"ಅವರು ಟಿ. ಬಿ. ಪೇಷಂಟ್. ಕಳೆದ ನಾಲ್ಕು ವರ್ಷ ಸ್ಯಾನಿಟೋರಿಯಂನಲ್ಲಿದ್ದು ಗುಣವಾಗಿ ಬಂದರು. ಆ ನಾಲ್ಕು ವರ್ಷ ನಮ್ಮ ಅಕ್ಕ ಅವರಿಗಾಗಿ ಮಕ್ಕಳಿಗಾಗಿ ಕಷ್ಟಪಟ್ಟಿದ್ದೆಂದರೆ ಹೇಳತೀರದು. ಮೂವರು ಹೆಣ್ಣು ಮಕ್ಕಳಿದ್ದಾರೆ. ಈಚೆಗೆ ಅಕ್ಕ ಜಾರಿಬಿಸ್ದು ಕಾಲು ಮುರಿದುಕೊಂಡರು. ಎರಡು ತಿಂಗಳು ಆಸ್ಪತ್ರೆಯಲ್ಲಿದ್ದು ಪ್ಲಾಸ್ಟರ್ ಬಿಗಿಸಿಕೊಂಡು ಮನೆಗೆ ಬಂದರು. ಪ್ಲಾಸ್ಟರ್ ತೆಗೆದ ಮೇಲೆ ನೋಡಿದರೆ ಕಾಲು ಊನವಾಗಿದೆ. ಕುಂಟುಗಾಲು ಹಾಕಿ ನಡೆಯುತ್ತಾರೆ. ನಮಗೆ ತಿಳಿಯದಂತೆ ಈ ಮನುಷ್ಯ ಹೋಗಿ ಮತ್ತೊಂದು ಮದುವೆಯಾಗುವುದೇ? ಇದೊಂದು ದೊಡ್ಡ ಫಜೀತಿಗಿಟ್ಟುಕೊಂಡಿದೆ."

"ಟಿ. ಬಿ. ಪೇಷಂಟಿಗೆ ಯಾರಪ್ಪಾ ಹೆಣ್ಣು ಕೊಟ್ಟವರು?"

"ಅಂಥವರೂ ನಮ್ಮಲ್ಲಿದ್ದಾರೆ!"

"ನಮ್ಮವರ ಅಜ್ಞಾನಕ್ಕೆ ಎಣೆಯೇ ಇಲ್ಲ."

"ನೀವೆಲ್ಲಾ ಹೇಗೆ ಸುಮ್ಮನಿದ್ದೀರಿ?"

"ಏನು ಮಾಡೋಣ?"

"ಇಂತಹವರನ್ನು ಜೀವಾವಧಿ ಜೈಲಿಗೆ ಹಾಕಬೇಕು."

"ಎರಡು ಕಾರಣ ಮುಂದಿಟ್ಟಿದ್ದಾನೆ. ಹೆಂಡತಿಗೆ ಕಾಲು ಕುಂಟು ಎಂಬುದೊಂದು ಗಂಡು ಮಕ್ಕಳಿಲ್ಲ ಎಂಬುದೊಂದು ಇಂಥಾ ಕೀಳು ಮನುಷ್ಯನಿಗೆ ಏನು ಮಾಡೋಣ?"

"ಸರಿ ಹೋಯ್ತು ಬಿಡು."

"ನಮ್ಮಕ್ಕ ಕಂಬನಿಯ ಕೋಡಿ ಹರಿಸುತಿದ್ದಾರೆ."

"ಪಾಪ"

"ಈಗ ಅವರನ್ನೆಲ್ಲಾ ಇಲ್ಲಿಗೆ ಕರೆತಂದು ಇಲ್ಲಿ ಮನೆ ಮಾಡುವುದೆಂದು ತೀರ್ಮಾನಿಸಿದ್ದೇವೆ."

"ಮನುಷ್ಯರಾಗಿ ಹುಟ್ಟಿಯೂ ಮನುಷ್ಯತ್ವವಿಲ್ಲ. ಇದೊಂದು ಹುಚ್ಚು ಪ್ರಪಂಚ."

ದಾರಿ ಕವಲೊಡೆಯುತಿದ್ದಂತೆ ಒಬ್ಬೊಬ್ಬರಾಗಿ ತಮ್ಮ ತಮ್ಮ ಹಾದಿ ಹಿಡಿದರು. ಎಲ್ಲರನ್ನೂ ಬೀಳ್ಕೊಟ್ಟು ಅಘೋರ ತನ್ನ ಹಾದಿಯಲ್ಲಿ ದಿಟ್ಟ ಹೆಜ್ಜೆ ಇಟ್ಟ. ದನಿ ದನಿಯನ್ನು ಬೀಳ್ಕೊಟ್ಟಿತು. ಹಾದಿ ಹಾದಿಯನ್ನು ಬೀಳ್ಕೊಟ್ಟಿತು.

ಅಧ್ಯಾಯ

೭

ಅಘೋರ ತನ್ನ ಮಿತ್ರರೊಂದಿಗೆ ಮೆಡಿಕಲ್ ಕಾಲೇಜಿನ ಮೂರನೆಯ ಹಂತವನ್ನು ನಿರಾತಂಕವಾಗಿ ಏರಿದ. ಇತ್ತ ವಿಮಲ್ ದಾಸ್ ಮಗನು ಉತ್ತೀರ್ಣನಾಗದೆ ಹೋದರೆ ಅವನ ಮನಸ್ಸನ್ನು ವ್ಯಾಪಾರದತ್ತ ಸೆಳೆದುಕೊಳ್ಳಬಹುದೆಂದು ಪ್ರತಿ ಹಂತ ಹಂತದಲ್ಲೂ ಅತ್ಯಂತ ಆಸಕ್ತಿಯಿಂದ ನಿರೀಕ್ಷಿಸುತ್ತಿದ್ದು ಅನಂತರ ನಿರಾಸೆಯ ಕಡಲಲ್ಲಿ ಮುಳುಗುತಿದ್ದ. ಈಗ ಸಹಾಯಕರೂ ಇಲ್ಲ; ನನ್ನ ನಂತರ ನೋಡಿಕೊಳ್ಳುವವರೂ ಇಲ್ಲ ಎಂಬ ಚಿಂತೆ ಹಗಲಿರುಳೂ ಸುಡುವುದು. ಅದೇ ನೇರಕ್ಕೆ ತಮ್ಮ ಸ್ವಂತ ವ್ಯಾಪಾರದಲ್ಲಿ ಬೇಕಾದಷ್ಟು ದುಡಿಮೆಯಿದ್ದರೂ ತಾನು ವಿಮುಖನಾದುದು ತಂದೆ ತಾಯಿಯರಿಗೆ ಸಂಕಟವನ್ನು ತಂದಿದೆ ಯೆಂಬುದು ಅಘೋರನಿಗೆ ಮನವರಿಕೆಯಾಗಿದೆ. ಆದರೂ ವಿದ್ಯಾಸಕ್ತಿಯು ನೂರ್ಮಡಿಯ ಚೇತನವನ್ನು ನೀಡಿ ಎಡ ಬಲಗಳ ಚಿಂತೆಯನ್ನು ಬದಿಗೊತ್ತಿ ನೇರ ಹಾದಿಯಲ್ಲಿ ಮುಂದೂಡುತ್ತದೆ. ಅಂತಲೇ ಅಘೋರ ಯೋಧನಂತೆ ಮುನ್ನಡೆದಿದ್ದ.

ಅಂದು ವಾಹನಕ್ಕೆ ಸಿಕ್ಕಿ ಪೆಟ್ಟು ತಾಗಿದ್ದ ಹುಡುಗನೊಬ್ಬನನ್ನು ಆಸ್ಪತ್ರೆಗೆ ಕರೆತಂದಿದ್ದರು. ಅವನ ತಂದೆ ತಾಯಿಯರು ದೀನತೆಯಿಂದ ಕೈ ಕೈ ಮುಗಿದು ಹುಡುಗನ ಪ್ರಾಣಭಿಕ್ಷೆಗಾಗಿ ಡಾಕ್ಟರ ಬಳಿ ಬೇಡಿಕೊಳ್ಳುತ್ತಿದ್ದ ದೃಶ್ಯ ಕರುಣಾ ಜನಕವಾಗಿತ್ತು. ವಿದ್ಯಾರ್ಥಿಗಳ ಒಂದು ತಂಡ ಹುಡುಗನ ಆಪರೇಷ‌ ನೋಡಲು ಕಾದಿದ್ದರು. ಆಪರೇಷ ಥಿಯೇಟರಿನಲ್ಲಿ ಮೇಜಿನ ಮೇಲೆ ಹುಡುಗನನ್ನು ಮಲಗಿಸಲಾಯಿತು. ನೆತ್ತರಿನಲ್ಲಿ ತೊಯ್ದು ಶರೀರ ಭಯಾನಕವಾಗಿತ್ತು. ಬಲಗೈ ಕತ್ತರಿಸಿ ಬೇರ್ಪಟ್ಟಿತ್ತು. ಬಲಗಾಲು ಮುರಿದು ನೇತಾಡುತಿತ್ತು. ಮುಖ ಹಣೆ ಕಣ್ಣುಗಳಿಗೂ ಪೆಟ್ಟು ತಾಗಿತ್ತು. ಪ್ರಜ್ಞಾವಿಹೀನನಾಗಿ ಮಲಗಿದ್ದ ದೃಶ್ಯ ಕರುಣಾಜನಕವಾಗಿತ್ತು. ಮೊನಚಾಗಿದ್ದ ತೋಳಿನ ಮೂಲೆ ಯನ್ನು ನೇರವಾಗಿ ಗರಗಸದಿಂದ ಕತ್ತರಿಸಿ ಕಟ್ಟು ಹಾಕುವುದನ್ನು ನೋಡುತ್ತಾ

ಸುತ್ತುವರಿದು ನಿಂತರು ವಿದ್ಯಾರ್ಥಿಗಳು...ಬಲಗೈ ಹೋದಮೇಲೆ ಹುಡುಗ ಬದುಕುವುದಕ್ಕಿಂತ ಸಾಯುವುದು ಲೇಸು....ಎಂದು ಹುಡುಗರು ತಮ್ಮ ತಮ್ಮೊಳಗೆ ಮರ್ಮರಿಸಿದರು. ಭುಜದಿಂದ ಒಂದು ಗೇಣು ಮಾತ್ರ ಉಳಿದಿದ್ದ ತೋಳು ಎಲ್ಲರ ಗಮನವನ್ನೂ ಸೆಳೆದಿತ್ತು. ಮುರಿದ ಬಲಗಾಲನ್ನು ಜೋಡಿಸಿ ಪ್ಲಾಸ್ಟರ್ ಬಿಗಿದರು. ನೇತ್ರ ವೈದ್ಯರು ಬಂದು ಪೆಟ್ಟು ತಾಗಿದ್ದ ಕಣ್ಣನ್ನು ಆಪರೇಶ್ ಮಾಡಿ ತೆಗೆದು ಹಾಕಿದರು. ಎಲ್ಲವೂ ಮುಗಿಯುವ ಹೊತ್ತಿಗೆ ಮೂರು ತಾಸುಗಳು ಉರುಳಿದವು.

ಅನಂತರ ಹುಡುಗರ ತಂಡ ಹೊರಬಿತ್ತು. ಅನೇಕರ ಹೃದಯ ಭಾರವಾಗಿದ್ದು ದೀರ್ಘವಾಗಿ ಉಸಿರೆಳೆದರು. ಬಾಗಿಲಲ್ಲಿ ಏನಾಗುವುದೋ ಎಂದು ಕಾದಿದ್ದ ನತದೃಷ್ಟ–ತಾಯಿ ತಂದೆಯರ ಗಂಟಲು ಬಿಗಿದು ಬಂದಿದ್ದರೂ ನೋಡಿದ ನೋಟವೇ ಕೇಳಿತು "ಹೇಗಿದ್ದಾನೆ ?"

ಸೌಮಾ ಹೇಳಲಾರದೆ ಹೇಳಿದಳು. "ಹುಡುಗ ಹುಷಾರಾಗುತ್ತಾನೆ."

"ಕೈ ಕೂಡುತ್ತದೆಯೇ ?" ಬೆಂದೆದೆಯ ತಾಯಿ ಗಡಗಡ ನಡುಗುತ್ತಾ ಕೇಳಿದಳು.

"ಕೈ ಕತ್ತರಿಸಿ ಹೋಗಿದೆಯಲ್ಲಾ ?" ದನಿಯಲ್ಲಿ ದುಗುಡವಿತ್ತು.

"ಅದರ ತುಂಡನ್ನೂ ತಂದುಕೊಟ್ಟಿದೇವೆ !" ಉದ್ವೇಗದಿಂದ ನುಡಿದಳು ತಾಯಿ.

"ಅಯ್ಯೋ ಪಾಪ !" ಎಲ್ಲರೂ ಮರ್ಮರ ಮರುಗಿದರು.

"ಅದು ಸೇರುವುದು ಸಾಧ್ಯವಿಲ್ಲ. ಕಾಲು ಸರಿ ಹೋಗುತ್ತದೆ"

"ಕಣ್ಣು ?"

"ಅದು ಸರಿ ಹೋದೀತು." ಡಾಕ್ಟರ ಆದೇಶವನ್ನು ಗಮನದಲ್ಲಿಟ್ಟುಕೊಂಡು ನುಡಿಯಲಾರದೇ ನುಡಿದಳು ಸೌಮಾ...ಕೊನೆಯ ಉಸಿರೆಳೆಯುವವರೆಗೂ ಧೈರ್ಯ ಹೇಳಿ ಬದುಕಿಸುವ ಭರವಸೆ ನೀಡಿರಿ...ಹಿರಿಯ ವೈದ್ಯರ ಹಿತನುಡಿ ಕಿವಿಯಲ್ಲಿ ಮತ್ತೆ ಮತ್ತೆ ಮರ್ಮರಿಸಿತು. ಎದೆಯಾಳದಿಂದ ನಿಟ್ಟುಸಿರೊಂದು ಹೊರ ಹೊಮ್ಮಿತು.

"ನಾವೀಗ ನೋಡಬಹುದೇ ?" ಹುಡುಗನ ತಂದೆ ಕೇಳಿದರು. ಇಬ್ಬರ ಕಣ್ಣುಗಳಲ್ಲೂ ಗಂಗೆ ಯಮುನೆಯರ ನಿರಂತರ ಪ್ರವಾಹ ಉಕ್ಕಿಹರಿಯುವ ದೃಶ್ಯ ಕರುಣಾಜನಕ.

"ಊಹೂ." ತಲೆಯಲ್ಲಾಡಿಸುತ್ತಾ ಮತ್ತೆ ನುಡಿದಳು ಸೌಮಾ. "ಅವನನ್ನು ಹೊರಗಿನ ಕೋಣೆಗೆ ಕರೆತಂದ ಹೊರತು ನೀವು ನೋಡಲಾರಿರಿ. ಅವನಿಗಿನ್ನೂ ಪ್ರಜ್ಞೆ ಬರಲಿಲ್ಲ."

"ನಿಮಗೆ ಇನ್ನೆಷ್ಟು ಮಂದಿ ಮಕ್ಕಳಿದ್ದಾರೆ ?" ಅಘೋರ ನಡುವೆ ಬಾಯಿ ಹಾಕಿದ.

"ಇವನೂ ಸೇರಿ ಆರುಮಂದಿ ಇದ್ದಾರೆ."

"ಗಂಡು ಮಕ್ಕಳೆಷ್ಟು ?"

"ಮೂರು ಮಂದಿ."

"ಮತ್ತೇಕೆ ಯೋಚನೆ ? ದೇವರು ದಯಾಮಯ !" ಎನ್ನುತ್ತಾ ಅಘೋರ ಅಸಡ್ಡೆಯಿಂದ ಹೆಜ್ಜೆ ಹಾಕಿದ. ತಕ್ಷಣ ಎಲ್ಲರ ದಿಟ್ಟಿಯೂ ಅವನೆಡೆಗೆ ಹರಿಯಿತು. ಅಲಕ್ಷ್ಯದಿಂದ ಅವನು ನುಡಿದ ರೀತಿ ಎಲ್ಲರ ಕುತೂಹಲವನ್ನೂ ಕೆರಳಿಸಿತು. ಅವನು ನಿಲ್ಲದೆ ಮುಂದುವರಿದ. ಎಲ್ಲರೂ ಅವನನ್ನು ಹಿಂಬಾಲಿಸಿದರು. ಸೌಮಾ ನೊಂದ ತಂದೆ ತಾಯಿಗಳಿಗೆ ಎರಡು ಸಮಾಧಾನದ ಮಾತುಗಳನ್ನು ಹೇಳಿ ಹೆಜ್ಜೆಹಾಕಿದಳು. ಹುಡುಗರ ತಂಡ ಸಾಲುಗಟ್ಟಿ ಕಾರಿಡಾರಿನಲ್ಲಿ ಮುಂದುವರಿಯಿತು. ಜಾನಕೀರಾಂ ಕೇಳಿದ "ಅದೇನಪ್ಪಾ, ಅಘೋರ್ ? ವಕ್ರಧಾಟಿಯಲ್ಲಿ ದೇವರು ದಯಾಮಯ ಎಂದೆಯಲ್ಲಾ ? ಅದೇನೆಂಬುದೇ ಅರ್ಥವಾಗಲಿಲ್ಲ." ಕಣ್ಣುಗಳಲ್ಲಿ ಹಣಿಕಿ ಹಾಕುತಿದ್ದ ತವಕವನ್ನು ಹತ್ತಿಕ್ಕಲು ನಾಲ್ಕಾರು ಬಾರಿ ಕಣ್ಣು ಮಿಟುಕಿಸಿದ.

"ಹೇಗೂ ಇನ್ನಿಬ್ಬರು ಗಂಡುಮಕ್ಕಳಿದ್ದಾರೆ. ಅಂದಮೇಲೆ ದೇವರು ದಯಾಮಯನಲ್ಲವೇ ?" ಹಸನಾದ ನಗುಬೀರಿ ನುಡಿದ ಅಘೋರ.

"ನಿನ್ನ ಅಭಿಪ್ರಾಯ ಏನಿದ್ದರೂ ಹೇಳಿಬಿಡು. ಮುಚ್ಚುಮರೆ ಬೇಡ."

"ಜಾ಼ರ್ಜ, ಹುಡುಗ ಬದುಕುವುದಕ್ಕಿಂತ ಸತ್ತು ಹೋಗಿದ್ದರೆ ಒಳ್ಳೆಯದಿತ್ತು. ಇವನಿಗಾಗಿ ಡಾಕ್ಟರುಗಳು ಶ್ರಮ ತೆಗೆದುಕೊಂಡುದುದು ವ್ಯರ್ಥ ಸಾಹಸವಲ್ಲದೆ ಮತ್ತೇನಲ್ಲ ! ಒಂದುವೇಳೆ ಅವನು ಬದುಕಿದರೆ ದೇಶಕ್ಕೆ ನಾವೊಬ್ಬ ಹೆಳವನನ್ನು ನೀಡಿದಂತಾಗಲಿಲ್ಲವೇ ?" ಎಂದ ಅಘೋರ ಒಂದು ಘಳಿಗೆ ಯೋಚಿಸಿ ಪುನಃ "ನೋಡು, ಇಂಥಹವರನ್ನು ಬದುಕಿಸುವ ತೊಂದರೆ ತೆಗೆದುಕೊಳ್ಳುವುದಕ್ಕಿಂತ ಇಲ್ಲವಾಗಿಸುವುದು ಮೇಲು !"

ಮಾತು ಕೇಳಿ ಎಲ್ಲರೂ ಕ್ಷಣಕಾಲ ಮರವಟ್ಟಂತೆ ನಿಂತುಬಿಟ್ಟರು. ಆಶ್ಚರ್ಯಾವೇಗಗಳ ಅಲೆ ಎಲ್ಲರ ಮೈಮೇಲೂ ಬೆಂಕಿಯ ಝುರಿಯಂತೆ ಹರಿದಾಡಿ ಹೋಯಿತು. ಮದನ್ ಉದ್ವೇಗದಿಂದ ನುಡಿದ "ನಿನ್ನಲ್ಲಿ ಹೃದಯವೆಂಬುದು ಇಲ್ಲವೇ ಇಲ್ಲವೋ? ನೀನು ತುಳಿದಿರುವ ಹಾದಿ ಯಾವುದು? ನಿನ್ನ ರೀತಿ ನೀತಿಗಳೇನು? ಘೋರ್ ! ಇದೆಲ್ಲಾ ಸರಿಯಲ್ಲಪ್ಪಾ !"

"ಭಗವಂತನ ಇಚ್ಛೆಗೆ ಎದುರು ನಿಲ್ಲಲು ನೀನು ಯಾರು ?"

"ಭಗವಂತ ನಿನಗೆ ಉಕ್ಕಿನೆದೆ ನೀಡಿದ್ದಾನೆಯೆ ?"

"ಹಾಗೊಂದು ವೇಳೆ ಅವನು ಉಕ್ಕಿನೆದೆ ನೀಡಿದ್ದರೂ ಹುಚ್ಚು ಸಾಹಸಕ್ಕಿಳಿಯಬಾರದು ಘೋರ್ !"

"ಪ್ರಕೃತಿ ನಿಯಮಕ್ಕೆ ನಾವು ಒಳಪಡಲೇಬೇಕು."

"ಕುಂಟ ಕುರುಡ ಹೆಳವ ಹುಚ್ಚ ಎಲ್ಲರಿಗೂ ಬದುಕುವ ಆಸೆಯುಂಟು ಆತ್ಮಾಭಿಮಾನವೂ ಉಂಟು ಎಂಬುದು ಸದಾ ನಿನ್ನ ನೆನಪಿನಲ್ಲಿರಲಿ."

"ನಾಳೆ ಇಂಥಾದ್ದೇನಾದರೂ ಮಾಡಿ ಸೆರೆಮನೆ ಕಂಡೀಯೋ ಜೋಕೆ !"

"ಮನುಷ್ಯನಾಗಿ ಹುಟ್ಟಿ ರಾಕ್ಷಸೀಕೃತ್ಯಕ್ಕಿಳಿಯಬಾರದು ಘೋರ್ !"

ಎಲ್ಲರ ಹಿತ ನುಡಿಗಳು ಮೇಲಿಂದ ಮೇಲೆ ಚಾಟಿ ಏಟುಗಳಂತೆ ಬೀಳತೊಡಗಿದುವು. ಸ್ವಲ್ಪ ಹೊತ್ತು ಅಘೋರ ಸ್ತಬ್ಧನಾದರೂ ಯೋಚಿಸಿ ಇಂತೆಂದ "ನಿಮ್ಮ ಕುರುಡುವಾದವೇನೇ ಇರಲಿ, ಮಾನವತೆಯ ಕಲ್ಯಾಣಕ್ಕಾಗಿ ಮತ್ತು ದೇಶದ ಹಿತಕ್ಕಾಗಿ ಇನ್ನೊಮ್ಮೆ ಯೋಚಿಸಿರಿ." ದನಿ ಶ್ರೀಮದ್ಗಾಂಭೀರ್ಯದಿಂದ ಹೊರಬಿತ್ತು.

"ಹೋಗೋ ಶುದ್ಧ ಕಿರಾತನಂತೆ ವರ್ತಿಸಬೇಡ !"

"ಮನುಷ್ಯನಾಗಿ ಹುಟ್ಟಿದುದಕ್ಕಾದರೂ ಮನುಷ್ಯತ್ವವನ್ನು ಉಳಿಸಿಕೋ."

"ಇದೇನಾದರೂ ಪ್ರೊಫೆಸರರ ಕಿವಿಗೆ ಬಿದ್ದರೆ ನಿನಗೆ ಬರುವುದು ಸೊನ್ನೆ !"

"ಇದೇ ಕೊನೆ ! ಇನ್ನೆಂದೂ ಹುಚ್ಚುಚ್ಚಾಗಿ ವರ್ತಿಸಬೇಡ."

"ನಿನ್ನ ವ್ಯಾಪಾರ ಕ್ಷೇತ್ರ ವಿಶಾಲವಾಗಿದೆ. ಅಲ್ಲಿ ಅನ್ನಕ್ಕೆ ಕೊರತೆಯಿಲ್ಲ. ಇದನ್ನು ಬಿಟ್ಟು ನಿನ್ನ ಸ್ವಸ್ಥಾನಕ್ಕೆ ಹಿಂದಿರುಗು. ಅದರಲ್ಲಿ ನಿನಗೆ ಶ್ರೇಯಸ್ಸುಂಟು."

"ಘೋರ ಮಹಾಶಯಾ ! ಅಷ್ಟು ಉಪಕಾರ ಮಾಡು."

"ವೈದ್ಯ ವೃತ್ತಿಗೆ ಕಳಂಕ ತರಬೇಡ."

ಅಘೋರ ಮಾತಾಡದೆ ಎಲ್ಲರ ಹಿತೋಕ್ತಿಗಳನ್ನೂ ಕೇಳಿ ಸುಮ್ಮನಾದ. ಎದೆಯೊಳದಲ್ಲಿ ಸುಪ್ತವಾಗಿದ್ದ ಧ್ಯೇಯ ಧೋರಣೆಗಳು ಹೆಡೆಯೆತ್ತಿ ನಿಂತಿದ್ದುವು. ತಲೆಬಾಗಿ ನಡೆಯುತಿದ್ದ ಅವನು ತುಸು ಯೋಚಿಸಿ ಹೇಳಿದ "ನೀವೆಲ್ಲರೂ ಪುನರ್ಜನ್ಮವನ್ನು ಒಪ್ಪಿಕೊಳ್ಳುವುದಾದರೆ ಅವನಿಗೆ ಉತ್ತಮ ಜನ್ಮ ಬರಲಿ ಎಂದು ಹಾರೈಸಿರಿ. ಅವನು ಹೆಳವನಾಗಿ ತೊಳಲುವುದಕ್ಕಿಂತ......." ಮಾತು ಮುಂದುವರಿಯಗೊಡದೆ ಎಲ್ಲರೂ ಒಮ್ಮೆಲೆ ಕೂಗಿದರು. "You Stupid !"

ಅಘೋರ ಗಟ್ಟಿಯಾಗಿ ನಕ್ಕುಬಿಟ್ಟ.

o o o o

ಸಂಜೆಯ ವಾತಾವರಣ ತಿಳಿಯಾಗಿತ್ತು. ಬೀಸಿ ಬರುವ ತಂಗಾಳಿಗೆ ಮೈಯೊಡ್ಡಿ ಜಾನಕೀರಾಂ ಮದನರೊಂದಿಗೆ ಅಘೋರ ಕಬ್ಬನ್ ಪಾರ್ಕಿನ ಹಾದಿ ತುಳಿದಿದ್ದ. ನಡಿಗೆ ಬಹುದೂರ ಸಾಗಿತ್ತು. ಮಧ್ಯೆ ತುಸು ಹೊತ್ತು ದಣುವಾರಿಸಿಕೊಳ್ಳಲು ಕಲ್ಲು ಬೆಂಚಿನ ಮೇಲೆ ಮೂವರೂ ಕುಳಿತುಕೊಂಡರು. ಮದನ್ ಅಂದಿನ ಘಟನೆಯೊಂದನ್ನು ನೆನೆಪಿಗೆ ತಂದುಕೊಂಡು ಇಂತೆಂದ, "ಇಂದು ಡಿಫ್ತೀರಿಯಾ(Diphtheria) ಆಗಿದ್ದ ಆರುವರ್ಷದ ಹುಡುಗನಿಗೆ ಆಪರೇಶ್ನ ನಡೆಯಿತು. ಹುಡುಗ ಡಾ|| ಕಾಳೀ ಪ್ರಸಾದರ ತಂಗಿಯ ಮಗ. ಕಾಳೀ ಪ್ರಸಾದರು ಮಗುವನ್ನು ಮೂರು ದಿನದಿಂದ ಬಿಟ್ಟು ಕದಲಿರಲಿಲ್ಲ. ಮಗುವಿಗೆ ವಾಸಿಯಾಗದ ಕಾರಣ ಆಪರೇಶ್ನ ಅನಿವಾರ್ಯವಾಯಿತು. ಕಾಳೀ ಪ್ರಸಾದರು ತಂಗಿಯನ್ನು ಬಹು ಕಷ್ಟದಿಂದ ಒಪ್ಪಿಸಿ ಆಪರೇಶನ್ನಿಗೆ ಸಿದ್ಧಪಡಿಸಿದರು. ಕಿವಿ ಮೂಗು ಗಂಟಲುಗಳ ತಜ್ಞ ಡಾ|| ವಿಜಯಾನಂದ ಆಪರೇಶ್ನ ಮಾಡಿದರು. ಆಪರೇಶನ್ನಿನ ಮಧ್ಯದಲ್ಲಿ ಮಗುವೊಮ್ಮೆ ತೀರ ಬಳಲಿ ಸ್ಥಿತಿ ಹದಗೆಟ್ಟು, ಮಗು ಸಾವಿನಂಚಿಗೆ ಸರಿದರೂ ಡಾ|| ವಿಜಯಾನಂದ ಮೌನವಾಗಿ ನಿಂತು ನೋಡುವುದೇ ? ಅವರಲ್ಲಿ ಯಾವ ಭಾವೋದ್ವೇಗವೂ ಇರಲಿಲ್ಲ. ಇತ್ತ ಕಾಳೀ ಪ್ರಸಾದರ ಗೋಳು ಹೇಳತೀರದು. ನಾಡಿ ನೋಡುತಿದ್ದಂತೆ ಅವರು ಹೌಹಾರಿ ಹುಚ್ಚರಂತಾಡುತಿದ್ದರೆ ವಿಜಯಾನಂದರು ಹಾಯಾಗಿದ್ದರು !

ಗಂಟಲಲ್ಲಿ ತೂತು ಮಾಡಿ ಉಸಿರಾಡಲು ಅವಕಾಶ ಮಾಡಿದ್ದರು. ಅದರೊಳಗಿಂದ ಮೇಲುಸಿರು ಬರಹತ್ತಿತು. ಮಗುವಿನ ಸ್ಥಿತಿಯನ್ನು ಸ್ಥಿಮಿತಕ್ಕೆ ತರಲು ಕಾಳೀಪ್ರಸಾದರು ಪಡುತಿದ್ದ ಪಾಡನ್ನು ನೋಡಿದರೆ "ಅಯ್ಯೋ" ಎನ್ನಿಸುವಂತಿತ್ತು. ಪಾಪ, ಮಗು ಬಹಳ ಹೊತ್ತಿನ ಮೇಲೆ ಚೇತರಿಸಿಕೊಂಡಿತು."

"ವಿಜಯಾನಂದ ತಮ್ಮ ಕರ್ತವ್ಯ ನೆರವೇರಿಸಿದ್ದಾರೆ. ಅದಕ್ಕೂ ಮಿಕ್ಕಿ ಏನಾದರೂ ಆದರೆ ಅವರೇನು ಮಾಡಿಯಾರು ? ಬದುಕಿಸುವುದಕ್ಕೆ ಅವರೇನು ದೇವರೇ ಎಂಬುದನ್ನೂ ನೀನು ಕೊಂಚ ಯೋಚಿಸಬಾರದೇ ಮದನ್ ಮಹಾಶಯಾ !"

"ಘೋರ ! ನೋಡಪ್ಪಾ ; ನೀನಿಲ್ಲಿ ನಿನ್ನ ಬಾಲ ಬಿಚ್ಚಬೇಡ." ಮದನ್ ಕಟುವಾಗಿ ಹೇಳಿದ. ಹೊಳೆಯುವ ಕಣ್ಣುಗಳಲ್ಲಿ ತೀಕ್ಷ್ಣತೆಯಿತ್ತು. ದಯಾದಾಕ್ಷಿಣ್ಯಗಳನ್ನು ಬದಿಗಿಟ್ಟಂತೆ ತೋರಿಬಂದ.

ಅಘೋರ ಗಟ್ಟಿಯಾಗಿ ನಗ ತೊಡಗಿದ. ಜಾನಕೀರಾಮನ ಮುಖದಲ್ಲಿ ನಸುನಗು ಮೂಡಿದರೂ ಮನದಲ್ಲಿ ಯೋಚನಾ ತರಂಗಗಳೆದ್ದು ಭಾವನೆಗಳನ್ನು ಬಿಗಿದು ಹಿಡಿದು ಬಿಟ್ಟಿದ್ದುವು. ತುಸು ಹೊತ್ತು ಮೂವರೂ ಮಾತಾಡಲಿಲ್ಲ. ಅಘೋರನಿಗೆ ಗೆಳೆಯನ ಮಾತು ಕೋಪಮೂಡಿಸುವ ಬದಲಾಗಿ ನಗು ಮೂಡಿಸಿತ್ತು.

ಜಾನಕೀರಾಂ ಅಘೋರನ ಹಸ್ತವನ್ನು ಅದುಮಿ ಹಿಡಿದು ಹೇಳಿದ "ನೀನೊಂದು ವಿಚಿತ್ರ ವ್ಯಕ್ತಿ. ಈ ವಿಚಿತ್ರ ಧ್ಯೇಯ ನಿನ್ನನ್ನು ಸಜೀವವಾಗಿ ಸುಟ್ಟರೂ ಆಶ್ಚರ್ಯವಿಲ್ಲ ಕಣಯ್ಯಾ".

"ಹೋಗಲಿ, ಬಿಡು. ಏನೇನು ಆಗಬೇಕೋ ಅದು ಆಗಿಯೇ ತೀರುತ್ತದೆ."

"ನೋಡಪ್ಪಾ ! ಇಷ್ಟು ಕಾಲ ಏನೋ ಹುಡುಗಾಟದಲ್ಲಿ ಕಳೆದು ಹೋಯಿತು. ಅಂದರೆ ಇನ್ನು ಮುಂದೆ ಹಾಗಾಗುವುದಿಲ್ಲ. ಮನಸ್ಸಿಗೆ ಶಾಂತಿ ಲಭಿಸಬೇಕಾದರೆ ನಾವು ಪ್ರಕೃತಿಯ ನಿಯಮಕ್ಕೆ ತಲೆ ಬಾಗಲೇಬೇಕು."

"ಈ ಭೂತಾಯಿಯ ಭಾರವಿಳಿಸಬೇಕಾದರೆ ನನ್ನ ಧ್ಯೇಯ ಧೋರಣೆಗಳು ಸರ್ವಮಾನ್ಯವಾಗಲೇಬೇಕು ! ಅವನ್ನು ನೀವು ಒಂದಲ್ಲ ಒಂದು ದಿನ ಒಪ್ಪಿಕೊಳ್ಳುತ್ತೀರಿ ಎಂಬುದು ನನಗೆ ಗೊತ್ತು !"

"ಶ್ ! ಸಾಕು ನಿಲ್ಲಿಸು."

"ಮದನ್ !"

"ಎದೆಯಾಳಕ್ಕೆ ಇಳಿಯದ ಹೊರತು ಇತರರ ಭಾವನೆಗಳನ್ನು ನೀನು ಕಂಡುಕೊಳ್ಳಲಾರೆ. ನಿನ್ನ ಧ್ಯೇಯ ಸಾಧನೆಗಾಗಿ ಇತರರ ಮೇಲೆ ಧಾಳಿ ಮಾಡುವುದು ಸರಿಯಲ್ಲ ಅಘೋರ್."

"ನಿನ್ನಂಥಹವರು ವೈದ್ಯವೃತ್ತಿಗಿಳಿದುದು ಅಪಾಯಕರ !"

"ಯೋಚಿಸು! ನಿನ್ನ ವ್ಯಾಪಾರದ ಕ್ಷೇತ್ರದ ಮಹಾ ಬಾಗಿಲು ಇಂದೂ ತೆರೆದೇಯಿದೆ. ನೀನು ಹಿಂದಿರುಗಿದರೆ ನಿಜವಾಗಿಯೂ ನಿನ್ನ ತಂದೆ ತಾಯಿ ಗಳು ಸಂತೋಷ ಪಡುತ್ತಾರೆ."

"ಅಂಕಲ್ ಜಾರ್ಜ್ ! ನಿನ್ನ ಸಲಹೆಗೆ ತುಂಬಾ ವಂದನೆಗಳು !"

ಅದುವರೆ ಹಿಡಿದಿದ್ದ ಹಸ್ತವನ್ನು ಇನ್ನಷ್ಟು ಬಿಗಿಗೊಳಿಸಿ ಜಾನಕೀರಾಂ ಪುನಃ ಅಂದ "ಡಾಕ್ಟರಾಗುವವನಿಗೆ ದಯೆ ಸಹನೆಗಳಿಲ್ಲದಿದ್ದರೆ ಹೇಗೆ ?"

"ಯಾರಿಗೆ ಗೊತ್ತು ? ಕಾಲಕ್ರಮೇಣ ಏನೇನಾಗಲಿದೆಯೋ?" ಎಂದು ಕಿಲಕಿಲನೆ ನಗತೊಡಗಿದ ಅಘೋರ. ಒಡನೆ ಗೆಳೆಯರ ಮುಖದ ಮೇಲೆ ಪ್ರತಿ ನಗು ಮೂಡಿತು. ಮದನ್ ನಕ್ಕು ನುಡಿದ "ಡಾಕ್ಟರಾಗುವವರ ಮನೋಭಾವನೆಗಳು ಉನ್ನತ ಮಟ್ಟದಲ್ಲಿರಬೇಕು."

"ಇದೊಳ್ಳೆ ಚೆನ್ನಾಗಿದೆ ! ಎಲ್ಲರನ್ನೂ ಬದುಕಿಸುವುದು ಯಾರಿಂದ ಸಾಧ್ಯ ?"

"ಫಲಾಫಲ ಭಗವಂತನಿಗೆ ಸೇರಿದ್ದಾದರೂ ಮಿಗಿಲಾದ ಮನುಷ್ಯ ಪ್ರಯತ್ನವೂ ಬೇಕು ಅಘೋರ್ !"

ಅಘೋರ ಮಾತಾಡಲಿಲ್ಲ. ಮುಖದಲ್ಲಿ ಯಾವ ಭಾವೋದ್ವೇಗವೂ ಮೂಡಲಿಲ್ಲ. ಶೂನ್ಯ ದೃಷ್ಟಿ ಏನನ್ನೂ ನೋಡದಿತ್ತು. ಕಾಲುಗಳನ್ನು ನೇರಕ್ಕೆ ನೀಡಿ ಒಂದರ ಮೇಲೊಂದರಂತೆ ಜೋಡಿಸಿಕೊಂಡು ಮೆಲ್ಲನೆ ಅಲುಗಿಸುತ್ತಾ ಕುಳಿತುಕೊಂಡ. ಮನಸ್ಸು ಹಕ್ಕಿಯಂತೆ ಹಾರಿ ದೇಶದಲ್ಲಿನ ಕುಂಟ ಕುರುಡ ಹೆಳವರ ಕಡೆ ಹರಿದಾಡಿತು.

ಅದುವರೆ ಹಿಡಿದಿದ್ದ ಅಘೋರನ ಹಸ್ತವನ್ನು ಹಾಗೆ ಬಿಡಿಸಿ ನೋಡ ತೊಡಗಿದ ಜಾನಕೀರಾಂ.

"ನೋಡಪ್ಪಾ ! ಸರಿಯಾಗಿ ನೋಡು !" ಎನ್ನುತ್ತಾ ಮದನ್ ಮಂದಸ್ಮಿತನಾದ.

ಜಾನಕೀರಾಮನೆಡೆಗೆ ಕೈಯನ್ನು ಸರಿಯಾಗಿ ನೀಡಿ ಅಘೋರ ಎಂದ "ನಿನ್ನ ಮನಸ್ಸು ತೃಪ್ತಿಯಾಗುವವರೆಗೆ ನೋಡು !"

"ನಿಜವಾಗಿಯೂ ನಿನ್ನ ಬಗೆಗೆ ಕುತೂಹಲವಿದೆ. ನಿನ್ನ ಹಸ್ತರೇಖೆ ಏನು ಹೇಳುತ್ತದೆಯೋ ನೋಡಿ ಬಿಡುವೆ." ತಲೆಯೆತ್ತದೆ ನೋಡುತ್ತಲೇ ನುಡಿದ ಜಾನಕೀರಾಂ.

"ಹೂಂ ! ನನ್ನ ಧ್ಯೇಯ ಧೋರಣೆಗಳು ನನ್ನನ್ನು ಉಚ್ಚಮಾರ್ಗ ದಲ್ಲಿ ಕೊಂಡೊಯ್ಯುತ್ತವೆಯೋ ? ಅಥವಾ ತುಚ್ಛ ಮಾರ್ಗದಲ್ಲೋ ? ಎಂಬು ದನ್ನು ಈಗಲೇ ನೋಡಿ ಹೇಳಪ್ಪಾ ದೊರೆ! ಮುಂದೆ ಎಲ್ಲರಿಂದ ಬೈಸಿಕೊಳ್ಳುವು ದನ್ನಾದರೂ ತಪ್ಪಿಸು."

ಜಾನಕೀರಾಂ ನಗು ಮುಖದಿಂದ ಹಸ್ತ ರೇಖೆಗಳನ್ನು ಪರಿಶೀಲಿಸ ತೊಡಗಿದ. ಬಹಳ ಹೊತ್ತು ನೋಡಿದ ನಂತರ ಗೋಣು ಅಲ್ಲಾಡಿಸುತ್ತಾ "ಅಘೋರ್, ನಿನ್ನ ಜೀವನ ಸರ್ವೇಸಾಮಾನ್ಯವಾಗುಳಿಯುತ್ತದೆ. ನೀನು ಜೀವನದಲ್ಲೇ ಆಗಲಿ, ವೃತ್ತಿಯಲ್ಲೇ ಆಗಲಿ, ಉಚ್ಚಸ್ಥಾನಕ್ಕೇರಲಾರೆ."

"ಹೋಗಲಿ ಬಿಡು. ಬದುಕಿರುವಷ್ಟುಕಾಲ ಹೇಗೋ ಹಾಗೆ ಕಾಲ ತಳ್ಳಿದರಾಯಿತು. ಸಾಯುವ ತನಕ ಕೈ ಕಾಲು ಗಟ್ಟಿಯಾಗಿರುತ್ತೆ ತಾನೆ ?" ಅಘೋರ ನಕ್ಕು ಕೇಳಿದ.

ನೀನೇನಾದರೂ ಅಂಗಹೀನನಾದರೆ ನಾನೇ ನಿನ್ನನು ಮುಗಿಸಿ ಬಿಡುತ್ತೇನೆ !" ಎಂದ ಮದನ್. ಕೂಡಲೇ ಮೂವರೂ ನಗ ತೊಡಗಿದರು.

"ಅಘೋರ್, ಒಂದು ವೇಳೆ ನಿನಗೆ ಅಂಗವಿಕಲ ಮಗು ಹುಟ್ಟಿದಲ್ಲಿ ಏನು ಮಾಡುವೆ ?"

"ನಿನಗೆ ಕೊಟ್ಟರಾಯಿತು !" ಅಘೋರ ತಟ್ಟನೆ ಹೇಳಿದ.

"ಓ, ನಿನ್ನ ಮಗು ಸಾಕುವುದಕ್ಕೆ ಮದನನಿಗೇನು ಗ್ರಹಚಾರವೇ ?" ಎಂದ ಜಾನಕೀರಾಂ.

ಮೂವರ ಮುಖದಲ್ಲೂ ನಗು ಮಿನುಗಿತು. ತುಸು ತಡೆದು ಅಘೋರ– "ನಮ್ಮ ಬಾಳು ಬದುಕಿನಿಂದ ನಮಗೆ ಸುಖ ಶಾಂತಿಗಳು ಲಭಿಸುವುದಾದರೆ

ಈ ಬದುಕು ಚೆನ್ನ. ಇಲ್ಲದಿದ್ದರೆ.......? ಒಂದು ವೇಳೆ ನಾವೇ ಆಪರೇಶ್ ಮಾಡಿ ನಿಕೃಷ್ಟ ಮೂಲವಾದ ವಸ್ತುಗಳನ್ನು ತೆಗೆದು ಹಾಕಿದರೆ ?"

"ಸರಿ, ಸರಿ. ಯಾರ ಜೀವನ ಸುಖಮಯವಾಗಿರುತ್ತೆ ? ಸುಖ ಕಷ್ಟಗಳೆಂದರೆ ಅಂಗಡಿಯಲ್ಲಿ ಮಾರುವ ಸರಕೆ ? ಬೇಕಾದುದು ತೆಗೆದುಕೊಂಡು ಬೇಡವಾದುದನ್ನು ಬಿಡುವುದಕ್ಕೆ ? ಇನ್ನೂ ಬಾಳೇನೆಂಬುದರ ಕಲ್ಪನೆಯೂ ನಿನಗಿಲ್ಲವಲ್ಲಾ ?" ಮುಖದಲ್ಲಿ ಅಚ್ಚರಿಯ ಮುದ್ರೆಯೊತ್ತಿದ ಜಾನಕೀರಾಂ ಅವನನ್ನೇ ನಿಟ್ಟಿಸಿದ.

"ಸುಮ್ಮನಿರು ಜಾ! ಅವನು ಕಲ್ಪನಾಲೋಕದಲ್ಲಿ ಮುಗಿಳದ್ದುಕೊಂಡೇ ಜೀವನಕ್ಕೆ ಕಾಲಿಡಲಿ."

"ಅಷ್ಟೇನು ನನ್ನನ್ನು ಮಗು ಎಂದು ಕೊಂಡಿರಾ ?"

"ಕಾದು ನೋಡೋಣ."

"ಅಂತೂ ನಿಮ್ಮಗಳ ಮುಂದೆ ನಾನೊಂದು Specimen !"

ಅಘೋರ ಕಿಲಕಿಲನೆ ನಕ್ಕುಬಿಟ್ಟ. ಅವನೊಂದಿಗೆ ಗೆಳೆಯರೂ ದನಿಗೂಡಿಸಿದರು.

೦ ೦ ೦ ೦

ಸಂಜೆಯ ತಿಳಿಗಾಳಿ ತಣ್ಣಗೆ ಬೀಸಿತು. ಹುಡುಗರು ಮನೆಗೆ ಹೋಗಲು ಎದ್ದರು. ಅಘೋರ ತನ್ನ ಹಾದಿಯನ್ನು ತಲೆಬಾಗಿ ತುಳಿದ. ತಲೆಯಲ್ಲಿ ನಾನಾ ಯೋಚನೆಗಳ ತುಮುಲ ಯುದ್ಧ ನಡೆಯುತಿತ್ತು. ಮಾನವ ನಿರ್ಮಿತ ಸಮಾಜದ ಕಟ್ಟುನಿಟ್ಟುಗಳು, ಭಗವನ್ನಿರ್ಮಿತ ರೋಗ ರುಜಿನಗಳ ಹಾವಳಿ ಆಕಸ್ಮಿಕ ಅಪಘಾತಗಳು, ಸಾಧನೆಯ ಹಾದಿಯಲ್ಲಿ ಅಡ್ಡಿ ಬರುವ ದುಷ್ಟಶಕ್ತಿಗಳು ಒಂದೊಂದಾಗಿ ತಲೆಯಲ್ಲಿ ಹುಚ್ಚೆದ್ದು ನರ್ತಿಸತೊಡಗಿದವು. ಜೀವನದಲ್ಲಿ ಸುಖ ಸಂತೋಷಗಳನ್ನು ಪಡೆಯುವ ಬಗೆ ಹೇಗೆ? ಎಂಬುದನ್ನು ಕುರಿತು ಮೆಲುಕು ಹಾಕುತ್ತಾ ಹಾದಿ ಸವೆಸಿದ. ಜೀವನದ ನಾನಾ ಘೋರ ರೂಪಗಳು ಹಲ್ಕಿರಿದು ಅಣಕಿಸಿದುವು. ಮೇಲಾಗಿ ಬಡತನ ಅವಿದ್ಯೆ ಅಜ್ಞಾನ ಜೀವನ ಅಸಹ್ಯವಾಗಿ ತೋರಿ ಮನಸ್ಸಿಗೆ ಜಿಗುಪ್ಸೆ ಮೂಡಿತು.

ತಣ್ಣನೆ ಬೀಸಿ ಬರುವ ಚಳಿಗಾಳಿಯಿಂದಲೋ ಏನೋ. ಅಘೋರ ದೇಹದಾದ್ಯಂತ ಮೆಲ್ಲನೆ-ಬಹು ಮೆಲ್ಲನೆ ನಡುಗಿದ. ಪಕ್ಕದ ಮನೆಯೊಂದರಲ್ಲಿ

ಹೆಣ್ಣದನಿಯೊಂದು ವಚನಗಾನವನ್ನು ಸುಮಧುರವಾಗಿ ಹಾಡುತ್ತಿತ್ತು. ವಚನ ಧಾರೆ ವಿಚಾರಧಾರೆಯಂತೆ ಎದೆಯಾಳಕ್ಕಿಳಿಯಿತು. ಅಘೋರ ಮೈಯೆಲ್ಲಾ ಮನಸ್ಸಾಗಿ ಕಿವಿಯನ್ನು ನಿಮಿರಿಸಿದ.

"ಲೋಕದ ಡೊಂಕ ನೀವೇಕೆ ತಿದ್ದುವಿರಿ?

ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ!"

ಕಣ್ಣುಗಳು ಗಡಿಯಾರದ ಕಡೆ ಹೊರಳಿದುವು. ಹೊತ್ತು ಎಂಟರ ಅಂಚನ್ನು ದಾಟುವುದರಲ್ಲಿತ್ತು. ಅಘೋರ ನಡಿಗೆಯನ್ನಿಷ್ಟು ಚುರುಕುಗೊಳಿಸಿದ. ತಲೆ ಬಾಗಿಲಲ್ಲಿ ತಾಯಿ ಮಗನಿಗಾಗಿ ಕಾದು ನಿಂತಿದ್ದಳು. ಅವಳನ್ನು ಕಾಯಿಸಿದುದನ್ನು ನೆನೆದೊಡನೆಯೇ ಮನಸ್ಸಿಗೆ ಮುಳ್ಳು ನೆಟ್ಟಂತಾಯಿತು. ಅಲ್ಲಿಂದಲೇ ಅವಳೆಂದಳು "ಅಘೂ, ಏಕಪ್ಪಾ ಇಷ್ಟು ಹೊತ್ತು ?"

"ಸ್ನೇಹಿತರೊಂದಿಗೆ ತಿರುಗಾಡಿ ಬರಲು ಹೋಗಿದ್ದೆ ಅಮ್ಮ."

"ಹೇಳಿ ಹೋಗಬಾರದಿತ್ತೆ ಅಘೂ?"

"ಮರತೇ ಬಿಟ್ಟಿದ್ದೆ." ಎನ್ನುತ್ತಾ ಅಘೋರ ಕೈಕಾಲು ತೊಳೆದು ಊಟ ಮುಗಿಸಿ ತನ್ನ ಕೊಠಡಿಯನ್ನು ಸೇರಿದ. ಗೆಳೆಯರ ಹಿತೋಕ್ತಿ ಮನಸ್ಸಿನೆಳೆಯನ್ನು ಜಗ್ಗುತಿತ್ತು. ತರ್ಕವಿತರ್ಕಗಳ ಕತ್ತರಿಯಲ್ಲಿ ಸಿಕ್ಕಿದ ಮನಸ್ಸು ತುಸು ತತ್ತರಿಸಿತ್ತು. ಕಾಲು ಚಾಚಿ ಆರಾಮ ಕುರ್ಚಿಯಲ್ಲಿ ಬಿದ್ದುಕೊಂಡ.

ಅಧ್ಯಾಯ
೮

ಹದಿನೆಂಟರ ಹರೆಯದ ಬಿ.ಎ., ವಿದ್ಯಾರ್ಥಿನಿಯು ಜ್ಞಾನ ತಪ್ಪಿ ಆಸ್ಪತ್ರೆಗೆ ಸೇರಿಸಲ್ಪಟ್ಟಿದಾಳೆ. ಪ್ರಾಣಾಂತಕ ವಿಷವೇರಿದುದರಿಂದ ಅವಳ ಸ್ಥಿತಿ ವಿಪನ್ನಾವಸ್ಥೆಗೇರಿದ್ದು ತಂದೆ ತಾಯಿಯರ ಗೋಳು ವರ್ಣನಾತೀತವಾಗಿತ್ತು. ಬಂಧುಬಾಂಧವರು ವಾರ್ಡಿನ ಆವರಣದಲ್ಲಿ ತುಂಬಿಕೊಂಡಿದ್ದಾರೆ. ಡಾಕ್ಟರು ಗಳು ಸುತ್ತುವರಿದು ನಿಂತು ಪ್ರಾಣವುಳಿಸಲು ಶತ ಪ್ರಯತ್ನ ಪಡುತಿದ್ದಾರೆ. ವಿಷಪೂರಿತವಾದ ಅವಳ ನೆತ್ತರನ್ನು ಒಂದೆಡೆ ಬಸಿಯುತಿದ್ದು ಇನ್ನೊಂದೆಡೆ ಹೊಸ ರಕ್ತವನ್ನು ನೀಡುತಿದ್ದುದನ್ನು ವಿದ್ಯಾರ್ಥಿಗಳು ಗಮನಿಸುತಿದ್ದಾರೆ. ಮೈ ಸೆಟೆದು ನೀಲ ವರ್ಣವಾಗಿ ಮರದ ದಿಮ್ಮಿಯಂತೆ ಬಿದ್ದಿದ್ದ ಅವಳ ಕರುಣಾ ಜನಕ ದೃಶ್ಯ ಎಲ್ಲರ ಎದೆಯಾಳದಲ್ಲೂ ಸಂತಾಪದ ಉಸಿರನ್ನು ಆಡಿಸಿತು.

ಛೇಃ ! ಅರಳು ಮೊಗ್ಗೆಯಂತಾ ಹುಡುಗಿ !

ಏನಾಯಿತು ? ಹೇಗಾಯಿತು ? ಎಂಬುದನ್ನು ಯಾರೂ ಅರಿಯರು. ಅವಳೇ ಸ್ವತಃ ತೆಗೆದುಕೊಂಡಳೇ ? ಅಥವಾ ಅಕಸ್ಮಿಕವಾಗಿ ತೆಗೆದುಕೊಂಡಳೇ ? ಎಂಬುದನ್ನು ಸ್ವತಃ ತಂದೆ ತಾಯಿಯರೂ ಅರಿಯರು...ಸದಾ ಕುಲು ಕುಲು ನಗುವ ಸ್ವಭಾವದ ಹುಡುಗಿ. ಅವಳೆಂದೂ ಅಸುಖಿಯಾಗಿದ್ದುದೇ ಇಲ್ಲ. ಅಂದಮೇಲೆ ಅವಳು ತೆಗೆದುಕೊಂಡಿರಲು ಕಾರಣವೇ ಇಲ್ಲ...ಎಂಬುದು ತಂದೆ ತಾಯಿಯರ ಹೇಳಿಕೆ.

ಹಾಗಾದರೆ......!

ಜೀವನ್ಮರಣಗಳ ಅವ್ಯಾಹತ ಹೋರಾಟದ ನಂತರ ಹುಡುಗಿ ಮರಣ ವನ್ನಪ್ಪಿದಳು. ಮೂರು ದಿನಗಳಲ್ಲಿ ಒಮ್ಮೆಯೂ ಪ್ರಜ್ಞೆ ಮರಳಲಿಲ್ಲ. ಅವಳ ಗೆಳತಿ ವೃಂದವೂ ಮಹಾರಾಣೀ ಕಾಲೇಜಿನ ಅಧ್ಯಾಪಕ ವೃಂದವೂ ಸುತ್ತು ವರಿದು ನಿಂತು ಮರ್ಮರ ಮರುಗಿ ಬಳಬಳ ಕಂಬನಿಗರೆದರು.

ಅಸ್ವಾಭಾವಿಕ ಮರಣವಾದುದರಿಂದ ಹುಡುಗಿಯ ದೇಹವನ್ನು ಪೋಸ್ಟ್ ಮಾರ್ಟಂಗಾಗಿ ಒಪ್ಪಿಸಲ್ಪಟ್ಟಿತು. ಅಳುತ್ತಳುತ್ತಾ ಮುದ್ದಿಸಿ ಬೀಳ್ಕೊಟ್ಟ

ತಾಯಿಯ ದೃಶ್ಯ ಎಂತಹವರಿಗೂ ಮನಸ್ಸು ಕರಗಿಸುವಂತಿತ್ತು. ಡಾಕ್ಟರುಗಳ ಹೃದಯದಲ್ಲಿ ಸಂತಾಪದ ಉಸಿರು ಎಣೆಯಿಲ್ಲದೆ ಹರಿದಾಡಿತು.

ಪೋಸ್ಟ್ ಮಾರ್ಟಂ ನೋಡುವ ಸಲುವಾಗಿ, ಅದಕ್ಕಾಗಿಯೇ ನಿಯೋಜಿತ ಡಾಕ್ಟರಿಗೆ ಕರೆ ಹೋಯಿತು. ವಿದ್ಯಾರ್ಥಿಗಳಲ್ಲಿ ಹುಡುಗಿಯರೊಂದು ಕಡೆ ಹುಡುಗರೊಂದು ಕಡೆ ಗುಂಪಾಗಿ ನೆರೆದರು. ಮೇಜಿನ ಮೇಲೆ ಬಿದ್ದಿದ್ದ ದೇಹ ಕಪ್ಪು ಬಣ್ಣಕ್ಕೆ ತಿರುಗಿತ್ತು. ಎರಡಾಗಿ ಕವಲೊಡೆದ ಹೇರಳವಾದ ಕಪ್ಪು ಕೂದಲು ಜಡೆಗಳಾಗಿ ಎರಡೂ ಪಕ್ಕಗಳಲ್ಲಿ ಇಳಿ ಬಿದ್ದಿದ್ದುವು. ಹಣೆಯ ಮೇಲಿನ ಗುಂಗುರು ಗುಂಗುರಾದ ಅಲೆಗೂದಲು ಎಂದಿನಂತೆ ಮುಖದ ಸುತ್ತ ಹರಡಿ ನಿಂತಿದ್ದು ಉಟ್ಟ ಬಟ್ಟೆ ಇನ್ನೂ ಮಾಸಿರಲಿಲ್ಲ. ಕೈತುಂಬ ಹಸುರು ಕೆಂಪಿನ ಅಂದವಾದ ಗಾಜಿನ ಬಳೆಗಳು, ಹಣೆ ಬೊಟ್ಟು, ನೋಡುವವರಿಗೆ ಸಂಕಟ ಮೂಡುವಂತಿತ್ತು. ಹುಡುಗಿಯ ಘೋರ ಅಂತ್ಯ ವಿದ್ಯಾರ್ಥಿನಿಯರ ಮನ ಕರಗಿಸಿತು. ತಮ್ಮ ತಮ್ಮೊಳಗೆ ಅದೇ ವಿಚಾರವನ್ನು ಗುಸುಗುಸು ಮಾತಾಡಿಕೊಳ್ಳುತ್ತಾ ಒಂದೆಡೆ ಗುಂಪು ಕೂಡಿ ನಿಂತರು.

ಹುಡುಗರ ಗುಂಪಿನಿಂದ ದನಿಯೊಂದು ಹೊರಬಿತ್ತು "ಈ ಮನ ಸೆಳೆಯುವ ಅಲಂಕಾರ ಆಟಾಟೋಪಗಳೇ ತಮಗೆ ಉರುಳೆಂಬುದನ್ನು ಇವರು ಅರಿತುಕೊಂಡಿದ್ದಿದ್ದರೆ ಪ್ರಾಣ ಭಯವೆಲ್ಲಿರುತಿತ್ತು ? ಎಷ್ಟಾದರೂ ಹುಲ್ಲು–ಜಿಂಕೆ !"

"ನಿಜ, ನಿಜ. ಶೃಂಗಾರರಸ ದುಂಬಿಯನ್ನು ಸೆರೆಹಿಡಿದಿರಬೇಕು. ಅದರ ಪರಿಣಾಮ ಇದು !"

"ಹುಡುಗರನ್ನು ಹಾಳು ಮಾಡುವುದೇ ಹೀಗೆ ! ಅಂದಮೇಲೆ ಅನುಭವಿಸುವುದು ಇದ್ದೆ ತೀರುತ್ತೆ ! ಮಾಡಿದ್ದುಣ್ಣೋ ಮಹರಾಯ !"

"ಒಂದು ಗಳಿಗೆಯ ಚಪಲ ಪ್ರಾಣಾಂತಕವಾಯಿತು !"

ಹುಡುಗರ ಪ್ರತಿಕ್ರಿಯೆಯಿಂದ ಹುಡುಗಿಯರ ಮುಖ ಕಪ್ಪಿಟ್ಟಿತು. ಬೇರೆಡೆಗೆ ದಿಟ್ಟಿ ಹರಿಸಿ ನಿಂತು ತಮ್ಮ ತಮ್ಮೊಳಗೆ ಗುಸು ಗುಸು ಎಂದರು. ಒಡನೆ ಗುಂಪಿನ ಮಧ್ಯದಿಂದ ಹೊರಬಿದ್ದ ಸೌಮಾ ಅಂದಳು "ಗೊತ್ತು ಗುರಿ ಇಲ್ಲದೆ ಮಾತಾಡುವುದು ಸರಿಯಲ್ಲ. ವಿನಾ ಕಾರಣ ಟೀಕೆ ಮಾಡುವುದು

ಸಭ್ಯರ ಲಕ್ಷಣವಲ್ಲ." ದನಿಯಲ್ಲಿ ದುಗುಡವೂ ಅಸಮಾಧಾನವೂ ಒಡೆದು ಮೂಡಿತು.

"ನಿಮಗೇಕೆ ಅಷ್ಟೊಂದು ಕೋಪ ? ನಾವು ನಿಮ್ಮ ಬಗ್ಗೆ ಮಾತಾಡಲಿಲ್ಲ ವಷ್ಟೆ?" ಎಂದ ಅಘೋರ. ಕಣ್ಣುಗಳಲ್ಲಿ ತುಂಟತನ ನಲಿಯುತ್ತಿದೆ.

"ನೀವು ಅಲಂಕಾರ ಬಿಟ್ಟಿದ್ದೀರೇನು ? ಸುಮ್ಮನೆ ಹುಡುಗಿಯರ ಮೇಲೇಕೆ ಮಾತು ?"

"ಕ್ಷಮಿಸಿ !" ಕಿಲಕಿಲನೆ ನಕ್ಕು ಎರಡೂ ಕೈಗಳನ್ನು ಜೋಡಿಸಿ ಬಿಟ್ಟ ಅಘೋರ. ಸೌಮಾಳ ಕೆನ್ನೆಗಳಲ್ಲಿ ರಂಗು ಮೂಡಿತು. ಪರಕ್ಕನೆ ಅವಳು ಪುನಃ ಹುಡುಗಿಯರ ದಳವನ್ನು ಕೂಡಿಕೊಂಡಳು. ಕಣ್ಣುಗಳು ಫಳಫಳನೆ ಹೊಳೆದುವು.

ಡಾಕ್ಟರು ಬೇಗನೆ ಬರಲಿಲ್ಲವಾದ್ದರಿಂದ ಹುಡುಗರ ತಂಡ ಬಾಗಿಲ ಕಡೆ ಹೋಯಿತು. ಹುಡುಗಿಯರು ನಿಸ್ಪಂದವಾದ ದೇಹವನ್ನೇ ನಿಟ್ಟಿಸಿ ನಿಟ್ಟುಸಿರು ಬಿಟ್ಟರು. ಸೌಮಾ ಸಂತಾಪದಿಂದ ನುಡಿದಳು "ಪಾಪ, ಬದುಕಿದ್ದರೆ ಇನ್ನೆಂಥಹ ವೀರ ಮಹಿಳೆಯಾಗುವ ಯೋಗವಿತ್ತೋ ಏನೋ ! ದುರ್ವಿಧಿ ಅಷ್ಟರೊಳಗಾಗಿ ಕತ್ತು ಹಿಸುಕಿ ಬಿಟ್ಟಿತು !"

"ಛೀಃ ! ಎಂಥಹ, ಅನ್ಯಾಯ ! ಅಯ್ಯೊ, ಎಂದಾದರೂ ಬುದ್ಧ ವಿವೇಕಾನಂದ, ಗಾಂಧೀಜಿಯವರಂಥಹವರಿಗೆ ಜನ್ಮದಾತೆಯಾಗುತಿದ್ದಳೋ ಏನೋ ! ಈಗ ನೋಡಿದರೆ ಕಂಡ ಕಂಡವರೆಲ್ಲಾ ಬಾಯಿಗೆ ಬಂದಂತೆ ಮಾತಾಡಲು ದಾರಿ ಮಾಡಿದಂತಾಯಿತು."

"ಅದೃಷ್ಟ ಹೀನವಾದಾಗ ಯಾರ್‍ಯಾರ ಗತಿ ಏನೇನಾಗುತ್ತೋ ಭಗವಂತನಿಗೇ ಗೊತ್ತು !"

"ಬಹುಶಃ ಮನಸ್ಸು ಕೆಟ್ಟಾಗ ಬುದ್ಧಿ ಓಡುವುದಿಲ್ಲವೆಂದು ತೋರುತ್ತೆ."

"ಪಾಪ, ಆವಳಿಗೆ ಇನ್ನೊಂದು ಜನ್ಮದಲ್ಲಾದರೂ ಒಳ್ಳೆಯದಾಗಲಿ."

"ದೇವರು ಅವಳ ಆತ್ಮಕ್ಕೆ ಶಾಂತಿ ನೀಡಲಿ."

ಅತ್ತ ಹೋದ ಹುಡುಗರೆಲ್ಲಾ ಇತ್ತ ಕಡೆ ಬಂದರು. ಅಘೋರ ಸೌಮಳತ್ತ ಹುಬ್ಬುಹಾರಿಸಿ ಕೇಳಿದ "ನಿಮ್ಮ ಕೋಪ ಹರಿಯಿತೆ ?" ಕಣ್ಣುಗಳಲ್ಲಿ ತುಂಟ ನಗೆ ನಲಿಯುತ್ತಿದೆ.

"ಒಂದು ವೇಳೆ ನಿಮ್ಮ ಊಹೆ ಸರಿಯಾಗಿದ್ದಿರಲಿಕ್ಕೂ ಸಾಕು. ಆದರೂ ಹತ್ತಾರು ಮಂದಿ ಮಾನವಂತ ಹುಡುಗಿಯರ ಮುಂದೆ ನೀವಾಡಿದ ಮಾತು ಒಪ್ಪುವಂಥಾದ್ದಲ್ಲ !" ಮಾತು ಮುಗಿಯುವುದರೊಳಗಾಗಿ ಡಾಕ್ಟರ್ ಹುಸೇನ್ ಬಂದರು. ಹರಿತವಾದ ಕತ್ತಿಯೊಡನೆ ಅವರ ಕೈ ದೇಹದ ಮೇಲೆ ಹರಿದಾಡಿತು. ಹೊಟ್ಟೆಯನ್ನು ಬಗೆದು ರಸವನ್ನು ಶೀಶೆಯಲ್ಲಿ ತುಂಬಿ ಕೆಮಿಕಲ್ಸ್ ಎಗ್ಜಾಮಿನಿಗೋಸ್ಕರ ತೆಗೆದಿಟ್ಟುಕೊಂಡು ಗರ್ಭಕೋಶವನ್ನು ಕೊಯ್ದು ಪರೀಕ್ಷೆ ಮಾಡಿ "ಏನೂ ಇಲ್ಲ," ಎಂದರು. ಸುತ್ತುವರಿದು ಉಸಿರು ಹಿಡಿದು ನಿಂತಿದ್ದ ಹುಡುಗಿಯರು ಹಾಯಾಗಿ ಉಸಿರಾಡಿದರು.

ಅಘೋರ ಹುಡುಗಿಯರ ಕಡೆ ತಲೆಬಾಗಿ "ಕ್ಷಮಿಸಿರಿ." ಎಂದವನೇ ಅಲ್ಲಿ ನಿಲ್ಲದೆ ಹೊರಬಿದ್ದ. ಇತರ ಹುಡುಗರೂ ಹಿಂಬಾಲಿಸಿದರು.

೦ ೦ ೦ ೦

ಇನ್ನೊಮ್ಮೆ ಡಾ|| ಭಾರ್ಗವಾರವರು ಆಪರೇಶನ್ ಮಾಡಲಿರುವಾಗ ವಿದ್ಯಾರ್ಥಿಗಳ ತಂಡ ನೋಡಲು ಕಾದಿತ್ತು. ಡಾಕ್ಟರು ಹಾಸ್ಯ ಮನೋವೃತ್ತಿಯವರಾದುದರಿಂದ ವಿದ್ಯಾರ್ಥಿಗಳಿಗೆ ಅವರೆಂದರೆ ಅಚ್ಚುಮೆಚ್ಚು. ಮೊದಲ ಆಪರೇಶನ್ ರೌಂಡ್ ವರ್ಮ್ಸ್ ಅಬ್ಸ್ಟ್ರಕ್ಷನ್ (Round worms obstruction) ಆದ ಬಾಲಕನದು. ಅವನಿಗೆ ಪೂರ್ವಭಾವೀ ಏರ್ಪಾಡು ಮಾಡಲು ಅವಕಾಶ ದೊರೆತಿರಲಿಲ್ಲ. ಸಹಿಸಲಸಾಧ್ಯವಾದನೋವು ಬಂದುದರಿಂದ ಮನೆಯಿಂದ ಬಂದೊಡನೆಯೇ ನೇರವಾಗಿ ಆಪರೇಶನ್ ಥಿಯೇಟರಿಗೆ ಕರೆದೊಯ್ಯಲಾಯಿತು. ಹುಡುಗ ಹೆದರಿ ಕಂಗಾಲಾಗಿ ಚೀರಿಡುತಿದ್ದ. ಚೀರುದನಿ ಮಾಡು ಮೊಳಗುವಂತೆ ಮೊಳಗಿತು. ನಾಲ್ಕಾರು ದನಿಗಳು ಸಮಾಧಾನ ಹೇಳಿದುವು. "ಹೆದರಿಕೊಳ್ಳಬೇಡಪ್ಪಾ, ನಾವೆಲ್ಲಾ ಇದ್ದೇವೆ."

ಆದರೆ ಭಯಭೀತನಾದ ಅವನ ತಲೆಗೆ ಅದು ಹೋಗುವುದುಂಟೇ ? ಅವನು ಒಂದೇ ಸಮನೆ ಚೀರಿಕೊಳ್ಳುತಿದ್ದ "ಅಮ್ಮಾ ! ಅಪ್ಪಾ ?" ಕೊರಳುಬ್ಬಿ ಕಣ್ಣುಗಳಲ್ಲಿ ಕೋಡಿಗಟ್ಟಿ ಕಂಬನಿಯು ಸುರಿಯುತಿತ್ತು. ಕರುಳಿನ ಬಾಧೆಯನ್ನೂ ಲೆಕ್ಕಿಸದೆ ಅವನು ಕೂಗಿ ಹೊರಳುತಿದ್ದುದನ್ನು ನೋಡಿ ಡಾ|| ಭಾರ್ಗವಾ ಹಾಸ್ಯವಾಣಿಯಲ್ಲಿ ನುಡಿದರು "ಮಗೂ ತುಂಬ ಸೊಗಸಾಗಿ ಹಾಡುತ್ತೀಯೆ ? ನಿನ್ನ ಸಂಗೀತ ಗುರುಗಳು ಯಾರು ?"

ಅವನು ಹೊರಳಾಡದಂತೆ ಹಿಡಿದುಕೊಂಡಿದ್ದ ದಾದಿಯರ ಮುಖದಲ್ಲೂ ನಗೆಯು ನಲಿಯಿತು. ಸುತ್ತುವರಿದ ವಿದ್ಯಾರ್ಥಿಗಳೂ ಮುಸು ಮುಸು ನಕ್ಕರು.

"ಮಗೂ, ನನಗೆ ಕುಣಿಯಲು ಬರುತ್ತೆ. ನಿನ್ನ ಸಂಗೀತಕ್ಕೆ ಸರಿಯಾಗಿ ನಾನು ಕುಣಿಯಲೇ ?" ಕೇಳಿದರು ಡಾ|| ಭಾರ್ಗವಾ.

ಹುಡುಗ ಸಿಟ್ಟಿನಿಂದ ಚೀರಿದ "ಏನೂ ಬೇಕಿಲ್ಲ !"

ಎಲ್ಲರೂ ಗೊಳ್ಳನೆ ನಕ್ಕರು.

"ತಮಾಷೆಯಲ್ಲ! ನಿಜವಾಗಿಯೂ ನನಗೆ ಕುಣಿಯಲು ಬರುತ್ತೆ ಮಗೂ !"

ನಗುನಗುತ್ತಾ ನಾಟ್ಯ ಭಂಗಿಯಲ್ಲಿ ನಿಂತರು ಡಾಕ್ಟರು. ಮುಖಕ್ಕೆ ಮುಖವಾಡ ಕೊರಳಲ್ಲಿ ಸ್ಟೆತೊಸ್ಕೋಪಿನ ಹಾರ ಕೈಗಳಲ್ಲಿ ಬಿಳಿಯ ಹಸ್ತ ಚೀಲ. ಹುಡುಗ ಅವರ ವೇಶ ಭೂಷಣದೊಂದಿಗೆ ನಾಟ್ಯ ಭಂಗಿಯನ್ನೂ ನೋಡಿ ಕುಲುಕುಲು ನಗತೊಡಗಿದ.

ಥಾ ! ಧಿಂ, ಧಿಂ, ಥಾ ! ಡಾಕ್ಟರು ಅತ್ತಿಂದಿತ್ತ ನಾಟ್ಯ ಭಂಗಿಯಲ್ಲಿ ಜಿಗಿದಾಡಿದರು. ಒಡನೆ ನಗುವಿನ ಹೊನಲು ಹುಚ್ಚೆದ್ದು ಹರಿಯಿತು. ನೋವಿನ ಬಾಧೆಯನ್ನೂ ಮರೆತು ಬಾಲಕ ನಗತೊಡಗಿದ. ಅವನನ್ನು ನಕ್ಕು ನಗಿಸುತ್ತಲೇ ಆಪರೇಶನ್ನಿನ ತಯಾರಿ ನಡೆಸಿದರು ಭಾರ್ಗವಾ. ಹೊಟ್ಟೆಯ ಮಾಂಸದ ಪದರನ್ನು ಹರಿದು ನೋಡಿದಾಗ ಕರುಳಿನಲ್ಲಿ ಹುಳುಗಳ ದಂಡು ಉಂಡೆಗಟ್ಟಿಕೊಂಡಿದ್ದವು. ಅವುಗಳಿಂದಾಗಿ ಆಹಾರ ಪದಾರ್ಥವು ಮುಂದು ವರಿಯದೆ ನೋವು ಕಾಣಿಸಿಕೊಂಡಿತ್ತು. ಇನ್ನು ಸ್ವಲ್ಪ ಹೊತ್ತು ಕಳೆದಿದ್ದರೆ ಹುಡುಗ ಬದುಕುವ ಸಂಭವವಿರಲಿಲ್ಲ. ಕರುಳನ್ನು ಕತ್ತರಿಸಿ ಚೆಂಡುಗಟ್ಟಿ ಗೊಂಡಿದ್ದ ನೂರಾರು ಹುಳುಗಳನ್ನು ಬಿಡಿಸಿ ಈಚೆಗೆ ತೆಗೆಯುತ್ತಿದ್ದ ಡಾ|| ಭಾರ್ಗವಾ ನಡುನಡುವೆ ಹಾಸ್ಯದ ಚಟಾಕಿಗಳನ್ನು ಹಾರಿಸುತಿದ್ದರು. ಅವರ ಪಾಠವೆಂದರೆ ವಿದ್ಯಾರ್ಥಿಗಳಿಗೆ ಅದೊಂದು ಹಬ್ಬ !

"ಶಾರದಾ!" ಡಾಕ್ಟರ ದನಿ ಹೊರಬೀಳುತ್ತಲೂ ಬದಿಯಲ್ಲಿದ್ದ ಶಾರದೆ ಎದುರಿಗೆ ಬಂದಳು.

ಡಾಕ್ಟರು ಕೇಳಿದರು "ಒಂದುವೇಳೆ, ನಿಮ್ಮಲ್ಲಿ ಯಾರಿಗಾದರೂ ರೌಂಡ್ ವರ್ಮ್ಸ ಅಬ್ಸ್ಟ್ರಕ್ಷನ್ ಆದರೆ ಏನು ಮಾಡುತ್ತೀಯಮ್ಮಾ ?ಇದೇನು

ಚಿಕ್ಕ ಆಪರೇಶ್ನ. ಇದಕ್ಕೇಕೆ ಡಾಕ್ಟರ ಸಹಾಯ ? ಎಂದುಕೊಂಡು ನೀನೇ ಅಡುಗೆಯ ಸಲಕರಣೆಯಿಂದ ಆಪರೇಶ್ನ ಮಾಡಿ ಬಿಡುತ್ತೀಯೋ, ಹೇಗೆ ?" ಮಾತು ಹೊರಬೀಳುವುದರೊಳಗಾಗಿ ಎಲ್ಲರೂ ನಕ್ಕರು.

ಹುಡುಗರ ಗುಂಪಿನಿಂದ ಗಂಡು ದನಿಯೊಂದು ಹೊರಬಿತ್ತು "ಅವರು ಹಾಗೆ ಮಾಡಲಿಕ್ಕೂ ಸಾಕು, ಸಾರ್ !"

ಶಾರದಾ ಬಾಗಿದ್ದ ತಲೆಯೆತ್ತದೆ ಹೇಳಿದಳು "ಇಲ್ಲ ಸಾರ್; ಇಲ್ಲಿಗೆ ಕರೆದುಕೊಂಡು ಬರುವೆ." ಎಲ್ಲರ ನೋಟವೂ ಅವಳೆಡೆಗೆ ಹರಿದು ಬೇರೆಡೆಗೆ ಸಿಡಿದುವು. ಅವಳ ಕೆನ್ನೆಗಳಲ್ಲಿ ರಂಗು ಮೂಡಿತ್ತು.

ಕತ್ತರಿಸುವ ವಿಧಾನ ಹುಳುಗಳನ್ನು ತೆಗೆಯುವ ವಿಧಾನ ಹೊಲಿಯುವ ವಿಧಾನಗಳನ್ನು ಒಂದೊಂದಾಗಿ ವಿವರಿಸುತ್ತಾ ಡಾಕ್ಟರೆಂದರು "ಇವನನ್ನು ನೋಡಿ ನಿಮಗೆಲ್ಲಾ ಭಯ ಹುಟ್ಟಿರಬಹುದಲ್ಲವೇ ?"

"ಇಲ್ಲ ಸಾರ್." ಒಮ್ಮೆಲೇ ಅನೇಕ ದನಿಗಳು ಹೊರಬಿದ್ದುವು.

"ನನಗೊತ್ತು ಇಂದು ಏನಿಲ್ಲ ಅಂದರೂ ನಂದನ್ ಫಾರ್ಮೆಸಿಯಲ್ಲಿ ಸುಲಭವಾಗಿ ಹತ್ತಾರು ಶೀಶೆ "ಹೆಲ್ಮ್ಯಾಸಿಡ್" ಖರ್ಚಾಗುತ್ತೆ !"

"ಹೆಲ್ಮ್ಯಾಸಿಡ್ !" ಅಘೋರ ಕಣ್ಣರಳಿಸಿದ.

ಎಲ್ಲೆಲ್ಲೂ ನಗುವಿನಲೆ ತುಂಬಿ ಹರಿಯಿತು. ಡಾಕ್ಟರು ಮುಂದುವರಿದರು. "ನಾನು ಸುಮಾರು ಏಳೆಂಟು ವರ್ಷದ ಹುಡುಗನಾಗಿದ್ದಾಗ ನಡೆದ ವಿಷಯ ಕೇಳಿರಿ." ಎಂದ ಡಾಕ್ಟರು ಉಗುಳು ನುಂಗಿ ಗಂಟಲು ಸರಿಮಾಡಿಕೊಂಡು ಮುಂದುವರಿದರು. "ನಾನು ಆಗಾಗ ಕಾಯಿಲೆ ಬೀಳುತಿದ್ದುದುಂಟು. ನಮ್ಮ ತಂದೆ ಅದೇ ಬೀದಿಯಲ್ಲಿದ್ದ ಪಂಡಿತರ ಮನೆಗೆ ಕರೆದುಕೊಂಡು ಹೋಗು ತಿದ್ದರು. ಅವರು ಕೊಡುತಿದ್ದ ಬೇರಿನ ಕಷಾಯವನ್ನು ಬೆಲ್ಲದ ಆಸೆಯಿಂದ ಕಣ್ಮುಚ್ಚಿ ಕುಡಿಯುತಿದ್ದೆ ! ಬೆಲ್ಲಕ್ಕಾಗಿ ಅವರ ಮನೆಗೆ ಹೋಗುವುದೆಂದರೆ ಖುಷಿಯೋ ಖುಷಿ !"

ಹುಡುಗರು ಮುಸು ಮುಸು ನಗ ತೊಡಗಿದರು. ಡಾಕ್ಟರು ಪುನಃ ಮುಂದುವರಿದರು. "ನನಗೆ ಆಗಾಗ ಹೊಟ್ಟೆನೋವು ಜೊತೆಗೆ ವಾಂತಿ ಕಾಣಿಸಿ ಕೊಳ್ಳುತಿತ್ತು. ಎಲ್ಲಕ್ಕೂ ಪಂಡಿತರ ಕಷಾಯವೇ ಮದ್ದು ! ಒಮ್ಮೆ ನನ್ನ ಗಂಟಲಲ್ಲಿ ಏನೋ ಸಿಕ್ಕಿಕೊಂಡಂತೆ ತೊಂದರೆ ಕಾಣಿಸಿಕೊಂಡಿತು. ಅದಕ್ಕೂ

ತುಸು ಮುಂಚೆ ನಾನು ರೊಟ್ಟಿ ತಿಂದಿದ್ದೆ. ಅದೇ ಗಂಟಲಲ್ಲಿ ಸಿಕ್ಕಿಕೊಂಡಿರ ಬಹುದೆಂದು ಎಲ್ಲರೂ ಭಾವಿಸಿದರು. ಅಮ್ಮ ನೀರು ಕುಡಿಸಿದರು. ಬಾಳೆ ಹಣ್ಣು ನುಂಗಿಸಿದರು. ಆದರೂ ಅದು ಹೋಗಲಿಲ್ಲ. ಬಹಳ ಹೊತ್ತಿನವರೆಗೆ ಹಾಗೇಯಿತ್ತು. ನಾನು ತಾಳಿಕೊಳ್ಳಲಾರದೆ ಗಂಟಲಿಗೆ ಕೈ ಹಾಕಿ ಬಲತ್ಕಾರ ವಾಗಿ ವಾಂತಿ ಮಾಡಿದೆ ದೊಡ್ಡ ಹುಳುವೊಂದು ಹೊರಬಿತ್ತು !"

ಗೊಳ್ಳನೆ ಎಲ್ಲರೂ ನಗತೊಡಗಿದರು. ನಗುವಿನಲೆ ಅಡಗುವ ತನಕ ಸುಮ್ಮನಿದ್ದು ಸೌಮ್ಯಾ ಕೇಳಿದಳು "ಅನಂತರ ಏನು ಮಾಡಿದಿರಿ, ಸಾರ್ ?"

"ಅನಂತರವೂ ಚೂರ್ಣ ಭಸ್ಮಗಳ ವಿನಿಯೋಗವಾಯಿತು. ಏನೂ ಪ್ರಯೋಜನವಾಗಲಿಲ್ಲ. ಒಂದು ವೇಳೆ ಆಗ ಹೀಗೇನಾದರೂ ಆಗಿದ್ದಿದ್ದರೆ ನಿಮಗೆ ಪಾಠ ಹೇಳಲು ಇಂದು ನಾನಿರುತ್ತಿರಲಿಲ್ಲ." ಎಂದ ಡಾಕ್ಟರು ನಗು ನಗುತ್ತಾ ಪುನಃ ಮುಂದುವರಿದರು—"ನಮ್ಮ ಮನೆಯ ಪಕ್ಕದಲ್ಲಿ ತಾಲ್ಲೂಕ್ ಆಫೀಸಿನ ಗುಮಾಸ್ತರೊಬ್ಬರಿದ್ದರು. ಅವರ ಮಗ ಶಿವಶಂಕರ್ ನನ್ನ ಜೊತೆ ಗಾರ. ಅವನೊಂದಿಗೆ ನಾನು ಮಾಡಿದ ಸಾಹಸ ಕಾರ್ಯವನ್ನು ಬಣ್ಣಿಸಿದ್ದೆ !" ಪುನಃ ನಗುವಿನ ಹೊನಲು ಹರಿಯಿತು. ಡಾಕ್ಟರು ನಕ್ಕು ಮುಂದುವರಿದರು, "ಶಿವಶಂಕರ್ ತಂದೆಗೆ ಈ ವಿಚಿತ್ರ ಸುದ್ದಿಯನ್ನು ತಕ್ಷಣ ಮುಟ್ಟಿಸಿದ. ಅವರು ಮನೆಗೆ ಬಂದು ನಮ್ಮ ತಂದೆಯನ್ನು ನೋಡಿ, ಹುಡುಗನ ಹೊಟ್ಟೆಡೊಳ್ಳಾಗಿರು ವುದೇ ಕಾಣಿಸುವುದಿಲ್ಲವೇ ? ಮೊದಲಿನಷ್ಟು ಹುಡುಗನಿಗೆ ಹುಳುವಿನ ಔಷಧಿ ಕೊಡಿಸಿರಿ ಎಂದರು. ಅನಂತರ ಅವರೇ ಎಲ್ಲಿಂದಲೋ ಔಷಧವನ್ನು ಕೊಂಡು ತಂದರು. ಈಗಿನಂತೆ ಆಗ ಈ ಸುಖಕರವಾದ ಔಷಧಗಳೆಲ್ಲಾ ಇರಲಿಲ್ಲ. ಅನಂತರ ಅದರ ಉಪಯೋಗವೂ ಆಯಿತು. ಆಮೇಲೆ ಕೇಳಬೇಕೆ ? ಹುಳುಗಳು ಬಿದ್ದುದೆಂದರೆ ಶ್ಯಾವಿಗೆ ಪಟ್ಟಣ ಒಡೆದು ಸುರುವಿದಂತೆ !"

"ಓ......"

ಮತ್ತೆ ಕುಲುಕುಲು ನಗುವಿನ ಲಹರಿ ಉಕ್ಕಿಹರಿಯಿತು. ಡಾ॥ಭಾರ್ಗವಾ ನಗುನಗುತ್ತಲೇ ಆಪರೇಶನ್ ಮುಗಿಸಿದರು. ಅವರ ಇನ್ನೊಂದು ಆಪರೇಶನ್ ನೋಡಲು ಹುಡುಗರು ಕುತೂಹಲಿಗಳಾಗಿದ್ದರು. ಗಾಲಿಯ ಕುರ್ಚಿಯ ಮೇಲೆ ರೋಗಿಯೊಬ್ಬನನ್ನು ಒಳಗಡೆ ಕರೆದುಕೊಂಡು ಬರಲಾಯಿತು.

ಅವನು ಬೆರಗು ಗಣ್ಣುಗಳಿಂದ ಸುತ್ತಲೂ ನಿರಿನಿರಿ ನಿಟ್ಟಿಸಿದ. ಅನುರಿಜಂ (Anurysm) ಎಂಬ ಗೆಡ್ಡೆಯು ಅವನ ಎಡಗಿವಿಯಿಂದ ಕೆಳಗಡೆ ಕತ್ತಿನಲ್ಲಿ ಉಬ್ಬಿಳು ಗಡ್ಡೆಯ ಗಾತ್ರದಷ್ಟು ಗುಂಡಗೆ ಬೆಳೆದುಕೊಂಡಿತ್ತು.

ಡಾಕ್ಟರು ಕೇಳಿದರು "ನಿಮ್ಮ ವಯಸ್ಸೆಷ್ಟು ಯಜಮಾನರೇ ?"

"ಐವತ್ತರ ಮೇಲಾಗಿರಬಹುದು ಸ್ವಾಮಿ"—ಎಂದ ವ್ಯಕ್ತಿ ಸುತ್ತ ಮುತ್ತಲಿದ್ದ ಶಸ್ತ್ರ ಕ್ರಿಯೆಯ ಸಲಕರಣೆಗಳನ್ನು ಗಾಬರಿಯಿಂದ ಈಕ್ಷಿಸಿತು. ಎಂದೂ ನೋಡಿರದ ಘೋರ ವಿಚಿತ್ರವನ್ನು ನೋಡಿದೊಡನೆಯೆ ಹಳ್ಳಿಯ ಗಾಂಗಿನಿಗೆ ಸಹಜವಾಗಿ ಭಯ ಗಾಬರಿಗಳು ಮೂಡಿದವು. ಎರಡೂ ಕೈಗಳನ್ನು ಜೋಡಿಸಿಕೊಂಡು ಹೇಳಿದ "ಇವನ್ನೋಡಿದರೆ ತುಂಬ ಭಯವಾಗುತ್ತೆ. ನನಗೆ ಚಿಕ್ಕಚಿಕ್ಕ ಮಕ್ಕಳಿದ್ದಾರೆ. ಇನ್ನೂ ಸಂಸಾರದ ಜವಾಬ್ದಾರಿ ಬಹಳ ಇದೆ. ಒಂದುವೇಳೆ ಅಪಾಯ ಸಂಭವಿಸಿದರೆ ಏನು ಗತಿ ?.........ನನ್ನನ್ನು ಸಾಯಿಸಬೇಡಿ ಡಾಕ್ಟರೇ !"

ಅವನು ದೊಡ್ಡದನಿ ತೆಗೆದು ಬಿಕ್ಕಿ ಬಿಕ್ಕಿ ಅಳತೊಡಗಿದ. ಮೈ ಗಡ ಗಡ ನಡುಗ ಹತ್ತಿತು.

ಡಾ|| ಭಾರ್ಗವಾ ಮೈದಡವಿ ಸಮಾಧಾನಪಡಿಸಿ ಹೇಳಿದರು "ಯಜಮಾನರೇ ಹೆದರಬೇಡಿ. ನಾವಿರುವುದೇ ನಿಮ್ಮ ಕ್ಷೇಮವನ್ನು ನೋಡಿಕೊಳ್ಳುವುದಕ್ಕೆ-ಸಾಯಿಸುವುದಕ್ಕಲ್ಲ. ಧೈರ್ಯವಾಗಿರಿ." ನಸುನಕ್ಕು ಭಾರ್ಗವಾ ಸ್ವಲ್ಪ ತಡೆದು ಪುನಃ ಕೇಳಿದರು "ನಿಮಗೆ ಚಿಕ್ಕ ಮಕ್ಕಳಿದ್ದಾರೆಯೇ ?"

"ಹೌದು." ದೊಡ್ಡದನಿಯಲ್ಲಿ ಬಿಕ್ಕುತ್ತಾ ಹೇಳಿತು ವ್ಯಕ್ತಿ.

"ಎಷ್ಟು ಮಂದಿ ಇದ್ದಾರೆ !"

"ಆರು ಮಂದಿ ಇದ್ದಾರೆ. ಎಲ್ಲರೂ ಚಿಕ್ಕವರೇ ಸ್ವಾಮಿ."

"ಹಿರಿಯ ಮಗುವಿಗೆ ಎಷ್ಟು ವಯಸ್ಸು ?"

"ಒಂಬತ್ತು."

"ಚಿಕ್ಕದು ?"

"ಹತ್ತು ತಿಂಗಳು."

"ನೀವು ಭಯಪಡಬೇಕಾಗಿಲ್ಲ. ಕೆಲವೇ ದಿನಗಳಲ್ಲಿ ನೀವು ಸುಖವಾಗಿ ಹಿಂದಿರುಗಬಹುದು."

ಎರಡೂ ಕೈಗಳನ್ನು ಜೋಡಿಸಿಕೊಂಡು ವ್ಯಕ್ತಿ ಬಿಕ್ಕುತ್ತಾ ಮತ್ತೆ ಹೇಳಿತು "ನಾನು ಹೀಗೆಯೇ ನರಳಿ ಸತ್ತರೂ ಚಿಂತೆಯಿಲ್ಲ. ಇಂದು ಮಾತ್ರ ನನ್ನನ್ನು ಸಾಯಗೊಳಿಸಬೇಡಿರಿ."

ಡಾ॥ ಭಾರ್ಗವಾರವರಿಗೆ ಅವನನ್ನು ಸಂತೈಸಬೇಕಾದರೆ ಸಾಕು ಸಾಕಾಯಿತು. ತಮ್ಮ ಅಂತಃಕರಣದ ಸಂಪುಟವನ್ನೇ ತೆರೆದು ಮುಂದಿಟ್ಟು ಸಂತೈಸಿ ಒಪ್ಪಿಸಿ ಆಪರೇಶನ್ನಿನ ತಯಾರಿ ನಡೆಸುತಿದ್ದ ಭಾರ್ಗವಾ ಕೇಳಿದರು, "ಅಘೋರ್, ಒಂದು ವೇಳೆ ನೀನು ಆಪರೇಶನ್ನಿಗೆ ಒಳಪಡಬೇಕಾಗಿ ಬಂದರೆ ಹೀಗೆ ಅಳುತ್ತೀಯೇನಪ್ಪಾ ?"

"ಇಲ್ಲ ಸಾರ್ ! ಇಲ್ಲಸಾರ್ !" ಉತ್ತರ ಹೊರಬೀಳುವುದರೊಳಗಾಗಿ ಎಲ್ಲರೂ ನಗ ತೊಡಗಿದರು. ಹುಡುಗರ ಗುಂಪಿನಲ್ಲೂ ಹುಡುಗಿಯರ ಗುಂಪಿನಲ್ಲೂ ಅನೇಕ ದನಿಗಳು ಒಮ್ಮೆಲೇ ಹೊರಬಿದ್ದುವು "ಹೌದು ಸಾರ್. ಅಘೋರ್ ಖಂಡಿತಾ ಅಳುತ್ತಾರೆ !"

ಪುನಃ ನಗುವಿನ ಹೊನಲು ಹುಚ್ಚೆದ್ದು ಹರಿಯಿತು. ಅಘೋರನೂ ಅವರೊಂದಿಗೆ ದನಿ ಗೂಡಿಸಿದ. ನಗುವಿನ ಆವೇಗ ಕಡಿಮೆಯಾಗುತ್ತಲೂ ಡಾ॥ ಭಾರ್ಗವಾ ಹೇಳಿದರು. "ಕೇಳಿರಿ, ನಿಮಗೊಂದು ಆಪರೇಶನ್ನಿನ ವಿಷಯ ಹೇಳುವೆ." ಎಂದು ಅವರು ನೆತ್ತರು ಸ್ರವಿಸುವ ನರವನ್ನು ಅದುಮಿ ಹಿಡಿದು ಕಟ್ಟಿ ಆಪರೇಶನ್ ಮಾಡುತ್ತಾ ಮುಂದುವರಿದರು "ಇದಾದುದು ದೆಹಲಿಯ ಆಸ್ಪತ್ರೆಯಲ್ಲಿ. ಒಬ್ಬ ತೇಜಸ್ವಿ ತರುಣ ಸಂನ್ಯಾಸಿ ಆಸ್ಪತ್ರೆಗೆ ಬಂದರು. ಅವರ ಬಲಗೈ ಹಸ್ತಕ್ಕೆ ವಿಷ ಪೂರ್ಣವಾದ ಮುಳ್ಳುತಾಗಿ ವಿಷವೇರಿ ಮೊಣಕೈವರೆಗೆ ಕೊಳೆತು ಹೋಗಿತ್ತು. ಕೈ ಕತ್ತರಿಸದೆ ವಿಧಿಯಿರಲಿಲ್ಲ. ಹಿಮಾಲಯದ ತಪ್ಪಲಿನಿಂದ ನಡದೇ ಬಂದಿದ್ದಾರೆ. ನೋಡಿದರೆ ಇನ್ನೂ ತರುಣ. ಅಪೂರ್ವ ತೇಜಸ್ವಿ. ಅವರ ಕೈಯನ್ನು ನೋಡಿದರೆ ಎಂತಹ ಕಲ್ಲದೆಯವರಿಗೂ ಹೃದಯ ಕರಗುವಂತಿತ್ತು.

"ದೂರದಿಂದ ನಡೆದು ಬಂದ ಅವರು ತುಸು ಬಳಲಿದ್ದರು. ಅಲ್ಲಿಯ ಹಿರಿಯ ವೈದ್ಯ ಡಾ॥ ಭರತ್ ಆಪರೇಶನ್ ಮಾಡಲು ಮುಂದಾದರು. ಅವರನ್ನು ಆಪರೇಶನ್ ಥಿಯೇಟರಿಗೆ ಕರೆದೊಯ್ಯಲಾಯಿತು. ಧೀರಾನಂದ

ಅನಸ್ತೇಶಿಯಾ ತೆಗೆದುಕೊಳ್ಳಲು ಒಪ್ಪದೆ ಒಂದೇ ನಿರ್ಧಾರದಿಂದ ಹೇಳಿದರು. "ಅನಸ್ತೇಶಿಯಾ ಬೇಡವೇ ಬೇಡ ಹಾಗೆಯೆ ಮಾಡಿರಿ."

"ನೀವು ಅನಸ್ತೇಶಿಯಾ ತೆಗೆದುಕೊಳ್ಳದಿದ್ದಲ್ಲಿ ನೋವು ಸಹಿಸುವುದು ಸಾಧ್ಯವೇಯಿಲ್ಲ. ಕೈ ಕತ್ತರಿಸಿ ತೆಗೆಯುವುತೆಂದರೆ ಸಾಮಾನ್ಯವಲ್ಲ." ಡಾ॥ ಭರತ್ ಸಖೇದಾಶ್ಚರ್ಯದಿಂದ ನುಡಿದರು.

ಎಷ್ಟೆಂದರೂ ಧೀರಾನಂದ ಒಪ್ಪಲಿಲ್ಲ. ನಗು ನಗುತ್ತಲೇ ಹೇಳಿದರು "ನೋವನ್ನು ಸಹಿಸಿಕೊಳ್ಳುವುದು ನನಗೆ ಸೇರಿದ್ದು !"

ಎಲ್ಲರಿಗೂ ಅಚ್ಚರಿಯೋ ಅಚ್ಚರಿ. ಎಲ್ಲರಿಗೂ ಅವರೊಂದು ಸ್ಪೆಸಿಮನ್ ಆದರು ಎಂದರೂ ತಪ್ಪಾಗಲಿಕ್ಕಿಲ್ಲ. ನಾನಂತೂ ಆಶ್ಚರ್ಯದಿಂದ ಅವರನ್ನೇ ನಿಟ್ಟಿಸಿದೆ. ಮುಖದಲ್ಲಿ ತೇಜಸ್ಸು ತಾಂಡವಾಡುತಿತ್ತು. ಕಣ್ಣುಗಳು ನಕ್ಷತ್ರಗಳಂತೆ ಹೊಳೆಯುತಿದ್ದುವು. ಅವರು ಎಳ್ಳಷ್ಟೂ ವಿಚಲಿತರಾಗಲಿಲ್ಲ. ಯಾವ ಭಾವೋದ್ವೇಗವೂ ಇಲ್ಲದೆ ಸಮಾಧಾನದ ಗಣಿಯಾಗಿ ತೋರಿದರು.

"ನೋವಿನಿಂದ ಶಾಕ್ (Shock) ಬರಬಹುದು. ಅದರಿಂದ ಪ್ರಾಣಕ್ಕೆ ಅಪಾಯವೂ ಉಂಟು. ನೀವು ದಯಮಾಡಿ ಒಪ್ಪಿಕೊಳ್ಳಿರಿ." ಡಾ॥ ಭರತ್ ಕೇಳಿಕೊಂಡರು.

"ನಿಮಗೇಕೆ ಅಷ್ಟೊಂದು ಭಯ?" ಅವರು ಹಸನ್ಮುಖದಿಂದ ಕೇಳಿದರು.

ಡಾ॥ ಭರತ್ ಆಶ್ಚರ್ಯದಿಂದ ನೋಡುತ್ತಾ ಸ್ವಲ್ಪ ಹೊತ್ತು ನಿಂತು ಬಿಟ್ಟರು. ಹೃನ್ಮನಗಳು ಸ್ಥಬ್ಧವಾದುವು.

"ನಿಮಗೆ ಅಗತ್ಯವೆನಿಸಿದರೆ ಹೇಳಿರಿ ಬರೆದುಕೊಡುವೆ." ಎಂದರು ಧೀರಾನಂದ ಶಾಂತ ಗಂಭೀರ ಭಾವದಿಂದ.

ಡಾಕ್ಟರುಗಳು ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಏನು ಮಾಡುವುದೆಂಬ ವಿಚಾರವಾಗಿ ತಮ್ಮ ತಮ್ಮೊಳಗೆ ಮಾತಾಡಿಕೊಂಡ ನಂತರ ಅವರಿಷ್ಟದಂತೆಯೇ ಆಪರೇಶನ್ ಮಾಡುವುದೆಂಬ ತೀರ್ಮಾನಕ್ಕೆ ಬಂದರು.

"ನಿಮಗೆ ಅಷ್ಟೊಂದು ಧೈರ್ಯ ವಿಶ್ವಾಸಗಳಿದ್ದರೆ ನಮ್ಮ ಅಭ್ಯಂತರವೇನೂ ಇಲ್ಲ." ನುಡಿದರು ಡಾ॥ಭರತ್. ಅವರಿಗೆ ನಿಜವಾಗಿಯೂ ಸಮಾಧಾನವಿರಲಿಲ್ಲ ವಾದರೂ ವಿಧಿ ಇರಲಿಲ್ಲ. ಧೀರಾನಂದರು ಮಲಗಿ ಕೊಳ್ಳಲೂ ಒಪ್ಪಲಿಲ್ಲ.

"ಹೀಗೇ ಕುಳಿತಿರುವೆ ಮಾಡಿಬಿಡಿ." ಎಂದರು ಸಮಾಧಾನದಿಂದ. ಎಲ್ಲರಿಗೂ ಆಶ್ಚರ್ಯವೋ ಆಶ್ಚರ್ಯ ಮನಃಪ್ರಾಣಗಳಲ್ಲಿ ಎಲ್ಲಿಲ್ಲದ ಗಲಿಬಿಲಿ.

"ಸ್ವಾಮೀಜೀ, ಆಪರೇಶನ್ ತುಂಬ ಹೊತ್ತಾಗುತ್ತೆ. ಕುಳಿತಿರುವುದು ಸಾಧ್ಯವೇ ಯಿಲ್ಲ !"

"ಆಗಲಿ ಬಾಧಕವಿಲ್ಲ." ಹಸನ್ಮುಖದಿಂದಲೇ ನುಡಿದರು ಧೀರಾನಂದ.

"ಸರಿ. ಅವರು ಪದ್ಮಾಸನ ಹಾಕಿ ಕಾಲುಮಣೆಯ ಮೇಲೆ ಧ್ಯಾನಾರೂಢರಾಗಿ ಕುಳಿತುಕೊಂಡರು. ಆಪರೇಶನ್ ಆರಂಭವಾಯಿತು. ಸಂನ್ಯಾಸಿ ಮಿಸುಕಾಡಲಿಲ್ಲ. ನಡುವೆ ಎಲ್ಲೋ ಒಮ್ಮೆ ಕಣ್ತೆರೆದು ನೋಡಿ ಕಣ್ಮುಚ್ಚಿ ಕುಳಿತುಕೊಂಡರು. ಹಾ ಎನ್ನಲಿಲ್ಲ ! ಹೂ ಎನ್ನಲಿಲ್ಲ! ಆಪರೇಶನ್ ಆದಮೇಲೆ ನಗು ಮುಖದಿಂದ ಧೀರಾನಂದ-"ಡಾಕ್ಟರ್- ತುಂಬ ವಂದನೆಗಳು ! ನಾನಿನ್ನು ಹೊರಡುವೆ. ದಯಮಾಡಿ ಅಪ್ಪಣೆ ಕೊಡಿರಿ."

ಡಾ|| ಭರತ್ ಆಶ್ಚರ್ಯದಿಂದ ಕಣ್ಣರಳಿಸಿ-"ಇದುವರೆವೆಗೆ ನೀವು ಹೇಳಿದಂತೆ ನಾವು ಕೇಳಿದ್ದೇವೆ. ಇನ್ನು ನಾವು ಹೇಳಿದಂತೆ ನೀವು ಕೇಳಲೇ ಬೇಕು, ಸ್ವಾಮೀಜಿ." ಧ್ವನಿ ಒತ್ತಾಯಪೂರ್ವಕವಾಗಿ ಹೊರಬಿತ್ತು.

"ಇಲ್ಲಿಯ ವಾತಾವರಣ ನನಗೆ ಸರಿ ಹೋಗುವುದಿಲ್ಲ. ನಾನು ಹೋಗಲೇ ಬೇಕು." ಎಂದರು ಗೈರಿಕ ವಸನದಾರಿ.

"ಅದು ಸಾಧ್ಯವೇಯಿಲ್ಲ." ಪ್ರತಿಭಟಿಸಿದರು ಡಾ|| ಭರತ್.

"ಈ ರಾಜೋಪಚಾರದಲ್ಲಿ ನಾನಿರಲಾರೆ." ತಲೆಯಲ್ಲಾಡಿಸುತ್ತಾ ನಗು ಮುಖದಿಂದ ಮೆಲು ದನಿಯಲ್ಲಿ ನುಡಿದರು ಧೀರಾನಂದ.

"ನೀವು ಹೇಗೆಂದರೆ ಹಾಗೆ ಇರುವುದರಲ್ಲಿ ನಮ್ಮ ಅಭ್ಯಂತರವಿಲ್ಲ. ಆದರೆ ನೀವು ಆಸ್ಪತ್ರೆಯನ್ನು ಬಿಟ್ಟು ಹೋಗುವಂತಿಲ್ಲ. ಗಾಯ ಒಣಗುವವರೆಗೆ ನಾವು ನಿಮ್ಮ ಸ್ಥಿತಿಗತಿಗಳನ್ನು ಗಮನಿಸಲೇಬೇಕು."

"ನಾನು ಕೆಲವು ದಿನ ಹೊರಗಡೆ ಇದ್ದು ಬರುವೆ."

"ಸೆಪ್ಟಿಕ್ ಆಗಿ ಜ್ವರ ಬರಬಹುದು. ಮುಂಬರುವ ತೊಂದರೆಗಳನ್ನು ಈಗಲೇ ಹೇಳಲಾಗುವುದಿಲ್ಲ. ಅದೇನೆ ಇರಲಿ, ನಾವು ಆಪರೇಶನ್ ಮಾಡಿದುದರಿಂದ ಪೂರ್ಣ ಗುಣವಾಗುವವರೆಗೆ ನಿಮ್ಮನ್ನು ಬಿಟ್ಟು ಕೊಡಲಾಗುವುದಿಲ್ಲ."

ಡಾ|| ಭರತ್ ಆಗ್ರಹದಿಂದ ನುಡಿದುದರಿಂದಲೋ ಏನೋ ಆಸ್ಪತ್ರೆಯಲ್ಲಿರಲು ಕಾವೀಧಾರಿ ಒಪ್ಪಿಕೊಂಡರು. ಅವರು ಆಸ್ಪತ್ರೆಯಲ್ಲಿನ ಯಾವ ಕೊಠಡಿಯನ್ನೂ ತಮ್ಮದಾಗಿ ಬಳಸಿಕೊಳ್ಳಲಿಲ್ಲ. ಕಾರಿಡಾರಿನಲ್ಲಿ ಮಲಗಿ ನಿದ್ರಿಸಿದರು. ಆಸ್ಪತ್ರೆಯ ಹೂದೋಟದ ನೆರಳಿನಲ್ಲಿ ಹಗಲು ಹೊತ್ತು ವಿಶ್ರಮಿಸಿದರು. ಕೈದೋಳಿನ ಕಟ್ಟು ಬಿಚ್ಚುವವರೆಗೆ ಆಸ್ಪತ್ರೆಯ ಆವರಣದಲ್ಲಿ ಹಾಗೂ ಹೀಗೂ ಕಳೆದರು. ಇದೇನು ಸಾಮಾನ್ಯ ವಿಷಯವೇ ? ಆತ್ಮಶಕ್ತಿ ಅಂದರೆ ಅದು !"

"ಅವರು ಹಾಸಿಗೆ ದಿಂಬುಗಳನ್ನೂ ಉಪಯೋಗಿಸಲಿಲ್ಲವೇ, ಸಾರ್ ?"

"ಅವರದೇ ಇತ್ತು ಸಂನ್ಯಾಸಿಯ ಬೊಂತೆ. ಅದನ್ನೇ ಉಪಯೋಗಿಸಿಕೊಂಡರು. ಅಷ್ಟೇ ಅಲ್ಲ. ಆಪರೇಶ‌ನ್ ಕಾಲದಲ್ಲೇ ಆಗಲಿ ಅನಂತರವೇ ಆಗಲಿ ಅವರು ಬಾಡಲಿಲ್ಲ-ಬತ್ತಲಿಲ್ಲ ! ಚಿತ್ ಶಕ್ತಿ ಅಂದರೆ ಹಾಗಿರಬೇಕು !

"ಅಂಥ ಸಂನ್ಯಾಸಿಗೆ ಕೈ ಹೋಗುತ್ತಿದೆಯಲ್ಲಾ ಎಂದು ನಮಗೆ ದುಃಖವೆನಿಸಿದರೂ ಅವರಿಗೆ ಅದರ ಪರಿವೇ ಇರಲಿಲ್ಲ. ಒಮ್ಮೆ "ನಾನದನ್ನು ಭಗವಂತನಿಗೆ ಅರ್ಪಿಸಿರುವೆ." ಎಂದರು ಅಷ್ಟೆ. ಅವರು ಹೆಚ್ಚು ಮಾತಾಡುತ್ತಿರಲಿಲ್ಲವಾದ್ದರಿಂದ ಅವರ ಹೆಚ್ಚಿನ ವಿಷಯವನ್ನು ನಾವು ತಿಳಿದುಕೊಳ್ಳಲಾಗಲಿಲ್ಲ."

"ಆಶ್ಚರ್ಯ ಸಾರ್ !" ಅನೇಕ ದನಿಗಳು ಉದ್ಗಾರ ತೆಗೆದುವು.

ಆಪರೇಶನ್ ಮುಗಿಸುತ್ತಾ ಡಾ||ಭಾರ್ಗವಾ 'ಅನುರಿಜಂ' ಗೆಡ್ಡೆಯನ್ನು ಕುರಿತು ವಿವರಿಸಿದರು "ಇಂಥಹ ಕೇಸುಗಳಲ್ಲಿ ಕೈ ಹಚ್ಚಿದೊಡನೆಯೇ ವಿಪರೀತ ರಕ್ತ ಸ್ರಾವವಾಗಿ ವ್ಯಕ್ತಿ ಸಾಯುವುದುಂಟು. ಆ ದಿವ್ಯ ಪುರುಷನ ಸ್ಮರಣೆಯಿಂದಲೋ ಏನೋ ಯಾವ ತೊಂದರೆಯೂ ಆಗದೇ ಆಪರೇಶನ್ ಸುಸೂತ್ರವಾಗಿ ನಡೆದು ನಮಗೆ ಅನುಕೂಲವಾಯಿತು." ಎಂದು ಸಮಾಧಾನದ ಉಸಿರನ್ನು ಬಿಟ್ಟು-"ಪಾಪ, ಎಷ್ಟೆಂದರೂ ಹಳ್ಳಿಯ ಗಾಂಪ, ಇಳಿ ವಯಸ್ಸಿನಲ್ಲಿ ಮಕ್ಕಳನ್ನು ಪಡೆದುಕೊಂಡು ಬದುಕಿಗಾಗಿ ತೊಳಲುತ್ತಾನೆ. ಹೋಗಲಿ, ಮಕ್ಕಳಿಗೆ ತಂದೆಯನ್ನು ಉಳಿಸಿ ಕೊಟ್ಟ ಪುಣ್ಯ ನನಗೆ ಇಂದು ಬಂದಿದೆ."

ಡಾಕ್ಟರ ಮುಖದಲ್ಲಿ ಸಮಾಧಾನದ ತಿಳಿನಗೆ ತಾಂಡವಾಡಿತು.

"ಅನಂತರ ನೀವು ಆ ಯೋಗಿಗಳನ್ನು ನೋಡಿದಿರಾ ಸಾರ್ ?"

"ಇಲ್ಲ. ಅವರೆಲ್ಲೋ ಹಿಮಾಲಯದ ತಪ್ಪಲಿನಲ್ಲಿದ್ದಿರಬಹುದು."

"ತಪಶ್ಶಕ್ತಿಯಿಂದ ಎಲ್ಲವೂ ಸಾಧ್ಯ ಅಲ್ಲವೇ ಸಾರ್ ?

"ಸಾಧಿಸಿ ತೋರಿದ್ದಾರಲ್ಲಾ ! ಅದಕ್ಕಿಂತ ಇನ್ನೇನು ಬೇಕು ?"

ಹುಡುಗರು ಆಶ್ಚರ್ಯಗರ್ಭಿತರಾದರೂ ಡಾಕ್ಟರಿಗೆ ಅಭಿವಾದನ ಹೇಳುವುದನ್ನು ಮರೆಯಲಿಲ್ಲ. ಎಲ್ಲರೂ ಸಂತೋಷಾಶ್ಚರ್ಯಗಳಿಂದ ಹೊರ ಬಿದ್ದರು.

ಅಘೋರ ಮನೆಯ ಹಾದಿಯನ್ನು ಒಬ್ಬನೇ ತುಳಿದಿದ್ದಾನೆ. ಸಂಜೆಯ ತಿಳಿಗಾಳಿ ತನುಮನಗಳಿಗೆ ತಂಪನ್ನೂಡಿಸುತ್ತಿದೆ. ಜೀವನ–ಸಾಧನೆಗಳಲ್ಲಿ ಮನಸ್ಸು ಮುಳುಗಿ ಹೋಗಿತ್ತು. ತಲೆಯ ತುಂಬ ಯೋಚನಾಧಾರೆಯನ್ನು ತುಂಬಿಕೊಂಡು ಅದರಲ್ಲೇ ತನ್ಮಯನಾಗಿ ಮುಂದುವರಿಯುತಿದ್ದ. ನೋಟ ನೆಲದ ನೇರಕ್ಕೆ ಹರಿದಿತ್ತು. ನಡಿಗೆಯಲ್ಲಿ ಶ್ರೀಮದ್ಗಾಂಭೀರ್ಯವಿತ್ತು.

ಮರದ ಮೇಲಿನ ಕಾಗೆಯೊಂದು ಕರ್ಕಶವಾಗಿ ಕೂಗಿ ಒಮ್ಮೆಲೇ ಮನಸ್ಸಿನೆಳೆಯನ್ನು ಜಗ್ಗಿತು. ಅಘೋರ "ಥೂ !" ಎಂದ. ಎಡದ ರಸ್ತೆಯಿಂದ ಹಾದಿಗೆ ಜಿಗಿದ ಸುಧೀರ್ ಒಮ್ಮೆಲೇ ಕೇಳಿದ "ಏಕಪ್ಪಾ ? ನಾನಷ್ಟು ತುಚ್ಛವಾಗಿ ತೋರಿದೆನೇ ?"

ಒಡನೆ ಗೆಳೆಯರ ಹಸ್ತಗಳೆರಡೂ ಆತ್ಮೀಯತೆಯಿಂದ ಹೆಣೆದುಕೊಂಡುವು ಅಘೋರ ಮೈಯೆಲ್ಲಾ ಸಂತೋಷದ ಬೀಡಾಗಿ ನಗುನಗುತ್ತಾ ಹೇಳಿದ "ಥೂ ! ಎಂದುದು ನಿನಗಲ್ಲ. ಕಾಗೆಗೆ ! ಅದೇ ಸಮಯಕ್ಕೆ ನೀನು ಎದುರಾದೆ ಅಷ್ಟೆ."

"ಓ, ಕಾಗೆ ನಿನ್ನ ಶತ್ರು !" ಸುಧೀರ್ ನಕ್ಕುಬಿಟ್ಟ.

"ಎಂದು ಬಂದೆ ?"

"ಚಿಕ್ಕಪ್ಪನಿಗೆ ಕಾಹಿಲೆಯೆಂದು ತಿಳಿಯಿತು ನೋಡಲು ಬಂದೆ. ಈಗ ಚೇತರಿಸಿಕೊಂಡಿದ್ದಾರೆ. ನಾನು ನಾಳೆ ಹಿಂದಿರುಗುವೆ."

"ಎಲ್ಲಾ ವಿಷಯವನ್ನು ಒಂದೇ ಬಾರಿಗೆ ಒದರಿ ಬಿಟ್ಟೆಯಲ್ಲಾ ?"

"ಅದಷ್ಟು ಮುಗಿಸಿ ಬಿಟ್ಟರೆ ಇತರ ವಿಷಯಗಳಿಗೆ ಬೇಕಾದಷ್ಟು ಕಾಲಾವಕಾಶ ಮಾಡಿಕೊಳ್ಳಬಹುದಲ್ಲಾ ?" ಅರಳುಗಣ್ಣುಗಳು ಉಜ್ವಲಿಸಿದುವು.

ಅಘೋರ್ ನಸುನಕ್ಕು ನುಡಿದ "ನೀನು ಈಗೀಗ ಬೆಂಗಳೂರಿಗೆ ಬರುವುದೇ ಇಲ್ಲ."

"ನನಗಿಲ್ಲೇನಪ್ಪಾ ಕೆಲಸ ? ನಮ್ಮೂರು ಮಣಿಪಾಲಿಗೆ ಹತ್ತಿರ."

"ನಿನ್ನ ಓದು ಹೇಗೆ ಸಾಗುತ್ತಿದೆ ?"

"ಚೆನ್ನಾಗಿದೆ ಪರವಾಗಿಲ್ಲ."

"ನಿನ್ನದು ?"

"ಮನೆಗೆ ಬಾ. ಹೇಳುತ್ತೇನೆ." ಎನ್ನುತ್ತಾ ಅವನನ್ನು ಮನೆಯ ಕಡೆ ಎಳೆದುಕೊಂಡು ಹೊರಟ. ಆತ್ಮೀಯತೆಯಿಂದ ಉಕ್ಕೇರಿದುವು-ಬಲುವೊ ತುಂಬಿದ ಹೃದಯಗಳು.

ಅಧ್ಯಾಯ
೯

"ನೀವು ಒಮ್ಮೆಲೆ ನಂಬಲಾರರಿ ! ಆದರೆ ಸತ್ಯ ಸಂಗತಿ ಎಂದಾದರೂ ಭಾವಿಸಿರಿ. ಎಂದಾದರೊಮ್ಮೆ ನೀವು ಇದರ ನೈಜ ಸ್ಥಿತಿಯನ್ನು ಕಂಡುಕೊಳ್ಳಲಿರುವಿರಿ. ಸ್ಮೃತಿಗಳು ತಲೆಯ ಯಾವ ಭಾಗದಲ್ಲಿ ಇರುತ್ತವೆ? ಮತ್ತು ನೆನೆಸಿಕೊಂಡಾಕ್ಷಣ ಹೇಗೆ ಮೇಲೆ ಬರುತ್ತವೆ ? ಭೂತಕಾಲದ ನೆನಹುಗಳನ್ನು ಸುರಕ್ಷಿತವಾಗಿ ಇಡಬಲ್ಲ ಯಾವ ಶಕ್ತಿಯು ತಲೆಯಲ್ಲುಂಟು ? ಎಂದೆಲ್ಲಾ ನೀವು ಯೋಚಿಸಿ ತಲೆಕೆಡಿಸಿ ಕೊಂಡಿರಬಹುದು–ನಿಮ್ಮ ತಲೆಯಲ್ಲೊಂದು ಟೇಪ್ ರಿಕಾರ್ಡರ್ ಕೂಡಿಸಲಾಗಿದೆ. ಅದರ ಮೇಲೆ ನಿಮ್ಮ ಜೀವನದಲ್ಲಿ ನೀವು ನೋಡಿದ ಹಾಗೂ ಕೇಳಿದ ಎಲ್ಲಾ ಘಟನೆಗಳೂ ಮೂಡುತ್ತಿರುತ್ತವೆ. ದಿನಗಳು ಉರುಳಿ ಎಲ್ಲಾ ಘಟನೆಗಳೂ ಭೂತಕಾಲದಲ್ಲಿ ಸೇರಿ ಹೋಗುತಿದ್ದಂತೆಯೇ ಈ ತಲೆಯೊಳಗಿನ "ಟೇಪ್ ರಿಕಾರ್ಡ"ರಿನ ಮೇಲೆ ಮೂಡಿ ಸ್ಥಾಯೀ ಸ್ವರೂಪದಲ್ಲಿ ಸುರಕ್ಷಿತವಾಗಿ ಉಳಿಯುತ್ತವೆ. ನಿಮ್ಮ ಮನಸ್ಸು ಯಾವ ವೇಳೆಯಲ್ಲಿ ಭೂತ ಕಾಲವನ್ನು ನೆನೆಯುತ್ತದೆಯೋ ಆಗ ಬೀರುವಿನ ಮೂಲೆಯಲ್ಲಿ ಬಿದ್ದಿದ್ದ ಹಳೆಯ ದಾಖಲೆಗಳನ್ನು ಶೋಧಿಸಿ ಹೊರಗೆ ತೆಗೆದಂತೆ ನೀವು ನೆನೆಸಿದ ವಿಶಿಷ್ಟ ಪರಿಸ್ಥಿತಿಯ ಚಿತ್ರಣವು ನಿಮ್ಮ ತಲೆಯಲ್ಲಿಯ ಟೇಪ್ ರಿಕಾರ್ಡರಿನಿಂದ ಹೊರ ಬರುವುದಲ್ಲದೆ ಅದರ ಜೊತೆಗೆ ಆ ಕಾಲದಲ್ಲಿ ನಡೆದ ಸಂವಾದಗಳ ಶಬ್ದಗಳ ಧ್ವನಿಯು ಹುಟ್ಟಿಕೊಂಡು ತಮ್ಮ ಕಿವಿಯ ಪಟಲಗಳ ಮೇಲೆ ಪ್ರತಿಧ್ವನಿಸುತ್ತವೆ. ಆಗ ಫಿಲ್ಮನ್ನು ಪ್ರೊಜೆಕ್ಟರಿನಲ್ಲಿ ಕೂಡಿಸಿ ಪರದೆಯ ಮೇಲೆ ತೋರಿಸಿದಂತೆ ವಿಷಯಗಳು ನಿಚ್ಚಳವಾಗಿ ಹೊಳೆಯುತ್ತವೆ.

"ವಿಶ್ವದ ಕೆಲವು ವಿಜ್ಞಾನಿಗಳು ಈ ವಿಷಯದ ಮೇಲೆ ಶೋಧ ನಡೆಸಿದ್ದಾರೆ. ಕೊನೆಗೆ ಈ ವಿಷಯದ ಮೇಲೆ ಸಮಾಧಾನಕಾರಕ ಬೆಳಕು ಬೀರುವ ಶೋಧವೊಂದು ಕಂಡು ಹಿಡಿಯಲ್ಪಟ್ಟಿದೆ. ತಲೆಯ ವಿಶ್ವ ಪ್ರಸಿದ್ಧ ಚಿಕಿತ್ಸಕರಾದ ಡಾ|| ವೆಲ್ಡರ್ ಪೆನ್‌ಫೀಲ್ಡರು ತಲೆಯ ಒಳಭಾಗದಲ್ಲಿ ಒಂದು ಪಟ್ಟಿಯನ್ನು ಕಂಡು ಹಿಡಿದರು. ಇದು ಟೇಪ್ ರಿಕಾರ್ಡರ ಪದ್ಧತಿಯಂತೆ ಕಾರ್ಯ ಮಾಡುತ್ತಿರುತ್ತದೆ. ಅದರ ಶೋಧದ ಆಧಾರದ ಮೇಲಿಂದ ತಲೆಯ ಒಳಗಿನ

ಯಾವ ಭಾಗದಲ್ಲಿ ಈ ಪಟ್ಟಿಯು ಇರುವುದೋ ಅದರ ಬಗೆಗೆ ಈವರೆವಿಗೆ ಯಾವ ಶೋಧವೂ ಆಗಿರಲಿಲ್ಲ. ಪ್ರಕೃತಿಯು ಸ್ಮರಣದ ಈ ಪ್ರತಿಕ್ರಿಯೆಗಳನ್ನು ಕರಿಯ ಬಣ್ಣದ ಎರಡು ಪಟ್ಟಿಗಳಲ್ಲಿ ಇರುವಂತೆ ಮಾಡಿದೆ. ಈ ಎರಡು ಪಟ್ಟಿಗಳೂ ೨೫ ಚದುರ ಕ್ಷೇತ್ರದಲ್ಲಿ ಹಬ್ಬಿರುತ್ತವೆ. ಮತ್ತು ಒಂದು ಇಂಚಿನ ಭಾಗದಷ್ಟು ಗಾತ್ರವಿರುವುದಲ್ಲದೆ ತಲೆಯ ಸುತ್ತಲೂ ಸುತ್ತಿಕೊಂಡು ತಲೆಯ ಎಲ್ಲಾ ಭಾಗಗಳಲ್ಲೂ ಕಿವಿಯ ಮೇಲ್ಬದಿಯಲ್ಲಿ ವ್ಯಾಪಿಸಿಕೊಂಡಿರುತ್ತದೆ. ಇದಕ್ಕೆ "ಟೆಂಪೋರಲ್ ಕಾರಟೆಕ್ಸ್" (Temeporal Cortex) ಎಂದೆನ್ನುತ್ತಾರೆ.

"ನೀವು ಯಾವ ವೇಳೆಯಲ್ಲಿ ಹಳೆಯ ಘಟನೆಗಳನ್ನು ನೆನೆಸಿಕೊಳ್ಳಲು ಪ್ರಯತ್ನಿಸುವಿರೋ ಆಗ ಸ್ನಾಯುಗಳಲ್ಲಿ ಹರಿದಾಡುವ ವಿದ್ಯುತ್ ಧಾರೆಯು ಈ ಪಟ್ಟಿಗಳಲ್ಲಿ ಹರಿದಾಡುತ್ತಿದ್ದಂತೆಯೇ ಈ ವಿಶೇಷ ಘಟನೆಯು—ನಿಮ್ಮ ತಲೆಯಲ್ಲಿ-ಇರುವ ಆ ಭಾಗ ಸ್ವಲ್ಪ ಉಬ್ಬಿಬರುತ್ತದೆ. ಮಲರೋಗದ ಕೆಲವು ರೋಗಿಗಳ ತಲೆಯ ಚಿಕಿತ್ಸೆ ಮಾಡುವಾಗ ಡಾ|| ಪೆನ್‌ಫೀಲ್ಡರು ಈ ಟೆಂಪೋರಲ್ ಕಾರಟೆಕ್ಸ್ ಪಟ್ಟಿಗಳ ಕೃತ್ರಿಮ ವಿದ್ಯುತ್ ಧಾರೆಯನ್ನು ಪ್ರವಹಿಸಿ ಆ ರೋಗಿಗಳಿಗೆ ಹಳೆಯ ವಿಷಯದ ನೆನಪಾಗುವಂತೆ ಮಾಡುವುದರಲ್ಲಿ ಸಫಲರಾಗಿದ್ದಾರೆ......."

ಡಾ|| ಗಜಾನನರ ಭಾಷಣ ನಿರರ್ಗಳವಾಗಿ ನಡೆಯುತಿತ್ತು. ವಿದ್ಯಾರ್ಥಿವೃಂದ ಸ್ತಬ್ಧರಾಗಿ ನಿಂತು ಕೇಳುತಿದ್ದರು. ಡಾ|| ಗಜಾನನರ ಭಾಷಣವೆಂದರೆ ಮೈಯೆಲ್ಲಾ ಮನಸ್ಸಾಗಿ ಬಿಡುವ ಹುಡುಗರಿಗೆ ಅವರು ದಿನಕ್ಕೊಂದು ರಸಹೌತಣ ನೀಡುವುದರೊಂದಿಗೆ ನಡು ನಡುವೆ ಹಾಸ್ಯದ ಚಟಾಕಿಯನ್ನು ಹಾರಿಸುವ ಹವ್ಯಾಸವನ್ನೂ ಇಟ್ಟುಕೊಂಡಿದ್ದರು. ಅವರೆಂದರೆ ವಿದ್ಯಾರ್ಥಿಳಿಗೆ ಅಚ್ಚುಮೆಚ್ಚು.

ಅವರ ಲೆಕ್ಚರನ್ನು ಮುಗಿಸಿಕೊಂಡು ಎಲ್ಲರೂ ಹೊರಬಿದ್ದು ಸಾಲುಗಟ್ಟಿ ಕಾರಿಡಾರಿನಲ್ಲಿ ಹಾಯ್ದು, ಆಪರೇಷನ್ ಥಿಯೇಟರಿನ ಕಡೆ ಹೆಜ್ಜೆ ಹಾಕಿದರು. ಸ್ಟ್ರೆಚರಿನ ಮೇಲೆ ಕರೆದೊಯ್ಯುತಿದ್ದ ಅಜ್ಜನನ್ನು ನೋಡಿ ಮದನ್ ಕೇಳಿದ "ಇವರಿಗೆ ಆಪರೇಶನ್ ನಡೆಯಲಿದೆಯೇ ?"

"ಹೌದು ಥೆಲಾಮಸ್ (Thalamas) ಆಪರೇಷನ್ ನಡೆಯಲಿದೆ." ಗಾಡಿಯನ್ನು ತಳ್ಳುತಿದ್ದ ವಾರ್ಡ್‌ಬಾಯ್ ವಿಷಯವನ್ನು ಮುಂದಿಟ್ಟ.

ಅಘೋರ ಅಜ್ಜನನ್ನು ನೋಡುತ್ತಲೂ ಕಿಸಕ್ಕನೆ ತನ್ನೊಳಗೆ ನಕ್ಕುದುದನ್ನು ನೋಡಿ ಜಾನಕೀರಾಂ ಕೇಳಿದ "ನಿನ್ನೊಳಗೇ ನೀನು ನಗುತಿದ್ದೀಯಲ್ಲಾ ? ಏನು ಸಮಾಚಾರ ?"

ದೂರದಲ್ಲಿ ಹೋಗುತಿದ್ದ ಸ್ಟ್ರೆಚರ್ ಕಡೆ ದಿಟ್ಟಿ ಹೊರಳಿಸಿ ಅಘೋರ ನುಡಿದ "ಅಜ್ಜನನ್ನು ನೋಡಿದರೆ ಈಗಲೋ ಆಗಲೋ ಎಂಬಂತಿದ್ದಾರೆ. ಇಷ್ಟರ ಮೇಲೆ ಥೆಲಾಮಸ್ ಆಪರೇಶನ್ ಬೇರೆ. ಮೇಜಿನ ಮೇಲೆ ಪ್ರಾಣ ಹೋದರೂ ಆಶ್ಚರ್ಯವಿಲ್ಲ."

"ಮಾಡಿಸಿಕೊಳ್ಳುವವರು ಅವರು. ನಿನಗೇಕಪ್ಪಾ, ತಲೆನೋವು ?"

"ಮಾಡಿಸಿಕೊಳ್ಳುವವರು ಅವರಾದರೂ ಮಾಡುವವರ ಶ್ರಮವೆಷ್ಟೆಂಬುದನ್ನು ಯೋಚಿಸು. ಧನ, ಶ್ರಮ ಮತ್ತು ಸಮಯ ಮೂರೂ ವ್ಯರ್ಥವಾಗಬಾರದಷ್ಟೆ ?"

"ಪಾಪ, ಕೈಗಳು ಅದುರುವಿಕೆಯಿಂದ ಪ್ರತಿಯೊಂದಕ್ಕೂ ಅವರು ಇನ್ನೊಬ್ಬರನ್ನು ಅವಲಂಭಿಸುವುದೆಂದರೆ ಎಷ್ಟು ಕಷ್ಟ ? ಆಪರೇಷನ್ ಮಾಡಿಸಿಕೊಂಡಲ್ಲಿ ಇನ್ನೊಬ್ಬರನ್ನು ಅವಲಂಭಿಸುವುದು ತಪ್ಪುತ್ತೆ."

"ಸರಿ, ಇನ್ನೆಷ್ಟು ದಿನ ಈ ಬದುಕು ?"

"ಬಿಡಪ್ಪಾ ನಿನಗೆ ಬೇಡವೆಂದರೆ ಅವರಿಗೂ ಬೇಡವೆ ?"

"ಹುಚ್ಚು ! ಈ ಪ್ರಪಂಚ ನಾನಾ ಬಗೆಯ ಹುಚ್ಚಿನಿಂದ ತುಂಬಿ ಹೋಗಿದೆ !"

"ಅವರಲ್ಲಿ ನೀನೂ ಒಬ್ಬ ಘೋರ್ !"

ಎಲ್ಲರೂ ಕಿಲಕಿಲನೆ ನಗತೊಡಗಿದರು. ಅವರೊಂದಿಗೆ ಅಘೋರ ತಾನೂ ದನಿ ಗೂಡಿಸಿದ. ಅದೇ ಸಮಯಕ್ಕೆ ಸರಿಯಾಗಿ ಡಾ|| ಅಬ್ದುಲ್ ಗಫಾರ್ ಡಾ|| ಲಾರೆನ್ಸ್‌ರವರು ಪಕ್ಕದ ವಾರ್ಡಿನಿಂದ ಹೊರಬರುತ್ತಲೂ ತಕ್ಷಣ ನಗು ನಿಂತಿತು. ಡಾ|| ಅಬ್ದುಲ್ ಗಫಾರ್ ವಿದ್ಯಾರ್ಥಿ ವೃಂದವನ್ನು ನಗು ಮುಖದಿಂದ ನಿಟ್ಟಿಸಿ ಹೇಳಿದರು. "ಇದೇನು, ಒಮ್ಮೆಲೆ ಬಾರಿಸಿದ ನಗಾರಿ ನಿಂತಂತಾಯಿಲ್ಲಾ ?"

ಹುಡುಗನು ಮಾತಾಡದೆ ನಸುನಗು ಬೀರಿದನು.

ಡಾ|| ಲಾರೆನ್ಸ್ ನಸುನಕ್ಕು ಡಾ|| ಗಫಾರರನ್ನು ಕುರಿತು ಅಂದರು, "ಎಷ್ಟಾದರೂ ನಕ್ಕು ನಲಿಯುವ ವಯಸ್ಸು, ನಕ್ಕಿದ್ದಾರೆ. ನಿಮ್ಮನ್ನು ನೋಡುತ್ತಲೂ ಭಯವಾಯಿತು ಡಾಕ್ಟರ್ !"

"ನನ್ನನ್ನು ನೋಡಿ ಅಲ್ಲ; ಡಾಕ್ಟರ್ ! ನಿಮ್ಮನ್ನು ನೋಡಿಯೇ ಭಯ ವಾಗಿರಬೇಕು !" ಡಾ|| ಗಫಾರ್ ಮರುನುಡಿದೊಡನೆ ಪುನಃ ನಗುವಿನ ಲಹರಿ ಉಕ್ಕಿಹರಿಯಿತು. ಎಲ್ಲರ ಮುಖಾರವಿಂದಗಳೂ ಅರಳಿದುವು.

"ನಮಗೆ ಇಬ್ಬರನ್ನು ನೋಡಿಯೂ ಭಯವಾಯಿತು !" ಅಘೋರ ಮೆಲ್ಲನೆ ರಾಗ ಎಳೆದುದನ್ನು ನೋಡಿ "ನೀನು ಶುದ್ಧ ಖಿಲಾಡಿ !" ಎಂದು ನಸು ನಕ್ಕರು ಡಾ|| ಲಾರೆನ್ಸ್. ಅವರನ್ನು ಎಲ್ಲರೂ ಹಿಂಬಾಲಿಸಿದರು. ಬ್ರೈನ್ ಆಪರೇಶನ್ನಿನಲ್ಲಿ ಸಿದ್ಧ ಹಸ್ತರಾದ ಡಾ|| ಗಫಾರ್ ಥೆಲಾಮಸ್ ಆಪರೇಶನ್ನಿನ ತಯಾರಿ ನಡೆಸತೊಡಗಿದರು.

ಡಾ|| ಲಾರೆನ್ಸ್ ಕಿವಿ ಮೂಗು ಗಂಟಲುಗಳ ಆಪರೇಶನ್ನಿನಲ್ಲಿ ತಜ್ಞರು. ಅವರಿಗೆ ಪಕ್ಕದ ಆಪರೇಶನ್ ಥಿಯೇಟರು ತೆರವಾಗಿತ್ತು. ಅದರಲ್ಲಿ ಅವರು ಮಗುವಿನ ಗಂಟಲಲ್ಲಿ ಬೆಳೆಯುವ ಶೀತದ ಗೆಡ್ಡೆಯನ್ನು ಆಪರೇಶನ್ ಮಾಡಿ ದರು. ಅವರನ್ನು ಸುತ್ತುವರಿದು ನಿಂತ ತರುಣ ವೃಂದ ಎವೆಯಿಕ್ಕದೆ ನಿಟ್ಟಿ ಸುತಿತ್ತು. ಆಪರೇಶನ್ ಮಾಡುತ್ತಾ ಡಾ|| ಲಾರೆನ್ಸ್ ಹೇಳಿದರು "ಈಗಲೂ ಹಳ್ಳಿಗಳಲ್ಲಿ ಹೀಗೆ ಗಂಟಲಲ್ಲಿ ಗೆಡ್ಡೆಗಳು ಬೆಳೆದರೆ ಸೀಗೆಕಾಯಿ ಅಥವಾ ಬೆಳ್ಳುಳ್ಳಿ ಅಥವಾ ಇನ್ನಾವುದಾದರೂ ಬೇರಿನ ಮದ್ದು ಅರೆದು ಹಚ್ಚಿ ಗೆಡ್ಡೆಗಳು ಒಡೆ ಯುವಂತೆ ಮಾಡಿ ವಾಸಿ ಮಾಡಿಕೊಳ್ಳುತ್ತಾರೆ. ಹಳ್ಳಿಗಳಲ್ಲಿ ಹಿರಿಯರು ಸ್ವತಃ ವೈದ್ಯರಾಗಿರುವುದರಿಂದ ಎಷ್ಟೋ ಅನುಕೂಲ. ಈಗಿನ ಹುಡುಗರಿಗೆ ಸುಲಭದ ಚಿಕಿತ್ಸೆ ಏನೆಂಬುದೇ ತಿಳಿಯದು; ತಿಳಿದುಕೊಂಡಲ್ಲಿ ಪ್ರತಿಯೊಂದಕ್ಕೂ ಡಾಕ್ಟ ರನ್ನು ಅವಲಂಬಿಸುವುದು ತಪ್ಪುತ್ತೆ."

ಕರ್ತವ್ಯದ ಭಾರವನ್ನಿಳುಹಿ ಹುಡುಗರು ಸಾಲಾಗಿ ಹೊರಟಾಗ ಸಂಜೆಯ ತಿಳಿಗಾಳಿ ತಣ್ಣಗೆ ಬೀಸಿ ಬರುತಿತ್ತು. ದಣಿದ ಮೈದಡವಿ ದಣಿವನ್ನು ಒಮ್ಮೆಲೇ ಹರಿಸಿದಂತಾಯಿತು—ಮಂದ ಮಾರುತನ ಮೃದು ಸ್ಪರ್ಶ. ಹತ್ತು ಮಾರು ಹೋಗುವಷ್ಟರಲ್ಲಿ ಜಾನಕೀರಾಂ ತನ್ನ ಮನೆಯ ಕವಲು ದಾರಿಯನ್ನು

ಹಿಡಿದು ಗೆಳೆಯರಿಗೆ ನಗು ಮುಖದಿಂದ ಹುಬ್ಬು ಹಾರಿಸಿ ಹೋಗುವುದಾಗಿ ಸೂಚಿಸಿದ. ಕೂಡಲೆ ಅಘೋರ ಮದನರು "ಚೀರಿಯೋ !" ಎಂದರು.

ಬೆಳಗುವ ವಿದ್ಯುದ್ದೀಪಗಳು ಕಣ್ಣುಗಳನ್ನು ಕೋರೈಸುವಂತಿದ್ದುವು. ಹಾದಿಗರ ಗುಜುಗುಂಪಲಿನೊಂದಿಗೆ ವಾಹನಗಳ ಗಡಗಡ ಸದ್ದೂ ಕೂಡಿ ಕಿವಿಗೆ ಎರಕ ಹೊಯ್ದಂತಾಗಿತ್ತು. ಅದ್ಯಾವುದನ್ನೂ ಲೆಕ್ಕಿಸದೆ ಇಬ್ಬರೂ ತಮ್ಮ ತಮ್ಮೊಳಗಿನ ಮಾತುಕತೆಗಳಲ್ಲಿ ತನ್ಮಯರಾಗಿದ್ದರು.

"ನಾವು ಯಾವುದನ್ನು ಸತ್ಯ–ಧರ್ಮ ಎಂದು ತಿಳಿದುಕೊಂಡಿದ್ದೇವೋ ನಾವು ಯಾವುದಕ್ಕಾಗಿ ನಿರಂತರ ಹೋರಾಡುತ್ತಿದ್ದೇವೋ ಅದೇ ಒಂದು ವೇಳೆ ಮಿಥ್ಯವಾಗಿರಲಿಕ್ಕೂ ಸಾಕು ಮದನ್." ಅಘೋರ ಬಾಗಿದ ತಲೆಯೆತ್ತದೆ ಭಾವನಾ ಭಂಗಿಯಲ್ಲಿ ನುಡಿದ.

"ಅದೇಕೆ ನಿನಗಷ್ಟು ಅನುಮಾನ ? ಸತ್ಯಧರ್ಮಗಳು ಇರಲಿ ಇಲ್ಲದಿರಲಿ ನಮ್ಮ ನಮ್ಮ ಅಂತರಾತ್ಮ ಮೆಚ್ಚುವ ರೀತಿಯಲ್ಲಿ ನಾವು ನಡೆದುಗೊಂಡರೆ ಸಾಕು."

"ಓ! ನಿನ್ನನ್ನು ಸಗ್ಗದಿಂದಾಚೆಗೆ ದಬ್ಬಿ ಬಿಟ್ಟಾರೆಂಬ ಭಯವೇ ನಿನಗೆ ?" ನಗು ಮುಖದಲ್ಲಿ ತುಂಟತನವನ್ನು ಹರಿ ಹಾಯಿಸಿ-"ಆಳವಾಗಿ ಯೋಚಿಸಿ ನೋಡು ಮದನ್, ನಾವು ಕತ್ತೆಯನ್ನು ದೇವರು ಧರ್ಮಗಳ ವಿಚಾರವಾಗಿ ಕೇಳಿದರೆ ಏನು ಹೇಳುತ್ತದೆ ಗೊತ್ತೆ ? ಕತ್ತೆಯ ಚಿತ್ರವನ್ನು ಮುಂದಿಟ್ಟು ದೇವರು ಇರುವುದು ಹೀಗಿಯೇ ಎಂದೀತು ! ಹಿಂಗಾಲನ್ನು ಎತ್ತಿ ಜಾಡಿಸಿ ಒದೆಯುವುದೇ ಉತ್ತಮೋತ್ತಮ ಧರ್ಮ ಎಂದು ಬೋಧಿಸೀತು !"

"ಇರಲಿ, ಅದು ಗಾರ್ದಭ ಧರ್ಮವಾದರೆ ಇದು ಮಾನವ ಧರ್ಮ."

"ಕೂಪ ಕೂರ್ಮ ನ್ಯಾಯ !"

ಹಾದಿ ಯಥಾ ರೀತಿ ಸಾಗುತಿತ್ತು. ಹಾದಿಯ ಬದಿಯಲ್ಲಿ ಬೀದಿಯ ನಾಯಿಗಳ ಪ್ರಣಯ ಕಲಹ ನಡೆಯುತಿತ್ತು. ಒಂದು ಹೆಣ್ಣಿಗಾಗಿ ನಾಲ್ಕಾರು ಗಂಡುಗಳು ಹೋರಾಟಕ್ಕಿಳಿದಿದ್ದುವು. ಕಣ್ಣನೋಟ ಕ್ಷಣಕಾಲ ಅತ್ತ ಹರಿದು ಬೇರೆಡೆಗೆ ಸಿಡಿಯಿತು. ಮರಗಳ ಎಲೆಯ ಮರೆಯಲ್ಲಿ ಕೋತಿಗಳ ಹಿಂಡು

ಟರ್, ಟರ್, ಟರ್ರನೆ ಕಿರಿಚಿಕೊಳ್ಳುತ್ತಿದ್ದುವು. ಮಲಗಲು ಇನ್ನೂ ಒಳ್ಳೆಯ ತಾವನ್ನು ಪಡೆದುಕೊಂಡಿರಲಿಲ್ಲವೋ ಏನೋ ! ಒಂದೇ ಉಸುರಿಗೆ ಅವುಗಳ ಕಿರುಚಾಟ ನಡೆದಿತ್ತು–ಕಿವಿಗೆ ಕರ್ಕಶವಾಗುವಂತೆ.

ಗಮನ ಅತ್ತ ಹೊರಳಿದರೂ ತುಟಿಪಿಟಿಕ್ಕೆನ್ನದೆ ಅಘೋರ ಹೆಜ್ಜೆ ಹಾಕಿದ. ಹಾದಿಯಲ್ಲಿನ ನಾಯಿಗಳ ಘರ್ಷಣೆಯು ಮನವನ್ನು ಎಳೆಯುತ್ತಲೂ ಮದನ್ ವಿಠಾಳಿ ಅತ್ತ ದಿಟ್ಟಿಯನ್ನು ಹೊರಳಿಸಿದ. ಹಾದಿಯ ಬದಿಯಲ್ಲಿನ ಕೊಳಚೆಗೆ ಕೆಡವಿಕೊಂಡು ಸ್ಥೂಲ ನಾಯಿಯೊಂದು ಸಣಕಲ ನಾಯಿಯೊಂದನ್ನು ಕಚ್ಚುತಿತ್ತು.

"ನೋಡಪ್ಪಾ, ನೋಡು ! ರಾಮ ರಾವಣರ ಕಾಳಗ !"

"ನೀನೊಳ್ಳೆ ಹುಡುಗ "!

ಇಬ್ಬರ ಮುಖದಲ್ಲೂ ನಗು ಮೂಡಿತು. ಕರವಸ್ತ್ರದಿಂದ ಮುಖವನ್ನು ತೀಡಿಕೊಂಡು ಅಘೋರ-"ಮದನ್ ನಮ್ಮ ಜೀವಿತದಲ್ಲೇ ಸುಖೀರಾಜ್ಯವನ್ನು ಕಾಣಬೇಕೆಂಬ ಎಲ್ಲಿಲ್ಲದ ಹಂಬಲ ನನ್ನದು. ಆದರೆ ಉಪ್ಪಿನ ಬೊಂಬೆಯೊಂದು ಸಮುದ್ರವನ್ನು ಅಳೆಯಲು ಹೋದಂತೆ ಎಂಬುದು ನನಗೂ ಗೊತ್ತು. ಆದರೂ ಹಾಗೆಂದು ಸುಮ್ಮನೆ ಕೂಡಬಾರದಷ್ಟೆ ?"

"ಮಾಡು ! ಏನೇನು ಮಾಡಲು ಸಾಧ್ಯವೋ ಎಲ್ಲವನ್ನೂ ಮಾಡಿ ನೋಡು."

"ಬಹುಶಃ ನಮ್ಮ ದೇಶಕ್ಕೆ ತೀವ್ರ ಸುಧಾರಣೆಯ ಯೋಗ್ಯವಿಲ್ಲವೇನೋ" ಎಂದ ಅಘೋರ ಸ್ವಲ್ಪ ತಡೆದು-"ಆಳುವವರು ಮನಸ್ಸು ಮಾಡಿದರೆ ಇದೇನು ಅಸಾಧ್ಯವಲ್ಲ ಮದನ್."

"ದೇಶದ ಸುಧಾರಣೆ ಕಾನೂನು ಕಟ್ಟಳೆಗಳಿಂದ ಆದೀತೆ ? ಎಲ್ಲರೂ ಮಾನಸಿಕವಾಗಿ ಬುದ್ಧಿವಂತರಾಗಬೇಕು.

ಅಘೋರ ಮಾತಾಡಲಿಲ್ಲ. ಅದೇ ವಿಚಾರವನ್ನು ಮೆಲುಕು ಹಾಕುತಿತ್ತು ಮನಸ್ಸು. ತನ್ನ ಮನೆಗೆ ತಿರುಗಬೇಕಾದ ಕವಲು ಹಾದಿಯನ್ನೂ ಮರೆತು ನೇರವಾಗಿ ಹೆಜ್ಜೆ ಹಾಕುತಿದ್ದ ಅವನ ರೀತಿಯನ್ನು ನೋಡಿ ಮದನ್ "ನಮ್ಮ ಮನೆಗೆ ಬರುತ್ತೀಯೇನಪ್ಪಾ ?" ಎಂದ.

"ಈಗ ! ನಿಮ್ಮ ಮನೆಗೆ ?" ಅಘೋರ ಕಣ್ಣರಳಿಸಿ ಕೇಳಿದ.

"ಮತ್ತೇಕೆ ನಮ್ಮ ಮನೆ ಹಾದಿ ತುಳಿದೆ !"

"ಓ ! ಮರೆತೇ ಬಿಟ್ಟಿದ್ದೆ."

"ನಿನ್ನ ಹುಚ್ಚು ಧ್ಯೇಯ ಘೋಷಣೆಗಳಿಂದ ಹಾದಿ ಮರೆಯುವುದಿರಲಿ, ನೀನು ನಿನ್ನನ್ನೇ ಮರೆತು ಬಿಟ್ಟರೂ ಆಶ್ಚರ್ಯವಿಲ್ಲ !"

ಅಘೋರ ನಕ್ಕುಬಿಟ್ಟ. ಕಣ್ಣುಗಳು ಫಳಫಳನೆ ಹೊಳೆದುವು. ಒಂದು ಘಳಿಗೆ ತಡೆದು—"ಮದನ್, ಈ ಜಾತಿ ಪಂಗಡಗಳು ತೊಲಗಿ ಸಮಗ್ರ ಭಾರತವೇ ಒಂದು ಯೂನಿಟ್ಟಾದರೆ ಎಷ್ಟು ಚೆನ್ನಾಗಿರುತಿತ್ತು ಬಲ್ಲೆಯಾ ?"

"ಹೌದಪ್ಪಾ, ಹೌದು. ಕನಸಿನ ಗಂಟು ನಮ್ಮ ಕೈಗೆಟುಕಿದ್ದರೂ ಅಷ್ಟೇ ಚೆನ್ನಾಗಿರುತಿತ್ತು !"

ಇಬ್ಬರ ಮುಖದಲ್ಲೂ ಎಳೆನಗು ಅರಳಿತು. "ಬರುತ್ತೇನಪ್ಪಾ" ಎನ್ನುತ್ತಾ ಅಘೋರ ತನ್ನ ಹಾದಿ ಹಿಡಿದ. ಉಳಿದ ಹಾದಿ ಚುರುಕಾಗಿ ಸಾಗಿತು. ನಂದಾ ಬಾಗಿಲಿಗೆ ಆತು ನಿಂತುಕೊಂಡು ಮಗನ ಆಗಮನವನ್ನೆ ದುರು ನೋಡುತಿದ್ದಳು. ಅತ್ತ ದಿಟ್ಟಿ ಹೊರಳಿದೊಡನೆಯೇ ಮನಸ್ಸು ಅರಳಿ ಒಂದೇ ಬಾರಿಗೆ ಅತ್ತ ಕುಪ್ಪಳಿಸಿದ ಅಘೋರ.

"ಇಷ್ಟೊತ್ತೂ ನೀನು ಹೊರಗಡೆಯೇ ಕಳೆದರೆ ನನ್ನ ಗತಿಯೇನಪ್ಪಾ ಅಘೂ ?"

ಅವಳ ದನಿಯಲ್ಲಿನ ದುಗುಡವನ್ನರಿತು ನಸುನಕ್ಕು "ಅಮ್ಮಾ, ಬೆಳಗಿನಿಂದ ಇದುವರೆವಿಗೂ ಕಲಿಯುವುದೇ ಆಯಿತು. ಇನ್ನು ಡಾಕ್ಟರಾಗುವವರೆಗೆ ನಮಗೆ ಬಿಡುವೆಂಬುದೇ ಇಲ್ಲ."

"ಡಾಕ್ಟರಾಗುವವರೆಗೆ ಮಾತ್ರವೇನು ? ಬಾಳುದ್ದಕ್ಕೂ ಇನ್ನು ಇದೇ ಗೋಳು. ಹೊರಗಡೆ ಹಾಯಾಗಿ ಇಬ್ಬರೂ ಕಳೆಯಿರಿ. ನನ್ನನ್ನಿಲ್ಲಿ ಕೇಳುವವರೇ ಇಲ್ಲ. ಎಂದ ಅವಳ ದನಿಯಲ್ಲಿ ದುಗುಡ ಬೇಸರಗಳ ಮಿಶ್ರಣವಿತ್ತು.

"ಮನೆ ಗೆಳತಿಯರನ್ನು ಸಂಪಾದಿಸಿಕೊಂಡರೆ ಮುಗಿಯಿತು."

"ಹಾಗೇಕೆ ? ನಾನೇ ಗೆಳತಿಯರಲ್ಲಿಗೆ ಹೋಗಿ ಬಿಡುವೆ. ಕೆಲವು ದಿನ ಒಬ್ಬನೇ ಇದ್ದುನೋಡು. ಅಂದರೇನೆ ನಿನಗೆ ನನ್ನ ಕಷ್ಟದ ಅರಿವು ಉಂಟಾದೀತು."

ತಾಯಿಯ ಮನದಳಲನ್ನು ಅರಿತ ಅಘೋರನಿಗೆ ಎದೆಯಾಳದಲ್ಲಿ ಅನು ಕಂಪದ ಕಿಡಿ ಮೂಡಿತಾದರೂ ಮಾಡುವುದೇನು ? ಹಾಗೇ ತುಸು ಯೋಚಿಸಿ ವಿಚಾರವನ್ನು ಬದಿಗಿಟ್ಟು ಮುಖಮಜ್ಜನ ಮಾಡಿ ಬಂದ. ಮೇಜಿನ ಮೇಲೆ ಬಿಸಿ ಹಾಲು ಅಣಿಯಾಗಿತ್ತು. ಗುಟುಕು ಗುಟುಕಾಗಿ ಹೀರುತ್ತಾ-"ಅಮ್ಮಾ, ಆಕಸ್ಮಿಕವಾಗಿ ಕೆರೆಗೆ ಬಿದ್ದ ಇಬ್ಬರು ಮಕ್ಕಳನ್ನು ಈ ದಿನ ಆಸ್ಪತ್ರೆಗೆ ಕರೆ ತಂದಿದ್ದರು. ಒಬ್ಬ ತಂದ ತಕ್ಷಣವೇ ಹೋಗಿಬಿಟ್ಟ. ಇನ್ನೊಬ್ಬನಿಗಾಗಿ ಡಾಕ್ಟರು ಎಷ್ಟೆಷ್ಟು ಪ್ರಯತ್ನಪಟ್ಟರೂ ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ, ಇಬ್ಬರೂ ಎಂಟು ಹತ್ತು ವರ್ಷದ ಹುಡುಗರು. ಆಡುತಿದ್ದ ಚೆಂಡು ಕೆರೆಗೆ ಬಿದ್ದಿತಂತೆ. ಚೆಂಡಿಗಾಗಿ ಇಬ್ಬರೂ ಪ್ರಾಣ ತೆತ್ತರು. ಮಕ್ಕಳನ್ನು ನೋಡಿದರೆ ಎಂತಹವರಿಗೂ ಸಂಕಟವಾಗುವಂತಿತ್ತು. ಅಂದಮೇಲೆ ತಂದೆ ತಾಯಿಯರ ಗೋಳು ಹೇಳಬೇಕೆ ?" ದನಿಯಲ್ಲಿ ದುಗುಡವಿತ್ತು. ಅಘೋರ ವಿಷಯವನ್ನು ಸಂಕಟದಿಂದ ತೋಡಿಕೊಂಡ.

"ಪಾಪ !"

"ಅವರಿಗೆ ಏಳೆಂಟು ಮಕ್ಕಳಿದ್ದಾರಂತೆ. ಅವರಲ್ಲಿ ಇವರಿಬ್ಬರೇ ಗಂಡು ಮಕ್ಕಳು !"

"ಅಯ್ಯೋ ಪಾಪ !" ಎಂದ ತಾಯಿಯ ನುಡಿಯಲ್ಲಿ ಸಂತಾಪವಿತ್ತು. ಸ್ವಲ್ಪ ತಡೆದು ಪುನಃ ನುಡಿದಳು ನಂದಾ "ಆಯುಸ್ಸಿಲ್ಲದವರಿಗೆ ಮಾಡುವುದೇನು? ಎಷ್ಟೆಂದರೂ ಬ್ರಹ್ಮಲಿಪಿ."

"ನಿಜವಾಗಲೂ ನನಗೆ ಆ ಮಕ್ಕಳನ್ನು ನೋಡಿದಾಗಿನಿಂದ ಏನೋ ಒಂದು ರೀತಿ." ಎನ್ನುತ್ತಾ ಅಘೋರ ಕುಡಿದು ಖಾಲಿಯಾದ ಬಸಿಯನ್ನು ಎತ್ತಿಟ್ಟು ತನ್ನ ಕೊಠಡಿಗೆ ಹೋದ. ಕಿಟಕಿಯಲ್ಲಿ ತೂರಿ ಬಂದ ತಂಗಾಳಿ ತಣ್ಣಗೆ ಮೈಯನ್ನು ತಾಗಿತು. ಎರಡೂ ಕೈಗಳಿಂದ ಕಬ್ಬಿಣದ ಸರಳು ಗಳನ್ನು ಹಿಡಿದುಕೊಂಡು ಕಿಟಕಿಗೆ ಆತುನಿಂತು ಹೊರ ಜಗತ್ತನ್ನು ನೆಟ್ಟ ದಿಟ್ಟಿಯಿಂದ ದಿಟ್ಟಿಸಿದ. ಕತ್ತಲೆಯ ತೆರೆಯನ್ನು ಬೇಧಿಸಿ ಮಿನುಮಿನುಗುವ ನಕ್ಷತ್ರ ರಾಶಿಗಳು ಕಣ್ಮನಗಳನ್ನು ಸೆರೆ ಹಿಡಿದುವು. ನೋಡುನೋಡುತಿದ್ದಂತೆ ಮನಸ್ಸು ಯೋಚನೆಯಲೆಯಲ್ಲಿ ಸಿಕ್ಕಿಕೊಂಡಿತು...ಅಳಿದ ಮಕ್ಕಳ ಆತ್ಮ ನಕ್ಷತ್ರ ಲೋಕವನ್ನು ಸೇರಿರಬಹುದೇ?....ಎಂಬ ಪ್ರಶ್ನೆ ಮನದಲೆಯಲ್ಲಿ ತೇಲಿ

ಬಂದಿತು. ಹಾಗೇ ಯೋಚಿಸುತ್ತಾ ತುಸು ಹೊತ್ತು ನಿಂತ. ಬದುಕಿ ಬಾಳ ಬೇಕಾದ ಮಕ್ಕಳ ಕತ್ತು ಹಿಸುಕಿದ ಆ ಕಾಣದ ಕೈಗಳ ಕರಾಳ ಸ್ವರೂಪ ಎಂತಿರಬಹುದು ? ಬದುಕು ಬೇಡದವರಿಗೆ ಹತ್ತು ಪಟ್ಟು ಆಯಸ್ಸು ನೀಡಿ ಬಾಳ ಬೇಕಾದವರ ಕತ್ತು ಹಿಸುಕುವ ವಿಧಿಯ ಹೇಸು ಲೀಲೆಗೆ ಏನೆನ್ನಬೇಕು ? ಪ್ರಶ್ನೆ ಪ್ರಶ್ನೆಯಾಗಿಯೇ ಇತ್ತು. ಉತ್ತರ ವಿಧಿಯ ತೆಕ್ಕೆಯಲ್ಲಿ ಉಳಿಯಿತು. ಒಮ್ಮೆಲೇ ಮೈಯಲ್ಲಿ ನಸು ಕಂಪನದ ಅಲೆ ಹರಿದಾಡಿ ಹೋದಂತಾಯಿತು. ದೇಹ ಮೆಲ್ಲನೆ–ಬಹು ಮೆಲ್ಲನೆ ಕುಸಿಯ ಹತ್ತಿದಂತೆ ತೋರಿ ಅಘೋರ ಕುರ್ಚಿಯ ಮೇಲೆ ಕುಳಿತುಕೊಂಡ.

ಪ್ರಾಕಾರದ ಬಾಗಿಲು 'ಖಣಿಲ್' ಎಂದು ಸದ್ದು ಮಾಡಿ ಯಾರೋ ಬಂದುದನ್ನು ಸೂಚಿಸಿತು. ಅಘೋರ ಎದ್ದು ಹೋಗಿ ಕದ ತೆರೆದ. ವಿಮಲ್ ದಾಸ್ ಒಳ ಬರುತ್ತಲೆ ಹೇಳಿದ "ಇಂದೇಕೋ ತುಂಬ ತಲೆ ನೋವು. ಅಂಗಡಿ ಮುಚ್ಚಿ ಬಂದೆ."

"ಆಸ್ಪಿರಿನ್ ಕೊಡಲೇ ಅಪ್ಪಾ ?"

"ಏನೂ ಬೇಡಪ್ಪಾ. ಹಾಯಾಗಿ ಮಲಗಿ ಬಿಡುವೆ."

ಒಳಗಿನಿಂದ ನಂದಾದೇವಿಯ ದನಿ ಹೊರಬಿತ್ತು "ಅಘೂ! ಏಕೆ ಮುಂದಾಗಿ ಬಂದಿದ್ದಾರೆ ? ಮೈ ಚೆನ್ನಾಗಿಲ್ಲವೇನೋ ನೋಡಿಕೊಳ್ಳಪ್ಪಾ"

ವಿಮಲ್‌ದಾಸ್ ಮುಗುಳು ನಗುತ್ತಾ ಒಳಹೋದ.

ಅಧ್ಯಾಯ

೧೦

ಅದೇ ತಾನೆ ಬೇಸಿಗೆ ರಜೆ ಬಂದಿತ್ತು. ಹುಮ್ಯಾಸ್ಸಿನಿಂದ ಐದು ವರ್ಷಗಳ ಕಲಿಕೆಯ ಅಂಕವನ್ನು ಮುಗಿಸಿದ್ದ ಹುಡುಗರಿಗೆ ನಾಲ್ಕು ದಿನ ಎಲ್ಲಿಯಾದರೂ ಹಾಯಾಗಿದ್ದು ಬರೋಣವೆನ್ನಿಸಿತ್ತು. ಲೈಬ್ರರಿಯ ಪುಸ್ತಕಗಳನ್ನು ಹಿಂದಿರುಗಿಸಲು ಹೋಗಿದ್ದ ಅಘೋರ ಹಿಂದಿರಗುವ ಹಾದಿಯಲ್ಲಿ ಕಾಫಿಯ ಗೀಳಿಗೆ ಮನತೆತ್ತು ದಾರಿಗೆದುರಾಗಿದ್ದ ಸಾಮಾನ್ಯ ದರ್ಜೆಯ ಹೋಟೆಲನ್ನು ಹೊಕ್ಕಿದ. ನೋಡಿದರೆ ಜಾನಕೀರಾಂ ಸುಂದರ ತರುಣಿಯೊಬ್ಬಳೊಡನೆ ಹರಟೆಹೊಡೆಯುತಿದ್ದಾನೆ! ಅಘೋರ ದಿಗ್ವಿಜಯ ಸಾಧಿಸಿದ ಥಾಟಿಯಿಂದ ಮೆಲ್ಲನೆ ಸಿಳ್ಳುಹಾಕಿ "ಹಲೋ !" ಎಂದ. ಮುಖದಲ್ಲಿ ಹಸನಾದ ನಗು ಮೂಡಿತು.

ಅನಿರೀಕ್ಷಿತವಾದ ಪರಿಚಿತ ದನಿಯನ್ನು ಕೇಳಿ ಮಿಡುಕಿಬಿದ್ದ ಜಾನಕೀರಾಂ ತಕ್ಷಣ ಇತ್ತ ತಿರುಗಿ ನೋಡಿದ. ಗೆಳೆಯನ ಪ್ರಸನ್ನ ವದನವನ್ನು ಕಾಣುತ್ತಲೂ ಮುಖ ಹೂವಿನಂತರಳಿತು. ನಗುನಗುತ್ತಾ "ಹೆಲೋ" ಎಂದು ಸ್ವಾಗತಿಸಿ ಪಕ್ಕದ ಕುರ್ಚಿಯಲ್ಲಿ ಕುಳಿತಿದ್ದ ಅರಳು ಮೊಗ್ಗೆಯ ಕಡೆ ಕೈತೋರಿ ಹೇಳಿದ "ಈ ವರ್ಷ ಇವಳೊಂದಿಗೆ ನನ್ನ ವಿವಾಹವಾಗಲಿದೆ ! ಹೆಸರು ಮೈತ್ರೇಯಿ." ನುಡಿ ಹೊರಬಿದ್ದೊಡನೆಯೇ ಅವಳ ಹಾಲುಗೆನ್ನೆಯ ಮೇಲೆ ರಂಗು ಮೂಡಿ ಎಳೆನಗು ನಲಿಯಿತು. ಜಾನಕೀರಾಂ ಅದೇ ನೇರಕ್ಕೆ ತನ್ನ ಗೆಳೆಯನನ್ನೂ ಅವಳಿಗೆ ಪರಿಚಯ ಮಾಡಿಕೊಟ್ಟ. ಸಾಂಪ್ರದಾಯಕವಾಗಿ ಇಬ್ಬರೂ ಕೈ ಜೋಡಿಸಿದರು.

"ಹೃತ್ಪೂರ್ವಕವಾದ ಅಭಿನಂದನೆಗಳು !" ಎನ್ನುತ್ತಾ ಜಾನಕೀರಾಮನ ಕೈಯನ್ನು ಹಾರ್ದಿಕವಾಗಿ ಕುಲುಕಿ ಅಘೋರ ನುಡಿದ "ಪರವಾಯಿಲ್ಲ ಕಣಯ್ಯಾ, ಸೊಗಸಾದ ಹುಡುಗಿ ಆರಿಸಿಕೊಂಡಿದ್ದಿ ! ಒಂದಿನವೂ ಈ ವಿಷಯ ಬಾಯಿ ಬಿಡಲಿಲ್ಲವಲ್ಲಾ ?"

"ಇದೇನು ಮಹಾ ವಿಷಯ ?" ಜಾನಕೀರಾಂ ವಿಷಯುವನ್ನು ನಗು ನಗುತ್ತಾ ತೇಲಿಸಿದ.

ಅಘೋರ ಅವಳತ್ತ ತಿರುಗಿ ಹೇಳಿದ "ಸುಮ್ಮನೆ ಮದುವೆಯಾದರೆ ಸಾಲದು. ಅವನನ್ನು ಸ್ವಲ್ಪ ಅಂಕೆಯಲ್ಲೂ ಇಟ್ಟುಕೊಳ್ಳಬೇಕು! ಕಡಿವಾಣವಿಲ್ಲದ ಮೇಲೆ ಕುದುರೆ ಇದ್ದೂ ಪ್ರಯೋಜನವಿಲ್ಲ!"

"ಏ! ಕಿಲಾಡಿ! ಚೆನ್ನಾಗಿ ಹೇಳಿಕೊಡುತಿದ್ದಿ?" ಎಂದ ಜಾನಕೀರಾಂ. ಮೂವರೂ ಗಹಗಹಿಸಿ ನಕ್ಕರು.

"ನಿಮ್ಮವರ ಹಸ್ತರೇಖೆ ನೋಡಿದ್ದೀಯಾ? ಇಬ್ಬರ ಮನಸ್ಸು ಕೂಡಿ ಬರುತ್ತೋ ಇಲ್ಲವೋ ನೋಡಿಕೊಂಡು ಕೈಹಿಡಿ ಜರ್ಕ!"

ಪುನಃ ನಗುವಿನ ಗುಲ್ಲೆದ್ದಿತು. ಜಾನಕೀರಾಂ ನಕ್ಕ-"ಘೋರ್ ಈ ಹೋಟೆಲಿಗೆ ನನ್ನ ಗೆಳೆಯರಾರೂ ಬರುವುದಿಲ್ಲವೆಂದುಕೊಂಡು ನಾವು ಬಂದರೆ ನೀನು ಇಲ್ಲಿಗೂ ಬಂದೂ ಬಿಡುವುದೇ? ಇನ್ನು ನಿನ್ನ ಬಾಯಿಯಲ್ಲಿ ನಾನು ಉಳಿಯಬೇಕಲ್ಲಾ?"

"ನೋಡಪ್ಪಾ, ಲೈಬ್ರರಿಯಿಂದ ಮನೆಗೆ ಹೋಗುವ ಹಾದಿಯಲ್ಲಿ ಕಾಫಿ ಕುಡಿಯೋಣ ಎನ್ನಿಸಿತು. ಹೀಗೆಯೆ ಬಂದೆ. ನೋಡಿದರೆ, ನೀನಿಲ್ಲಿ ಮಜಾ ಮಾಡುತಿದ್ದೀಯೆ!" ನಗುತ್ತಾ ಹುಬ್ಬು ಹಾರಿಸಿದ ಅಘೋರ.

ಗೆಳೆಯನ ಕೈ ಹಿಡಿದು ಎಡ ಪಕ್ಕದ ಕುರ್ಚಿಯಲ್ಲಿ ಕುಳ್ಳಿರಿಸಿಕೊಂಡು ಜಾನಕೀರಾಂ-

"ಮೈತ್ರೇಯಿ ನನ್ನ ಅಕ್ಕನ ಮಗಳು. ಚಿಕ್ಕನಿಂದಲೂ ನಾವು ಕೂಡಿ ಆಡಿ ಬೆಳೆದವರು. ಮದುವೆಯೂ ಹಿಂದೆಯೇ ನಿಷ್ಕರ್ಷೆಯಾದುದು. ಮುಖ್ಯವಾಗಿ ನಮ್ಮ ಓದು ಮುಗಿಯಲೆಂದು ನಮ್ಮವರು ಇದುವರೆವಿಗೆ ಕಾದಿದ್ದರು. ಇನ್ನು ಅವರು ಕಾಯಲು ತಯಾರಾಗಿಲ್ಲವಾದುದರಿಂದ ಈ ಸಲ ನಮ್ಮ ಮದುವೆಯಾಗುತ್ತದೆ. ಮೈತ್ರೇಯಿ ಇದೇ ತಾನೆ ಬಿ.ಎ., ಮುಗಿಸಿದ್ದಾಳೆ." ಮೈಯೆಲ್ಲಾ ಮನಸ್ಸಾಗಿ ಜಾನಕೀರಾಂ ವಿಷಯವನ್ನು ಬಿತ್ತರಿಸಿದ. ಮಿನುಗುವ ನಯನಗಳು ಇನ್ನಷ್ಟು ಅಗಲಿದುವು. ಸಂತೋಷಾರ್ಥವಾಗಿ ಅಘೋರನಿಗೊಂದು ಕಾಫಿ ತರಹೇಳಿ ತಾನೆ ದುಡ್ಡು ಕೊಟ್ಟ ಜಾನಕೀರಾಂ. ಮೂವರೂ ಕಾಫಿಯನ್ನು ಹೀರಿದರು. ಬೇಗನೆ ಮುಗಿಸಿ ಅಘೋರ್ ಎದ್ದು ನಿಂತು-"ನನಗಿನ್ನು ಅನುಮತಿ ನೀಡು. ಇಂದು ನಿನ್ನಿಂದ ಹೆಚ್ಚು ಕಾಲ ತೆಗೆದುಕೊಳ್ಳಲಾರೆ." ಕಣ್ಣುಗಳಲ್ಲಿ ತುಂಟತನ ನಲಿಯಿತು.

"ಯಾಕಪ್ಪಾ, ಇಷ್ಟು ಬೇಗ ?"

"ಈಗ ನಿಮ್ಮ ಬಳಿ ಇರುವುದೆಂದರೆ ಶಿವಪೂಜೆಯಲ್ಲಿ ಕರಡಿ ಬಿಟ್ಟಂತೆ !"

"ಅಂಥಾದ್ದೇನಿಲ್ಲ. ನಮಗಿದು ಹೊಸದಲ್ಲ, ಕುಳಿತುಕೊ."

"ಇರಲಿ, ನಿನ್ನ ನಾಳೆಯ ಕಾರ್ಯಕ್ರಮವೇನು ?" ಮುಖದಲ್ಲಿ ಹಸನಾದ ನಗು ಬೀರಿ ಎದ್ದು ನಿಂತ ಅಘೋರ.

"ನಾಳೆ ನಿನ್ನ ಮನೆಗೆ ಮದನನೊಂದಿಗೆ ಬರುತ್ತೇನೆ. ಆಗ ಮಾತಾಡೋಣ."

"Welcome !" ಎಂದವನೆ ಮೈತ್ರೇಯಿಯ ಕಡೆ ತಿರುಗಿ ಎರಡು ಕೈಗಳನ್ನೂ ಜೋಡಿಸಿ "ಬರುತ್ತೇನೆ. ನಮಸ್ಕಾರ." ಎಂದ.

ಅವಳು ನಗು ಮುಖದಿಂದ ಎದ್ದು ನಿಂತು ನಮಸ್ಕರಿಸಿದಳು. ಅಲ್ಲಿಂದ ಅಘೋರ ಹೊರಬಿದ್ದ. ಹತ್ತು ಮಾರು ಹೋಗುವಷ್ಟರಲ್ಲಿ ರತನ್ ಮಿಶ್ರನೊಂದಿಗೆ ಸುಧೀರ್ ಬರುತಿದ್ದುದನ್ನು ಅಘೋರ ದೂರದಿಂದಲೇ ಗಮನಿಸಿದ. ಒಮ್ಮೆಲೆ ಹೃದಯ ಆನಂದದಿಂದ ಉಕ್ಕೇರಿತು. ಅಲ್ಲಿಂದಲೇ ಅವರಿಬ್ಬರೂ ಸಿಳ್ಳು ಹಾಕಿ "ಹೆಲೊ !" ಎಂದರು. ಅವರೊಂದಿಗೆ ನಗು ನಗುತ್ತಾ ಅಘೋರ ತಾನೂ ದನಿ ಗೂಡಿಸಿದ. ಮೂವರೂ ನಸು ದೂರದಲ್ಲಿದ್ದ ಮಕ್ಕಳ ಪಾರ್ಕಿನ ಕಡೆ ಹೆಜ್ಜೆ ಹಾಕಿದರು. ಅಘೋರ ಅಂದ "ನಾವು ಈ ಸಲ ಊಟಿಗೆ ಹೋಗಿ ನಾಲ್ಕು ದಿನ ಹಾಯಾಗಿದ್ದು ಬರಬೇಕೆಂದು ನನ್ನ ಮನಸ್ಸು. ನೀವಿಬ್ಬರೂ ಬನ್ನಿರಿ, ಎಲ್ಲರೂ ಕೂಡಿ ಹೋಗೋಣ. ಮೆಡಿಕಲ್ ಕಾಲೇಜಿಗೆ ಸೇರಿದಾಗಿನಿಂದ ನಮ್ಮ ವೇಳೆಯನ್ನೆಲ್ಲಾ ಅಲ್ಲೆ ಸವೆಸಿ ಬಿಟ್ಟಿದ್ದೇವೆ. ಇನ್ನು ಸಾಯುವ ತನಕ ಡಾಕ್ಟರ್ ಗಿರಿ ತಪ್ಪುವುದಿಲ್ಲ. ನಾವೆಲ್ಲರೂ ಒಟ್ಟಾಗಿ ಹೊರಡುವುದಂತೂ ಸಾಧ್ಯವೆ ಇಲ್ಲ."

"ಹೊರಡುವುದೆಂದು ?" ರತನ್ ಮಿಶ್ರ ಕೇಳಿದ.

"ನಾಳೆ ಜರ್ಾ ಮತ್ತು ಮದನನೊಂದಿಗೆ ಮಾತಾಡಿ ನಿರ್ಧರಿಸುವೆ. ಅವರಿಬ್ಬರೂ ಬರುತ್ತಾರಂತೆ. ನೀವಿಬ್ಬರೂ ಮನಸ್ಸು ಮಾಡಿರಿ."

ಏನು ಮಾಡುವುದೆಂದು ಸುಧೀರ್ ರತನ್ ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಅವರಿಗೆ ಹಣ ಕಾಸಿನ ಮುಗ್ಗಟ್ಟಿನೊಂದಿಗೆ ಹೊರಡ

ಬೇಕೆಂಬ ಆಸೆಯೂ ಇತ್ತು. ಅಘೋರ ಅವರ ಫಜೀತಿಯನ್ನು ನೋಡಿ ನಸು ನಕ್ಕು-"ಇಷ್ಟಕ್ಕೆ ಏಕಪ್ಪಾ ಯೋಚನೆ ? ಯಾರಿಂದಲಾದರೂ ಹಣ ತೆಗೆದು ಕೊಂಡು ನಿಮ್ಮ ಮೊದಲ ಸಂಬಳ ಬಂದೊಡನೆ ಹಿಂದಿರುಗಿಸಿದರಾಯಿತು."

"ಮೆಡಿಕಲ್ ಕೋರ್ಸ್ ಎಂದರೆ ಸಾಮಾನ್ಯವಲ್ಲ. ಈಗಾಗಲೇ ನಾವು ನಮ್ಮವರಿಗೆ ತಲೆ ಹೊರೆಯಾಗಿದ್ದೇವೆ."

"ಹೇಗಿದ್ದರೂ ತಲೆ ಹೊರೆಯನ್ನು ಇಳಿಸುವುದು ಇದ್ದೇ ಇದೆಯಲ್ಲಾ. ಅದರೊಂದಿಗೆ ಇದೂ ಒಂದು."

ಸ್ವಲ್ಪ ಹೊತ್ತು ಸುಮ್ಮನಿದ್ದು ರತನ್ ಯೋಚಿಸಿ–"ಸ್ವಂತ ಕ್ಲಿನಿಕ್ ತೆರೆಯುವುದು ವಾಸಿ. ಸರಿಯಾದ ಸಹಪಾಟಿ ಸಿಕ್ಕಿದರೆ ಅದೇ ಮೇಲು."

"ಸರಿಯಾದ ಸಹಪಾಟಿ ಅಂದರೆ ಲೇಡಿ ಡಾಕ್ಟರೇ ?" ಎಂದ ಅಘೋರ. ರತನನ ಮುಖದಲ್ಲೂ ನಗು ಮೂಡಿತು.

"ಅಲ್ಲಪ್ಪಾ, ನಿಮ್ಮಂಥಹವರು ಯಾರಾದರೂ ಅರ್ಧ ಹಣ ಹಾಕು ವಂತಿದ್ದರೆ ಎಂಬ ಯೋಚನೆ ಇದೆ. ಏನಾಗುತ್ತೋ ನೋಡಬೇಕು."

"ಅನುಭವ ಬಾರದೆ ಸ್ವಂತ ಕ್ಲಿನಿಕ್ ತೆರೆದು ಏನು ಮಾಡುತ್ತಿ ? ಅಲ್ಲಿ ನೀನೆ ಮಲಗಿ ಕೊಳ್ಳಬೇಕು ಅಷ್ಟೆ !"

ಮೂವರ ಮುಖದಲ್ಲೂ ನಗು ಚಿಮ್ಮಿ ಹರಿಯಿತು.

ಅಘೋರ ಎಂದ "ಮೊದಲಿಷ್ಟು ಚೆನ್ನಾಗಿ ಕೆಲಸ ಮಾಡಿ ಅನುಭವ ಸಂಪಾದಿಸು. ಅನಂತರ ಕ್ಲಿನಿಕ್, ಸಧ್ಯಕ್ಕೆ ಇದೆಲ್ಲಾ ಬದಿಗೊತ್ತಿ ಊಟಿಗೆ ಹೊರಡಲು ತಯಾರಾಗು. ಅಂದರೆ ಬಹಳ ಉಪಕಾರವಾದೀತು."

"ಸುಧೀರ್ ನೀನೇನು ಮಾಡುತ್ತಿ ?" ರತನ್ ಕೇಳಿದ.

"ನೀವಿಬ್ಬರೂ ಬಂದೇ ತೀರಬೇಕು. ಎಲ್ಲರೂ ಕೂಡಿ ಹೋದರೇನೇ ಪ್ರವಾಸ ಚೆನ್ನ."

ಸ್ವಲ್ಪ ಯೋಚಿಸಿ ಸುಧೀರ್ ಕೇಳಿದ "ಎಷ್ಟು ದಿನಗಳ ಪ್ರೋಗ್ರಾಂ ?"

"ಒಂದು ವಾರ."

"ಅಷ್ಟಾದರೆ ಪರವಾಗಿಲ್ಲ. ಹೇಗಾದರೂ ಸುಧಾರಿಸಿ ಕೊಳ್ಳಬಹುದು."

"ಹಾಗಿದ್ದರೆ ನೀನೂ ಈಗಲೇ ನಿರ್ಧರಿಸಿ ಹೇಳು ಸುಧೀರ್."

"ಆಗಲಿ." ಎಂದ ಸುಧೀರ್ ಸ್ವಲ್ಪ ಯೋಚಿಸಿ-"ಸಮಯಕೊಟ್ಟರೆ ನಾಳೆ ಸಂಜೆಯೊಳಗಾಗಿ ಇನ್ನೊಮ್ಮೆ ಯೋಚಿಸಿ ಹೇಳುವೆ."

"ಆದರೂ ತಪ್ಪಿಸಿಕೊಳ್ಳಬೇಡ. ಒಮ್ಮೆ ಕೆಲಸಕ್ಕೆ ಸೇರಿದೆವೆಂದರೆ ಮುಗಿಯಿತು. ಇನ್ನು ಇಂತಹ ಅವಕಾಶ ಸಿಕ್ಕುವುದು ದುರ್ಲಭ."

ಅಘೋರ ಗೆಳೆಯರನ್ನು ನಲ್ಮೆಯಿಂದ ಬೀಳ್ಕೊಟ್ಟು ತನ್ನ ಮನೆಯ ಹಾದಿ ಹಿಡಿದ.

೦ ೦ ೦ ೦

ಮರುದಿನ ಸಂಜೆಯಲ್ಲಿ ಒಮ್ಮಿಂದೊಮ್ಮೆಲೇ ನಾಲ್ವರು ಗೆಳೆಯರೂ ಅಘೋರನ ಮನೆಯಲ್ಲಿ ಪ್ರಕಟವಾದರು. ಅಘೋರ ಎಲ್ಲರನ್ನೂ ಅತ್ಯಾದರದಿಂದ ಬರಮಾಡಿಕೊಂಡ. ನಾಲ್ವರೂ ಬಂದು ಕುಳಿತುಕೊಂಡರು. ನಂದಾದೇವಿ ಮಗನ ಗೆಳೆಯರನ್ನು ತುಂಬುಗಣ್ಣಿನಿಂದ ನಿಟ್ಟಿಸಿದಳು. ಸಾಲಾಗಿ ಕುಳಿತ ಹೊಚ್ಚಹೊಸ ತರುಣರು ಪಂಚಲಿಂಗಗಳಂತೆ ತೋರಿ ಆನಂದ ಪರವಶಳಾದಳು. ಅಘೋರ ನಗುನಗುತ್ತಾ ಅಂದ "ಅಮ್ಮಾ! ನಿಮಗೆ ತಲೆನೋವು ಬಂದರೂ ಸಾಕು. ಈ ನಾಲ್ವರನ್ನೂ ತಂದು ನಿಲ್ಲಿಸಿ ಬಿಡುವೆ!" ದನಿಯಲ್ಲಿ ಹಾಸ್ಯದ ಚಟಾಕಿಯಿತ್ತು. ಎಲ್ಲರೂ ಮುಸುಮುಸು ನಕ್ಕರು.

"ಏಕೆ? ಸ್ಮಶಾನಕ್ಕೆ ಒಯ್ಯಲಿಕ್ಕೇನು?"

ಪುನಃ ಎಲ್ಲರೂ ನಗ ತೊಡಗಿದರು. ನಂದಾ ನಸುನಕ್ಕು ನುಡಿದಳು "ನೀವಿನ್ನೂ ಕಣ್ಣು ಬಿಡುವುದರಲ್ಲಿದ್ದೀರಿ. ಮೊದಲಿಷ್ಟು ಚೆನ್ನಾಗಿ ಕೆಲಸ ಮಾಡಿ ಅನುಭವ ಪಡೆದುಕೊಳ್ಳಿರಿ."

ನಂದಾ ಕಾಫಿ ತಿಂಡಿಯನ್ನು ನೀಡಿ ಉಪಚರಿಸಿದಳು. ಮರುದಿನ ಬೆಳಗ್ಗೆ ಅಷ್ಟು ಹೊತ್ತಿಗೇನೇ ಬೆಂಗಳೂರು ಬಿಡುವುದೆಂದು ತೀರ್ಮಾನಿಸಿಕೊಂಡು ಗೆಳೆಯರು ಹೊರಬಿದ್ದರು.

ಅಘೋರ ಗರಿಗರಿ ತಿಂಡಿ ತಿನಿಸುಗಳನ್ನು ಕಟ್ಟಿಕೊಂಡು ಕಾಫಿ ತಿಂಡಿಯನ್ನು ಮುಗಿಸಿ ಹೊತ್ತಿಗೆ ಮುಂಚೆ ಬಸ್ಸು ನಿಲ್ದಾಣಕ್ಕೆ ಬಂದು ಸೇರಿದಾಗ ಜಾನಕೀರಾಂ ರತನ್‌ಮಿಶ್ರರು ಆಗಲೇ ತಯಾರಿದ್ದರು. ಅವರ ಸಾಮಾನಿನೊಡನೆ ತನ್ನದನ್ನೂ ಇಟ್ಟು ಹಾದಿಯುತ್ತ ನೋಟ ಹರಿಸಿದ ಅಘೋರ. ದೂರದಲ್ಲಿ ಮದನ್‌ಮಿತಾಳಿ ಸರಸರನೆ ಬರುತಿದ್ದುದು ಕಾಣಬಂತು. ಇನ್ನು

ಕೆಲವೇ ನಿಮಿಷಗಳೊಳಗಾಗಿ ದಾಪುಕಾಲು ಹಾಕುತ್ತಾ ಸುಧೀರನೂ ಬಂದ. ಐವರೂ ನಗು ಮುಖದಿಂದ ಬಸ್ಸು ಹತ್ತಿದರು.

"ನೀವೆಲ್ಲರೂ ತಿಂಡಿ ತಿಂದಿದ್ದೀರಾ ?" ಅಘೋರ ಕೇಳಿದ.

ಜಾನಕೀರಾಮನ ಹೊರತು ಉಳಿದ ಮೂರೂ ದನಿಗಳೂ "ಹ್ಞೂ" ಎಂದುವು. ಜಾನಕೀರಾಂ ಹೇಳಿದ "ನನಗೆ ಹೊತ್ತಿಗೆ ಮುಂಚೆ ತಿನ್ನಲಾಗುವುದಿಲ್ಲ."

ಪಯಣಿಗರೆಲ್ಲಾ ಬಸ್ಸಿಗೆ ಕಿಕ್ಕಿರಿದು ಹತ್ತಿದರು. ಒಳಗಡೆ ಹಾಯಾಗಿ ಉಸಿರಾಡುವುದೂ ಕಷ್ಟವಾಯಿತು. ಮಹಿಳೆಯರ ಸೀಟಿನಲ್ಲಿ ಕುಳಿತವರೂ ಸ್ಥಳಾಭಾವದಿಂದ ತತ್ತರಿಸಿ ಹೋದರು. ಮೊದಲ ಬಸ್ಸಿನಲ್ಲೇ ಹೀಗಾದರೆ ಹೇಗೆ ಎನ್ನಿಸಿತು-ಹುಡುಗರಿಗೆ. ಸ್ಥಳ ದೊರೆಯದವರು ಸಾಲಾಗಿ ನಿಂತುಕೊಂಡರು. ತಲೆಗೆ ಎಣ್ಣೆ ಮೆತ್ತಿ ನುಣ್ಣಗೆ ಬಾಚಿಕೊಂಡು ಮಲ್ಲಿಗೆಯ ಹೂವನ್ನು ಕಾಮನ ಬಿಲ್ಲಿನಂತೆ ಮುಡಿಗೇರಿಸಿಕೊಂಡಿದ್ದ ಮಹಿಳೆಯರು ಮಾತಿಗಾರಂಭಿಸಿದರು. ಬಸ್ಸಿನ ಗಡಗಡ ಸದ್ದಿನೊಂದಿಗೆ ಜನಗಳ ಮಾತಿನ ಗುಜುಗುಂಪಲೂ ಸೇರಿಕೊಂಡು ಕಿವಿಗೆ ಕರ್ಕಶವಾಗಿತ್ತು.

ಕೂದಲನ್ನು ಇಬ್ಭಾಗವಾಗಿ ಮಾಡಿ ಎರಡೂ ಬದಿಗೆ ಜಡೆಗಳನ್ನು ಹೆಣೆದುಕೊಂಡಿದ್ದ ಹುಡುಗಿಯು ಪಕ್ಕದಲ್ಲಿದ್ದ ಹಿರಿಯಾಕೆಯನ್ನು ಕೇಳಿದಳು "ಅವ್ವಾ, ಮರದ ಪೆಟ್ಟಿಗೆಯ ಬೀಗ ಹಾಕಿದ್ದೀರಾ ?"

"ಹ್ಞೂ,"

"ಸರಿಯಾಗಿ ಹಾಕಿದ್ದೀರೋ ಇಲ್ಲವೋ ಒಮ್ಮೆ ಬೀಗ ಎಳೆದು ನೋಡಬೇಕಾಗಿತ್ತು."

"ನೋಡಿಯೇ ಬಂದೆ."

"ಉಗ್ರಾಣದ ಬೀಗ ?"

"ಅದನ್ನು ಕಿಟ್ಟು ಕೈಗೆ ಕೊಟ್ಟು ಬಂದೆ." ಎಂದ ಮುದುಕಿ ಹುಡುಗಿಯ ಬರಿದಾದ ಕತ್ತನ್ನು ನೋಡಿ "ಸರಸೂ, ನಿನ್ನ ಕತ್ತಿನಲ್ಲಿದ್ದ ಸರ ಏನಾಯ್ತೆ ?" ಗಾಬರಿಯಿಂದ ಕೇಳಿದಳು.

"ಓ!" ಎನ್ನುತ್ತಾ ಸರಸು ಕತ್ತು ಮುಟ್ಟಿ ನೋಡಿಕೊಂಡೊಡನೆ ಬೆಳ್ಳಗೆ ಮುಖ ಬಿಳಿಚಿಕೊಂಡಿತು. "ಅಯ್ಯೋ, ಅವ್ವಾ ! ಹಾಸಿಗೆಯಲ್ಲೇ ಉಳಿದು

ಹೋಯ್ತು ! ತಲೆ ದಿಂಬಿನಡಿಯಲ್ಲಿ ರಾತ್ರಿ ಇಟ್ಟಿದ್ದೆ." ಎನ್ನುತ್ತಾ ಮುಸು ಮುಸು ಅಳತೊಡಗಿದಳು. ಮತ್ತೆ ಅಪರವರೊಳಗೆ ಗುಸುಗುಸು ಆರಂಭ ವಾಯಿತು. "ಏನು ಮಾಡೋಣ?...ಏನು ಮಾಡೋಣ ?"

ಇನ್ನೊಬ್ಬಾಕೆ ಸಲಹೆ ಕೊಟ್ಟಳು "ನೀವು ಹಿಂದಿರುಗಿ ಹೋಗಿರಿ. ಇನ್ನೊಂದು ಬಸ್ಸಿಗೆ ಬಂದರಾಯಿತು."

"ಆದರೆ, ಹೋಗುವುದು ಹೇಗೆ ? ಇದು ಎಕ್ಸ್‌ಪ್ರೆಸ್ !"

ಡ್ರೈವರನನ್ನು ಒಪ್ಪಿಸಿ ಅವನನ್ನು ಅಲ್ಲಿ ಇಳಿಯುವಂತೆ ಮಾಡುವುದು ಒಂದು ಹಗರಣವಾಯಿತು. ಬೆನ್ನ ಹಿಂದೆ ನಿಂತಿದ್ದ ಹಿರಿಯ ವ್ಯಕ್ತಿಯೊಬ್ಬ ಪದೇ ಪದೇ ದೊಡ್ಡ ದನಿಯಲ್ಲಿ ಕೆಮ್ಮುತಿದ್ದ. ಉಗಿಯಲು ಆಗಾಗ ಕುಳಿತವರ ಮಧ್ಯೆ ನುಗ್ಗಿ ಕಿಟಿಕಿಯ ಬಳಿಗೆ ಹೋಗಲು ಪ್ರಯತ್ನ ಪಟ್ಟರೂ ಹೋಗ ಲಾಗದೆ ಅಲ್ಲಿಂದಲೇ ಉಗಿದು ಎಲ್ಲರ ಕೋಪಕ್ಕೂ ಪಾತ್ರನಾದ. ಹುಡುಗರು ಒಬ್ಬರ ಮುಖ ಒಬ್ಬರು ನೋಡಿಕೊಂಡು ಮುಖ ಸಿಂಡರಿಸಿಕೊಂಡರು.

ಅಂಕು ಡೊಂಕಿನ ಕರಿಯ ರಸ್ತೆಯ ಮೇಲೆ ಬಸ್ಸು ಸರಾಗವಾಗಿ ಹರಿ ಯುತಿತ್ತು ಹಿಂದಿನಿಂದ ಹಿರಿಯ ವ್ಯಕ್ತಿಯ ಥೊಯ್ ಥೊಯ್ ಕೆಮ್ಮಿನ ಸದ್ದೂ ಒಂದೇ ಸಮನೆ ಕೇಳಿ ಬರುತ್ತಿದೆ. ಮದನ್‌ಮಿತಾಳಿ ಹೇಳಿದ "ನಾವು ಮೈಸೂರು ಮುಟ್ಟಿದೊಡನೆಯೇ ಡೆಟ್ಟಾಲ್ ಹಾಕಿ ಸ್ನಾನ ಮಾಡಿದರೆ ಏನಃ ಊಟಿಗೆ ಹೋಗುವ ಬದಲು ಎಲ್ಲರೂ ಸ್ಯಾನಿಟೋರಿಯಂ– ಸೇರಬೇಕಾದೀತು."

"ಹಾಯಾಗಿ ಬೆಂಗಳೂರಿನಲ್ಲಿ ಇರಬಹುದಾಗಿತ್ತು,"

"ಜಾಲಿ ಟ್ರಿಪ್ ಎಂದರೆ ಸ್ವಂತ ಕಾರಿದ್ದರೆ ಚೆನ್ನ."

ಮುಂದಿನ ಸೀಟಿನಲ್ಲಿ ಕುಳಿತಿದ್ದ ಹುಡುಗಿಯೊಬ್ಬಳು ಗಬಕ್ಕನೆ ವಾಂತಿ ಮಾಡಿದಳು. ಅದರ ವಾಸನೆ ಬಸ್ಸನ್ನೆಲ್ಲಾ ವ್ಯಾಪಿಸಿತು. ಹಿಂದಿನ ಸೀಟಿನಲ್ಲಿ ಕುಳಿತಿದ್ದವರೊಬ್ಬರು ಗಪ್ಪನೆ ತೇಗಿ "ದೂರ ಪ್ರಯಾಣ ಮಾಡುವಾಗ ತಿಂದುಂಡು ಹೊರಡುವುದೇ ತಪ್ಪು. ಖಾಲಿ ಹೊಟ್ಟೆಯಲ್ಲಿದ್ದರೆ ವಾಂತಿ ಯಾಗುತ್ತಿರಲಿಲ್ಲ."

ಅವರ ತುಂಬಿದ ಹೊಟ್ಟೆಯ ಪ್ರತಿ ಕ್ರಿಯೆ ಎಲ್ಲರಿಗೂ ನಗು ತರಿಸಿತು.

ತುಸು ಹೊತ್ತಿನೊಳಗಾಗಿ ವಾಂತಿಯ ದ್ರವ ಸೀಟಿನಡಿಯಿಂದ ಹರಿದು ಬಂದಿತು. ಅದನ್ನು ನೋಡು ನೋಡುತ್ತಾ ರತನ್‌ಮಿಶ್ರ ಅಸಹ್ಯದಿಂದ– "ಶ್ಶ್ ! ಕಾಲಡಿ ಹರಿದು ಬಂತು."

ಎಲ್ಲರೂ ಮುಸು ಮುಸು ನಗತೊಡಗಿದರು. ರತನ್‌ಮಿಶ್ರ ಮುಖ ಸಿಂಡರಿಸಿದ.

ಬಸ್ಸು ಒಂದೇ ಸಮನೆ ಓಡುತಿತ್ತು. ರಾಮನಗರ ದಾಟಿ ನೂರು ಮಾರು ಮುಂದುವರಿದಾಗ ಟಯರು ಒಡೆದ ಸದ್ದು ಕೇಳಿ ಬರುವುದರೊಳಗಾಗಿ ಬಸ್ಸು ರಸ್ತೆ ಬಿಟ್ಟು ಪಕ್ಕಕ್ಕೆ ನುಗ್ಗಿ ದಾರಿಗರಿಗೆ ಮಾರಕವಾಯಿತು ! ಬಸ್ಸು ನಿಂತ ಕೂಡಲೇ ಎಲ್ಲರೂ ಒಬ್ಬರ ಮೇಲೊಬ್ಬರು ನುಗ್ಗಿ ಕೆಳಕ್ಕೆ ಜಿಗಿದರು. ತುಂಬು ತಾರುಣ್ಯದ ಹುಡುಗಿಯೊಬ್ಬಳ ಕಾಲುಗಳ ಮೇಲೆ ಬಸ್ಸು ಹರಿದು ಅವಳ ಕಾಲುಗಳೆರಡೂ ಜಜ್ಜಿ ಹೋಗಿದ್ದುವು. ಮೈಮೇಲೂ ಹಲವು ಗಾಯಗಳಾಗಿದ್ದ ತರುಣಿಯ ಸ್ಥಿತಿ ಚಿಂತಾಜನಕವಾಗಿತ್ತು. ಪಕ್ಕದಲ್ಲಿದ್ದ ಇನ್ನೊಬ್ಬ ವ್ಯಕ್ತಿಗೆ ಅಲ್ಪ ಸ್ವಲ್ಪ ಗಾಯಗಳಾಗಿದ್ದುವು.

ತರುಣ ಡಾಕ್ಟರುಗಳೈವರೂ ಬಸ್ಸಿನಲ್ಲಿದ್ದ ಔಷಧಿಯ ಪೆಟ್ಟಿಗೆಯನ್ನು ತೆಗೆದುಕೊಂಡು ಪ್ರಥಮ ಚಿಕಿತ್ಸೆ ನೀಡಿ ನೆತ್ತರಿನ ಕಡಲಲ್ಲಿ ಮುಳುಗಿದ್ದ ಅವ ಳನ್ನು ಎತ್ತಿ ಬದಿಗೆ ಮಲಗಿಸಿದರು. ಪ್ರಜ್ಞಾವಿಹೀನಳಾಗಿದ್ದ ಅವಳು ಕೊರಡಿ ನಂತೆ ಬಿದ್ದಿದ್ದ ಸ್ಥಿತಿ ಕರುಣಾ ಜನಕವಾಗಿತ್ತು. ಬೆಂಗಳೂರು ಕಡೆಗೆ ಹೋಗು ತಿದ್ದ ಲಾರಿಯೊಂದರಲ್ಲಿ ಗಾಯಾಳುಗಳನ್ನು ಸಾಗಿಸುವಾಗ ಪಯಣಿಗರೆಲ್ಲಾ ಮರ್ಮರ ಮರುಗಿದರು. ಹೆಂಗಳೆಯರ ಕಣ್ಣಿನಲ್ಲಿ ಕಂಬನಿಯು ಕೋಡಿ ಗಟ್ಟಿ ಹರಿಯಿತು. ಅವಳೊಂದಿಗೆ ಹೋಗಿ ನೆರವು ನೀಡಲು ಪಯಣಿಗ ರೊಬ್ಬರು ಕಂಬನಿ ಸುರಿಸುತ್ತಲೇ ಮುಂದಾದರು.

ಆ ಭೀಭತ್ಸ ದೃಶ್ಯ ಎಲ್ಲರ ಎದೆಯನ್ನೂ ತಲ್ಲಣಿಸಿತು. ಎಲ್ಲರ ಬಾಯಲ್ಲೂ ಅದೇ ವಿಚಾರ ಮರ್ಮರಿಸುತಿತ್ತು. ಪಯಣಿಗರು ಸಪ್ಪೆ ಮೋರೆಯಿಂದ ಅಲ್ಲಲ್ಲೇ ಗುಂಪು ಕೂಡಿ ನಿಂತರು.

ಗಾಯಾಳುಗಳನ್ನು ಸಾಗಿಸಿದರೂ ಬಸ್ಸು ಮುಂದುವರಿಯುವಂತಿಲ್ಲ. ಬೆಂಗಳೂರಿನಿಂದ ಬರುವ ಪ್ರತಿಯೊಂದು ಬಸ್ಸಿಗೂ ಅಷ್ಟಿಷ್ಟು ಜನರನ್ನು ಹತ್ತಿಸಿ ಕಳುಹಿಸುವಾಗ ಹೊತ್ತು ನೆತ್ತಿಯ ನೇರಕ್ಕೆ ಏರ ತೊಡಗಿತು. ಬೆಳಗ್ಗೆ ಏನೂ

ತಿನ್ನದೆ ಬೆಂಗಳೂರು ಬಿಟ್ಟಿದ್ದ ಜಾನಕೀರಾಮನ ಮುಖ ಕ್ಷಣೇ ಕ್ಷಣೇ ಬಾಡ ಹತ್ತಿತು.

ಈ ಸಲ ಬಂದ ಬಸ್ಸಿಗೆ ಜಾನಕೀರಾಂ ಸುಧೀರ್ ಮದನ್‌ರವರನ್ನು ಹತ್ತಿಸಿ ಬೀಳ್ಕೊಡುತ್ತಾ ಅಘೋರ-"ಜಾರ್ಜ್, ಮೊದಲು ಕೊಠಡಿ ಗೊತ್ತು ಮಾಡಿಕೊಂಡು ನಮಗೂ ಊಟ ಇಡಿಸಿರಿ. ಬಹುಶಃ ನಾವು ಬರುವುದು ತುಸು ಹೊತ್ತಾದೀತು."

"ಹ್ಞೂನಪ್ಪಾ." ಎಂದ ಮದನ್ ಮತ್ತೆ ಹೇಳಿದ "ಮಾಡರ್ನ್ ಹಿಂದೂ ಹೋಟೆಲಿನಲ್ಲಿ ಕಾಯುತ್ತಿರುತ್ತೇವೆ."

ಅಘೋರ ಹುಬ್ಬುಹಾರಿಸಿ ಒಪ್ಪಿಗೆ ನೀಡಿದ. ಅನಂತರ ಬಂದ ಮೂರು ಬಸ್ಸುಗಳು ಭರ್ತಿಯಾಗಿದ್ದುವು. ಮರದಡಿಯಲ್ಲಿ ಇತರ ಪ್ರಯಾಣಿಕರೊಂದಿಗೆ ಕಾದು ಕುಳಿತ ಗೆಳೆಯರ ಹೊಟ್ಟೆ ಹಸಿವಿನಿಂದ ಘೀಳಿಡಹತ್ತಿತು. ಕಣ್ಣು ಬೇಡಬೇಡವೆಂದರೂ ಹೆಪ್ಪುಗಟ್ಟಿ ಹರಿದಿದ್ದ ನೆತ್ತರನ್ನು ಕಳ್ಳತನದಿಂದ ನಿಟ್ಟಿಸುತಿತ್ತು. ಕಂಡಕ್ಟರನು ಆದರ ಮೇಲೆ ಧೂಳನ್ನು ಚೆಲ್ಲಿ ಮುಚ್ಚಿಬಿಟ್ಟಿದ್ದರೂ ಎಲ್ಲರ ತನುಮನಗಳನ್ನು ಸೆಳೆಯುತಿತ್ತು–ಅದು.

"ನೋಡಿದೆಯಾ ? ಜೀವನ ಎಂದರೆ ಇದೇ ಕಣಪ್ಪಾ, ಘೋರ ! ಭೀಭತ್ಸ !" ಎಂದ ಅಘೋರ ಖಿನ್ನ ಮುಖದಿಂದ.

"ನಿಜ. ಅಂತ್ಯವಿಲ್ಲದ ಬಾಳೇಯಿಲ್ಲ." ಎಂದ ರತನ್ ಸ್ವಲ್ಪ ತಡೆದು ನಿಟ್ಟುಸಿರು ಬಿಟ್ಟು–"ಪಾಪ, ಅನ್ಯಾಯವಾಗಿ ಪ್ರಾಣ ನಷ್ಟ."

"ಮುಖ್ಯವಾಗಿ ಬದುಕಿಬಾಳಬೇಕಾದ ಹುಡುಗಿಗೆ ಹೀಗಾದುದು ತುಂಬ ಅನ್ಯಾಯ."

"ಪಾಪ. ಆಯುಸ್ಸು ಮುಗಿದಿತ್ತೆಂದು ತೋರುತ್ತೆ."

"ಇನ್ನು ನಮಗೆ ಕೋರ್ಟಿನಿಂದ ಸಮನ್ಸ್ ಬರುತ್ತೆ."

"ಓ ! ಇದೊಂದು ಗ್ರಹಚಾರ ಬೇರೆ !"

"ಇನ್ನು ಒಂದೊಂದೇ ಆಗಿ ನಮ್ಮ "ಡ್ಯೂಟಿ" ಆರಂಭವಾಗುತ್ತದೆ."

"ನಿಜ ; ಅಘೋರ್"

"ಜೀವನಕ್ಕೆ ಅಂಟಿಕೊಳ್ಳದಿದ್ದರೆ ಈ ಘೋರ ಸಮಸ್ಯೆಗಳಿಂದ ತಪ್ಪಿಸಿಕೊಳ್ಳುವುದು ಸಾಧ್ಯ."

"ಏನೇ ಇದ್ದರೂ ಹೃದಯವೊಂದು ಉಂಟಲ್ಲ ? ಈಗ ಆಕೆ ಸಂಬಂಧಿಗಳಲ್ಲದಿದ್ದರೂ ಅವಳಿಗಾಗಿ ಇಲ್ಲಿ ಸೇರಿದವರೆಲ್ಲಾ ಬಳ ಬಳ ಅತ್ತಿದ್ದಾರೆ."

ದೂರದಲ್ಲಿ ಬಸ್ಸೊಂದು ಬರುತ್ತಿರುವುದನ್ನು ಕಾಣುತ್ತಲೂ ಇಬ್ಬರ ಗಮನವೂ ಅತ್ತ ಹೊರಳಿತು. ಬಸ್ಸಿಗಾಗಿ ಕಾಯುತಿದ್ದ ಇತರರೂ ಸ್ಥಳಕ್ಕಾಗಿ ಕಾತರಿಸಿದ್ದರು. ಬಸ್ಸು ಬಂದೊಡನೆ ಎಲ್ಲರೂ ಒಮ್ಮೆಲೇ ಒಳಗೆ ಜಿಗಿದುದರಿಂದ ಉಸಿರು ಕಟ್ಟಿದಂತಾಯಿತು. ಕುಳಿತುಕೊಳ್ಳಲು ಸ್ಥಳ ದೊರೆಯದೆ ನಿಂತುಕೊಂಡೇ ಪ್ರಯಾಣ ಸಾಗಿಸಿದರು. ಅಘೋರ ಹಾಗೇ ಯೋಚಿಸಿದ ಕಣ್ಣು ಧೂಳು ಕವಿದ ಬಟ್ಟೆಯ ಮೇಲೆ ಹರಿದಾಡುತಿದ್ದಂತೆ ಮನಸ್ಸು ಮೂದಲಿಸಿತು. "ಜಾಲಿ ಟ್ರಿಪ್, ಜಾಲಿ ಟ್ರಿಪ್ !"

"ಅಯ್ಯೋ, ಗ್ರಹಚಾರವೇ." ಎಂದು ತನ್ನಷ್ಟಕ್ಕೆ ತಾನೇ ಹೇಳಿಕೊಂಡ. ದೇಹದ ಭಾರವನ್ನು ಹೊತ್ತ ಕಾಲುಗಳು ಬಳುಕಿದಂತಾಯಿತು. ಹಸಿದ ಹೊಟ್ಟೆ ತುತ್ತು ಕೂಳಿಗಾಗಿ ಛೀಳಿಡುತಿತ್ತು. ನೀರಡಿಕೆಯಿಂದ ಗಂಟಲೊಣಗುತ್ತಾ ಬಂದಿತು.

ಬಸ್ಸು ಒಂದೇ ಸಮನೆ ಓಡುತ್ತಿದೆ. ಅಂಕು ಡೊಂಕಿನ ಟಾರು ಬಳಿದ ದಾರಿ ಹಿಂದೆ ಹಿಂದೆ ಬೀಳುತಿದ್ದಂತೆ ರಸ್ತೆಯ ಧೂಳು ಮುಖ ಮೈಗಳನ್ನು ಆವರಿಸುತಿತ್ತು. ನಿಂತು ನಿಂತು ನೋಯುತೊಡಗಿದ ಕಾಲುಗಳನ್ನು ಬಗ್ಗಿಹಿಸುಕಿಕೊಳ್ಳುವಷ್ಟೂ ತಾವಿರಲಿಲ್ಲ. ಪಕ್ಕದಲ್ಲಿ ನಿಂತ ರತನ್‌ಮಿಶ್ರನ ಬೆನ್ನನ್ನು ತಿವಿದು ಅವನು ಇತ್ತ ತಿರುಗುತ್ತಲೂ ಪಿಸುಗುಟ್ಟಿದ-"ಕಾಲು ನೋಯುತ್ತಿವೆ ಕಣೋ !"

"ಇರಲಿ ಬಿಡು, ಅಭ್ಯಾಸ ಮಾಡಿದಂತಾಯಿತು."

ಇಬ್ಬರೂ ಮುಗುಳು ನಕ್ಕರು. ಅಷ್ಟರಲ್ಲಿ ಚಕ್ರವು ಕಲ್ಲಿನ ಮೇಲೆ ಹತ್ತಿ ಹೋದುದರಿಂದ ಬಸ್ಸು ಅಲುಗಿ ಇಬ್ಬರ ತಲೆಗಳೂ ಒಂದಕ್ಕೊಂದು ಧಡ್ಡನೆ ತಾಗಿದುವು. "ಅಪ್ಪಾ !" ಎನ್ನುತ್ತಾ ಇಬ್ಬರೂ ತಲೆಗಳನ್ನು ಉಜ್ಜಿಕೊಂಡರು. ನೋವಿನಿಂದ ಮನಸ್ಸು ನರಳಿದರೂ ತಮಾಷೆಯಿಂದ ಮುಖಬಿಂಬ ಹೂವಿನಂತೆ ಅರಳಿತು.

ಇತರ ಪಯಣಿಗರು ಮುಸು ಮುಸು ನಕ್ಕರು. ಎಕ್ಸ್‌ಪ್ರೆಸ್ ಬಸ್ಸಾದುದರಿಂದ ದಾರಿಯಲ್ಲಿ ಒಂದು ಗುಟುಕು ನೀರು ಕುಡಿಯಲೂ ನಿಲ್ಲಲಿಲ್ಲ.

ಬಸ್ಸು ಮೈಸೂರು ಮುಟ್ಟಿದ್ದೇ ತಡ ಇಬ್ಬರೂ ಇಳಿದು ಓಡಿದರು. ಹೊತ್ತು ನಾಲ್ಕರ ಅಂಚನ್ನು ಆಗಲೇ ದಾಟಿತ್ತು. ನೆತ್ತಿಯ ಮೇಲೆ ಸುಡು ಬಿಸಿಲು. ಹೊಟ್ಟೆಯಲ್ಲಿ ತಳಮಳ.

ಹೋಟೆಲಿನಲ್ಲಿ ಮದನ್ ಜಾನಕೀರಾಂ ಕಾಯುತಿದ್ದರು. ಸುಧೀರ್ ನಿದ್ದೆ ಹೋಗಿದ್ದ. ಅವನನ್ನು ನೋಡುತ್ತಲೂ ಅಘೋರನಿಗೆ ಹೊಟ್ಟೆಯುರಿಯಾಯಿತು. ಒಡನೆ ಕೇಳಿದ "ನಮಗೇನಾದರೂ ಊಟ ಇಟ್ಟಿದ್ದೀರೋ ಹೇಗೆ ?"

"ಮೊದಲಿಷ್ಟು ಮೈ ತೊಳೆದುಕೊ."

"ಅದು ಸಾಧ್ಯವೇಯಿಲ್ಲ ; ಹೊಟ್ಟೆ ತಾಳ ಹಾಕುತ್ತಿದೆ." ಹೊಟ್ಟೆಯ ಮೇಲೆ ಕೈಯಾಡಿಸುತ್ತಾ ಅಘೋರ ಅಂದ.

"ಎಲ್ಲಾದರೂ ಉಂಟೇನಯ್ಯಾ, ನೀನಿರುವ ಸ್ಥಿತಿಯಲ್ಲಿ ಊಟ ಮಾಡಿದರೆ ನೂರೆಂಟು ರೋಗಗಳು ಹುಟ್ಟಿಕೊಂಡಾವು !"

"ನಿನ್ನ ಕಾಟ ಬೇರೆ." ಎನ್ನುತ್ತಾ ಪೆಟ್ಟಿಗೆಯಿಂದ ಸೋಪು ಟವಲ್ಲು ತೆಗೆಯ ತೊಡಗಿದ ಅಘೋರನಿಗೆ ರತನ್‌ಮಿಶ್ರ ನಕ್ಕು ನುಡಿದ "ಒಂದುದಿನ ಊಟವಿಲ್ಲದಿದ್ದರೆ ಸಾಯುವುದಿಲ್ಲ ಕಣೊ !"

"ಓ! ಪರವಾಯಿಲ್ಲ ನೀನು. ನಾನಾಗಲೇ ಅರ್ಧ ಸತ್ತು ಹೋಗಿದ್ದೇನೆ!" ಎನ್ನುತ್ತಾ ಸ್ನಾನದ ಮನೆಗೆ ಹೊರಟ. ತನ್ನ ಬಟ್ಟೆಗಳನ್ನು ತಡುಕುತಿದ್ದ ರತನ್‌ಮಿಶ್ರ ನಸುನಕ್ಕು "ಮದನ್, ಬೆಳಗಿನಿಂದಲೂ ಅವನ ಕಷ್ಟ ಹೇಳತೀರದು. ಸಹಿಸಲಾರ ; ಅನುಭವಿಸಲಾರ."

ಇಬ್ಬರೂ ನುಡಿ ಕೇಳಿ ನಕ್ಕರು. ರತನ್‌ಮಿಶ್ರ ಸ್ನಾನ ಮುಗಿಸಿ ಬರುವಷ್ಟರಲ್ಲಿ ಸುಧೀರ್ ಎದ್ದು ಕುಳಿತುಕೊಂಡಿದ್ದ. ರತನ್‌ಮಿಶ್ರ ಅವನೆಡೆಗೆ ದಿಟ್ಟಿ ಬೀರಿ—"ನಮ್ಮ ಮೈ ನಗ್ಗುನುಗ್ಗಾಗಿ ಪ್ರಾಣ ಹೋಗುತ್ತಿದೆ ನಮಗೆ ! ನೀನು ಸುಖವಾಗಿ ನಿದ್ದೆ ಹೊಡೆಯುತಿದ್ದೀಯೋ, ಪುಣ್ಯ ಪುರುಷ !"

"ಓ ! ನೀನು ಓಳಿದು ಕೊಂಡಿದ್ದಿ ನಾನೊಬ್ಬನೇ ನಿದ್ದೆ ಮಾಡಿದ್ದೇನೆ ಅಂತ, ಅಲ್ಲವೇ ? ನಾನು ಮಲಗಿದ್ದು ಈಗ. ಇವರಿಬ್ಬರೂ ಬಂದವರೇ ಸೊಗಸಾದ ನಿದ್ದೆ ಹೊಡೆದು ಈಗ ಮಾರ್ಜಾಲ ಸಂನ್ಯಾಸಿಯ ವೇಷ ತಳೆದಿದ್ದಾರೆ ! ನಾನು ನಿಮಗಾಗಿ ಇದುವರೆಗೂ ಕಾದು ನೋಡಿ ಈಗ ಮಲಗಿದೆ."

ಮಾತು ಮುಗಿಯುವುದರೊಳಗಾಗಿ ಅಘೋರ ಬಂದ. ವಿಷಯ ಅವನಿಗೂ ಮುಟ್ಟಿತು. ಎಲ್ಲರೂ ನಗತೊಡಗಿದರು.

ಊಟ ಮುಗಿಸಿದವನೇ ಅಘೋರ ಹಾಸಿಗೆ ಸೇರಿದ. ರತನ್‌ಮಿಶ್ರ ಇತರರೊಂದಿಗೆ ಹರಟೆಯಲ್ಲಿ ಪಾಲ್ಗೊಂಡ. ಹೊತ್ತು ಆರರ ಅಂಚನ್ನು ದಾಟಿದರೂ ಅಘೋರ ಹಾಸಿಗೆ ಬಿಟ್ಟೇಳಲಿಲ್ಲ. ಎಲ್ಲರಿಗೂ ಹೊರಗಡೆ ಸುತ್ತಾಡಿಕೊಂಡು ಬರಬೇಕೆಂಬ ಇಚ್ಛೆಯಿದ್ದರೂ ಏಳಿಸಲು ಮನಸ್ಸಾಗದೆ ಬಿಟ್ಟಿದ್ದರು. ರತನ್‌ಮಿಶ್ರನಿಗೆ ಇನ್ನು ಸುಮ್ಮನಿರಲಾಗಲಿಲ್ಲ. ಕರವಸ್ತ್ರವನ್ನು ನೀರಿನಲ್ಲದ್ದಿ ಮುಖದ ಮೇಲೆಹಾಕಿ ಜೋರಾಗಿ ನಗತೊಡಗಿದ. ಅಘೋರ ತಟ್ಟನೆ ಕಣ್ತೆರೆದು ಕರವಸ್ತ್ರವನ್ನು ಅತ್ತ ಬಿಸುಟು ಗಂಟೆ ನೋಡಿಕೊಂಡು ಜಗಿದದ್ದು-"ಛೀ! ಆಗಲೇ ಏಳಿಸಬಾರದಿತ್ತೇ? ಗಂಟೆ ಆರೂವರೆಯಾಗಿದೆ!"

"ಚಹ ತರಿಸಲೇ?"

"ಅದಂತೂ ಬೇಕೇ ಬೇಕು."

ಅಘೋರ ಮುಖ ಮಜ್ಜನ ಮಾಡಿ ಬರುವುದರೊಳಗಾಗಿ ಬಿಸಿ ಚಹ ಅಣಿಯಾಗಿ ಬಂತು. ಚಹ ಹೀರಿ ಲಗುಬಗನೆ ಬಟ್ಟೆ ಹಾಕಿಕೊಂಡು ಗೆಳೆಯರೊಂದಿಗೆ ಹೊರಬಿದ್ದ. ಜಗತ್ತು ಮಧುರಮಯವಾಗಿ ತೋರಿತು.

"ನೀನು ಮೊದಲೇ ಎದ್ದಿದ್ದರೆ ಒಂದು ಪಿಕ್ಚರಾದರೂ ನೋಡಬಹುದಿತ್ತು.

"ಅಂಕಲ್ ಜರ್ಾ! ರಾತ್ರಿ ಹೋಗೋಣವೇ?" ಎಂದ ಮದನನ ದನಿಯಲ್ಲಿ ಆಸಕ್ತಿಯಿತ್ತು. ಒಪ್ಪಿಗೆಯನ್ನು ನಿರೀಕ್ಷಿಸಿದ.

"ರಾತ್ರಿ ಹೋದರೆ ಪುನಃ ಬೆಳಗ್ಗೆ ಮುಂಚೆ ಹೊರಡಬೇಕು. ನನ್ನಿಂದಾಗದು." ದೊಡ್ಡದಾಗಿ ಆಕಳಿಸಿ ಮೈ ಕೈ ಮುರಿಯುತ್ತಾ ಅಘೋರ ಆಲಸ್ಯದಿಂದ ಅಂದ "ಅಷ್ಟು ಪರಿಶ್ರಮವೇಕೆ? ಇದು ಜಾಲಿ ಟ್ರಿಪ್."

ಸಾಲಾಗಿ ಹೆಜ್ಜೆ ಹಾಕಿದ ಹುಡುಗರು ಕ್ರಾಫರ್ಡ್ ಹಾಲಿನ ಬಳಿಗೆ ಹೋದರು. ಕತ್ತಲೆಯ ತೆರೆ ಮುಸುಗುತಿದ್ದಂತೆ ದೀಪಗಳು ಪ್ರಕಾಶಮಾನವಾಗಿ ಬೆಳಗತೊಡಗಿದುವು. ಎಲ್ಲರೂ ಮೆಟ್ಟಲಿನ ಮೇಲೆ ಸಾಲಾಗಿ ಕುಳಿತುಕೊಂಡರು. ತಣ್ಣನೆಯ ತಿಳಿಗಾಳಿ ಹಿತಕರವಾಗಿ ಬೀಸಿತು. ಎದುರುಗಾಳಿಗೆ ಮುಖ ನೀಡಿ ತಂಗಾಳಿಯನ್ನು ಆಸ್ವಾದಿಸುತ್ತಾ ಅಘೋರ ಅಂದ "ಆ ತರುಣಿ ಇಷ್ಟರಲ್ಲಿ ಪರಲೋಕವಾಸಿಯಾಗಿರಬಹುದು."

ಒಮ್ಮೆಲೇ ಎಲ್ಲರೂ ಅಂದರು "ಪಾಪ! ತುಂಬ ಅನ್ಯಾಯ."

ಅಧ್ಯಾಯ

೧೧

ಊಟಿಯ ಮನ ಸೆಳೆವ ಸುಂದರ ಉದ್ಯಾನದಲ್ಲಿ ಎಲ್ಲರೂ ತಾನೇತಾನಾಗಿ ಆಡ್ದಾಡುತಿದ್ದಾರೆ. ಮನ ಬಂದಂತೆ ಅತ್ತಿಂದಿತ್ತ ಜಿಗಿದಾಡಿ ನಕ್ಕು ನಲಿದು ಹೂಗಳ ಕಂಪನ್ನು ಹೀರಿ ಹಸುರು ಹುಲ್ಲಿನ ಮೆತ್ತೆಯ ಮೇಲೆ ಎಳೆಯ ಅಣು ಗರಂತೆ ಹೊರಳಾಡಿದಾಗ ಎಲ್ಲರ ಮುಖದಲ್ಲೂ ನಗುವೇ ನಗು. ಇಳಿಜಾರಿನ ಸ್ಥಳಗಳಲ್ಲಿ ಹಸುರು ಮೆತ್ತೆಯ ಮೇಲೆ ಚೆಂಡಿನಂತೆ ಉರುಳುವ ಸಾಹಸವನ್ನು ಕೈಗೊಂಡಾಗ ಅಘೋರ ಅಪ್ರತಿಮ ಉತ್ಸಾಹವನ್ನೂ ತೋರಿದ !

ಚೆಲ್ಲಾಟ,ಚಕ್ಕಂದ, ಅತ್ತಿತ್ತ ಅಲೆದಾಟಗಳಲ್ಲಿ ಹೊತ್ತು ನಿರಾತಂಕವಾಗಿ ಉರುಳಿತು. ಬೆಳಗಿನ ಹೊಂಬಿಸಿಲಿಗೆ ಮೈಗೊಟ್ಟು ಬೆಟ್ಟದ ಕಿಬ್ಬದಿಯನ್ನು ಏರುತ್ತಾ ಅಘೋರ ಹುಬ್ಬೇರಿಸಿ–"ಎಲ್ಲರೂ ಕುದುರೆ ಸವಾರಿ ಮಾಡೋಣವೇ?"

ಎಲ್ಲರೂ ಒಪ್ಪಿಕೊಂಡರು. ಸಾಲಾಗಿ ಐದು ಕುದುರೆಗಳು ನಿಂತುವು. ನೋಡಿದರೆ ಬಡಕಲಾದ ಅವು ಕತ್ತೆಗಿಂತ ಸ್ವಲ್ಪ ದೊಡ್ಡವು ! ನೋಡು ನೋಡುತ್ತಾ "ಇವು ನಮ್ಮ ಭಾರವನ್ನು ಹೊರುವುದುಂಟೇ?" ನಕ್ಕು ಉದ್ಗಾರ ತೆಗೆದರು ಎಲ್ಲಾ. ಆನಂದ ಮೋದದ ಪ್ರತೀಕವಾಗಿ.

ಕುದುರೆಯಾತ ತಲೆಯಲ್ಲಾಡಿಸುತ್ತಾ–"ಓಹೋ ! ಹೊರದೇನು ? ನೀವೊಮ್ಮೆ ಹತ್ತಿ ನೋಡಿ ಸ್ವಾಮಿ ! ಎಂಥೆಂಥಹವರೆಲ್ಲಾ ಇವುಗಳ ಮೇಲೆ ಸವಾರಿ ಮಾಡಿದ್ದಾರೆ. ನಿಮ್ಮದೇನು ?"

"ಪರವಾಯಿಲ್ಲ ; ಹತ್ತಿ ಬಿಡಿರಿ !" ನಗುತ್ತಾ ಅಘೋರ ಗೆಳೆಯರಿಗೆ ಪ್ರೋತ್ಸಾಹ ನೀಡಿದ.

"ಬಿದ್ದರೂ ಪರವಾಗಿಲ್ಲ !" ಹಸುರು ಹುಲ್ಲಿನ ಮೆತ್ತೆ ಇದೆಯಲ್ಲಾ !" ಎಂದ ಸುಧೀರ್ ಕುದುರೆಯನ್ನು ಹತ್ತಲು ತಾನೇ ಮುಂದಾದ. ಹತ್ತುವಾ ಗೊಮ್ಮೆ ಕುದುರೆ ಬಳುಕಿತು. ಕುದುರೆಯ ಆಣುಗ ಅದನ್ನು ಹೊಡರಿ ಬೀಳ ದಂತೆ ಹಿಡಿದುಕೊಂಡು ಹೇಳಿದ "ನೀವುಗಟ್ಟಿಯಾಗಿ ಹಿಡಿದುಕೊಳ್ಳಿ ಸ್ವಾಮಿ!"

ಎಲ್ಲರೂ ಗೊಳ್ಳನೆ ನಕ್ಕರು.

ಸುಧೀರ್ ಹಿಡಿದುಕೊಂಡಿದ್ದರೂ ಕುದುರೆ ನೇರಕ್ಕೆ ಸರಿಯಾಗಿ ನಿಲ್ಲದೆ ಅತ್ತಿತ್ತ ಜಿಗಿದಾಡಿತು. ಹುಡುಗ ಏರಿದ ದನಿಯಲ್ಲಿ ಹೇಳಿದ "ನೀವು ಎಂಥಾಹ ವರು ಸ್ವಾಮಿ? ಅದನ್ನು ಸರಿಯಾಗಿ ಹಿಡಿದುಕೊಂಡೇ ಇಲ್ಲ !"

ಹಿಂದಿಲಿಂದ ಗೆಳೆಯರೆಲ್ಲಾ "ಹೋ!" ಎಂದು ನಕ್ಕರು. ಸುಧೀರನಿಗೆ ಚಕ್ಕಳಗುಳಿ ಇಟ್ಟಂತಾಯಿತು. ಗಟ್ಟಿಯಾಗಿ ನಗುತ್ತಾ ಕುದುರೆಯಿಂದ ಜಿಗಿದು ಬಿಟ್ಟ, ಕುದುರೆ ಬಿಟ್ಟದ್ದು ಸಾಕೆಂದು ಅಲ್ಲಿಂದ ಓಟ ಕಿತ್ತಿತು.

ಉಳಿದ ನಾಲ್ವರು ಅಣುಗರು ತಮ್ಮ ತಮ್ಮ ಕಡಿವಾಣಗಳನ್ನು ಹಿಡಿದು ನಿಂತು "ಹತ್ತಿ ಸ್ವಾಮಿ!" ಎಂದರು. ಮೊದಲನೆಯವನು ತನ್ನ ಕುದುರೆಗೆ ಬರಲಿದ್ದ ಕಾಸು ಕೈ ತಪ್ಪಿ ಹೋದುದರಿಂದ ಸಪ್ಪೆ ಮೋರೆ ಮಾಡಿ ನಿಂತ. ಅಘೋರ ಸುಧೀರನ ಕಡೆ ಹುಬ್ಬು ಹಾರಿಸಿ "ಅಧೀರ್ !" ಎನ್ನುತ್ತಾ ಕುದು ರೆಯ ಮೇಲೆ ಒಂದೇ ಬಾರಿಗೆ ಜಿಗಿದ. ಏರಿದ ಭರಕ್ಕೆ ಕುದುರೆ ತತ್ತರಿಸಿತು. ಅವನ ಹಿಂದೆ ಸುಧೀರನನ್ನುಳಿದು ಮೂವರೂ ಜಿಗಿದು ಹತ್ತಿದರು. ಜಾನಕೀ ರಾಮನ ನೀಳವಾದ ನಿಲುವಿಗೆ ಸಣ್ಣ ಕುದುರೆಯ ಎತ್ತರ ಸಾಲದಾಯಿತು. ಉದ್ದನೆಯ ಕಾಲುಗಳನ್ನು ನೆಲದ ಮಟ್ಟಕ್ಕೂ ಜೋಲು ಬಿಟ್ಟುಕೊಂಡು "ಹಹ್ಹಹ್ಹಾ!" ಎಂದು ಗಟ್ಟಿಯಾಗಿ ನಗತೊಡಗಿದ. ಎಲ್ಲರ ಕುತೂಹಲವೂ ಅತ್ತ ಹೊರಳಿತು. ಅವನ ರೀತಿಯನ್ನು ನೋಡಿ ಎಲ್ಲರೂ ನಗತೊಡಗಿದರು. ನಗುವಿನ ಉಬ್ಬರದಲ್ಲಿ ಜಾನಕೀರಾಂ ಹಿಡಿತವನ್ನು ತುಸು ಸಡಿಲಿಸಿದ ಸಮಯ ವನ್ನು ಸಾಧಿಸಿ ಕುದುರೆಯು ಅವನನ್ನು ಕೆಡವಿ ಓಡಿ ಹೋಯಿತು. ಮುಖ ಮಡಿಯಾಗಿ ಬಿದ್ದ ಅವನ ಹಣೆಗೆ ತುಸು ಪೆಟ್ಟು ತಾಗಿತು. ಕುದುರೆಯಿಂದ ಜಿಗಿದು ಎಲ್ಲರೂ ಹೊಟ್ಟೆ ಹುಣ್ಣಾಗುವಂತೆ ನಕ್ಕರು. ಸವಾರಿ ಮಾಡದಿದ್ದರೂ ಹುಡುಗರ ಕೈಗೆ ರೂಪಾಯಿಯೊಂದನ್ನಿಟ್ಟು ಅಘೋರ ಅವರನ್ನು ಕಳು ಹಿಸಿದ. ಜಾನಕೀರಾಮನ ಸಾಹಸಕ್ಕೆ ಅಭಿನಂದನೆಗಳ ಸುರಿಮಳೆಗಳಾದುವು !

"ಹೇಗಿದ್ದರೂ ನೀವು ಅವನನ್ನು ಅಭಿನಂದಿಸಲೇಬೇಕಾಗಿತ್ತು !" ಎಂದ ಅಘೋರ.

"ಏಕೆ?" ಮದನ್ ಹುಬ್ಬೆತ್ತಿ ಕೇಳಿದ.

ಮದನನಿಗೆ ಉತ್ತರಿಸುವ ಮೊದಲು ಅಘೋರ ಜಾನಕೀರಾಮನಿಗೆಂದ "ಈಗೊಂದು ವೇಳೆ ನಿನ್ನ ಅರಗಿಣಿ ಇಲ್ಲೇ ಇದ್ದಿದ್ದರೆ ಒಂದೇ ಕಣ್ಣಿನಲ್ಲಿ ಕಂಬನಿ ಸುರಿಸುತಿದ್ದರೇನೋ !"

ಒಮ್ಮೆಲೇ ಕಿಲಕಿಲ ನಗುವಿನಲೆಯೆದ್ದಿತು. ರತನ್‌ಮಿಶ್ರ ಕುತೂಹಲ ದಿಂದ ಕೇಳಿದ.

"ಒಂದೇ ಕಣ್ಣಿನಲ್ಲಿ ಕಂಬನಿಗರೆಯುವ ಅರಗಿಣಿ ಯಾರು ?"

ಎಲ್ಲರೂ ಉತ್ತರಕ್ಕಾಗಿ ಕಿವಿಗಳನ್ನು ನಿಮಿರಿಸಿದರು.

"ಈ ವಿಷಯ ಮದನನಿಗೂ ಗೊತ್ತಿಲ್ಲ ಅಂದರೆ ಆಶ್ಚರ್ಯ!" ಅಘೋರ ಮದನನ ಕಡೆ ಹುಬ್ಬು ಹಾರಿಸಿದ. ಕಣ್ಣುಗಳಲ್ಲಿ ತುಂಟತನ ನಲಿಯಿತು.

"ನಿಜವಾಗಿಯೂ ನನಗೆ ಏನೂ ತಿಳಿಯದು."

"ಅಂಕಲ್ ಜಾರ್ಜ್‌ನಿಗೆ ಸೊಗಸಾದ ಹುಡುಗಿಯೊಂದಿಗೆ ಮದುವೆ ನಿಶ್ಚಯವಾಗಿದೆ !"

"ನಿಜವೇ ಜಾರ್ಜ್ ?" ಎಲ್ಲರೂ ಒಮ್ಮೆಲೇ ಕೇಳಿದರು.

ಜಾನಕೀರಾಮನ ಮುಖ ಹೂವಿನಂತೆ ಅರಳಿತು. ಮಾತಿಲ್ಲದೆ ನಗುತ್ತಾ ನಿಂತ.

"ಏನಪ್ಪಾ, ನಮಗೆ ಸುದ್ದಿಯೇ ಇಲ್ಲ?"

"ಇನ್ನೂ ಶಾಸ್ತ್ರೋಕ್ತವಾಗಿ ನಿಶ್ಚಯವಾಗಿಲ್ಲ."

"ಅಲ್ಲದಿದ್ದರೆ ಹೋಗಲಿ. ಮನಸ್ಸೊಪ್ಪಿದೆ ತಾನೆ?"

"ಹೌದು."

"ಮತ್ತೇಕೆ ಮುಚ್ಚುಮರೆ ? ಹುಡುಗಿಯನ್ನೇಕೆ ತೋರಿಸಲಿಲ್ಲ."

"ಅವನಿಗೆ ಭಯ !" ಅಘೋರ ಹಲ್ಕಿರಿದ.

"ಏಕೆ !" ಎಲ್ಲರ ಹುಬ್ಬುಗಳೂ ನಿಮಿರಿ ನಿಂತುವು.

"ಹುಡುಗಿ ಅಪ್ಸರೆ ! ನೀವ್ಯಾರಾದರೂ ಹಾರಿಸಿ ಬಿಟ್ಟರೆ ?"

"ಘೋರ್ ! ಎಂಥ ಭಂಡ ಮಾತಾಡುತಿದ್ದಿ ?"

"ಇರಲಿ, ಮತ್ತೇಕೆ ಅವನು ತೋರಿಸಲಿಲ್ಲ ?"

"ಓದು ಮುಗಿಯಿತು. ಇನ್ನು ಹುಡುಗಿಯ ಬೇಟೆ !"

ಕುದುರೆಗಳನ್ನು ಹಿಡಿದುಕೊಂಡಿದ್ದ ಅಣುಗರು ಹೋಗದೆ ಇನ್ನೂ ನಿಂತೇ ಇದ್ದುದನ್ನು ನೋಡಿ ಅವರ ಕೈಗೆ ಕಾಸನ್ನಿತ್ತು "ಬೇಡ, ಹೋಗಪ್ಪಾ." ಎಂದ ರತನ್. ಅವರು ಕುದುರೆಗಳನ್ನು ಹಿಡಿದುಕೊಂಡು ತಮ್ಮ ಹಾದಿ ಹಿಡಿದರು. ಅವರನ್ನೇ ನೆಟ್ಟ ದಿಟ್ಟಿಯಿಂದ ನೋಡುತ್ತಾ ಅಘೋರ

"ನಾನೇನೋ ಅಕಸ್ಮಿಕವಾಗಿ ಶ್ರೀಮತಿ ಜರ್ಾ ನೋಡಿದೆ."

"ನಿನಗೂ ಈಗಾಗಲೇ ಹೆಣ್ಣು ಗೊತ್ತಾಗಿರಬಹುದು. ಯಾರಿಗೆ ಗೊತ್ತು ?" ಜಾನಕೀರಾಂ ಸವಾಲು ಹಾಕಿದ.

"ಜರ್ಾ ! ನಮಗೆ ಗೊತ್ತಾದರೆ ನಿಮ್ಮೆಲ್ಲರಿಗೂ ಮೊದಲೇ ತೋರಿಸುತ್ತೇವೆ !"

"ಅದು ಹೇಗಾದೀತು ? ಅವಳು ಒಪ್ಪದಿದ್ದರೆ ?"

"ಒಪ್ಪುವುದಿಲ್ಲ ಎಂದರೇನು ? ನಾವು ಹೇಳಿದಂತೆ ಕೇಳದಿದ್ದರೆ ಮದುವೆಯ ಬಂಧನವೇಕೆ ?" ಎಂದ ಅಘೋರ.

"ಒಳ್ಳೆ ಚೆನ್ನಾಗಿದೆ ! ಅವರಿಗೆ ಅವರ ಅಭಿಪ್ರಾಯ ಗೌರವವಿಲ್ಲವೇ ?"

"ನಮಗೂ ನಮ್ಮ ಅಭಿಪ್ರಾಯ ಗೌರವ ಉಂಟು!" ತಟ್ಟನೆ ಅಘೋರನ ಉತ್ತರ ಹೊರಬಿತ್ತು.

"ಈ ದುರಭಿಪ್ರಾಯವೇ ನಿನ್ನನ್ನು ಅಸುಖಿಯನ್ನಾಗಿ ಮಾಡಿದರೂ ಮಾಡಬಹುದು !" ಎಂದ ಜಾನಕೀರಾಂ.

ಎಲ್ಲರ ಮುಖದಲ್ಲೂ ನಗೆಮಲ್ಲಿಗೆಯರಳಿತು. ಹೊತ್ತು ಏರತೊಡಗಿದಂತೆ ಬಿಸಿಲು ಚುರುಚುರು ಎನ್ನತೊಡಗಿತು. ಅಲ್ಲಲ್ಲಿ ಎಲೆ ಮನೆಗಳಂತೆ ಬೆಳೆದ ಮರಗಳು ಮನಸೆಳೆದವು. ಎಲ್ಲರೂ ಹೋಗಿ ಅಲ್ಲಿ ವಿಶ್ರಮಿಸಿಕೊಂಡು ಪ್ರಕೃತಿ ಐಸಿರಿಯಲ್ಲಿ ಮುಳುಗಿದರು. ಕಣ್ಣೋಟ ಹರಿಯುವವರೆಗೂ ಅಲೆಯಲೆಯಂತೆ ಹಬ್ಬಿದ ಮಲೆಗಳ ಸಾಲು ಹಸುರನ್ನು ಹೊದ್ದು ಮೈ ಸಿಂಗರಿಸಿಕೊಂಡಿದ್ದುವು. ಬೆಟ್ಟಗಳ ಮೇಲೆ ಮುಸುಕಿದ ಮಂಜಿನ ತೆರೆಯು ಬಾನಂಚಿನ ಬೆಳ್ಮುಗಿಲ ಎತ್ತರಕ್ಕೆ ಏರಿ ಹರಡಿತ್ತು. ಎಲ್ಲೆಲ್ಲೂ ಕಂಗೊಳಿಸುವ ಸುಂದರ ನೋಟ, ಊರು–ಮನೆ ಅಂಕುಡೊಂಕಿನ ಕರಿಯಹಾದಿ ಕೆರೆ–ಝರಿಗಳು ತನುಮನಗಳಿಗೆ ತಂಪನ್ನೂಡಿಸಿದುವು. ಪ್ರಕೃತಿ ಐಸಿರಿಯ ಪೀಯೂಷಪಾನಗೈದು ಮತ್ತರಾದ ಅವರು ಆಕೆಯ ಮಡಿಲಲ್ಲಿನ ಶಿಶುಗಳಂತೆ ತಮ್ಮನ್ನೇ ತಾವು ಮರೆತರು.

ಮದನ್ ಸುಧೀರ್ ಇಬ್ಬರೂ ತಮ್ಮ ಕೈಗಳನ್ನು ಬಳ್ಳಿಯಂತೆ ಹೆಣೆದುಕೊಂಡು ಬಡಗಲ ದಿಕ್ಕಿಗೆ ಬೆನ್ನು ಮಾಡಿ ಕುಳಿತುಕೊಂಡಿದ್ದರು. ಮೂಡಲ ದಿಕ್ಕಿಗೆದುರಾಗಿ ಸುಧೀರ್ ಅಘೋರ ಜಾನಕೀರಾಂ ಕುಳಿತರು. ಮರಗಳ

ದಟ್ಟವಾದ ಎಲೆಗಳ ಮಧ್ಯೆ ಕೋಲು ಕೋಲಾಗಿ ತೂರಿ ಬಂದ ಬಿಸಿಲು ಉಂಗುರ ಉಂಗುರವಾಗಿ ನೆರಳಿನ ನೆಲೆಯಲ್ಲಿ ಬೆಳಕಿನ ಬಲೆಯನ್ನು ನೆಯ್ದಿತ್ತು. ಮೇಲಿನಿಂದ ಬಿಸಿಲ್ಕೋಲೊಂದು ನೇರವಾಗಿ ಮದನನ ಮುಖದ ಮೇಲೆ ಬಿದ್ದಿತ್ತು. ಅವನು ಮುಖವೆತ್ತಿ ಅದು ತೂರಿ ಬರುತಿದ್ದ ನೆಲೆಯನ್ನೇ ನಿಟ್ಟಿಸಿ ನೋಡುತಿದ್ದ. ಅವನ ಬೆಳ್ದಾವರೆಯಂತಹ ಸುಂದರ ಮುಖ ಬಿಸಿಲ ಹೊಳಪಿನಿಂದ ಇನ್ನಷ್ಟು ಕಳೆಗೂಡಿತ್ತು. ಕತ್ತಲೆಯ ನೆಲೆಯಲ್ಲಿ ಟಾರ್ಚು ಹಾಕಿದಂತೆ ತೋರುತಿದ್ದ ಅವನ ಮುಖದ ಮೇಲಿನ ವರ್ತುಲಾಕಾರದ ಬಿಸಿಲ ಮುದ್ರೆ ಎಲ್ಲರ ಗಮನವನ್ನೂ ಸೆಳೆಯಿತು.

ರತನ್ ನಗುತ್ತಾ ಅಂದ "ಮದನ್ ನೀನೇನಾದರೂ ಹೆಣ್ಣಾಗಿದ್ದರೆ..." ಅವನ ಮಾತು ಮುಗಿಯಗೊಡಿಸದೆ ಅಘೋರ್ "ಖಂಡಿತಾ ನಾನೇ ಮದುವೆಯಾಗುತಿದ್ದೆ !"

"ಶ್ಯ ! ರಾಮ, ರಾಮ ! ನಿನ್ನ ಮದುವೆಯಾಗುವುದೇ ಸರಿ !" ಮದನನ ಮಾತು ಹೊರಬಿದ್ದರೂ ನಗೆಯ ಗುಲ್ಲಿನಲ್ಲಿ ಅದು ಕೇಳಿ ಬರಲಿಲ್ಲ.

"ಮದನ್ ಹುಡುಗಿಯಾಗಿದ್ದರೆ ನಿಮಗೆಲ್ಲಿ ಚಾನ್ಸ್ ? ಇಲ್ಲಿನೋಡು !" ಎನ್ನುತ್ತಾ ಹಣೆದುಕೊಂಡಿದ್ದ ಕೈಯನ್ನು ಇನ್ನಷ್ಟು ಬಿಗಿಗೊಳಿಸಿದ ಸುಧೀರ್.

"ಓ ! ಅದೆಲ್ಲಾ ಬಿಡು ! ನಿನ್ನನ್ನು ಇತ್ತ ಸುಳಿಯಗೊಡಿಸುತ್ತಿರಲಿಲ್ಲ."

ಎಂದ ಜಾನಕೀರಾಂ ಕೈಯೆತ್ತಿ. ಅಘೋರ ತಮಾಷೆಯ ದನಿಯಲ್ಲಿ "ಓಹೋ ! ನನ್ನನ್ನು ಎದುರಿಸಿ ಕೈ ಹಿಡಿಯುವ ಗಂಡು ನಿಮ್ಮಲ್ಲಿ ಯಾರೂ ಇರಲಿಲ್ಲ ಬಿಡು !" ಅನಂತರ ಮದನನ ಕಡೆ ತಿರುಗಿ ವಿಜಯದ ಧಾಟಿಯಲ್ಲಿ ಕೇಳಿದ–"ನಿಜವಾಗಿಯೂ ಹೇಳು ಮದನ್ ! ನಮ್ಮಲ್ಲಿ ನೀನು ಯಾರನ್ನು ಮೆಚ್ಚಿಕೊಳ್ಳುತಿದ್ದೆ ?"

ಹುಡುಗರು ಮನಸಾರೆ ನಕ್ಕರು. ನಗುವಿನ ಆವೇಗ ಇಳಿಯುತ್ತಲೂ "ನಾನು ಹುಡುಗಿಯಾಗಿದ್ದಿದ್ದರೆ ನಿಮ್ಮನ್ನೆಲ್ಲಾ ಕೋಡಂಗಿಯಂತೆ ಆಟ ಆಡಿಸಿ ಬೇರೆ ಯಾರನ್ನಾದರೂ ಕೈ ಹಿಡಿಯುತಿದ್ದೆ !" ಒಡನೆ ಹೆಮ್ಮೆಯ ಧಾಟಿಯಲ್ಲಿ ಮದನನ ನುಡಿ ಹೊರಬಿತ್ತು.

"ಅನಂತರ ಅವನಿಗೂ ನೀರು ಕುಡಿಸಿ ಬಿಡುತಿದ್ದೆ ಅನ್ನು !" ಎಂದ ಅಘೋರ.

ಪುನಃ ನಗುವಿನಲೆ ಉಕ್ಕಿಹರಿಯಿತು. ಗಡಿಯಾರದ ಕಡೆ ದೃಷ್ಟಿ ಹೊರಳಿಸಿದ ಮದನ್. ಹೊತ್ತು ಒಂದರ ಅಂಚನ್ನು ದಾಟುವುದರಲ್ಲಿತ್ತು. ನೋಡಿ "ಓ! ಒಂದು ಗಂಟೆಯಾಗಿದೆ !" ಎಂದ ಮದನ್. ಎಲ್ಲರೂ ಗಡಿಯಾರ ನೋಡಿ ಧಿಗ್ಗನೆದ್ದು ನಿಂತರು. ಬಿಡಾರಕ್ಕೆ ಮೂರು ಮೈಲಿಯ ಮೇಲಾಗುತ್ತೆ. ಹೊತ್ತು ಮೀರಿ ಹೋದರೆ ಊಟಕ್ಕೆ ಸೊನ್ನೆ ! ಎಲ್ಲರೂ ಮುದುರಿದ್ದ ಬಟ್ಟೆಯನ್ನು ಕೊಡವಿಕೊಂಡು ಮಾರುಗಾಲು ಹಾಕುತ್ತಾ ಬಿಡಾರದ ಹಾದಿಯನ್ನು ತುಳಿದರು. ನಡುನೆತ್ತಿಯ ಮೇಲೆ ಸೂರ್ಯ ಉರಿಯುತಿದ್ದ, ಬಿಸಿಲು ಚರುಚರು ಎನ್ನುತಿತ್ತು.

ಬಿಡಾರವನ್ನು ಮುಟ್ಟಿದಾಗ ಹೊತ್ತು ಮೀರಿದ್ದರೂ ಅದೃಷ್ಟವಶಾತ್ ಊಟ ಮುಗಿದಿರಲಿಲ್ಲ. ಹಸಿವಿನಿಂದ ಹುಡುಗರು ರುಚಿ–ಅರುಚಿಯನ್ನೂ ಗಮನಿಸದೆ ಗವಗವನೆ ಉಂಡು ಮುಗಿಸಿದರು.ಅಂಗಡಿಯಲ್ಲಿ ಕೊಂಡುಕೊಂಡಿದ್ದ ಹಣ್ಣುಗಳನ್ನು ಮೆಲ್ಲುತ್ತಾ ವೈದ್ಯಕೀಯ ಪರಿಷತ್ತಿಗೆ ಅಣಿಯಾಗುವವರಂತೆ ಮೇಜಿನ ಸುತ್ತುವರಿದು ಐವರೂ ಕುಳಿತರು. ಕೊಠಡಿ ಬೀದಿಗೆದುರಾಗಿತ್ತು. ಕಿಟಕಿಯನ್ನು ವಿಶಾಲವಾಗಿ ತೆರೆದು ತಿಳಿಗಾಳಿಯನ್ನು ಬರಮಾಡಿಕೊಳ್ಳಲು ಎದ್ದ ಅಘೋರ ಕಿಟಕಿಯನ್ನು ತೆರೆಯದೆ ಹಿಂದಿರುಗಿ ಬಂದು ಕುಳಿತುಕೊಂಡು ಸಿಡುಕಿನಿಂದ ಅಂದ "ಥೂ ! ಅದೇ ಭಿಕ್ಷುಕ ಇಂದೂ ಬಂದಿದ್ದಾನೆ !"

"ಅದಕ್ಕೇಕೆ ಸಿಡುಕು ? ಅವನಿಗೊಂದಾಣೆ ಬಿಸಾಡಿದರೆ ಹೋಗುತ್ತಾನೆ." ಎಂದ ಮದನ್ ಕಿಟಕಿಯಿಂದ ಕಾಸು ಹಾಕಿ ಹೇಳಿದ "ಏನು? ದಿನವೂ ಬರುವುದೇ ? ಪುನಃ ಬಂದರೆ ಓಡಿಸಿ ಬಿಡುವೆ !" ದನಿಯಲ್ಲಿ ಗಡುಸಿತ್ತು.

ಭಿಕ್ಷುಕ ಕುಂಟುಗಾಲು ಹಾಕುವುದನ್ನು ನೋಡಿ ಏನೆನ್ನಿಸಿತೋ, ತುಸು ಯೋಚಿಸಿ "ಬಾರಯ್ಯಾ, ಇಲ್ಲಿ." ಎಂದ. ಅವನು ಹಿಂದಿರುಗಿ ಬರುತ್ತಲೂ ಮದನ್ ವರಾಂಡಕ್ಕೆ ಹೋಗಿ ಅವನನ್ನು ಬರಮಾಡಿಕೊಂಡು ಕಾಲನ್ನು ಪರೀಕ್ಷಿಸಿದ. ಮಂಡಿಯ ಚಿಪ್ಪು ಜಾರಿದಂತೆ ತೋರಿತು. ಮದನ್ ಮರುಕದಿಂದ ಕೇಳಿದ "ಇದು ಹೇಗೆ ಹೀಗಾಯಿತು. ?"

"ಜಾರಿ ಬಿದ್ದಾಗ ಪೆಟ್ಟು ತಾಗಿತು."

"ಇದನ್ನು ಇಂದೂ ಸರಿಪಡಿಸಲು ಸಾಧ್ಯವಿದೆ. ನೀನೇಕೆ ಮೈಸೂರಿನ ಆಸ್ಪತ್ರೆಗೆ ಹೋಗಬಾರದು ?"

"ಅದು ಎಲ್ಲಿದೆ ? ಇಲ್ಲಿಂದ ಎಷ್ಟು ದೂರ ?"

"ಮೈಸೂರು ಗೊತ್ತಿಲ್ಲವೆ ನಿನಗೆ ? ಬಸ್ಸಿನಲ್ಲಿ ಹೋದರೆ ಅರ್ಧದಿನದ ದಾರಿ."

"ಅಲ್ಲಿಗೆ ಹೋದರೆ ಇನ್ನೇನು ಮಾಡಿ ಬಿಡುತ್ತಾರೋ ! ನನಗೆ ಭಯ ವಾಗುತ್ತೆ, ನಾನು ಹೋಗಲಾರೆ."

"ಏನೂ ಮಾಡುವುದಿಲ್ಲ. ಅಷ್ಟೇಕೆ ಭಯ ?"

"ಬೇಡ ಸ್ವಾಮಿ."

"ನಿನಗೆ ಕಾಲನ್ನು ಸರಿಪಡಿಸಿಕೊಳ್ಳಬೇಕೆಂದಿದ್ದರೆ ಹೋಗು."

"ಹೀಗೆ ಕುಂಟುಗಾಲಾದರೂ ಚಿಂತೆಯಿಲ್ಲ, ನಾನು ಹೋಗಲಾರೆ." ಎನ್ನುತ್ತಾ ಅವನು ಹೊರಟುಹೋದುದನ್ನು ನಿರಾಸೆಯ ದಿಟ್ಟಿಯಿಂದ ನಿಟ್ಟಿಸಿ ಮದನ ಒಳಗಡೆ ಬರುತ್ತಲೂ "ಭಾರಿ ಸೋಲು ! ಮೊದಲನೆ ರೋಗಿ ಯಿಂದಲೇ ಭಾರಿ ಸೋಲು!" ತಮಾಷೆ ಮಾಡಿ ಅಘೋರ ಕಿಸಿಕಿಸಿ ನಕ್ಕ.

"ಏನಪ್ಪಾ ಮಾಡಲಿ ? ನೋಡಿ 'ಅಯ್ಯೋ' ಎನ್ನಿಸಿತು."

"ನೀನಾಗಿದ್ದಿದ್ದರೆ ಇಂತಹವರಿಗೆಲ್ಲಾ ಪರವಾನಗಿ ಕೊಟ್ಟು ಯಮ ಸದನಕ್ಕೆ ಕಳುಹಿಸಿಬಿಡುತಿದ್ದೆ !"

"ದೇಶ ಸುಭದ್ರವಾಗಬೇಕಾದರೆ ಅದೊಂದೇ ದಾರಿ !"

"ನನಗೆ ಈಗಲೂ ಆಶ್ಚರ್ಯ ಘೋರ್ ! ಹೇಗೆ ನೀನು ನಿನ್ನ ವೃತ್ತಿಯಲ್ಲಿ ಜಯಶೀಲನಾಗುತ್ತೀಯೆಂಬುದು ಯೋಚನಾತೀತ !"

"ಯೋಚನೆಯೇಕೆ ಮದನ್ ? ದೇವರು ನಿನಗೆ ಕೊಟ್ಟ ವಿಶಾಲವಾದ ಕಣ್ಣುಗಳಿವೆ !"

"ಎಷ್ಟಾದರೂ ನೀನು ಹೃದಯ ರಹಿತ ವ್ಯಕ್ತಿ !"

"ಜರ್ಕ್ ! ಇಲ್ಲಿ ಕೇಳು ! ನಾವು ಸುಖೀರಾಜ್ಯವನ್ನು ಕಾಣಬೇಕಾದರೆ ಸುಭದ್ರ ದೇಶವನ್ನು ಕಟ್ಟಬೇಕಾದರೆ ನಾವು ನಮ್ಮ ಕರ್ತವ್ಯವೇನೆಂಬುದನ್ನು ತಿಳಿದುಕೊಳ್ಳಲೇ ಬೇಕು. ಈಗ ನೋಡು, ನಾವೈವರೂ ಸೇರಿ ವಾರಗಟ್ಟಲೆ

ತಿಂಗಳುಗಟ್ಟಲೆ ಶ್ರಮಿಸಿ ಇದೇ ಕುಂಟನನ್ನು ಪೂರ್ತಿ ಸರಿ ಮಾಡಲಾಗದಿದ್ದರೂ ಅರ್ಧ ಅಥವಾ ಮುಕ್ಕಾಲು ಸರಿ ಮಾಡುವೆವು ಎಂದಿಟ್ಟುಕೊ. ಆಗ ನಾವು ದೇಶಕ್ಕೆ ಏನು ನೀಡಿದ ಹಾಗಾಯಿತು ? ಇನ್ನೂ ಒಬ್ಬ ಬಲಿಷ್ಠ–ಬುದ್ಧಿವಂತ ವ್ಯಕ್ತಿಯನ್ನು ಕುರಿತುಕೊ. ಅಂಥಹವನಿಗಾಗಿ ನಾವು ಶ್ರಮಿಸಿದರೆ ದೇಶಕ್ಕೆ ಒಬ್ಬ ಯೋಧನನ್ನು ನೀಡಿದಂತಾಗುತ್ತದೆ. ಯಾವುದು ಪುರುಷಾರ್ಥ ನೀನೇ ಯೋಚಿಸಿ ನೋಡು." ಸ್ವಲ್ಪ ತಡೆದು ಸಾವಧಾನದಿಂದ ಮತ್ತೆ ನುಡಿದ "ಜಾರ್ಜ್ ! ಕುಂಟ ಕುರುಡ ಹೆಳವ ನಿತ್ಯರೋಗಿ ಕುಷ್ಠರೋಗಿ ಮುದುಕ ಹುಚ್ಚ ಸೋಮಾರಿ ಇವರೆಲ್ಲಾ ಉಣ್ಣುವ ಬಾಯಿಗಳೇ ಹೊರತು ದೇಶಕ್ಕೆ ದುಡಿಯುವ ಕೈಗಳಲ್ಲ ! ಇವರ ಬಾಳ್ಮೆಯಿಂದ ದೇಶ ಸುಭದ್ರವಾದೀತೆ? ಸುಖಿಯಾದೀತೆ ?"

"ಸರಿಯಪ್ಪಾ, ಈಗೇನು ಮಾಡು ಅಂತಿ ?"

"ಮಾಡುವುದೇನೂ ಇಲ್ಲ. ಆದರೆ, ನಾವು ನಮ್ಮ ವೇಳೆಯನ್ನು ಇಂಥಹವರಿಗಾಗಿ ಕಳೆಯುವುದು ಸರಿಯಲ್ಲ. ದುಡಿಯುವ ಕೈಗಳಿಗಾಗಿ ನಾವು ದುಡಿಯೋಣ. ಇದರಿಂದ ದೇಶಕ್ಕೂ ಒಳ್ಳೆಯದು. ನಮ್ಮ ಮನಸ್ಸಿಗೂ ಶಾಂತಿ."

"ಘೋರ್ ! ನಿನ್ನ ವಾದ ಎಳ್ಳಷ್ಟೂ ಸರಿಯಲ್ಲ. ವಿಶಾಲ ದೃಷ್ಟಿಯಿಂದ ಕಣ್ತೆರದು ನೋಡು. ವೈದ್ಯ ವೃತ್ತಿಯೆಂದರೆ ಆತ್ಮ ಆತ್ಮನಿಗೆ ನೀಡುವ ನೆರವು. ಇದರಲ್ಲಿ ಅದು ಇದು ಎಂಬ ಭೇದ ಭಾವ ಇರಲೇ ಕೂಡದು."

"ಒಳಗಣ್ಣು ತೆರೆದು ನೋಡು ! ಮೇಲು ನೋಟಕ್ಕೆ ಬಂದೆದ್ದು ಬರುವ ಈ ಪ್ರಪಂಚದ ಬೂಟಾಟಿಕೆಯ ವ್ಯವಹಾರವನ್ನು ಬದಿಗೊತ್ತಿ ಪರಮಾತ್ಮ ಮೆಚ್ಚುವಂತೆ ನಿನ್ನ ಆತ್ಮವನ್ನು ಬೆಳಗಿಸು. ಅಂದರೆ ನೀನು ಹುಟ್ಟಿದ್ದು ಸಾರ್ಥಕವಾಗುತ್ತದೆ."

"ಈ ಮನೋಭಾವ ಇಟ್ಟುಕೊಂಡು ನೀನು ವೈದ್ಯವೃತ್ತಿಗೆ ಬಂದುದು ಶುದ್ಧ ತಪ್ಪು !"

"ನೀವು ಏನಾದರೂ ಮಾಡಿಕೊಳ್ಳಿರಿ. ನನ್ನ ಮಟ್ಟಿಗೆ ಹೇಳುವುದಾದರೆ ನನ್ನ ಸೇವೆ ದುಡಿಯುವ ಕೈಗಳಿಗೆ ಮೀಸಲು ?" ದನಿಯಲ್ಲಿ ಗಾಂಭೀರ್ಯವಿತ್ತು. ಕಣ್ಣುಗಳಲ್ಲಿ ಮಿಂಚು ತಾಂಡವವಾಡಿತು.

"ಹಾಗಿದ್ದರೆ, ನಾಳೆ ನಿನ್ನ ತಂದೆ ತಾಯಿಯರು ಮುದುಕರಾಗುವುದಿಲ್ಲವೇ ? ಅವರನ್ನೇನು ಮಾಡುವೆ ?"

"ಓ ! ಅದು ಬೇರೆ ಪ್ರಶ್ನೆ ! ಎಂದ ಅಘೋರ ಬಾಹು ದ್ವಯಗಳನ್ನು ನೀಡಿ ಮಡಿಸಿ ತೋರುತ್ತಾ ಉತ್ಸಾಹದಿಂದ ಹೇಳಿದ "ಈ ಸುಭದ್ರ ತೋಳುಗಳಿರುವಾಗ ಏಕೆ ಯೋಚನೆ ? ನಾನು ನೋಡಿಯೇ ನೋಡುವೆ. ನೀವೂ ಇದ್ದೀರಿ, ನೋಡಿಯೇ ನೋಡುತ್ತೀರಿ. ಅದು ಬೇರೆ ವಿಷಯ. ಆದರೆ, ಯಾವುದಾದರೂ ಬಡ ಕುಟುಂಬ ತೆಗೆದುಕೋ. ದುಡಿಯುವವನೊಬ್ಬ ನಾಲ್ಕಾರು ಮಕ್ಕಳು. ಜೊತೆಗೆ ಸೀರಿ ಸೀಕಲಾದ ತಂದೆ ತಾಯಿ ಅಜ್ಜ ಅಜ್ಜಿ. ಹೀಗಿದ್ದರೆ ಅವನು ತಲೆಯೆತ್ತುವುದಾದರೂ ಹೇಗೆ ? ಇದನ್ನೆಲ್ಲಾ ವಿಚಾರ ಮಾಡು ಮದನ್."ತುಸು ತಡೆದು ಅಘೋರ ಪುನಃ ಮುಂದುವರಿದ "ಅಂಥಹವರಿಗಾಗಿ ಸರಕಾರ ದುರ್ಬಲಾಶ್ರಮ ತೆರೆದರೆ ವಿನಾ ಆ ಮನುಷ್ಯ ತಲೆಯೆತ್ತುವುದು ಸಾಧ್ಯವೇ ಇಲ್ಲ. ಇದು ನಾನಷ್ಟೇ ಅಲ್ಲ. ಪ್ರತಿಯೊಬ್ಬರೂ ಯೋಚಿಸಬೇಕಾದ ವಿಷಯ !"

"ಇದು ಪ್ರಕೃತಿ ನಿಯಮ. ಇದರಲ್ಲಿ ನಾವು ಎಳ್ಳಷ್ಟಾದರೂ ಸರಿಪಡಿಸಲಾರೆವು ಎಂಬುದನ್ನು ಮನದಟ್ಟು ಮಾಡಿಕೋ ಘೋರ್ ! ದುರ್ಬಲಾಶ್ರಮ ತೆರೆದು ದೇಶದ ದುರ್ಬಲರನ್ನೆಲ್ಲಾ ಪೋಷಿಸುವಷ್ಟು ನಮ್ಮ ಸರಕಾರ ಶ್ರೀಮಂತವೇ ?"

"ಈ ಯೋಚನಾಧಾರೆಯಿಂದಲೇ ನಮ್ಮ ದೇಶ ಇದುವರೆವಿಗೂ ಹೀಗೆಯೇ ಉಳಿಯಿತು. ಒಂದಲ್ಲ ಒಂದು ದಿನ ಈ ಕಂದಾಚಾರ ತಳಕೆಳಗಾಗಲೇ ಬೇಕು !"

"ಘೋರ್ ! ನಿನ್ನ ಈ ಜನ್ಮದ ಮಾತಿರಲಿ, ನೀನು ಇನ್ನೊಂದು ಜನ್ಮಕ್ಕೂ ಇದನ್ನು ಸಾಧಿಸಲಾರೆ."

"ನೀನೊಬ್ಬ ವಿಚಿತ್ರ ವ್ಯಕ್ತಿ ಕಣಯ್ಯಾ!"

"ಅಷ್ಟೆ ಏನು ? ಕುತೂಹಲಕಾರಿ ವ್ಯಕ್ತಿ !"

"ಇಷ್ಟು ದಿನ ನಿನ್ನೊಡನಾಡಿದ್ದರೂ ಇದುವರೆವಿಗೆ ನಿನ್ನನ್ನು ಅರ್ಥ ಮಾಡಿಕೊಳ್ಳಲಾಗಲಿಲ್ಲ ನನಗೆ."

"ಇಂದಲ್ಲದಿದ್ದರೂ ಕಾಲಾಂತರದಲ್ಲಿ ನೀನು ನನ್ನನ್ನು ಅರ್ಥ ಮಾಡಿ

ಕೊಳ್ಳಬಲ್ಲೆ, ಮದನ್ !" ಎಂದ ಅಘೋರನ ದನಿಯಲ್ಲಿ ಸಮಾಧಾನವಿತ್ತು. ಏನನ್ನೋ ಗಹನವಾಗಿ ಯೋಚಿಸುತ್ತಾ ಕುಳಿತ ಅವನ ದೃಷ್ಟಿ ಕಿಟಕಿಯಲ್ಲಿ ತೂರಿ ದೂರ ದಿಗಂತದಲ್ಲಿ ನೆಟ್ಟಿತ್ತು. ಎರಡು ಕಾಲುಗಳೂ ಚಾಚಿ ಹಣೆದು ಕೊಂಡಿದ್ದುವು. ವಿಶಾಲವಾದ ಎದೆಯ ಮೇಲೆ ಕೈ ಕಟ್ಟಿ ಕುಳಿತ ಅವನ ಗಂಭೀರ ಮೂರ್ತಿ ನಿಸ್ಪಂದ-ನಿರಾತಂಕ.

ತುಸು ಹೊತ್ತು ಯಾರೂ ಮಾತಾಡಲಿಲ್ಲ. ರುದ್ರಮೌನ ಒಮ್ಮೆಲೇ ಆವರಿಸಿತು. ಎಲ್ಲರೂ ಅದೇ ವಿಚಾರ ಧಾರೆಯನ್ನು ಮೆಲುಕು ಹಾಕುತಿದ್ದರೂ ಬಹಿರಂಗವಾಗಿ ಅವನನ್ನು ತರಾಟೆಗೆ ತೆಗೆದುಕೊಂಡಿದ್ದರೂ ಅಂತರಂಗದಲ್ಲಿ ಪರಿಹಾರವನ್ನು ಹುಡುಕುವಷ್ಟು ದೂರ ಬುದ್ಧಿ ಕೆಲಸ ಮಾಡುತಿತ್ತು. ಯೋಚಿಸಿದಷ್ಟೂ ಗಹನವಾಗಹತ್ತಿದೆ ವಿಷಯ.

ಹೊತ್ತು ನಿರಾಂತಕವಾಗಿ ಉರುಳಿತು. ಯೋಚಿಸುತ್ತಾ ಕುಳಿತಿದ್ದ ಗೆಳೆಯರ ತಂಡವನ್ನು ಉದ್ದೇಶಿಸಿ ಮದನ್–"ಸರಿ, ಇದು ಯೋಚಿಸುವಂಥಾ ವಿಷಯವೂ ಅಲ್ಲ ಮಾಡುವಂಥಾ ಕೆಲಸವೂ ಅಲ್ಲ. ಈ ಸಲ್ಲದ ವಿಷಯಗಳಿಗಾಗಿ ವ್ಯರ್ಥ ಕಾಲಹರಣವೇಕೆ ? ಎದ್ದೇಳಿ, ಮುಖ ತೊಳೆದುಕೊಳ್ಳೋಣ. ನಾಲ್ಕು ಗಂಟೆಯಾಯಿತು. ಚಹ ಈಗಾಗಲೇ ತಯಾರಿರುತ್ತದೆ. ಚಹ ಮಾಡಿದಾಕ್ಷಣ ಕುಡಿದರೇನೇ ಹಿತ. ತಿಂಡಿ ಏನು ತರಹೇಳಲಿ?"

"ನಿನ್ನೆ ತಂದ ಬಿಸ್ಕತ್ತು ಹಾಗೇ ಇವೆ. ಮತ್ತೇಕೆ ತಿಂಡಿ ?"

"ಹಾಗಿದ್ದರೆ ಅದೇ ಸಾಕೆ ?"

"ಸಾಕು."

ಎಲ್ಲರೂ ಮುಖ ಮಜ್ಜನ ಮಾಡಿಕೊಂಡು ಕೂದಲು ತಿದ್ದಿ ಚಹ ಕುಡಿಯಲು ದುಂಡು ಮೇಜಿನ ಸುತ್ತ ಕುಳಿತುಕೊಂಡರು. ಬಿಸ್ಕತ್ತನ್ನು ಕಚ್ಚುತ್ತಾ ಜಾನಕೀರಾಂ ಕೇಳಿದ "ಇಂದು ಸಂಜೆಯ ಕಾರ್ಯಕ್ರಮವೇನು ?"

"ಮ್ಯೂಜಿಯಂ ಕಡೆ ಹೋಗಿ ಬರೋಣ."

"ಹಾಗೆ ಮಾಡೋಣವೇ?"

"ಅದೇ ಸರಿ."

ಚಹದ ನಂತರ ಬಿಡಾರದ ಹೊರಗಡೆಯ ಹೂದೋಟದಲ್ಲಿ ಅಡ್ಡಾಡ ತೊಡಗಿದರು. ಎಲ್ಲೆಲ್ಲೂ ಹಸುರು ತುಂಬಿ ಬೆಳೆದ ನೀಲಗಿರಿ ಮರಗಳ ಕಂಪು

ತೀಡಿ ಬರುವ ತಂಗಾಳಿಯಲ್ಲಿ ಗಮ್ಮನೆ ತೇಲಿ ಬರುತಿತ್ತು. ಕಂಪನ್ನು ಆಸ್ವಾದಿಸುತ್ತಾ ಅಘೋರ ನೋಟವನ್ನು ನೇರಕ್ಕೆ ಹರಿಸಿದ. ಹಿರಿಯ ಬೆಟ್ಟದ ಇಳಿಜಾರುಗಳಲ್ಲಿ ಸಾಲು ಸಾಲಾಗಿ ಕಂಗೊಳಿಸುವ ಅಂಕು ಡೊಂಕಿನ ಕರಿಯ ರಸ್ತೆ. ರಸ್ತೆಯ ಇಕ್ಕೆಲಗಳಲ್ಲಿ ಹೆಂಚಿನ ಮನೆಗಳು. ಎಲ್ಲಿಂದ ಎಲ್ಲಿಯವರೆವಿಗೂ ಕಣ್ಣಿಗೆ ಸೆಯುವ ಆಲೂಗೆಡ್ಡೆಯ ಹಸಿರು ಸೂಸುವ ಸುಂದರ ಬೆಳೆ. ಗಿಡಮರಗಳಿಂದ ಸುಶೋಭಿತವಾದ ವನರಾಜಿ. ಹಿಮವೊತ್ತಿ ಮಂಜುಸೂಸುವ ತಣ್ಣನೆಯ ವಾತಾವರಣ. ಮನೆಗಳ ಮೇಗಡೆ ಹೊಗೆ ಕೊಳವೆಗಳಿಂದ ಸದಾ ಹೊರಹೊಮ್ಮುವ ಕಪ್ಪನೆಯ ಹೊಗೆ. ದಿನವೆಲ್ಲಾ ದುಡಿಯುವ ರೈತವೃಂದ. ಅವರದೇ ಆಪ ಒಂದು ವೈಶಿಷ್ಟ. ರಾಜ್ಯದ ಇತರೆಡೆಗಳಲ್ಲೆಲ್ಲೂ ನೋಡಲಾಗದ ಅಪೂರ್ವ ಗಿಡ ಮರಗಳು. ತಲೆದೂಗುತ್ತಾ ಸ್ವಾಗತ ನೀಡುವ ಅಗಣಿತ ಸುಂದರ ಸುಮಗಳ ವರ್ಣರಾಜಿ. ಗರಿಕೆಯ ರನ್ನ ಗಂಬಳಿಯನ್ನು ಹೊದ್ದ ಭೂಸುಧೆ. ಒಂದೇ ಎರಡೇ ಹಲವಾರು !

ಪ್ರಕೃತಿಯೈಸಿರಿಯನ್ನು ಸೂಸುವ ಸರ್ವ ಸಂಪತ್ತೂ ಮನಸ್ಸಿಗೆ ಹರ್ಷವನ್ನೂಡಿಸಿದುವು. ಹಸುರು ಮೆತ್ತೆಯ ಮೇಲೆ ಸಾಲಾಗಿ ಕುಳಿತ ಹುಡುಗರ ತಂಡ ಮರುದಿನ ಬೆಳಗ್ಗೆ ದೋಣಿ ವಿಹಾರಕ್ಕೆ ಹೊರಡಲು ನಿರ್ಧರಿಸಿತು.

ಮ್ಯೂಸಿಯಂ ಮತ್ತು ದೇಶೀಯ ರಾಜರುಗಳ ಅರಮನೆಗಳನ್ನು ನೋಡಿಕೊಂಡು ಹಿಂತಿರುಗುವಾಗ ಕತ್ತಲು ಮುಸುಗುತಿತ್ತು. ಸಂಜೆಯ ತಣ್ಣನೆಯ ವಾತಾವರಣವನ್ನು ಸವಿಯುತ್ತಾ ಹುಡುಗರು ಬಿಡಾರವನ್ನು ಸೇರಿದರು.

೦ ೦ ೦ ೦

ಮರುದಿನ ದೋಣಿ ವಿಹಾರಕ್ಕೆ ಹೊರಟ ಹುಡುಗರ ಮೈಯಲ್ಲಿ ಹುರುಪಿನ ಹೊಳೆ ಮಿಂಚಿನ ವೇಗದಲ್ಲಿ ಹರಿಯುತಿತ್ತು. ಐವರೂ ದೋಣಿಯನ್ನೇರಿ ಕುಳಿತುಕೊಂಡರು. ದೋಣಿಗ ಹುಟ್ಟು ಹಾಕಿದ. ಅವನಿಂದ ಹುಟ್ಟುಗೋಲನ್ನು ತೆಗೆದುಕೊಂಡು ತಾವೇ ಹುಟ್ಟು ಹಾಕಿ ದೋಣಿಯನ್ನು ನಡೆಸುತ್ತಾ ಕೇಕೆ ಹಾಕಿ ನಕ್ಕರು ಹುಡುಗರು.

ಅಘೋರ ಉತ್ಸಾಹದಿಂದ ಅಂದ "ಹಾಡು ಹೇಳದ ಹೊರತು ದೋಣಿ ವಿಹಾರ ಶೋಭಿಸುವುದಿಲ್ಲ. ಯಾರಾದರೂ ಹಾಡು ಹೇಳಿರಿ."

ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಯಾರಿಗೂ ಹಾಡು ಬಾರದು. ಎಲ್ಲರೂ ನಕ್ಕು ಹೇಳಿದರು "ಘೋರ್ ! ನೀನೇ ಹೇಳು."

"ನನಗೆ ಬಂದಿದ್ದರೆ ನಿಮಗೇಕೆ ಹೇಳುತ್ತಿದ್ದೆ ?" ಹುಬ್ಬೇರಿಸಿ ಕೇಳಿದ ಅಘೋರ. ಎಲ್ಲರ ಮಾತೂ ಕೇಳಿ ದೋಣಿಗ ಉತ್ಸಾಹದಿಂದ–"ನಾನೇ ಹೇಳುವೆ !"

"ಹ್ಞಾ, ಹೇಳಪ್ಪಾ."

"ಐವರಟ್ಟಾಸವನು ಯೌವನದ ಹಿಂಡನ್ನು |
ಹೊಯ್ಯುತ್ತ ವಶಕೆ ತಂದಾತ ಜಗದೊಳಗೆ |
ದೈವತಾನಕ್ಕು ಸರ್ವಜ್ಞ"

ಹೋ ! ಹೋ ! ಒಮ್ಮೆಲೆ ನಗುವಿನಲೆ ಉಕ್ಕಿ ಹರಿಯಿತು. ದೋಣಿಗ ನಗುನಗುತ್ತಾ ಮತ್ತೆ ಹೇಳಿದ. ದನಿ ರಾಗವಾಗಿ ಹೊರಬಿತ್ತು.

"ಆರರಟ್ಟುಳಿಗಳನು ಮೂರು ಕಂಟಕರನ್ನು |
ಏರು ಜವ್ವನವ ತಡೆಯುವೊಡೆ ಶಿವತಾನು |
ಬೇರೆ ಇಲ್ಲೆಂದ ಸರ್ವಜ್ಞ"

ಹುಡುಗರು ಅವನ ಜಾಣ್ಮೆಗೆ ಸಾನಂದದಿಂದ ತಲೆದೂಗಿದರು.

ಅಧ್ಯಾಯ

೧೨

ಅಂದು ಡಾ|| ಮದನ್ ಡಾ|| ರತನ್ ಡಾ|| ಅಘೋರ್‌ರವರಿಗೆ ಮಧ್ಯಾಹ್ನದ ಡ್ಯೂಟಿ ಇತ್ತು. ಬಿಡುವಿನ ವೇಳೆಯಲ್ಲಿ ಡಾ|| ಅಘೋರ ತನ್ನ ಗೆಳೆಯರೊಂದಿಗೆ ತಮ್ಮ ವಿಶ್ರಾಂತಿ ಕೊಠಡಿಯಲ್ಲಿ ಕುಳಿತಿದ್ದ. ಅದೇ ತಾನೆ ಊಟ ಮುಗಿಸಿದ್ದ ಮೂವರು ಆರಾಮವಾಗಿ ಮಾತು ಕತೆಗಳಲ್ಲಿ ತೊಡಗಿದ್ದರು. ಮದನನ ಕಣ್ಣು ಗಡಿಯಾರದ ಮೇಲೆ ಹೊರಳಿದಾಗ ಹೊತ್ತು ಮೂರರ ಅಂಚನ್ನು ಮುಟ್ಟುವುದರಲ್ಲಿತ್ತು. ಇಂದೇನೋ ಹೊತ್ತಿಗೆ ಮುಂಚೆ ಕೆಲಸ ಊಟ ಎರಡನ್ನೂ ಮುಗಿಸಿದ್ದೇವೆ ಎನ್ನಿಸಿತು. ಅಘೋರ ಆರಾಮ ಕುರ್ಚಿಯ ಮೇಲೆ ಕಾಲುಚಾಚಿ ಬಿದ್ದುಕೊಂಡಿದ್ದವನು ಎದ್ದು ಕುಳಿತುಕೊಂಡು–"ನನಗೆ ಈ ದಿನ ತುಂಬ ತಲೆ ನೋವು ಇದ್ದುದರಿಂದ ಕೋರ್ಟಿನಲ್ಲಿ ಸಾಕ್ಷಿ ಹೇಳುವುದೇ ಕಷ್ಟವಾಗಿತ್ತು. ಈಗ ಸ್ವಲ್ಪ ವಾಸಿಯಿದೆ." ಎರಡು ಕೈಗಳಿಂದಲೂ ತಲೆ. ಯನ್ನು ಒತ್ತಿ ಒತ್ತಿ ನೋಡಿ ಪುನಃ ನುಡಿದ "ತಲೆ ನೋವು ಬಂದರೆ ತುಂಬ ಹಿಂಸೆ."

"ಅಯ್ಯೋ, ನಿನ್ನಂತಹವನಿಗೆ ಅದೊಂದು ಲೆಖ್ಖವೆ ?"

"ಪರವಾಗಿಲ್ಲ ನೀನು ? ನಾನೇನು ಕಬ್ಬಿಣವೇ ?"

"ಅಲ್ಲ, ಉಕ್ಕಿನಾಳು !"

"ಸರಿ ; ಬಿಡಪ್ಪಾ. ನಿನಗೆ ತಮಾಷೆ. ನನಗೆ ಪ್ರಾಣ ಸಂಕಟ."

"ಹೋಗಲಿ ಬಿಡು. ನಿನ್ನ ಸಾಕ್ಷಿ ಏನೆಂಬುದನ್ನಾದರೂ ಹೇಳು."

"ಓ ! ಅದು ತುಂಬ ರುಚಿ ರುಚಿಯಾಗಿಯೇ ಇತ್ತು." ಕಣ್ಣರಳಿಸಿ ನಗು ನಗುತ್ತಾ ಒಂದು ಗಳಿಗೆ ತಡೆದು ಪುನಃ ಮುಂದುವರಿದ ಅಘೋರ "ರಮೇಶ ನನ್ನು ಅವನ ಅಣ್ಣ ಕತ್ತು ಕೊಯ್ದು ಕೊಲೆ ಮಾಡಲು ಸಂಚಿಕೆ ಹಾಕಿದ್ದ ನೆಂದೂ ಅದರೆ, ಅಕಸ್ಮಾತ್ ಪೂರ್ತಿ ಕೊಲೆ ಮಾಡಲು ಸಮಯ ಸಾಲದೆ ಹೋಯಿತೆಂದೂ ಪ್ರಾಸಿಕ್ಯೂಷನ್ನಿನವರು ಆರೋಪಿಸಿದ್ದರು. ರಮೇಶ್ ಪ್ರಾಣ ತೊರೆಯುವ ಮುನ್ನ ಹಾಗೆಂದು ಹೇಳಿಕೆಯನ್ನೂ ಕೊಟ್ಟು ಬಿಟ್ಟಿದ್ದ. ಆ

ಹೇಳಿಕೆಯ ಮೇಲೆ ಪೋಲೀಸಿನವರು ಅವನ ಅಣ್ಣನ ಮೇಲೆ ಕೇಸು ಹಾಕಿದ್ದರು. ಅನಂತರ ಕೋರ್ಟಿನವರು ನನ್ನ ವರದಿಯನ್ನು ಕೇಳಿದರು.

"ರಮೇಶನ ಕತ್ತನ್ನು ಬೇರೆಯವರು ಕೊಯ್ದಿರುವುದು ಸಾಧ್ಯವೇಯಿಲ್ಲ! ಎಂದು ನಾನು ಖಂಡಿತವಾಗಿ ಹೇಳಿದೆ. ಅವನನ್ನು ಆಸ್ಪತ್ರೆಗೆ ಕರೆ ತಂದವರಿಗೂ ಇದು ಹೇಗಾಯಿತೆಂಬುದು ಗೊತ್ತಿರಲಿಲ್ಲ."

"ಹಾಗೆಂದು ಹೇಗೆ ನಿರ್ಧರಿಸುತ್ತೀರಿ? ರಮೇಶ ಸ್ವತಃ ಹಾಗೆಂದು ಹೇಳಿಕೆ ಕೊಟ್ಟು ಪ್ರಾಣ ನೀಗಿದ್ದಾನಲ್ಲಾ? ಸಾಯುವ ವ್ಯಕ್ತಿ ಅಣ್ಣನ ಮೇಲೆ ಸುಳ್ಳು ಹೇಳುತ್ತಾನೆಯೆ?" ಲಾಯರ ಪ್ರಶ್ನೆ.

"ಸುಳ್ಳು ಹೇಳುವುದರಲ್ಲಿ ಆಶ್ಚರ್ಯವಿಲ್ಲ. ಅಕಾಲ ಮೃತ್ಯುವಿಗೆ ಒಳಗಾಗುವ ಸನ್ನಿವೇಶವೊದಗಿದಾಗ ವ್ಯಕ್ತಿಯ ಮನಸ್ಸು ಕೆರಳಿ ಜೀವನ ಕ್ರೂರವಾಗಿ ತೋರಿ ಎಲ್ಲರ ಮೇಲೂ ದ್ವೇಷ ಸಾಧನೆ ಮಾಡುವ ಸಂಭವವುಂಟು. ಮನಸ್ಸು ಉಗ್ರವಾದಾಗ ದ್ವೇಷದ ಕಿಡಿ ಮೂಡುವುದರಲ್ಲಿ ಅನುಮಾನವಿಲ್ಲ." ನಾನಂದೆ.

"ಹೇಗೆ ಹಾಗೆಂದು ನಿರ್ಧರಿಸುತ್ತೀರಿ. ಡಾಕ್ಟರ್?" ನ್ಯಾಯಾಧೀಶರ ಪ್ರಶ್ನೆ.

"ಇತರರು ಕತ್ತು ಕೊಯ್ದಲ್ಲಿ ಕತ್ತಿನ ಗಾಯ ನೇರವಾಗಿರುತ್ತದೆ. ಆದರೆ ರಮೇಶನ ಗಾಯ ಹಾಗಿರಲಿಲ್ಲ. ಎಡ ಕಿವಿಯ ನೇರದಿಂದ ತಾಗಿದ ಪೆಟ್ಟು ಸಲೀಸಾಗಿ ಇಳಿಮುಖವಾಗಿ ಬಂದು ಕತ್ತಿನ ಕೆಳಭಾಗದಲ್ಲಿ ನಾಳವನ್ನು ಸ್ವಲ್ಪ ಹರಿದಿತ್ತು. ಅಲ್ಲದೆ ಒಂದೇ ಸಲಕ್ಕೆ ಕತ್ತು ಕತ್ತರಿಸಿಕೊಳ್ಳಲು ಧೈರ್ಯ ಸಾಲದೆ ಎರಡನೆಯ ಭಾರಿ ಕತ್ತರಿಸಿಕೊಂಡ ಗಾಯಗಳಿದ್ದುವು! ಆದ್ದರಿಂದ ರಮೇಶ ತಾನಾಗಿಯೇ ಕತ್ತು ಕೊಯ್ದುಕೊಂಡಿದ್ದಾನೆ! ಇದು ಆತ್ಮಹತ್ಯೆಯ ಪ್ರಕರಣ."

"ಡಾಕ್ಟರ್ ಮಹಾಶಯಾ! ಅವನು ಎಷ್ಟು ದಿನ ಆಸ್ಪತ್ರೆಯಲ್ಲಿ ಬದುಕಿದ್ದ? ಅವನು ನಿಮ್ಮೊಂದಿಗೆ ಹೇಳಿಕೆ ಕೊಟ್ಟುದುದೇನು?"

"ಅವನನ್ನು ಆಸ್ಪತ್ರೆಗೆ ಕರೆತಂದಾಗ ಪ್ರಜ್ಞೆಯಿರಲಿಲ್ಲ. ನಾನು ಕತ್ತಿನ ಗಾಯವನ್ನು ಹೊಲಿದು ಚಿಕಿತ್ಸೆ ಮಾಡಿದೆ. ಮೊದಲ ಎರಡು ದಿನಗಳು ಒಂದೇ ರೀತಿ ಇದ್ದ ಅವನಿಗೆ ಮೂರನೆಯ ದಿನ ಪ್ರಜ್ಞೆ ಮರಳಿತು. ಒಂದೆರಡು ಗಂಟೆ

ಅರಬರೆ ಜ್ಞಾನವಿತ್ತು. ಅನಂತರ ಅವನಿಗೆ ಪೂರ್ಣ ಪ್ರಜ್ಞೆ ಬಂತು. ಒಟ್ಟಿನಲ್ಲಿ ಅವನು ಮೂರು ದಿನ ಜೀವಂತನಾಗಿದ್ದ. ಅವನು ನಮಗೂ ಹಾಗೆಂದೇ ಹೇಳಿಕೆ ಕೊಟ್ಟಿದ್ದಾನೆ. ಆದರೆ ಅದು ಶುದ್ಧ ಸುಳ್ಳು. ಹಿಂದಿನ ಯಾವುದೋ ದ್ವೇಷ ಅವನನ್ನು ಕೊನೆಗಾಲದಲ್ಲಿ ಮುಯ್ಯಿ ತೀರಿಸಿಕೊಳ್ಳಲು ಪ್ರೇರೇಪಿಸಿದೆ!"

"ಇದು ಸಾಧ್ಯವೇ ಡಾಕ್ಟರ್ ?"

"ಮನಸ್ಸು ಉಗ್ರವಾದಾಗ ಅವನು ನೀಡಿದ ಹೇಳಿಕೆ ಎಂಬುದನ್ನು ಗಮನಕ್ಕೆ ತೆಗೆದುಕೊಳ್ಳಿರಿ. ಯಾವುದೋ ಕೊನೆಗಾಣದ ದ್ವೇಷದ ಪ್ರೇರೇಪಣೆಯೇ ಹೊರತು ಇದು ಮತ್ತೇನೂ ಅಲ್ಲ ಎಂದು ನಾನು ಖಂಡಿತವಾಗಿ ಹೇಳಿದೆ. ಅನಂತರ ಮೃತನ ಪತ್ನಿಯ ಹೇಳಿಕೆ ತೆಗೆದುಕೊಂಡರು. ಅವಳು "ಕೆಲವು ದಿನಗಳಿಂದ ರಮೇಶ ಮನಶ್ಯಾಂತಿಯಿಲ್ಲದೆ ತೊಳಲಾಡುತಿದ್ದುದು ನಿಜ. ಅಷ್ಟಲ್ಲದೆ ನಾನಿನ್ನೇನೂ ಹೇಳಲಾರೆ. ದುರ್ಘಟನೆ ನಡೆದಾಗ ನಾನು ಮನೆಯಲ್ಲಿರಲಿಲ್ಲ." ಎಂದಿದ್ದಾಳೆ. ಅಂದ ಮೇಲೆ ಕೇಸು ಏನಾಗುತ್ತೋ ಯೋಚಿಸಿರಿ."

"ಕೊನೆಗಾಲದಲ್ಲಿ ದ್ವೇಷವೇನಿದ್ದರೂ ಮರೆತು ಬಿಡಬೇಕಾದುದು ಮಾನವ ಧರ್ಮ. ಆದರೆ ಇವನು ಇಲ್ಲದ ದ್ವೇಷ ಹುಟ್ಟಿಸಿಕೊಂಡಿದ್ದಾನೆ." ಎಂದು ನಸುನಕ್ಕ ರತನ್.

"ಹೇಗಿದ್ದರೂ ಸಾಯುವ ವ್ಯಕ್ತಿ ನಿಜ ಹೇಳಿದ್ದಿದ್ದರೆ...?"

"ನಿಜ ಮದನ್. ಸಾಯುವ ಕಾಲದಲ್ಲಿ ಮಾಳಪ್ಪ ಮೀನು ನುಂಗಿ ಸತ್ತ ಎಂಬಂತಾಯಿತು."

"ಥರ್ಮಾಸ್‌ಫ್ಲಾಸ್ಕ್ ಇದೆ. ಇಲ್ಲಿಗೇ ಸ್ವಲ್ಪ ಚಹ ತರಿಸಲೇ ?" ರತನ್ ಕೇಳಿದ.

ಅಘೋರ ಮತ್ತು ಮದನ್ ಇಬ್ಬರೂ ಹೂಗುಟ್ಟಿದರು. ರತನ್ ಥರ್ಮಾಸ್‌ಫ್ಲಾಸ್ಕನ್ನು ತೆಗೆದುಕೊಂಡು ಹೊರಹೋಗಿ ಆಳೊಬ್ಬನನ್ನು ಕರೆದು ಕ್ಯಾಂಟೀನಿನಿಂದ ಚಹ ತರಲು ಹೇಳಿ ಕೈಗೆ ಕಾಸನ್ನಿಟ್ಟ. ಮೂವರೂ ಮುಖ ಮಜ್ಜನ ಮಾಡಿ ಕೂದಲು ತಿದ್ದಿ ಅಣಿಯಾಗುವುದರೊಳಗಾಗಿ ಥನ್ ! ಥನ್ ! ಥನ್ ! ಥನ್ ! ಕರೆ ಗಂಟೆ ಭಾರಿಸಿತು. ಓ...ಕೋಡ್ ನಂಬರ್ ಒಂಬತ್ತು.

ರಾಣೀ ಜಗತ್ತಾರಣಿಯ ತುರ್ತುಕರೆ !

ಮೂವರೂ ಎಲ್ಲವನ್ನೂ ಅಲ್ಲಿಂದಲ್ಲೇ ಹಾಕಿ ಹೊರ ಬಿದ್ದರು. ಕಾರಿಡಾರಿನಲ್ಲಿ ಕೆಂಪು ದೀಪ ಹತ್ತಿ ಆರನೆಯ ನಂಬರನ್ನು ತೋರಿಸಿತು. ಮೂವರೂ ಅತ್ತ ಧಾವಿಸಿದರು. ಸಂದಿಗೊಂದಿಗಳಿಂದ ಔಷಧಿಯ ಟ್ರೇಗಳೊಡನೆ ಶ್ವೇತ ವಸ್ತ್ರಧಾರಿಣಿಯರೂ ಓಡೋಡಿ ಬಂದರು. ಹತ್ತಾರು ಕೈಗಳ ಸಹಾಯ ಆ ಕ್ಷಣ ಒದಗಿತು.

ಆರನೆಯ ವಾರ್ಡಿನಲ್ಲಿದ್ದ ಎಪ್ಪತ್ತು ವರ್ಷ ವಯಸ್ಸಿನ ವೃದ್ಧೆ ನ್ಯೂಮೋನಿಯಾ ಜ್ವರದಿಂದ ಮುಕ್ತಳಾಗಿ ಒಂದು ವಾರದಿಂದ ದಿನೇ ದಿನೇ ಚೇತರಿಸಿಕೊಳ್ಳುತಿದ್ದಳು. ಅದಕ್ಕೂ ಮೊದಲು ಟಿ.ಬಿ. ಯಾಗಿದ್ದು ಪೂರ್ಣವಾಸಿಯಾಗಿತ್ತು. ಇಷ್ಟರಲ್ಲೇ ಮನೆಗೆ ಹಿಂದಿರುಗಬೇಕಾಗಿದ್ದ ಅವಳಿಗೆ ಇಂದು ಅನಿರೀಕ್ಷಿತವಾಗಿ ರಕ್ತ ವಾಂತಿಯಾಗಿತ್ತು!

ಡ್ಯೂಟಿ ಡಾಕ್ಟರ ವಿನಾ ಮತ್ಯಾವ ಡಾಕ್ಟರುಗಳೂ ಬಂದಿರಲಿಲ್ಲವಾದುದರಿಂದ ತರುಣ ಡಾಕ್ಟರುಗಳೇ ಮುಂದಾದರು. ಮದನ್ ತುಂಬಿ ಕೊಡುತಿದ್ದಂತೆ ರತನ್ ಇಂಜಕ್ಷನ್ ಚುಚ್ಚ ತೊಡಗಿದ. ಅಘೋರ ಒಳ ಬಂದವನೇ ಒಂದು ಹೆಜ್ಜೆ ಹಿಮ್ಮೆಟ್ಟಿ ನಿಂತ. ಕಣ್ಣುಗಳು ಅವಳ ದೇಹ ಸ್ಥಿತಿಯನ್ನು ಗಮನಿಸುತಿದ್ದುವು. ಕ್ಷಣೇ ಕ್ಷಣೇ ಮೃತ್ಯುವಶವಾಗುತಿದ್ದ ಅವಳ ಕಣ್ಣು ಗುಡ್ಡೆಗಳು ಮೇಲಕ್ಕೆ ಸಿಕ್ಕಿಕೊಂಡುವು. ಆದರೂ, ಮದನ್ ಮತ್ತು ರತನ್‌ರವರ ವ್ಯರ್ಥ ಸಾಹಸ ಸಾಗುತ್ತಲೇ ಇತ್ತು...ಹೇಗಿದ್ದರೂ ಪ್ರಾಣವುಳಿಯುವುದಿಲ್ಲ. ವೃಥಾ ಚುಚ್ಚಿ ಗೋಳು ಹುಯ್ಯುವುದಾದರೂ ಏಕೆ?...ಇನ್ನು ಮುದುಕಿ ಬದುಕಿ ಆಗುವ ಪ್ರಯೋಜನವಾದರೂ ಏನು?....ಎಂದು ಮುಂತಾಗಿ ಮನದಲ್ಲಿ ಯೋಚನೆಯ ಪ್ರವಾಹದಲ್ಲಿ ಅಘೋರ ಸುಮ್ಮನೆ ನಿಂತುಬಿಟ್ಟ. ಇತ್ತ ದಿಟ್ಟಿ ಹೊರಳಿಸಿ ಮದನ್ ಕೇಳಿದ "ಏನಪ್ಪಾ, ಸುಮ್ಮನೆ ನಿಂತು ಬಿಟ್ಟೆ?"

"ನೀವಿಬ್ಬರು ಇದ್ದೀರಲ್ಲಾ."

ಮಾತು ಕೇಳಿ ಮದನ್ ಅಣಕದ ದನಿಯಲ್ಲಿ ಅಂದ "ದೊರೆ ಮಗ ಕಣಯ್ಯಾ!"

ಕೆಲವು ನಿಮಿಷಗಳೊಳಗಾಗಿ ವೃದ್ಧೆ ವಿಧಿವಶಳಾದಳು. ಬಿಳಿಯ ಬಟ್ಟೆಯನ್ನು ಅವಳ ಮುಖದ ಮೇಲೆ ಎಳೆಯುವುದನ್ನು ನೋಡಿದ ಅಘೋರ ತಾಕ್ಷಣ ಅಲ್ಲಿಂದ ಹಿಂದಿರುಗಿದ.

ದಿನಚರಿ ಎಂದಿನಂತೆಯೇ ಸಾಗಿತ್ತು. ದಿನಗಳ ಗಾಲಿಯುರುಳಿ ಸೆಜ್ಜೆಯನ್ನು ಸೇರಿದಾಗ ಆಗು–ಹೋಗುಗಳ ಹಿತಾಹಿತವನ್ನು ಮೆಲಕು ಹಾಕುತ್ತಾ ನಿಶ್ಚಿಂತೆಯಿಂದ ನಿದ್ದೆ ಹೋಗುತಿದ್ದ ಅಘೋರ.

೦ ೦ ೦ ೦

ಈ ದಿನ ಆಪರೇರ್ಷ ಇರಲಿಲ್ಲವಾದುದರಿಂದ ಹೆಚ್ಚು ಕೆಲಸವಿರಲಿಲ್ಲ. ವಾರ್ಡಿಂದ ವಾರ್ಡಿಗೆ ಸುತ್ತು ಹಾಕಿ ಎಲ್ಲರನ್ನೂ ನೋಡಿಕೊಂಡು ದಿನಚರಿ ಯನ್ನು ಪೂರೈಸುವಾಗ ಹೊತ್ತು ಹನ್ನೆರಡರ ಅಂಚನ್ನು ದಾಟುವುದರಲ್ಲಿತ್ತು. ಅಘೋರ ಗೆಳೆಯರೊಂದಿಗೆ ಇನ್ನೇನು ಮನೆಯ ಹಾದಿ ಹಿಡಿಯುವುದರಲ್ಲಿದ್ದ. ಎಲ್ಲರೂ ಕಾರಿಡಾರನ್ನು ದಾಟಿ ಆಸ್ಪತ್ರೆಯ ಹೆಬ್ಬಾಗಿಲಿಗೆ ಬರುವಷ್ಟರಲ್ಲಿ ಸೇವಕಿಯೊಬ್ಬಳು ದಾಪುಗಾಲು ಹಾಕುತ್ತಾ ಓಡಿ ಬಂದು ಹೇಳಿದಳು "ಸುಮಿತ್ರ ಳಿಗೆ ತುಂಬ ಹೊಟ್ಟೆ ನೋವು!"

"ಯಾರು ಸುಮಿತ್ರ ?"

"ಎಂಟನೆಯ ವಾರ್ಡಿನಲ್ಲಿ ಕೆಲಸ ಮಾಡುವ ನರ್ಸ್."

"ತರುಣ ಡಾಕ್ಟರುಗಳು ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಅಘೋರ–"ನಡೆಯಿರಿ, ಹೋಗಿ ನೋಡಿಕೊಂಡು ಬರೋಣ.!"

ಯಾರೂ ಪ್ರತಿಯಾಡಲಿಲ್ಲ. ಸಾಲಾಗಿ ಎಲ್ಲರೂ ಹೆಜ್ಜೆ ಹಾಕಿದರು. ತೀವ್ರ ಹೊಟ್ಟೆ ನೋವಿನಿಂದ ತರುಣ ದಾದಿಯು ಹೊರಳಾಡುತ್ತಾ 'ಅಯ್ಯೋ, ಅಮ್ಮಾ!' ಎಂದು ನರಳುವ ದನಿಯಲ್ಲಿ ಚೀರುತ್ತಿದ್ದಳು. ಕಣ್ಣುಗಳಲ್ಲಿ ಕಂಬ ನಿಯ ಕೋಡಿ ಹರಿದಿದೆ. ಉಟ್ಟಿದ್ದ ಉಡುಪು ಅಸ್ತವ್ಯಸ್ತವಾಗಿತ್ತು. ಅಘೋರ ಒಳಬಂದವನೇ ಇನ್ನೊಬ್ಬ ದಾದಿಗೆ ಅಂದ "ಮೊದಲು ಅವಳ ಉಡುಪು ಸರಿಪಡಿಸು."

ಉಳಿದವರಾರೂ ಅವನ ಕಡೆ ಕಣ್ಣು ಹೊರಳಿಸಲಿಲ್ಲ. ಮೊದಲು ಮದನ್ ಪರೀಕ್ಷಿಸಿ ಹೇಳಿದ ಸ್ಟ್ರಾಂಗುಲೇಟೆಡ್ ಹರ್ನಿಯ. (Strangulated Hernia) ಅನಂತರ ಒಬ್ಬೊಬ್ಬರಾಗಿ ಎಲ್ಲರೂ ಪರೀಕ್ಷಿಸಿದರು. ಅದು ಸ್ಟ್ರಾಂಗುಲೇಟೆಡ್ ಹರ್ನಿಯ ಎಂಬುದು ಖಚಿತವಾದ ಮೇಲೆ ಈಗಲೇ ಆಪರೇಶನ್ ಮಾಡುವುದು ಕ್ಷೇಮವೆಂಬ ತೀರ್ಮಾನಕ್ಕೆ ಬಂದು

ಅಘೋರ ಕೇಳಿದ "ಈಗಲೇ ಆಪರೇಶನ್ ಮಾಡೋಣವೇ, ಸಿಸ್ಟರ್ ?"

"ಏನು ಹೇಳುತ್ತೀರಿ ?" ಮದನನ ಪ್ರಶ್ನೆ.

"ಏನಾದರೂ ಮಾಡಿ ಡಾಕ್ಟರ್. ನಾನು ನೋವನ್ನು ತಾಳಲಾರೆ."

ಅವಳು ಗೋಗರೆದಳು.

"ಹಾಗೆಂದರೆ ಹೇಗೆ ? ನಿಮ್ಮ ಖಚಿತ ಅಭಿಪ್ರಾಯ ಹೇಳಿ."

ಭಯ ದುಃಖ ಉದ್ವೇಗಗಳ ಒತ್ತಡದಿಂದ ಅವಳು ಗಳಗಳನೆ ಅತ್ತಳು.

"ಇದೇನು ಸಿಸ್ಟರ್ ? ನೀವು ಇದುವರೆವಿಗೆ ಎಷ್ಟು ಆಪರೇಶನ್ ನೋಡಿರಲಿಕ್ಕಿಲ್ಲ ? ಹೀಗಾದರೆ ಹೇಗೆ ?" ಸುಧೀರ್ ಸಮಾಧಾನ ಹೇಳಿದ.

ಅವಳ ಕಂಬನಿಯೇ ಉತ್ತರವಾಯಿತು.

"ನೀವು ಒಪ್ಪಿಗೆ ನೀಡಿದ ಹೊರತು ನಾವು ಆಪರೇಶನ್ ಮಾಡುವುದಿಲ್ಲ. ಸ್ಟ್ರಾಂಗುಲೇಟೆಡ್ ಹರ್ನಿಯ ಆದುದರಿಂದ ಇದು ಅಪಾಯಕರ." ಮದನ್ ವಿವರಿಸಿದ.

ಅಘೋರ ಅವಳ ಉತ್ತರವನ್ನು ನಿರೀಕ್ಷಿಸುತ್ತಾ ನಿಂತ.

ಅವಳು ಹೇಳಲಾರದೆ ಹೇಳಿದಳು "ಮಾಡಿರಿ." ಕಣ್ಣುಗಳಲ್ಲಿ ಭಯದ ಊಟೆಯೇ ಅಡಗಿತ್ತು. ಅವಳನ್ನು ಆಪರೇಷನ್ ಥಿಯೇಟರಿಗೆ ಕಳುಹಿಸಿಕೊಟ್ಟು ಡಾ|| ಭಾರ್ಗವಾರವರಿಗೆ ಟೆಲಿಫೋನ್ ಮಾಡಿ ಅಘೋರ ಹೇಳಿದ "ಸಾರ್, ಸ್ಟ್ರಾಂಗುಲೇಟೆಡ್ ಹರ್ನಿಯ. ನೀವಿದ್ದಿದ್ದರೆ ಒಳ್ಳೆಯದಿತ್ತು."

"ನಾನೀಗ ಬಹಳ ಆತುರದಲ್ಲಿದ್ದೇನೆ. ಕಮಲಾ ನೆಹ್ರೂ ಆಸ್ಪತ್ರೆಯಿಂದ ಕರೆ ಬಂದಿದೆ. ನೀವೇ ಮಾಡಿರಿ. ಪರವಾಯಿಲ್ಲ. ಹೇಗೂ ನಿನ್ನದು ಸುರಿತ ಕೈ. You carry on !"

ರಿಸೀವರ್ ಕೆಳಗಿಟ್ಟು ಅಘೋರ ಗೆಳೆಯರ ಕಡೆ ದಿಟ್ಟಿ ಹೊರಳಿಸಿದ. ಅವರೆಲ್ಲರೂ ಕುಲು ಕುಲು ನಗ ತೊಡಗಿದರು.

"ನಗುವಂತಾದ್ದು ಏನುಂಟು ?" ಅಘೋರ ತುಸು ಅಚ್ಚರಿಯಿಂದ ಕೇಳಿದ.

"ಹೋಗಲಿ ಬಿಡು, ನೀನೇ ಮಾಡು. ಹೇಗೂ ನಿನಗೆ ಬಿಟ್ಟಿದ್ದಾರೆ. ಅಂದಮೇಲೆ ಇನ್ನೇಕೆ ಯೋಚನೆ ?"

ಆದರೂ ನಗುವಿನ ಗುಲ್ಲು ಅಡಗಲಿಲ್ಲ. ಜಾನಕೀರಾಂ ನಗುತ್ತಾ ಹೇಳಿದ "ನಿನಗೆ ಹಾಗೇ ಆಗಬೇಕು!"

"ಅಂದರೆ?"

"ನೀನೇ ಊಹಿಸು."

"ನನಗೇನೂ ಅರ್ಥವಾಗಲಿಲ್ಲ."

"ಅಲ್ಲಪ್ಪಾ, ನಿನಗೆ ಸ್ವಲ್ಪವೂ ಕರುಣೆ ಬೇಡವೇ? ಅವಳು ನೋವಿನಿಂದ ಸಾಯುತ್ತಿದ್ದಾಳೆ. ನಿನಗೆ ಅವಳ ಬಟ್ಟೆಯ ಮೇಲೆ ಕಣ್ಣು! ಒಂದಿಷ್ಟು ಅತ್ತಿತ್ತಾದರೆ ನಿನಗಾದ ನಷ್ಟವೇನು?"

"ಸರಿ, ಸರಿ. ಮೊದಲೇ ಬಿಗಿಯುಡುಪು! ಅವರಿಗೇನು? ಇದೇ ಒಂದು ಸಮಯವೆಂದು ಮೈಯನ್ನೇ ಪ್ರದರ್ಶನಕಿಟ್ಟಾರು!"

"ಶಾಂತಂ! ಪಾಪಂ!"

"ಪಾಪವೋ ಪುಣ್ಯವೋ ನನ್ನ ಕರ್ತವ್ಯದಲ್ಲಿ ನಾನು ಲೋಪ ಮಾಡಿಕೊಳ್ಳಲಾರೆ.".

"ಸತ್ಯವೇ ಆಗಿದ್ದರೂ ಪ್ರಿಯವಾಗಿ ವರ್ತಿಸು ಅಘೋರ್."

ಅಘೋರ ಮರು ಮಾತಾಡದೆ ಆಪರೇಶನ್ ಥಿಯೇಟರಿನ ಕಡೆ ಎಲ್ಲರೊಂದಿಗೆ ಹೆಜ್ಜೆ ಹಾಕಿದ. ಆಪರೇಶನ್ನಿಗೆ ಎಲ್ಲ ತಯಾರಿಯೂ ನಡೆದಿತ್ತು. ಅಘೋರ ಇಂಜಕ್ಷನ್ ಚುಚ್ಚುತ್ತಿದ್ದಾಗ ಅವಳು ಇನ್ನಷ್ಟು ಚೀರುದನಿಯಲ್ಲಿ ನರಳಿದರೂ ಅದನ್ನು ಗಮನಿಸದೆ ನಳಿಕೆಯನ್ನು ಒತ್ತಿದ....ಇವಳಿಂದಾಗಿಯೇ ನಾನು ನಗೆಪಾಟಲಿಗೊಳಗಾದೆನೆಂಬ ಕೋಪವಿತ್ತೋ ಏನೋ!

ಭಯ ವಿಹ್ವಲೆಯಾದ ಅವಳು ತೋಳನ್ನು ಹಿಡಿದುಕೊಂಡು "ಡಾಕ್ಟರೇ ನನ್ನನ್ನು ಸಾಯಿಸಬೇಡಿರಿ." ಎಂದು ಅಂಗಲಾಚಿದಳು. ಕೆಂಪು ಕೆಂಪಾದ ಕಣ್ಣುಗಳಲ್ಲಿ ಕಂಬನಿಗಳುಕ್ಕಿದುವು.

"ಇಲ್ಲಮ್ಮಾ. ಖಂಡಿತಾ ಸಾಯಿಸುವುದಿಲ್ಲ. ರತನ್ ಮದನ್ ಸುಧೀರ್ ಜಾನಕೀರಾಂ ಅವರುಗಳಿದ್ದಾರೆ. ಅವರೆಲ್ಲಾ ನಿನ್ನ ಸಲುವಾಗಿಯೇ ಬಂದಿದ್ದಾರೆ! ಇಷ್ಟೊಂದು ಜನ ಡಾಕ್ಟರುಗಳ ನಡುವೆ ನೀನು ಸಾಯುವುದಾದರೂ ಹೇಗೆ? ಸ್ವಲ್ಪ ಧೈರ್ಯ ತಂದುಕೊ." ಎಂದ ಅಘೋರ.

ಅವಳು ಪುನಃ ಬಿಕ್ಕಿದಳು.

"ಸಿಸ್ಟರ್, ಹೀಗಾದರೆ ಹೇಗೆ?" ಮದನ್ ಸಾಂತ್ವನಗೈಯುವ ದನಿಯಲ್ಲಿ ಕೇಳಿದ.

"ಡಾಕ್ಟರ್!..." ಮುಂದೆ ಮಾತು ಹೊರಡದೆ ಮುಸುಮುಸು ಅತ್ತಳು ಅವಳು.

ಮದನ್ ಅವಳ ಹಣೆಯ ಮೇಲೆ ಕೈಯಿಟ್ಟು-"ನೀವು ಧೈರ್ಯವಾಗಿರಿ ಸಿಸ್ಟರ್."

ಅಘೋರ ಮದನನ ಕೈಕಡೆ ದಿಟ್ಟಿ ಹೊರಳಿಸಿ ನಸುನಕ್ಕು-"ಪರವಾಗಿಲ್ಲ ನಿನ್ನ ಅಮೃತ ಹಸ್ತದ ಸ್ಪರ್ಶದಿಂದ ಎಂತಹ ನೋವಾದರೂ ಪರಿಹಾರವಾದೀತು. ಇನ್ನು ಸುಮಿತ್ರ ಸರಿಹೋಗುತ್ತಾರೆ."

ಇನ್ನಷ್ಟು ಹೊತ್ತಿನೊಳಗಾಗಿ ಆಪರೇಶ‌ನ್ ಆರಂಭವಾಯಿತು. ಎಲ್ಲರ ಸಹಕಾರ ಹಸ್ತಗಳೂ ಮುಂದಾದುವು. ಅಘೋರ ಆಪರೇಶನ್ ತಾನೇ ಕೈಕೊಂಡ. ಬಿಳಿದೊಗಲಿನ ಹುಡುಗಿ ಯಾವ ಅರಿವೂ ಇಲ್ಲದೆ ಮೇಜಿನ ಮೇಲೆ ಮಲಗಿದ್ದಳು. ನೆತ್ತರು ಸೂಸುವ ನರವನ್ನು ಹಿಡಿದು ಕಟ್ಟುತ್ತ ಅಘೋರ ನುಡಿದ-"ನಿನ್ನೆ ರಮೇಶನ ಅಣ್ಣ ಮನೆಗೆ ಬಂದಿದ್ದ ಮದನ್."

"ಏಕೆ?"

"ಅವನು ನಾನು ಅವನ ಪರವಾಗಿ ಸಾಕ್ಷಿ ಹೇಳಿ ಅವನನ್ನು ಉಳಿಸಿದ್ದೇನೆ ಎಂಬ ಭಾವನೆ ಇಟ್ಟುಕೊಂಡಿದ್ದಾನೆ. ನಿನ್ನೆ ನೂರು ರೂಪಾಯಿ ತಂದು ಮುಂದಿಟ್ಟ. ನಾನು ಮುಟ್ಟದೆ ಹೇಳಿದೆ "ನಾನು ನನ್ನ ಕರ್ತವ್ಯ ನಿರ್ವಹಿಸಿದ್ದೇನೆಯೋ ಹೊರತು ಯಾರ ಪರವಾಗಿಯೂ ಹೇಳಲಿಲ್ಲ."

"ಏನೇ ಇರಲಿ, ನೀವಿದನ್ನು ತೆಗೆದುಕೊಳ್ಳಬೇಕು."

"ದಯಮಾಡಿ ಕ್ಷಮಿಸಿರಿ."

"ಏನೂ ತಿಳಿದುಕೊಳ್ಳಬೇಡಿರಿ." ಅವರು ಅಂಗಲಾಚಿದರು.

"ನೀವು ಹೋಗದಿದ್ದರೆ ಸರಕಾರಕ್ಕೆ ರಿಪೋರ್ಟ್ ಮಾಡಬೇಕಾದೀತು." ಎಂದು ನಿಷ್ಠುರನಾಗಿಯೇ ಹೇಳಬೇಕಾಯಿತು."

"ಪಾಪ, ಅವರ ಪರವಾಗಿ ನೀನು ವಾದಿಸಿದ್ದೀಯೆಂದು ತಿಳಿದರೋ ಏನೋ."

"ಅದು ಆದುದೇ ಹಾಗೆ!"

"ಪಾಪ, ಅವರೇನೋ ವಿಶ್ವಾಸದಿಂದ ತಂದಿದ್ದರು. ಅನಂತರ ನನಗೇನೆ 'ಪಾಪ' ಎನ್ನಿಸಿತು"

"ಹಿಂದೂಸ್ಥಾನದಲ್ಲಿ ಈಗೀಗ ಕಾರ್ಯಾಕಾರ್ಯಗಳಿಗೆ ತಾರತಮ್ಯವಿಲ್ಲ."

"ಯಾರಿಗೆ ಗೊತ್ತು? ಬೇಕಾಗಿಯೇ ತಂದಿದ್ದರೂ ಇರಬಹುದು."

"ನಿಜ, ಜಾರ್ಜ! ಇರಲಿಕ್ಕೂ ಸಾಕು"

ಆಪರೇಶನ್ ಮುಗಿಸಿ ಗೆಳೆಯರು ಆಸ್ಪತ್ರೆಯ ಆವರಣವನ್ನು ದಾಟಿ ರಸ್ತೆಗೆ ಕಾಲಿಟ್ಟರು. ಅತ್ಯಂತ ಗಡಿಬಿಡಿಯಿಂದ ಕೂಡಿದ್ದ ವಾತಾವರಣ ಮನಸ್ಸಿಗೆ ಜಿಗುಪ್ಸೆ ಮೂಡುವಂತಿತ್ತು. ಹಣೆಯ ಮೇಲಿನ ಬೆವರಿನ ತುಂತುರು ಹನಿಗಳನ್ನು ಒರಿಸಿಕೊಳ್ಳುತ್ತಾ ಅಘೋರ ಹೇಳಿದ "ಎಷ್ಟೇ ರೋಗರುಜಿನಗಳಿರಲಿ, ಕೂಗು ಚೀರಾಟಗಳಿರಲಿ, ಸಾವು ನೋವುಗಳಿರಲಿ ಈ ಯಂತ್ರಯುಗದಲ್ಲಿನ ಗಲಾಟೆ ಗಡಿಬಿಡಿಗಳಿಗಿಂತ ಆಸ್ಪತ್ರೆಯ ವಾತಾವರಣವೇ ಮೇಲು."

"ಕೂಡಿದವನಿಗೆ ಕೋಡುಗ ಮುದ್ದು."

"ನಿಜ ; ನಿಜ."

"ಎಲ್ಲರಿಗೂ ಅವರವರ ಉದ್ಯೋಗ ಹಿತವೆನಿಸೀತು."

"ಆದರೂ, ಇದೊಂದು ರೀತಿಯಲ್ಲಿ ಮನಸ್ಸಿಗೆ ಶಾಂತಿ ಸಮಾಧಾನಗಳನ್ನು ನೀಡುವ ಸೇವೆ."

"ಅಕ್ಷರಶಃ ಸತ್ಯ."

ದಾರಿ ಸಾಗುತಿತ್ತು. ಹಿರಿಯರಿಲ್ಲದೆ ತಾವೇ ಆಪರೇಶನ್ ಮಾಡಿ ದಿಗ್ವಿಜಯ ಸಾಧಿಸಿದ ತರುಣ ವೃಂದ ಮೈಯೆಲ್ಲಾ ಹರ್ಷದ ಮನೆಯಾಗಿ ಸಾಲಾಗಿ ಹೆಜ್ಜೆ ಹಾಕಿದರು. ರತನ್‌ಮಿಶ್ರ ಉತ್ಸಾಹದಿಂದ ನುಡಿದ "ನಾನು ಹಾರ್ಟ್ ಸ್ಪೆಷಲೈಜ್ (Heart Specialise) ಮಾಡುವೆ."

ಅಘೋರ ಸ್ಥಿರಭಾವದಿಂದ ಅಂದ "ನಾನೂ ಮತ್ತು ಮದನ್ ಎಲ್ಲಿದ್ದರೂ ಸರ್ಜರಿ (Surgery) ಭಕ್ತರು."

ಮದನ್ ನಕ್ಕು ಅನುಮೋದಿಸಿದ. ಮುಖದಲ್ಲಿ ಮಂದಹಾಸ ನಲಿಯಿತು.

ನನ್ನದು ಥೊರಾಸಿಕ್ ಸರ್ಜರಿ (Thorasic Surgery)" ಎಂದ ಸುಧೀರ್.

"ನನ್ನದು ಗೈನಕಾಲಜಿ." (Gynaecology)

ಜಾನಕೀರಾಮನ ದನಿ ಹೊರಬಿತ್ತೊ ಇಲ್ಲವೋ ಅಘೋರ ಗಟ್ಟಿಯಾಗಿ ನಕ್ಕು ನುಡಿದ "ಸುಮಿತ್ರಳ ಬಿಳಿದೊಗಲು ನಿನ್ನನ್ನು ಬಹಳವಾಗಿ ಆಕರ್ಷಿಸಿರ ಬೇಕು !"

ಒಡನೆ ಎಲ್ಲರ ಮುಖದಲ್ಲೂ ನಗು ಒಡೆದು ಮೂಡಿತು.

"ಥೂ ! ಎಂಥಹ ತುಂಟನೋ ನೀನು !" ಎಂದ ಜಾನಕೀರಾಂ ಎದು ರಿಸಿದರೂ ಎಲ್ಲರ ನಗೆಯೊಂದಿಗೆ ತಾನೂ ಪಾಲ್ಗೊಂಡ.

ಮರದ ಮೇಲೆ ಕಾಗೆಗಳು ಒಂದೇ ಸಮನೆ ಅರಚಿಕೊಳ್ಳುತ್ತಿದ್ದುವು. ಅಘೋರ ಕತ್ತೆತ್ತಿ ನೋಡದೆ ಮುಂದುವರಿದ. ಮುಂದಿನ ಕವಲು ಹಾದಿ ಗಳಲ್ಲಿ ಒಬ್ಬೊಬ್ಬರಾಗಿ ಎಲ್ಲ ಗೆಳೆಯರೂ ಅಗಲಿ ಹೋದರು. ಅಘೋರ ಹಾಗೇ ಯೋಚಿಸಿದ. ಸರ್ಜರಿ ತೆಗದುಕೊಂಡರೆ ಧ್ಯೇಯ ಸಾಧನೆ ಹೇಗೆ ? ......ಹೇಗೆ ? ?

"ಆದಂತಾಗಲಿ ಸರ್ಜರಿ ಬಿಟ್ಟು ಬೇರೆ ಪ್ರಶ್ನೆಯೇ ಇಲ್ಲ." ಮನಸ್ಸು ಧೃಡವಾಗಿ ಹೇಳಿತು.

"ಮನವೊಪ್ಪದ ಯಾವುದೇ ಕೆಲಸ ಕೈಕೊಳ್ಳಬೇಡ ಮಗೂ." ನಲ್ಮೆ ಯಿಂದ ಹಿತವಾದ ನುಡಿಯಿತು ಅಂತರಾತ್ಮ.

ಅಘೋರ ಸಮಾಧಾನದಿಂದ ಹೆಜ್ಜೆ ಹಾಕಿದ.

ಅಧ್ಯಾಯ
೧೩

ಹೊತ್ತು ಹತ್ತೂವರೆ ಹನ್ನೊಂದರ ಸಮಯ. ಬೆಳಗಿನಿಂದ ಒಂದೇ ಸಮನೆ ಕೆಲಸ ಮಾಡಿದ ತರುಣ ಡಾಕ್ಟರುಗಳಿಗೆ ಕಾಫಿಯ ಗೀಳು ಹಿಡಿದಿತ್ತು. ಅಘೋರ ಗೆಳೆಯರೊಂದಿಗೆ ಹೊರಟ. ತನ್ನ ಮದುವೆಯ ಸಲುವಾಗಿ ರಜೆ ತೆಗೆದುಕೊಂಡಿದ್ದ ಜಾನಕೀರಾಂ ತಂಡದಿಂದ ದೂರವಾಗಿದ್ದ. ಉಳಿದ ನಾಲ್ವರೂ ಕಾಫಿ ಮನೆಯತ್ತ ಬಿರುಬಿರನೆ ಹೆಜ್ಜೆ ಹಾಕಿದರು.

ಕ್ಯಾಂಟೀನಿನಲ್ಲಿ ಎಲ್ಲರೂ ಮೇಜಿನ ಸುತ್ತ ಕುಳಿತು ಅತ್ತ ಕಣ್ಣು ಹೊರಳಿಸಿದರೆ ಡಾ|| ಸೌಮಾ ಒಬ್ಬಳೇ ಕುಳಿತಿದ್ದಾಳೆ. ನಗುಮುಖದಿಂದ ತಲೆ ತಗ್ಗಿಸಿ ಕಾಫಿ ಹೀರುತಿದ್ದ ಅವಳನ್ನು ಎಲ್ಲರೂ ಅಚ್ಚರಿಯಿಂದ ನಿಟ್ಟಿಸಿದರು. ಅವಳೆಂದೂ ಒಬ್ಬಳೇ ಬಂದುದಿಲ್ಲ. ಇಂದು ಹೀಗೇಕೆ ? ಎಂಬ ಪ್ರಶ್ನೆ ಎಲ್ಲರ ಮನದಲ್ಲೂ ಎದ್ದಿತು. ಮದನ್ ನಗುಮುಖದಿಂದ ಕೇಳಿದ "ಇಂದೇನು ? ಒಬ್ಬರೇ ಬಂದಿದ್ದೀರಲ್ಲಾ ?"

"ನಾನೂ ಶಾರದಾ ಬರಬೇಕೆಂದಿದ್ದೆವು. ಕೊನೆಗಳಿಗೆಯಲ್ಲಿ ಮೈ ಚೆನ್ನಾಗಿಲ್ಲ ಎಂದಳು ಅವಳು. ನನಗೇನೊ ಚಹ ಬೇಕಾಗಿತ್ತು ಬಂದು ಬಿಟ್ಟೆ."

"ಅಲ್ಲೇಕೆ ಒಬ್ಬರೇ ಕುಳಿತಿದ್ದೀರಿ ? ಇಲ್ಲೇ ಬಂದುಬಿಡಿ."

ಅಘೋರ ತುಸು ಸರಿದು ದಾರಿ ಮಾಡಿಕೊಟ್ಟ. ಅವಳು ಅಲ್ಲಿಂದ ಎದ್ದು ಬಂದು ಕುಳಿತುಕೊಂಡು ನುಡಿದಳು "ನಿಮ್ಮ ಕೂಟ ಅಂಕಲ್ ಜಾರ್ಜ್ ಇಲ್ಲದೆ ಏನೋ ಒಂದು ಬಗೆಯೆನ್ನಿಸುತ್ತೆ."

"ಓ ಮರೆತೇ ಹೋಗಿತ್ತು." ಎಂದವನೇ ಅಘೋರ ಜ್ಞಾಪಿಸಿಕೊಂಡವನಂತೆ—"ನಾವು ಜಾನಕೀರಾಮನಿಗಾಗಿ ಏನಾದರೂ ಒಳ್ಳೆಯ ಉಡುಗೊರೆ ಕೊಡಬೇಕು. ಏನು ತೆಗೆಯಬೇಕೋ ತಿಳಿಯದು. ನೀವು ಸ್ವಲ್ಪ ಸಹಾಯ ಮಾಡಬಲ್ಲಿರಾ ?"

"ನೀವೆಂದು ಪೇಟೆಗೆ ಹೋಗುವಿರಿ ಡಾಕ್ಟರ್ ?"

"ಇಂದಾದರೂ ಸರಿಯೆ ; ಅಥವಾ ನಾಳೆಯಾದರೂ ಸರಿಯೆ."

"ಏನು ಕೊಡೋಣ ಹೇಳಿರಿ."

"ಯಾವುದಾದರೂ ಒಳ್ಳೆಯ ಉಪಯೋಗಕರ ವಸ್ತುವಾದರೆ ಒಳ್ಳೆಯ ದಲ್ಲವೇ ಡಾಕ್ಟರ್ ?"

"ವಾಸ್ತವ, ಡಾಕ್ಟರ್."

ಕಾಫಿಯನ್ನು ಮುಗಿಸಿ ಎಲ್ಲರೂ ಸಾಲಾಗಿ ಹೊರಟರು. "ಮೂರನೆಯ ವಾರ್ಡಿನಲ್ಲಿದ್ದ ವಿಜಯ್ ಸೇನ್ ಈಗಷ್ಟೆ ಹೋಗಿ ಬಿಟ್ಟರು. ನಿಮಗದು ಗೊತ್ತೆ ?" ಎಂದಳು ಸೌಮಾ.

"ನಿಜವೇ, ಡಾಕ್ಟರ್ ?" ಕಣ್ಣರಳಿಸಿ ಕೇಳಿದ ಸುಧೀರ್.

"ಓ ! ನಿಮಗೆ ಗೊತ್ತೇಯಿಲ್ಲವೇ ? ಪಾಪ, ಮೂರು ತಿಂಗಳಿನಿಂದ ತೊಂದರೆಪಡುತಿದ್ದರು. ಡಾ|| ಆದಿಶೇಷ್ ಆವರಿಗಾಗಿ ತುಂಬ ಶ್ರಮ ತೆಗೆದು ಕೊಂಡಿದ್ದಾರೆ."

ನಿನ್ನೆ ಸಂಜೆ ನೋಡಿದ್ದೆ. ಕಾರಿಡಾರಿನಲ್ಲಿ ಓಡಾಡುತಿದ್ದರು." ಎಂದ ರತನ್.

"ವಯಸ್ಸಾಗಿತ್ತು. ಜೊತೆಗೆ ಬೊಜ್ಜು ಶರೀರ ಬೇರೆ. ಒಂದಲ್ಲ ಒಂದು ದಿನ ಹೇಳದೆ ಕೇಳದೆ ಹೋಗುತ್ತಾನೆಂಬುದು ಡಾ|| ಆದಿಶೇಷ್‌ರವರಿಗೂ ತಿಳಿದಿತ್ತು."

"ಆದರೂ, ಡಾಕ್ಟರು ತುಂಬ ಶ್ರಮ ತೆಗೆದುಕೊಂಡಿದ್ದಾರೆ."

"ವ್ಯರ್ಥ ಸಾಹಸ !" ಎಂದ ಅಘೋರ. ಮುಖದಲ್ಲಿ ತುಂಟತನ ನಲಿ ಯುತಿತ್ತು.

"ಹಾಗೆಂದರಾಗುತ್ತದೆಯೆ ಡಾಕ್ಟರ್ ! ನಮ್ಮಿಂದಾದಷ್ಟು ಪ್ರಯತ್ನ ಪಡುವುದು ನಮ್ಮ ಧರ್ಮ."

ಸೌಮಳ ಇನಿದನಿಯು ಅನುಕಂಪದ ಮೂಸೆಯಿಂದ ಹೊರಬಿತ್ತು.

ಅಘೋರ ಮಾತಾಡಲಿಲ್ಲ ; ಯೋಚಿಸುತ್ತಾ ಹೆಜ್ಜೆ ಹಾಕಿದ...ಬದುಕು ಸಾವುಗಳು ನಮ್ಮ ಕೈಯಲಿಲ್ಲ : ಯೋಚಿಸುತ್ತಾ ಹೆಜ್ಜೆ ಹಾಕಿದ....ಬದುಕು ಆಯಸ್ಸು ಮುಗಿದಾಗ ನಮ್ಮ ಹೋರಾಟವೆಲ್ಲಾ ಗಾಳಿಯಲ್ಲಿ ಜೊಳ್ಳು ತೂರಿ ದಂತಾಗುತ್ತದೆ. ತಿಳಿದೂ ತಿಳಿದೂ ಈ ವ್ಯರ್ಥ ಸಾಹಸದಿಂದೇನು ಪ್ರಯೋಜನ?

ಅನ್ಯಥಾ ಕಾಲಹರಣವಷ್ಟೇ ಅಲ್ಲ ; ನಮ್ಮ ಆಯುರಾರೋಗ್ಯವೂ ನಷ್ಟ... ಆಸ್ಪತ್ರೆಯ ಆವರಣಕ್ಕೆ ಕಾಲಿಡುತ್ತಲೂ ಯೋಚನೆ ತುಂಡರಿದು ಕರ್ತವ್ಯದ ಕಡೆ ಮನಸ್ಸು ಹೊರಳಿತು. ದಡದಡನೆ ಮೆಟ್ಟಿಲು ಹತ್ತುತ್ತಿರುವಾಗಲೇ ಟ್ಯಾಕ್ಸಿಯೊಂದು ಬಾಗಿಲಿಗೆ ಬಂದು ನಿಂತಿತು. ಅದರೊಳಗಿಂದ ಮೂರ್ಛೆ ಹೋಗಿದ್ದ ಇಳಿವಯಸ್ಸಿನ ವ್ಯಕ್ತಿಯೊಂದನ್ನು ಹೊತ್ತು ತಂದರು. ವಾಹನ ವೊಂದಕ್ಕೆ ಸಿಕ್ಕಿ ಕಾಲು ಮುರಿದು ಮೈ ನೆತ್ತರಿನಿಂದ ತೊಯ್ದಿತ್ತು. ನೋಡು ನೋಡುತ್ತಾ ಅಘೋರ ಅಲ್ಲಿ ನಿಲ್ಲದೆ ಹೊರಟುಹೋದ. ಉಳಿದ ತರುಣ ಡಾಕ್ಟರುಗಳು ಒಬ್ಬರ ಮುಖ ಒಬ್ಬರು ನೋಡಿಕೊಂಡರು.

೦ ೦ ೦ ೦

ಡಾಕ್ಟರ ಸಂಕೇತವಾದ ಸ್ಟೆತಸ್ಕೋಪಿನ ಹಾರವನ್ನೂ ಬಿಳಿಯ ಕೋಟನ್ನೂ ಬದಿಗೊತ್ತಿ ತರುಣ ಡಾಕ್ಟರ ತಂಡ ಪೇಟೆಯನ್ನು ಹೊಕ್ಕಿತು. ಹೆಜ್ಜೆಯಿಡಲೂ ತಾವಿಲ್ಲದಷ್ಟು ಜನಸಂದಣಿಯಿಂದ ತುಂಬಿ ವಾತಾವರಣ ಗಡಿಬಿಡಿಯಿಂದ ಕೂಡಿತ್ತು. ಫುಟ್‌ಪಾತಿನ ಮೇಲೆ ಸಾಲಾಗಿ ಹೆಜ್ಜೆ ಹಾಕಲು ತಾವಿಲ್ಲದೆ ಎಲ್ಲರೂ ಹಿಂದು ಮುಂದಾದರು. ಅಘೋರನ ಭುಜದ ಮೇಲೆ ಕೈಯಿಟ್ಟು ಮದನ್ ನಕ್ಕು ನುಡಿದ "ಮುಂದಿನ ಪೀಳಿಗೆಯ ಸೂಚಕವಾಗಿ ಒಂದು ಬೊಂಬೆ ಹಾಕೋಣವೇ ?"

ಎಲ್ಲರ ಮುಖದಲ್ಲೂ ನಸುನಗು ಮೂಡಿತು. ಯಾರೂ ಸಲಹೆಯನ್ನು ಅನುಮೋದಿಸಲಿಲ್ಲ.

"ಒಂದು ಪೆನ್ನು ಕೊಟ್ಟರೆ ?" ಎಂದ ಸುಧೀರ್

"ಪೆನ್ನು ಹೇಗೂ ಇದ್ದೇ ಇರುತ್ತೆ." ಸೌಮ್ಯಾ ಇದ್ದ ವಿಷಯವನ್ನು ಮುಂದಿಟ್ಟಳು.

"ಹಾಗಿದ್ದರೆ ಏನು ಕೊಡೋಣ ಹೇಳಿರಿ."

"ನಾವಿನ್ನೂ ಯೋಚಿಸುವುದರಲ್ಲೇ ಇದ್ದೇವೆ."

"ನಾವು ಲೇಡಿ ಡಾಕ್ಟರನ್ನು ಕರೆ ತಂದುದು ವ್ಯರ್ಥ. ಇದುವರೆವಿಗೂ ನಿಮ್ಮಿಂದ ಯಾವ ಸಲಹೆಯೂ ಬರಲಿಲ್ಲವಲ್ಲಾ ?"

"ಅಂಗಡಿಗೆ ಹೋದ ಮೇಲೆ ಅದೆಲ್ಲಾ. ಈಗಲೇ ಏಕೆ ?"

ಎಲ್ಲರೂ ಇಪ್ಪತ್ತೈದರಿಂದ ಮೂವತ್ತು ರೂಪಾಯಿಗಳವರೆವಿಗೆ ಖರ್ಚು ಮಾಡಲು ತಯಾರಿದ್ದರು. ಏನು ಕೊಡುವುದು ? ಎಂಬುದು ಮಾತ್ರ ಇನ್ನೂ ಪ್ರಶ್ನೆಯಾಗಿಯೇ ಉಳಿದಿತ್ತು. ಆದರಿಂದಾಗಿಯೇ ಸೌಮಾಳನ್ನು ಮುಂದಿಟ್ಟು ಕೊಂಡು ಎಲ್ಲರೂ ಹೊರಟಿದ್ದರು. ಎದುರಿಗಿದ್ದ ಗೃಹೋಪಕರಣಗಳ ಅಂಗಡಿಯನ್ನು ಹೊಕ್ಕಿದಳು ಸೌಮಾ. ಮರುಮಾತಿಲ್ಲದೆ ಅವಳನ್ನು ಹಿಂಬಾಲಿ ಸಿತು ತರುಣ ವೃಂದ. ಸೌಮಾ ಒಂದೊಂದೂ ಸಾಮಾನನ್ನು ಗಮನಿಸುತ್ತಾ ಒಂದೆಡೆ ಒಂದು ಡರ್ಜ ಕಪ್ಪು ಸಾಸರುಗಳನ್ನು ಆರಿಸಿ ತೆಗೆದಿಟ್ಟಳು. ಇನ್ನೊಬ್ಬರಿಗೆ ಸೊಗಸಾದ ಹೂದಾನಿ ಮತ್ತು ಟ್ರೇ ಆರಿಸಿಟ್ಟಳು. ಮಗ ದೊಬ್ಬರಿಗೆ ಟೀ ಸೆಟ್ಟು ಇನ್ನೊಬ್ಬರಿಗೆ ಸೊಗಸಾದ ಊಟದ ತಟ್ಟೆ ಬಟ್ಟಲು ಗಳನ್ನು ಆರಿಸಿದಳು. ಎಲ್ಲವನ್ನೂ ನೋಡಿ ಹುಡುಗರು ತಲೆದೂಗಿದರು. ಮದನ್ ಕೇಳಿದ "ನೀವೇನು ತೆಗೆದುಕೊಳ್ಳುತ್ತೀರಿ ?"

"ನಿಮ್ಮಗಳಿಗೆ ನಾನು ಆರಿಸಿದ್ದೇನೆ. ನನಗಾಗಿ ನೀವು ಆರಿಸಿರಿ" ಎಂದಳು ಸೌಮಾ. ತುಂಬು ಗಲ್ಲದ ಮೇಲೆ ಎಳೆನಗು ನಲಿಯುತಿತ್ತು.

ಎಲ್ಲರ ದಿಟ್ಟಿಯೂ ತೆಗೆದಿಟ್ಟ ಸಾಮಾನುಗಳ ಕಡೆ ಹೊರಳಿತು. ಇನ್ನೇನು ಕೊಳ್ಳಬೇಕೋ ತಿಳಿಯದೆ ಹುಡುಗರು ಒಂದೊಂದಾಗಿ ಯಾವುಯಾವುದೋ ಸಾಮಾನುಗಳನ್ನು ತೋರಿದಾಗ ಸೌಮಾಳಿಗೆ ಎಲ್ಲಿಲ್ಲದ ನಗು ಮೂಡಿತು. ಅವಳೆಂದಳು "ನಾವೀಗ ಆರಿಸಿರುವುದು ಡಿನ್ನರ್ ಟೇಬಲ್ ಸೆಟ್. ನೀರಿನ ದಾನಿ ಮತ್ತು ಲೋಟಗಳನ್ನು ನಾವಿನ್ನೂ ಆರಿಸಿರಲಿಲ್ಲ. ಅದನ್ನು ನಾನು ತೆಗೆದುಕೊಳ್ಳುವೆ."

ಅವಳ ಬುದ್ಧಿವಂತಿಕೆಯನ್ನು ಮೆಚ್ಚಿ ಎಲ್ಲರೂ ತಲೆದೂಗಿದರು. ಎಲ್ಲ ವನ್ನೂ ಆರಿಸಿಕೊಂಡು ಮುಗಿಯುವಷ್ಟರಲ್ಲಿ ಕಪ್ಪು ಕವಿಯತೊಡಗಿತು. ಟ್ಯಾಕ್ಸಿ ಮಾಡಿಕೊಂಡು ಎಲ್ಲರೂ ಹೊರಟರು. ಡಾ|| ಸೌಮಾ ಬೇಡಿಕೆಯ ದನಿಯಲ್ಲಿ ಕೇಳಿದಳು "ದಯಮಾಡಿ ನನ್ನನ್ನು ಮೊದಲು ಮನೆಗೆ ತಲುಪಿಸಿರಿ."

"ಓಹೋ ! ಅಷ್ಟೂ ಮಾಡದಿದ್ದರೆ ಹೇಗೆ ?" ಎಂದ ಅಘೋರ.

ಟ್ಯಾಕ್ಸಿ ಸೌಮಾಳ ಮನೆಯ ಮುಂದೆ ನಿಂತಾಗ ಅವಳ ತಾಯಿ ಕಾಯುತ್ತಾ ನಿಂತುದು ಕಾಣಬಂತು. ಅಘೋರನಿಗೆ ತಕ್ಷಣ ತನ್ನ ತಾಯಿಯ ಚಿತ್ರ ಚಿತ್ತಭಿತ್ತಿಯಲ್ಲಿ ಸುಳಿದಳಿಯಿತು. "ಕತ್ತಲಾದುದರಿಂದ ಅಮ್ಮನಿಗೆ

ಗಾಬರಿಯಾಗಿದೆ." ಎನ್ನುತ್ತಾ ಸೌಮಾ ಟ್ಯಾಕ್ಸಿಯಿಂದ ಇಳಿದಳು. ಹಿಂದೆಯೇ ಡಾಕ್ಟರುಗಳೆಲ್ಲಾ ಬುದು ಬುದು ಇಳಿದರು. ಸೌಮಾಳ ಸಾಮಾನನ್ನು ಮದನ್ ತೆಗೆದುಕೊಟ್ಟ. ಅವನ್ನು ತೆಗೆದುಕೊಳ್ಳುತ್ತಾ ಸೌಮಾ ನುಡಿದಳು "ದಯಮಾಡಿ ಅಮ್ಮನ ಪರಿಚಯ ಮಾಡಿಕೊಂಡು ಹೋಗಿರಿ."

ಎಲ್ಲರೂ ಒಪ್ಪಿ ಸಂತಸದಿಂದ ಅವಳ ಹಿಂದೆ ಹೋದರು. ಸೌಮಳ ತಾಯಿ ಅವರನ್ನು ಆದರದಿಂದ ಬರಮಾಡಿಕೊಂಡಳು. ಅಂದವಾಗಿ ಅಲಂಕರಿಸಿದ ದಿವಾನಖಾನೆಯಲ್ಲಿ ಎಲ್ಲರೂ ಕುಳಿತುಕೊಂಡರು. ಗಾಳಿ ಸವಾರಿಗೆ ಹೋಗಿದ್ದ ಸೌಮಳ ತಂದೆ ಇನ್ನೂ ಹಿಂದಿರುಗಿರಲಿಲ್ಲ. ಅತಿಥಿಗಳಿಗೆ ತಿಂಡಿ ತಿನಿಸುಗಳನ್ನು ತರಲು ಸೌಮಾ ಒಳಗಡೆ ಹೋದಳು.

ಮದನ್ ಸೌಮಳ ತಾಯಿಯೊಂದಿಗೆ ಮಾತನಾಡುತ್ತಾ–"ನಿಮ್ಮ ಡಾಕ್ಟರು ಹೊತ್ತಿಗೆ ಸರಿಯಾಗಿ ಹಿಂದಿರುಗದಿದ್ದುದು ನಿಮಗೆ ಗಾಬರಿಯುಂಟು ಮಾಡಿತ್ತೇನೋ."

"ಹಾಗೇನಿಲ್ಲ. ಆದರೂ..." ಮಾತು ಅಷ್ಟಕ್ಕೆ ಮೊಟಕಾಯಿತು.

"ನಾವೇ ಅವರನ್ನು ಅಂಗಡಿಗೆ ಕರೆದುಕೊಂಡು ಹೋದೆವು. ನನ್ನ ಗೆಳೆಯನಿಗೆ ಮದುವೆ. ಅವನಿಗಾಗಿ ಉಡುಗೊರೆ ಕೊಳ್ಳುವುದಿತ್ತು."

"ಹಾಗೇನು ?" ಎಂದ ತಾಯಿ ತುಸು ತಡೆದು ಪುನಃ-"ಇಂದು ಆಸ್ಪತ್ರೆಯಿಲ್ಲೇ ಹೊತ್ತಾಗಿರಬಹುದು ಎಂದುಕೊಂಡೆ."

"ಪಾಪ, ನಿಮ್ಮನ್ನು ಯೋಚನೆಗೀಡು ಮಾಡಿದೆವು."

ಸೌಮಳ ತಾಯಿ ನಸುನಕ್ಕರು ಮಾತಾಡಲಿಲ್ಲ. ಸೌಮಾ ಒಳಗಿನಿಂದ ತಿಂಡಿ ತಿನಿಸುಗಳನ್ನೂ ಬಿಸಿಬಿಸಿ ಹಾಲನ್ನೂ ತಂದು ಮುಂದಿಟ್ಟಳು. ಅಯ್ಯೋ ಈಗೇಕೆ ತೊಂದರೆ ತೆಗೆದುಕೊಂಡಿರಿ ?" ಎಂದ ಅಘೋರ. ಒಡನೆ ಎಲ್ಲ ದನಿಗಳೂ ಹಾಗೇ ಅಂದುವು. ಸೌಮಾ ನಗುತ್ತಾ ನುಡಿದಳು "ನನ್ನನ್ನು ಸುರಕ್ಷಿತವಾಗಿ ಮನೆಗೆ ತಲುಪಿಸಿದ ಸಲುವಾಗಿ."

ಎಲ್ಲರ ಮುಖದಲ್ಲೂ ನಗು ಮೂಡಿತು. ಗೋಡೆಯ ಮೇಲಿದ್ದ ಎರಡು ಚಿತ್ರಪಟಗಳನ್ನು ತೋರಿ ಸೌಮ ಹೇಳಿದಳು "ಇಬ್ಬರೂ ನನ್ನ ಅಣ್ಣಂದಿರು ದೊಡ್ಡವರು ರೂರ್ಕೆಲಾದಲ್ಲಿದ್ದಾರೆ. ಚಿಕ್ಕವರು ಜರ್ಮನಿಯಲ್ಲಿದ್ದಾರೆ. ಅವರಿಬ್ಬರೂ ದೂರ ಹೋಗಿರುವುದರಿಂದ ಅಮ್ಮ ನನ್ನನ್ನು ಬಿಟ್ಟಿರಲಾರರು."

"ಪಾಪ, ಸಹಜ"

ಎಲ್ಲರೂ ಎದುರುಗಡೆಯ ಗೋಡೆಯ ಮೇಲಿದ್ದ ಸೌಮಳ ಚಿತ್ರ ಪಟದ ಮೇಲೆ ಕಣ್ಣು ಹರಿಸಿದ್ದರು. ಅದು ಅವಳ ಮದುವೆಯಲ್ಲಿ ತೆಗೆದ ಚಿತ್ರ. ಅವಳ ಗಂಡ ತೆಳ್ಳಗೆ ಎತ್ತರವಾಗಿದ್ದ. ತುಸು ಕಪ್ಪಗಿನ ವ್ಯಕ್ತಿ. ಸೌಮಳಂತೆ ಸುರೂಪಿಯಲ್ಲದಿದ್ದರೂ ಕುರೂಪಿಯಲ್ಲ. ನೋಡು ನೋಡುತ್ತಾ ಅಘೋರ ಕೇಳಿದ "ನಿಮ್ಮವರೆಲ್ಲಿದ್ದಾರೆ ?"

"ಅವರಿರುವುದು ಮದರಾಸಿನಲ್ಲಿ. ವಾರಕ್ಕೆ ಮೂರುದಿನ ಇಲ್ಲಿ ನಾಲ್ಕು ದಿನ ಅಲ್ಲಿ ಇರುತ್ತಾರೆ."

"ಓ ! ಸರಿ ಬಿಡಿ. ನಿಮಗೆ ಅಮ್ಮನೊಂದಿಗೆ ಮುದ್ದು ಮಗುವಾಗಿರಲು ಅನುಕೂಲವೇ ಆಯಿತು !"

ಎಲ್ಲರ ಮುಖದಲ್ಲೂ ನಗು ಮಿನುಗಿತು.

"ಇಲ್ಲವಾಗಿದ್ದಲ್ಲಿ ನನಗೆ ಓದುವುದು ಸಾಧ್ಯವಾಗುತ್ತಿರಲಿಲ್ಲ. ನಾನು P.U.C. ಓದುತ್ತಿರುವಾಗಲೇ ನನಗೆ ಮದುವೆಯಾಯಿತು."

"ನಿಮ್ಮ ಯಜಮಾನರು ಬಹಳ ಧಾರಾಳ ಮನಸ್ಸಿನವರಿರಬೇಕು !"

"ಅವರಿಗೆ ಅಲ್ಲಿ ಯಾವ ಕೊರತೆಯೂ ಇಲ್ಲ. ತಾಯಿ ತಂದೆ ಇದ್ದಾರೆ." ಎಂದರು ಸೌಮಳ ತಾಯಿ.

ಸೌಮಾ ಮಾತಾಡದೆ ನಸುನಕ್ಕಳು. ಡಾ|| ಸೌಮಳ ಸತ್ಕಾರವನ್ನು ಮುಗಿಸಿಕೊಂಡು ಎಲ್ಲರೂ ವಂದನೆಯನ್ನರ್ಪಿಸಿ ಹೊರಟರು.

o o o o

ಜಾನಕೀರಾಮನ ಮದುವೆ ಅದ್ಧೂರಿಯಿಂದ ನಡೆಯದಿದ್ದರೂ ಚೆನ್ನಾಗಿತ್ತು. ಅವನ ಓರಗೆಯ ಡಾಕ್ಟರುಗಳೂ ಹಿರಿಯ ಡಾಕ್ಟರುಗಳೂ ಬಂದು ಆಶೀರ್ವದಿಸಿದರು. ಅಘೋರ ಮತ್ತು ಅವರ ಗೆಳೆಯರ ತಂಡ ಅಭಿನಂದಿಸಲು ಬಂದಾಗ ಜಾನಕೀರಾಮನಿಗಾದ ಸಂತೋಷ ಅಷ್ಟಿಷ್ಟಲ್ಲ. ತುಂಬಿದ ಹೃದಯದಿಂದ ಮಡದಿಗೆ ಗೆಳೆಯರನ್ನು ಪರಿಚಯ ಮಾಡಿಕೊಟ್ಟ. ಇತರ ಡಾಕ್ಟರುಗಳೊಂದಿಗೆ ಮದುವೆಗೆ ಬಂದಿದ್ದ ಸೌಮಳನ್ನು ಮನೆ ಮುಟ್ಟಿಸುವ ಭಾರವನ್ನು ಅಘೋರ ಹೊತ್ತುಕೊಂಡಿದ್ದ. ತನ್ನ ಗೆಳೆಯರ ತಂಡದೊಂದಿಗೆ ಸೌಮಳ ಮನೆಯ ಹಾದಿ ತುಳಿದ ಅಘೋರ.

ಸಂಜೆಯ ವಾತಾವರಣ ಹಿತಕರವಾಗಿತ್ತು. ಗೆಳೆಯರ ವೃಂದದ ಹೃದಯಗಳೂ ಆನಂದದ ಬೀಡಾಗಿದ್ದವು. ಕೈಯಲ್ಲಿನ ನಾರಿಕೇಳವನ್ನು ಎದೆಗಾಂತು ಹಿಡಿದು ಸುಧೀರ್ ಇಂತೆಂದ "ಮದನ್, ಡಾಕ್ಟರಿಂದ ಡಾಕ್ಟರಿಗೆ. ...ಡಾಕ್ಟರಿಂದ ಡಾಕ್ಟರಿಗೆ ಅಲೆದಲೆದು ಬೇಸತ್ತವರೊಬ್ಬರು ಬಂದಿದ್ದಾರೆ. ಅವರಿಗೆ ಸದಾ ಹೊಟ್ಟೆ ನೋವು ಬರುತ್ತಿತ್ತಂತೆ. ಇದುವರೆವಿಗೆ ನೋಡಿ ಪರೀಕ್ಷಿಸಿದ ಡಾಕ್ಟರುಗಳು "ಇದೆಲ್ಲಾ ನಿಮ್ಮ ಕಲ್ಪನೆ ! ನಿಮ್ಮ ಹೊಟ್ಟೆಯ ಯಾವ ಅವಯವಗಳಲ್ಲೂ ದೋಷವಿಲ್ಲ. ನಿಮಗೆ ಆಪರೇಷನ್ ಮಾಡುವಂತಾದ್ದು ಏನೂ ಇಲ್ಲ." ಎನ್ನುತಿದ್ದರಂತೆ. ಇದುವರೆವಿಗೆ ತೆಗೆದುಕೊಂಡ ಚಿಕಿತ್ಸೆಯಿಂದಲೂ ಪ್ರಯೋಜನವಾಗಲಿಲ್ಲ. ಅವರು ಅನುಭವಿಸಲಾರದೆ ಡಾ|| ಭಾರ್ಗವಾರವರ ಬಳಿಗೆ ಬಂದರು. ಇಂದು ಆಪರೇಷನ್ ಆಯಿತು. ನೋಡಿದರೆ, ಕ್ರಾನಿಕ್ ಅಪೆಂಡಿಕ್ಸ್!(Chronic Appendix)ಹತ್ತು ವರ್ಷಗಳಿಂದ ನೋವು ಅನುಭವಿಸಿದ್ದಾರೆ ಅವರು ! ಯಾವ ಬಗೆಯ ಚಿಕಿತ್ಸೆಯಿಂದಲೂ ಗುಣವಾಗದೆ ಬೇಸತ್ತು ಜೀವನದಲ್ಲೇ ಜುಗುಪ್ಸೆ ಹೊಂದಿದ್ದರು ಆ ತಾಯಿ !"

"ಎಷ್ಟೋ ಸಲ ಇಂಥಾದ್ದು ನಡೆದುಹೋಗುತ್ತೆ. ಇದು ಆಶ್ಚರ್ಯಕರವೆನ್ನಿಸಿದರೂ ಅವರವರ ಪ್ರಾರಬ್ಧ ಕರ್ಮವಲ್ಲದೆ ಮತ್ತೇನಲ್ಲ ಎಂದರೆ ತಪ್ಪಾಗಲಾರದು."

"ರತನ್, ಈಗ ಹಾಗೆನ್ನದೆ ವಿಧಿಯಿಲ್ಲ" ಸುಧೀರ್ ನಕ್ಕು ಬಿಟ್ಟ.

"ಅಪೆಂಡಿಕ್ಸನ್ನು ಯಾರಾದರೂ ತೆಗೆದುಹಾಕ ಬಹುದಾಗಿತ್ತು."

"ಪಾಪ, ಅವರು ಹೇಳಿಕೊಳ್ಳುವ ಕರುಣ ಕತೆಯನ್ನು ಕೇಳಬೇಕಾದ್ದು !"

"ಅನೇಕ ಸಂದರ್ಭಗಳಲ್ಲಿ ತಪ್ಪುಗ್ರಹಿಕೆಗಳಿಂದ ಎಷ್ಟೋ ಅನಾಹುತಗಳಾಗುತ್ತವೆ."

"ಆದರೂ, ಸರಿಯಾದ ಪರೀಕ್ಷೆ ಮಾಡದೆ ಚಿಕಿತ್ಸೆ ಮಾಡುವುದು ಶುದ್ಧ ತಪ್ಪು." ಅಚ್ಚರಿ ಸೂಸಿದಳು ಸೌಮಾ. "ಹತ್ತು ವರ್ಷಗಳಿಂದ ಔಷಧಿಯ ಸೇವನೆ ಎಂದರೆ ಸ್ಥಿತಿ ಏನಾಗಿರಬೇಡ ?"

"ಹತ್ತು ಜನರನ್ನು ಕೊಂದರೆ ನೂರು ಜನರನ್ನು ಬದುಕಿಸುವ ಅನುಭವ ಬರುತ್ತದೆ."

ಅಘೋರ ತುಂಟ ನಗೆ ಬೀರಿದ.

"ಸರಿ, ಬಿಡಪ್ಪಾ."

"ಹಾಗಿದ್ದರೆ ನಿಮ್ಮ ಪ್ರಯೋಗಶಾಲೆಯಲ್ಲಿ ಎಷ್ಟು ಮಂದಿಯನ್ನು ಆಹುತಿ ತೆಗೆದುಕೊಳ್ಳಲಿದ್ದೀರಿ ?" ರತನ್ ಮಿಶ್ರ ಪ್ರಶ್ನೆ ಹಾಕಿದ.

ಎಲ್ಲರ ನೋಟಗಳೂ ಒಮ್ಮೆಲೇ ಅತ್ತ ಹರಿದುವು.

"ಒಂದು ವೇಳೆ ನನಗೇನಾದರೂ ಆಪರೇಶನ್ ಆಗಬೇಕಾಗಿ ಬಂದರೆ ಮೊದಲು ಅಘೋರನನ್ನು ಒಳಗಡೆ ಸೇರಿಸದಂತೆ ಏರ್ಪಾಡು ಮಾಡಿಕೊಳ್ಳುವೆ." ಎಂದು ಮದನ್ ನುಡಿದಾಗ ಎಲ್ಲರ ಮುಖದಲ್ಲೂ ನಗು ಮಿನುಗಿತು.

ಎದೆಯನ್ನು ಆನಿಸಿ "ನೀನು ಬೇಡ ಎಂದರೂ ನಾನು ಬಿಡೆ !" ಎಂದ ಅಘೋರ. ಪುನಃ ಮುಸಿಮುಸಿ ನಗುವಿನಲೆ ಉಕ್ಕಿ ಹರಿಯಿತು.

ಹಾದಿ ಸಾಗಿ ಎಲ್ಲರೂ ಡಾ|| ಸೌಮಳ ಮನೆಯ ಮುಂದೆ ಬಂದಿದ್ದರು. ಎಲ್ಲರ ಕೈಗಳಲ್ಲಿದ್ದ ತೆಂಗಿನ ಕಾಯಿಗಳನ್ನೂ ಅವಳ ಕೈಗಿಟ್ಟು "ದಯಮಾಡಿ ಇಷ್ಟು ಭಾರ ಹೊತ್ತುಕೊಳ್ಳಿರಿ." ಎಂದರು ಎಲ್ಲರೂ.

"ಆಗಲೇ ಅರ್ಧ ದಾರಿ ಹೊತ್ತಿದ್ದೀರಿ. ಇನ್ನು ತೆಗೆದುಕೊಂಡು ಹೋಗುವುದೇನು ಕಷ್ಟ ?" ಎಂದು ಸೌಮಾ ಒತ್ತಾಯ ಪಡಿಸಿದರೂ ಕೇಳದೆ ಎಲ್ಲರೂ ಹೊರಡಲನುವಾದಾಗ ಅವಳು ನಕ್ಕು ಹೇಳಿದಳು. "ಹೋಗಲಿ ಬಿಡಿ, ದಿನವೂ ಚಟ್ನಿ ಮಾಡಿಕೊಳ್ಳುವೆ."

"ಓ! ನಿಮಗಷ್ಟೇ ಅಲ್ಲ; ಆಸ್ಪತ್ರೆಗಿಷ್ಟು ತನ್ನಿರಿ !"

ಪುನಃ ಎಲ್ಲರ ಮುಖದಲ್ಲೂ ನಗುವಿನಲೆ ಚಿಮ್ಮಿ ಹರಿಯಿತು, ಸೌಮಾ ಎಲ್ಲರಿಗೂ ಒಳಗಡೆ ಬರಲು ಆಹ್ವಾನ ನೀಡಿದಳು. "ಓ! ತುಂಬ ಹೊತ್ತಾಗಿದೆ. ಇಂದು ಸಾಧ್ಯವಿಲ್ಲ."

"ಈಗಲೇ ಹೀಗೆಂದರೆ ನೀವೆಲ್ಲಾ ಸಂಸಾರಿಗಳಾದರೆ ಇನ್ನು ಹೇಗೋ !"

"ಅನಂತರ ಅವರನ್ನು ಗೋಳು ಹುಯ್ಯಲಾದರೂ ನಿಮ್ಮಲ್ಲಿ ಕಾಲಹರಣ ಮಾಡುತ್ತೇವೆ." ಎಂದ ಅಘೋರ.

"ಅದೆಲ್ಲಾ ಬೂಟಾಟಿಕೆ !"

"ಓ! ನಿಮಗೆ ಗೊತ್ತೇ ಇಲ್ಲವೆ ? ಅವನು ಅಘೋರ ಅಲ್ಲ; ಘೋರ !" ಎಂದು ಮದನನೆಂದಾಗ ಎಲ್ಲರೂ ಗೊಳ್ಳನೆ ನಕ್ಕರು. ಎಲ್ಲರೂ ಸೌಮಳಿಗೆ ವಂದನೆಯನ್ನರ್ಪಿಸಿ ತಮ್ಮ ತಮ್ಮ ಹಾದಿ ತುಳಿದರು. ಸೌಮಳ ತುಂಬುಗಣ್ಣಿನ ನೋಟ ಬೀಳ್ಕೊಟ್ಟಿತು.

ಅಧ್ಯಾಯ
೧೪

ಅಘೋರ ಸ್ಟೆತೊಸ್ಕೋಪನ್ನು ಸುರುಳಿ ಸುತ್ತಿ ಹಿಡಿದುಕೊಂಡು ಕಾರಿಡಾರಿನಲ್ಲಿ ಮಾರುಗಾಲು ಹಾಕಿ ನಡೆಯುತಿದ್ದ. ಜೊತೆಗಿದ್ದ ವಾರ್ಡ್ ಬಾಯ್ ಅಂದ "ಡಾ॥ ಭಾರ್ಗವಾರವರಿಗೆ ಮೈಯಲ್ಲಿ ಸ್ವಸ್ಥವಿಲ್ಲವಂತೆ. ಬಹುಶಃ ಅವರು ಮನೆಗೆ ಹಿಂದಿರುಗುತ್ತಾರೆಂದು ತೋರುತ್ತದೆ. ಅದಕ್ಕೆಂದೇ ನಿಮ್ಮನ್ನು ಬರಹೇಳಿರಬಹುದು."

"ಓ! ಹಾಗೋ ?" ಎಂದ ಅಘೋರ

ಕಾರಿಡಾರಿನ ತುತ್ತ ತುದಿಯಲ್ಲಿ ಡಾ॥ ಘನಶ್ಯಾಮ್ ಡಾ॥ ನಿರಂಜನರವರೊಂದಿಗೆ ಬರುತ್ತಿದ್ದುದು ತೋರಿಬಂತು. ಹಾದಿಯುದ್ದಕ್ಕೂ ರೋಗಿಗಳ ನರಳುವಿಕೆಯ ನರಳುದನಿ ಎಂದಿನಂತೆಯೇ ಕಿವಿಗೆಬೀಳುತಿತ್ತು. ಅತ್ತ ಗಮನ ಕೊಡದೆ ಅಘೋರ ಮುಂದುವರಿದ. ಹಿರಿಯ ಡಾಕ್ಟರುಗಳು ಸಮಾಪಿಸುತ್ತಲೂ ಅಘೋರ ತಲೆ ಬಾಗಿ ವಂದಿಸಿದ. ಡಾ॥ ಘನಶ್ಯಾಮ್ ನಗು ಮುಖದಿಂದ ಕೇಳಿದರು "ಒಬ್ಬರೇ ಹೋಗುತಿದ್ದೀರಲ್ಲಾ ? ಏನು ಸಮಾಚಾರ ? ನಿಮ್ಮ ಗೆಳೆಯರೆಲ್ಲಿ ?"

"ಡಾ॥ ಭಾರ್ಗವಾ ಕರೆ ಕಳುಹಿಸಿದುದರಿಂದ ಹೀಗೆ ಬಂದೆ."

"ಓ! ಸರಿ." ಎನ್ನುತ್ತಾ ಮುಗುಳು ನಕ್ಕರು ಡಾ॥ ಘನಶ್ಯಾಮ್.

ಹಿರಿಯ ಡಾಕ್ಟರುಗಳು ಮುಂದುವರಿಯುತ್ತಲೂ ಅಘೋರ ತನ್ನ ನಡಿಗೆಯನ್ನು ತೀವ್ರಗೊಳಿಸಿದ. ಜನಭರಿತವಾದ ಆಸ್ಪತ್ರೆಯು ಪಾದಸಪ್ಪಳ ಮತ್ತು ಮಾತುಕತೆಯ ಗುಜುಗುಂಪಲಿನಿಂದ ಮರ್ಮರಿಸುತಿತ್ತು. ಅಘೋರ ಒಂದೇ ಸಮನೆ ಎಲ್ಲರಿಗೂ "Silence please." ಎನ್ನುತ್ತಲೇ ಹೋದ. ಮೈಲುದ್ದದ ಆಸ್ಪತ್ರೆಯು ನಡೆದಷ್ಟೂ ಮುಗಿಯದು. ಹಿರಿಯ ಡಾಕ್ಟರ್ ಕರೆಕಳುಹಿಸಿದ್ದಾರೆಂದರೆ ಸಾಮಾನ್ಯವೇ ? ಅಘೋರ ತನ್ನನ್ನೇ ತಾನು ಮರೆತು ಹೆಜ್ಜೆ ಹಾಕುತಿದ್ದ. ಜನರಲ್ ವಾರ್ಡಿನಲ್ಲಿ ಅದೇ ತಾನೆ ಅಸುನೀಗಿದಾತನನ್ನು ಹೊರಗಡೆ ಸಾಗಿಸುವ ಏರ್ಪಾಡು ನಡೆಯುತಿತ್ತು. ಎಮರ್ಜನ್ಸಿ

ವಾರ್ಡಿನಲ್ಲಿ ರಸ್ತೆಯ ಅಪಘಾತಕ್ಕೆ ಒಳಗಾದವರ ಮರಣಾಂತಕ ಹೋರಾಟ ನಡೆಯುತ್ತಿತ್ತು. ಅವರ ಸಂಬಂಧೀಕರ ಅಳುದನಿಯು ಕಿವಿಯ ಪಟಲದ ಮೇಲೆ ಎರಕ ಹೊಯ್ಯುವಂತೆ ಬೀಳುತಿತ್ತು.

ಕಾರಿಡಾರನ್ನು ದಾಟಿ ಸೆಂಟ್ರಲ್ ಹಾಲ್–ಗೆ ಕಾಲಿಡುತ್ತಲೂ ಆಸಿಡ್ ಸಿಡಿದು ಅಪಘಾತಕ್ಕೊಳಗಾದವನನ್ನು ಸ್ಟ್ರೆಚರಿನಲ್ಲಿ ಅದೇತಾನೆ ಒಳತರುತಿದ್ದರು. ನೋಡಿವರೆ, ಹದಿನೆಂಟು ಇಪ್ಪತ್ತರ ತರುಣ. ಅಘೋರ ತಕ್ಷಣ ಹೇಳಿದ "ಎಮರ್ಜನ್ಸಿ ವಾರ್ಡಿಗೆ ಒಯ್ಯಿರಿ."

ಕದಳೀಸಸಿಯಂತೆ ನಳನಳಿಸುವ ಹುಡುಗ !

ಅಘೋರ ಗಡಿಯಾರದ ಕಡೆ ಕಣ್ಣು ಹೊರಳಿಸಿದ. ಹೊತ್ತು ಹತ್ತರ ಅಂಚನ್ನು ದಾಟುವುದರಲ್ಲಿತ್ತು. ಇಂದು ಎಮರ್ಜನ್ಸಿ ವಾರ್ಡಿನ ಒಡೆತನ ಡಾ|| ಆದಿಶೇಷ್‌ರವರಿಗೆ ಸೇರಿತ್ತು. ಸರ್ವೇಸಾಮಾನ್ಯವಾಗಿ ದಿನಕ್ಕೊಬ್ಬ ಹಿರಿಯ ವೈದ್ಯರು ಅಲ್ಲಿರುತಿದ್ದರು. ಡಾ|| ಆದಿಶೇಷ್‌ರವರು ದಿನವೂ ಹತ್ತು ಗಂಟೆಗೆ ಕಾಫಿ ಮನೆಗೆ ಹೋಗುತಿದ್ದರಾದುದರಿಂದ ಈ ಸಮಯದಲ್ಲಿ ಅವರು ಅಲ್ಲಿ ಇರಲಾರರು. ಉಳಿದವರು ಇನ್ನೂ ಕಲಿಕೆಯ ಎಳಸು ಡಾಕ್ಟರು ಅಂದ ಮೇಲೆ ಹೋಗಿ ಅವರಿಗೆ ಸಹಾಯ ಮಾಡುವುದು ಒಳ್ಳೆಯದು ಎನ್ನಿಸಿತು. ಒಡನೆಯೇ ಎಮರ್ಜನ್ಸಿ ವಾರ್ಡಿಗೆ ಹೋಗಿ ನೋಡಿದರೆ ಅಲ್ಲಿ ಡಾ|| ಆದಿಶೇಷ್ ಇರಲಿಲ್ಲ. ತನ್ನನ್ನು ಕರೆದೊಯ್ಯಲು ಬಂದ ವಾರ್ಡ್ ಬಾಯ್‌ನನ್ನು ಮುಂದಾಗಿ ಕಳುಹಿಸಿ ಆಕಸ್ಮಿಕ ಅಪಘಾತಕ್ಕೆ ಒಳಗಾದ ವ್ಯಕ್ತಿಯ ಚಿಕಿತ್ಸೆಗೆ ತಾನೇ ನಿಂತ. ಪುಣ್ಯವಶಾತ್ ವ್ಯಕ್ತಿ ಉಳಿಯುತ್ತಾನೆ ಎಂದು ಕೊಂಡು ಸುಟ್ಟಗಾಯಗಳಿಗೆ ಔಷಧಿ ಬಳಿದು ಸೂಜಿ ಮದ್ದು ಚುಚ್ಚಿ ತುರ್ತಾಗಿ ನೀಡಬೇಕಾಗಿದ್ದ ಚಿಕಿತ್ಸೆಯನ್ನು ತುರ್ತಾಗಿ ನೀಡಿ ದಿಗ್ವಿಜಯ ಸಾಧಿಸಿದ ಹೆಮ್ಮೆಯಿಂದ ಅವರಿಗೆ ಹಾಸಿಗೆ ಮಂಚಗಳನ್ನು ಒದಗಿಸಿ, ತಾನು ನೀಡಿದ ಚಿಕಿತ್ಸೆಯ ವಿವರವನ್ನು ಬರೆದಿಟ್ಟು ಡಾ|| ಭಾರ್ಗವಾರವರನ್ನು ಕಾಣಲು ಹೋದ.

ಆಗಲೇ ಅವರು ಕೊಠಡಿಯಿಂದ ಆಪರೇಷನ್ ಥಿಯೇಟರಿಗೆ ಹೋಗಿಯಾಗಿತ್ತು. ಅಲ್ಲಿಂದ ಪುನಃ ಮಾರುಗಾಲು ಹಾಕುತ್ತಾ ಆಪರೇಶ ಥಿಯೇಟರಿನತ್ತ ಓಡಿದ. ದಾರಿಯುದ್ದಕ್ಕೂ ಓಡಾಡುವ ಗಾಲಿ ಕುರ್ಚಿಗಳು ಗಾಲಿಯ ಸ್ಟ್ರೆಚರುಗಳು ಬ್ರೆಡ್ ಔಷಧಿ ವಗೈರೆಗಳ ಗಾಲಿ ಪೆಟ್ಟಿಗೆಗಳು ಕಿವಿ ಕಿವುಡಾಗು

ವಂತೆ ಸದ್ದು ಮಾಡುತ್ತಿದ್ದುವು. ಅಘೋರ ಅವುಗಳ ಸಂದಿಯಲ್ಲೇ ನುಸಿದು ತನ್ನ ಹಾದಿ ಹಿಡಿದು ಸಾಗಿದ. ಹತ್ತು ಮಾರು ಹೋಗುವುದರೊಳಗಾಗಿ "ಡಾಕ್ಟರ್ !" ಎಡ ಪಕ್ಕದಿಂದ ಕೇಳಿ ಬಂದ ದನಿಯೊಂದು ಅವಸರದಲ್ಲಿಯೂ ಕಿವಿಗೆ ಬಿತ್ತು. ದನಿ ಬಂದತ್ತ ಕಣ್ಣು ಹೊರಳಿಸಿದ. ಅಘೋರ ಹಿರಿಯ ವ್ಯಕ್ತಿಯೊಬ್ಬರು ಕಿರಿಯ ಹುಡುಗನೊಂದಿಗೆ ನಿಂತಿದ್ದರು. ಅಘೋರ ಹುಬ್ಬೆತ್ತಿ ನೋಡಿ–"ಏನು ಸ್ವಾಮಿ ?"

"ಈ ಹುಡುಗನಿಗೆ ಹೊಟ್ಟೆ ನೋವು."

"ನನ್ನ ಹಿಂದೆ ಬನ್ನಿರಿ. ನೋಡುವೆ." ಎಂದ ಅಘೋರ ಹುಡುಗನತ್ತ ತಿರುಗಿ ಕೇಳಿದ "ಮಗೂ, ನಿನ್ನಿಂದ ನಡೆಯುವುದಕ್ಕಾದೀತೆ ?"

"ತೊಂದರೆಯಾದರೆ ಹೇಳು ಮಗೂ." ಅಘೋರ ಹುಡುಗನ ತಲೆಯ ಮೇಲೆ ಕೈಯಿಟ್ಟು ಪುನಃ ಕೇಳಿದ. ಮಾತಿನಲ್ಲಿ ಮೃದುವಿತ್ತು. ದನಿಯಲ್ಲಿ ನಯವಿತ್ತು.

"ಹಾಗೇನಿಲ್ಲ ; ನಾನು ನಡೆಯಬಲ್ಲೆ."

"ಸರಿ ನನ್ನ ಹಿಂದೆ ಬನ್ನಿ." ಹುಡುಗನ ತಲೆಯಿಂದ ಕೈ ತೆಗೆದರೆ ಕೈ ಹರಳೆಣ್ಣೆಮಯವಾಗಿತ್ತು. ಈಗೇನು ಮಾಡುವುದು? ಕ್ಷಣಕಾಲ ಯೋಚಿಸಿ ಹಾಗೆಯೇ ಥಿಯೇಟರಿನ ಕಡೆ ಹೊರಟ. ಅಲ್ಲೇ ತೊಳೆದರಾಯಿತು ಎಂದು ಕೊಂಡುದುದು ಹತ್ತು ಹೆಜ್ಜೆ ಹೋಗುವುದರೊಳಗಾಗಿ ಮರೆತು ಹೋಯಿತು. ಯಾವುದೋ ಯೋಚನೆಯಲ್ಲಿ ಕೈಯನ್ನು ಸರಾಗವಾಗಿ ಕೆನ್ನೆಯ ಮೇಲೆ ಎಳೆದುಕೊಂಡ ! ಕೆನ್ನೆಗೆ ಅಂಟು ಅಂಟಾಗಿ ಕೈ ತಾಗಿದಾಗಲೇ ಅದರ ಗಮನ. ತಕ್ಷಣ ಕರವಸ್ತ್ರವನ್ನು ತೆಗೆದು ಒರಸಿಕೊಂಡದ್ದೇನೋ ಸರಿ. ಆದರೆ, ಮಾಡುವುದೇನು ? ಬಿಸುಟರೆ ಮನೆಗೆ ಹೋಗುವ ತನಕ ಕರವಸ್ತ್ರಕ್ಕೇನು ಮಾಡುವುದು ? ಇಟ್ಟುಕೊಳ್ಳುವುದಂತೂ ಸಾಧ್ಯವಿಲ್ಲ. ಕೊನೆಯದಾಗಿ ಕರವಸ್ತ್ರವಿಲ್ಲದಿದ್ದರೂ ಚಿಂತೆಯಿಲ್ಲ ಎಸೆಯುವುದೇ ಲೇಸೆಂದು ಕಿಟಕಿಯ ಬಳಿಗೆ ಹೋದ. ಎದುರಾಗಿ ಬಂದ ಶ್ವೇತ ವಸ್ತ್ರಧಾರಿಣಿ ಸುಮಿತ್ರ ಕೇಳಿದಳು "ಏಕೆ ಸಾರ್ ?"

ಅಘೋರ ಇದ್ದ ವಿಷಯ ಹೇಳಿದ.

"ಏಕೆ ಎಸೆಯುತ್ತೀರಿ ? ಹೇಗೂ ನಿಮಗೆ ಮನೆಗೆ ಹೋಗುವ ತನಕ ಬೇಕಲ್ಲ ? ಇತ್ತ ಕೊಡಿ; ಕೆಲವೇ ನಿಮಿಷಗಳಲ್ಲಿ ತೊಳೆದು ಒಣಗಿಸಿಕೊಡುವೆ." ಎಂದಳು ಬಿಳಿ ತೊಗಲಿನ ಹುಡುಗಿ.

"ಬೇಡ; ಬೇಡ." ಬಹಿರಂಗವಾಗಿ ಹಾಗೆಂದು ನಿಷೇಧಿಸಿದರೂ ಅಂತರಂಗವಾಗಿ "ನಾನು ಬದುಕಿಸಿದ ಹುಡುಗಿ." ಎಂಬ ಪ್ರೀತ್ಯಾಭಿಮಾನವಿತ್ತು. ಅಂದಿನಿಂದ ಅವಳೆಂದರೆ ಎಲ್ಲಿಲ್ಲದ ಕರುಣೆ. ಎಷ್ಟೆಂದರೂ ಇನ್ನೂ ಕಲಿಕೆಯ ಹೊಸದರಲ್ಲೇ ಆಪರೇಶನ್ ಮಾಡಿ ಉಳಿಸಿದ ಹುಡುಗಿಯಲ್ಲವೇ ? ಅವನು ನಸುನಕ್ಕು "Thank you Sister." ಎನ್ನುತ್ತಾ ಕೈಯನ್ನು ಕಿಟಕಿಯಲ್ಲಿ ತೂರಿ ಕರವಸ್ತ್ರವನ್ನು ಎಸೆದು–"ಹೋಗಲಿ, ಒಂದು ಹೊತ್ತು ಕರವಸ್ತ್ರವಿಲ್ಲದಿದ್ದರೆ ತೊಂದರೆಯಿಲ್ಲ."

ಅಘೋರ ಅಲ್ಲಿಂದ ತನ್ನ ಹಾದಿ ಹಿಡಿದ. ಹಿರಿಯ ವ್ಯಕ್ತಿ ಮಗನೊಂದಿಗೆ ಹಿಂಬಾಲಿಸಿದರು. ಆಪರೇಶನ್ ಥಿಯೇಟರಿಗೆ ಹೋದೊಡನೆಯೇ ಅವರಿಗಾಗಿ ಕಣ್ಣುಗಳನ್ನು ಎಲ್ಲೆಡೆಯೂ ಹೊರಳಿಸಿದ. ಅವರೆಲ್ಲೂ ಕಾಣಲಿಲ್ಲ. ಏಳೆಂಟು ಮಂದಿ ಡಾಕ್ಟರುಗಳು ಆಪರೇಶನ್ ಟೇಬಲ್ಲಿನ ಸುತ್ತುವರಿದು ನೆರೆದಿದ್ದರು. ಎಲ್ಲರೂ ಮುಖವಾಡ ಕಟ್ಟಿಕೊಂಡಿದ್ದುದರಿಂದ ತಕ್ಷಣ ಗುರುತು ಹಿಡಿಯುವುದು ಕಷ್ಟವೆಂದರಿತು ಕೇಳಿದ "ಡಾ|| ಭಾರ್ಗವಾ ಎಲ್ಲಿದ್ದಾರೆ ?"

"ಅವರು ಆಗಲೇ ಇಲ್ಲಿಂದ ಹೊರಟುಹೋದರು." ಡಾ|| ಶಾರದಾ ಮರು ನುಡಿದಳು.

ಅಘೋರ ಇನ್ನೇನು ಮಾಡುವುದೆಂದು ಯೋಚಿಸಿದ. ಏತಕ್ಕಾಗಿ ಬರ ಹೇಳಿದ್ದರೋ ಅದೂ ತಿಳಿಯಲಿಲ್ಲ. ಅವರು ಆ ಬೃಹತ್ ಆಸ್ಪತ್ರೆಯಲ್ಲಿ ಯಾವ ಕಡೆಗಿದ್ದಾರೋ ಪತ್ತೆ ಹಚ್ಚುವುದೂ ಸಾಮಾನ್ಯವಲ್ಲ. ಕ್ಷಣಕಾಲ ಹಾಗೇ ನಿಂತ. ಡಾ|| ನಿರಂಜನ್ ಅಘೋರನ ಕಡೆ ತಿರುಗಿ–"ಡಾಕ್ಟರ್, ಅವರಿಗೆ ಮೈ ಸ್ವಸ್ಥವಿರಲಿಲ್ಲ. ಬಹುಶಃ ಮನೆಗೆ ಹೋಗಿರಬಹುದು."

ಅವರು ಏನೆಂದುಕೊಂಡರೋ ಎಂಬ ಚಿಂತೆ ಕಾಡ ಹತ್ತಿತು. ಯೋಚಿಸುತ್ತಲೇ ಆ ಬಾಲಕನನ್ನು ಒಳ ಬರಮಾಡಿಕೊಂಡು ದೇಹವನ್ನು ಪರೀಕ್ಷಿಸಿದ. ಅಪೆಂಡಿಸೈಟಿಸ್ ಇದ್ದುದು ತೋರಿ ಬಂತು. ನೋಡಿ ಹಿರಿಯ ವ್ಯಕ್ತಿಯಿದ್ದೆಡೆಗೆ

ಬಂದು ಹೇಳಿದ "ಹುಡುಗನಿಗೆ ಅಪೆಂಡಿಸೈಟಿಸ್ ಇದೆ. ಅದನ್ನು ತೆಗೆದು ಹಾಕದೆ ಗತ್ಯಂತರವಿಲ್ಲ."

"ಅದು ಚಿಕಿತ್ಸೆಯಿಂದ ಗುಣವಾಗದೇ ?" ಎಂದರು ಹಿರಿಯ ವ್ಯಕ್ತಿ. ದನಿಯಲ್ಲಿ ಕಾತರತೆ ಇತ್ತು.

"ಇಲ್ಲ; ಆಪರೇಶನ್ ಆಗಲೇಬೇಕು."

"ಆಪರೇಶನ್ ಎಂದರೆ ಭಯ."

"ಭಯವೇಕೆ ? ಆಪರೇಶನ್ ಮಾಡಿಸದಿದ್ದರೆ ಮಗುವಿಗೆ ಅಪಾಯ."

ಅವರು ಮಾತಾಡಲಿಲ್ಲ. ಭಯದ ಛಾಯೆ ಮುಖದಲ್ಲಿ ಮುದ್ರೆಯೊತ್ತಿತು.

"ಏನು ಹೇಳುತ್ತೀರಿ ಯಜಮಾನರೇ ?" ಅಘೋರ ಕೇಳಿದ.

"ಏನೋ ಸ್ವಾಮಿ, ನಾವು ಇಂಥಹದನ್ನು ಎಂದೂ ಕಾಣಲಿಲ್ಲ. ನಮ್ಮ ವಂಶಾವಳಿಯಲ್ಲಿ ಯಾರೂ ಹೊಟ್ಟೆ ನೋವಿನಿಂದ ಸಾಯಲಿಲ್ಲ. ಅಂದ ಮೇಲೆ ಇದರಿಂದ ಜೀವನಕ್ಕೆ ಅಪಾಯ ಬರುತ್ತೆ ಎಂದೆನಿಸುವುದಿಲ್ಲ ನನಗೆ."

"ಛೀಃ ! ಛೀಃ! ಅಪಾಯವುಂಟು. ದಯವಿಟ್ಟು ಆಪರೇಶನ್ ಮಾಡಿಸಿರಿ. ವಂಶಾವಳಿಗೂ ಇದಕ್ಕೂ ಸಂಬಂಧವಿಲ್ಲ."

"ಹೀಗೇ ನರಳಿದರೂ ಚಿಂತೆಯಿಲ್ಲ ; ಆಪರೇಶನ್ ಬೇಡ."

"ಹಾಗೆಂದು ಮಗುವನ್ನು ಸಾಯಗೊಳಿಸುವುದೇ ?"

"ನಮ್ಮಲ್ಲಿ ಯಾರೂ ಮಾಡಿಸಿಕೊಳ್ಳಲಿಲ್ಲ ಸ್ವಾಮಿ." ದನಿಯಲ್ಲಿ ದುಗುಡವಿತ್ತು. ಸಂಕಟವಿತ್ತು.

"ಈಗ ದಿನೇದಿನೇ ಸೈನ್ಸ್ ಮುಂದೆ ಹೋಗುತ್ತಿದೆ. ಜನ ಜಾಗೃತರಾಗುತಿದ್ದಾರೆ. ಇದೆಲ್ಲಾ ನಿಮಗೇಕೆ ಅರ್ಥವಾಗುವುದಿಲ್ಲ ? ಇದು ಬಹಳ ಸಣ್ಣ ಆಪರೇಶನ್."

ಮಾತಾಡದೆ ಸಪ್ಪೆಮೋರೆ ಮಾಡಿ ನಿಂತರು ಅವರು.

"ನಿಮಗೆ ಮಗ ಬೇಕಾಗಿದ್ದರೆ ಮಾಡಿಸಿರಿ."

"ಬೇಡ ಎನ್ನುವುದಕ್ಕಾಗುತ್ತದೆಯೇ ಸ್ವಾಮಿ ?"

"ಒಂದೇ ನಿರ್ಧಾರದಿಂದ ಹೇಳಿರಿ. ನೀವೊಪ್ಪುವುದಾದರೆ ಮುಂದಿನ ವಾರವೇ ಆಪರೇಶನ್."

"ಎರಡು ದಿನ ಬಿಟ್ಟು ಬಂದು ಹೇಳುವೆ ಸ್ವಾಮಿಾ."

ಇದರಿಂದ ತಪ್ಪಿಸಿಕೊಳ್ಳಲೆಂದೇ ಅವರು ಆರೀತಿ ಹೇಳುತಿದ್ದಾರೆಂಬುದು ಗಮನಕ್ಕೆ ಬಾರದಿರಲಿಲ್ಲ. ಅವರ ಗಾಂಪತನಕ್ಕೆ ಮರುಗಿ ಅವರಿಗೆ ನಾನಾ ರೀತಿಯಿಂದ ಮನದಟ್ಟಾಗುವಂತೆ ತಿಳಿಯ ಹೇಳಿ ನೋಡಿದ. ಆದರೂ, ಅವರು ಇನ್ನೊಮ್ಮೆ ಬರುವುದಾಗಿ ಹೇಳಿ ಹೊರಟೇ ಹೋದರು. ಅಘೋರ ಅಚ್ಚರಿಯ ಕಣ್ಣುಗಳಿಂದ ನಿಟ್ಟಿಸಿದ. "ಪಾಪ! ಅನ್ಯಾಯವಾಗಿ ಕೊಂದು ಬಿಡುತ್ತಾರೆ." ಮರುಗಿ ನುಡಿಯಿತು ಅಂತರ್ವಾಣಿ.

ಹೊತ್ತು ಹನ್ನೆರಡರ ಅಂಕೆಯ ಬಳಿಸಾರುತಿತ್ತು. ಗಡಿಯಾರವನ್ನು ನೋಡಿದೊಡನೆಯೇ ಡಾ|| ಭಾರ್ಗವಾರವರ ಆಫೀಸಿನ ಬಳಿಗೆ ತೀವ್ರಗತಿಯಿಂದ ಹೆಜ್ಜೆ ಹಾಕಿದ. ಅವರೇನೆಂದುಕೊಂಡರೋ ಎಂಬ ಯೋಚನೆ ಮನದಾಳದಲ್ಲಿ ತಳಮಳಪೆಬ್ಬಿಸಿತ್ತು. ದೂರದಿಂದಲೇ ಅವರ ಆಫೀಸು ತೆರೆದಿದ್ದುದು ತೋರ ಬರುತ್ತಲೂ "ಓ, ಇದ್ದಾರೆ!" ತನಗೆ ತಾನೇ ಉದ್ಗಾರ ತೆಗೆದ.

ಒಳ ಹೋಗಿ ನೋಡಿದರೆ ಅವರಿರಲಿಲ್ಲ. ಜವಾನ ಕಾಗದ ಪತ್ರಗಳನ್ನು ಜೋಡಿಸುತ್ತಾ ನಿಂತಿದ್ದ. ಪಾದಸಪ್ಪಳ ಕೇಳಿ ಇತ್ತ ತಿರುಗಿ ನೋಡಿ ಹೇಳಿದ "ನಿಮಗಾಗಿ ಡಾಕ್ಟರು ಇದುವರೆವಿಗೂ ಕಾದಿದ್ದು ಈಗಷ್ಟೇ ಹೊರಟು ಹೋದರು."

"ಈಗಷ್ಟೇ ಹೋದರೆ ? ಎಲ್ಲಿಗೆ ಹೋಗಿದ್ದಾರೆ ?"

"ಗೊತ್ತಿಲ್ಲ ಸ್ವಾಮಿ."

"ಏನಾದರೂ ಹೇಳಿ ಹೋಗಿದ್ದಾರೆಯೇ ?"

"ಏನೂ ಹೇಳಲಿಲ್ಲ. ನಿಮ್ಮನ್ನು ಮಾತ್ರ ಎರಡು ಮೂರು ಬಾರಿ ಕೇಳಿದರು, ಅಷ್ಟೆ."

ಏಕೆಂಬುದು ತಿಳಿಯದೆ ಅಘೋರ ತುಸು ಹೊತ್ತು ಹಾಗೇ ನಿಂತು ಯೋಚಿಸಿದ. ಮನೆಗೆ ಹೋಗಿರಬಹುದೆಂದು ಭಾವಿಸಿ. ಅವರ ಮನೆಗೆ ಟೆಲಿಫೋನು ಮಾಡಿ "ಡಾಕ್ಟರಿದ್ದಾರೆಯೆ !" ಎಂದು ಕೇಳಿದ.

"ಇನ್ನೂ ಬಂದಿಲ್ಲ." ಎಂದುತ್ತರ ಬಂತು.

ಏನಿರಬಹುದು ? ಎಂಬ ಪ್ರಶ್ನೆ ಮನದಲೆಯಲ್ಲಿ ಮೂಡಿ ನಿಂತಿತು. ಅಲ್ಲಿಂದ ಹಿಂದಿರುಗಿದ. ತನ್ನ ಅರ್ಧ ವೇಳೆಯೆಲ್ಲಾ ಓಡಾಟದಲ್ಲಿಯೇ ಕಳೆದು

ಹೋಗಿತ್ತು. ಹೀಗಾದರೆ ಹೇಗೆ ಎಂದೆನಿಸಿತು. ಅದೇ ವಿಚಾರವನ್ನು ಮೆಲುಕು ಹಾಕುತ್ತಾ ಬಂದ ಹಾದಿ ಹಿಡಿದ. ಕಾರಿಡಾರಿನ ನೇರಕ್ಕೆ ತುತ್ತ ತುದಿಯಲ್ಲಿ ಡಾ|| ಲಾರೆನ್ಸ್‌ರವರೊಂದಿಗೆ ಡಾ|| ಚಲುವಾಂಬಾ ಡಾ|| ಮದನ್ ಡಾ| ಜಾನಕೀರಾಂರವರು ಬರುತ್ತಿದ್ದುದು ಕಾಣಬಂತು. ಅಘೋರ ಯೋಚನೆಯ ಭಾರದಿಂದ ಹೆಜ್ಜೆ ಹಾಕಿದ.

ಅವರು ಸಮೀಪಿಸುತ್ತಲೂ ಹಿರಿಯ ವೈದ್ಯರಿಗೆ ತಲೆ ಬಾಗಿ ವಂದಿಸಿ ಕೇಳಿದ ಡಾ|| ಭಾರ್ಗವಾ ಮನೆಗೆ ಹೋಗಿದ್ದಾರೆಯೆ ?"

"ಇಂದು ನಾನವರನ್ನು ನೋಡಲಿಲ್ಲ." ಎಂದ ಡಾ|| ಲಾರೆನ್ಸ್ ಚಲುವಾಂಬಳತ್ತ ತಿರುಗಿ ಕೇಳಿದರು "ನೀವು ನೋಡಿದಿರಾ ಡಾಕ್ಟರ್ ?"

"ಬೆಳಿಗ್ಗೆ ಸಿಕ್ಕಿದರು. ಮೈ ಚೆನ್ನಾಗಿಲ್ಲ ಎಂದರು. ಅನಂತರ ನೋಡಲಿಲ್ಲ."

ಜಾನಕೀರಾಂ ನಡುವೆ ಬಾಯಿಹಾಕಿ ಕೇಳಿದ "ಹತ್ತು ಗಂಟೆಯ ಸುಮಾರಿಗೆ ವಾರ್ಡ್‌ಬಾಯ್ ನಿನ್ನನ್ನು ಅವರಿಗಾಗಿ ಹುಡುಕುತಿದ್ದ."

"ಹೌದು, ಅವರು ಕರೆಕಳುಹಿಸಿದ್ದರು. ನಾನು ಹೋಗುವುದು ತಡವಾಯಿತು. ಅಷ್ಟರಲ್ಲಿ ಅವರು ಹೊರಟು ಹೋಗಿದ್ದರು.

"ಓ !" ಎಂದ ಜಾನಕೀರಾಂ ಹುಬ್ಬೆತ್ತಿ.

ಅಘೋರ ಅಲ್ಲಿಂದ ತನ್ನ ಹಾದಿ ಹಿಡಿದ. ಆ ದಿನ ಸಂಜೆಯಲ್ಲೂ ಡಾ|| ಭಾರ್ಗವಾ ಸಿಕ್ಕಲಿಲ್ಲ. ಮರುದಿನ ಬೆಳಗ್ಗೆ ಅಘೋರ ಆಸ್ಪತ್ರೆಗೆ ಬಂದವನೇ ನೇರವಾಗಿ ಅವರ ಕೊಠಡಿಗೆ ಹೋದ. ಡಾ|| ಭಾರ್ಗವಾ ಕುಳಿತಿದ್ದರು. ತಲೆ ಬಾಗಿ ನಮಿಸಿ "ಕ್ಷಮಿಸಿ ಸಾರ್ !" ಎಂದ. ಅವರು ಮುಗುಳು ನಗೆಯಿಂದ ಸ್ವಾಗತಿಸಿ ಹೇಳಿದರು "ನಾನು ನಾಲ್ಕುವಾರ ಅನಿರೀಕ್ಷಿತವಾಗಿ ಹೊರಗಡೆ ಹೋಗಬೇಕಾಗಿದೆ. ನನ್ನನ್ನೇ ನಂಬಿಕೊಂಡಿದ್ದ ರೋಗಿಗಳು ಹಲವರಿದ್ದಾರೆ. ಕೆಲವರ ಆಪರೇಶನ್‌ಗಳು ಈಗಾಗಲೇ ಪಟ್ಟಿಯಲ್ಲಿವೆ. ಅವರಿಗೊಂದು ವ್ಯವಸ್ಥೆ ಮಾಡಿ ಹೋಗಬೇಕಾಗಿದೆ." ಎನ್ನುತ್ತಾ ರೋಗಿಗಳ ಪಟ್ಟಿಯನ್ನು ಅವನ ಕೈಗಿಟ್ಟರು. ಮೇಲಿಂದ ಕೆಳಗಿನವರೆಗೆ ಪಟ್ಟಿಯನ್ನು ನೋಡಿ "ಏನು ಮಾಡೋಣ ?"

"ಇವರದೆಲ್ಲಾ ಒಂದಾದ ಮೇಲೊಂದರಂತೆ ಮಾಡಿಯೇ ತೀರಬೇಕು." ಎಂದ ಅವರು ಇನ್ನೊಂದು ಪಟ್ಟಿಯನ್ನು ನೀಡಿ "ಇದು ಎರಡನೆಯದು. ಮೊದಲನೆಯ ಪಟ್ಟಿ ಮುಗಿದ ಮೇಲೆ ಇದನ್ನು ಆರಂಭಿಸತಕ್ಕದ್ದು. ಅದರೊಳಗೆ ಒಂದು ವೇಳೆ ತುರ್ತು ಆಪರೇಶನ್ ಆಗಬೇಕಾಗಿ ಬಂದರೆ ಕೂಡಲೇ ಮಾಡಬೇಕಾಗುತ್ತೆ." ಎಂದರು ಡಾ|| ಭಾರ್ಗವಾ.

"ಆಗಲಿ, ಸಾರ್."

ಡಾ|| ಭಾರ್ಗವಾ ಅಘೋರನನ್ನು ಕರೆದುಕೊಂಡು ವಾರ್ಡುಗಳ ಭೇಟಿಗೆ ಹೊರಟರು. ಜೊತೆಗೆ ನಾಲ್ಕಾರು ಮಂದಿ ಕಲಿಕೆಯ ಡಾಕ್ಟರುಗಳು ಇದ್ದರು. ಅಘೋರ ಚಾರ್ಟನ್ನು ನೋಡಿ ರೋಗದ ವಿವರವನ್ನು ತಿಳಿದುಕೊಂಡು ರೋಗಿಗಳನ್ನು ಒಬ್ಬೊಬ್ಬರನ್ನಾಗಿ ಪರೀಕ್ಷಿಸಿ ವಿಷಯವನ್ನು ಮನದಟ್ಟುಮಾಡಿಕೊಂಡ.

ಡಾ|| ಭಾರ್ಗವಾ ತಮ್ಮ ಸಂಪೂರ್ಣ ಭಾರವನ್ನು ಅಘೋರನ ಮೇಲೆ ಹೊರಿಸಿ ತಾವು ನಿಶ್ಚಿಂತೆಯಿಂದ ಒಂದು ತಿಂಗಳ ಪ್ರವಾಸವನ್ನು ಕೈಕೊಂಡರು. ತನ್ನ ಕೆಲಸ ಕಾರ್ಯಗಳೊಂದಿಗೆ ಅವರ ಕೆಲಸ ಕಾರ್ಯಗಳನ್ನೂ ಹೆಮ್ಮೆಯಿಂದ ನಿರ್ವಹಿಸಿದ ಅಘೋರ.

ನಗೆ ಚಾಟಿಕೆ ಹಾರಿಸುತ್ತಾ ಒಮ್ಮೆ ಮದನನೆಂದ "ಏನಪ್ಪಾ, ನೀನೀಗ ಹೇಳದೆ ಕೇಳದೆ ಮೆಲ್ಲನೆ ಕೀರ್ತಿಯ ಶಿಖರ ಏರುತಿದ್ದಿ ?"

"ನಿನ್ನ ಅಶೀರ್ವಾದ ಕಣಯ್ಯಾ." ಎಂದ ಅಘೋರ ನಗುಮುಖದಿಂದ.

ಜಾನಕೀರಾಮನಿಗೆ ಸುಧೀರ್ "ನಿನ್ನ ಭವಿಷ್ಯ ತಲೆಕೆಳಗಾಯಿತಲ್ಲಾ ?" ಎಂದ ಹುಬ್ಬೇರಿಸಿ.

"ಎಂಥೆಂಥವರದ್ದೋ ತಲೆ ಕೆಳಗಾಗುತ್ತೆ, ಅಂದಮೇಲೆ ನಂದೇನು?"

"ಇನ್ನೂ ಬೇಕಾದಷ್ಟು ಕಾಲವಿದೆ. ಕಾದು ನೋಡೋಣ." ಎಂದು ಮದನನೆನ್ನುತ್ತಲೂ ಅಘೋರ ಹುಬ್ಬುಹಾರಿಸಿ ಹೇಳಿದ "ನೋಡು, ನೋಡು ! ಚೆನ್ನಾಗಿಯೇ ನೋಡು !"

ಎಲ್ಲರ ಮುಖದಲ್ಲೂ ತಿಳಿನಗೆಯ ಕಡಲು ಉಕ್ಕಿ ಹರಿಯಿತು.

ಅಧ್ಯಾಯ
೧೫

ಸಾಯಂಸಮಯ. ಶೀತಲಗಾಳಿ ತಣ್ಣಗೆ ಶೀಡಿ ಬರುತ್ತಿದೆ. ದಿನ ನಿತ್ಯದ ಗಡಿಬಿಡಿಯನ್ನು ಬದಿಗೊತ್ತಿ ಬೀಸಿ ಬರುವ ತಂಗಾಳಿಗೆ ಮೈಯೊಡ್ಡಿ ಸುರ ಭೂಷಣನಾಗಿ ಅಘೋರ ಗಾಳಿ ಸವಾರಿಗೆ ಹೊರಟಿದ್ದಾನೆ. ಚಿತ್ತ ಭಿತ್ತಿ ಯಲ್ಲಿ ಮದನನ ಮದುವೆಯ ವಿಷಯ ತುಂಬಿ ಹೋಗಿತ್ತು. ಅವನ ಮದುವೆ ಮದರಾಸಿನಲ್ಲಿ ನಡೆಯುವುದಕ್ಕೂ ಅಘೋರ ಹಾಸಿಗೆ ಹಿಡಿಯುವುದಕ್ಕೂ ಮೇಳ ಬೀಳಬೇಕೆ? ಮದರಾಸಿಗೆ ಹೊರಡುವ ಮುನ್ನ ಮದನ್ ಮನೆಗೆ ಬಂದು ಗೆಳೆಯನನ್ನು ನೋಡಿ–"ಮದುವೆ ಮುಗಿಸಿಕೊಂಡು ಮದರಾಸಿನಿಂದ ಹಾಗಿಂದ್ಹಾಗೇ ಹೊರಟು ದೆಹಲಿ ಆಗ್ರಾಗಳಲ್ಲಿ ಮಧುಚಂದ್ರ ಕಳೆದು ಬರುವೆ ಅಘೋರ್. ಮದುವೆಗೆ ಬರಲಾಗದಿದ್ದುದಕ್ಕೆ ಯೋಚಿಸಬೇಡ. ಬೇಗನೆ ಗುಣ ಹೊಂದು." ಎಂದಿದ್ದ. ಅಘೋರನಿಗೆ ಅವನನ್ನು ಇಲ್ಲಿಂದಲೇ ಬೀಳ್ಕೊ ಡುವಾಗ ಹೃದಯ ಭಾರವಾಯಿತು.

ಜ್ವರ ಬಿಟ್ಟು ಅಡ್ಡಾಡುವಂತಾದ ಮೇಲೆ ಇಂದೇ ಮೊದಲ ಬಾರಿಗೆ ಗಾಳಿ ಸವಾರಿಗೆ ಹೊರಟ್ಟಿದ್ದ. ಮನದಲೆಯಲ್ಲಿ ಮದನ ಮೂಡಿ ನಿಂತಿದ್ದ. ಹೊತ್ತು ಉರುಳುತಿದ್ದಂತೆ ಹಾದಿ ಸವೆಯುತಿತ್ತು. ಕೆಲವೇ ಕೆಲವು ನಿಮಿಷ ಗಳೊಳಗಾಗಿ ಎಲ್ಲೋ ನೋಡಿದ ಪರಿಚಿತ ಮುಖವೊಂದು ದೂರದಲ್ಲಿ ಕಾಣಿ ಸಿತು. ಎಷ್ಟು ಯೋಚಿಸಿದರೂ ಎಂದೋ ನೋಡಿದ ನೆನಪು ವಿನಾ ಯಾರೆಂಬುದು ಬಗೆ ಹರಿಯದು. ಹುಡುಗಿಯರಾದುದರಿಂದ ಹಾಗೆ ನೋಡ ವುದು ಸರಿಯಲ್ಲವೆಂದು ದಿಟ್ಟಿಯನ್ನು ಪ್ರಯತ್ನ ಪೂರ್ವಕವಾಗಿ ಬೇರೆಡೆಗೆ ಸಿಡಿ ಸಿದರೂ ತನ್ನಿಂದ ಅದನ್ನು ತಡೆ ಹಿಡಿಯಲಾಗಲಿಲ್ಲ. ಮೈಯೆಲ್ಲಾ ಅಚ್ಚರಿಯ ಬೀಡಾಗಿ ಬಿಟ್ಟ ಕಣ್ಣು ಮುಚ್ಚದೆ ನಿಟ್ಟಿಸಿದ. ನಗುವಿನ ತುಂಬು ಹೊನಲಲ್ಲಿ ಮಿಂದು ಮಾತಿನ ಮೋಡಿಯಲ್ಲಿ ಮೈಮರೆತು ಅವರು ಹತ್ತಿರ ಹತ್ತಿರ ಐತರು ತಿದ್ದಾರೆ !

ಯಾರಿರಬಹುದು ?

ಖಂಡಿತವಾಗಿಯೂ ಎಲ್ಲೋ ನೋಡಿದ್ದೇನೆ. ಯಾರಿರಬಹುದು? ಅಘೋರ ಮರವಟ್ಟು ನಿಂತ. ಕಣ್ಣುಗಳನ್ನು ಸೂಜಿಗಲ್ಲಿನಂತೆ ಸೆಳೆದಿದ್ದಾಳೆ–ಹುಡುಗಿ. ಎಂಥಾ ಸೋಜಿಗ ? ಯಾರಿರಬಹುದು ? ಎಷ್ಟೆಷ್ಟು ಪ್ರಯತ್ನಪಟ್ಟರೂ ನೋಟವನ್ನು ಅವಳಿಂದ ಕೀಳಲಾಗಲಿಲ್ಲ. ತನುಮನಗಳಲ್ಲಿ ಅಚ್ಚರಿಯ ನೆರೆ ಯುಕ್ಕಿ ಹರಿಯಿತು. ಅಘೋರ ಮೈಮರೆತು ನಿಂತ.

"ಓ ! ನೀವೋ ?" ಎಂದಳು ಹುಡುಗಿ. ಅವಳ ಮುಖ ಹೂವಿನಂತರಳಿತು.

ಶ್ಯ್ ! ಈಗಲೂ ಹೊಳೆಯದಿರಬೇಕೆ ?

"ನೀವು ?" ಅಚ್ಚರಿಯಿಂದ ಕಣ್ಣುಗಳನ್ನರಳಿಸಿ ನಿಂತ. ಎಷ್ಟು ಪ್ರಯತ್ನಿಸಿದರೂ ಯಾರೆಂಬುದು ಸ್ಮರಣೆಗೆ ಬರಲಿಲ್ಲ. ಮನಸ್ಸು ಚಡಪಡಿಸಿತು. ಬುದ್ಧಿ ಮುದುಡಿತು.

"ಎಲ್ಲೋ ನಿಮ್ಮನ್ನು ನೋಡಿದ ಜ್ಞಾಪಕವಿದೆ. ಯಾರೆಂಬುದನ್ನು ಮರೆತು ಬಿಟ್ಟಿದ್ದೇನೆ. ದಯವಿಟ್ಟು ಕ್ಷಮಿಸಿ." ನುಡಿ ತಡೆತಡೆದು ಹೊರಬಿತ್ತು. ಮುಖದಲ್ಲಿ ನಸುಲಜ್ಜೆಯ ಕೆಂಪು ಮೂಡಿ ಮಂದಹಾಸ ಲಾಸ್ಯವಾಡಿತು. ನೆಟ್ಟ ನೋಟ ಅವಳನ್ನೇ ಅಚ್ಚರಿಯಿಂದ ನಿಟ್ಟಿಸಿತು.

"ನೀವಾಗಲೇ ನನ್ನನ್ನು ಮರೆತು ಬಿಟ್ಟಿದ್ದೀರಿ ! ನಾನು ನಿಮ್ಮನ್ನು ಮರೆಯಲಿಲ್ಲ." ಎಂದಳು ಅವಳು. ಜೊತೆಯಲ್ಲಿದ್ದ ಇನ್ನೊಬ್ಬ ಹುಡುಗಿ ಸ್ವಲ್ಪ ಸರಿದು ನಿಂತುಕೊಂಡಳು. ಅಘೋರ ಅವಳಾರೆಂಬುದನ್ನು ತಿಳಿಯಲು ಮೈಯೆಲ್ಲಾ ಮನಸ್ಸಾಗಿ ತನ್ನೆಲ್ಲಾ ಹಲ್ಲುಗಳನ್ನೂ ಬಿಟ್ಟು ನಿಂತ. ಕ್ಷಣ ಕ್ಷಣಗಳು ಮಿಂಚಿದುವು. ಗಳಿಗೆ ಗಳಿಗೆಗಳು ಅಳಿದುವು.

ಹುಡುಗಿ ತಾನಾರೆಂಬುದನ್ನು ತಿಳಿಸುವ ಮೊದಲು ಅವನು ಅಘೋರ ಹೌದೋ ಅಲ್ಲವೋ ಎಂಬುದನ್ನು ಖಚಿತಮಾಡಿಕೊಳ್ಳಲು ಕೇಳಿದಳು "ನಿಮಗೆ ಚಂದ್ರಬಾಬುಗಳು ಗೊತ್ತೆ ?" ಪ್ರಶ್ನೆಯಲ್ಲಿ ಕುತೂಹಲವಿತ್ತು. ಕಣ್ಣುಗಳಲ್ಲಿ ಹೊಳಪು ಮೂಡಿತು.

ಬಹಳ ದಿನಗಳಿಂದೀಚೆಗೆ ಅವನನ್ನು ನೋಡಿರಲಿಲ್ಲವಾದುದರಿಂದ ಅನುಮಾನವನ್ನು ಹೋಗಲಾಡಿಸಿಕೊಳ್ಳಲೆಂದೇ ಪ್ರಶ್ನೆಯನ್ನು ಮುಂದಿಟ್ಟಳು.

"ಓ ! ಈಗ ಗೊತ್ತಾಯಿತು. ನೀವು ಅರವಿಂದಾ ಅಲ್ಲವೇ ?" ಎಂದ. ಸಂತೋಷಾತಿರೇಕದಿಂದ ಮುಖ ಹೂವಿನಂತರಳಿತು. ನೋಟ ರೂಪಶ್ರೀಯನ್ನು ದುಂಬಿಯಂತೆ ಹೀರತೊಡಗಿತು. ಹುಡುಗಿ ನಗು ಮುಖದಿಂದ ನಿಂತಳು.

"ಹೌದು."

"ಈಗ ಎಲ್ಲಿದ್ದೀರಿ ?"

"ಮದರಾಸಿನಲ್ಲಿ."

"ನಿಮ್ಮನ್ನು ನೋಡಿ ಏಳೆಂಟು ವರ್ಷಗಳಾದುವು. ಆಗ ಚಿಕ್ಕಹುಡುಗಿ ಲಂಗ ತೊಡುತಿದ್ದ ಕಾಲ. ಈಗ ಹೇಗೆ ಗುರುತು ಹತ್ತೀತು ?"

"ನಂದಕ್ಕ ಚೆನ್ನಾಗಿದ್ದಾರೆಯೇ ?"

"ಚೆನ್ನಾಗಿದ್ದಾರೆ."

"ನೀವೇನು ಮಾಡುತಿದ್ದೀರಿ ?"

"ಡಾಕ್ಟರ್ ಅಘೋರ !"

ಹಸನಾದ ನಗೆ ಮುಖದಲ್ಲೆಲ್ಲಾ ಪಸರಿಸಿತು. ತಿಳಿಹಾಸ್ಯದ ಧಾಟಿಯಲ್ಲಿ ನುಡಿ ಹೊರಬಿತ್ತು.

"ಓ, ಒಳ್ಳೆಯದು !"

ಅವಳ ಏರಿ ಇಳಿದ ಹುಬ್ಬುಗಳಂದವನ್ನು ಹೀರಿ ಎಳೆ ನಗುಮುಖದಿಂದ ನುಡಿದ "ಎಷ್ಟು ವರುಷಗಳ ನಂತರ ನಿಮ್ಮ ಭೇಟಿ ! ನಿಜವಾಗಿಯೂ ಇದೊಂದು ಸುದಿನ ಅರವಿಂದಾ." ಮೈಯೆಲ್ಲಾ ಉಲ್ಲಾಸದ ಬೀಡಾದ.

"ಇವಳು ನನ್ನ ಗೆಳತಿ ಶ್ಯಾಮಲಾ. ಇವಳೊಂದಿಗೆ ಇಲ್ಲಿ ಒಂದು ವಾರ ಕಳೆಯಲೆಂದು ಬಂದೆ. ಇವಳ ಚಿಕ್ಕಪ್ಪ ಇಲ್ಲಿದ್ದಾರೆ."

"ಮತ್ತೇಕೆ ನಮ್ಮ ಮನೆಗೆ ಬರಲಿಲ್ಲ ?"

"ದಿನಗಳೆದುದೇ ಗೊತ್ತಾಗಲಿಲ್ಲ ನೋಡಿ."

"ಓ......! ಪರವಾಯಿಲ್ಲ."

"ಏನೀಗ ? ಹೇಗೂ ನೀವು ಮರೆತು ಬಿಟ್ಟಿದ್ದೀರಿ !"

"ಆಗಲೇ ಹೇಳಿದೆನಲ್ಲಾ."

"ಇಲ್ಲಿಂದ ಬಿಟ್ಟು ಹೋದಮೇಲೆ ಬಂದಿರಲಿಲ್ಲ. ಎಷ್ಟೆಂದರೂ

ಬೆಂಗಳೂರಿನ ಮೋಹ ಬಿಡುವುದಿಲ್ಲ. ನಾವು ಶನಿವಾರ ಇಲ್ಲಿಂದ ಮದರಾಸಿಗೆ ಹೊರಡುತ್ತೇವೆ."

"ಹೊರಡುವ ಮುನ್ನ ಮನೆಗೆ ಬಂದು ಹೋಗಿರಿ. ಈಗಲೇ ಬರುವುದಾದರೂ ಸರಿ."

"ಈಗ ಶ್ಯಾಮಲೆಯ ಅಕ್ಕನ ಮನೆಗೆ ಹೋಗುತಿದ್ದೇನೆ. ನಿಮ್ಮಲ್ಲಿಗೆ ನಾಳೆ ಬರುತ್ತೇನೆ."

"ನೀನೇನು ಮಾಡುತಿದ್ದೀರಿ, ಅರವಿಂದಾ ?"

"ಎಂ. ಎ., ಪರೀಕ್ಷೆಗೆ ಈ ಸಲ ಕುಳಿತುಕೊಂಡೆ. ಅದರ ಫಲಿತಾಂಶ ಬಂದಮೇಲೆ ಲೆಕ್ಚರರ್ ಆಗಬೇಕೆಂಬ ಮನಸ್ಸುಂಟು."

"ನಾಳೆ ಖಂಡಿತವಾಗಿಯೂ ಬರುತ್ತೀರಾ ?" ಅಘೋರ ಅತ್ಯಂತ ಆಸಕ್ತಿಯಿಂದ ಕೇಳಿದ.

"ನಿಮ್ಮ ಮನೆ ಅದೇ ತಾನೆ ?"

"ಹೌದು: ಅದು ನಮ್ಮ ಸ್ವಂತ ಮನೆಯಷ್ಟೆ ?"

"ನನಗದು ತಿಳಿಯದು."

"ನಮ್ಮ ತಾಯಿಗೆ ಹೇಳಿರುತ್ತೇನೆ. ಖಂಡಿತಾ ಬನ್ನಿರಿ."

"ಹ್ಞೂ."

"ನನಗೆ ನಿಮ್ಮ ವಿಳಾಸ ಕೊಟ್ಟರೆ ನಾನೇ ಬಂದು ಕರೆತರುವೆ."

"ನಿಮಗೇಕೆ ತೊಂದರೆ ? ನಾವೇ ಬರುತ್ತೇವೆ."

"ಯಾವಾಗ ಬರುತ್ತಿರಿ ? ಎಷ್ಟೊತ್ತಿಗೆ ?"

"ನಾಳೆ, ಹೆಚ್ಚು ಕಡಿಮೆ ಇದೇ ಸಮಯಕ್ಕೆ."

"ಖಂಡಿತಾ ಬನ್ನಿ."

"ಆಗಲಿ." ಎಂದ ತರುಣಿ ಅವನ ಮನದಲ್ಲಿನ ಕುತೂಹಲವನ್ನು ಕೆರಳಿಸಿ ಮೋಹದ ಪಾಶದಲ್ಲಿ ಬಿಗಿದು ಸೆಳೆ ಮಿಂಚು ಸುಳಿದು ಹೋದಂತೆ ಹೊರಟು ಹೋದಳು.

ಅವಳು ಕಣ್ಮರೆಯಾಗುವವರೆಗೂ ಧಿಗ್ಮೂಢನಂತೆ ನೋಡುತ್ತಾ ನಿಂತ ಅಘೋರ. ಏಳೆಂಟು ವರ್ಷಗಳ ಹಿಂದೆ ನಗುಮುಖದೊಡನೆ ಲಂಗದ ನಿರಿಯನ್ನು ಚಿಮ್ಮುತ್ತಾ ಮನೆಗೆ ಬರುತಿದ್ದ ಪುಟ್ಟ ಹುಡುಗಿ ಈಗ ಎಷ್ಟು ಎತ್ತರ

ವಾಗಿದ್ದಾಳೆ ! ಅಂದು ಸರ್ವೇ ಸಾಮಾನ್ಯವಾಗಿದ್ದ ಹುಡುಗಿ ಇಂದು...? ತನ್ನ ಪ್ರಶ್ನೆಗೆ ತಾನೇ ಉತ್ತರ ಹೇಳದಾದ ಅಘೋರ....ತನ್ನ ಪುಸ್ತಕಗಳಲ್ಲೆಲ್ಲಾ ಕೈಯಾಡಿ ಕತೆ ಓದಿ ಕೂಡಿ ಆಡಿ ನಕ್ಕು ನಲಿದ ಹುಡುಗಿ ಹೀಗಾದಾಳೆಂದು ನಾನು ನಂಬಿಯೇ ಇರಲಿಲ್ಲ...ಅಮ್ಮನಿಗೆ ಅಡುಗೆ ಮನೆಯಲ್ಲಿ ನೆರವು...ಅಪ್ಪನ ಲೆಖ್ಖ ಪತ್ರಗಳಲ್ಲಿ ನೆರವು...ಎಲ್ಲೆಡೆಯೂ ಚಿಗರಿಯಂತೆ ಹಾರಾಡುತ್ತಿದ್ದ ಹುಡುಗಿಯನ್ನೇ ಮರೆತು ಬಿಟ್ಟಿದ್ದೆನಲ್ಲಾ !...ಒಂದು ವೇಳೆ ಅವಳು ಮನೆಗೆ ಬರದೆ ಹೋದರೆ ? ಅಯ್ಯೋ, ಎಂಥಾ ಕೆಲಸ ಮಾಡಿಬಿಟ್ಟೆ ? ಅವಳ ವಿಳಾಸ ವನ್ನೂ ತಿಳಿದುಕೊಳ್ಳದೆ ಹೋದೆನಲ್ಲಾ ? ಏನು ಮಾಡಲಿ ? ಹೇಗೆ ಪತ್ತೆ ಹಚ್ಚುವುದು ? ಚಂದ್ರಬಾಬುಗಳ ಗುರುತಿನವರು ಇಲ್ಲಿ ಯಾರಾದರೂ ಇದ್ದಾರೆಯೇ ? ಅಥವಾ ಅವರ ನೆಂಟರಿಷ್ಟರು ? ಒಂದೂ ತಿಳಿಯದಲ್ಲಾ ಎನಿಸಿದಾಗ ಮನದಾಳದಲ್ಲಿ ತಳಮಳವೆದ್ದಿತು. ಹೃದಯ ವ್ಯಾಪ್ತಿಗೆ ಮೀರಿ ಮಿಡಿಯ ಹತ್ತಿತು. ಅಘೋರ ಅರೆ ಹುಚ್ಚನಂತೆ ಚಡಪಡಿಸಿದ.

ನೀಲಾಕಾಶದಲ್ಲಿ ಮೂಡಿ ಬಂದ ಚುಕ್ಕಿಯಂತೆ ಮನದಾಗಸದಲ್ಲಿ ಯೋಚನೆಯೊಂದು ಸುಳಿದು ಬಂತು...ಸ್ವಲ್ಪ ಹೊತ್ತು ನಾನಿಲ್ಲಿಯೇ ಇದ್ದರೆ ಅವಳು ಅದೇ ಹಾದಿಯಲ್ಲಿ ಹಿಂದಿರುಗಲೂ ಬಹುದು...ಅಂದಮೇಲೆ ಇನ್ನೊಮ್ಮೆ ಭೇಟಿ ಮಾಡಿ ಅವಳಿಂದ ವಿಳಾಸ ಪಡೆದುಕೊಳ್ಳಬಹುದಲ್ಲಾ... ಯೋಚನೆ ಬಂದೊಡನೆಯೇ ಮನೆಗೆ ಹಿಂದಿರುಗುವ ಯೋಚನೆಯನ್ನು ಬದಿಗೊತ್ತಿ ಅಲ್ಲೇ ತುಸು ಹೊತ್ತು ಅಡ್ಡಾಡಿದ. ಎಷ್ಟೊತ್ತಾದರೂ ಅರವಿಂದಳ ಸುಳಿವಿಲ್ಲ. ತನ್ನ ರೀತಿಯನ್ನು ನೋಡಿದರೆ ಯಾರಾದರೂ ಹುಚ್ಚ ಎನ್ನರೇ ? ಎನ್ನಿಸಿ ಎದುರಿಗಿದ್ದ ಅಂಗಡಿಯೊಂದರಲ್ಲಿ ಕುಳಿತುಕೊಂಡ. ತಂಡಿಯ ಗಾಳಿ ತಗುಲಿತೋ ಏನೋ. ಶಕ್ತಿಗುಂದಿದ ಮೈಯಲ್ಲಿ ಸಣ್ಣ ಚಳಿ ಮೂಡಿತು. ಎದ್ದು ಬೇಸರದಿಂದ ಮನೆಯ ಹಾದಿ ಹಿಡಿದ.

ರಾತ್ರಿಯೆಲ್ಲಾ ನಿದ್ದೆ ಮಾಡದೆ ಮರುದಿನದ ಸುಖಾಗಮನಕ್ಕಾಗಿ ಕಾತರ ದಿಂದ ಕಾಲ ಕಳೆದ. ಎಂದೆಂದೂ ಅನುಭವಿಸದ ವಿಚಿತ್ರಾನುಭವ ತನುಮನಗಳಲ್ಲಿ ಮನೆ ಮಾಡಿತು. ಅರವಿಂದಳ ಚಿಂತನೆಯಲ್ಲೇ ರಾತ್ರಿಯುರುಳಿತು ಪ್ರಾತರ್ ವಿಧಿಗಳನ್ನು ಮುಗಿಸಿ ತನ್ನ ಮೋಹದ ಕನ್ಯೆಗಾಗಿ ಮೈಯೆಲ್ಲಾ ಮನಸ್ಸಾಗಿ ಕಾಯುತ್ತಾ ಕುಳಿತುಕೊಂಡ. ಹಿಂದಿನ ದಿನ ತಾಯಿಯೊಂದಿಗೆ ಇಂದು

ಡ್ಯೂಟಿಯ ಮೇಲೆ ಹೋಗುವುದಾಗಿ ಹೇಳಿದ್ದುದರಿಂದ ಅವಳು ಬಂದು ಕೇಳಿದಳು "ಮೈಗೆ ಹೇಗಿದೆ ಅಘೂ ? ಇಂದು ಆಸ್ಪತ್ರೆಗೆ ಹೋಗುವೆಯೇನು ?"

"ಹೋಗಬೇಕಾಗಿತ್ತು. ಇನ್ನೂ ಮೈ ಅಷ್ಟು ಸುಧಾರಿಸಿಕೊಳ್ಳಲಿಲ್ಲ. ನಾಳೆ ಹೋಗುವೆ."

ಅಷ್ಟರಲ್ಲಿ ಅಂಗಡಿಗೆ ಹೊರಟು ನಿಂತಿದ್ದ ವಿಮಲ್‌ದಾಸ್ ಬಂದು ಹೇಳಿದ "ಅಘೂ. ಇಂದೇ ಆಸ್ಪತ್ರೆಗೆ ಹೋಗುವುದು ಬೇಡ. ಎರಡು ದಿನ ಸುಧಾರಿಸಿಕೊಂಡೇ ಹೋಗು."

ಅಘೋರ ಎದ್ದು ನಿಂತು–"ಇಲ್ಲಪ್ಪಾ ಇಂದು ಹೋಗುವುದಿಲ್ಲ."

ತಂದೆ ಹೊರಟುಹೋದ ನಂತರ ಒಳಗಡೆ ಹೋಗಿ "ಇಂದು ಸಾಯಂಕಾಲ ಅರವಿಂದಾ ಬರುವುದಾಗಿ ಹೇಳಿದ್ದಾಳೆ. ಬಂದರೂ ಬರಬಹುದು." ಎಂದ. ಹಿಂದಿನ ದಿನ ಅವಳ ಭೇಟಿಯಾದ ವಿಷಯವನ್ನು ಗಾಳಿ ಸವಾರಿಯಿಂದ ಹಿಂದಿರುಗಿದ ಮೇಲೆ ತಾಯಿಗೆ ಪೂರ್ಣ ವರದಿ ಮಾಡಿದ್ದ.

"ಬರಲಿ, ತುಂಬ ಒಳ್ಳೆಯ ಹುಡುಗಿ. ಆಗಂತೂ ಅವಳು ನಮ್ಮ ಮನೆಯವಳೇ ಆಗಿದ್ದಳು. ಎಲ್ಲ ಕೆಲಸ ಕಾರ್ಯಗಳಲ್ಲೂ ಪಾಲುಗೊಳ್ಳುತಿದ್ದ ಹುಡುಗಿ ಬಲು ಚೂಟಿ. ಮಕ್ಕಳಿದ್ದರೆ ಹಾಗಿರಬೇಕು ನೋಡು !" ಎಂದೆನ್ನುವಾಗ ಹಿಂದಿನ ಸ್ಮರಣೆಯು ಮುಖವನ್ನರಳಿಸಿತು.

ಅಘೋರ ಗಟ್ಟಿಯಾಗಿ ನಕ್ಕು ಹೇಳಿದ "ಓ ! ಪರವಾಯಿಲ್ಲ. ನಾನೇನು ಕಡಿಮೆ ? ಅವಳನ್ನು ಅಷ್ಟೊಂದು ಮೆಚ್ಚಿಕೊಳ್ಳುವುದಕ್ಕೆ ?" ದನಿಯಲ್ಲಿ ಹಾಸ್ಯದ ಚಟಾಕಿಯಿತ್ತು.

"ನೀನು ಎಷ್ಟೆಂದರೂ ಹುಡುಗ ! ನೀನಾಯ್ತು, ನಿನ್ನ ಉದ್ಯೋಗವಾಯ್ತು. ಅವಳಂತೆ ಮನೆಯೆಲ್ಲಾ ಬೆಳಕಾಗಿ ಇರಲು ನಿನ್ನಿಂದ ಸಾಧ್ಯವಿಲ್ಲ ಅಘೂ !" ಕಣ್ಣರಳಿಸಿದಳು ನಂದಾದೇವಿ. ದನಿಯಲ್ಲಿ ತಮಾಷೆ ನಲಿಯುತಿತ್ತು.

"ಹಾಗಿದ್ದರೆ ಅವಳನ್ನೇ ಸೊಸೆ ಮಾಡಿಕೊಳ್ಳಿ !" ಎನ್ನುತ್ತಾ ಕಿಲಕಿಲನೆ ನಕ್ಕು ಸೀರಿಕೆ ಹಾಕಿದ.

ತಮಾಷೆಗೆ ಅವನು ಆಗಾಗ ಹಾಗೆನ್ನುತಿದ್ದುದರಿಂದ ಅದರಲ್ಲಿ ವಿಶೇಷವೇನನ್ನೂ ಕಂಡುಕೊಳ್ಳಲಿಲ್ಲ–ತಾಯಿ.

"ಓ, ಅವಳಿಗಿಷ್ಟರಲ್ಲಿ ಮದುವೆಯಾಗದೆ ಉಂಟೇ?" ಎನ್ನುತ್ತಾ ಅದನ್ನು ಅಷ್ಟಾಗಿ ಗಮನಕ್ಕೆ ತೆಗೆದುಕೊಳ್ಳದೆ ಅವಳು ಒಳಹೋದಳು. ನುಡಿ ಕೇಳಿ ಚೇಳು ಕುಟುಕಿದಂತೆ ಮೈಯೆಲ್ಲಾ ಜುಮುಜುಮುಗುಟ್ಟಿತು. ಅಘೋರ ಪ್ರತಿ ನುಡಿಯದೆ ಮನದಲ್ಲೇ "ಹಾಗಾಗದಿರಲಿ" ಎಂದು ಪ್ರಾರ್ಥಿಸಿಕೊಂಡ.

ಸಂಜೆಯ ಆಗಮನವನ್ನು ಅತ್ಯಂತ ಆಸಕ್ತಿಯಿಂದ ನಿರೀಕ್ಷಿಸುತಿದ್ದುದರಿಂದಲೋ ಏನೋ, ಹೊತ್ತು ದೀರ್ಘವಾಗಿ ಉರುಳಿದಂತೆ ತೋರಿತು. ಮೈಯೆಲ್ಲಾ ಮನಸ್ಸಾಗಿ ಹಳೆಯ ನೆನಹುಗಳಲ್ಲೇ ಹೊತ್ತು ಕಳೆದು ತನುಮನಗಳ ಆವೇಗವನ್ನು ತುಸು ತಡೆಹಿಡಿದಿದ್ದ. ಚಹದ ನಂತರ ಮುಖ ಮಜ್ಜನ ಮಾಡಿ ದಟ್ಟವಾದ ಕೂದಲನ್ನು ಅಂದವಾಗಿ ಬಾಚಿ ಬಟ್ಟೆಬರಿಯನ್ನು ಬದಲಿಸಿ ಅಂಗಳದಲ್ಲಿ ಅಡ್ಡಾಡುತ್ತಾ ಬೀದಿಯಮೇಲೆ ಗಮನವನ್ನಿಟ್ಟು ಅರವಿಂದಳ ಆಗಮನವನ್ನು ಎದುರು ನೋಡ ತೊಡಗಿದ.

ಕಳೆದ ಎರಡು ಮೂರು ವರ್ಷಗಳಿಂದ ತಂದೆತಾಯಿಯರು ಮಗನ ಮದುವೆ ಮಾಡಬೇಕೆಂದು ಎಷ್ಟೆಷ್ಟು ಪ್ರಯತ್ನ ಪಟ್ಟರೂ ಒಪ್ಪದೆ ಎಲ್ಲಕ್ಕೂ ಪ್ರತಿಕೂಲನಾಗಿ ನಿಂತವನಿಗೆ ಅರವಿಂದಾ ಯಾವ ಮಾಯದ ಬಲೆ ಬೀಸಿದಳೋ ಎಂಬ ಆಶ್ಚರ್ಯಾತಿರೇಕವು ತಲೆಯನ್ನು ಬಿಸಿ ಮಾಡಿತ್ತು...ತಾನು ಹೇಗೆ ಇಷ್ಟೊಂದು ಆಕರ್ಷಿಸಲ್ಪಟ್ಟೆ ಎಂಬುದು ಯೋಚನಾತೀತವಾಗಿ ತೋರಿತು. ಅವಳಿಂದ ವಿಳಾಸವನ್ನೂ ತೆಗೆದುಕೊಳ್ಳದೆ ಅವಳಿಗೆ ಮದುವೆಯಾಗಿದೆಯೋ ಇಲ್ಲವೋ ಅದನ್ನೂ ತಿಳಿದುಕೊಳ್ಳದೆ ಅವಳನ್ನು ಹುಚ್ಚನಂತೆ ಬಯಸಿದ್ದೇನಲ್ಲಾ? ಇದೇನು ಹುಚ್ಚು ಹುಡುಗಾಟ! ಕೈಗೂಡುವವರೆಗಾದರೂ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕಾಗಿತ್ತು. ಛಿಃ! ಹುಚ್ಚರಾಸ್ಪತ್ರೆ ಸೇರುವ ಸಮಾಚಾರ ಇದು!...ವಿಷಯ ಮನವರಿಕೆಯಾಗುತ್ತಲೂ ಅಘೋರ ತುಸು ತತ್ತರಿಸಿದ.

ವಿರಹವೇನೆಂಬುದನ್ನೇ ಅರಿಯದ ವೀರ ತನಗರಿಯದಂತೆ ವಿರಹಾಗ್ನಿಯಲ್ಲಿ ಬೆಂದು ತತ್ತರಿಸಿ ಅಂಗಳದಲ್ಲಿ ಅಡ್ಡಾಡ ಹತ್ತಿದ. ಹಾಗೇ ಯೋಚನೆ ಬಂತು....ಇದೆಂತಹ ಮರುಳು! ನನ್ನ ಹೃದಯವೇ ಕಳೆದು ಹೋದಂತೆ ಭಾಸವಾಗುತ್ತಿದೆಯಲ್ಲಾ. ಇದೇನು? ಇದುವರೆವಿಗೆ ಎಷ್ಟುಮಂದಿ ಹುಡುಗಿಯರನ್ನು

ನೋಡಿರಲಿಕ್ಕಿಲ್ಲ? ಎಷ್ಟು ಮಂದಿಯೊಡನೆ ಬೆರೆತಿರಲಿಕ್ಕಿಲ್ಲ? ಇದಂತೂ ಸೋಜಿಗ? ಕಂಡೊಡನೆಯೇ ಹೃದಯವನ್ನು ಸೂರೆಗೊಂಡುಬಿಟ್ಟಳಲ್ಲಾ ಅದು ಹೇಗೆ? ನನ್ನ ಮೈ ಮನಸ್ಸುಗಳು ಮರವಟ್ಟದ್ದುವೋ ಹೇಗೆ?... ಯೋಚನೆ ಬಂದೊಡನೆಯೇ ಮೈಕೈಗಳನ್ನು ಚಿವುಟಿ ನೋಡಿಕೊಂಡ. ಮರು ಕ್ಷಣದಲ್ಲಿ ಬೆಪ್ಪನಂತೆ ತಾನೆಸೆಗಿದ ಕಾರ್ಯಕ್ಕಾಗಿ ತನಗೆ ತಾನೇ ನಗುವುಕ್ಕಿ ಬಂತು.

ಹೊತ್ತು ನಿರಾತಂಕವಾಗಿ ಉರುಳುತಿತ್ತು. ರಸ್ತೆಯ ಕಡೆಗೆ ನೋಡಿ ನೋಡಿ ಕಣ್ಣುಗಳೂ ದಣಿದುವು. ಸಾಯಂಸಮಯದ ತಣ್ಣನೆಯ ತಿಳಿ ಗಾಳಿಯೂ ಬೀಸತೊಡಗಿತು. ಕಾದು ನಿರಾಸೆಯುಕ್ಕಿ ... ಅವಳು ಶನಿವಾರ ಮದರಾಸಿಗೆ ಹೋಗುತ್ತೇನೆ ಎಂದಳಲ್ಲಾ ಹೋಗಿ ರೈಲು ನಿಲ್ದಾಣ ದಲ್ಲಿ ಕಾಯುವುದೇ ?...ಎಂಬ ಯೋಚನೆಯ ಸೆರೆಯಲ್ಲಿ ಮರವಟ್ಟು ನಿಂತ.

ಕಣ್ಣು ಗಡಿಯಾರದ ಕಡೆ ಹೊರಳಿತು. ಹೊತ್ತು ಆರರ ಅಂಚನ್ನು ದಾಟುವುದರಲ್ಲಿತ್ತು- ಕ್ಷಣ ಕ್ಷಣಗಳು ನಿಮಿರಿ ನಡೆದುವು. ಗಳಿಗೆ ಗಳಿಗೆಗಳು ಅಣಕಿಸಿ ಮುಂದುವರಿದುವು. ಅಘೋರ ಎದೆಯ ಸೆಲೆಯೊಡೆದಂತೆ ನಿರಾಶ ನಾದ. ಎದೆಯಾಳದಿಂದ ನಿಟ್ಟುಸಿರೊಂದು ಹೊರಹೊಮ್ಮಿತು...ತುಸು ಹೊತ್ತು ರಸ್ತೆಯಲ್ಲಿ ಅಡ್ಡಾಡಿದರೆ?...ಎನ್ನಿಸಿ ಒಳ ಹೋಗಿ ಕೋಟು ಹಾಕಿ ಕೊಂಡು ಹೊರಬರುವುದಕ್ಕೂ ಅರವಿಂದಾ ಪ್ರಾಕಾರದ ಬಾಗಿಲಿಗೆ ಬರುವು ದಕ್ಕೂ ಸರಿ ಹೋಯಿತು ! ಅವಳನ್ನು ನೋಡುತ್ತಲೂ ಎದೆಯ ಭಾರವನಿ೦ ಳುಹಿ ಒಮ್ಮೆಲೇ ಪುಳಕಿತನಾದ. ಮುಖದಲ್ಲಿ ಮುಗುಳ್ನಗು ಸ್ವಚ್ಛಂದವಾಗಿ ನಲಿಯಿತು. ಅಲ್ಲಿಂದಲೇ ಅವಳೆಂದಳು "ನಿಮ್ಮ ಮನೆಗಾಗಿ ಅಲೆದಲೆದು ಸಾಕಾಗಿ ಹಿಂದಿರುಗೋಣವೆಂದು ಕೊಂಡಿದ್ದಾಗ ಯಾರೋ ತೋರಿದರು. ಬಹಳ ಹಿಂದೆ ನೋಡಿದ ದಾರಿ. ನನಗೆ ಮರತೇ ಹೋಗಿತ್ತು."

"ಅಯ್ಯೊ, ಪಾಪ. ನಾನೇ ಬಂದು ನಿಮ್ಮನ್ನು ಕರೆತರಬಹುದಾಗಿತ್ತು. ನಿಮ್ಮ ಮಾತಿನ ಧಾಟಿಯಲ್ಲಿ ನಿಮಗೆ ಗೊತ್ತಿರ ಬಹುದು ಎಂದುಕೊಂಡೆ."

"ಗೊತ್ತಿತ್ತು..." ಎನ್ನುತ್ತಾ ಅವಳು ನಸುನಗೆ ಬೀರಿದಳು.

"ಬನ್ನಿ ಒಳಗೆ" ಅಘೋರ ಒಲುಮೆಯಿಂದ ಸ್ವಾಗತಿಸಿದ. ಕಣ್ಣುಗಳಲ್ಲಿ ಹಿರಿಯಾಸೆ ನಲಿಯಿತು.

"ನಂದಕ್ಕ ಇದ್ದಾರೆಯೆ ?"

"ಅಲ್ಲಿಂದಲೇ ಕೇಳುತ್ತಿದ್ದೀರೇಕೆ ? ಒಳಗೆ ಬರಲು ಭಯವೇ ?" ಅಘೋರ ಮುಗುಳು ನಕ್ಕು ಹೇಳಿದ "ಇದ್ದಾರೆ ಬನ್ನಿರಿ."

ಬಾಗಿಲಲ್ಲಿ ನಿಂತುಕೊಂಡು "ಅಮ್ಮಾ" ಎಂದು ಅಘೋರ ಕರೆಯುತ್ತಲೂ ನಂದಾ ನಗುಮುಖದಿಂದ ಹೊರಬಂದು ಅರವಿಂದಳನ್ನೂ ಅವಳ ಗೆಳತಿಯನ್ನೂ ಆದರದಿಂದ ಬರಮಾಡಿಕೊಂಡಳು. ಒಳಗಡೆ ಕುಳಿತುಕೊಂಡ ಮೇಲೆ ಅರವಿಂದಾ ಎಂದಳು "ಬೆಂಗಳೂರಿಗೆ ಬಂದಾಗಲೇ ನಿಮ್ಮನ್ನು ಬಂದು ನೋಡಬೇಕು ಎಂದುಕೊಂಡಿದ್ದೆ. ಆದರೆ, ದಿನಗಳು ಕಳೆದುದೇ ಗೊತ್ತಾಗಲಿಲ್ಲ, ನೋಡಿ."

"ಇನ್ನೇನು ? ಹುಡುಗಿಯರ ವಿಚಾರ ಹೇಳಬೇಕೆ ? ಮಾತು...ಮಾತು ....ಮಾತು !" ಎನ್ನುತ್ತಾ ನಕ್ಕಳು ನಂದಾ. ಎಲ್ಲರ ಮುಖದಲ್ಲೂ ನಗು ಮೂಡಿತು. ಅಘೋರ ನಸು ದೂರದಲ್ಲಿ ಕುಳಿತು ನೆಪಮಾತ್ರಕ್ಕೆ ಕೈಯಲ್ಲೊಂದು ಪತ್ರಿಕೆಯನ್ನಿಟ್ಟುಕೊಂಡಿದ್ದ. ಮನಸ್ಸು ಗಾಳಿಗೋಪುರವನ್ನು ಕಟ್ಟುತಿತ್ತು.

"ಇವಳು ನನ್ನ ಸ್ನೇಹಿತೆ ಶ್ಯಾಮಲಾ. ಇವಳ ಜೊತೆ ಒಂದು ವಾರ ಕಳೆಯಲೆಂದು ಬಂದೆ. ನಿನ್ನೆ ಶ್ಯಾಮಲೆಯ ಚಿಕ್ಕಪ್ಪನ ಮಗಳ ಮನೆಗೆ ಹೋಗಿದ್ದೆವು. ದಾರಿಯಲ್ಲಿ ಡಾಕ್ಟರು ಸಿಕ್ಕಿ ಮನೆಗೆ ಕರೆದರು."

ಅಘೋರ ಪತ್ರಿಕೆಯ ಮೇಲೆ ಕಣ್ಣಾಡಿಸಿದ. ತನುಮನಗಳ ಆವೇಗದಿಂದ ಅವಳೊಂದಿಗೆ ಸರಾಗವಾಗಿ ಮಾತುಕತೆಯಾಡಲು ಲಜ್ಜೆಯ ಮೋಡಿ ಮುಸುಗಿದಂತಾದರೂ ತಡೆ ತಡೆದು ಅಂದ–

"ನನಗೆ ನಿಜವಾಗಿಯೂ ನಿಮ್ಮ ಗುರುತು ಹತ್ತಲಿಲ್ಲ."

"ಆಗ ಸಣ್ಣ ಹುಡುಗಿ. ಈಗ ಬೆಳೆದು ಬದಲಾವಣೆ ಹೊಂದಿದ್ದಾಳೆ. ಯಾರಿಗೂ ತಕ್ಷಣ ಗುರುತು ಸಿಕ್ಕುವುದು ಕಷ್ಟವೇ." ಎಂದ ನಂದಾದೇವಿ ಶ್ಯಾಮಲೆಯ ಕಡೆ ತಿರುಗಿ ಕೇಳಿದಳು "ನೀನೇನು ಮಾಡುತಿದ್ದೀ ಶ್ಯಾಮಲಾ ?"

"ಬಿ. ಎ., ಮುಗಿಸಿದ್ದೇನೆ."

"ನೀನೇನಮ್ಮಾ ಮಾಡುತ್ತಿ ?" ಅರವಿಂದಳನ್ನು ಕೇಳಿದಳು ನಂದಾ ದೇವಿ.

"ಇದೇ ತಾನೇ ಎಂ. ಎ., ಪರೀಕ್ಷೆ ಮುಗಿಸಿದ್ದೇನೆ."

"ಮುಂದೆ ಏನು ಮಾಡಬೇಕು ಅಂತ ನಿನ್ನ ಇಷ್ಟ?"

"ಲೆಕ್ಚರರ್ ಆಗಬೇಕೆಂದು ಯೋಚಿಸಿದ್ದೇನೆ."

"ನಿನಗೆ ಮದುವೆಯಾಯಿತೇ ?"

ಆ ಪ್ರಶ್ನೆ ಹೊರಬಿದ್ದೊಡನೆಯೇ ಅಘೋರ ಮೈಯೆಲ್ಲಾ ಮನಸ್ಸಾಗಿ ಕೇಳುತಿದ್ದ. ಒಮ್ಮೆಲೆ ಮೈಯಲ್ಲಿ ಬೆಂಕಿಯ ಝರಿ ಹರಿದಂತೆ ಜುಮುಜುಮ್ ಎನ್ನತೊಡಗಿತು. ಹೃದಯ ಅಳತೆ ಮೀರಿ ಮಿಡಿದಂತಾಯಿತು. ಉತ್ತರಕ್ಕಾಗಿ ಕಿವಿಗಳು ನಿಮಿರಿದುವು.

ನಾಚಿಕೆಯಿಂದ ಮುಖ ಕೆಂಪಡರುತ್ತಲೂ ನಸು ತಲೆಬಾಗಿ "ಇಲ್ಲ." ಎಂದಳು ಅರವಿಂದಾ.

ಉತ್ತರ ಹೊರ ಬಿದ್ದೊಡನೆಯೇ ಅಘೋರ ಹಾಯಾಗಿ ಉಸಿರಾಡಿದ.

"ಕಳೆದ ತಿಂಗಳು ನನ್ನ ಸಹಪಾಟಿಯ ಮದುವೆ ಮದರಾಸಿನಲ್ಲಿ ನಡೆಯಿತು. ನನಗೆ ಹೋಗಬೇಕೆಂದು ತುಂಬ ಮನಸ್ಸಿದ್ದರೂ ಹೋಗಲಾಗಲಿಲ್ಲ. ಜ್ವರ ಬಂದುದರಿಂದ ಮಲಗಿಬಿಟ್ಟೆ."

"ಓ!" ಉದ್ಗಾರ ತೆಗೆದ ಅರವಿಂದಾ—"ಡಾ|| ಮದನ್‌ರವರನ್ನು ಕೈ ಹಿಡಿದ ಹುಡುಗಿ ನನ್ನ ಗೆಳತಿ. ಮಧುಚಂದ್ರಕ್ಕೆ ಹೋದ ಅವರು ಹಿಂದಿರುಗಿದ್ದಾರೋ ಇಲ್ಲವೋ ತಿಳಿಯಲಿಲ್ಲ."

ಕುತೂಹಲದಿಂದ ಅವನ ಉತ್ತರವನ್ನೇ ನಿರೀಕ್ಷಿಸಿದಳು ಅರವಿಂದಾ. ಮುಖ ಹೂವಿನಂತೆ ಅರಳಿತು.

"ಮದನನ ಹೆಂಡತಿ ನಿಮ್ಮ ಗೆಳತಿಯೇ ?"

"ಹೌದು. ಅವಳೂ ನಾನೂ ಬಿ. ಎ., ವರೆಗೆ ಒಟ್ಟಿಗೆ ಓದಿದ್ದೇವೆ."

"ಅವರಿನ್ನೂ ಹಿಂದಿರುಗಲಿಲ್ಲ."

"ವಂದನಾ ನನ್ನ ಆತ್ಮೀಯ ಗೆಳತಿ."

"ಓಹೋ !" ಎಂದ ಅಘೋರ ಹುಬ್ಬೆತ್ತಿ ತುಂಟನಗೆ ಬೀರಿ—"ಶಾಲಾ ದಿನಗಳಿಂದಲೂ ಮದನನೂ ನಾನೂ ಪ್ರಾಣದ ಗೆಳೆಯರು. ಅವನ ಮದುವೆಗೇನೆ ನಾನು ಹೋಗಬೇಕಾಗಿದ್ದುದು."

"ಓ !...ಇಷ್ಟರಲ್ಲಿ ಹಿಂದಿರುಗಿದ್ದಿದ್ದರೆ ವಂದನಾಳನ್ನು ನೋಡಿಯೇ ಹೋಗಬಹುದಾಗಿತ್ತು." ಕಣ್ಣುಗಳಲ್ಲಿ ನಿರಾಸೆ ಒಡೆದು ಮೂಡಿತು.

"ಅದಕ್ಕೇನಂತೆ? ಎಂದಾದರೂ ನೋಡಬಹುದಲ್ಲಾ ?"

"ಇಲ್ಲಿಗೆ ಬರುವುದು ಇನ್ಯಾವಾಗಲೋ."

"ಮನಸ್ಸು ಮಾಡಿದರೆ ಅದು ಎಷ್ಟೊತ್ತಿನ ಕೆಲಸ ?"

"ಈಗೇನೋ ವಿರಾಮವಿತ್ತು ಬಂದೆ. ಯಾವಾಗಲೂ ಹೀಗೆ ಬರುವುದಕ್ಕಾಗುತ್ತದೆಯೆ ?"

"ಮುಖ್ಯವಾಗಿ ಮನಸ್ಸು ಮಾಡಿರಿ."

ಅರವಿಂದಾ ಮಾತಾಡದೆ ನಸು ನಕ್ಕಳು. ನಂದಾ ಅತಿಥಿಗಳಿಗೆ ತಿಂಡಿ ತಿನಿಸುಗಳನ್ನು ತರಲು ಒಳಗಡೆ ಹೋದಳು. ಹಿಂದೆಯೇ ಅರವಿಂದಾ ಗೆಳತಿಯೊಂದಿಗೆ ಒಳಹೋಗಿ ಹೇಳಿದಳು "ಅಮ್ಮಾ ಈಗೇನೂ ತೊಂದರೆ ತೆಗೆದುಕೊಳ್ಳಬೇಡಿರಿ."

ಆದರೂ, ಕೇಳದೆ ಅವಳು ಅಣಿ ಮಾಡತೊಡಗಿದಳು.

"ಇನ್ನೂ ವಿಮಲ್‌ಮಾಮ ಮನೆಗೆ ಬರಲಿಲ್ಲವೇ ?" ಅರವಿಂದಾ ಕೇಳಿದಳು.

"ಇಲ್ಲವಮ್ಮಾ, ಅವರು ಬರುವುದು ಇನ್ನೂ ತುಸು ಹೊತ್ತು."

"ಡಾಕ್ಟರು ಹೊರಹೋದರೆ ನೀವೊಬ್ಬರೇ ಮನೆಯಲ್ಲಿ ?" ಶ್ಯಾಮಲಾ ಕೇಳಿದಳು.

"ಹೌದಮ್ಮಾ ಅವನಿಗೆ ಮದುವೆ ಮಾಡಬೇಕೆಂದು ಎಷ್ಟೆಷ್ಟು ಪ್ರಯತ್ನ ಪಟ್ಟರೂ ಅವನೊಪ್ಪಿಕೊಳ್ಳುವುದಿಲ್ಲ." ಮುಖದಲ್ಲಿ ಬೇಸರವನ್ನು ಸೂಸಿ ನುಡಿದಳು ನಂದಾದೇವಿ.

"ಇನ್ನೂ ಎಷ್ಟು ದಿನ ನೀವೊಬ್ಬರೇ ಹೀಗೆ ತೊಂದರೆಪಡುತ್ತೀರಿ ?" ಎಂದಳು ಅರವಿಂದಾ.

"ಏನು ಮಾಡಲಿ ಅರವಿಂದಾ ?"

ಶ್ಯಾಮಲೆಗೆ ಅರವಿಂದಾ ಹೇಳಿದಳು "ಆಗ ಹೇಗಿತ್ತೋ ಹಾಗೆಯೇ ಇದೆ. ಮನೆಯಲ್ಲಿ ಎಲ್ಲೂ ಬದಲಾವಣೆಯಾಗಿಲ್ಲ." ನಗುತ್ತಾ ಮನೆಯಲ್ಲೆಲ್ಲ ಕಡೆಯೂ ಕಣ್ಣು ಹೊರಳಿಸಿದಳು.

ಅವಳ ನೆನಪನ್ನು ನೋಡಿ ನಂದಾ ನಸು ನಕ್ಕು–"ನೀನು ಮಾತ್ರ ದೊಡ್ಡವಳಾಗಿ ಬದಲಾವಣೆ ಹೊಂದಿದ್ದಿ !"

ಬಿಸಿ ಹಾಲು ತಿಂಡಿಯನ್ನು ಮುಂದಿಡುತ್ತಲೂ ತಾನೇ ತಟ್ಟೆಗೆ ಇಟ್ಟು ಬಿಸಿ ಹಾಲನ್ನು ಬಸಿಗಳಿಗೆ ಹಾಕಿ ಅಣಿ ಮಾಡುತ್ತಿದ್ದ ಅರವಿಂದಳನ್ನು ನೋಡು ನೋಡುತ್ತಾ ನಂದಾದೇವಿಯೆಂದಳು "ನಿನ್ನಂಥ ಒಬ್ಬ ಮಗಳಿದ್ದಿದ್ದರೆ ಯೋಚನೆಯೇ ಇರಲಿಲ್ಲ ನನಗೆ."

"ಆಗಲೂ ನೀವು ಹಾಗೇ ಅನ್ನುತಿದ್ದಿರಿ." ಕಣ್ಣರಳಿಸಿ ನಸು ನಕ್ಕಳು ಅರವಿಂದಾ.

"ಇವಳನ್ನೇ ಸೊಸೆ ಮಾಡಿಕೊಳ್ಳಿರಿ !" ತಕ್ಷಣ ಶ್ಯಾಮಲೆಯೆಂದಳು "ಮಗಳೂ ಆಗುತ್ತಾಳೆ !"

ಒಡನೆ ನಂದಾದೇವಿಯ ಕಣ್ಣುಗಳು ಅರವಿಂದಳ ಮೇಲೆ ಹರಿದುವು. ಅವಳು ನಸು ಕೋಪದಿಂದ, "ನನ್ನನ್ನಲ್ಲ ನಿನ್ನನ್ನು !"

"ಅದ್ಹೇಗಾದೀತು ? ನಿನ್ನನ್ನಾದರೆ ಮೊದಲಿಂದ ನೋಡಿದ್ದಾರೆ. ಮೆಚ್ಚಿದ್ದಾರೆ !"

ಹುಬ್ಬೆತ್ತಿ ಶ್ಯಾಮಲಾ ನಸು ಗಟ್ಟಿಯಾಗಿಯೇ ಹಾಗೆಂದಿದ್ದಳು.

ಒಡನೆಯೇ ಅರವಿಂದಾ ಕೆಂಪಡರಿದರೂ ನಸು ಕೋಪದಿಂದ ಹುಬ್ಬು ಗಂಟಿಕ್ಕಿ ಗೆಳತಿಯನ್ನು ಗದರುವ ದನಿಯಲ್ಲಿ ನುಡಿದಳು "ಶ್ಶ್ ! ಹುಚ್ಚು ಹುಚ್ಚಾಗಿ ಹರಟಬೇಡ !"

ತನುಮನಗಳನ್ನು ಹಿಂದೆಯೇ ಅಟ್ಟಿ ಕುಳಿತಿದ್ದ ಅಘೋರನ ಮೈ ಪುಳಕಿತವಾಯಿತು. ಮನದಲ್ಲೇ ತನ್ನ ಆಸೆ ಈಡೇರಲೆಂದು ಪ್ರಾರ್ಥಿಸಿಕೊಂಡ. ಅಷ್ಟರಲ್ಲಿ ನಂದಾದೇವಿ ಅಲ್ಲಿಗೆ ಬಂದು ಕೇಳಿದಳು "ಅಘೂ, ನೀನಿಷ್ಟು ಹಾಲು ತೆಗೆದುಕೊಳ್ಳುತ್ತೀಯೇನು ?"

ಅಷ್ಟೇ ಸಾಕಾಗಿತ್ತು. ಅಘೋರ ತಾಯಿಯ ಹಿಂದೆಯೇ ಒಳ ಬಂದ. ಮೇಜಿನ ಮೇಲೆ ತಿಂಡಿ ತಿನಿಸುಗಳು ಬಿಸಿ ಬಿಸಿ ಹಾಲು ಅಣಿಯಾಗಿತ್ತು. ಬಸಿಯನ್ನು ಮುಂದಿಟ್ಟ ಅರವಿಂದಳ ಹಸ್ತ ಕಮಲಗಳ ಸೊಂಪನ್ನು ಹೀರುತ್ತಾ ತೆಗೆದುಕೊಂಡು ಹೇಳಿದ "ನೀವು ನಮ್ಮ ಮನೆಯಲ್ಲೂ ನಾಲ್ಕು ದಿನ ಇದ್ದು ಹೋಗಿ. ಅಮ್ಮ ಸದಾ ಬೇಸರ ಎನ್ನುತ್ತಲೇ ಇರುತ್ತಾರೆ."

"ಹೌದಮ್ಮಾ, ಹಾಗೇ ಮಾಡಿರಿ." ನಂದಾದೇವಿಯೆಂದಳು.

ಶ್ಯಾಮಲೆಯ ತುಂಟ ನೋಟ ಅರವಿಂದಳನ್ನು ಇರಿಯಿತು. ತಕ್ಷಣ ಅವಳು ಏನಾದರೂ ಹೇಳಿಬಿಟ್ಟಾಳೆಂಬ ಭಯದಿಂದ ಮೊದಲೇ ಕಾರಣವನ್ನು ಮುಂದಿಟ್ಟಳು "ಇಲ್ಲ. ಅಪ್ಪ ಅಮ್ಮ ಕಾದಿರುತ್ತಾರೆ."

ಶ್ಯಾಮಲಾ ಉಕ್ಕಿ ಬಂದ ನಗುವನ್ನು ತಡೆದುಕೊಂಡು ಹೇಳಿದಳು "ಎಲ್ಲಾ ಮೇಲು ಮೇಲಕ್ಕೆ !"

"ಬಂದಲ್ಲಿಂದ ಹೀಗೇ ಗೋಳು ಹುಯ್ಯುತಿದ್ದಾಳೆ! ಒಂದೊಂದು ಸಲ ತಡೆಯಲಾಗದ ಕೋಪ ಬರುತ್ತೆ !" ಅರವಿಂದ ನಂದಾದೇವಿಯೊಂದಿಗೆ ದೂರಿತ್ತಳು.

"ಹೋಗಲಿ ಬಿಡು, ಎಲ್ಲರಿಗೂ ಒಂದೊಂದು ಕಾಲ !"

ಅರವಿಂದಳಿಗೆ ಎಲ್ಲಿಲ್ಲದ ಲಜ್ಜೆ ಮೂಡಿತು, ಮೈಯ ರಕ್ತವೆಲ್ಲಾ ಮುಖಕ್ಕೆ ನುಗ್ಗಿದಂತೆ ಕೆಂಪು ಕೆಂಪಾದಳು. ಜೊತೆಗೆ ಕೋಪದ ಸೊಂಪೂ ಕೂಡಿಕೊಂಡಿತು.

ಹುಡುಗಿಯರ ಕೂಟ ಮನಸ್ಸನ್ನು ಹೂವಿನಂತೆ ಅರಳಿಸಿತು. ಪ್ರಸನ್ನ ವದನದಿಂದ ನಿಟ್ಟಿಸುತ್ತಾ ಕುಳಿತ ಅಘೋರ. ಅಷ್ಟರಲ್ಲಿ ವಿಮಲ್ ದಾಸ್ ಒಳ ಬಂದ. ಹುಡುಗಿಯರ ಕಡೆ ಕಣ್ಣರಳಿಸಿ ನೋಡಿ ಗುರುತು ಹತ್ತದೆ ಕೇಳಿದ "ಯಾರು ಗೊತ್ತಾಗಲಿಲ್ಲವಲ್ಲಾ ?"

ಅರವಿಂದಾ ಮುಖದಲ್ಲಿ ಮುಗುಳ್ನಗು ಬೀರಿ ಗೆಳತಿಯೊಂದಿಗೆ ಎದ್ದು ನಿಂತಳು.

"ಚಂದ್ರಬಾಬುಗಳ ಮಗಳು ಅರವಿಂದಾ." ನಂದಾದೇವಿಯ ಮಾತು ಹೊರಬೀಳುತ್ತಲೂ ವಿಮಲ್‌ದಾಸ್ ಅವಳನ್ನೇ ನಿಟ್ಟಿಸಿ ನೋಡಿ "ಓ ! ಬಹಳ ಬೆಳೆದು ಬಿಟ್ಟಿದ್ದೀಯೆ! ನೋಡಿ ಬಹಳ ದಿನಗಳಾಗಿದ್ದುವು. ಅಪ್ಪ ಅಮ್ಮ ಹೇಗಿದ್ದಾರೆ ?" ಎಂದ. ಹಳೆಯ ನೆನಪು ಮನವನ್ನು ಅರಳಿಸಿತು. ಪುನಃ ಕೇಳಿದ "ಈಗೆಲ್ಲಿದ್ದೀರಿ? ಇಲ್ಲಿಂದ ನಿಮಗೆ ವರ್ಗವಾದುದು ಹೈದರಾಬಾದಿಗಲ್ಲವೇ –"

"ಹೌದು. ನಾವೀಗ ಮದರಾಸಿನಲ್ಲಿದ್ದೇವೆ."

"ನಿನ್ನ ಅಣ್ಣಂದಿರು ಏನು ಮಾಡುತಿದ್ದಾರೆ?"

"ದೊಡ್ಡವನು ಇಂಜನೀಯರು. ಎರಡನೆಯವನು ಕಂಟ್ರಾಕ್ಟರು."

"ತಂಗಿ ?"

"ಬಿ. ಎ., ಓದುತಿದ್ದಾಳೆ."

"ಅಣ್ಣಂದಿರಿಗೆ ಮದುವೆಯಾಯಿತೇ ?"

"ಇಲ್ಲ" ಎಂದೆನ್ನುವುದರೊಳಗಾಗಿ ಶ್ಯಾಮಲಾ ಅಂದಳು "ತಂಗಿಯ ದಾಗಲಿ ಎನ್ನುತಿದ್ದಾರೆ ಅವರು." ಗಲ್ಲದ ಮೇಲೆ ತುಂಟ ನಗು ಪಸರಿಸಿತ್ತು.

ಅರವಿಂದಾ ಅತ್ತ ತಿರುಗಿ ನಿಂತಳು. ಎಲ್ಲರೂ ಮುಸುಮುಸು ನಕ್ಕರು. ಅರವಿಂದಳಿಗೆ ಶ್ಯಾಮಲೆಯ ಮೇಲೆ ಎಲ್ಲಿಲ್ಲದ ಕೋಪ. ಆದರೆ ಏನೂ ಮಾಡು ವಂತಿಲ್ಲದೆ ಸುಮ್ಮನಿರಬೇಕಾದರೂ ವಿನಾ ಕಾರಣ ನನ್ನನ್ನು ಗೋಳು ಹುಯ್ಯು ತಿದ್ದಾಳಲ್ಲಾ ಎನ್ನಿಸಿತು. ಎಲ್ಲರೂ ಎದುರಿಗಿದ್ದುದರಿಂದ ಮಾತಾಡುವಂತಿಲ್ಲದೆ ನೋಟದಿಂದಲೇ ಇರಿಯುವಂತೆ ನೋಡಿದಳು. ಅವಳ ನೋಟ ಎಲ್ಲರಿಗೂ ಇನ್ನಷ್ಟು ನಗು ತರಿಸಿತು. ಎಲ್ಲರೂ ಮುಸು ಮುಸು ನಗತೊಡಗುತ್ತಲೂ ಅಡುಗೆಯ ಮನೆಯ ಕಡೆ ಓಡಿದಳು. ಗಡಿಯಾರದ ಕಡೆ ಕಣ್ಣು ಹೊರಳಿತು. ಗಂಟೆ ಏಳೂವರೆಯಾಗಿತ್ತು. ನೋಡಿ ನಂದಾದೇವಿಯ ಬಳಿಗೆ ಬಂದು ಹೇಳಿ ದಳು "ಅಮ್ಮಾ, ನಾವಿನ್ನು ಹೊರಡುತ್ತೇವೆ."

"ಅಪರೂಪಕ್ಕೆ ಬಂದಿದ್ದಿ. ಈಗಲೇ ಏನಷ್ಟವಸರ ?"

"ಓ, ಕತ್ತಲಾಗಿ ಬಿಟ್ಟಿದೆ !"

"ಜೊತೆಗೆ ಅಘೂ ಬರುತ್ತಾನೆ."

"ಬೇಡ. ಅಂಥಾದ್ದೇನಿಲ್ಲ."

"ನಾಳೆ ಬಾಮ್ಮಾ."

"ನಾಳೆ ರಾತ್ರಿಯ ರೈಲಿಗೆ ಹೊರಡಬೇಕು."

"ಬೆಳಿಗ್ಗೆ ಬಂದು ಸಾಯಂಕಾಲ ಹೋಗಬಹುದು. ಖಂಡಿತಾ ಇಬ್ಬರೂ ಬನ್ನಿರಿ. ಸಂಕೋಚ ಮಾಡಿಕೊಳ್ಳಬೇಡಿರಿ." ನಂದಾದೇವಿ ಒತ್ತಾಯ ಪೂರ್ವಕವಾಗಿ ಹೇಳಿದಳು.

"ಇನ್ನೊಮ್ಮೆ ಬಂದಾಗ ಬರುವೆ."

"ಇನ್ನೆಲ್ಲಿ ಬರುತ್ತಿ ? ಮದುವೆಯಾಗಿ ಯಾವೂರು ಸೇರಿಕೊಳ್ಳುತ್ತಿಯೋ ಏನೋ."

ಮಾತು ಮುಗಿಯುವುದರೊಳಗಾಗಿ ಅಘೋರ ಬಂದ. "ಬೆಳಗ್ಗೆ ನಾನೇ ಬಂದು ಕರೆದುಕೊಂಡು ಬರುವೆ ಸಂಜೆಗೆ ಹಿಂತಿರುಗಬಹುದು. ನನಗೂ ಕೆಲಸವಿಲ್ಲದೆ ಬೇಜಾರು." ಅವನೆಂದ ಮಾತಿನಲ್ಲಿ ಯಾರಿಗೂ ವಿಶೇಷ ಕಾಣ ಲಿಲ್ಲ. ಸ್ನೇಹ ಸಹಜವಾಗಿ ದನಿ ಹೊರಬಂದಿತ್ತು. ತುಸು ಯೋಚಿಸಿ ಹುಡುಗಿಯರು ಒಪ್ಪಿಕೊಂಡರು. ಅವರನ್ನು ತಾನೇ ಮನೆಗೆ ತಲುಪಿಸಿ ಬರುವುದಾಗಿ ಹೇಳಿದಾಗಲೂ ಹೊತ್ತಾಗಿದ್ದುದರಿಂದ ಹುಡುಗಿಯರು ಒಪ್ಪಿ ಕೊಂಡರು. ನಂದಾದೇವಿ ಹಣೆಗೆ ಕುಂಕುಮವಿಟ್ಟು ಬೀಳ್ಕೊಟ್ಟಳು.

ಮೂವರೂ ಸಾಲಾಗಿ ಹೊರಟರು.

"ನಾನು ಎಷ್ಟೋ ಬಾರಿ ಮದರಾಸಿಗೆ ಬಂದಿದ್ದೇನೆ. ನೀವಲ್ಲಿರುವುದು ನನಗೆ ತಿಳಿಯದು." ಎಂದ ಅಘೋರ.

"ಅಣ್ಣಂದಿರಿಬ್ಬರೂ ಅಲ್ಲಿ ನೆಲೆಸಿದುದರಿಂದ ಎಲ್ಲರೂ ಈಗ ಅಲ್ಲಿದ್ದೇವೆ."

"ನೀವು ಹೀಗೆ ಬಂದುದು ಅನುಕೂಲವಾಯಿತು. ಇಲ್ಲದಿದ್ದಲ್ಲಿ ನಮ್ಮ ಹಳೆಯ ಸ್ನೇಹ ಹಾಗೇ ಹುಗಿದು ಹೋಗುತಿತ್ತು."

"ನೀವೊಮ್ಮೆ ಮದರಾಸಿಗೆ ಬನ್ನಿರಿ." ಔಪಚಾರಿಕವಾಗಿ ನುಡಿದಳು ಅರವಿಂದಾ.

"ಓ ! ಬಂದೇ ಬರುವೆ" ಅಘೋರ ಹರ್ಷದ ನೆಲೆಯಾದರೂ ತುಸು ಬಿಗಿಹಿಡಿದ.

ಅವರ ಮನೆ ಬಹಳ ದೂರದಲ್ಲಿರಲಿಲ್ಲ. ಇನ್ನಷ್ಟು ದೂರ ಹೋಗುವುದ ರೊಳಗಾಗಿ ಸಿಕ್ಕಿತು. ಅವರು ಒಳಗಡೆ ಕರೆದರೂ "ಬೆಳಿಗ್ಗೆ ತಯಾರಿರಿ. ಆಗ ಹೇಗೂ ಬರುತ್ತೇನಲ್ಲಾ." ಎನ್ನುತ್ತಾ ಹೊರಟೇ ಬಿಟ್ಟ.

ಇದುವರೆವಿಗೂ ಯಾವ ಹುಡುಗಿಯನ್ನೂ ಮನ ಒಪ್ಪದುದು ಬಹುಶಃ ಇದಕ್ಕಾಗಿಯೇ ಇರಬಹುದು ಎಂದೆನಿಸಿದಾಗ ತಿಳಿನೀರಿನ ಬುಗ್ಗೆಯಂತೆ ಹೃದಯ ಉಕ್ಕೇರಿತು. ಮದುವೆಯಾದರೆ ಇವಳನ್ನು ವಿನಾ ಬೇರೆ ಬೇಡವೇ ಬೇಡ ಎಂದು ಮನದಲ್ಲೇ ನಿರ್ಧರಿಸಿದ. ಹೊಸ ಅನುಭವ, ಹೊಸ ಹುರುಪು ಮೈಯಲ್ಲಿ ನೂರ್ಮಡಿಯ ಉತ್ಸಾಹವನ್ನು ಮೂಡಿಸಿತು. ಶಕ್ತಿಯ ಹೊನಲು ಮಿಂಚಿನ ಝರಿಯಂತೆ ಧಮನಿ ಧಮನಿಯಲ್ಲಿಯೂ ಹರಿದಾಡಿತು. ಅಘೋರ ಮೈಯೆಲ್ಲಾ ಹರ್ಷದ ಮನೆಯಾಗಿ ಬಂದ ಹೊಸರೀತಿಯನ್ನು ನಂದಾದೇವಿ

ಗಮನಿಸದಿರಲಿಲ್ಲ. ಊಟವಾದ ನಂತರ ತಾಯಿಯೊಬ್ಬಳೇ ಅಡುಗೆಯ ಮನೆಯಲ್ಲಿದ್ದುದನ್ನು ನೋಡಿ ಒಳಬಂದು ಒಂದು ಲೋಟ ನೀರನ್ನು ತೆಗೆದುಕೊಂಡು ಕುಡಿಯುತ್ತಾ ಹೇಳಿದ "ನಾನೊಂದು ಮಾತು ಹೇಳಲೇ ?"

"ಹೇಳು ಅಘೂ !"

"ನಾನು ಅರವಿಂದಳನ್ನು ಮದುವೆಯಾಗುವೆ. ಅವಳನ್ನು ಕೇಳಿ ನೋಡಿರಿ. ಅವಳೊಪ್ಪದಿದ್ದರೆ ನನಗೆ ಮದುವೆಯೇ ಬೇಡ."

"ಅಯ್ಯೊ, ಈಗಲೇ ಹಾಗೆಂದು ನಿರ್ಧರಿಸಬೇಡ. ಅವರೆಲ್ಲಾ ಈ ಸ್ಥಳ ಬಿಟ್ಟು ಎಷ್ಟೋ ವರ್ಷಗಳಾಗಿವೆ. ಅವರ ಮನಸ್ಸು ಹೇಗಿದೆಯೋ ? ಒಪ್ಪುತ್ತಾರೋ, ಇಲ್ಲವೋ ಯೋಚಿಸಿ ನಿರ್ಧರಿಸು ಮಗೂ."

ನಂದಾದೇವಿ ಬಹಿರಂಗವಾಗಿ ಇದ್ದ ವಿಚಾರವನ್ನು ಮುಂದಿಟ್ಟರೂ ಅವನ ಬಾಯಿಯಲ್ಲಿ ಮದುವೆಯಾಗಲು ಒಪ್ಪಿಗೆಯ ನುಡಿ ಹೊರ ಬಿದ್ದುದು ಎದೆಯ ಭಾರವನ್ನು ಇಳುಹಿತ್ತು. ಮನದಲ್ಲೇ ಲಗ್ನಫಲ ಕೂಡಿ ಬರಲೆಂದು ಪ್ರಾರ್ಥಿಸಿಕೊಂಡಳು.

"ಆಗಲೇ ಹೇಳಿದೆನಲ್ಲಾ ಒಪ್ಪದೇ ಹೋದರೆ ನನಗೆ ಮದುವೆಯೆ ಬೇಡ."

"ಲಗ್ನ ಫಲ ಕೂಡಿ ಬಂದರೇನೋ ಸರಿ."

"ಏನೇ ಬೇಕಾದರೂ ಆಗಲಿ, ಇದೇ ನನ್ನ ಅಂತಿಮ ನಿರ್ಧಾರ."

ನಂದಾದೇವಿ ಮನದಲ್ಲೇ ನೂರು ದೇವರನ್ನು ಪ್ರಾರ್ಥಿಸಿಕೊಂಡಳು. ಆನಂದ ಲಹರಿಯಿಂದ ಹೃದಯ ಉಕ್ಕೇರಿತು. ಅರವಿಂದಾ ಮನದಲೆಯಲ್ಲಿ ಒಲವಿನ ಮೂರ್ತಿಯಾಗಿ ಮೂಡಿ ನಿಂತಳು. ತಾಯಿಯ ಮುಖದಲ್ಲಿನ ಆನಂದ ಲಹರಿಯನ್ನು ಗಮನಿಸಿ ಅಘೋರ ನಗು ನಗುತ್ತಾ ಅಲ್ಲಿಂದ ಕಾಲ್ತೆಗೆದ.

ಮೇಜಿನ ಮೇಲಿನ ರೇಡಿಯೋ ಮಧುರವಾದ ದನಿಯಲ್ಲಿ ಹಾಡುತಿತ್ತು. ಹರಿದು ಬಂದ ಹೆಣ್ದನಿ ತನುಮನಗಳಿಗೆ ಸಾಂತ್ವನ ನೀಡಿತು. "ತಲ್ಲಣಿಸದಿರು ಕಂಡ್ಯಾ ತಾಳು ಮನವೇ."

ಒಮ್ಮೆಲೇ ತನುಮನಗಳು ಪುಳಕಿತವಾದುವು. ಸಾನಂದದಿಂದ ಮೈಮರೆತು ಕುಳಿತುಕೊಂಡ. ಕಿಟಕಿಯಲ್ಲಿ ಭರ್ರನೆ ತೂರಿ ಬಂದ ತಂಗಾಳಿ ಮುಖ

ವೈಗಳನ್ನು ನೇವರಿಸಿ ಮುದ್ದಿಸಿತು. ಒಡನೆ ಮಂದ ಮಾರುತನ ಸ್ಥಾನದಲ್ಲಿ ಅರವಿಂದಾ ಮೂಡಿ ನಿಂತಂತಾಯಿತು. ಅವಳ ಒಲವಿನ ಹಸ್ತಗಳೇ ಮುದ್ದು ಗೈಯುತ್ತಿವೆ ಎಂದೆನಿಸಿ ಅಘೋರನ ಕಣ್ಣುಗಳು ಆರವಿಂದಳಿಗಾಗಿ ತಡುಕಾಡಿ ದುವು. ಹೃದಯ ಹಿಗ್ಗಿ ಹೆಬ್ಬಾಗಿಲನ್ನು ತೆರೆಯಿತು. ಮನಸ್ಸು ಮುಗಿಲಿನೆತ್ತ ರಕ್ಕೆ ಏರಿ ನಿಂತಿತು.

ಆದರೆ.......?

ಛೀಃ! ಇದೆಂಥ ಹುಚ್ಚು? ಇನ್ನೂ ಕೈಗೂಡದ ವಿಷಯಕ್ಕೆ ಇಷ್ಟೊಂದು ಇಂಬು ಕೊಟ್ಟರೆ ಹೇಗೆ? ಎಂದು ತನಗೆ ತಾನೆ ಚಡಪಡಿಸಿದ. ಯೋಚನೆಗಳ ತಿಕ್ಕಾಟದಲ್ಲಿ ಮನಸ್ಸು ಕಲಸು ಮೇಲೋಗರವಾಯಿತು. ಅಘೋರ ಸ್ವಲ್ಪ ಹೊತ್ತು ಅಲುಗದೆ ಕುಳಿತುಕೊಂಡ. ದಿಟ್ಟಿ ಕಿಟಕಿಯಾಚೆ ದೂರ ನಕ್ಷತ್ರಗಳ ರಾಶಿಯಲ್ಲಿ ಮುಳುಗಿ–ಫಳಫಳ ಮಿನುಗುವ ಅವುಗಳ ನಡುವೆ ತೇಲಿ ತೇಲಿ ನಲಿಯಿತು. ಅಘೋರ ಯೋಚನಾಪರನಾದ. ಹಿಂದು ಮುಂದು ಯೋಚಿ ಸದೆ ಮೂಢನಂತೆ ಅವಳನ್ನು ಬಯಸಿದ್ದೇನಲ್ಲಾ ಏನು ಗತಿ? ಮನದಲೆಯಲ್ಲಿ ಮತ್ತೆ ಅದೇ ಪ್ರಶ್ನೆ ಮೂಡಿ ನಿಲ್ಲಬೇಕೆ?

ಪ್ರಶ್ನೆ ಎದ್ದೊಡನೆಯೇ ಮೈ ಜುಂಮ್ಮೆಂದಿತು. ತುಸು ಹೊತ್ತು ಉರು ಳಿತು. ಭಾವೋದ್ವೇಗಕ್ಕೆ ಸಾಂತ್ವನ ಗೈಯ್ಯುವಂತೆ ಸೂಕ್ತಿಯೊಂದು ಮನೋ ಮಂದಿರದಲ್ಲಿ ವೀಣೆಯಂತೆ ಮಿಡಿಯಿತು.

ಸಬಂಧುರ್ಯೋಹಿತೇಪ್ಸುಸ್ಸ್ಯಾತ್ಸಪಿತಾ ಯಸ್ತು ಪೋಷಕಃ ।
ಸ ಸಖಾ ಯತ್ರ ವಿಶ್ವಾಸ ಸ್ಸಾಭಾರ್ಯಾ ಯತ್ರನಿವೃತಿಃ ॥

ಹೌದು, ಹೌದು. ಯಾರು ಹಿತಚಿಂತಕರೋ ಅವರೇ ಬಂಧು. ಯಾರು ಪೋಷಿಸುತ್ತಾರೋ ಅವರೇ ತಂದೆ. ಯಾರಲ್ಲಿ ನಂಬುಗೆ ಉಂಟಾಗುತ್ತದೆಯೋ ಅವಳೇ ಭಾರ್ಯೆ....ನಿಜ, ನಿಜ. ಅವಳೇ ಭಾರ್ಯೆ...ಇಲ್ಲದ ಮೇಲೇಕೆ?....ಜೀವನ ಅಂದರೆ ಹುಡುಗಾಟಿಕೆಯೆ?...

ಲಗ್ನ ಫಲ ಕೂಡಿಬಂದರೆ ಅರವಿಂದಳೇ ಭಾರ್ಯೆ. ಇಲ್ಲದಿದ್ದರೆ ಬೇಡವೇ ಬೇಡ. ದೃಢ ನಿರ್ಧಾರ ಮತ್ತೆ ಮೂಡುತ್ತಲೂ ಅಘೋರ ಸಮಾಧಾನದ ಉಸಿ ರನ್ನು ಬಿಟ್ಟ.

(೧೧)

ಅಧ್ಯಾಯ

೧೬

ಮರುದಿನ ಬೆಳಗ್ಗೆ ಅಘೋರ ಅವರ ಮನೆಯನ್ನು ಹೊತ್ತಿಗೆ ಸರಿಯಾಗಿ ಮುಟ್ಟಿದ. ಹುಡುಗಿಯರು ತಯಾರಿದ್ದರು. ಶ್ಯಾಮಲಾ ಬಿಸಿಬಿಸಿ ಚಹ ವನ್ನು ತಂದು ಮುಂದಿಟ್ಟಳು. ಅವಳ ಚಿಕ್ಕಪ್ಪನ ಮಗ–ವಿದ್ಯಾಧರ ಬಂದು ಬಳಿಯಲ್ಲಿ ಕುಳಿತುಕೊಂಡು–"ಡಾಕ್ಟರ್, ನಿಮ್ಮನ್ನು ಆಸ್ಪತ್ರೆಯಲ್ಲಿ ನೋಡಿ ದ್ದೇನೆ."

"ಯಾವಾಗ ?"

"ನಮ್ಮ ಚಿಕ್ಕಮ್ಮನಿಗೆ ಆಪರೇಶನ್ ಆದಾಗ."

"ಯಾರು ಮಾಡಿದರು ?"

"ಡಾ|| ಭಾರ್ಗವಾ ಅಪೆಂಡಿಸೆಕ್ಟಮಿ (Appendisectomy) ಮಾಡಿದರು. ಅವರಿಗೆ ಬಹಳ ದಿನಗಳಿಂದ ಹೊಟ್ಟೆ ನೋವು ಬರುತಿತ್ತು."

"ಓ ! ಈಗ ಗೊತ್ತಾಯಿತು. ಹತ್ತು ವರ್ಷಗಳು ಡಾಕ್ಟರಿಂದ ಡಾಕ್ಟರಿಗೆ ಅಲೆದವರು ತಾನೇ ?"

"ಹೌದು. ಹೌದು !" ಹುಡುಗನ ಮುಖದಲ್ಲಿ ನಸು ನಗು ಅರಳಿತು.

"ನನಗೂ ಆಗ ನಿಮ್ಮನ್ನು ನೋಡಿದ ಜ್ಞಾಪಕವಿದೆ." ಎಂದ ಅಘೋರ.

ಅಘೋರ ಹುಡುಗಿಯರೊಂದಿಗೆ ನಗು ಮುಖದಿಂದ ಹೊರಬಿದ್ದ. ದಾರಿ ನಿಧಾನವಾಗಿ ಸಾಗಿತು.

"ನೀವೇಕೆ ಆಸ್ಪತ್ರೆಗೆ ಹೋಗುತ್ತಿಲ್ಲ ?" ಅರವಿಂದಾ ಕೇಳಿದಳು.

"ನನಗೆ ಫ್ಲೂ ಆಗಿತ್ತು. ಅನಂತರ ಪದೇ ಪದೇ ಜ್ವರ ಬಂದುದರಿಂದ ಈ ಸಲ ವಿಶ್ರಾಂತಿ ತೆಗೆದುಕೊಳ್ಳುತಿದ್ದೇನೆ. ಇದುವರೆವಿಗೆ ಜ್ವರ ಬಿಟ್ಟೊಡ ನೆಯೇ ಕೆಲಸಕ್ಕೆ ಹೊರಟು ಬಿಡುತಿದ್ದುದರಿಂದಲೋ ಏನೋ....ಪುನಃ ಪುನಃ ಮರುಕಳಿಸಿತು."

"ಮತ್ತೇಕೆ ಇಲ್ಲಿಯವರೆಗೆ ಬರುವ ತೊಂದರೆ ತೆಗೆದುಕೊಂಡಿರಿ ?"

"ಹಳೆಯ ಸ್ನೇಹಕ್ಕೆ ಅಷ್ಟೂ ಬೇಡವೇ ?"

"ಆದರೂ ತೊಂದರೆ ತೆಗೆದುಕೊಳ್ಳಬಾರದಿತ್ತು"

"ಅಯ್ಯೊ, ನನಗೇನಾದರೂ ಇದರಿಂದ ಜಡ್ಡಾದರೆ ನೀವೇ ಬಂದು ನೋಡಿಕೊಳ್ಳಿ. ನಿಮಗಾಗಿ ನಾನು ತೊಂದರೆ ತೆಗೆದುಕೊಂಡಿದ್ದೇನೆ. ನನಗಾಗಿ ನೀವು ಸ್ವಲ್ಪ ತೊಂದರೆ ತೆಗೆದುಕೊಂಡರೆ ತಪ್ಪೇನಲ್ಲ." ಅಘೋರ ಕಡೆಗಣ್ಣ ನೋಟ ಬೀರಿದ. ಕಣ್ಣುಗಳಲ್ಲಿ ಅರ್ಥಪೂರ್ಣ ಭಾವ ನಲಿಯಿತು.

ಓ...ಏನಿರಬಹುದು ?

ಒಮ್ಮೆಲೇ ತನ್ನ ಹತೋಟಿ ತಪ್ಪಿ ಮೈಯ ರಕ್ತವೆಲ್ಲಾ ಮುಖಕ್ಕೆ ನುಗ್ಗಿ ಬಂದಂತೆ ಮುಖ ಕೆಂಪುಕೆಂಪಾಯಿತು. ಅರವಿಂದಾ ಅದನ್ನು ತೋರಗೊಡದಿರಲು ಬೆವರನ್ನು ಒರೆಸುವ ನೆವದಲ್ಲಿ ಕರವಸ್ತ್ರದಿಂದ ಒರಸಿಕೊಳ್ಳತೊಡಗಿದಳು. ಪಕ್ಕದಲ್ಲಿದ್ದ ಶ್ಯಾಮಲಾ ಮೆಲ್ಲಗೆ ತಿವಿದು ಕಿವಿಯಲ್ಲಿ ಕೇಳಿದಳು "ಅದೇಕಷ್ಟು ಕೆಂಪಗಾದೆ ?"

"ಶ್ಶ್ ! ನೀನೊಂದು ಪೀಡೆ !" ಮನದಲ್ಲೇ ಸಿಡುಕಿದಳು ಅರವಿಂದಾ. ಈಗೀಗ ತನ್ನಲ್ಲೇ ತಾನು ಹುಗಿದು ಹೋಗುವಂತೆ ಭಾಸವಾಯಿತು.

ಅಘೋರನ ಕಳ್ಳನೋಟದಿಂದ ತಪ್ಪಿಸಿ ಕೊಳ್ಳಲು ಅರವಿಂದಾ ಬಾಗಿ ಬಲಗಾಲಿನ ತುದಿ ಬೆರಳ ಮೇಲೆ ಕೈ ಬೆರಳಾಡಿಸ ತೊಡಗಿದಳು. ಕೂಡಲೇ ಎಡಬಲಗಳಿಂದ ದನಿಗಳೆರಡು ಹೊರ ಬಿದ್ದುವು "ಏನಾಯಿತು ?...ಏನಾಯಿತು ಅರವಿಂದಾ ?"

ಅಘೋರನ ಕಣ್ಣು ಅವಳ ಹೊಂದಾವರೆಯಂತಹ ಪಾದಗಳ ಮೇಲೆ ಹೊರಳಿತು. ಅವಳು ತುದಿ ಬೆರಳುಗಳನ್ನು ಉಜ್ಜಿಕೊಳ್ಳುತಿದ್ದಳು. ಅಘೋರ ಪುನಃ ಕೇಳಿದ "ಎಡವಿದಿರಾ ? ಪೆಟ್ಟು ತಾಗಿತೇ ?"

"ಪೆಟ್ಟು ತಾಗಿದರೆ ಹೆದರ ಬೇಕಾಗಿಲ್ಲ. ಡಾಕ್ಟರಿದ್ದಾರೆ !"

"ಥೂ, ಹೋಗೆ ! ಇರುವೆ ಕಚ್ಚಿತು." ಮುಖದ ಕೆಂಪನ್ನು ತೋರಗೊಡದಂತೆ ಬಾಗಿದ ಅರವಿಂದಳ ಹಾಲ್ಗೆನ್ನೆಗಳು ಇನ್ನಷ್ಟು ಕೆಂಪೇರಿದುವು. ಸಿಟ್ಟಿನಿಂದ ಶ್ಯಾಮಲೆಯ ಕಾಲನ್ನು ಅಲ್ಲಿಂದಲೇ ಗಟ್ಟಿಯಾಗಿ ಚಿವುಟಿ ತನ್ನ ಸೇಡನ್ನು ತೀರಿಸಿಕೊಂಡಳು.

ಶ್ಯಾಮಲಾ ಮಿಡುಕಿ ಬಿದ್ದು "ಪರವಾಯಿಲ್ಲ, ಕಣೆ !" ಎಂದಳು ರಾಗವಾಗಿ.

"ನಿನಗೂ ಎಲ್ಲೋ ಇರುವೆ ಕಚ್ಚಿರಬೇಕು !"

"ಇರುವೆ ಕಚ್ಚಿದರೂ ಮದ್ದುಂಟು ಬನ್ನಿರಿ."

"ಓ ! ಬಿಡಿ. ಇನ್ನು ಅರವಿಂದಾ ಪ್ರಸನ್ನಳಾಗುತ್ತಾಳೆ. ಇಷ್ಟು ಮುದ್ದು ಮಾಡುವವರಿರುವಾಗ ನೋವೆಲ್ಲಿರುತ್ತೆ ?" ಶ್ಯಾಮಲಾ ತುಂಟ ನೋಟ ಬೀರಿದಳು.

"ಶ್ಯ ! ಬರೀ ಹುಡುಗಾಟ ?" ಮುಖ ಗಂಟಿಕ್ಕಿ ಕೋಪದಿಂದ ನುಡಿದರೂ ಕಣ್ಣುಗಳಲ್ಲಿ ನೀರಾಡಿತು. ಕರವಸ್ತ್ರದಿಂದ ತೀಡಿಕೊಳ್ಳುತ್ತಾ ನುಡಿದಳು "ಹೀಗೆಲ್ಲಾ ಹಾಸ್ಯ ಮಾಡುವುದಾದರೆ ನಾನು ಹಿಂದಿರುಗಿ ಹೋಗುವೆ !"

"ಇಲ್ಲ. ಕ್ಷಮಿಸಿರಿ."

"ಇಷ್ಟಕ್ಕೆ ಕಣ್ಣಲ್ಲಿ ನೀರೇ ?" ಶ್ಯಾಮಲಾ ನಗ ತೊಡಗಿದಳು.

"ನಾನು ಚಿಕ್ಕಂದಿನಲ್ಲಿ ನಿಮ್ಮಲ್ಲಿ ಕಳೆದ ಕಾಲವನ್ನು ಪ್ರಾಸಂಗಿಕವಾಗಿ ಇವಳಿಗೆ ಹೇಳಿದರೆ ಅದನ್ನೇ ಅಪಾರ್ಥ ಮಾಡಿಕೊಂಡು ಸುಮ್ಮನೆ ನನ್ನನ್ನು ಗೋಳು ಹುಯ್ಯುತಿದ್ದಾಳೆ !"

ಅರವಿಂದಾ ನಸು ಕೋಪದಿಂದ ದೂರಿದಳು. ದನಿಯಲ್ಲಿ ಕೋಪ ಲಜ್ಜೆಗಳ ಮಿಶ್ರಣವಿತ್ತು.

"ಹೋಗಲಿ, ಬಿಡಿ. ಏನೋ ತಮಾಷೆ ಮಾಡುವ ಕಾಲ, ಮಾಡುತ್ತಾರೆ. ಅದಕ್ಕೇಕೆ ಬೇಸರ?" ಎಂದ ಅಘೋರ. ಆನಂದಾತಿರೇಕದಿಂದ ಮೈನವಿರೆದ್ದಿತು. ನೆಟ್ಟ ನೋಟದಿಂದ ಅವಳ ಫಜೀತಿಯನ್ನು ನೋಡಿ ಮನಕ್ಕಾನಂದ ತುಂಬಿಕೊಂಡ. ಒಡನೆ ಉಕ್ಕೇರಿತು ಹೃದ್ಗಡಲು.

ಅರವಿಂದಾ ನಾಚಿಕೆಯ ಬೀಡಾಗಿ ನವ ವಧುವಿನಂತೆ ತಲೆಬಾಗಿ ಹೆಜ್ಜೆ ಹಾಕಿದಳು.

"ಮನೆ ಬಂತು. ನಂದಾದೇವಿ ಕಾದಿರುತ್ತಾರೆ." ಎನ್ನುತ್ತಾ ಶ್ಯಾಮಲಾ ನಡಿಗೆಯನ್ನಿಷ್ಟು ಚುರುಕು ಗೊಳಿಸಿದಳು. ಮೂವರೂ ಒಳ ಹೊಕ್ಕರು. ಅತಿಥಿಗಳಿಗಾಗಿ ವಿಶೇಷ ಅಡುಗೆಯ ತಯಾರಿಕೆಯಲ್ಲಿ ನಿರತಳಾದ ನಂದಾ ನಗುಮುಖದಿಂದ ಅಲ್ಲಿಯೇ ಕುಳಿತುಕೊಳ್ಳಲು ಕುರ್ಚಿಯ ಕಡೆ ಕೈತೋರಿದಳು. ಅಡುಗೆ ಇನ್ನೂ ಅರ್ಧಂಬರ್ಧ ಆಗಿತ್ತು. ಅಣಿಯಾಗಿದ್ದ ಶರಬತ್ತು

ಮೇಜಿನ ಮೇಲಿದೆ. ಅದನ್ನು ಲೋಟಗಳಿಗೆ ಬೊಗ್ಗಿಸಲು ನಂದಾದೇವಿ ಹೋದಾಗ ಮಾಡಿ ಉಳಿದ ಕೆಲಸವನ್ನು ಮುಗಿಸಲು ಇಬ್ಬರೂ ಮುಂದಾದರು. ನಂದಾ ಬೇಡಬೇಡವೆಂದರೂ ಕೇಳದೆ ಶ್ಯಾಮಲಾ ಈರುಳ್ಳಿ ಹೆಚ್ಚತೊಡಗಿದಳು. ಶರಬತ್ತನ್ನು ಇಬ್ಬರಿಗೂ ಕೊಟ್ಟು ತಾನೊಂದನ್ನು ತೆಗೆದುಕೊಂಡು ಕುಳಿತ ಮೇಲೆ ನಂದಾ ನೆನಪಿಸಿಕೊಂಡು-"ಅಘೂ ಕುಡಿಯುತ್ತಿದ್ದನೇನೋ ಮರೆತೇ ಬಿಟ್ಟೆ." ನೋಟ ಅರವಿಂದಳ ಕಡೆ ಹರಿಯಿತು.

ಮಾತು ಕೇಳಿ ಶ್ಯಾಮಲಾ ಹೇಳಿದಳು "ಬಿಡಿ, ಅರವಿಂದಾ ಕೊಟ್ಟು ಬರುತ್ತಾಳೆ."

ಅರವಿಂದಳ ತೀಕ್ಷ್ಣ ನೋಟ ಇತ್ತ ಹರಿಯುತ್ತಲೂ ನಂದಾ ನಸುನಕ್ಕು ನುಡಿದಳು "ಅದಕ್ಕೇನಂತೆ ? ಮೊದಲಿನಿಂದಲೂ ಕೂಡಿ ಆಡಿದವರು. ಈಗೇನು ಹೊಸದೇ ? ತೆಗೆದುಕೊಂಡು ಹೋಗಿ ಕೊಡಮ್ಮ. ಇಬ್ಬರೂ ಇಲ್ಲಿಯೇ ಸೇರಿಬಿಟ್ಟೆರಿ. ಅಘೂಗೆ ಒಬ್ಬನೇ ಕುಳಿತು ಬೇಸರವಾಗಬಹುದು. ಸ್ವಲ್ಪ ಹೊತ್ತು ಅಲ್ಲೇ ಇರು- ಇಷ್ಟರಲ್ಲೇ ನಾನೂ ಶ್ಯಾಮಲಾ ಬರುತ್ತೇವೆ."

ಅರವಿಂದಾ ಒಂದು ಗಳಿಗೆ ಯೋಚಿಸಿದಳು. ಅವಳು ಸುಮ್ಮನೆ ನಿಂತುದನ್ನು ನೋಡಿ ನಂದಾದೇವಿ ಪುನಃ-"ಅರೂ, ಹೋಗಮ್ಮಾ. ಏಕೆ ಯೋಚನೆ ?" ದನಿಯುಲ್ಲಿ ಒತ್ತಾಸೆಯಿತ್ತು.

ಅರವಿಂದಾ ಶರಬತ್ತಿನ ಲೋಟೆಯನ್ನು ತೆಗೆದುಕೊಂಡೊಡನೆಯೇ ಶ್ಯಾಮಲಾ ತಲೆ ಬಾಗಿ ಕುಳಿತುಕೊಂಡಳು. ಒಮ್ಮೆ ಅವಳೆಡೆಗೆ ನೋಟ ಬೀರಿ ಅರವಿಂದಾ ಹೊರಹೋದಳು. ಅಘೋರ ಕೈಯಲ್ಲಿ ವರ್ತಮಾನ ಪತ್ರಿಕೆಯನ್ನು ಹಿಡಿದುಕೊಂಡಿದ್ದ. ಪಾದ ಸಪ್ಪಳವನ್ನು ಕೇಳಿ ತಲೆಯೆತ್ತಿ ನೋಡಿದ. ನಾಲ್ಕು ಕಣ್ಣುಗಳೂ ಕೂಡಿ ನಲಿದುವು. ಅವಳ ಮುಖ ಲಜ್ಜೆಯಿಂದ ಕೆಂಪಡರಿತು. ಬೇಗನೆ ಶರಬತ್ತಿನ ತಟ್ಟೆಯನ್ನು ಮುಂದೆ ನೀಡಿದಳು.

"ಒಂದು ಶರತ್ತಿಗೆ ನೀವು ಒಪ್ಪಿಕೊಂಡರೆ ನಾನು ಶರಬತ್ತು ತೆಗೆದುಕೊಳ್ಳುವೆ." ಮುಖದ ಮೇಲೆ ತುಂಟ ನಗೆ ನಲಿಯುತಿತ್ತು. ಕಣ್ಣುಗಳು ರೂಪ ಶ್ರೀಯನ್ನು ಭ್ರಮರಗಳಂತೆ ಹೀರಿಕೊಳ್ಳುತಿದ್ದುವು.

"ಶರತ್ತು ?..." ತುಂಡು ಗಡಿಯಿತು. ಇನಿದನಿ ಹೊರಬಿದ್ದರೂ.

"ನೀವು ನನ್ನೊಂದಿಗೆ ಸ್ವಲ್ಪ ಹೊತ್ತು ಮಾತಾಡಬೇಕು."

"ಓ...ಇದು ಯಾವುದಾದರೂ ಮುಹೂರ್ತಕ್ಕೆ ನಾಂದಿಯೋ ಹೇಗೆ?"

"ಅರೂ..."

"ಹ್ಞಾ...ಏನಿದೆಯೋ ಹೇಳಿರಿ."

ತನ್ನ ದುರ್ಬಲತೆಯನ್ನು ತೋರಿಕೊಳ್ಳದಿರಲು ಪ್ರಯತ್ನ ಪೂರ್ವಕವಾಗಿ ಇನಿದನಿ ಹೊರಬಿತ್ತು.

"ಬಹು ಕಾಲದ ಗೆಳೆತನದ ಸಲುಗೆಯಿಂದಾಗಿ ನಿಮ್ಮ ಮುಂದೆ ನನ್ನದೊಂದು ಮುಚ್ಚು ಮರೆಯಿಲ್ಲದ ಬೇಡಿಕೆಯಿದೆ. ದಯಮಾಡಿ ಕೋಪಿಸಿ ಕೊಳ್ಳಬಾರದು." ಕಣ್ಣ ನೋಟದಲ್ಲಿ ಬೇಡಿಕೆಯಿತ್ತು. ದೈನ್ಯವೇ ಮೂರ್ತಿಯೆತ್ತಿ ಬಂದಂತೆ ಪುನಃ ಕೇಳಿದ "ಕೋಪಸಿ ಕೊಳ್ಳುವುದಿಲ್ಲವಷ್ಟೆ?"

ನೋಟ ನಿರಿಯಂಚಿನಲ್ಲಿ ಇಣಿಕಿ ನೋಡುತಿದ್ದ ಮುದ್ದು ಮುದ್ದಾದ ಪಾದ ಪದ್ಮಗಳ ಕಡೆ ಹರಿಯಿತು.

ನೇರ ನೋಟವನ್ನು ಎದುರಿಸಲಾರದೆ...ಅವಳು ಲಜ್ಜೆಗೆ ಶರಣಾದಳು...

"ಅಂಥಾದ್ದೇನಿಲ್ಲ." ದನಿ ಸಹಜವಾಗಿ ಹೊರ ಬಿದ್ದರೂ ಅರವಿಂದಳ ಹೃದಯ ಅಳತೆ ಮೀರಿ ಮಿಡಿಯ ಹತ್ತಿತು. ಮುಖದಲ್ಲಿ ಯಾವ ಭಾವೋದ್ವೇಗವನ್ನೂ ಪ್ರಕಟಿಸದೆ ಗಂಭೀರವಾದಳು ಅವಳು. ತಟ್ಟೆಯಿಂದ ಶರಬತ್ತನ್ನು ತೆಗೆದುಕೊಂಡು ಅಘೋರ–"ಒಂದೇ ತಂದಿದ್ದೀರಲ್ಲಾ ನಿಮಗೆಲ್ಲಿ?"

"ನಾನಾಗಲೇ ಕುಡಿದೆ."

"ಆದರೂ ನಾನೊಬ್ಬನೇ ತೆಗೆದುಕೊಳ್ಳಲಾರೆ."

ಅಘೋರ ಎದ್ದು ಹೋಗಿ ಇನ್ನೊಂದು ಲೋಟೆಯೊಡನೆ ಹಿಂದಿರುಗಿ, ಅವಳು ಎಷ್ಟು ಬೇಡವೆಂದರೂ ಕೇಳದೆ ಮುಂದೆ ಹಿಡಿದ. ಇನ್ನು ಬೇಡವೆನ್ನಲಾಗದೆ ಅವಳು ಕೈಗೆ ತೆಗೆದುಕೊಂಡಳು.

ಎದುರಿನ ಸೋಫಾದ ಮೇಲೆ ಮೈಯೆಲ್ಲಾ ಸಂಕೋಚ ಮಯವಾಗಿ ಕುಳಿತುಕೊಂಡಳು ಅವಳು. ಪತ್ರಿಕೆಯನ್ನು ಬದಿಗೊತ್ತಿ ನಗು ಮುಖದಿಂದ ಹೇಳಿದ "ಮಾತು ಆರಂಭಿಸುವ ಮುನ್ನ ಶುಭ ಹಾರೈಸಿ ಸ್ವಸ್ಥಿ ಪಾನ ಮಾಡೋಣ. ಅರವಿಂದಾ."

ಅವಳ ಕೆನ್ನೆಯಲ್ಲಿ ಚೆಂಗುಲಾಬಿಗಳೆರಡು ಅರಳಿದುವು. ಪ್ರತಿಯಾಡದೆ ಒಂದು ಗುಟುಕು ಹೀರಿದಳು. ಮಹಾಯಜ್ಞಕ್ಕೆ ತಯಾರಾಗುವ ವೈದಿಕ ಶಿರೋಮಣಿಯಂತೆ ಕುಳಿತ ಅವಳನ್ನೇ ನಿಟ್ಟಿಸಿ ನೋಡುತ್ತಾ ನಗು ಮುಖ ದಿಂದ–"ಆಗೆಲ್ಲಾ ಎಷ್ಟು ಸಲುಗೆ? ಎಷ್ಟು ಪ್ರೀತಿ? ಎಷ್ಟು ಸ್ನೇಹ? ಅದೆಲ್ಲಾ ಈಗೆಲ್ಲಿ ಹೋಯಿತು? ಈಗೇಕೆ ಇಷ್ಟೊಂದು ಸಂಕೋಚ? ಆಗ ಎಷ್ಟು ಬಾರಿ ಜಗಳವಾಡಿಲ್ಲ? ಎಷ್ಟು ಬಾರಿ ಹೊಡೆದಾಡಿಲ್ಲ? ನಿನ್ನೆಯೆಲ್ಲಾ ನಿಮ್ಮನ್ನೇ ನೆನೆಸಿಕೊಂಡೆ."

ಅವಳ ಎದೆಯ ಹಕ್ಕಿಯೂ ಕೂಗಿ ಹೇಳಿತು "ನಾನು ಯೋಚಿಸಿದ್ದೂ ಅದನ್ನೇ!"

"ನಿಮ್ಮ ಹಸ್ತ ಸ್ಪರ್ಶದಿಂದಲೋ ಏನೋ ಶರಬತ್ತು ತುಂಬ ರುಚಿ ಯಾಗಿದೆ." ಮೈಯೆಲ್ಲಾ ಹರ್ಷಮಯವಾಗಿ ಬಿತ್ತರಿಸಿದ ಅಘೋರ.

ಅವಳು ಮಾತಾಡದೆ ನಸು ನಕ್ಕಳು. ಕಣ್ಣ ನೀರಕ್ಕೆ ನಿರಿಯಂಚಿನಲ್ಲಿ ಇಣಿಕಿ ನೋಡುತಿದ್ದ ಪಾದದ್ವಯಗಳನ್ನೇ ನಿಟ್ಟಿಸುತ್ತಾ ಅವನೆಂದ "ನಾವು ಏನೋ ಯೋಚಿಸಿರುತ್ತೇವೆ, ಅದು ಏನೋ ಆಗುತ್ತದೆ. ವಿಧಿಯ ಸಂಕಲ್ಪದ ಮುಂದೆ ನಾವೆಷ್ಟು ಸಣ್ಣವರು ಅರವಿಂದಾ."

ಅರವಿಂದಾ ಮಾತಾಡಲಿಲ್ಲ. ತನ್ನಲ್ಲೇ ತಾನು ಹುಗಿದು ಹೋಗುವಂತೆ ಲಜ್ಜೆಯ ಮುದ್ದೆಯಾಗಿ ಕುಳಿತು ಕೊಂಡಳು. ಮೆಲ್ಲ ಮೆಲ್ಲನೆ ಕೆನ್ನಗಳಲ್ಲಿ ರಂಗು ಮೂಡಿತು.

"ಯಾವುದೋ ಒಂದು ಯೋಗ ನನ್ನನ್ನು ಧೃಡ ಸಂಕಲ್ಪದಿಂದ ಕಟ್ಟಿ ಹಾಕಿದೆ. ನಾನೊಂದು ಮಹಾ ಕಾರ್ಯಕ್ಕೆ ತಯಾರಾಗುತ್ತಲಿದ್ದೇನೆ ಎಂದೆಲ್ಲಾ ಭಾವಿಸಿದ್ದೆ. ಆದರೆ ನನಗೀಗ ಅನ್ನಿಸುತ್ತಿರುವುದೇ ಬೇರೆ..." ಸ್ವಲ್ಪ ತಡೆದು ಒಂದು ಗುಟುಕು ಪಾನೀಯವನ್ನು ಹೀರಿ ಅವಳ ಮುಖದ ಮೇಲಿನ ಹಾವ ಭಾವಗಳನ್ನು ಅವಲೋಕಿಸುತ್ತಾ ಅಘೋರ ಮುಂದುವರಿದ "ಅರವಿಂದಾ, ದಯವಿಟ್ಟು ಕ್ಷಮಿಸಿರಿ. ನಾನು ಏನೆಲ್ಲಾ ಹೇಳ ಹೋಗುತಿದ್ದೇನೋ ಅದರಲ್ಲಿ ಲವಲೇಶವೂ ಕಪಟವಿಲ್ಲ. ನನ್ನ ಹೃದಯ ಸಂಪುಟದ ಹೆಜ್ಬಾಗಿಲನ್ನೇ ತೆರೆದು ನಿಮ್ಮ ಮುಂದೆ ಇಡುತಿದ್ದೇನೆ. ನಾನಿದುವರೆವಿಗೆ ನನ್ನಲ್ಲೂ ಮಾನವ ಸಹಜ ವಾದ ರಾಗ ಭಾವ ದ್ವೇಷಗಳಿವೆ ಎಂಬುದನ್ನು ಕಂಡು ಕೊಂಡಿರಲಿಲ್ಲ. ನಾನು

ಇದುವರೆವಿಗೆ ಯಾರಿಗೂ ತಲೆ ಬಾಗದೆ ಯೋಧನಂತೆ ದಿನಚರಿಯನ್ನು ಸಾಗಿಸು ತಿದ್ದೆ. ಅಂಥಹವನು ಹೇಗೆ...ಸೋತೆ ಎಂಬುದು ನನಗೆ ಈಗಲೂ ಅರ್ಥವಾಗಿಲ್ಲ. ಇಂದು ನಿಜವಾಗಿಯೂ ಹೇಳಬೇಕೆಂದರೆ–ನಿಮಗೆ ಸೋತಿದ್ದೇನೆ ಎಂಬುದನ್ನು ಒಪ್ಪಿಕೊಳ್ಳಲೇಬೇಕು. ಒಪ್ಪಿಕೊಳ್ಳುವೆ. ಸೋತವರಿಗೆ ಸಹಕಾರ ಹಸ್ತ ನೀಡು ವುದು ಗೆದ್ದವರ ಧರ್ಮ. ನಾನೀಗ ನಿಮ್ಮ ಪೂರ್ಣ ನೆರವನ್ನು ಬೇಡಿತಿದ್ದೇನೆ. ..."ಮಾತನ್ನು ಮಧ್ಯಕ್ಕೆ ತುಂಡುಗಡಿದು ಅವಳ ಮುಖಾರವಿಂದವನ್ನೇ ನೆಟ್ಟ ದಿಟ್ಟಿಯಿಂದ ದಿಟ್ಟಿಸಿದ.

ಅವಳು ತಲೆಬಾಗಿ ಕುಳಿತಿದ್ದಳು. ಕೈಯಲ್ಲಿನ ಪಾನಿಯ ಹಾಗೇ ಉಳಿ ದಿತ್ತು.

"ಜೀವನಕ್ಕೆ ಹೇಡಿಯಂತೆ ಹೆದರ ಬಾರದು. ನೀವು ಸಂತೋಷದಿಂದ ಶರಬತ್ತು ತೆಗೆದು ಕೊಳ್ಳುವಿರಾದರೆ ನಾನು ಧನ್ಯ."

"......"

"ಅರವಿಂದಾ !"

"ನಾನು ಒಳಗಡೆ ಹೋಗುವೆ."

"ಆಗಲೇ ಹೇಳಿದೆ. ಜೀವನಕ್ಕೆ ಹೆದರಿ ಕೊಳ್ಳಬಾರದು. ಅರೂ, ಇಷ್ಟಕ್ಕೂ ನೀವೇನು ಚಿಕ್ಕ ಹುಡುಗಿಯಲ್ಲ. ಯೋಚಿಸಿ ನಿರ್ಧರಿಸಿರಿ. ಹಿಂದೆ ನಿಮ್ಮೊಡ ನಾಡುವಾಗ ನಾನು ಯಾವೊಂದು ವಿಶೇಷವನ್ನೂ ಕಾಣಲಿಲ್ಲ. ಯಾವ ಒಂದು ಆಸೆಯನ್ನೂ ಇಟ್ಟುಕೊಂಡಿರಲಿಲ್ಲ. ಆದರೆ, ಈಗಿನ ರೀತಿಯೇ ಬೇರೆ. ಹಾಗೆಂದು ನಿಮ್ಮ ಮೇಲೆ ಬಲಾತ್ಕಾರ ಹೇರಲಾರೆ. ದಯಮಾಡಿ ನಿಮ್ಮ ಹೃದಯ ಸಂಪುಟವನ್ನು ವಿಶಾಲವಾಗಿ ತೆರೆದು ತೋರದ ಹೊರತು ನನ್ನ ಮನಸ್ಸಿಗೆ ಶಾಂತಿ ದೊರೆಯದು."

"ನಾನು ಒಳ ಹೋಗುವೆ."

"ದಯಮಾಡಿ ಕ್ಷಮಿಸಿರಿ."

"ಅಷ್ಟೊಂದು ದೊಡ್ಡ ಮಾತಾದರೂ ಏಕೆ?"

"ಹಿಂದಿನಂತೆ ಅಲ್ಲವಲ್ಲಾ ? ಆಗ ಚಿಕ್ಕಹುಡುಗಿ. ಸಲುಗೆಯಿತ್ತು."

"ಚಿಕ್ಕವಳು ಎಂದೆಂದೂ ಚಿಕ್ಕವಳೇ."

"ಇರಲಿ, ಈಗಿನ ರೀತಿಯೇ ಬೇರೆ."

"......"

"ನಿಮ್ಮ ಶರಬತ್ತು ಹಾಗೇ ಉಳಿಯಿತಲ್ಲಾ ?"

ಅರವಿಂದಾ ತಲೆಯೆತ್ತದೆ ಒಂದು ಗುಟುಕು ಗುಟುಕಿಸಿದಳು. ಸ್ವಲ್ಪ ಹೊತ್ತು ಮೌನವಾವರಿಸಿತು.

"ಅರವಿಂದಾ !"

"ಹೇಳಿರಿ." ತಲೆ ಇನ್ನಷ್ಟು ಬಾಗಿತು.

"ಹಿಂದಿನಂತೆಯೇ ಈಗಲೂ ಸಹಕರಿಸುವಿರಾ ?

ಕಣ್ಣು ನೋಟ ಹಾಗೆಂದರೆ ? ಎಂಬಂತೆ ನಿಟ್ಟಿಸಿದರೂ ಅವಳೆಂದಳು "ಮನುಷ್ಯರೆಂದ ಮೇಲೆ ಸಹಕಾರವಿದ್ದೇ ತೀರಬೇಕಷ್ಟೆ ?"

"ಇದು ಹಾಗಲ್ಲ."

"......"

ಅಘೋರ ನಗು ನಗುತ್ತಾ ಅವಳನ್ನೇ ನಿಟ್ಟಿಸಿದೊಡನೆ ಪತ್ರಿಕೆಯನ್ನು ಇನ್ನಿಷ್ಟು ಎತ್ತರಿಸಿ ಮುಖವನ್ನು ಮರೆಮಾಡಿ ಕೊಂಡಳು ಅವಳು.

"ಹೀಗೆಲ್ಲಾ ನಾಚಿಕೊಂಡರೆ ಹೇಗೆ ? ಯೋಚಿಸಿ ನೋಡಿ...ಇಷ್ಟಕ್ಕೂ ನಾಚಿಕೊಳ್ಳುವುದಕ್ಕೆ ನೀವೇನು ಚಿಕ್ಕ ಹುಡುಗಿಯಲ್ಲ." ಮನದಲ್ಲಿನ ಅಸಮಾಧಾನವನ್ನು ಹತ್ತಿಕ್ಕಿ ಅಘೋರ ಪುನಃ—"ಅರವಿಂದಾ, ದಯವಿಟ್ಟು ಕೋಪ ಲಜ್ಜೆಗಳನ್ನು ಬದಿಗಿಟ್ಟು ಬಿಡಿರಿ."

"..........."

"ಕೋಪಿಸಿಕೊಳ್ಳುವುದಿಲ್ಲವಷ್ಟೆ ?"

"ನಂದಕ್ಕ ಏನಾದರೂ ತಿಳಿದುಕೊಂಡಾರು. ನಾನಿಲ್ಲಿ ಬಂದು ತುಂಬ ಹೊತ್ತಾಯಿತು."

"ಅವರಿಗೆ ನಾನು ಹೇಳುವೆ. ಅದರ ಹೊಣೆ ನನ್ನದು."

"......"

"ಅಪ್ಪ ಅಮ್ಮ ನನಗೆ ಮದುವೆ ಮಾಡಬೇಕೆಂದು ಎಷ್ಟೆಷ್ಟು ಪ್ರಯತ್ನ ಪಟ್ಟರೂ ಎಲ್ಲಕ್ಕೂ ವಿಮುಖನಾಗಿ ನಿಂತು ಅವರ ಕೋಪಕ್ಕೆ ಪಾತ್ರನಾದೆನೇ ಹೊರತು ಮಣಿಯಲಿಲ್ಲ. ಏಕೆ ನನ್ನ ಹೃನ್ಮಂದಿರ ಇದುವರೆವಿಗೆ ಬಟ್ಟಂ ಬರಿದಾಗಿತ್ತು ಎಂಬುದು ಈಗ ಅರ್ಥವಾಗುತ್ತಿದೆ. ಯಾರಿಗೆ ಸ್ಥಾನವೋ ಅವರು

ವಿನಾ ಬೇರೊಬ್ಬರು ಅದನ್ನು ಹೊಗಲಾರರು ಅಂತಲೇ ಅದು ಇಂದು ನಿಮಗಾಗಿ ತೆರೆದಿದೆ."

ಬಾಗಿದ ತಲೆಯೆತ್ತಲಿಲ್ಲ. ಎತ್ತರಿಸಿದ ಪತ್ರಿಕೆಯೂ ಇಳಿಯಲಿಲ್ಲ.

"ಅರವಿಂದಾ, ಇದೆಲ್ಲಾ ಸರಿಯಲ್ಲ. ನಿಮಗೆ ಯೋಚಿಸಿ ನಿರ್ಧರಿಸುವ ಶಕ್ತಿಯಿದೆ. ದಯವಿಟ್ಟು ವಿಚಾರ ಮಾಡಿರಿ."

ರಕ್ತವದನೆಯಾದ ಅವಳು ಪತ್ರಿಕೆಯನ್ನು ಮೇಜಿನ ಮೇಲೆ ಹಾಕಿ ಓಡಿ ಹೋಗಲೆಳಸಿದಾಗ ಅಘೋರ ತಡೆಗಟ್ಟಿ ಹೇಳಿದ "ನೀವು ಹೇಳದೇ ಹೋಗುವುದು ಸರಿಯಲ್ಲ."

ದೈನ್ಯವೇ ಮೂರ್ತಿಯೆತ್ತಿ ಬಂದಂತೆ ಕುಳಿತ ಅವಳು ತಪಸ್ವಿನಿಯಂತೆ ಕಣ್ಣೆಸೆದಳು.

"ಅರವಿಂದಾ, 'ನೀನು' ಎಂದರೆ ನಿಮಗೆ ಕೋಪವಿಲ್ಲವಷ್ಟೆ."

"ಇಲ್ಲ. ಎಂದ ಅವಳು ಪುನಃ ತಲೆಬಾಗಿ—"ಅನ್ನಿರಿ ಸಂತೋಷ."

"ಏನು ಹೇಳುತ್ತಿ ಅರವಿಂದಾ ?"

"ನನಗಿಷ್ಟು ಯೋಚಿಸಲು ಅವಕಾಶ ನೀಡಿರಿ."

ಕೇಳಿಸಿತೋ ಇಲ್ಲವೋ ಎಂಬಂತೆ ನುಡಿದ ಅವಳು ಸಂತೋಷ ಭಯ ದೈನ್ಯ ಗಾಂಭೀರ್ಯಗಳ ಮೂರ್ತಿಯಾದಳು. ಹೃದಯದ ಡಬ ಡಬ ಬಡಿದು ಕೊಳ್ಳ ಹತ್ತಿತು. ಮುಖ ಪ್ರಸನ್ನತೆಯಳಿದು ಬಾಡಿಕೊಂಡಿತು. ಅವಳ ಸ್ಥಿತಿಗತಿಯನ್ನು ಗ್ರಹಿಸಿದ ಅಘೋರ ನೋಟವನ್ನು ತಗ್ಗಿಸಿದ. ನಿರಿಯಂಚಿನಲ್ಲಿ ಇಣಿಕಿ ಹಾಕಿದ ಪಾದಪದ್ಮಯುಗಗಳ ಮೇಲೆ ದಿಟ್ಟಿ ಹರಿಸಿ "ಅರವಿಂದಾ, ಯೋಚಿಸಬೇಡಿರಿ. ಜೀವನದ ಹೆಬ್ಬಾಗಿಲು ಎಂದಿದ್ದರೂ ತೆರೆದಿದ್ದೇ ಇರುತ್ತೆ. ಅದಕ್ಕಾಗಿ ಅಳುಕಬಾರದು."

ಅವಳು ಪ್ರತಿಯಾಡದೆ ಎದ್ದು ನಿಂತು ಹೇಳಿದಳು "ಆ ಲೋಟೆಯನ್ನೆತ್ತಿ ಕೊಡಿರಿ."

....ಸುಮುಹೂರ್ತ...ಸಾವಧಾನ...

ಅವನು ಅದನ್ನೆತ್ತಿ ನೀಡುವಾಗ ಅನಿರೀಕ್ಷಿತವಾಗಿ ಬೆರಳಿಗೆ ಬೆರಳು ತಾಕಿತು. ತಕ್ಷಣ 'ಕ್ಷಮಿಸಿರಿ' ಎಂದ, ಹೊಸ ಅನುಭವದಿಂದ ದೇಹದಾದ್ಯಂತ ಜುಂ ಎನ್ನಿಸಿತು. ಅವಳು "ಪರವಾಯಿಲ್ಲ" ಎನ್ನುತ್ತಾ ಒಳಗಡೆ ಹೋದಳು.

ಅರವಿಂದಾ ಮೊದಲಿನಂತೆ ಪ್ರಸನ್ನವಾಗಿರದೆ ಯೋಚನೆಯ ಆಳದಲ್ಲಿ

ಮುಳುಗಿದ್ದುದು ಕಾಣಬಂತು. ಅವಳ ಗಮನವನ್ನು ಸೆಳೆದುಕೊಳ್ಳಲು ಶ್ಯಾಮಲಾ ಎಷ್ಟೆಷ್ಟು ಪ್ರಯತ್ನ ಪಟ್ಟರೂ ಅವಳು ಒಂದೇ ತೆರನಾಗಿದ್ದುದನ್ನು ಗಮನಿಸಿ ನಂದಾ ಕೇಳಿದಳು "ಮಗೂ, ಏಕೆ ಸಪ್ಪೆಯಾಗಿದ್ದಿ ? ತಲೆ ನೋಯುತ್ತಿದೆಯೆ ?"

ಪ್ರಶ್ನೆ ಹೊರಬಿದ್ದೊಡನೆಯೇ ಏನು ಹೇಳಬೇಕೋ ಹೊಳೆಯದೆ 'ಹ್ಞೂ' ಎಂದಳು ಅರವಿಂದಾ.

"ಅಘೂ !" ನಂದಾದೇವಿಯ ದನಿ ಹೊರ ಬಿದ್ದೊಡನೆಯೇ ಅರವಿಂದಾ ಗಾಬರಿಯಿಂದ ಕಣ್ಣರಳಿಸಿ—"ಅಯ್ಯೋ, ನನಗೇನೂ ಆಗಿಲ್ಲ. ಅವರನ್ನು ಕರೆಯಬೇಡಿ."

ಶ್ಯಾಮಲಾ ಮತ್ತು ನಂದಾದೇವಿಯರಿಬ್ಬರೂ ಅವಳ ಕಡೆ ನೋಡಿ ನಸುನಗೆ ಬೀರಿದರು. ಅಷ್ಟರೊಳಗಾಗಿ ಅಘೋರ ಬಾಗಿಲಲ್ಲಿ ಬಂದು ನಿಂತು ಕೇಳಿದ "ಏನಮ್ಮಾ ?" ನೋಟ ಪೂರಿಯನ್ನು ಲಟ್ಟಿಸುತಿದ್ದ ಅರವಿಂದಳ ಮೇಲೆ ಹರಿಯಿತು. ಅವಳ ದೈನ್ಯ ಸ್ಥಿತಿ ಮನ ಕರಗಿಸುವಂತಿತ್ತು.

"ಅರವಿಂದಾ ತಲೆನೋವು ಎನ್ನುತ್ತಾಳೆ ಅಘೂ !"

ಲಜ್ಜೆಯಿಂದ ಕೆಂಪಡರಿದ ಅರವಿಂದಾ ತಕ್ಷಣ ಅಂದಳು "ಇಲ್ಲ, ಇಲ್ಲ."

"ಸಾರಿಡಾನ್ ಕೊಡಲೇ ?"

"ಏನೂ ಬೇಡಿ." ತಲೆಯೆತ್ತದೆ ನುಡಿದಳು ಅರವಿಂದಾ.

ಅವನು ನಗು ನಗುತ್ತಾ ಹೊರಟು ಹೋದ. ಹನ್ನೆರಡು ಗಂಟೆಗೆ ಸರಿಯಾಗಿ ವಿಮಲ್‌ದಾಸ್ ಬಂದ. ಊಟವಾದ ನಂತರ ಅಘೋರ ತಾಯಿಯನ್ನು ಒತ್ತಟ್ಟಿಗೆ ಕರೆದು ಹೇಳಿದ "ನೀವು ಅವಳನ್ನು ಕೇಳಿ ಅಭಿಪ್ರಾಯ ತಿಳಿದುಕೊಳ್ಳಿರಿ ಅವಳು ಸಂತೋಷದಿಂದ ಒಪ್ಪಿಕೊಂಡಲ್ಲಿ ಚಂದ್ರಬಾಬುಗಳನ್ನು ಕಂಡು ಮಾತಾಡಬಹುದು."

ಅವಳೊಪ್ಪುವಳೋ ಇಲ್ಲವೋ ಎಂಬ ಯೋಚನೆಯಿಂದ ತನುಮನಗಳು ತುಯ್ದಾಡುತಿದ್ದುವು. ಅಘೋರ ಉಸಿರಿಡಿದು ಅವಳ ಉತ್ತರದ ನಿರೀಕ್ಷಣೆಯಲ್ಲಿ ಕ್ಷಣ ಕ್ಷಣಗಳನ್ನು ಬಹು ಕಷ್ಟದಿಂದ ಕಳೆದಿದ್ದರೂ ಅದನ್ನು ತೋರಗೊಡದೆ ವಿನೀತನಾಗಿ ತನ್ನ ಅಭಿಪ್ರಾಯವನ್ನು ತಾಯಿಯ ಮುಂದಿಟ್ಟಿದ್ದ.

ಅವನ ಅಭಿಪ್ರಾಯ ಸರಿಯಾಗಿ ಕಂಡರೂ ನಾವು ಕೇಳುವುದು ಸರಿಯೆ

ಎನ್ನಿಸಿತು—ನಂದಳಿಗೆ. ತುಸು ಯೋಚಿಸಿ ಹೇಳಿದಳು "ನಿಮ್ಮ ತಂದೆಗೆ ಈ ವಿಚಾರ ವಹಿಸಿಬಿಡುವೆ. ಅವರೇ ಮಾತಾಡಲಿ." ಮುಖ ಹೂವಿನಂತೆ ಅರಳಿತು. ಮಗನ ಮುಃಖವನ್ನು ಸಂತಸದಿಂದ ಈಕ್ಷಿಸಿದಳು.

ಹೆಂಡತಿಯ ಮಾತಿನ ಮೇರೆಗೆ ವಿಮಲ್‌ದಾಸ್ ಅರವಿಂದಳನ್ನು ತನ್ನ ಕೊಠಡಿಗೆ ಬರಮಾಡಿಕೊಂಡು ಕುರ್ಚಿಯಲ್ಲಿ ಕೂಡಹೇಳಿ ನಲ್ಮೆಯಿಂದ—"ಅರೂ, ನಾನೊಂದು ಮಾತು ಕೇಳಿದರೆ ನೀನು ನೊಂದುಕೊಳ್ಳುವುದಿಲ್ಲ ವಷ್ಟೆ?" ದನಿ ಎದೆಯಾಳದಿಂದ ಹೊರಬಿತ್ತು. ನೋಟ ಆವಳನ್ನೇ ನಿಟ್ಟಿಸಿತು.

"ಇಲ್ಲ ಮಾಮಾ." ದನಿಯು ನಸು ಕಂಪಿಸಿತು. ಆಗಲೇ ಅವರು ಕೇಳುವ ವಿಷಯವೇನೆಂಬುದು ಹೊಳೆದುಹೋಗಿತ್ತು. ಲಜ್ಜೆಯ ಭಾರದಿಂದ ತಲೆ ಬಾಗಿತು. ಮೈಯ ರಕ್ತವೆಲ್ಲಾ ಒಮ್ಮೆಲೇ ಮುಖಕ್ಕೆ ನುಗ್ಗಿ ಬಂದಂತೆ ಕೆಂಪು ಕೆಂಪಾಗಿ ಉಸಿರಿಡಿದು ಕುಳಿತಳು ಅವಳು.

"ಅರೂ, ಇದುವರೆವಿಗೆ ಯಾರನ್ನೂ ಮದುವೆಯಾಗಲು ಒಪ್ಪದ ಅಘೋರ ಇಂದು ನಿನ್ನನ್ನು ಒಪ್ಪಿಕೊಂಡಿದ್ದಾನೆ. ನೀನೊಪ್ಪಿದೆಯಾದರೆ ನಿನ್ನೊಂದಿಗೇನೆ ಬಂದು ಚಂದ್ರಬಾಬುಗಳೊಂದಿಗೆ ಮಾತಾಡುವೆ. ಬೇರೆ ಏನೂ ತಪ್ಪಾಗಿ ಭಾವಿಸಬೇಡ, ಮಗೂ. ದಯಮಾಡಿ ನಿನ್ನ ಅಭಿಪ್ರಾಯ ತಿಳಿಸು. ಈ ವಿಷಯದಲ್ಲಿ ನೀನೇ ನಿರ್ಧಾರ ಕೈಕೊಳ್ಳಲು ನೀನು ಶಕ್ತಳಾಗಿರುವುದರಿಂದ ನಿನ್ನನ್ನು ನಾವು ಕೇಳುವುದು ತಪ್ಪಾಗಲಾರದು."

"ಅಪ್ಪ ಅಮ್ಮ ಒಪ್ಪಿದರೆ ನನ್ನದೇನೂ ಅಡ್ಡಿಯಿಲ್ಲ, ಮಾಮಾ." ತುಸು ಉದ್ವೇಗದಿಂದ ಹೇಳಿ ಎದ್ದು ನಿಂತಳು. ಆ ಕ್ಷಣ ಅವಳು ನೀಡಿದ ಉತ್ತರದಿಂದ ವಿಮಲ್‌ದಾಸನಿಗೆ ಅತ್ಯಂತ ಸಮಾಧಾನ ಉಂಟಾಯಿತು. ತುಂಬು ನೋಟದಿಂದ ಭಾವೀ ಸೊಸೆಯನ್ನು ನಿಟ್ಟಿಸಿದ.

"ಹಾಗಿದ್ದರೆ ನಾನಿಂದೇ ರಾತ್ರಿಯ ರೈಲಿಗೆ ಹೊರಟು ನಾಳೆ ನಿಮ್ಮ ತಂದೆಯನ್ನು ಕಂಡು ಮಾತಾಡುವೆ."

ಸೀರೆಯ ಸೆರಗಿನ ತುದಿಯಲ್ಲಿ ಬೆರಳಾಡಿಸುತ್ತಾ ನಿಂತಿದ್ದ ಅವಳು "ಆಗಲಿ ಮಾಮಾ." ಎಂದಳು. ಲಜ್ಜೆಯ ಭರದಿಂದ ಅಲ್ಲಿ ನಿಲ್ಲಲಾರದೇ ತಕ್ಷಣ ಕಾಲ್ತೆಗೆದರೆ, ಬಾಗಿಲಲ್ಲಿ ಹಸನ್ಮುಖದಿಂದ ಎದುರಾದ ಅಘೋರ ಹಸ್ತಲಾಘವ ನೀಡಿ—"Thank you Aru!" ಎಂದ. ಅರವಿಂದಾ ಅಲ್ಲಿಂದಲೂ

ಓಡಿಹೋದಳು. ಕೊಠಡಿಯ ಬಾಗಿಲಲ್ಲಿ ಎದುರಾದ ಶ್ಯಾಮಲಾ ಅರವಿಂದಳ ಕೈ ಹಿಡಿದುಕೊಂಡು ಒಳಗಡೆ ಬರಮಾಡಿಕೊಳ್ಳುತ್ತಾ ಉಕ್ಕಿ ಬಂದ ಸಂತೋಷ ದಿಂದ ಅಪ್ಪಿಕೊಂಡು–"ನೀನು ಭಾಗ್ಯಶಾಲಿ ಕಣೆ!"

ಅರವಿಂದಾ ಮಾತಾಡಲಿಲ್ಲ. ಕಣ್ಣುಗಳಲ್ಲಿ ಕಂಬನಿಗಳು ಮೊಳೆತುವು.

"ಛಿಃ ! ಅಳುವುದೇಕೆ ?"

"........."

"ಅರವಿಂದಾ"

"........."

ಅಷ್ಟರಲ್ಲಿ ಅಘೋರ ಅಲ್ಲಿಗೆ ಬಂದ. ಕುಳಿತಿದ್ದ ಹುಡುಗಿಯರು ಎದ್ದು ನಿಂತರು. ಅರವಿಂದಳು ಇತ್ತಕಡೆ ಬೆನ್ನು ಮಾಡಿ ನಿಂತರೂ ಅವಳ ಕಂಬ ನಿಯು ಅಘೋರನ ದೃಷ್ಟಿಗೆ ಬೀಳದಿರಲಿಲ್ಲ. ಅವನು ಇಬ್ಬರನ್ನೂ ಕೂಡ ಹೇಳಿ ನಸು ದೂರದಲ್ಲಿ ತಾನೂ ಕುಳಿತುಕೊಂಡು–"ಅರೂ, ಚಂದ್ರಬಾಬುಗಳು ನಮ್ಮನ್ನು ಬಲಾತ್ಕಾರದಿಂದ ಒಪ್ಪಿಸಿಕೊಂಡರೆಂದು ತಿಳಿದುಕೊಳ್ಳಬಹುದು. ಕಂಬನಿಯ ಮೂಲಕ ನಿಮ್ಮ ಉತ್ತರ ಹೊರಸೂಸುವುದನ್ನು ನಾನೊಪ್ಪಿ ಕೊಳ್ಳಲಾರೆ. ನನ್ನ ಮನಬಿಚ್ಚಿ ಹೇಳುವುದಾದರೆ ನಾನು ಇದುವರೆವಿಗೆ ಮದುವೆಯ ಯೋಚನೆ ಮಾಡಿರಲಿಲ್ಲ. ಇದು ದೈವ ಸಂಕಲ್ಪ. ಈಗಲೂ ಹೇಳುವೆ ನೀವು ಸಂತೋಷದಿಂದ ಒಪ್ಪಿದರೆ ವಿನಾ ನನಗೆ ಮದುವೆಯೇ ಬೇಡ." ದನಿ ಎದೆಯಾಳದಿಂದ ಹೊರಬಿತ್ತು. ಸ್ವಲ್ಪ ತಡೆದು ಪುನಃ–"ಅರೂ, ನಿಮ ಗಿಷ್ಟವಿಲ್ಲದಿದ್ದರೆ ಹೋಗಲಿ, ಕೊನೆಯವರೆಗೂ ಸ್ನೇಹಿತರಾಗಿಯೇ ಉಳಿ ಯೋಣ."

ಅರವಿಂದಾ ಮಂಜಿನಂತೆ ಕರಗಿ ಹೋದಳು. ಕರವಸ್ತ್ರದಿಂದ ಕಂಬನಿ ಯನ್ನು ತೀಡಿಕೊಂಡು ತಲೆಯಲ್ಲಾಡಿಸುತ್ತಾ–"ಇಲ್ಲ...ನನಗೇನೂ ಬೇಸರ ವಿಲ್ಲ."

"ಮತ್ತೇಕೆ ಕಣ್ಣಿನಲ್ಲಿ ನೀರು ?" ಉದ್ವೇಗದಿಂದ ಕೇಳಿದ.

"ನನಗೊತ್ತು ಅವಳಿಗೆ ಬೇಸರವಿಲ್ಲ. ಅಪ್ಪ ಅಮ್ಮನನ್ನು ಬಿಟ್ಟು ಕೊಡು ವಾಗ ಎಂಥಹವರಿಗೂ ದುಃಖವೆನಿಸುತ್ತದೆ." ಶ್ಯಾಮಲಾ ವಿಷಯವನ್ನು ಮುಂದಿಟ್ಟಳು.

ಅರವಿಂದಳ ಮುಖದಲ್ಲಿ ಮಳೆ ಬಿಸಿಲುಗಳ ಮುದ್ರೆಯೊತ್ತಿತು. ಜೊತೆಗೆ ನಾಚಿಕೆಯ ಒತ್ತಡವೂ ಬೇರೆ. ಗಳಿಗೆ ತಡೆದು ತಲೆಯೆತ್ತದೆ "ನಿಜವಾಗಿಯೂ ನನಗೆ ಬೇಸರವಿಲ್ಲ."

ಅಘೋರ ಎದೆಯ ಭರಾವನ್ನಿಳುಹಿ ಮೈಯೆಲ್ಲಾ ಸಂತಸದ ಮೂರ್ತಿಯಾಗಿ ಅವಳನ್ನು ನಿಟ್ಟಿಸಿ ನೋಡಿ ನಗುನಗುತ್ತಾ ಎದ್ದು ಹೋದ. ನಂದಾದೇವಿ ಎಲ್ಲರಿಗೂ ಚಹ ಅಣಿ ಮಾಡಿ ಕೊಟ್ಟಳು. ಅರವಿಂದಾ ತಲೆ ಬಾಚಿ ಜಡೆ ಹೆಣೆದುಕೊಂಡು ಹೊರಡಲಣಿಯಾದಾಗ ವಿಮಲ್‌ದಾಸ್ ಬಂದು ನಗು ಮುಖದಿಂದ ಅಂದ "ಅರೂ, ನಾನೂ ಇದೇ ಗಾಡಿಗೆ ಹೊರಡುವೆ. ಲಗ್ನ ಫಲ ಕೂಡಿ ಬಂದರೆ ಈ ತಿಂಗಳೇ ಮದುವೆ!"

ಅರವಿಂದಾ ನಸು ನಕ್ಕರೂ ಮುಖ ಕೆಂಪಡರಿತು. ತಲೆಬಾಗಿ ನಿಂತಳು.

"ನಿಮ್ಮನ್ನು ಸುರಕ್ಷಿತವಾಗಿ ಊರು ಮುಟ್ಟಿಸುವುದೂ ಈಗ ನನ್ನ ಕರ್ತವ್ಯ."

ಓ...ಎತ್ತ ತಿರುಗಿದರೂ ಸಂತಸದ ಊಟೆ ಒಸರುತ್ತಿದೆ...ತನ್ನೊಳಗೇ ತಾನು ಅಡಗುವಷ್ಟು ಲಜ್ಜಿತಳಾದಳು ಅರವಿಂದಾ.

ನಂದಾದೇವಿ ತಾನೇ ಹೂ ಮುಡಿಸಿ ಹಣೆಗೆ ತಿಲಕವಿಟ್ಟು ಗಲ್ಲವನ್ನು ಹಿಡಿದು ಮುದ್ದಿಟ್ಟು–"ಹೋಗಿ ಬಾಮ್ಮಾ. ದೇವರು ಒಳ್ಳೆಯದು ಮಾಡಲಿ." ಮಮತೆಯ ಹೃದಯ ಉಕ್ಕೇರಿತ್ತು.

ಅರವಿಂದಳ ಹೃದಯ ಮಿಡಿ ಮಿಡಿದಂತೆ ಭಾಸವಾಯಿತು. ಹಾಗೇ ಕಾಲ್ಮುಟ್ಟಿ ನಮಸ್ಕರಿಸಿದಳು. ನಂದಾ ಅವಳನ್ನು ಹಿಡಿದೆತ್ತಿ ಎದೆಗಪ್ಪಿಕೊಂಡು "ನೀನು ನಮ್ಮ ಮನೆಯ ಭಾಗ್ಯಲಕ್ಷ್ಮಿ."ಎಂದಳು. ಮೈಯೆಲ್ಲಾ ಹರ್ಷದ ನೆಲೆಯಾಗಿ ಕಬ್ಬಿಣಕ್ಕಿಂತಲೂ ಕಠಿಣನಾದ ಮಗನನ್ನು ಬೆಣ್ಣೆಯಂತೆ ಕರಗಿಸಿದ ಭಾವೀಸೊಸೆಯನ್ನು ಕರುಣೆ ತುಂಬಿದ ಕಣ್ಣುಗಳಿಂದ ನೋಡುತ್ತಾ ಹರಸಿ, ಶ್ಯಾಮಲೆಯನ್ನೂ ಆತ್ಮೀಯತೆಯಿಂದ ಬೀಳ್ಕೊಡುತ್ತಾ ಹೇಳಿದಳು "ಶ್ಯಾಮಲಾ ಯಾವಾಗ ಇಲ್ಲಿಗೆ ಬಂದರೂ ನಮ್ಮನ್ನು ಮರೆಯಬೇಡಮ್ಮಾ."

ಅಘೋರ ಕೋಟು ತೊಟ್ಟು–"ಅಮ್ಮಾ, ನಾನೇ ಮನೆಗೆ ಬಿಟ್ಟು ಬರುವೆ."

ಹುಡುಗಿಯರು ಮಾತಾಡಲಿಲ್ಲ.

"ರಾತ್ರಿ ನಾನೇ ಅಲ್ಲಿಗೆ ಬಂದು ನಿಮ್ಮನ್ನು ರೈಲು ನಿಲ್ದಾಣಕ್ಕೆ ಕರೆದೊಯ್ಯುವೆ. ಆಗಬಹುದೇ? ವಿಮಲ್ ದಾಸ್ ನಗುಮುಖದಿಂದ ಕೇಳಿದ.

"ಆಗಲಿ, ಮಾಮಾ." ದನಿ ಲಜ್ಜೆ ಮಾಧುರ್ಯಗಳ ಮಿಶ್ರಣವಾಗಿತ್ತು.

ನಂದಾ ವಿಮಲ್‌ದಾಸ್‌ರವರು ಬಾಗಿಲವರೆವಿಗೂ ಹೋಗಿ ಬೀಳ್ಕೊಟ್ಟರು. ಸಾಲಾಗಿ ಮೂವರೂ ಹೆಜ್ಜೆ ಹಾಕುವುದನ್ನು ನಿಂತು ನೋಡಿದ ನಂದಾ ಸಜಲನಯನೆಯಾದಳು.

ತುಸು ದೂರ ನಡೆದ ನಂತರ ಅಘೋರ–"ಅರೂ, ನಾನು ನಿಜಕ್ಕೂ ಹೇಳುವುದಾದರೆ ಮದುವೆಯಾಗಲೇಬಾರದು ಎಂದುಕೊಂಡಿದ್ದೆ."

ಅರವಿಂದಾ ಮಾತಾಡದೆ ನಸು ನಕ್ಕಳು.

"ನೀವು ಇಷ್ಟೊಂದು ನೆಚ್ಚಿಕೊಂಡಿದ್ದೀರಿ. ಒಂದು ವೇಳೆ..." ಎಂದು ಶ್ಯಾಮಲಾ ಅರ್ಧಕ್ಕೆ ಮಾತು ನಿಲ್ಲಿಸಿದಳು.

"ಹಾಗೊಂದು ವೇಳೆ ಚಂದ್ರಬಾಬುಗಳು ಒಪ್ಪದೇ ಹೋದರೆ ಅವರ ಮನೆಯಲ್ಲಿ ಉಪವಾಸ ಮಲಗಿಬಿಡುತ್ತೇನೆ. ಗಾಂಧೀಜಿ ನಮಗೆ ಪಾಠ ಕಲಿಸಿದ್ದಾರೆ!"

ಮೂವರೂ ಕಿಲಕಿಲನೆ ನಕ್ಕರು.

"ಚಂದ್ರಬಾಬುಗಳು ಒಪ್ಪಿದೊಡನೆ ನನಗೊಂದು ಕಾಗದ ಬರೆಯಿರಿ." ತನ್ನ ವಿಳಾಸದ ಕಾರ್ಡನ್ನು ಕೈಗಿಟ್ಟು–"ಅರೂ, ಇನ್ನು ಎಲ್ಲವೂ ಕೈಗೂಡುವ ತನಕ ನನಗೆ ಮನಶ್ಶಾಂತಿಯಿಲ್ಲ, ಏನೇ ಬರಲಿ, ಮನವೊಪ್ಪಿದ ಮೇಲೆ ಎಷ್ಟು ಬೇಗನೆ ಆದರೆ ಅಷ್ಟು ಕ್ಷೇಮ. ಚಂದ್ರಬಾಬುಗಳು ಒಪ್ಪಿದೊಡನೆ ನನಗೊಂದು ಟೆಲಿಗ್ರಾಂ ಕೊಡಿ." ದನಿಯಲ್ಲಿ ಹಾಲ್ಜೇನು ತುಂಬಿ ಹರಿಯಿತು.

ಅರವಿಂದಾ ಕಾರ್ಡನ್ನು ತನ್ನ ಪರ್ಸಿನಲ್ಲಿಟ್ಟುಕೊಂಡಳು.

ಅಷ್ಟರಲ್ಲಿ ಅವರ ಮನೆಯ ಮುಂಭಾಗಕ್ಕೆ ಬಂದಿದ್ದರು. ಅಘೋರ ಅಲ್ಲೇ ನಿಂತು–"ತಂದೆಯವರನ್ನು ರೈಲು ನಿಲ್ದಾಣಕ್ಕೆ ಬಿಡಲು ನಾನೇ ಬರುವೆ ಇಬ್ಬರೂ ತಯಾರಿರಿ. ಹೀಗಿಂದೇ ಬಂದು ಹೋಗುವೆ."

"ಹ್ಞೂ." ಎಂದಳು ಅರವಿಂದಾ. ನಾಲ್ಕು ಕಣ್ಣುಗಳೂ ಕೂಡಿ ನಲಿದುವು.

ಶ್ಯಾಮಲೆಯೆಡೆಗೆ ತಿರುಗಿ "ನಮ್ಮವರನ್ನು ಸರಿಯಾಗಿ ನೋಡಿಕೊಳ್ಳಿ." ಎಂದೆನ್ನುತ್ತಾ ಅರವಿಂದಳನ್ನು ನಿಟ್ಟಿಸಿದ. ಅವಳ ಕೆನ್ನೆಗಳಲ್ಲೆರಡು ಚೆಂಗುಲಾಬಿಗಳು ಅರಳಿದುವು. ಮಂದಸ್ಮಿತಳಾದ ಅವಳ ನೋಟ ಕೂಗಿ ಹೇಳಿತು. "ಹೋಗಿ ಬರುವೆ."

ಹೃದಯವನ್ನು ಹಿಂದೆ ಬಿಟ್ಟು ಬರುವಂತೆ ತಳಮಳ ಮೂಡಿತು. ಅಘೋರ ತಲೆ ಬಾಗಿ ತನ್ನ ಹಾದಿ ತುಳಿದ.

ರಾತ್ರಿಯೂಟವಾದನಂತರ ತಂದೆಯೊಂದಿಗೆ ಅಘೋರ ಅವರ ಮನೆಯ ಮುಂದೆ ಟ್ಯಾಕ್ಸಿ ನಿಲ್ಲಿಸಿದಾಗ ಇಬ್ಬರೂ ತಯಾರಿದ್ದರು. ಅವರೊಂದಿಗೆ ನಿಲ್ದಾಣವನ್ನು ಸೇರಿ ಟಿಕೀಟನ್ನು ಕೊಂಡುಕೊಟ್ಟು ಡಬ್ಬಿಯೊಳಗೆ ಸಾಮಾನನ್ನು ಹಾಕಿಸುವವರೆಗೆ ಅಘೋರ ಅವಳತ್ತ ಕಣ್ಣು ಹಾಯಿಸದಂತೆ ಎಚ್ಚರಿಕೆ ವಹಿಸಿದ. ಹೃದಯ ಬನದ ರಾಣಿಗಾಗಿ ಹಾತೊರೆಯುವ ವ್ಯಕ್ತಿಗೆ ಅವಳನ್ನು ಬೀಳ್ಕೊಡುವಾಗ ಜೀವನೇ ಅವಳೊಂದಿಗೆ ಚಿಮ್ಮುತ್ತಿರುವಂತೆ ಭಾಸವಾಯಿತು. ವಿಮಲ್‌ದಾಸನ ಹಿಂದೆ ಶ್ಯಾಮಲಾ ಹತ್ತಿದಳು. ಅನಂತರ ಅರವಿಂದಾ ಹತ್ತಲಿದ್ದಾಗ ಕೈ ಹಿಡಿದು ಅದುಮಿ ಮೆಲ್ಲನೆ ಪಿಸುಗುಟ್ಟಿದ "ನಿನ್ನನ್ನುಳಿದು ಬದುಕಲಾರೆ ಅರವಿಂದಾ."

ರೈಲು ಕಣ್ಮರೆಯಾಗುವವರೆಗೂ ನಿಂತು ನೋಡಿ ಕರವಸ್ತ್ರವಾಡಿಸಿ ಬೀಳ್ಕೊಟ್ಟು ಭಾರವಾದ ಹೆಜ್ಜೆಗಳನ್ನು ಎಳೆದುಕೊಂಡು ಹೊರಟ ಅಘೋರನ ಅಕ್ಷಿ ಪಟಲದ ಮೇಲೆ ಕಿಟಕಿಯಲ್ಲಿ ಕೊನೆಯ ಬಾರಿ ಮೂಡಿದ ಅರವಿಂದಳ ಮುದ್ದುಮುಖ ಅಚ್ಚಳಿಯದೆ ಉಳಿದಿತ್ತು.

ಮದರಾಸನ್ನು ತಲ್ಪಿದೊಡನೆಯೇ ವಿಮಲ್‌ದಾಸ್ ನೇರವಾಗಿ ಹುಡುಗಿಯರೊಂದಿಗೆ ಅವರ ಮನೆಗೆ ಹೋದ. ಚಂದ್ರಬಾಬುಗಳಿಗೆ ಬಹಳ ದಿನಗಳ ಮೇಲೆ ವಿಮಲ್‌ದಾಸನನ್ನು ಕಂಡು ಎಲ್ಲಿಲ್ಲದ ಸಂತಸ ಮೂಡಿತು. "ಓ! ಎಷ್ಟು ವರ್ಷಗಳ ಮೇಲೆ ನಿಮ್ಮ ದರ್ಶನವಾಯಿತು ? ಬಹಳ ಸಂತೋಷ!" ಎಂದು ಸ್ವಾಗತಿಸಿದ. ಮುಖ ಹೂವಿನಂತೆ ಅರಳಿತು.

"ನಿಮ್ಮ ಮಗಳನ್ನು ಸುರಕ್ಷಿತವಾಗಿ ತಲ್ಪಿಸಿದುದಕ್ಕೆ "ಥ್ಯಾಂಕ್ಸ್ ಹೇಳಿರಿ!" ನಗುನಗುತ್ತಾ ವಿಮಲ್‌ದಾಸ್ ಹುಬ್ಬುಹಾರಿಸಿದ–"ಅಷ್ಟೇ ಅಲ್ಲ. ನಿಮ್ಮಿಂದ ಚಕ್ರ ಬಡ್ಡಿಯನ್ನೂ ವಸೂಲು ಮಾಡುವೆ!"

"ಓ....,ಆಗಲಿ." ಅಪರೂಪ ಸಮಾಗಮ ಹೃದಯವನ್ನು ಉಕ್ಕೇರಿಸಿತು. ಒತ್ತಾಯಪೂರ್ವಕವಾಗಿ ಬಾಬು–"ಇದೇನು ಹೊರಗಡೆಯೇ ಮಾತುಕತೆ ಮುಗಿಸುತಿದ್ದೀರಲ್ಲಾ ? ಒಳಗಡೆ ಬನ್ನಿರಿ."

"ಇಲ್ಲಪ್ಪಾ, ತುಂಬ ಕೆಲಸವಿದೆ. ಅದನ್ನಿಷ್ಟು ಮುಗಿಸಿಕೊಂಡು ಮಧ್ಯಾಹ್ನ ಬರುವೆ. ಆಗ ಎಷ್ಟೊತ್ತಾದರೂ ನಿಮ್ಮಲ್ಲಿ ಕಳೆಯಬಹುದು." ಎನ್ನುತ್ತಾ ಟ್ಯಾಕ್ಸಿ ಹತ್ತಿ ಕುಳಿತುಕೊಂಡು ಪುನಃ–"ಬಾಬು, ಮಧ್ಯಾಹ್ನ ಬರುವೆ. ಎಲ್ಲೂ ಹೋಗಬೇಡಿರಿ."

"ಇಲ್ಲ, ಬನ್ನಿರಿ" ನಗುನಗುತ್ತಾ ಚಂದ್ರಬಾಬು ಕೈ ಜೋಡಿಸಿದ.

ಹುಡುಗಿಯರು ಅದ್ಯಾವ ಮಾಯದಲ್ಲೋ ಒಳಗಡೆ ಸೇರಿಕೊಂಡಿದ್ದರು.

ಅಧ್ಯಾಯ
೧೭

ಡಾ|| ಘನಶ್ಯಾಮ್‌ರವರ ಆಫೀಸಿನ ಬಲಭಾಗದ ಕೊಠಡಿಯು ಅವರ ವಿಶ್ರಾಂತಿ ಧಾಮ. ಅದರಲ್ಲಿ ಅವರ ಕಡೆಯವರೊಬ್ಬರ ಎಮರ್ಜೆನ್ಸಿ ಕೇಸನ್ನು ಇಟ್ಟುಕೊಂಡಿದ್ದರು. ಅಲ್ಲಿಗೆ ಭದ್ರ ಕಾವಲನ್ನು ಹಾಕಿ ಯಾರನ್ನೂ ಒಳಗಡೆ ಬಿಡದಂತೆ ತಡೆ ಹಿಡಿಯಲಾಗಿತ್ತು. ಜೀವನ್ಮರಣಗಳ ಹೋರಾಟದಲ್ಲಿದ್ದ ಹುಡುಗಿ ಬಿ. ಎ., ಓದಿದವಳು. ಸರ್ವೇಸಾಮಾನ್ಯವಾಗಿ ಯಾವ ರೋಗಿಯನ್ನೂ ಡಾಕ್ಟರ ಕೊಠಡಿಯಲ್ಲಿಟ್ಟುಕೊಳ್ಳುತ್ತಿರಲಿಲ್ಲ-ಆದರಲ್ಲೂ ಅವಳು ಡಾಕ್ಟರ ಕುಟುಂಬಿನಿಯಲ್ಲ. ಬಾಗಿಲ ಪಕ್ಕದಲ್ಲಿದ್ದ ಬೆಂಚಿನ ಮೇಲೆ ಅವಳ ಕುಟುಂಬಿಗರು ಕುಳಿತು ಬಳಬಳ ಕಂಬನಿಗರೆಯುತ್ತಿದ್ದರು. ವೃದ್ಧೆಯೊಬ್ಬಳು ಪ್ರಲಾಪಿಸುತ್ತಿದ್ದ ರೀತಿ ಎಂತಹವರಿಗೂ ಮರುಕ ಮೂಡಿಸುವಂತಿತ್ತು. ಅವಳ ಸ್ಥಿತಿಗತಿಯನ್ನು ಗಮನಿಸಿದ ಅವಳ ಮಗ ಅವಳನ್ನು ಅಲ್ಲಿಂದ ಮನೆಗೆ ಕರೆದೊಯ್ಯಲು ಪ್ರಯತ್ನಿಸುತಿದ್ದ.

ವೃದ್ಧೆ ಹುಡುಗಿಯನ್ನು ತೋರಿಸಿರೆಂದು ಅಂಗಲಾಚುತಿದ್ದಳು.

ಡಾ|| ಅಘೋರ ಡಾ|| ಘನಶ್ಯಾಮ್‌ರನ್ನು ನೋಡಲು ಅಲ್ಲಿಗೆ ಬಂದಾಗ ಆಫೀಸಿನ ಬಾಗಿಲು ಹರವಾಗಿ ತೆರೆದಿತ್ತು. ಡಾಕ್ಟರು ಇರಲಿಲ್ಲ. ಅವರು ವಿಶ್ರಾಂತಿ ಧಾಮದಲ್ಲಿರಬಹುದೋ ಎಂದು ನೋಡಿದರೆ ಅಲ್ಲೊಂದು 'ಪೇಷಂಟ್ ! ಅಘೋರ ಮುಳ್ಳು ತುಳಿದವನಂತೆ ಒಮ್ಮೆಲೆ ಆಶ್ಚರ್ಯ ಚಕಿತನಾದ. ಹೊಸ ವಿಷಯ ಮನಸ್ಸಿನೆಳೆಯನ್ನು ಜಗ್ಗ ಹತ್ತಿತು.

ಓ.....ಇದೆಂಥ ಆಶ್ಚರ್ಯ ! ಡಾಕ್ಟರ ಕೋಣೆಯಲ್ಲಿ ಪೇಷಂಟ್ !

ಅದೇ ವಿಚಾರವನ್ನು ಮೆಲುಕು ಹಾಕುತ್ತಾ ಅಘೋರ ಒಂದು ಗಳಿಗೆ ಯೋಚಿಸಿ ಇನ್ನೇನು ಹಿಂದಿರುಗುವುದರಲ್ಲಿದ್ದ. ಅಷ್ಟರಲ್ಲಿ ಕುಟುಂಬದ ಇತರರೊಂದಿಗೆ ಬಾಗಿಲಲ್ಲಿ ಕಾದಿದ್ದ ಹುಡುಗ ಇತ್ತಲೇ ಬಂದು ಕೈ ಮುಗಿದು ಕೇಳಿಕೊಂಡ. "ಡಾಕ್ಟರ್, ನನಗೊಂದಿಷ್ಟು ಸಹಾಯ ಮಾಡುವಿರಾ ?" ದನಿಯಲ್ಲಿ ಬೇಡಿಕೆ ಇತ್ತು. ಕಣ್ಣುಗಳಲ್ಲಿ ದೈನ್ಯತೆಯಿತ್ತು.

"ಏನು ಹೇಳಿರಿ."

"ಒಳಗಡೆ ಮರಣಾಂತಿಕ ಸ್ಥಿತಿಯಲ್ಲಿರುವ ಹುಡುಗಿ ನಮ್ಮವಳು. ಅವಳನ್ನು ನೋಡದಂತೆ ನಮ್ಮನ್ನು ತಡೆ ಹಾಕಿದ್ದಾರೆ!"

"ಏಕೆ?" ಆಶ್ಚರ್ಯ ಚಿನ್ಹೆ ಮುಖದಲ್ಲಿ ಮುದ್ರೆಯೊತ್ತಿತು.

"ಅಂತರಂಗದಲ್ಲಿ ಅವಳ ಕೊಲೆಯಾಗುತ್ತಿದೆ! ಅಂತಲೇ ನಮಗೆ ಭೇಟಿಗೆ ಅವಕಾಶವಿಲ್ಲ!"

...ಇದೆಂತಹ ವಿಚಿತ್ರ? ಛೀ! ಛೀ! ಅಂತರಂಗದಲ್ಲಿ ಕೊಲೆ! ನಿಜವೋ, ಸುಳ್ಳೋ? ಏನಿರಬಹುದು? ಡಾ|| ಘನಶ್ಯಾಮ್ ಹೇಗೆ ಹೀಗಾದರು?....ಆಸ್ಪತ್ರೆಯಲ್ಲಿ ಕೊಲೆ?....

"ಡಾ|| ಘನಶ್ಯಾಮ್ ತಡೆ ಹಾಕಿದುದನ್ನು ನಾನು ತೆರವು ಮಾಡಿಸುವುದು ಸಾಧ್ಯವಿಲ್ಲ. ಅವರು ಇಲ್ಲಿನ ಹಿರಿಯ ಡಾಕ್ಟರು. ಅವರು ಒಪ್ಪಿಗೆ ನೀಡಿದ ಹೊರತು ನೀವು ನೋಡಲಾರಿರಿ. ಏನಿದ್ದರೂ ನೀವು ಅವರನ್ನೇ ಕೇಳಿಕೊಂಡು ನೋಡತಕ್ಕದ್ದು."

"ಅವರನ್ನು ಕೇಳಿಕೊಂಡಿದ್ದಾಯಿತು. ಅವರೊಪ್ಪಲಿಲ್ಲ."

"ಅಂದಮೇಲೆ ನಿಮಗೆ ಅಗತ್ಯವಿದ್ದರೆ ನಾನು ಹೋಗಿ ಹುಡುಗಿ ಹೇಗಿದ್ದಾಳೆ–ಅವಳ ಸ್ಥಿತಿಗತಿಯೇನು ಎಂಬುದನ್ನು ನೋಡಿಕೊಂಡು ಬಂದು ನಿಮಗೆ ಹೇಳಬಲ್ಲೆ, ಅಷ್ಟೆ."

"ಈಗ ಅಷ್ಟಾದರೂ ಮಾಡಿ, ಡಾಕ್ಟರ್." ತರುಣ ಕೈ ಜೋಡಿಸಿದ.

ಅಘೋರ ಸ್ವಲ್ಪ ಹೊತ್ತು ಯೋಚಿಸಿದ. ವಿಷಯ ನುಂಗಲಾರದ ತುತ್ತಿನಂತಾಯಿತು. ವಿಚಾರಗತ್ತರಿಯಲ್ಲಿ ಸಿಕ್ಕಿ ಹಾಗೇ ತುಸು ನಿಂತ.

"ಇದೇನೋ ಸಮಸ್ಯೆಯಾಗಿ ತೋರುತ್ತಿದೆ. ಏನು ವಿಷಯ ಹೇಳಿರಿ."

ತರುಣ ಒಮ್ಮೆ ಸುತ್ತಮುತ್ತ ಕಣ್ಣು ಹೊರಳಿಸಿ ತುಸು ಉದ್ವೇಗದಿಂದ–"ಇದು ಬಹಿರಂಗವಾಗಿ ಹೇಳುವಂತಾದ್ದಲ್ಲ! ಡಾ|| ಘನಶ್ಯಾಮ್ ಇವರಿಗೆ ಸಹಕಾರ ಹಸ್ತ ನೀಡುತ್ತಾರೆಂದು ನಾನೆಣಿಸಿರಲಿಲ್ಲ."

"ಸರಿ; ಬನ್ನಿ."

ಇಬ್ಬರೂ ಹೊರ ಹೋದರು. ಮೆಟ್ಟಿಲನ್ನು ಇಳಿದು ಅಂಗಳವನ್ನು ದಾಟಿ ಮರದ ತಂಪು ಇರುವ ಕಡೆ ನಿಂತರು. ತರುಣ ದುಃಖ ಮಿಶ್ರಿತ ದನಿ

ಯಲ್ಲಿ ವಿವರಿಸಿದ–"ಪ್ರಭುಶಂಕರ್ ಶಿವಶಂಕರ್ ರವರು ಈ ಊರಿನ ಧನಿಕ ಸಹೋದರರು. ಪ್ರಭುಶಂಕರ್‌ರವರಿಗೆ ಒಬ್ಬನೇ ಮಗ. ಶಿವಶಂಕರ್‌ರವರಿಗೆ ಒಬ್ಬಳೇ ಮಗಳು. ಅವಳೇ ಈಗ ವಿಷಮ ಸ್ಥಿತಿಯಲ್ಲಿರುವ ಹುಡುಗಿ. ಶಿವ ಶಂಕರ್‌ರವರಿಗೆ ನನ್ನ ಅಕ್ಕನನ್ನು ಕೊಟ್ಟು ಮದುವೆಯಾಗಿತ್ತು. ಶಿವ ಶಂಕರ್‌ರವರು ಹತ್ತು ವರ್ಷಗಳ ಹಿಂದೆ ತೀರಿಕೊಂಡರು. ತಮ್ಮನ ಸಂಸಾರ ವನ್ನು ತಮ್ಮಲ್ಲೇ ಉಳಿಸಿಕೊಂಡು ಪ್ರೀತಿ ವಾತ್ಸಲ್ಯಗಳಿಂದ ನೋಡುತಿದ್ದರು– ಪ್ರಭುಶಂಕರ್. ದುರದೃಷ್ಟವಶಾತ್ ಈಚೆಗೆ ನಮ್ಮ ಅಕ್ಕನೂ ತೀರಿ ಕೊಂಡರು. ಅವರ ಏಕಮಾತ್ರ ಪುತ್ರಿಯು ಪ್ರಭುಶಂಕರರ ಪೋಷಣೆ ಯಲ್ಲಿಯೇ ಉಳಿದಳು. ಅವರು ಪ್ರೀತಿಯಿಂದ ನೋಡಿ ಕೊಳ್ಳುತಿದ್ದುದರಿಂದ ನಾವು ಹೆಚ್ಚು ಎಚ್ಚರಿಕೆ ತೆಗೆದುಕೊಳ್ಳಲಿಲ್ಲ. ಪ್ರಭುಶಂಕರ್ ಅವಳನ್ನು ಪ್ರೀತಿಸುತಿದ್ದುದು ನಿಜ. ಅವರ ಮಗ ಮತ್ತು ಸೊಸೆಗೆ ಇದು ಸಹಿಸಲಿಲ್ಲ. ಮೇಲಾಗಿ, ತಮ್ಮನ ಭಾಗದ ಆಸ್ತಿಯನ್ನು ತಮ್ಮನ ಮಗಳಿಗೆ ಬಿಟ್ಟು ಕೊಡುವುದೆಂದು ಪ್ರಭುಶಂಕರ್ ನಿರ್ಧರಿಸಿದುದೇ ಈ ಅನಾಹುತಕ್ಕೆ ಕಾರಣ. ಪ್ರಭುಶಂಕರ್ ಇಲ್ಲದ ವೇಳೆ ಅವಳಿಗೆ ವಿಷವೂಡಿಸಿ ಸುದ್ದಿಯಿಲ್ಲದೆ ಕೊಲ್ಲಲು ಅಣ್ಣ ಅತ್ತಿಗೆಯ ಪ್ರಯತ್ನ ಇದು !"

"ಹಾಗಿದ್ದ ಮೇಲೆ ಆಸ್ಪತ್ರೆಗೇಕೆ ಕರೆತಂದರು ?"

"ಕೈ ಮಿಂಚಿ ಹೋಗುವುದರೊಳಗಾಗಿ ಪ್ರಭುಶಂಕರರವರು ಊರಿಗೆ ಮರಳಿದ್ದಾರೆ. ಅಲ್ಲದೆ ಮನೆಯಲ್ಲಾದರೆ ಹೀಗೆ ನೋಡುವವರಿಗೆ ತಡೆಹಾಕು ವಂತಿಲ್ಲ. ಹುಡುಗಿಯಿಂದ ವಿಷಯ ಬಹಿರಂಗವಾದರೆ ಕೋರ್ಟು ಜೈಲು ಇತ್ಯಾದಿಗಳ ತಾಪತ್ರಯವಿದೆ. ಅದಕ್ಕಾಗಿ ಹೊರಗಡೆ ಸುದ್ದಿಯನ್ನೇ ಬಿಡ ಲಿಲ್ಲ. ನಮಗೂ ಹೇಗೋ ಗೊತ್ತಾಗಿ ಬಂದೆವು. ಅವರೀಗ ಹೇಳುತ್ತಿರುವುದು ಹೃದಯಾಘಾತ ಹುಡುಗಿಗೆ ತುಂಬ ವಿಶ್ರಾಂತಿ ಬೇಕು ಅಂತ. ಹೇಗಿದೆ ನೋಡಿ !" ಹುಡುಗನ ಮುಖ ಕಣ್ಣುಗಳು ರಂಗೇರಿದುವು.

"ಪ್ರಭುಶಂಕರ್ ಇಲ್ಲಿದ್ದಾರೆಯೆ ?"

"ಹೌದು. ಅವರು ಹುಡುಗಿಯ ಬಳಿಯಲ್ಲಿದ್ದಾರೆ. ಪ್ರಭುಶಂಕರ್ ರವರೂ ಡಾ|| ಘನಶ್ಯಾಮ್‌ರವರೂ ಆತ್ಮಸ್ನೇಹಿತರು. ಮಗ ಸೊಸೆಯಿಂದ ಆದ ಅನಾಹುತದಿಂದ ಪ್ರಭುಶಂಕರ್‌ರವರನ್ನು ಉಳಿಸಲು ಡಾ|| ಘನಶ್ಯಾಮ್

ಹುಡುಗಿಯನ್ನು ತಮ್ಮ ಕೊಠಡಿಯಲ್ಲಿಟ್ಟುಕೊಂಡು ವಿಷಯ ಬಹಿರಂಗವಾಗದಂತೆ ನೋಡಿಕೊಳ್ಳಲು ಹೂಡಿರುವ ತಂತ್ರ ಇದು !"

ಅಘೋರ ಮರವಟ್ಟು ನಿಂತ. ಕ್ಷಣಕಾಲ ಕಣ್ಣ ಮುಂದಿನ ಗಿಡ ಮರಗಳೆಲ್ಲಾ ಗಿರಗಿರ ಸುತ್ತಿದಂತಾಯಿತು. ಅಬ್ಬಾ!...ರುದ್ರ ಭಯಂಕರ!

"ದಯಮಾಡಿ ನಮಗೆ ಅವಳನ್ನಷ್ಟು ನೋಡಲು ಅವಕಾಶ ಮಾಡಿಕೊಡಿ."

ತರುಣನ ದನಿ ಮನಸ್ಸಿನೆಳೆಯನ್ನು ಜಗ್ಗಿತು. ಅಘೋರ ಯೋಚನೆಯಿಂದ ವಿಮುಖನಾದ. ವಿಷಯ ಹೃದಯವನ್ನು ಮಂಜಿನಂತೆ ಕರಗಿಸಿತು. ಎದೆಯಾಳದಿಂದ ಕಾರುಣ್ಯ ಪೂರ್ಣ ದನಿ ಹೊರಬಿತ್ತು. "ಡಾ|| ಘನಶ್ಯಾಮ್‌ರ ಅನುಮತಿ ಇಲ್ಲದೆ ಸಾಧ್ಯವಿಲ್ಲವಲ್ಲಾ ?"

"ನೀವಾದರೂ ನೋಡಿ ಹುಡುಗಿಯ ಸ್ಥಿತಿಗತಿಯನ್ನು ತಿಳಿಸಿರಿ ಡಾಕ್ಟರ್."

"ಬನ್ನಿ ನೋಡೋಣ." ಎನ್ನುತ್ತಾ ಅಘೋರ ದಾಪುಗಾಲು ಹಾಕಿದ. ಇಬ್ಬರೂ ಕಾರಿಡಾರನ್ನು ದಾಟಿ ಡಾ|| ಘನಶ್ಯಾಮ್‌ರವರ ಆಫೀಸಿನತ್ತ ಹೆಜ್ಜೆ ಹಾಕಿದರು. ಅವರು ಇನ್ನೂ ಆಫೀಸಿಗೆ ಬಂದಿರಲಿಲ್ಲ. ಬಾಗಿಲಲ್ಲಿ ಕಾದಿದ್ದ ಅಜ್ಜಿ ಬಿಕ್ಕುತ್ತಲೇ ಕೈ ಜೋಡಿಸಿದಳು. ತರುಣ ತಾಯಿಯನ್ನು ಪರಿಚಯ ಮಾಡಿಕೊಡುತ್ತಾ ಅಂದ "ನಮ್ಮ ತಾಯಿಗೆ ನಮ್ಮ ಅಕ್ಕ ಒಬ್ಬಳೇ ಮಗಳು. ನೋಡಿ, ಅಜ್ಜಿಗೂ ಮೊಮ್ಮಗಳನ್ನು ನೋಡಲು ಅವಕಾಶವಿಲ್ಲ!"

ಅಘೋರ ಪಹರೆಯವನನ್ನು ಕೇಳಿದ "ಡಾ|| ಘನಶ್ಯಾಮ್ ಎಲ್ಲಿ ?"

"ಒಳಗಿದ್ದಾರೆ ಸಾರ್."

ಅಘೋರ ಒಳ ಹೋದ. ತರುಣಿ ಸುಮಳು ಬಳ್ಳಿಯಂತೆ ಹೊರಳಾಡುತಿದ್ದಳು. ಗ್ಲೂಕೋಸ್ ಡ್ರಿಪ್‌ಗಳು ಚುಚ್ಚಲ್ಪಟ್ಟಿದ್ದುವು. ಅವಳ ಸ್ಥಿತಿ ವಿಷಮಾವಸ್ಥೆಗೇರಿತ್ತು. ಘನಶ್ಯಾಮ್ ಅಘೋರನನ್ನು ನೋಡುತ್ತಲೂ ಹೊರ ಬಂದರು. ಅಘೋರ ತಾನು ಬಂದ ವಿಷಯವನ್ನು ಮುಂದಿಟ್ಟ—"ಸಾರ್, ಹಾರ್ಟ್‌ಟ್ರಬಲ್(Heart Trouble)ಇರುವ ಪೇಷಂಟಿಗೆ ಆಪರೇಶ್‌ ಆಗಬೇಕಾಗಿದೆ- ದಯಮಾಡಿ ಬಂದು ನೋಡಿರಿ. ಅವರು ನೀವೇ ಬಂದು ನೋಡಬೇಕೆಂದು ಕೇಳಿಕೊಂಡಿದ್ದಾರೆ. ನೀವು ನೋಡದೆ ನಾವು ಮುಟ್ಟುವಂತಿಲ್ಲ."

"ಆಗಲಿ, ಇನ್ನಷ್ಟು ಹೊತ್ತಿನೊಳಗಾಗಿ ಬಂದು ನೋಡುವೆ."

ಅಘೋರ ಅಲ್ಲಿಂದ ಹೊರಬೀಳುತ್ತಲೂ ತರುಣ ಅವನನ್ನು ಹಿಂಬಾಲಿಸಿದ, ಇಬ್ಬರೂ ಮೆಟ್ಟಿಲನ್ನು ಇಳಿದು ಅಂಗಳಕ್ಕೆ ಬಂದರು. ತರುಣ ಉದ್ವೇಗದಿಂದ ಕೇಳಿದ.

"ಹೇಗಿದ್ದಾಳೆ?"

"ಅರೆ ಬರೆ ಜ್ಞಾನವಿದೆ. ತನ್ನವರನ್ನು ನೋಡುವ ಕಾತುರತೆ ಕಣ್ಣುಗಳಲ್ಲಿ ಇದೆ. ಬದುಕುವ ಸಂಭವ ಕಡಿಮೆ."

"ಪಾಪ, ನಿನ್ನೆ ರಾತ್ರಿಯೆಲ್ಲಾ "ಅಜ್ಜೀ! ಮಾಮಾ!" ಅಂತ ಕೂಗುತ್ತಲೇ ಇದ್ದಳು. ಅವಳೆಷ್ಟು ಕೂಗಿದರೂ ಕೇಳಿಕೊಂಡರೂ ನಮಗೆ ಅವಕಾಶ ಕೊಡಲಿಲ್ಲ ನೋಡಿ. ಒಳಗಡೆ ಅವಳು ಕಂಬನಿ ಹರಿಸಿದ್ದಾಳೆ. ಹೊರಗಡೆ ನಾವು ಕಂಬನಿ ಸುರಿಸಿದ್ದೇವೆ. ಇಷ್ಟರಲ್ಲೇ ಆಯಿತು ನಮ್ಮ ಸಂಬಂಧವೆಲ್ಲಾ." ಅದುರುವ ದನಿಯಲ್ಲಿ ನುಡಿ ಹೊರಬಿತ್ತು.

ಅಘೋರ ತುಸು ಯೋಚಿಸುತ್ತಾ ನಿಂತ.

"ನೋಡಿ, ಇಷ್ಟೆಲ್ಲಾ ಮಾಡಿದವರು ನಾಳೆ ಪೋಸ್ಟ್‌ಮಾರ್ಟಂ ತಪ್ಪಿಸಲಿಕ್ಕೂ ಸಾಕು. ಅವರು ಏನೇ ಹೇಳಿದರೂ ನೀವು ಒಪ್ಪಬೇಡಿರಿ. ಪೋಸ್ಟ್‌ಮಾರ್ಟಂ ಆಗಲೇ ಬೇಕೆಂದು ಕೇಳಿಕೊಳ್ಳಿರಿ."

"ನೀವೊಂದಿಷ್ಟು ಸಹಾಯ ಮಾಡಿರಿ, ಡಾಕ್ಟರ್." ತರುಣ ಕೈಜೋಡಿಸಿದ.

"ನಾನಿನ್ನೇನು ಮಾಡಬಲ್ಲೆ ? ಆಗುವುದೆಲ್ಲಾ ಆಗಿಹೋಗಿದೆ."

"......"

"ಪೋಸ್ಟ್‌ಮಾರ್ಟಂ ತಪ್ಪಿಸಲು ಅವಕಾಶ ಕೊಡಬೇಡಿ."

ಅಘೋರ ಹುಡುಗಿಯ ಅಜ್ಜಿಗೆ ನಾಲ್ಕು ಸಮಾಧಾನದ ಮಾತುಗಳನ್ನು ಹೇಳಿ ತನ್ನ ಹಾದಿ ಹಿಡಿದ. ಮನಸ್ಸು ಅದೇ ವಿಷಯವನ್ನು ಮೆಲ್ಲುತಿತ್ತು. ಆಪರೇಶನ್ ಥಿಯೇಟರಿನವರೆಗೆ ಹಾದಿ ಸಾಗಿದುದೂ ತಿಳಿಯಲಿಲ್ಲ. ಅಂತರ್ವಾಣಿ ಒಂದೇ ಸಮನೆ ಚೀರುತಿತ್ತು "ಪಾಪ, ಬಾಳಿ ಬದುಕಬೇಕಾದ ಹುಡುಗಿ."

ಅದೇ ತಾನೇ ಡಾ|| ಘನಶ್ಯಾಮ್ ಬಂದು ರೋಗಿಯನ್ನು ನೋಡಿ– "ಇವರಿಗೆ ಆಪರೇಶನ್ ಮಾಡಲಾಗದು. ಮಾಡಿದರೆ ವ್ಯಕ್ತಿ ಮೇಜಿನ ಮೇಲೆ ಹೋಗಿ ಬಿಡುವುದರಲ್ಲಿ ಸಂಶಯವಿಲ್ಲ ಆಪರೇಶನ್ ಅಪಾಯಕರ!" ಎಂದಿದ್ದರು.

ಅನಸ್ತೇಶಿಯಾ ಪ್ರೊಫೆಸರೂ ಹಾಗೇ ಅಂದಿದ್ದರು. ಅವರಿಬ್ಬರ ಅಭಿಪ್ರಾಯವನ್ನು ಮೀರಿ ಕೈ ಹಚ್ಚುವಂತಿಲ್ಲವಾದ್ದರಿಂದ ಆಪರೇಶನ್ ಮಾಡಲಿದ್ದ ಡಾ|| ಭಾರ್ಗವಾ ಕೇಳಿದರು "ಏನಪ್ಪಾ ಮಾಡಲಿ ?"

ಡಾ|| ಭಾರ್ಗವಾ ವಿಚಾರಗತ್ತರಿಯಲ್ಲಿ ಸಿಕ್ಕಿಕೊಂಡು ಶತಪಥ ತಿರುಗುತ್ತಾ ಅಂದರು "ಹಿರಿಯ ಫಿಜಿಸಿಯನ್ ಮತ್ತು ಅನಸ್ತೇಶಿಯಾ ಪ್ರೊಫೆಸರರ ಆದೇಶವನ್ನು ಬದಿಗೊತ್ತುವುದೆಂದರೆ ಸಾಮಾನ್ಯವೇ ? ಕೆಲವು ದಿನ ಕಾದು ನೋಡಿದರೆ ಹೇಗೆ ?"

ಹಾಸಿಗೆಯ ಮೇಲಿನ ಅಜ್ಜ ನರಳುತ್ತಾ ಹೇಳಿತು "ಜನರಲ್ ಅನಸ್ತೇಶಿಯಾ ಕೊಡಲಾಗದಿದ್ದರೆ ಬೇಡ. ಲೋಕಲ್ ಅನಸ್ತೇಶಿಯಾ ಕೊಟ್ಟಾದರೂ ಮಾಡಿರಿ. ನಾನೀ ಬಾಧೆ ತಡೆಯಲಾರೆ."

ಅಘೋರ ಹಾಗೇ ನಿಟ್ಟಿಸಿ ನೋಡಿದ. ಎಂಭತ್ತೊಂದು ವಯಸ್ಸಿನ ಅಜ್ಜ ದೊಡ್ಡದಾಗಿ ಬೆಳೆದ ಪ್ರಾಸ್ಟೇಟ್(Enlarged Prostate)ನಿಂದ ನರಳುತಿದ್ದ. ದಿನವೂ ಮೂತ್ರವಿಸರ್ಜನೆ ಮಾಡಲಾಗದೆ ತಾನು ಬಾರಿ ಬಾರಿಗೂ ಡಾಕ್ಟರನ್ನು ಆಶ್ರಯಿಸಬೇಕಾಗುತಿತ್ತು. ಹೀಗಾಗಿ ಜೀವನದಲ್ಲಿ ಜಿಗುಪ್ಸೆ ಹೊಂದಿ ಸಾವಿನಂಚಿಗೆ ಸರಿದರೂ ಸಾವು ಬಂದಿರಲಿಲ್ಲ.

....ಅಂದ ಮೇಲೆ...?

"ಆಪರೇಶನ್ ಸುಖವಾಗಿ ಆದರೆ ವ್ಯಕ್ತಿ ಸುಖವಾಗಬಲ್ಲ. ಇಷ್ಟಕ್ಕೂ ಈಗಿದ್ದ ಪರಿಸ್ಥಿತಿಯಲ್ಲಿ ಇರುವುದಕ್ಕಿಂತ ಸಾಯುವುದು ಲೇಸು." ಎಂದರು ಡಾ|| ಭಾರ್ಗವಾ.

"ಹೌದು ಸಾರ್." ಅಘೋರ ಒಪ್ಪಿಕೊಂಡ.

ತಮ್ಮ ಅಸಿಸ್ಟೆಂಟ್ ಕಾಳೀಪ್ರಸಾದರನ್ನು ಕೇಳಿದರು ಡಾ|| ಭಾರ್ಗವಾ "ಏನು ಮಾಡೋಣ ?"

ಡಾ|| ಕಾಳೀಪ್ರಸಾದ್ ಮಾತಾಡದೆ ತಲೆ ಕೆರೆದುಕೊಂಡರು.

"ಈ ಬಗೆಯ ಜೀವನಕ್ಕಿಂತ ಸಾವು ಲೇಸು. ನಾನು ಮೇಜಿನ ಮೇಲೆ ಸತ್ತರೂ ಚಿಂತೆಯಿಲ್ಲ. ಲೋಕಲ್ ಅನಸ್ತೇಶಿಯಾ ಕೊಟ್ಟು ಆಪರೇಶನ್ ಮಾಡಿರಿ." ದೈನ್ಯತೆಯಿಂದ ಕೂಡಿದ ದನಿ ಬಾವಿಯಾಳದಿಂದ ಹೊರಬಿದ್ದಂತೆ ಹೊರಬಿತ್ತು. ಕಣ್ಣುಗಳಂಚಿನಲ್ಲಿ ಕಂಬನಿಗಳುಕ್ಕಿದುವು. ಅಜ್ಜ ಬಳಬಳನೆ ಅಳಹತ್ತಿದರು.

ಡಾ|| ಭಾರ್ಗವಾ ಕುಟುಂಬಿಗರ ಸಮ್ಮತಿಯನ್ನು ಪಡೆದುಕೊಂಡು ಫಿಜಿಸಿಯನ್ನರ ಮತ್ತು ಅನಸ್ತೇಶಿಯಾ ಪ್ರೊಫೆಸರರ ಆದೇಶವನ್ನು ಬಿಟ್ಟು ಕೊಟ್ಟು ಆಪರೇಶನ್ ಮಾಡಲು ಮುಂದಾದರು. ಆಪರೇಶನ್ನಿನ ಮಧ್ಯೆ ಒಮ್ಮೆ ಅಘೋರ ಹೊರ ಬಂದ. ಕುಟುಂಬ ವರ್ಗದವರು ತಕ್ಷಣ ಧಾವಿಸಿ ಬಂದು ಕೇಳಿದರು "ಹೇಗಿದ್ದಾರೆ ಅಜ್ಜ ?"

"ಚೆನ್ನಾಗಿದ್ದಾರೆ." ಎಂದ ಅಘೋರನಿಗೆ ಅವರ ಕಾತರವನ್ನು ನೋಡಿ ಕರುಳು ಚುರುಕ್ ಎಂದಿತು. ಈ ಅಜ್ಜನಿಗಾಗಿ ಇಷ್ಟೊಂದು ಕಾತುರವೇ ಎನ್ನಿಸಿದರೂ ಜೀವನದ ಮಧುರ ಬಾಂಧವ್ಯ ಮನಸ್ಸಿನೆಳೆಯನ್ನು ಜಗ್ಗಿತು. ಧ್ಯೇಯ ರಮಣಿ ಬಿಂಕದಿಂದ ದೂರ ಸರಿದಳು !

ಆಪರೇಶನ್ ಮುಗಿಯಿತು. ಅಜ್ಜ ಕುತ್ತಿನಿಂದ ಪಾರಾದರು ! ಹಿರಿಯ ವೈದ್ಯರುಗಳ ಆದೇಶವನ್ನು ಮೀರಿ ಆಪರೇಶನ್ ಮಾಡಿ ಡಾ|| ಭಾರ್ಗವಾ ವಿಜಯ ಸಾಧಿಸಿದುದನ್ನು ಅಘೋರ ಅಚ್ಚರಿಯ ಕಣ್ಣುಗಳಿಂದ ನಿಟ್ಟಿಸಿದ. ಡಾ|| ಭಾರ್ಗವಾ ಅವರನ್ನು ಅತ್ಯಂತ ಪ್ರೀತ್ಯಾದರದಿಂದ ನೋಡಿಕೊಳ್ಳುತಿದ್ದುದನ್ನೂ ವೃದ್ಧ ಮಹಾಶಯರ ಮುಖದಲ್ಲಿ ಸಂತಸದ ನಗೆ ಲಾಸ್ಯವಾಡುವುದನ್ನೂ ಮೂಕ ವಿಸ್ಮಿತನಾಗಿ ನಿಂತು ನೋಡಿದ ಅಘೋರ.

ಅಘೋರ ಮರುದಿನ ಆಸ್ಪತ್ರೆ ಮುಟ್ಟಿದಾಗ ಡಾ|| ಘನಶ್ಯಾಮರ ಪೇಶಂಟ್ ಮರಣ ಹೊಂದಿದ್ದಳು. ಅವಳ ದೇಹವನ್ನು ಪೋಸ್ಟ್ ಮಾರ್ಟಂಗೆ ಒಳಪಡಿಸಲಾಗಿತ್ತು. ಅದರಿಂದ ಬಂದ ವರದಿಯಾದರೂ ಎಂತಹದು ? ಛೀಃ ! ಛೀಃ !...ಮನುಷ್ಯ ಎಷ್ಟು ಕೀಳು ಮಟ್ಟಕ್ಕಿಳಿಯಬಲ್ಲ ?

ಜೀವನದ ಸಂಜೆಯಲ್ಲಿ ಭಗವಂತನ ಸಾನಿಧ್ಯಕ್ಕಾಗಿ ಹಾ ತೊರೆಯುತಿದ್ದ ಅಜ್ಜಿಯ ಹೃದಯಕ್ಕೆ ಈಟಿಯಿಂದ ಇರಿಯುಂತೆ ಸುದ್ದಿ ಹೊರಬಿದ್ದಿತು !... ವೈತರಣಿ ತಾಯಿಯಾಗಲಿದ್ದುದರಿಂದ ಫಾಲಿಡಾಲ್ ತೆಗೆದುಕೊಂಡು ಆತ್ಮ ಹತ್ಯೆ ಮಾಡಿಕೊಂಡಿದ್ದಾಳೆ !...

ಅಘೋರ ಅದೇ ವಿಷಯವನ್ನು ಮೆಲಕು ಹಾಕುತ್ತಾ ಕ್ಯಾಂಟೀನಿನ ಹಾದಿ ತುಳಿದ. ಜೊತೆಗೆ ರತನ್‌ಮಿಶ್ರ ಮದನ್‌ಮಿತಾಲಿ ಕೂಡಿ ಹೆಜ್ಜೆ ಹಾಕಿದ್ದರು. ಅಘೋರ ಘನ ಗಾಂಭೀರ್ಯದಿಂದ ಹೆಜ್ಜೆ ಹಾಕುತಿದ್ದುದನ್ನು

ನೋಡಿ ಮದನ್ ಹುಬ್ಬೇರಿಸಿ–"ಏನಪ್ಪಾ, ಅಘೋರ್ ? ಬಹಳ ಯೋಚನೆ ಯಲ್ಲಿದ್ದಂತಿದೆ ?"

ಅಘೋರ ತೆರೆಯ ಮರೆಯಲ್ಲಿ ನಡೆದ ರುದ್ರ ನಾಟಕದ ವಿಷಯವನ್ನು ಮುಂದಿಟ್ಟು–"ಪಾಪ, ಆ ಹುಡುಗಿಯ ಮುಖಕ್ಕೆ ಮಸಿ ಬಳಿಯುವ ಈ ಹೇಸು ಕೆಲಸವನ್ನು ಡಾ|| ಘನಶ್ಯಾಮ್ ಕೈಗೊಂಡುದುದು ಎಂಥಹ ಘೋರ ಅಪ ರಾಧ ? ನಮ್ಮ ಜನ...ನಮ್ಮ ಸಮಾಜ !...ನೆನೆಸಿಕೊಂಡರೆ ಮೈಯಲ್ಲಿ ಬೆಂಕಿಯ ಝರಿ ಹುಚ್ಚೆದ್ದು ಹರಿದಾಡುತ್ತೆ ! ಹೇಗೆ ಈ ದುಷ್ಟ ಸಮಾಜದ ಮೇಲೆ ಸೇಡು ತೀರಿಸಿಕೊಳ್ಳಲಿ ಎಂಬ ರೋಷ ಮೂಡಿದರೆ ಆಶ್ಚರ್ಯವಿಲ್ಲ ! ಹೀಗಾದರೆ ಹೇಗೆ ?...ಡಾಕ್ಟರ್ ?"

"ಇದು ಜಗತ್ತು !"

"ಇನ್ನೇನಾಗಿದ್ದರೂ ಅದರ ರೀತಿ ಬೇರೆ. ತಬ್ಬಲಿ ಹುಡುಗಿಯ ಕತ್ತು ಹಿಸುಕಿದುದೂ ಅಲ್ಲದೆ ಈ ಕೊನೆಗಾಣದ ಕಳಂಕ ಹಚ್ಚುವುದೆಂದರೇನು ? ಛೀ ! ಛೀ ! ಶುದ್ಧ ಅನ್ಯಾಯ !"

ಡಾ|| ಘನಶ್ಯಾಮ್‌ರವರಿಗೂ ಪ್ರಭುಶಂಕರ್‌ರವರಿಗೂ ಇದ್ದ ಸ್ನೇಹ ಇವರ ಘನತೆಯನ್ನು ಕೊಳಚೆಯ ಪ್ರದೇಶಕ್ಕೆ ಇಳಿಸಿಬಿಟ್ಟಿದೆ !"

"ಏನೇ ಇರಲಿ, ಇದು ಸರಿಯಲ್ಲ. ಈಶ್ವರ ಇರುವುದು ಹೌದಾಗಿದ್ದರೆ ಇನ್ನೆಂತಹ ಶಿಕ್ಷೆ ಕಾದಿದೆಯೋ !"

"ಪರಮಾತ್ಮನೇ ಬಲ್ಲ."

ತುಸು ಹೊತ್ತು ಮೌನವಾವರಿಸಿತು- ಎಲ್ಲರೂ ತದೇಕ ಚಿತ್ತದಿಂದ ಮುಂದುವರಿದರು. ಅಘೋರ ಮೌನ ಮುರಿದ "ಮದನ್ ಕ್ರೂರ ಜಂತು ಗಳಲ್ಲಿ ನಾನೊಬ್ಬನೆಂಬುದೇನೋ ನಿಜ. ಆದರೆ ನಾನೆಂದೂ ಇಷ್ಟೊಂದು ಕ್ರೂರಿಯಾಗಲಾರೆ ! ಹೇಗೆ ಡಾ|| ಘನಶಾಮ್ ಈ ಮಟ್ಟಕ್ಕೆ ಇಳಿದರು ಎಂಬುದೊಂದು ಆಶ್ಚರ್ಯ ! ಪರಮಾಶ್ಚರ್ಯ ! !"

"ಈ ಪ್ರಪಂಚವೇ ಹಾಗೆ. ಎಲ್ಲೆಲ್ಲೂ ತೋಳನ ನ್ಯಾಯ!"

"ಮೂವರೂ ಕ್ಯಾಂಟೀನಲ್ಲಿ ಮೇಜಿನ ಮುಂದೆ ಕುಳಿತರು. ಮಾಣಿ ಬಂದು ಬಿಸಿ ಬಿಸಿ ಕಾಫಿಯನ್ನು ತಂದಿಟ್ಟು ಹೋದ. ಕಾಫಿಯನ್ನು ಮೆಲ್ಲಗೆ

ಗುಟುಕಿಸುತ್ತಾ ಅಘೋರನೆಂದ "ಅಂಕಲ್ ಜರ್ಾ ಹಾಯಾಗಿ ಲಕ್ನೋದಲ್ಲಿದ್ದಾನೆ. ಅವನಿಲ್ಲದೆ ನಮ್ಮ ಕೂಟ ಕಳೆಯಿಲ್ಲದಂತಾಗಿದೆ."

"ಓದಿನಿಂದ ಅವನೇನೋ ಸುಖಿ."

"ಆಸ್ಪತ್ರೆಯ ಕೆಲಸವೇ ಬಹಳವಿರುವುದರಿಂದ ಓದಲು ಬಿಡುವೇ ಆಗುವುದಿಲ್ಲವೆಂದು ಬರೆದಿದ್ದಾನೆ."

"ಎಷ್ಟೆಂದರೂ ಅವನು ಸುಖಿ. ಜೊತೆಗೆ ಪ್ರೇಯಸಿ ಬೇರೆ ಇದ್ದಾಳೆ."

"ಸುಧೀರನಿಗೆ ಮೈಸೂರಿನಲ್ಲಿ ಎಂ. ಎಸ್. ಗೆ ಸೀಟು ಸಿಕ್ಕಿದೆ."

"ಅವನಿಗೆ ಥೊರಾಸಿಕ್ ಸರ್ಜರಿಯಲ್ಲಿ ತುಂಬ ಆಸಕ್ತಿ."

"ಅವನು ಸಾಧಿಸಿಯೇ ತೀರುತ್ತಾನೆ."

ಕಾಫಿ ಹೀರಿ ಖಾಲಿಯಾದ ಬಸಿಯನ್ನು ಮೇಜಿನ ಮೇಲಿಟ್ಟು ರತನ್ ಮುಗುಳು ನಗುತ್ತಾ "ಅಘೋರ್ !" ಎಂದ.

"ಏನು ರತನ್ ಮಹಾಶಯಾ ?"

"ಮದುವೆಯಾದವನು ಸುಖವಾಗಿ ಮಧುಚಂದ್ರಕ್ಕೆ ಹೊರಡದೆ ಇಲ್ಲೇ ಉಳಿದು ಬಿಟ್ಟಿದ್ದೀಯೇ, ಏನು ಸಮಾಚಾರ ?"

"ಅರವಿಂದ ಸಹ ಹಾಗೆನ್ನುತ್ತಾಳೆ. ಆದರೆ ಯಾಕೋ ಸಮಯ ಕೂಡಿ ಬರಲಿಲ್ಲ.

"ಅಂಥಾದ್ದೇನಪ್ಪಾ ?"

"ನಾನು ಹೋಗಲೇಬೇಕಿತ್ತು. ಜೀವನದಲ್ಲಿ ಒಮ್ಮೆ ಬರುವ ಸುಯೋಗ. ಆದರೆ ಸಧ್ಯದಲ್ಲೇ ಎಂ. ಎಸ್. ಗೆ ಸೀಟು ಸಿಕ್ಕಬಹುದು. ಆ ಕಡೆ ಹೋದಾಗ ಇಲ್ಲಿ ಸಿಕ್ಕಿದರೆ ಓಡಿ ಬರಬೇಕಾಗುತ್ತದೆ. ಮೇಲಾಗಿ ಈಚೆಗೆ ತಂದೆಯವರ ಆರೋಗ್ಯವೂ ಅಷ್ಟಾಗಿ ಚೆನ್ನಾಗಿಲ್ಲ. ದಿನವೂ ಸಂಜೆಯಲ್ಲಿ ಅವರಿಗೆ ನನ್ನ ಅಥವಾ ಅರವಿಂದಳ ನೆರವು–ಅಂಗಡಿಯ ಲೆಖ್ಖಾಚಾರದ ಬಗ್ಗೆ–ಬೇಕಾಗುತ್ತದೆ. ಅದರಿಂದಾಗಿಯೇ ನಾವು ಹೋಗುವ ಯೋಚನೆ ಬಿಟ್ಟೆವು."

"ಪಾಪ, ಅಘೋರ್ !"

"I feel sorry for you !"

ಮೂವರ ಮುಖದಲ್ಲೂ ಮುಗುಳ್ನಗೆ ಮೂಡಿತು.

ಅಧ್ಯಾಯ

೧೮

ವಿಮಲ್ ದಾಸ್ ಅಂಗಡಿಗೆ ಹೊರಟು ನಿಂತಾಗ ಅರವಿಂದಳನ್ನು ಕರೆದು ನಲ್ಮೆಯಿಂದ–"ಅರವಿಂದಾ, ಅಂಗಡಿಯಿಂದ ಲೆಖ್ಖದ ಪುಸ್ತಕಗಳನ್ನು ಇಂದು ಈಗಲೇ ಕಳುಹಿಸುವೆ ಒಂದಿಷ್ಟು ನೋಡಿಬಿಡಮ್ಮಾ."

"ಹ್ಞೂ." ಎಂದ ಅರವಿಂದಾ ತಲೆಬಾಗಿಲವರೆವಿಗೂ ಹೋಗಿ ಮಾವನನ್ನು ಬೀಳ್ಕೊಟ್ಟು ಒಳಬಂದಾಗ ಎದುರಾದ ನಂದಾ ನಸು ನಕ್ಕು–"ಅಘೂ ಚಹ ತೆಗೆದುಕೊಂಡನೇ ಅರೂ ?"

"ಇಲ್ಲಮ್ಮಾ, ಅವರು ಇನ್ನೂ ಮುಖ ಮಜ್ಜನ ಮಾಡಲಿಲ್ಲ." ಎಂದ ಅರವಿಂದಾ ಒಳಗಡೆ ಹೋಗಿ ನಂದಾದೇವಿಗೆ ಚಹವನ್ನು ತಂದುಕೊಟ್ಟು– "ಮೊದಲು ನೀವು ತೆಗೆದುಕೊಳ್ಳಿರಿ. ಅವರು ಬಂದ ನಂತರ ನಾನು ತೆಗೆದುಕೊಳ್ಳುವೆ."

"ಬರುವುದರೊಳಗಾಗಿ ಎಲ್ಲಾ ಭಾರವನ್ನೂ ಹೊತ್ತುಕೊಳ್ಳುವುದೇ ? ಹೀಗೆ ಆದರೆ ನನಗೆ ಕೆಲಸ ಕಾರ್ಯವಿಲ್ಲದೆ ಬೇಗನೆ ಮುಪ್ಪು ಹಿಡಿಯುತ್ತೆ."

"ಏನಿಲ್ಲ, ತೆಗೆದುಕೊಳ್ಳಿರಿ."

ಅವಳು ತೆಗೆದುಕೊಂಡನಂತರ ಖಾಲಿ ಬಸಿ ಬಟ್ಟಲುಗಳನ್ನು ಒಳಗೊಯ್ದು ಇಟ್ಟು ಬಂದ ಅರವಿಂದಾ ಕೈಗೊಂದು ಮಾಸಿಕವನ್ನು ತೆಗೆದುಕೊಂಡು ಕುಳಿತಳು. ಎಂ. ಎ., ತರಗತಿಯನ್ನು ಉಚ್ಚ ಶ್ರೇಣಿಯಲ್ಲಿ ಏರಿ ನಿಂತ ಅರವಿಂದಳ ಮನಸ್ಸು ಮುಗಿಲೆತ್ತರಕ್ಕೆ ಏರಿ ನಿಂತಿತ್ತು. ಅತ್ತೆ ಮಾವಂದಿರ ಅಭಿಪ್ರಾಯ ಹೇಗಿದೆಯೋ ತಿಳಿಯದೇ ಲೆಕ್ಚರರ್ ಆಗಬೇಕೆಂಬ ತನ್ನ ಹಂಬಲವನ್ನು ಮುಂದಿಡುವುದು ಸರಿಯಲ್ಲವೆಂಬ ಯೋಚನೆಯಿಂದ ಸುಮ್ಮನಾಗಿದ್ದಳು. ಇದೀಗ ತಾನೆ ಉದಯಿಸಿದ ಜೀವನದ ಧ್ರುವತಾರೆ ಉಜ್ವಲವಾಗಿ ಬೆಳಗಿ ಮಾನಸ ಸರೋವರವನ್ನು ಉಕ್ಕೇರಿಸಿರುವಾಗ ಇಲ್ಲದ ತೊಡಕನ್ನು ಆಹ್ವಾನಿಸುವ ಎದೆಗಾರಿಕೆಯೂ ಇರಲಿಲ್ಲ. ಮೊದಲು ಅಘೋರನ ಅಭಿಪ್ರಾಯ ಹೇಗಿದೆಯೋ ತಿಳಿದುಕೊಂಡು ಮುಂದಿನ ನಿರ್ಧಾರ ಕೈಗೊಳ್ಳಬಹುದೆಂಬ

ಯೋಚನೆಯೂ ಬಂತು. ಮನಸ್ಸು ಭವಿಷ್ಯದ ಮಹಾಗರ್ಭದಲ್ಲಿ ಅಂಡಲೆಯ ತೊಡಗಿ ಕೈಯಲ್ಲಿನ ಮಾಸಿಕವು ನಿರುಪಯುಕ್ತವಾಗುಳಿಯಿತು. ದೃಷ್ಟಿ ಕಿಟಕಿ ಯಲ್ಲಿ ತೂರಿ ದೂರ ದಿಗಂತದಲ್ಲಿ ನೆಟ್ಟಿತ್ತು. ಅಘೋರ ಒಳಬಂದಾಗಲೂ ಗಮನಿಸದೆ ಅವಳು ಅನ್ಯ ಮನಸ್ಕಳಾಗಿಯೇ ಕುಳಿತಿದ್ದಳು. ಅವಳ ರೀತಿ ಯನ್ನು ಗಮನಿಸುತ್ತಲೂ ಕೈಯಲ್ಲಿನ ಟವಲ್ಲನ್ನು ಅವಳ ಮೇಲೆ ಬೀಸಿ "ಏನು ವಿಶೇಷ ರಾಣಿಯವರೇ?" ಎಂದ. ಮುಖದಲ್ಲಿ ಮಂದಹಾಸ ನಲಿಯುತಿತ್ತು.

ಅವಳು ಇತ್ತ ತಿರುಗಿದಾಗ ಮುಖದಲ್ಲಿ ಎಳೆನಗು ಲಾಸ್ಯವಾಡಿತು. ಮುಖವನ್ನು ಒರಿಸಿಕೊಳ್ಳುತ್ತಾ ಕೇಳಿದ "ಏಕೆ ಅಷ್ಟೊಂದು ಯೋಚನೆ ಅರೂ ?"

"ಏನಿಲ್ಲವಲ್ಲಾ ?"

"ನಿನಗೆ ನನ್ನ ಮೇಲೆ ಕೋಪವೆ ?"

"ಅಂಥಾದ್ದೇನೀಗ !"

"ಮದರಾಸಿನಲ್ಲಿ ಇರಗೊಡಿಸದುದಕ್ಕೆ." ಎಂದ ಅಘೋರ ಕನ್ನಡಿಯ ಮುಂದೆ ನಿಂತುಕೊಂಡು ತಲೆಗೂದಲನ್ನು ತಿದ್ದಿಕೊಳ್ಳುತ್ತಾ ಸಂತಸದಿಂದ "ಅರೂ ಆ ದಿನ ನೀನು ದಾರಿಯಲ್ಲಿ ಸಿಕ್ಕದಿದ್ದರೆ ಈ ನಾಟಕವು ಇನ್ಯಾವ ರೂಪ ತಳೆಯುತ್ತಿತ್ತೋ ಏನೋ."

"ವಿಧಿ ಸಂಕಲ್ಪ." ಎನ್ನುತ್ತಾ ಚಹ ತರಲು ಎದ್ದು ಹೋದಳು ಅರವಿಂದಾ.

ಅಘೋರ ಬಟ್ಟೆಗಳನ್ನು ಬದಲಿಸಿ ಅಣಿಯಾಗುವಷ್ಟರಲ್ಲಿ ಅರವಿಂದಾ ಚಹದೊಡನೆ ಬಂದಳು. ಅವಳ ಮುಖದಂದವನ್ನೇ ನೆಟ್ಟ ದಿಟ್ಟಿಯಿಂದ ಹೀರುತ್ತಾ ಅವಳಿಗೆ ಸ್ಥಳ ಬಿಟ್ಟು ಸರಿದು ಕುಳಿತುಕೊಂಡು ಹುಬ್ಬೇರಿಸಿ "ಅರೂ, ಒಂದು ವೇಳೆ ನೀನು ನನ್ನವಳಾಗದಿದ್ದಿದ್ದರೆ ನಾನು ಹುಚ್ಚಾಗಿ ಡಾ|| ಗಜಾನನರ ಪೇಷಂಟ್ ಆಗಿ ಬಿಡುತ್ತಿದ್ದೆನೋ ಏನೋ !"

"ಅದೆಲ್ಲಾ ಬೂಟಾಟಿಕೆ !" ಎಂದಳು ಅರವಿಂದಾ. ನಸುನಕ್ಕು ಪುನಃ "ಸಾಮಾನ್ಯವಾಗಿ ಈ ಗಂಡಸರ ವಿಚಾರ ಹೀಗೇ ಎಂದು ಹೇಳುವುದಕ್ಕಾದೀತೆ" ಇನ್ನೊಬ್ಬ ರೂಪಸಿಯನ್ನು ಕಂಡಿದ್ದರೆ ಈ ರೂಪಸಿ ಎಂದೋ ಕನಸಿನ ಪ್ರಪಂಚ ದಿಂದ ಮರೆಯಾಗುತ್ತಿದ್ದಳು !"

"ನೀನು ನನ್ನನ್ನು ಎಲ್ಲರಂತೆ ಎಂದುಕೊಳ್ಳಬೇಡ ಅರವಿಂದಾ." ನಸು ನಕ್ಕು ಅವಳಿಗೊಂದು ತಟ್ಟೆಯನ್ನು ನೀಡಿ ತಾನೊಂದನ್ನು ತೆಗೆದುಕೊಂಡು– "ವಯೋಧರ್ಮಕ್ಕನುಗುಣವಾಗಿ ಎಲ್ಲರೂ ಪರಸ್ಪರ ಆಕರ್ಷಿಸಲ್ಪಡುವುದು ಸರ್ವೇಸಾಮಾನ್ಯವಾದರೂ ನಾನು ನಿನ್ನನ್ನು ಬಯಸಿದ ರೀತಿಯೇ ಬೇರೆ ಅರವಿಂದಾ."

"ಅಂದರೆ ?" ಮಂದಹಾಸ ಬೀರಿ ಕೇಳಿದಳು ಅರವಿಂದಾ.

ತುಸು ಯೋಚಿಸಿ ಅಘೋರ ನಕ್ಕು ನುಡಿದ "ವರ್ಣನಾತೀತ !"

ಇಬ್ಬರೂ ಕಿಲಕಿಲನೆ ನಕ್ಕರು. ತಕ್ಷಣ ಏನನ್ನೋ ಜ್ಞಾಪಿಸಿ ಕೊಂಡವನಂತೆ–"ಓ, ಮರೆತಿದ್ದೆ. ವಂದನಾ ಗರ್ಭಿಣಿ ! ವಾಂತಿಯಾಗುತ್ತಿದೆ. ಈಚಿಗೆ ತುಂಬ ಸೊರಗಿದ್ದಾರೆಂದು ಆಸ್ಪತ್ರೆಗೆ ಕರೆ ತಂದಿದ್ದ ಮದನ್."

"ಓಹೋ ! ಅದರಿಂದಲೇ ಅವಳು ಸಣ್ಣಗಾಗಿದ್ದಾಳೆ !"

"ಪಾಪ, ಮದನನಿಗೆ ಎಲ್ಲಿಲ್ಲದ ಭಯವಾಗಿಬಿಟ್ಟಿದೆ,"

"ಒಮ್ಮೆ ಹೋಗಿ ಬರೋಣ ನಡೆಯಿರಿ."

"ಹೌದು ಅರೂ."

ಅರವಿಂದಾ ಸ್ವಲ್ಪ ಹೊತ್ತು ಮಾತಾಡದೆ ಕುಳಿತಳು. ತನ್ನ ಇಚ್ಛೆಯನ್ನು ಮುಂದಿಡಲೇ ಬೇಡವೇ ಎಂಬ ಯೋಚನೆ ತುಯ್ದಾಡುತಿತ್ತು.

ಅಘೋರ ಒಮ್ಮೆಲೇ ಕೇಳಿದ "ಏನೋ ಯೋಚಿಸುತ್ತಿದ್ದೀಯಲ್ಲಾ ? ಏನದು ?"

"ಏನೋ ಯೋಚನೆ ಬಂತು."

"ಅದರಲ್ಲಿ ಗುಟ್ಟೇಕೆ –"

"ಯೋಚನೆಗೇನು ? ಒಂದಾದ ಮೇಲೊಂದರಂತೆ ಬಂದೇ ಬರುತ್ತೆ. ಅದನ್ನೆಲ್ಲಾ ಹೇಳುತ್ತಾ ಹೋದರೆ ಕೇಳಲು ಸಮಯವೆಲ್ಲಿಂದ ತರುತ್ತೀರಿ ?"

"ಓ....ಎಷ್ಟಾದರೂ..."

ಅರವಿಂದಾ ಮಾತಾಡದೆ ನಸು ನಕ್ಕಳು.

ಅಘೋರ ನಸುನಕ್ಕು "ಅರೂ, ಅಂದಿನಿಂದಲೂ ನೀನು ಏನೋ ಮನಸ್ಸಿನಲ್ಲಿ ಅಡಗಿಸಿಕೊಂಡಿದ್ದಿ ಎಂಬುದು ನನಗೆ ಗೊತ್ತು." ಹುಬ್ಬೇರಿಸಿ ತುಂಟ ನೋಟ ಬೀರಿದ.

"ಹಾಗಿದ್ದರೆ ಹೇಳಲೇ ?" ಆಸಕ್ತಿಯಿಂದ ನುಡಿ ಹೊರಬಿತ್ತು.

"ಹೇಳು ಅಂತಲೇ ಕೇಳುತಿದ್ದೇನೆ."

"ನಾನು ಲೆಕ್ಚರರ್ ಆಗಲೇ ?"

"ಆಗಬಹುದು. ಆದರೂ..." ಮುಖಮುದ್ರೆಯಲ್ಲಿ ತುಂಟ ನಗು ನಲಿಯಿತು.

"ಆದರೂ ಏನು ?"

"ಹೇಳಲೇ ಅರವಿಂದಾ ?" ಕಡೆಗಣ್ಣ ನೋಟ ಅಂಬಿನಂತೆ ಎರಗಿತು.

"ಹೇಳಿರಿ." ನುಡಿ ಹೊರಬಿದ್ದರೂ ಮುಖ ರಂಗು ತಳೆಯಿತು.

"ವಂದನಾಳ ಗತಿ ನಿನಗೂ ಆದರೆ ?" ಕಣ್ಣುಗಳಲ್ಲಿ ತುಂಟತನ ನಲಿಯುತಿತ್ತು. ಎಳೆಯ ನಗು ಮುಖದಲ್ಲಿ ತಾಂಡವವಾಡಿತು. ಕೈ ತಲೆಯನ್ನು ಮೆಲ್ಲಗೆ ನೇವರಿಸಿತು.

"ಉಹ್ಞೂ." ಅವನ ಕೈಯನ್ನು ಅತ್ತ ತಳ್ಳಿ–"ನಿಮಗೆ ಹುಡುಗಾಟ ಸದಾ ತಮಾಷೆ !" ಮುಖ ರಂಗೇರಿ ಕೆಂಪು ಕೆಂಪಾಯಿತು.

ಅವಳ ಕೆಂಪಡರಿದ ಸುಂದರ ಮುಖ ಮಂಡಲವನ್ನು ಹೆಮ್ಮೆಯಿಂದ ನಿಟ್ಟಿಸಿ ನಸುನಕ್ಕು "ಅರೂ ತಮಾಷೆ ಎಂದುಕೊಳ್ಳಬೇಡ. ನಾನು ನಿಜಕ್ಕೂ ಹೇಳುತ್ತಿದ್ದೇನೆ. ಮೊನ್ನೆ ಡಾ|| ಸೌಮ್ಯಾ ಹೆತ್ತಿದ್ದಾರೆ. ಈಗ ಅವರಿಗೆ ತುಂಬ ಕಷ್ಟವಾಗಿದೆ ಮದುವೆಯಾದಾಗಲೇ ಮಕ್ಕಳ ಅಧ್ಯಾಯ ಮುಗಿಸಿಕೊಂಡಿದ್ದರೆ ಚೆನ್ನಾಗಿತ್ತು ಎನ್ನುತ್ತಾರೆ ಅವರು. ನನಗೂ ಅದೇ ಸರಿ ಎನಿಸುತ್ತೆ ಅರವಿಂದಾ. ನಾಲ್ಕು ದಿನ ಕೆಲಸ ಮಾಡಿ ಅನಂತರ ಮಗುವಿನ ಭಾರ ಹೊರುವುದಕ್ಕಿಂತ ಈಗಲೇ ಎರಡು ಹೆತ್ತು ಅಮ್ಮನ ಕೈಗೊಪ್ಪಿಸಿ ಬಿಟ್ಟರೆ ತೀರಿತು. ಅನಂತರ ನೀನು ಲೆಕ್ಚರರ್ ಆದರೆ ಯಾವ ತೊಡಕೂ ಇರುವುದಿಲ್ಲ. ನೀನೇ ಯೋಚಿಸಿ ನೋಡು" ಕೈಗಳು ಬೆನ್ನನ್ನು ಮೃದುವಾಗಿ ನೇವರಿಸಿದುವು.

ಅರವಿಂದಾ ತಲೆಯೆತ್ತದೆ ಯೋಚಿಸುತ್ತಾ ಕುಳಿತಳು. ಬಾಯೊಳಗಿನ ತಿಂಡಿಯನ್ನು ಅಗಿಯುವುದನ್ನೂ ಮರೆತು ಕುಳಿತುಕೊಂಡ ಅವಳ ರೀತಿ ಕನಿಕರ ಮೂಡಿಸಿತು. ಅಘೋರ ತುಸು ಯೋಚಿಸಿದ...ಹೆಣ್ಣು ಎಷ್ಟೇ ಮೇಧಾವಿಯಾಗಿರಲಿ ತಾಯ್ತನದ ಹೊರೆ ಎಂದಿಗೂ ಅವಳಿಗೆ ತಪ್ಪಿದ್ದಲ್ಲ. ಅದೇನು ಸಾಮಾನ್ಯ ಜವಾಬ್ದಾರಿಯೂ ಅಲ್ಲ...ಎಂದೆನಿಸಿದಾಗ ಹೃದಯ ಅನುಕಂಪದಿಂದ ಮಿಡಿಯಿತು.

"ನಿನ್ನ ಧೃತಿಗೆಡಿಸಲು ನಾನು ಹೇಳುತ್ತಿಲ್ಲ. ನಿನಗೆ ಯಾವುದು ಹಿತವೋ ಅದನ್ನಾರಿಸಿಕೊ ಅರೂ. ಒಂದು ವೇಳೆ ನಿನಗೆ ಈಗಲೇ ಲೆಕ್ಚರರ್ ಆಗುವುದು ಹಿತವೆನಿಸಿದರೆ ಅದೂ ಸರಿಯೆ."

"......"

"ಈ ಪ್ರಥಮ ಅಧ್ಯಾಯವನ್ನು ಸುಖವಾಗಿ ತಿರುವಿ ಹಾಕಿದರೆ ಅನಂತರ ಹಕ್ಕಿಯಂತೆ ಹಾರಬಹುದು. ಈಗ ಅಮ್ಮ ಅದರ ಭಾರವನ್ನು ಹೊರುವಷ್ಟು ಶಕ್ತರಾಗಿರುವುದರಿಂದ ನಿನಗೆ ಹೆಚ್ಚು ಕಷ್ಟವಾಗದು ಎನ್ನಿಸುತ್ತೆ."

ಅರವಿಂದಾ ಮಾತಾಡಲಿಲ್ಲ. ಕಣ್ಣಂಚಿನಲ್ಲಿ ಲಜ್ಜೆಯ ಛಾಯೆ ಇಣಿಕಿತು. ಅದನ್ನು ತೋರಗೊಡಲಿಚ್ಛಿಸದೆ ಅತ್ತ ತಿರುಗಿ ಮರೆ ಮಾಚಿದಳು. ಅವಳ ಮೃದು ಹಸ್ತಗಳ ಮೇಲೆ ಬೆರಳಾಡಿಸುತ್ತಾ "ನಿನಗೆ ತೋಚಿದಂತೆ ಮಾಡು ಅರೂ." ಎಂದ ಅಘೋರ ಒಂದು ಗಳಿಗೆ ತಡೆದು ಸಸುನಕ್ಕು—"ಯೋಚಿಸಲು ಬೇಕಾದಷ್ಟು ಸಮಯವಿದೆ. ಈಗಲೇ ಏಕಿಷ್ಟು ಯೋಚನೆ?"

ಚಹವನ್ನು ಅವಳ ಕೈಗೆ ನೀಡಿ ಇನ್ನೊಂದು ತಾನು ತೆಗೆದುಕೊಂಡು ಹೀರುತ್ತಾ "ಏನೇ ಆದರೂ, ಪ್ರಕೃತಿ ನಿಯಮಕ್ಕೆ ನಾವು ಬದ್ಧರಾಗಲೇ ಬೇಕಷ್ಟೆ?"

ಅರವಿಂದಳ ಶೂನ್ಯ ದೃಷ್ಟಿ ಏನನ್ನೂ ನೋಡದೆ ಗೋಡೆಯ ಮೇಲೆ ಹರಿದಿತ್ತು. ಅನ್ಯ ಮನಸ್ಕಳಾಗಿ ಕುಳಿತ ಅವಳ ಬೆನ್ನ ಮೇಲೆ ಕೈಯಿಟ್ಟು ನಲ್ಮೆಯಿಂದ ಅಂದ "ಪ್ರತಿಯೊಂದನ್ನೂ ಸುಲಲಿತವಾಗಿ ಬಗೆ ಹರಿಸಿಕೊಳ್ಳುವ ಮನೋಭಾವವಿರಬೇಕು ಅರವಿಂದಾ."

"........"

"ಅರೂ, ಏಕೆ ಅಷ್ಟೊಂದು ಯೋಚನೆ?"

ಅವಳು ಮಾತಾಡದೆ ಖಾಲಿಯಾದ ಬಸಿ ಬಟ್ಟಲುಗಳನ್ನು ಎತ್ತಿಕೊಂಡು ಒಳಹೋದಳು. ಹಿಂದಿನಿಂದ ನಯನದ್ವಯಗಳೆರಡೂ ಹಿಂಬಾಲಿಸಿದುವು. ಅವಳು ಮುಖ ಮಜ್ಜನ ಮಾಡಿಕೊಂಡು ಬಂದಳು. ನಿಗಿನಿಗಿ ಹೊಳೆಯುವ ಸುಂದರ ಕಣ್ಣುಗಳು ಇತ್ತ ಹರಿದೊಡನೆಯೇ ತುಂಟ ನಗು ಬೀರಿ ಅಘೋರ ಅಂದ "ಈ ತಡೆ ತಾತ್ಕಾಲಿಕ ಅರವಿಂದಾ!"

"ಇರಲಿ, ಅಘೂ. ಗುಲಾಬಿ ಅರಳುವುದೇ ಮುಳ್ಳುಗಳ ಬೀಡಿನಲ್ಲಿ."

"ಅಂದ ಮೇಲೆ ಮತ್ತೇಕೆ ಯೋಚನೆ ಅರವಿಂದಾ ?"

"ಆದರೂ ಗುಲಾಬಿ ಬರಿಯ ಅನುಭೋಗಕ್ಕಾಗಿ–ಅಲಂಕಾರಿಕವಾಗಿ ಉಳಿಯುವುದೆಂದರೆ ಹೇಸು ಜೀವನವಲ್ಲವೇ ಅಘೂ !"

"ಹಾಗೆಂದವರುಂಟೇ ? ಅಘೂ, ಈ ಜೀವನ ತ್ಯಾಗಮಯ."

"ಹಾಗೆಂದ ಮೇಲೆ ಇದು ನಿಮಗೂ ಅನ್ವಯಿಸುತ್ತೆ ತಾನೆ ?"

"ನಿಜ. ನೀನು ಲೆಕ್ಚರರ್ ಆಗುವುದರಲ್ಲಿ ಯಾವ ಅಭ್ಯಂತರವೂ ಇಲ್ಲವಲ್ಲಾ."

"ಹಾಗಾದರೆ ಅಪ್ಲಿಕೇಶನ್ ಫಾರಂ ತರಲು ಹೋಗುವೆ."

"ನಾನೇ ತಂದು ಕೊಡುವೆ."

"ತುಂಬ ಥ್ಯಾಂಕ್ಸ್" ಮುಖದಲ್ಲಿ ನಸು ನಗು ಹೊರಹೊಮ್ಮಿತು.

ತನ್ನ ಗುಂಗುರು ಗುಂಗುರಾದ ಮೋಟು ಕೂದಲನ್ನು ಅಂದವಾದ ಶೈಲಿ ಯಲ್ಲಿ ಮುಡಿ ಕಟ್ಟುತ್ತಿದ್ದ ಅವಳ ಚಾಣಾಕ್ಷತನವನ್ನು ಗಮನಿಸುತಿದ್ದ ಅಘೋರ ನಕ್ಕು ನುಡಿದ "ನೀನೊಂದು ಹೇರ್ ಡ್ರೆಸ್ಸಿಂಗ್ ಸೆಲ್ಯೂನ್" ತೆರೆದರೆ ಬೇಕಾದಷ್ಟು ಸಂಪಾದನೆಯಾಗುತ್ತೆ."

"ಹಾಗಿದ್ದರೆ ನೀವೂ ಸೇರಿಕೊಳ್ಳಿ. ಗಂಡಸರ ವಿಭಾಗ ನಿಮಗೆ. ಹೆಂಗಸ ರದ್ದು ನನಗೆ."

ಇಬ್ಬರ ಮುಖದಲ್ಲೂ ತಿಳಿನಗೆ ಮಿನುಗಿ ಮಾಯವಾಯಿತು. ಅರವಿಂದಾ ತಿಲಕವಿಟ್ಟುಕೊಂಡು ಬಂದು ಕುಳಿತುಕೊಂಡಳು. ತುಂಟ ನೋಟದಲ್ಲಿ ಸಂತಸವನ್ನು ಸೂಸಿ ಮೈಯೆಲ್ಲಾ ಮನಸ್ಸಾಗಿ ವಿಷಯವನ್ನು ಬಿತ್ತರಿಸಿದ ಅಘೋರ "ಈ ದಿನ ಅಪೂರ್ವ ದಂಪತಿಗಳು ಆಸ್ಪತ್ರೆಗೆ ಬಂದಿದ್ದರು. ಅವರ ವಿಷಯ ನೀನು ಕೇಳಬೇಕಾದುದು, ಅರವಿಂದಾ !"

"ಅದೇನು ಹೇಳಿರಿ. ಹೊಸ ವಿಷಯಗಳನ್ನು ಕೇಳುವುದೆಂದರೆ ನನಗೂ ಇಷ್ಟ."

"ಹೆಂಡತಿ ಡಾಕ್ಟರು. ಗಂಡ ಟಿ.ಬಿ.(Tuberculosis)ಪೇಷಂಟ್. ಅವನನ್ನು ನೋಡಿದರೆ ಎಂತಹವರಿಗೂ ಅವನು ಟಿ.ಬಿ. ಪೇಷಂಟ್ ಎಂದು ಊಹಿಸುವುದಕ್ಕಾಗುವುದಿಲ್ಲ. ಅಂಥಾ ಸ್ಫುರದ್ರೂಪಿ ! ತರುಣ ಸಂನ್ಯಾಸಿ ! ಮಹಾ ತೇಜಸ್ವಿ !"

"ಓಹೋ..."

"ಅರವಿಂದಾ, ಅವಳು ಕೂಡಾ ಅವನಿಗೆ ಅನುರೂಪಳಾದ ಹೆಣ್ಣು. ಇಬ್ಬರೂ ಸಾಮಾನ್ಯವಾದ ಮೈಕಟ್ಟು ಹೊಂದಿದ್ದರೂ, ಜೋಡಿ ಎಂದರೆ ಸೊಗಸಾದ ಜೋಡಿ! ಅವನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದಿದ್ದಾಗ ಇಬ್ಬರಿಗೂ ಪರಿಚಯವಾಗಿದೆ. ಅವನು ಡಾ|| ಮನಮೋಹನ್‌ರವರ ಪೇಷಂಟ್. ಅವಳು ಅದೇ ಚಿಕಿತ್ಸಾಲಯದ ಸ್ತ್ರೀವಿಭಾಗದಲ್ಲಿ ಡಾಕ್ಟರು. ಅಲ್ಲೇ ಇಬ್ಬರಿಗೂ ಸ್ನೇಹ ಬೆಳೆದುಬಂದಿದೆ. ಪರಿಚಯವಾದಾಗಲೇ ಅವನಿಗೆ ಟಿ. ಬಿ. ಅಡ್ವಾನ್ಸ್‌ಡ್ ಸ್ಟೇಜ್! ಅವನು ಆಸ್ಪತ್ರೆ ಸೇರಿದಾಗ ಇಪ್ಪತ್ತೈದರ ತರುಣ. ಎಂಟು ವರ್ಷಗಳು ಆಸ್ಪತ್ರೆಯಲ್ಲಿದ್ದು ಚಿಕಿತ್ಸೆ ಹೊಂದಿದ್ದಾನೆ. ಆ ಎಂಟು ವರ್ಷಗಳು ಅವನ ಒಡನಾಡಿಯಾಗಿ ಸ್ಥಿತಿಗತಿಯ ಪೂರ್ಣ ಪರಿಚಯ ಹೊಂದಿ ಅವನನ್ನು ಕೈ ಹಿಡಿದಿದ್ದಾಳೆ–ಡಾಕ್ಟರು. ಅವರಿಗೆ ಮಕ್ಕಳಾಗುವ ಸಂಭವವೇ ಇಲ್ಲ. He is not allowed for it!"

"ಓ...ಆಶ್ಚರ್ಯ! ಪರಮಾಶ್ಚರ್ಯ!"

ಕಣ್ಣುಗಳಲ್ಲಿ ಸೆಳೆಮಿಂಚು ತಾಂಡವವಾಡಿತು. ಮೈಯೆಲ್ಲಾ ಚಕಮಕಿಯಾಗಿ ಅಘೋರ ಮುಂದುವರಿದ "ಅವನ ತಂದೆ ತಾಯಿಗಳು ಅಸ್ಸಾಂನಲ್ಲಿ ಟೀ ತೋಟ ಹೊಂದಿದ್ದಾರೆ. ಇವನು ತನ್ನ ಭಾಗ ತೆಗೆದುಕೊಂಡು ಊಟಿಯಲ್ಲೊಂದು ಸಣ್ಣ ತೋಟ ಕೊಂಡುಕೊಂಡು ಅಲ್ಲಿ ನೆಲೆಸಿದ್ದಾನೆ. ಅವನನ್ನು ಕೈ ಹಿಡಿದಲಾಗಾಯಿತು ಡಾಕ್ಟರು ಉದ್ಯೋಗ ಬಿಟ್ಟುಕೊಟ್ಟಿದ್ದಾಳೆ. ಅವಳೀಗ ಅವನಿಗೆ ಮತ್ತು ಅವನ ತೋಟದಾಳುಗಳಿಗೆ ಡಾಕ್ಟರು. ತೋಟದ ವ್ಯವಸ್ಥೆಯನ್ನೂ ಅವಳೇ ನೋಡಿಕೊಂಡು ಅವನಿಗೆ ಶ್ರಮದ ಭಾರ ತಪ್ಪಿಸಿದ್ದಾಳೆ. ಕಾರಿಗೆ ಡ್ರೈವರಿಲ್ಲ. ಅದೂ ಅವಳಿಗೆ ಸೇರಿದ್ದು. ಡಾಕ್ಟರಾದವಳು ಈ ಬಗೆಯ ಜೀವನಕ್ಕೆ ಕಾಲಿಡುವುದೆಂದರೆ ಎಂತಹ ಆಶ್ಚರ್ಯ ಅರವಿಂದಾ?"

"ನಿಜ, ಅವಳಿಗಿರುವ ಸ್ಥೈರ್ಯ ಮೆಚ್ಚಿಕೊಳ್ಳುವಂತಾದ್ದು!" ಕಣ್ಣುಗಳಲ್ಲಿ ಮಿಂಚು ಫಳ ಫಳನೆ ಹೊಳೆಯಿತು. ಮುಂದಿನ ವಿಷಯಕ್ಕಾಗಿ ಕಿವಿಗಳು ನಿಮಿರಿದುವು.

(೧೩)

ಅಘೋರ ಉತ್ಸಾಹದಿಂದ ಮುಂದುವರಿದ "ಅವನು ಬಹಳ ಮಾತಾಳಿ. ನೀನು ಯಾವುದೇ ವಿಷಯ ತೆಗೆದುಕೊ. ಅದರ ಮೇಲೆ ಕೊನೆ ಮೊದಲಿಲ್ಲದೆ ಗಂಟೆಗಟ್ಟಲೆ ನಿರರ್ಗಳವಾಗಿ ಮಾತನಾಡುತ್ತಾನೆ. ಮಹಾ ಜ್ಞಾನಿ ! ಪ್ರತಿಭಾನ್ವಿತ ವ್ಯಕ್ತಿ !

"ನೋಡಿದರೆ ಶೀಘ್ರಕೋಪಿ ಎಂದೂ ತೋರುತ್ತದೆ. ಪ್ರತಿ ಗಂಟೆಗೊಂದು ಬಾರಿ ಚಹ ಕುಡಿಯುತ್ತಾನೆ. ಅವನು ಮಾತಾಡುವುದನ್ನು ಅವಳು ನೋಡುತ್ತಾ ಕುಳಿತಿರುತ್ತಾಳೆ. ಅವಳಿಗೆ ಅವನು ಅವಕಾಶ ಕೊಟ್ಟರೆ ತಾನೆ ಅವಳು ಮಾತನಾಡುವುದು ? ಅವನು ಚಹ ಕುಡಿಯುವ ಸಮಯವನ್ನವಳು ಮಾತನಾಡುವುದಕ್ಕೆ ಉಪಯೋಗಿಸಿಕೊಳ್ಳುತ್ತಾಳೆ. ಅವಳಿಗೆ ಅದೊಂದೇ ದಾರಿ. ಒಡೆಯನ ಮುಂದೆ ಬಾಲ ಮುದುರಿದ ನಾಯಿ ಮರಿಯಂತೆ ಎಂದರೂ ತಪ್ಪಾಗಲಾರದು ಅರವಿಂದಾ."

"ಅಂದ ಮೇಲೆ ಯಾವುದೋ ಜನ್ಮದ ಬಂಧನವಿರಬಹುದು ಅಘೂ !"

"ಅವಳು ಡಾ|| ಭಗವಾನ್‌ರವರೊಂದಿಗೆ ಓದಿದವಳಂತೆ. ಅವರನ್ನು ನೋಡಲು ಬಂದಿದ್ದಳು. ಅವರು ಹೊರಟು ಹೋದ ಮೇಲೆ ನಾನು ಡಾ|| ಭಗವಾನ್‌ರವರಿಗೆಂದೆ "ಎಂತಹ ಆಶ್ಚರ್ಯ ಡಾಕ್ಟರ್ ?"

"ಡಾಕ್ಟರ್, ಜೀವನ ಅಂದರೆ ಇದು ! ಸ್ಥೈರ್ಯ ತ್ಯಾಗ ಅಂದರೆ ಇದು! ನಮ್ಮಲ್ಲಿ ಜೀವನವನ್ನು ಕಸಕ್ಕೂ ಕಡೆಯಾಗಿ ನಡೆಸಿಕೊಳ್ಳುತ್ತಾರೆ ನಮ್ಮ ದೇಶೀಯರು ! ನೋಡು, ಇಂಥಹವರಿಂದ ಪಾಠ ಕಲಿಯಬೇಕು ! ನಮ್ಮ ಡಾಕ್ಟರ್ ವೃಂದದಲ್ಲಿಯೇ ಅವಳನ್ನು ಬಯಸಿದವರಿದ್ದರು. ಅವಳು ಎಲ್ಲರನ್ನೂ ನಿರಾಕರಿಸಿ ತನ್ನ ವೃತ್ತಿಯನ್ನೇ ವರಿಸಿ ಡಾ||ಮನಮೋಹನ್‌ರವರ ಸ್ತ್ರೀ ವಿಭಾಗದಲ್ಲಿ ಕೆಲಸ ಆರಂಭಿಸಿ ಅಲ್ಲಿಯೇ ದುಡಿದು ಸಂಪಾದಿಸಿ ತಮ್ಮ-ತಂಗಿಯರನ್ನು ಓದಿಸಿ ಮದುವೆ ಮಾಡಿ ತಾಯಿ ತಂದೆಯರೊಡನೆ ಸುಖವಾಗಿ ಕಾಲಹರಣ ಮಾಡಿದ ಕರ್ತವ್ಯಶೀಲೆ. ಅಂದ ಮೇಲೆ ನೀನೇ ಊಹಿಸು...ಜೀವನ ಅಂದರೆ ಏನು ?" ಅವನ ಹುಬ್ಬುಗಳು ಏರಿ ಇಳಿದುವು.

"ಡಾಕ್ಟರ್...ಅವರು ಈಚೆಗೆ ಮದುವೆಯಾಗಿದ್ದಾರೆಯೆ ?"

"ಏಕೆ ? ಆಗಲೇ ಹನ್ನೆರಡು ವರ್ಷಗಳ ಮೇಲಾಗಿವೆ. ನೋಡಲು ಚಿಕ್ಕ ವಯಸ್ಸಿನವರಂತೆ ತೋರುತ್ತಾರೆ ! ಅಷ್ಟೆ..."

"ಅಂದರೆ! ಇಬ್ಬರಿಗೂ ಸುಮಾರು ನಲ್ವತ್ತೈದರ ಪ್ರಾಯ! ಕಡಿಮೆಯೇನಿಲ್ಲ."

"ನೋಡಿದರೆ ಹಾಗೆನಿಸುವುದಿಲ್ಲ?"

"ಇಬ್ಬರೂ ಒಬ್ಬರನ್ನೊಬ್ಬರು ಅರಿತು ಜೀವನಕ್ಕೆ ಕಾಲಿಟ್ಟಿರುವುದರಿಂದ ರಾಗಭಾವದ್ವೇಷಗಳ ಹಣಾಹಣಿ ಇಲ್ಲನೇ ಇಲ್ಲ. ಅಂದಮೇಲೆ ದುಃಖವೇನುಂಟು?"

"ನಿಜ, ಡಾಕ್ಟರ್!"

"ಕಾನೋಚ್ಛೆಯಿಂದ ಹೊರತಾದ ಅವರು ತಾರುಣ್ಯವನ್ನು ಕಾಪಾಡಿಕೊಳ್ಳುವುದರಲ್ಲಿ ವಿಶೇಷವೇನಿಲ್ಲ." ಎಂದು ಸಮಾಧಾನದಿಂದ ನುಡಿದರು ಭಗವಾನ್.

"ಆದರೆ, ನನ್ನ ಮಟ್ಟಿಗೆ ಹೇಳುವುದಾದರೆ ಇದೊಂದು ಎಲ್ಲಿಲ್ಲದ ಆಶ್ಚರ್ಯಕರ! ಸಣ್ಣ ಶರೀರಗಳಾದರೂ ಅವರಲ್ಲಿರುವ ತಾರುಣ್ಯ ಮತ್ತು ತೇಜಸ್ಸು ಮೆಚ್ಚುವಂತಾದ್ದು. ಇಪ್ಪತ್ತೈದರ ದಂಪತಿಗಳನ್ನೂ ಬದಿಗೊತ್ತುವಂತಿದ್ದಾರೆ–ಅವರು. ಅವನನ್ನು ನೋಡಿದರೆ ಒಳ್ಳೆ ರಾಜರ್ಷಿಯಂತಿದ್ದಾನೆ. ಆ ಮುಖಭಾವ ಗಾಂಭೀರ್ಯ ಹೊಳೆ ಹೊಳೆಯುವ ಕಣ್ಣುಗಳು ನೋಡಿದೊಡನೆಯೇ ಎಂತಹವನೂ ಕೈ ಜೋಡಿಸುವಂತಿವೆ!"

ಡಾ|| ಭಗವಾನ್ ತಲೆದೂಗಿ ಹೇಳಿದರು "ಅವನು ಬದುಕಿರುವುದೇ ಚಿತ್ ಶಕ್ತಿಯಿಂದ!"

"ನಾನು ವಿಷಯ ತಿಳಿದು ಬೆರಗಾಗಿ ಹೋದೆ. ಅವನು ಸುಮಾರು ಐದಡಿ ಆರಿಂಚು ಎತ್ತರ ಇದ್ದಾನೆ. ತೂಕ ಹೆಚ್ಚೆಂದರೆ ತೊಂಬತ್ತು ಪೌಂಡು ಗಳಿರಬಹುದು! ಅವನ ದೇಹ ಸ್ಥಿತಿಯನ್ನು ಕಾಪಾಡಿಕೊಂಡು ಬಂದಿರುವ ರೀತಿ ಸಾಮಾನ್ಯವಲ್ಲ. ನಾವು ತನುಮನಗಳ ಕಾವಿನಿಂದ ಪರಸ್ಪರ ಆಕರ್ಷಿಸಲ್ಪಟ್ಟು ಪರಸ್ಪರ ಪ್ರೀತಿಸುವುದು ಸರ್ವೇಸಾಮಾನ್ಯ ಅರವಿಂದಾ! ಆದರೆ ಇದು ದೈವೀಕ!"

ಹೇಳು ಹೇಳುತ್ತಾ ಅಘೋರನ ಕಣ್ಣುಗಳು ಉಜ್ವಲವಾಗಿ ಬೆಳಗಿದುವು. ಕೇಳು ಕೇಳುತ್ತಾ ಅರವಿಂದಾ ತಲೆದೂಗಿದಳು.

ಅಧ್ಯಾಯ

೧೯

ಅಘೋರ ಮರುದಿನವೇ ಅಪ್ಲಿಕೇಶನ್ ಫಾರಂ ತಂದು ಕೈಗಿಟ್ಟಾಗ ಅರವಿಂದಳ ಹೃದಯ ಉಕ್ಕೇರಿತು. ಫಾರಂ ತೆಗೆದುಕೊಂಡು ಒಳ ಬಂದಾಗ ನಂದಾದೇವಿ ಚಾಪೆಯ ಮೇಲೆ ಕುಳಿತುಕೊಂಡು ದೇವರ ದೀಪಕ್ಕೆ ಬತ್ತಿ ಹೊಸೆಯುತ್ತಿದ್ದಳು. ಸೊಸೆಯ ಕೈಯಲ್ಲಿನ ಫಾರಂ ನೋಡಿ ನಂದಾ ಕೇಳಿದಳು "ಅದೇನು ಮಗೂ ?"

"ಅಪ್ಲಿಕೇಶನ್ ಫಾರಂ ತಂದಿದ್ದಾರೆ. ನಾನು ಲೆಕ್ಚರರ್ ಆಗಲೇ ಅಮ್ಮಾ?"

"ನೀನು ?" ದನಿಯಲ್ಲಿ ಅಚ್ಚರಿ ಸೂಸುತಿತ್ತು.

"ಹೌದಮ್ಮಾ."

"ಅನಂತರ ಈ ಮನೆಯಲ್ಲಿ ನಾನೊಬ್ಬಳೇ ?"

"ಅಮ್ಮಾ......"

"ಆಗಲೇ ಬೇಕೆ ಮಗೂ ?"

"ಬೇಸರ ಮಾಡಿಕೊಳ್ಳಬೇಡಿ. ಲೆಕ್ಚರರ್ ಆಗಲೇ ಬೇಕೆಂಬುದು ನನ್ನ ಬಲು ದಿನದ ಹಂಬಲ."

"...ಓ...ಹಾಗಾದರೆ !...ಆಗಬಹುದು."

ನಂದಾ ಅವಳ ಮುಖದಲ್ಲಿ ನಲಿಯುತಿದ್ದ ಆಸೆಯ ತೆರೆಯನ್ನು ನಿಟ್ಟಿಸಿ ನೋಡಿ–"ಅರೂ ! ಹೋಗಲಿ, ಒಂದು ಮಗುವನ್ನಾದರೂ ಹೆತ್ತು ಬಿಡಮ್ಮಾ. ಅದರೊಂದಿಗಾದರೂ ಹೊತ್ತು ಕಳೆಯುವೆ."

ಮೈಯಲ್ಲಿನ ರಕ್ತವೆಲ್ಲಾ ಒತ್ತರಿಸಿ ಬಂದಂತೆ ಅರವಿಂದಳ ಮುಖ ಕೆಂಪಡರಿತು. ಅವಳು ಆ ಕ್ಷಣ ಅಲ್ಲಿಂದ ಬಿರುಗಾಳಿಯಂತೆ ಓಡಿ ಹೋದಳು. ಎದುರಿಗೆ ಸಿಕ್ಕಿದ ಅಘೋರನಿಗೆ ಕಾಣದೆ ಡಿಕ್ಕಿ ಹೊಡೆದಾಗ ಅವನು ಅಳ್ಳಿ ಬಿರಿಯುವಂತೆ ನಕ್ಕುಬಿಟ್ಟ.

ಅರವಿಂದಳಿಗೆ ಕೆಲಸ ಸಿಕ್ಕಿದುದೂ ಅಘೋರನಿಗೆ ಸರ್ಜರಿಯಲ್ಲಿ ಮುಂದಿನ ಅಭ್ಯಾಸಕ್ಕೆ ಬೆಂಗಳೂರಿನಲ್ಲೇ ಸೀಟು ದೊರೆತುದುದೂ ಹೆಚ್ಚು ಕಡಿಮೆ ಒಂದೇ ವಾರದಲ್ಲಿ. ಇಬ್ಬರಿಗೂ ಆದ ಆನಂದಕ್ಕೆ ಪಾರವೇ ಇಲ್ಲದಂತಾಯಿತು. ಅರವಿಂದ ಕೊಠಡಿಯಲ್ಲಿ ಒಬ್ಬಳೇ ಕುಳಿತು ಯೋಚಿಸಿದಳು....ತನ್ನ ಮೆಚ್ಚಿನ ಕುಟುಂಬಕ್ಕೆ ಏನಾದರೂ ಒಳ್ಳೆಯ ಬಹುಮಾನಗಳನ್ನು ಕೊಂಡುತರಬೇಕು. ಏನು ತರಲಿ ? ಅಮ್ಮನಿಗೇನೋ ಸೀರೆ ಕುಪ್ಪಸ ತಂದರಾಯಿತು. ಮಾವ ಮತ್ತು ಅಘೂ ಇವರಿಗೆ ಏನು ತರಲಿ ?...ಪ್ರಶ್ನೆಯೆದ್ದಿತು. ಯಾವುದೇ ತಂದರೂ ಉಪಯೋಗಕರವಾದ ವಸ್ತುವನ್ನು ತರಬೇಕೆಂಬ ಬಯಕೆ...ಏನು ತರಲಿ ? ....ಯೋಚಿಸುತ್ತಾ ಕುಳಿತುಕೊಂಡಳು. ಮಾವನಿಗೆ ಬೇಕಾದ ವಸ್ತುಗಳೆಲ್ಲವೂ ಇವೆ. ಅಘೋರನಿಗೂ ಅಷ್ಟೆ. ಸುಮ್ಮನೆ ಕೊಂಡು ತಂದು ಮೂಲೆ ಗುಂಪಾಗಬಾರದು...ಯೋಚನಾಲಹರಿ ಪ್ರವಹಿಸುತ್ತಲೇ ಇತ್ತು. ಎಷ್ಟು ತಡುಕಿದರೂ ಉತ್ತರ ದೊರೆಯುವುದು ದುಸ್ತರವಾಯಿತು...ಏನು ತರಲಿ ?...

ಮಾವನ ಕೊಠಡಿಯಲ್ಲಿ ಫ್ಯಾನಿಲ್ಲ. ಒಂದು ಫ್ಯಾನ್ ಕೊಂಡು ತಂದರೆ ಹೇಗೆ ? ಫ್ಯಾನಾದರೆ ತುಂಬ ಹಣ ಬೇಕು. ಏನು ಮಾಡಲಿ ? ಆದರೂ ಚಿಂತೆಯಿಲ್ಲ. ಮಾವನಿಗೊಂದು ಫ್ಯಾನು ಬೇಕೇ ಬೇಕು. ಸರಿ, ಅಘೂಗೇನು ಕೊಡಲಿ ? ಅಘೂಗೇನಿಲ್ಲ ? ಎಲ್ಲಾ ಉಂಟು. ಅಂದಮೇಲೆ, ಏನು ತರುವುದು? ...ಎಷ್ಟು ಯೋಚಿಸಿದರೂ ಹೊಳೆಯಲಿಲ್ಲ. ತುಸು ಹೊತ್ತು ಹಾಗೇ ಯೋಚಿಸುತ್ತಾ ಕುಳಿತಳು...ಏನು ತರಲಿ ?...

ಮುಂದಣ ಬಾಗಿಲು ಸದ್ದು ಮಾಡುತ್ತಲೂ ಯೋಚನೆ ತುಂಡರಿಯಿತು. ಎದ್ದು ಕಿಟಕಿಯಿಂದ ನೋಡಿದಳು. ಅಘೋರ ಪ್ರಾಕಾರದ ಬಾಗಿಲನ್ನು ತೆರೆದು ಒಳಗೆ ಬರುತಿದ್ದ. ಹೋಗಿ ಮುಂದಣ ಕದ ತೆಗೆದಳು. ಮುಖ ದರ್ಶನವಾಗುತ್ತಲೂ ಅವನು ನಗು ಮುಖದಿಂದ–"ಇದೇನು? ತಮ್ಮ ಮುಖಾರವಿಂದ ಅರಳಿದೆಯಲ್ಲಾ ? ರಾಣಿಯವರು ತುಂಬ ಸಂತೋಷವಾಗಿದ್ದೀರಿ ?"

"ನೀವು ಹಾಗೆನ್ನದ ದಿನವೇ ಇಲ್ಲವಲ್ಲಾ ? ಇದೇನು ಹೊಸ ಧಾಟಿಯಲ್ಲ."

ಅರವಿಂದಾ ಚಹ ತಯಾರಿಸಲು ಒಳಗಡೆ ಹೋದಳು. ಹೊತ್ತು ಐದೂವರೆಯಾಗಿತ್ತು. ಮಧ್ಯಾಹ್ನ ಮೂರು ಗಂಟೆಯ ಹೊತ್ತಿಗೆ ಮನೆಗೆ ಬಂದು ಒಂದಿಷ್ಟು ಅನ್ನವನ್ನು ಗಬಗಬನೆ ತಿಂದು ಪುನಃ ಹಿಂದಿರುಗಿದ್ದ ಅಘೋರ. ಅಂದು ಆಪರೇಶರ್ಶ ಇದ್ದುದರಿಂದ ಅವನಿಗೆ ಬಿಡುವೇ ಆಗಿರಲಿಲ್ಲ. "ಇಂದು ರಾತ್ರಿಯ ಡ್ಯೂಟಿಯಿದೆ. ಏಳು ಗಂಟೆಗೆಲ್ಲಾ ಆಸ್ಪತ್ರೆಯಲ್ಲಿರಬೇಕು." ಎಂದು ಅವಸರವಸರವಾಗಿ ಹೇಳಿ ಹೋಗಿದ್ದ.

ಅರವಿಂದಾ ಹಾಗೇ ಯೋಚಿಸಿದಳು. ಇಂದು ರಾತ್ರಿ ಒಬ್ಬಳೇ ಮಲಗ ಬೇಕೆನ್ನಿಸಿದಾಗ "ಹೇಗಪ್ಪಾ." ಎಂಬ ಯೋಚನೆ ಮೂಡದಿರಲಿಲ್ಲ. ಅವಳು ಬಂದ ಮೇಲೆ ಇದು ಮೊದಲನೆಯ ರಾತ್ರಿ ಡ್ಯೂಟಿಯಾಗಿತ್ತು. ಯೋಚಿಸು ವುದರೊಳಗಾಗಿ ನೀರು ಮರಳಿತು. ಚಹ ಮಾಡಿ ಹಾಲು ಸಕ್ಕರೆ ಬೆರಸು ವಷ್ಟರಲ್ಲಿ ಅಘೋರ ಅಲ್ಲಿಗೇನೇ ಬಂದು ಚಹ ತೆಗೆದುಕೊಳ್ಳುತ್ತಾ–"ಎಲ್ಲಾ ದರೂ ಒಂದಿಷ್ಟು ಸುತ್ತಾಡಿ ಬರೋಣವೇ ಅರೂ ?"

"ಬೇಡ. ಇಂದು ಬಿಡುವೇ ಇಲ್ಲದೆ ಬಳಲಿದ್ದೀರಿ. ಹಾಯಾಗಿ ಒಂದು ಗಂಟೆ ವಿಶ್ರಾಂತಿ ತೆಗೆದುಕೊಳ್ಳಿರಿ."

"ನಿನಗೆ ಮನೆಯಲ್ಲೇ ಕುಳಿತು ಬೇಸರವಾಗಿರಬಹುದಲ್ಲನೇ ?"

"ಚಿಂತೆಯಿಲ್ಲ."

"ಅಷ್ಟೇಕೆ ಆತಂಕ ? ಹೊರಡು ಹೋಗಿ ಬರೋಣ."

"ಪರವಾಯಿಲ್ಲ ಬನ್ನಿ." ಎನ್ನುತ್ತಾ ಅರವಿಂದ ಕೊಠಡಿಗೆ ಹೋದಳು. ಹಿಂಬಾಲಿಸಿದ ಅಘೋರ ಹಾಸಿಗೆಯ ಮೇಲೆ ಬಿದ್ದುಕೊಂಡ. ಅರವಿಂದಾ ಪಕ್ಕದಲ್ಲಿನ ಕುರ್ಚಿಯ ಮೇಲೆ ಕುಳಿತುಕೊಂಡು ಕೈಗೆ ನಿಟ್ಟಿಂಗ್ ತೆಗೆದು ಕೊಂಡಳು. ದಾರ ಸೂಜಿಯೊಡನೆ ಕೈ ಬೆರಳುಗಳ ಚಳಕ ಕ್ಷಣವೂ ನಿಲ್ಲದೆ ಸಾಗುತಿತ್ತು. ಅಘೋರ ಸುಂದರ ಬೆರಳುಗಳ ಚಾತುರ್ಯವನ್ನು ಗಮನಿಸುತ್ತಾ ಅಂದಿನ ವಿಷಯವನ್ನು ಮುಂದಿಟ್ಟ–"ಡಾ|| ಭಗವಾನ್ ಹೆಂಗಳೆಯೊಬ್ಬಳ ಕುಚದ್ವಯಗಳನ್ನು ಆಪರೇಶನ್ ಮಾಡಿ ತೆಗೆದು ಹಾಕಿದ್ದಾರೆ. ಪಾಪ, ಅವಳಿಗಿನ್ನೂ ಮೂವತ್ತು ಮೂವತ್ತೆರಡರ ಹರೆಯ. ಒಂದು ಮಗುವಿದೆ. ಕ್ಯಾನ್ಸರ್ (Cancer) ಅಂಟಿದ್ದರಿಂದ ತೆಗೆದು ಹಾಕಬೇಕಾಯಿತು. ಕಳೆದ ವರ್ಷ ಒಂದು–ಈ ದಿನ ಇನ್ನೊಂದು ಅರವಿಂದಾ."

"ಪಾಪ..."

"ಚಿಕಿತ್ಸೆಯ ವ್ಯಾಪ್ತಿಗೆ ಮೀರಿದ್ದುದರಿಂದ ತೆಗೆದು ಹಾಕಲೇ ಬೇಕಾಯಿತು."

"ಇದುವರೆವಿಗೂ ಅವರೇನು ಮಾಡುತ್ತಿದ್ದರು ?"

"ಬಹುಶಃ ಅವಳಿಗೆ ಗೊತ್ತಾಗಲಿಲ್ಲವೆಂದು ತೋರುತ್ತದೆ. ಅಥವಾ ಸ್ತ್ರೀ ಸಹಜವಾದ ಲಜ್ಜೆಯಿಂದ ಮರೆಮಾಚಿದ್ದರೂ ಇರಬಹುದು."

"ನಮ್ಮ ಜನ ಇನ್ನೂ ಬುದ್ಧಿವಂತರಾಗಲಿಲ್ಲ, ಅಘೂ."

"ಅಷ್ಟೇ ಅಲ್ಲ. ಅವಳ ಗಂಡ ಇಂಗ್ಲೆಂಡಿನಲ್ಲಿದ್ದಾನೆ. ಅವನಿಗೆ ತಿಳಿದರೆ ಹಿಂದಿರುಗಿ ಬರುವನೋ ಇಲ್ಲವೋ ಎಂಬ ಸಂಶಯದಿಂದ ವಿಷಯುವನ್ನು ಗುಟ್ಟಾಗಿರಿಸಿದ್ದಾಳೆ. ಗಂಡನ ಮನೆಯವರಿಗೆ ತಿಳಿದರೆ ಸುದ್ದಿ ಅವನಿಗೆ ಮುಟ್ಟುತ್ತದೆಂದು ಅವರಿಗೂ ತಿಳಿಯದ ರೀತಿಯಲ್ಲಿ ಆಪರೇಶನ್ ಮಾಡಿಸಿಕೊಂಡಿದ್ದಾಳೆ." ಎಂದ ಅಘೋರ ಅವಳ ತಳಮಳವನ್ನು ನೆನೆದುಕೊಳ್ಳುತ್ತಾ ಪುನಃ—"ಅರೂ, ಆವಳನ್ನು ನೋಡಿದರೆ 'ಪಾಪ' ಎನ್ನಿಸುತ್ತೆ."

"ಎಷ್ಟಾದರೂ ಹೆಣ್ಣು ಜೀವ."

"ನಿಜ, ಅರವಿಂದಾ."

"ಎಷ್ಟೆಂದರೂ ಈ ಆಪರೇಶನ್ ತಾತ್ಕಾಲಿಕ ತಡೆ. ಒಮ್ಮೆ ಅದು ರಕ್ತಗತವಾಯಿತೆಂದರೆ ತೀರಿತು. ಅದರ ನಿವಾರಣೆ ಸಾಧ್ಯವೇ ಇಲ್ಲ, ಅಲ್ಲವೇ ?"

"ಹೌದು. ಎಂದಾದರೂ ಇನ್ನೊಂದೆಡೆ ಬೆಳೆಯುವ ಸಾಧ್ಯತೆಯಿದೆ ಅರವಿಂದಾ."

"ಯಾರು ಇದರ ಮೂಲವನ್ನು ಕಂಡು ಹಿಡಿದು ಇದರ ಮೇಲೆ ವಿಜಯ ಸಾಧಿಸಲಿದ್ದಾರೋ ಏನೋ !" ಎಂದ ಅರವಿಂದಾ ಸ್ವಲ್ಪ ತಡೆದು ಪುನಃ—"ಅಘೂ, ಒಂದಲ್ಲ ಒಂದುದಿನ ಇದರ ಮೇಲೆ ವಿಜಯ ಸಾಧಿಸ ಬಲ್ಲ ಮಹಾನ್ ವ್ಯಕ್ತಿಯೊಬ್ಬ ಹುಟ್ಟಲಿದ್ದಾನೆ."

"ಅವನೇ ನಿನ್ನ ಕುಮಾರ ಕಂಠೀರವ !" ಎನ್ನುತ್ತಾ ತುಂಟನಗೆ ಬೀರಿದ. ಅರವಿಂದಳ ಮುಖದ ಮೇಲೆ ಲಜ್ಜೆಯ ತೆರೆ ಲಾಸ್ಯವಾಡಿದರೂ ನಸುನಕ್ಕು ನುಡಿದಳು "ಯಾರಿಗೆ ಗೊತ್ತು ? ಇರಲಿಕ್ಕೂ ಸಾಕು."

ಇಬ್ಬರ ಮುಖಗಳೂ ನಕ್ಕು ನಲಿದುವು. ಲಜ್ಜೆಯ ಕೆಂಪು ಅರಳಿದ ಮುಖಕ್ಕೆ ಶೋಭೆಯನ್ನಿಟ್ಟಿತು. ಇಬ್ಬರೂ ಸ್ವಲ್ಪ ಹೊತ್ತು ಮಾತಾಡಲಿಲ್ಲ ಅರವಿಂದಳ ಮನಸ್ಸು ಯೋಚನಾಂಬುಧಿಯಲ್ಲಿ ಮುಳುಗಿತ್ತು. ಅವಳ ಮುಖಾರವಿಂದದಲ್ಲೇ ನೆಟ್ಟಿದ್ದ ಅಘೋರನ ದಿಟ್ಟಿ ರೂಪಶ್ರೀಯನ್ನು ಹೀರಿ ಹೀರಿ ಮೈದುಂಬಿಕೊಳ್ಳುತಿತ್ತು. ತುಸುಹೊತ್ತು ಉರುಳಿತು. ದಿಟ್ಟಿಯನ್ನು ಕೈ ಗಡಿಯಾರದ ಮೇಲೆ ಹೊರಳಿಸಿದ. ಹೊತ್ತು ಏಳರ ಅಂಚನ್ನು ತಬ್ಬುವು ದರಲ್ಲಿತ್ತು. ಅಘೋರ ಧಡಕ್ಕನೆದ್ದು ಅಂದ "ನಿನ್ನ ಮುಖ ನೋಡುತ್ತಾ ಕುಳಿತರೆ ಹೊತ್ತು ಹೋದುದೇ ತಿಳಿಯುವುದಿಲ್ಲ, ಅರೂ."

ಅವಳ ಮುಖದಲ್ಲಿ ನಸು ನಗು ಮೂಡಿತು.

"ಒಂದಿಷ್ಟು ಊಟ ಹಾಕು- ಹೊರಟು ಬಿಡುವೆ."

ಮಾತು ಮುಗಿಯುವುದರೊಳಗಾಗಿ ನಂದಾ ಒಳಗಡೆ ಬಂದು ಕೇಳಿ ದಳು "ಅಘೂ, ಊಟ ಮಾಡುವುದಿಲ್ಲವೇ ?"

"ಮಾಡುವೆ. ಅಮ್ಮಾ !"

ಅರವಿಂದಾ ಹೆಣೆಯುತ್ತಿದ್ದ ನಿಟ್ಟಿಂಗನ್ನು ಅಲ್ಲಿಯೇ ಇಟ್ಟು ಅತ್ತೆಯ ಹಿಂದೆ ಹೋದಳು. ಆಗಲೇ ಊಟಕ್ಕೆ ಅಣಿಯಾಗಿತ್ತು. ಮಾತಿನ ಭರದಲ್ಲಿ ಮರತೇ ಬಿಟ್ಟಿದ್ದೆನಲ್ಲಾ ಎಂದು ಕೊಂಡಳು ಅರವಿಂದಾ. ಊಟ ಬಡಿಸುತಿದ್ದ ತಾಯಿ "ಇಂದು ಹೇಗೆ ಒಬ್ಬಳೇ ಮಲಗುವುದೆಂದು ಯೋಚನೆಯಾಗಿದೆಯ ಲ್ಲವೇ ಅರೂ ?" ಎಂದಳು.

ಅರವಿಂದಾ ಮಾತಾಡದೆ ನಸುನಕ್ಕಳು. ಅವಳನ್ನೇ ನಿಟ್ಟಿಸುತಿದ್ದ ಅಘೋರ "ಭಯಪಟ್ಟುಕೊಳ್ಳುವುದಕ್ಕೆ ಅವಳೇನು ಮಗುವೆ ?" ಎಂದ.

"ಯೋಚಿಸಬೇಡ ಅರೂ. ನಾನೇ ನಿನ್ನೊಂದಿಗೆ ಮಲಗುವೆ." ನಂದಾ ದೇವಿಯ ನಲ್ಮೆಯ ನುಡಿ ಹೊರ ಬೀಳುತ್ತಲೂ ಅರವಿಂದಾ ಅತ್ತೆಯ ಕಡೆ ಕೃತಜ್ಞತೆಯ ನೋಟ ಬೀರಿ–

"ಇನ್ನೇನಿಲ್ಲ. ಹೊಸ ಸ್ಥಳವಾದುದರಿಂದ ಮನಸ್ಸಿಗೆ ಏನೋ ಕಿನಿಸಿಗೆ ಅಷ್ಟೆ."

ಅಘೋರನ ಮುಖದಲ್ಲಿ ನಸುನಗೆಯುರಳಿತು.

ಮರುದಿನ ಅರವಿಂದಾ ಪೇಟೆಯ ಸಾಲಿಗೆ ಹೋಗುವ ಯೋಚನೆಯಲ್ಲಿ ರುವಾಗಲೇ ಅಘೋರ ಬಂದು–"ಇಂದು ನಾನಿಷ್ಟು ಪೇಟೆಯ ಕಡೆ ಹೋಗ ಬೇಕಾಗಿದೆ ಅರವಿಂದಾ."

"ಏಕೆ ?"

"ಇಂಜಕ್ಷನ್ ಸಿರಂಜ್ ಮತ್ತು ಕೆಲವು ಪುಸ್ತಕಗಳು ಬೇಕು."

"ಹಾಗಿದ್ದರೆ ನಾನೂ ಬರುವೆ. ನಾನೂ ಕೊಳ್ಳುವುದಿದೆ."

"ಏನೆಂಬುವನ್ನು ತಿಳಿಯಬಹುದೇ ಅರವಿಂದಾ ?"

"ಒಂದಿಷ್ಟು ಮನೆ ಸಾಮಾನು." ಎಂದ ಅರವಿಂದಾ ಎದ್ದು ಹೋಗಿ ಬೇಗನೆ ಚಹ ತಯಾರಿಸಿದಳು. ಆಗಿನ್ನೂ ನಾಲ್ಕು ಗಂಟೆಯಾಗಿತ್ತು. ಇನ್ನೂ ಬೇಕಾದಷ್ಟು ಹೊತ್ತಿದೆ ಎಂದುಕೊಂಡು ಹೊರಡಲು ಅಣಿಮಾಡಿಕೊಂಡಳು. ಅಘೋರನಿಗೆ ಚಹವನ್ನು ನೀಡಿ ನಂದಾದೇವಿಗೂ ಚಹ ತೆಗೆದುಕೊಂಡು ಹೋದಳು.

"ಇಲ್ಲಿಗೇಕವ್ವಾ ತಂದೆ ? ನಾನೇ ಅಲ್ಲಿಗೆ ಬರುತಿದ್ದೆ."

"ನೀವು ಓದುತಿದ್ದುದರಿಂದ ತಂದೆ."

"ವಿನಾಕಾರಣ ತೊಂದರೆ ತೆಗೆದುಕೊಳ್ಳುತ್ತಿ."

"ಪರವಾಯಿಲ್ಲ." ಎಂದ ಅರವಿಂದಾ ಸ್ವಲ್ಪ ತಡೆದು–"ಇಂದು ಅಘೂ ಪೇಟೆಗೆ ಹೋಗುತ್ತಾರಂತೆ. ನಾನೂ ಹೋಗಲೇ ? ನಾನೊಂದಿಷ್ಟು ಸಾಮಾನು ಕೊಳ್ಳುವುದಿದೆ."

"ಹೋಗು ಮಗೂ."

ಅರವಿಂದಾ ಚಹ ಮುಗಿಸಿ ಹೊರಡುವಷ್ಟರಲ್ಲಿ ನಾಲ್ಕೂವರೆಯಾಗಿತ್ತು. ಇಬ್ಬರೂ ಸಾಲಾಗಿ ಹೆಜ್ಜೆ ಹಾಕಿದರು. ಅಘೋರ ನಸು ನಕ್ಕು–"ಈ ಜೀವನ ವೆಂಬುದು ಬೂಟಾಟಿಕೆಯ ಒಂದು ರೂಪಕ ಅರವಿಂದಾ."

"ನಾವು ಹೇಗೆಂದುಕೊಂಡರೆ ಹಾಗೆ ಅಘೂ."

"ಈಗ ನಮ್ಮ ಮದುವೆಯನ್ನೇ ಒಂದು ದೃಷ್ಟಾಂತವಾಗಿಟ್ಟುಕೊ ಅರವಿಂದಾ. ಒಂದು ವೇಳೆ ನಿನ್ನ–ನನ್ನ ಬಾಹ್ಯ ರೂಪಿನಲ್ಲಿ ಏನಾದರೂ ಒಂದು ಕುಂದು ಇದ್ದಿದ್ದರೆ ಅದರ ರೀತಿಯೇ ಬೇರೆಯಾಗಿರುತಿತ್ತು. ಅಂದಮೇಲೆ ಪ್ರೇಮದ ಹೆಸರಿನಲ್ಲಿ ನಡೆಯುವ ಕಾಮಾರಾಧನೆಯಲ್ಲವೇ ಇದು ?"

"ನಿಜ, ಅಘೋ!" ಎಂದ ಅರವಿಂದ ತುಸು ತಡೆದು ಪುನಃ–"ಏನೇ ಆದರೂ ಇದಕ್ಕೊಂದು ಮಾರ್ಜಿನ್ ಬಿಡಬಹುದು. ಅಲ್ಪಕಾಲದಲ್ಲಿ ಆಂತರಿಕ ರೂಪೇನೆಂಬುದನ್ನು ಅರಿತುಕೊಳ್ಳುವುದು ಎಂಥಹವರಿಗೂ ಕಷ್ಟ. ಬಾಳ ಬಂಧನವಿರುವೆಡೆಯಲ್ಲಿ ಆಂತರಿಕ ರೂಪು ಆಕರ್ಷಿಸುವ ಮುನ್ನ ಬಾಹ್ಯ ರೂಪಿನಿಂದ ಆಕರ್ಷಿಸಲ್ಪಡುತ್ತೇವೆ. ಒಟ್ಟಿನಲ್ಲಿ ಒಂದಲ್ಲ ಒಂದು ಕಾರಣದಿಂದ ಜೀವನಾರಂಭವಾಗುತ್ತದೆ, ಅಘೋ."

"ನಮ್ಮದನ್ನೇನೆನ್ನುತ್ತಿ? ವಿಧಿಯ ಕೈವಾಡವೋ ಮಾನಸಿಕ ಸೋಲೋ ಅರವಿಂದಾ?"

"ಹೇಗೆಂದರೂ ಆದೀತು. ವಿಧಿಯ ಕೈವಾಡ ಇಲ್ಲವೆನ್ನಲೂ ಆಗುವುದಿಲ್ಲ; ಅಥವಾ ನಮ್ಮ ಸೋಲನ್ನೂ ತಳ್ಳಿ ಹಾಕುವಂತಿಲ್ಲ, ಅಘೋ."

ಇಬ್ಬರ ಮುಖದಲ್ಲೂ ನಗುವಿನ ಸೆಳೆ ಮಿಂಚು ಸುಳಿದಳಿಯಿತು. ಅರವಿಂದಾ ನಕ್ಕು ನುಡಿದಳು "ಬಾಳ ಬಂಧನಕ್ಕೆ ನಮ್ಮನ್ನು ತಳ್ಳಿದ ವಿಧಿ ನಾವಿಲ್ಲಿ ಮಿಲಿಮಿಲಿ ಒದ್ದಾಡುವುದನ್ನು ನೋಡಿ ಎಷ್ಟು ನಗಲಿಕ್ಕಿಲ್ಲ?"

"ನಿಜ, ಅರವಿಂದಾ."

ಮಾತು ಮುಗಿಯುವಷ್ಟರಲ್ಲಿ ಎದುರಾದ ವ್ಯಕ್ತಿಯೊಂದು ಎರಡೂ ಕೈಗಳನ್ನು ಜೋಡಿಸಿ "ಚೆನ್ನಾಗಿದ್ದೀರಾ ಡಾಕ್ಟರೇ?" ಎಂದಿತು.

"ಹ್ಞೂ." ಎಂದುತ್ತರಿಸಿದ ಅಘೋರ ಪುನಃ ಕೇಳಿದ "ಹೇಗಿದ್ದಾರೆ. ನಿಮ್ಮವರು?"

"ಹಾಗೇ ಇದ್ದಾರೆ. ಅಂದಿನಿಂದಲೂ ಒಂದೇ ರೀತಿ." ಎಂದೆನ್ನುವಾಗ ಅವರ ಬಾಡಿದ ಮುಖ ಇನ್ನಷ್ಟು ಮುದುಡಿಕೊಂಡಿತು.

ಅವರು ಹೊರಟುಹೋದ ಮೇಲೆ ಅಘೋರ ಇಂತೆಂದ "ಅವರ ಹೆಂಡತಿಗೆ ಪೆರಾಲಿಸಿಸ್ (Paralysis) ಆಗಿದೆ. ಪಾಪ, ಆಕೆ ಬದುಕುವಂತೆಯೂ ಇಲ್ಲ; ಸಾಯುವಂತೆಯೂ ಇಲ್ಲ. ಇವರು ಬಹಳ ಕಷ್ಟಕ್ಕೊಳಗಾಗಿದ್ದಾರೆ ಅರವಿಂದಾ."

"ಎಷ್ಟು ದಿನಗಳಿಂದ?"

"ಮೂರು ವರ್ಷದ ಹಿಂದೆ ಅವರನ್ನು ಆಸ್ಪತ್ರೆಯಲ್ಲಿಟ್ಟುಕೊಂಡಿದ್ದರು. ಮನೆಯಲ್ಲಿ ಚಿಕ್ಕ ಚಿಕ್ಕ ಮಕ್ಕಳಿದ್ದಾರೆ."

"ಅಂಥಾಹವರಿಗೆ ಯಾವ ಪರಿಹಾರವೂ ಇಲ್ಲವೇ ಅಘೋ?"

"ಎಲ್ಲಿಯ ಪರಿಹಾರ? ವಿಷಪ್ರಾಶನವೊಂದೇ ಪರಿಹಾರ!"

"ಶ್ ! ಎಂಥಾ ಮಾತು !"

"ಅದಿಲ್ಲವೆಂದರೆ ಅನುಭವಿಸಬೇಕು. ಅನುಭವಿಸುವುದೆಂದರೆ ಸಾಮಾನ್ಯವೇ? ಮನೆಯಲ್ಲಿ ಚಿಕ್ಕ ಚಿಕ್ಕ ಮಕ್ಕಳು. ಬೇರೆ ಸಹಾಯಕರಿಲ್ಲ. ಆಂದಮೇಲೆ ಅವರ ಗತಿಯೇನು ಎಂಬುದನ್ನು ಯೋಚಿಸು. ಮೂರು ವರ್ಷದಿಂದ ಹಾಸಿಗೆ ಹಿಡಿದಿದ್ದಾರೆ. ಇನ್ನೂ ಒಂದೆರಡು ವರ್ಷ ಹೀಗೆಯೇ ನರಳಿಯಾರು. ಇದಕ್ಕೇನು ಪರಿಹಾರ ಅರವಿಂದಾ?"

ಅರವಿಂದಾ ಮಾತಾಡಲಿಲ್ಲ. ಎದೆಯಾಳದಿಂದ ನಿಟ್ಟುಸಿರೊಂದು ಹೊರ ಹೊಮ್ಮಿತು. ಯೋಚನೆಯ ಗುಂಗಿನಲ್ಲಿಯೇ ಹೆಜ್ಜೆ ಹಾಕಿದಳು. ನೋಟದ ನೇರಕ್ಕೆ ಮಹಾ ಸೌಧವೊಂದು ನಿಮಿರಿನಿಂತಿತ್ತು. ಹಾಗೇ ನೋಡು ನೋಡುತ್ತಿದ್ದಂತೆ ಯೋಚನೆಯೊಂದು ಮೂಡಿ ಬಂತು...ಮನೆಯೇನೋ ತಲತಲಾಂತರಗಳಿಗೂ ಸುಭದ್ರವಾಗಿ ಉಳಿಯುವಂತಾದ್ದು. ಒಳಗಿನ ಜೀವನವೂ ಅಷ್ಟೇ ಸುಭದ್ರವಾಗಿರುವುದಾದಲ್ಲಿ ಜೀವನ ಎಷ್ಟೊಂದು ಆನಂದಮಯ? ಅದರ ಮುಚ್ಚಿದ ಬಾಗಿಲ ಹಿಂದೆ ಮುಳ್ಳಿನ ಪಂಕದಲ್ಲಿ ಹೊರಳಾಡುವ ಜೀವಿಗಳ ಬಾಳು ಇನ್ನೆಂತಿರುವುದೋ ದೇವರೇ ಬಲ್ಲ...ಎಂದೆನಿಸಿದಾಗ ಮೈಯಲ್ಲಿ ನಸು ಕಂಪನದ ಅಲೆ ಹರಿದಾಡಿಹೋದಂತಾಯಿತು. ಬಾಳಿನ ಬಂಧನದಲ್ಲಿ ಸಿಲುಕಿ ಬದುಕಿನಲ್ಲೇ ನರಕ ವಾಸವನ್ನು ಕಾಣುವ ಜನಜೀವನದ ಚಿತ್ರ ಮನದಲೆಯಲ್ಲಿ ತೇಲಿಹೋಯಿತು. ಅರವಿಂದಾ ಕ್ಷಣಕಾಲ ಕಣ್ಮುಚ್ಚಿದಳು.... ಅನಂತದಾಚೆಯ ಮಹಾ ಶಕ್ತಿಯ ಮುಂದೆ ನಮ್ಮ ಪ್ರಯತ್ನವೆತ್ತ? ಎನ್ನಿಸಿದಾಗ ಮೈ ಚಿಲ್ಲನೆ ನಡುಗಿತು.

ದಾರಿ ಸಾಗಿ ಪೇಟೆಯ ಸಾಲಿಗೆ ಬಂದಿದ್ದರು. ಜನಸಂದಣಿಯ ಗದ್ದಲದಲ್ಲಿ ಮನಸ್ಸು ಯೋಚನೆಯಿಂದ ವಿಮುಖವಾಗುತ್ತಲೂ ಅವಳೆಂದಳು "ಅಘೂ! ಅದೆಷ್ಟೇ ಕಷ್ಟವಿರಲಿ, ಜೀವಾತ್ಮನಿಗಾಗಿ ಜೀವಾತ್ಮ ಮರುಗದಿರುವುದು ಹೇಗೆ?"

"ಯಾರು ಬದುಕಿ ಜೀವನ ಸಾಗಿಸಬಲ್ಲರೋ ಅವರಿಗಾಗಿ ಅನುಕಂಪವಿರಲೇಬೇಕೆಂಬುದರಲ್ಲಿ ಅಭ್ಯಂತರವಿಲ್ಲ. ಆದರೆ..."

"ಅಘೊ, ನಿಮ್ಮ ವಾದ ನಾನು ಒಪ್ಪಲಾರೆ." ಎನ್ನುತ್ತಾ ಅವಳು ಅಂಗಡಿಯೊಂದನ್ನು ಹೊಕ್ಕಿದಳು. ಅಘೋರ ಹಿಂಬಾಲಿಸಿದ. ಮೊದಲು ಅತ್ತೆಗಾಗಿ ಸೀರೆ ಕುಪ್ಪಸ ಕೊಂಡುಕೊಂಡಳು. ಅನಂತರ ಅವಳು ಪಕ್ಕದ ಅಂಗಡಿಗೆ ಹೋಗಿ ಫ್ಯಾನುಗಳನ್ನು ಪರಿಶೀಲಿಸ ತೊಡಗುತ್ತಲೂ ಅಘೋರ ಕೇಳಿದ "ಬೇಕೆ ಅರವಿಂದಾ ?"

"ಹೌದು."

"ನಾನಷ್ಟು ಹಣ ತರಲಿಲ್ಲವಲ್ಲಾ ?"

"ನಾನು ತಂದಿರುವೆ."

"ಅದೇಕೆ ಈಗ ?"

"ಮಾವನ ಕೋಣೆಯಲ್ಲಿ ಫ್ಯಾನಿಲ್ಲ."

ಅಘೋರ ಮಾತಾಡದೆ ನಸುನಕ್ಕ. ಉದ್ದನೆಯ ನಿಲುವಿನ ಮೇಲೆ ನಿಂತಿದ್ದ ಒಳ್ಳೆಯ ಫ್ಯಾನನ್ನು ಕೊಂಡುಕೊಂಡ ನಂತರ ಇನ್ನೊಂದು ವಸ್ತುವಿಗಾಗಿ ಅವಳ ಕಣ್ಣುಗಳು ತಡುಕಾಡುವುದನ್ನು ನೋಡಿ ಅಘೋರ ಕೇಳಿದ "ಇನ್ನೇನು ಬೇಕು ಅರವಿಂದಾ ?"

"ಅವರಿಬ್ಬರಿಗೂ ಆಯಿತು. ಇನ್ನು ನಿಮಗಾಗಿ ಒಂದು ಟೇಬಲ್ ಲೈಟು ತೆಗೆದುಕೊಳ್ಳಬೇಕು."

"ಓ !" ಎನ್ನುತ್ತಾ ಅಘೋರ ನಕ್ಕುಬಿಟ್ಟ.

"ಮುಂದಿನ ಅಭ್ಯಾಸಕ್ಕೆ ಅದಿದ್ದರೆ ಒಳ್ಳೆಯದಲ್ಲವೇ ?"

"ನಿಜ, ಅರೂ."

"ನೀವು ಮೂವರಿಗೂ ನನ್ನ ಪುಟ್ಟ ಬಹುಮಾನ." ಹುಬ್ಬೇರಿಸಿ ನುಡಿದಳು ಅರವಿಂದಾ.

"ಹಾಗಿದ್ದರೆ ನಾನೂ ಒಂದು ಕೊಡುವೆ."

ಅರವಿಂದಾ ಮಾತಾಡದೆ ನಸುನಕ್ಕಳು.

ಅಘೋರನ ಕಣ್ಣುಗಳು ಎಲ್ಲ ಕಡೆಯೂ ಹೊರಳಿದುವು. ಏನು ತೆಗೆದುಕೊಳ್ಳುವುದೋ ತಿಳಿಯದೆ ಇನ್ನೂ ನೋಡುತ್ತಲೇ ಇದ್ದ.

"ಮನೆಯಲ್ಲಿ ಎಲ್ಲವೂ ಇರುವಾಗ ಮತ್ತೇಕೆ ಕೊಳ್ಳುವ ಯೋಚನೆ? ನನಗೀಗ ಏನೂ ಬೇಡ."

ಅರವಿಂದಳ ನುಡಿ ತನ್ನ ಹುಚ್ಚು ಪ್ರವಾಹಕ್ಕೆ ಅಡ್ಡಗಟ್ಟೆ ಹಾಕಿದರೂ ಏನಾದರೂ ತನ್ನ ಮನದನ್ನೆಗೆ ಕೊಂಡುಕೊಳ್ಳಲೇ ಬೇಕು ಎಂಬ ನಿರ್ಧಾರಕ್ಕೆ ಬಂದಿದ್ದ ಅವನು ಹುಡುಕುವಿಕೆಯನ್ನು ಮುಂದುವರಿಸಿದ.

"ನೀವು ಕೊಂಡ ವಸ್ತುವು ಮೂಲೆಗುಂಪಾಗಬಾರದು. ನಮಗೆ ಯಾವ ವಸ್ತುವಿನ ಆಗತ್ಯವಿದೆಯೋ ಅಂತಾದ್ದನ್ನು ಮಾತ್ರ ಕೊಂಡುಕೊಳ್ಳಿರಿ." ಅವಳೆಂದಳು.

"ನೀನೇ ಹೇಳು. ಏನು ಬೇಕು ?"

"ಒಡವೆ ವಸ್ತ್ರ ಸೀರೆ ಬಟ್ಟೆಗಳಂತೂ ನನಗೆ ಬೇಡವೇ ಬೇಡ. ಎಲ್ಲಾ ಇವೆ."

"ಹಾಗಾದರೆ....?" ಎಂದ ಅಘೋರ ಸ್ವಲ್ಪ ತಡೆದು ನಗು ಮುಖ ದಿಂದ "ನಾನಂತೂ ನಿನಗೊಂದು ಬಹುಮಾನ ಕೊಡಲೇಬೇಕು. ಈಗ ಅಗತ್ಯ ವಿಲ್ಲವಾದರೆ ಇರಲಿ, ಇನ್ನೆಂದಾದರೂ ತೆಗೆದರೆ ಆದೀತಲ್ಲಾ ?"

"ಓಹೋ !" ಎನ್ನುತ್ತಾ ಹುಬ್ಬು ಹಾರಿಸಿದಳು ಅರವಿಂದಾ.

ಅವಳ ಏರಿ ಇಳಿದ ಹುಬ್ಬುಗಳಂದವನ್ನು ಹೀರಿ–"ಅರೂ, ನನ್ನ ಬಹು ಮಾನ ಎಂದಾದರೂ ಇದ್ದೇಇದೆ. ನೀನೆಂದೂ ಇದರಿಂದ ತಪ್ಪಿಸಿಕೊಳ್ಳ ಲಾರೆ."

"ನನ್ನ ಬಳಿ ಯಾವ ವಸ್ತು ಇಲ್ಲವೋ ಅದು ಮಾತ್ರ ನಿಮ್ಮಿಂದ ಬರ ಬೇಕು !"

ಅಘೋರ ಅವಳ ಕಿವಿಯಲ್ಲಿ ಮೆಲ್ಲನೆ ಪಿಸುಗುಟ್ಟಿದ "ನಿನ್ನ ಅಭಿಲಾಷೆ ಎಂದಾದರೂ ಈಡೇರಲಿದೆ !"

ಅರವಿಂದಳ ಕೆನ್ನೆಗಳು ಒಮ್ಮೆಲೆ ರಂಗೇರಿದುವು. ಅವನಿಂದ ತಪ್ಪಿಸಿ ಕೊಳ್ಳಲು ಕ್ಯಾಶಿಯರ್ ಬಳಿಗೆ ಹೋದಳು. ಅಘೋರ ಹಿಮ್ಮೆಯಿಂದ ಅವಳನ್ನೇ ನಿಟ್ಟಿಸಿದ.

ಹಣ ಕೊಟ್ಟು ಸಾಮಾನು ಕಟ್ಟಿಸಿಕೊಂಡ ನಂತರ ಅವರು ವ್ಯಾಪಾರ ಮುಗಿಸಿಕೊಂಡು ಮನೆಯ ಹಾದಿ ತುಳಿದರು. ಮೂವರಿಗೂ ತಾನು ತೆಗೆದ ಬಹುಮಾನ ಮನಃತೃಪ್ತಿಯನ್ನು ತಂದಿತ್ತು ಅರವಿಂದಳಿಗೆ. ತಾನು ಕೊಡಬೇಕಾದುದೇನು ? ಎಂದು ಯೋಚಿಸತೊಡಗಿದ ಅಘೋರ.

ಅಧ್ಯಾಯ
೨೦

ಅಘೋರ ಒಬ್ಬನೇ ತನ್ನ ಆಫೀಸಿನಲ್ಲಿ ಕುಳಿತಿದ್ದಾನೆ. ಮೇಜಿನ ಮೇಲೆ ಕಾಗದ ಪತ್ರಗಳೂ ಆರೋಗ್ಯಕ್ಕೆ ಸಂಬಂಧಿಸಿದ ಪತ್ರಿಕೆಗಳೂ ಇವೆ. ಅಘೋರ ಅಂದಿನ ಕಾಗದ ಪತ್ರಗಳಲ್ಲಿ ತನ್ಮಯನಾಗಿದ್ದ ಸಮಯದಲ್ಲಿ ಬಾಗಿಲ ಕಡೆಯಿಂದ ಕಟಕಟ ಸದ್ದು ಕೇಳಿ ಬಂತು. ಬಂದವರನ್ನು "Yes please." ಎನ್ನುತ್ತಾ ಸ್ವಾಗತಿಸಿದ. ಒಳ ಬಂದವರು ಡಾ|| ಭಗವಾನ್. ಅವರನ್ನು ಕಾಣುತ್ತಲೂ ಧಿಗ್ಗನೆದ್ದು ನಿಂತು ಕುಳಿತುಕೊಳ್ಳುವಂತೆ ಕೇಳಿಕೊಂಡ. ಸರ್ಜರಿಯಲ್ಲಿ ಹಿರಿಯ ಹೆಸರಾಂತ ಡಾಕ್ಟರು ತನ್ನ ಆಫೀಸಿಗೆ ಬಂದುದು ಸಾಮಾನ್ಯವಲ್ಲ. ಏನಿದ್ದಿರಬಹುದು? ಎಂದು ಯೋಚಿಸುತ್ತಲೇ ಕುಳಿತುಕೊಳ್ಳುವುದರೊಳಗಾಗಿ ಅವರು ತಾವು ಬಂದ ಸಮಾಚಾರವನ್ನು ಮುಂದಿಟ್ಟರು, "ಡಾಕ್ಟರ್, ಇಂದು ಆಪರೇಶನ್ ಥಿಯೇಟರಿನ ಒಡೆತನ ನಿಮಗೆ ಸೇರಿದ್ದು, ಅದರಿಂದಾಗಿಯೇ ನಿಮ್ಮ ಬಳಿಗೆ ಬರಬೇಕಾಯಿತು."

"ಏನು ಹೇಳಿ ಸಾರ್."

"ನಮ್ಮ ಕಡೆಯವರದೊಂದು ಆಪರೇಷನ್ ಇದೆ. ಬುಧವಾರದ ತನಕ ಕಾಯುವಂತಿಲ್ಲ."

"ಎಂಥಹ ಆಪರೇಶನ್ ?"

"ಅಪೆಂಡಿಸೈಟಿಸ್ (Appendicitis)."

"ಓ, ಅದೇ." ಎನ್ನುತ್ತಾ ಹಗುರವಾಗಿ ಉಸಿರು ಬಿಟ್ಟ ಅಘೋರ.

ಅಂದಿನ ಪಟ್ಟಿಯಲ್ಲಿ ಹದಿನಾಲ್ಕು ಆಪರೇಶನ್‌ಗಳಿದ್ದುವು. ಆಪರೇಶನ್ ಥಿಯೇಟರಿನ ಒಡೆತನ ದಿನಕ್ಕೊಬ್ಬ ಸರ್ಜನ್ನರಿಗೆ ಸೇರುತಿತ್ತು. ಅಂದು ಆಕಸ್ಮಿಕವಾಗಿ ಒದಗಬಹುದಾದ ಇತರ ಆಪರೇಶನ್ನುಗಳೂ ಅವರ ಪಟ್ಟಿಯಲ್ಲಿ ಸೇರಿಹೋಗುತ್ತಿದ್ದುವು. ಅದೇ ರೀತಿ ಡಾ|| ಭಗವಾನರ ಕಡೆಯವರ ಆಪರೇಶನ್ ತುರ್ತಾಗಿ ಆಗಬೇಕಾಗಿದ್ದುದರಿಂದ ಅದು ಇಂದಿನ ಪಟ್ಟಿಯಲ್ಲಿ

ಸೇರಲಿತ್ತು. ಅಘೋರ ಡಾ|| ಭಗವಾನರೊಂದಿಗೆ ಹೊರಟ. ಥಿಯೇಟರನ್ನು ಸೇರುತ್ತಲೂ ಕಣ್ಣುಗಳು ಗಡಿಯಾರದ ಕಡೆ ಹೊರಳಿದುವು. ಗಂಟೆ ಎಂಟುವರೆ ಆಗಿದೆ. ಆಪರೇಶನ್ನಿಗೆ ತಯಾರಿ ನಡೆಯುತ್ತಿತ್ತು. ಇಂದು ಎಲ್ಲ ಆಪರೇಶನ್ನುಗಳು ಮುಗಿಯುವಷ್ಟರಲ್ಲಿ ಮಧ್ಯಾಹ್ನ ನಾಲ್ಕು ಗಂಟೆಯಾದರೂ ಆದೀತು ಎಂದುಕೊಂಡು ಡಾ|| ಭಗವಾನ್ ಕಡೆಯವರನ್ನು ನೋಡಲು ಹೋದ. ಹದಿನೆಂಟರ ಹರೆಯದ ಹುಡುಗಿ ನೋವಿನಿಂದ ಮುದುಡಿ ಮಲಗಿದ್ದಳು. ಹೊಟ್ಟೆಯ ಮೇಲೆ ಯಾಂತ್ರಿಕವಾಗಿ ಕೈಯಾಡಿಸಿ "ಎಲ್ಲಿ ನೋವಿದೆ ಹೇಳಿರಿ." ಕೇಳುತ್ತಾ ಮುಖದತ್ತ ದಿಟ್ಟಿ ಹೊರಳಿಸಿದ. ಮನಸ್ಸೂ ನೋಟವೂ ಒಮ್ಮೆಲೆ ತಟಸ್ಥವಾದುವು! ನೋಟ ಮೈಮೇಲೆಲ್ಲಾ ಹರಿದಾಡಿತು. ಹುಡುಗಿ ಅರವಿಂದಳ ಪ್ರತಿರೂಪವೋ ಎಂಬಂತೆ ಅದೇ ರೀತಿಯ ಮಾಟವಾದ ಮುಖ. ಅದೇ ಬಣ್ಣ ಅದೇ ಗುಂಗುರು ಕೂದಲು. ಅದೇ ಎತ್ತರ. ಅದೇ ಗಾತ್ರ ಕೂಡ! ಅಘೋರನ ಕಣ್ಣುಗಳು ಅವಳ ಮೇಲೆ ಮತ್ತೆ ಮತ್ತೆ ಹರಿದಾಡಿದುವು. ಅವನಿಗರಿಯದಂತೆಯೇ ಅಂತಃಕರಣ ಕರಗಿ ಅವಳ ಬಗ್ಗೆ ಎಲ್ಲಿಲ್ಲದ ಅನುಕಂಪ ಮೂಡಿತು. ಹಾಲ್ಜೇನು ಸುರಿಸುವ ದನಿಯಿಂದ ನುಡಿದ "ನೀವು ಹೆದರಿಕೊಳ್ಳಬೇಡಿರಿ. ಇದು ಸಿಂಪಲ್ ಆಪರೇಶನ್."

ಅವಳು ಮಾತಾಡದೆ ಕಂಬನಿ ತುಂಬಿದ ಕಣ್ಣುಗಳನ್ನು ಕರವಸ್ತ್ರದಿಂದ ಒರಿಸಿಕೊಂಡಳು.

"ನಿಮ್ಮ ಹೆಸರೇನಮ್ಮಾ ?"

ಅಶ್ರುಪೂರ್ಣಲೋಚನಗಳಿಂದ ನೋಡುತ್ತಾ ಮೆಲ್ಲನೆ ಅವಳೆಂದಳು "ಸುಲೋಚನ."

ನೋವನ್ನು ತಾಳಲಾರದೇ ಸಂಕಟ ಭಯ ಭೀತಿಗಳ ಗಣಿಯಾದುದನ್ನು ನೋಡಿ–"ಹೆದರಿಕೊಳ್ಳುವುದೇಕೆ ? ಒಂದೇ ದಿನದಲ್ಲಿ ಸರಿ ಹೋಗುತ್ತೀರಿ. ಯೋಚಿಸಬೇಡಿರಿ."

"ಅವಳು ಇಂಥ ಆಪರೇಶನ್ ಎಷ್ಟು ನೋಡಿಲ್ಲ ?" ಎನ್ನುತ್ತಾ ನಸುನಕ್ಕರು ಭಗವಾನ್.

"ಅಂದರೆ ?"

"ಸುಲೋ ಮೆಡಿಕಲ್ ಸ್ಟೂಡೆಂಟ್ !"

"ಓ!" ಹುಬ್ಬೆತ್ತಿ ಉದ್ಗಾರ ತೆಗೆದ ಅಘೋರ ಸ್ವಲ್ಪ ತಡೆದು–"ನೀವು ಯಾವ ತರಗತಿಯಲ್ಲಿದ್ದೀರಿ?"

"ಮೂರನೆಯ ವರ್ಷ."

"ಮತ್ತೆ ನಿಮಗೆ ನಾನು ಹೇಳುವುದೇನಿದೆ?" ಕಣ್ಣರಳಿಸಿ ಕಿಲಕಿಲನೆ ನಕ್ಕು ಪುನಃ–"ಕಣ್ಣಲ್ಲಿ ನೀರೇಕೆ? ಅಪೆಂಡಿಸೈಟಿಸ್‌ಗೆ ಯಾರಾದರೂ ಭಯಪಟ್ಟುಕೊಳ್ಳುತ್ತಾರೆಯೇ?"

ಅವಳು ಮಾತಾಡದೆ ಕಂಬನಿಯನ್ನು ತೀಡಿಕೊಂಡಳು.

ಡಾ|| ಭಗವಾನ್ ಮುಖದ ಮೇಲೆ ತಿಳಿಹಾಸ ಮೂಡಿಸಿ ಅಂದರು "ಅಘೋರ್ ಸುಲೋಚನಳ ತಂದೆಯೂ ನಾನೂ ಬಾಲ್ಯಸ್ನೇಹಿತರು. ಅಂದಿನಿಂದಲೂ ನಾನೇ ಅವರ ಖಾಯಂ ವೈದ್ಯ. ಇಂದು ಆಕಸ್ಮಿಕವಾಗಿ ತೀವ್ರ ನೋವು ಕಾಣಿಸಿಕೊಂಡುದುದರಿಂದ ವಿಧಿಯಿಲ್ಲದೆ ತನ್ನನ್ನು ನಿಮಗೊಪ್ಪಿಸಿಕೊಂಡಿದ್ದಾಳೆ ಸುಲೋ. ಇಲ್ಲವಾಗಿದ್ದಲ್ಲಿ ನಾನೇ ಅವಳಿಗೆ ಆಪರೇಶನ್ ಮಾಡಬೇಕಿತ್ತು."

"ಓ! ನೀವು ಸುಸಂದರ್ಭವನ್ನು ಕಳೆದುಕೊಂಡಿರಿ!" ನಗುತ್ತಾ ಹಾಸ್ಯದ ಚಟಾಕಿ ಹಾರಿಸಿದ ಅಘೋರ.

ಇಬ್ಬರ ಮುಖಗಳಲ್ಲೂ ನಗು ಮಿನುಗಿತು. ಸುಲೋಚನಳ ಹುಬ್ಬುಗಳು ಗಂಟಿಕ್ಕಿದುವು. ನೋಡಿ ನಸುನಕ್ಕು ಅಘೋರ ಕೇಳಿದ "ಡಾಕ್ಟರಾಗುವವರು ಹೀಗಿದ್ದರೆ ಹೇಗೆ?"

"ನೀವು ಆಪರೇಶನ್ ಮಾಡಿಸಿ ಕೊಂಡಿದ್ದೀರಾ, ಡಾಕ್ಟರ್?" ಇನಿದನಿ ಪ್ರಶ್ನೆ ಹಾಕಿತು.

"ಇಲ್ಲ."

"ಕೊಯ್ಯುವವರಿಗೆ ಕೊಯ್ಯಿಸಿಕೊಳ್ಳುವವರ ಕಷ್ಟ ತಿಳಿಯುವುದಾದರೂ ಹೇಗೆ?"

"ನಾನು ಕೊಯ್ಯಿಸಿಕೊಳ್ಳಬೇಕಾದಲ್ಲಿ ಅಂಜಿಕೊಳ್ಳುವುದಿಲ್ಲ."

"ಓ! ಅದೆಲ್ಲಾ ಬೂಟಾಟಿಕೆ!"

ಎಲ್ಲರ ಮುಖದಲ್ಲೂ ನಗು ಅರಳಿತು. ಅಘೋರ ಹುಬ್ಬುಹಾರಿಸಿ ಕೇಳಿದ "ನೀವು ಓದನ್ನು ಇಷ್ಟಕ್ಕೆ ಬಿಟ್ಟುಕೊಟ್ಟು ಮದುವೆಯಾಗಲಿದ್ದೀರೇನು?"

ಸುಲೋ ಸಿಟ್ಟಿನಿಂದ ಹೇಳಿದಳು "ಇಲ್ಲ."

"ಹಾಗಿದ್ದರೆ ಕೋರ್ಸನ್ನು ಮುಗಿಸಿದರೂ ಪ್ರಾಕ್ಟೀಸ್ ಮಾಡುವುದಿಲ್ಲವೆ ?"

"ಏಕೆ ?......ನಿಮಗೇಕಷ್ಟು ಅನುಮಾನ ?"

"ಡಾಕ್ಟರಾಗುವವರಿಗೆ ಧೈರ್ಯವಿಲ್ಲದಿದ್ದರೆ ಆದೀತೆ ?"

"ಕೊಯ್ದು ನೋವುಂಟುಮಾಡುವ ಪಾಪಕಾರ್ಯ ನನಗೆ ಬೇಡವೇ ಬೇಡ."

"ಈಗ ಕೊಯ್ಯದಿದ್ದರೆ ನಿಮ್ಮ ಗತಿ? "ಆಸಕ್ತಿಯಿಂದ ಕೇಳಿದ ಅಘೋರ.

"ಏನಾಗಬೇಕೋ ಅದು ಆದೀತು." ಸಮಾಧಾನದಿಂದ ನುಡಿ ಹೊರಬಿತ್ತು.

"ಹಾಗಿದ್ದರೆ ಆಪರೇಶನ್ ಬೇಡವೇ ಬೇಡ."

"ಅದೂ ಕೂಡ ವಿಧಿನಿಯಮ."

"ಹೋಗಲಿ, ಕೊಯ್ಯದೆ ಚುಚ್ಚದೆ ನಿಮ್ಮ ಡಾಕ್ಟರಿಕೆ ಸಾಗುವುದಾದರೂ ಎಂತು ?"

"ನನಗೆ ಮನಶ್ಶಾಸ್ತ್ರ ತೆಗೆದುಕೊಳ್ಳುವ ಯೋಚನೆ ಇದೆ."

"ಎಲ್ಲರೂ ಮಾಡಿದುದನ್ನೇ ಮಾಡುವುದರಿಂದೇನು ಪ್ರಯೋಜನ ? ನಾವು ಕೊಯ್ದು ದೇಹ ರಿಪೇರಿ ಮಾಡುತ್ತೇವೆ. ನೀವು ಜೀವವನ್ನು ಹತೋಟಿಗೆ ತೆಗೆದುಕೊಳ್ಳುವ ಸಾಧನೆ ಮಾಡಿರಿ."

"ಓ ! ಆ ಕಾಲ ಬಂದರೂ ಬರಬಹುದು."

"ಸರಿ ಮತ್ತೆ. You carry on !"

"ನನ್ನ ವಿಚಾರ ಬಿಡಿ ಡಾಕ್ಟರ್. ಕಾಲಾಂತರದಲ್ಲಿ ಏನೇನು ಆಗಲಿದೆಯೋ ?"

"ನಿಜ ; ಸುಲೋ."

ಡಾ|| ಭಗವಾನರಿಗೆ ಸಹಾಯಕನಾಗಿ ಅತ್ಯಂತ ಶ್ರದ್ಧೆಯಿಂದ ಅವರ ಸಮಕ್ಷಮದಲ್ಲಿ ಸುಲೋಚನಳ ಆಪರೇಶನ್ ಮುಗಿಸಿದ ಅಘೋರ. ಅನಂತರ ಉಳಿದ ಅಂದಿನ ಆಪರೇಶನ್ನುಗಳು ಮುಗಿಯುವಷ್ಟರಲ್ಲಿ ಅಘೋರ ಬಹಳಷ್ಟು ಬಳಲಿದ್ದ. ಮನೆಯಿಂದ ಬಂದಿದ್ದ ಊಟ

ಆರಿ ತಂಗಳಾಗಿತ್ತು. ಮಧ್ಯಾಹ್ನ ನಾಲ್ಕೂವರೆಯ ಹೊತ್ತಿಗೆ ಆಪರೇಶನ್ ಥಿಯೇಟರಿನಿಂದ ಹೊರಬಿದ್ದು ತನ್ನ ಕೊಠಡಿಗೆ ಹೋಗಿ ಮುಖ ಮಜ್ಜನ ಮಾಡಿ ಒಂದೇ ಉಸುರಿಗೆ ಊಟ ಮುಗಿಸಿ ತುಸು ವಿಶ್ರಾಂತಿಗಾಗಿ ಹಾಸಿಗೆಯ ಮೇಲೆ ಹಾಗೇ ಅಡ್ಡಾದ. ಆಪರೇಶ ಇದ್ದ ದಿನ ಸಂಜೆಯಲ್ಲಿ ವಾರ್ಡುಗಳ ಪುನರ್ಭೇಟಿಯನ್ನು ಮುಗಿಸಿಕೊಂಡೇ ಮನೆಗೆ ಹೋಗುವ ಪದ್ಧತಿ ಅವನದು.

ಹಿಮಾಚ್ಛಾದಿತ ಗಿರಿ ಶಿಖರವು ಬಾಲರವಿಯ ಬಾಲ ಕೋಮಲ ಕಿರಣಗಳ ಮೆರುಗಿನಲ್ಲಿ ಕನ್ನಡಿಯಂತೆ ಹೊಳೆ ಹೊಳೆಯುವುದನ್ನೇ ನೆಟ್ಟ ದಿಟ್ಟಿಯಿಂದ ನಿಟ್ಟಿಸುತಿದ್ದಾನೆ ಅಘೋರ. ಮಂಜಿನ ಮುಕುಟ ಬಿಸಿಲ ಝಳ ಹೆಚ್ಚಿದಂತೆ ಸ್ವಲ್ಪ ಸ್ವಲ್ಪವಾಗಿ ಕರಗತೊಡಗಿತು. ಬೆಟ್ಟದ ಮೇಲಿನ ಹಸುರು ಸೂಸುವ ಗಿಡ ಮರಗಳು ಮೆಲ್ಲಮೆಲ್ಲನೆ ಮೈದೋರತೊಡಗಿದುವು. ಹಚ್ಚ ಹಸುರಿನ ಹಿನ್ನೆಲೆಯಲ್ಲಿ ಮಗುವಿನಂತೆ ನಿಂತು ನಗುಮುಖದ ಸುಲೋಚನ ಕರವಸ್ತ್ರವನ್ನು ಎತ್ತಿ ಹಿಡಿದುಕೊಂಡು ಕೈಯಾಡಿಸಿದಳು-ಪಯಣಿಗರು ಹೊರಡುವ ಮುನ್ನ ಕೈಯಾಡಿಸುವಂತೆ.

ಮಿಡುಕಿ ಬಿದ್ದು ಅಘೋರ ಕಣ್ತೆರೆದ. ಅದೇಕೆ ಅವಳು ನಾಗರ ಹೆಡೆಯಂತೆ ಕೈಯಾಡಿಸಿದಳೆಂಬುದು ಬಗೆ ಹರಿಯದಾಯಿತು. ಕಣ್ಣುಜ್ಜಿಕೊಂಡು ಸುತ್ತಲೂ ನಿಟ್ಟಿಸಿದ. ಕನಸಿನ ಲೋಕದ ಸುಲೋಚನ ಒಂದಕ್ಕೆ ಹತ್ತಾಗಿ ಕೈಯಾಡಿಸಿದಂತಾಯಿತು. ಗೋಡೆಯ ಮೇಲೆಲ್ಲಾ ಅವಳ ನಗುಮುಖ ಸುಳಿ ಸುಳಿದಳಿಯಿತು. ಅಘೋರ ದೀರ್ಘ ನಿಶ್ವಾಸ ಬಿಟ್ಟು ಎದ್ದು ಕುಳಿತುಕೊಂಡ. ಮರುಗಳಿಗೆಯಲ್ಲಿ ಟೆಲಿಫೋನ್ ಟಂಟಣಿ ನಾದ ಮನಸ್ಸನ್ನು ಅತ್ತ ಸೆಳೆದುಕೊಂಡಿತು. ಧಡಕ್ಕನೆದ್ದು ರಿಸೀವರನ್ನು ಕೈಗೆತ್ತಿಕೊಂಡು "ಹಲೋ !" ಎಂದ.

ಆ ಕಡೆಯಿಂದ ಅಸಿಸ್ಟೆಂಟ್ ಸರ್ಜನ್‌ರವರ ದನಿ ಹೊರಬಿತ್ತು.

"ಎಮರ್ಜನ್ಸಿ ಕೇಸೊಂದು ಬಂದಿದೆ ಸಾರ್."

"ಏನಾಗಿದೆ ? ಏನು ತೊಂದರೆ ?"

"ಹೊಟ್ಟೆ ನೋವಿದೆ. ಏನೆಂಬುದನ್ನು ಇನ್ನೂ ತಿಳಿದು ಕೊಳ್ಳಲಾಗಲಿಲ್ಲ."

"ನಾನು ಬರಲೇ ಬೇಕೆ ?"

"ಹೌದು...ಸಾರ್."

ಓ, ಭಗವಂತಾ ನೀನೇ ರಕ್ಷೆ !

ಅಸಿಸ್ಟೆಂಟ್ ಸರ್ಜನ್ನನ ದನಿಯಲ್ಲಿಯೂ ಆಯಾಸವಿಲ್ಲದಿರಲಿಲ್ಲ. ಬೆಳಗಿನಿಂದ ತನ್ನೊಂದಿಗೆ ದುಡಿದ ವ್ಯಕ್ತಿ. ಅಗಲೇ ಇನ್ನೊಂದು ಆಪರೇಶನ್ನಿನ ತಯಾರಿ ನಡೆಸಿದ್ದು ಹಿರಿಯ ವೈದ್ಯರ ನೆರವನ್ನು ಬೇಡಿದ ಅಷ್ಟೆ. ವಿಷಯ ಮನವರಿಕೆಯಾದಾಗ "ಪಾಪ" ಎನ್ನಿಸಿತು. ಎದ್ದು ಮುಖ ತೊಳೆಯಲು ಶೌಚದ ಮನೆಗೆ ಹೋದ. ತಲೆ ಭಾರ ಇನ್ನೂ ಇಳಿದಿರಲಿಲ್ಲ. ಮೇಲಿಂದ ಮೇಲೆ ಆಕಳಿಕೆಯೂ ಬರಹತ್ತಿತು. ಅರೆ ನಿದ್ದೆಯಿಂದಾಗಿ ಮೈಯಲ್ಲೆಲ್ಲಾ ಆಲಸ್ಯದ ಮಂಪರ ಮನೆ ಮಾಡಿತ್ತು. ನಿದ್ದೆಯ ಭಾರ ಇಳಿಸಲು ಯಥೇಷ್ಟ ತಣ್ಣೀರನ್ನು ಸುರಿದು ಕೈಕಾಲು ತೊಳೆದುಕೊಂಡು ಮುಖಮಜ್ಜನ ಮಾಡಿ ಅಣಿಯಾದ. ಕನ್ನಡಿಯ ಮುಂದೆ ನಿಂತು ಕೂದಲು ತಿದ್ದುವಾಗ ಸುಲೋಚನ ಕನಸಿನ ಪ್ರಪಂಚದಲ್ಲಿ ಸುಳಿದು ಕರವಸ್ತ್ರ ಸಹಿತ ಕೈಯಾಡಿಸಿ ಟಾ! ಟಾ| ಹೇಳಿ ಹೋದ ಬಗೆ ಮನದಲೆಗಳನ್ನು ಹೊಡೆದೆಬ್ಬಿಸಿತ್ತು. ಅವಳೇಕೆ ಹಾಗೇ ಟಾ!ಟಾ! ಹೇಳಿ ಹೋದಳು ? ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯಿತು. ಅಘೋರ ಆಪರೇಶನ್ ಥಿಯೇಟರಿನ ಕಡೆ ಹೆಜ್ಜೆ ಹಾಕಿದ. ಆಪರೇಶನ್ ಥಿಯೇಟರನ್ನು ಸೇರಬೇಕಾದರೆ ಏನಿಲ್ಲವೆಂದರೂ ಐದಾರು ನಿಮಿಷಗಳ ಹಾದಿ. ಹಾದಿ ಸಾಗುತ್ತಿದ್ದಂತೆ ಮನದಲಿಯಲ್ಲಿ ಸುಲೋಚನ ಮೂಡಿ ನಿಂತಳು. "ಕೊಯ್ದು ನೋವನ್ನುಂಟು ಮಾಡುವ ಪಾಪ ಕಾರ್ಯ ನನಗೆ ಬೇಡ." ಎಂದ ಅವಳ ನುಡಿ ಕಿವಿಯಲ್ಲಿ ಮಾರ್ನುಡಿಯಿತು. ಡಾಕ್ಟರಾಗಲಿರುವ ಹುಡುಗಿ ಹೆದರಿ ಹಾಗೆಂದರೆ ಹೇಗೆ ? ವಿಷಯವನ್ನು ಮನದಲ್ಲೇ ಮೆಲಕು ಹಾಕಿದೊಡನೆ ತನಗೆ ತಾನೇ ನಗುವುಕ್ಕಿ ಬಂತು. ಅವಳ ಮುಗ್ಧ ಮುಖಭಾವ ಹೊಳೆಯುವ ಕಣ್ಣ ನೋಟ ಮನಸ್ಸನ್ನು ಅತ್ತತ್ತಲೇ ಸೆಳೆಯತೊಡಗಿದುವು. ಹಿಂದಿನ ಜನ್ಮ ಇರುವುದು ಹೌದಾಗಿದ್ದರೆ ಅರವಿಂದಳಿಗೂ ಸುಲೋಚನಳಿಗೂ ಹತ್ತಿರದ ಸಂಬಂಧ ಇದ್ದಿರಬಹುದು ಎಂದೆನಿಸದಿರಲಿಲ್ಲ. ಅದೇ ವಿಚಾರ ಕುರಿತು ಯೋಚಿಸುತ್ತಾ ಅಘೋರ ಮುಂದುವರಿದ.

ಥನ್. ಥನ್. ಥನ್. ಥನ್. ಘಂಟಾ ನಿನಾದ ! ರಾಣೀ ಜಗತ್ತಾರಣಿಯ ತುರ್ತು ಕರೆ !

ಒಮ್ಮೆಲೇ ಅಲ್ಲಲ್ಲಿ ಕೆಂಪು ದೀಪಗಳು ಹತ್ತಿಕೊಂಡು ಅಪಾಯದ ಸ್ಥಿತಿಯನ್ನು ಸೂಚಿಸಿದುವು. ಅಘೋರ ನಂಬರನ್ನು ನೋಡಿದ. ಎಂಟನೆಯ

ಸಂಖ್ಯೆ ವಿರಾಜಮಾನವಾಗಿತ್ತು! ಎಮರ್ಜನ್ಸಿ ಕೇಸಿರುವುದಾಗಿ ಆಗಲೇ ಆಪರೇಶನ್ ಥಿಯೇಟರಿನಿಂದ ಕರೆ ಬಂದಿತ್ತು. ಆದರೆ ತೋರಿಸುತ್ತಿರುವುದು ಎಂಟನೆಯ ಸಂಖ್ಯೆ? ಅಘೋರ ಓಡುತ್ತಲೇ ವಾರ್ಡಿನತ್ತ ಹೋದ. ಕಿವಿಯನ್ನು ಕೊರೈಸುವಂತೆ ಮೊಳೈಸಿತು ಪಾದರಕ್ಷೆಗಳ ಪಟ ಪಟ ಪಟ ಪಟ ಸದ್ದು!

ಹತ್ತು ನಿಮಿಷದ ಹಾದಿಯನ್ನು ಅಘೋರ ಮೂರುವರೆ ನಿಮಿಷದಲ್ಲಿ ಕ್ರಮಿಸಿದ್ದ. ಎದುರಿಗೆ ಓಡುತ್ತಾ ಬಂದ ನರ್ಸೊಬ್ಬಳು ಒಂದೇ ಉಸುರಿಗೆ ಹೇಳಿದಳು "ಎಂಟನೆಯ ವಾರ್ಡಿನ ಕೇಸು ಬಹಳ ಅಪಾಯ ಸ್ಥಿತಿಯಲ್ಲಿದೆ ಡಾಕ್ಟರ್!"

ಅಘೋರ ವಾರ್ಡನ್ನು ಸೇರುವುದರೊಳಗಾಗಿ ನಾಲ್ಕಾರು ಮಂದಿ ಡಾಕ್ಟರುಗಳು ಕೂಡಿದ್ದರು. ಡಾ|| ಭಾರ್ಗವಾ ಸೂಜಿ ಮದ್ದು ಚುಚ್ಚುತಿದ್ದರು. ಅಘೋರ ಒಳ ಹೋದವನೇ ಹಾಸಿಗೆಯ ಬಳಿಗೆ ಧಾವಿಸಿದ. ಸುಲೋಚನ ಅಸ್ವಾಸ್ಥ್ಯವಸ್ಥೆಯಲ್ಲಿದ್ದಳು! ಮುಖ ಬೆಳ್ಳನೆ ಬಿಳಿಚಿಕೊಂಡಿತ್ತು. ನೆತ್ತರು ವಾಂತಿಯಾಗಿದ್ದು ಎದೆಯೆಲ್ಲಾ ನೆತ್ತರಿನಿಂದ ತೊಯ್ದು ಹೆಪ್ಪುಗಟ್ಟಿತ್ತು. ಅಘೋರ ಮಾತಿಲ್ಲದೆ ಹಣೆಯ ಮೇಲೆ ಕೈಯಿಟ್ಟ. ಡಾ|| ಸೌಮಾ ಎದೆಯ ಮಿಡಿತವನ್ನು ಸ್ಟೆತೊಸ್ಕೋಪಿನಿಂದ ಗಮನಿಸುತಿದ್ದಳು.

ಆ ಭೀಭತ್ಸ ದೃಶ್ಯ ಎದೆಯ ಮಿಡಿತವನ್ನು ಆಯ ತಪ್ಪಿಸಿತು. ಅವಳ ಕಣ್ಣಾಲಿಗಳು ಭಯ ಭೀತಿಯಿಂದ ಚಂಚಲವಾಗಿದ್ದುವು. ನೋವಿನಿಂದ ಕೂಡಿದ ಆ ನೋಟ ತನುಮನಗಳಿಗೆ ತಳಮಳವನ್ನೊಡಿಸಿತು. ಮೈಯಲ್ಲಿ ಕಂಪನದ ಅಲೆ ಹರಿದಾಡ ಹತ್ತಿತು. "ಕೊಯ್ದು ನೋವನ್ನುಂಟುಮಾಡುವ ಪಾಪಕಾರ್ಯ ನನಗೆ ಬೇಡ." ಎಂದ ಅವಳ ನುಡಿ ಪುನಃ ಪುನಃ ಕಿವಿಯಲ್ಲಿ ಮಾರ್ನುಡಿಯಿತು. ಹಲವಾರು ಮಂದಿ ಹಿರಿಯ ಡಾಕ್ಟರುಗಳು ಹೋರಾಟಕ್ಕಿಳಿದರೂ ಲೆಕ್ಕಿಸದೆ ಕೆಲವೇ ಕ್ಷಣಗಳಲ್ಲಿ ಅವಳ ಪ್ರಾಣ ಪಕ್ಷಿಯನ್ನು ಮೃತ್ಯುದೇವತೆ ಸೆಳೆದುಕೊಂಡು ಹೋಗಿ ಬಿಟ್ಟಳು!

ಮರುಕ್ಷಣದಲ್ಲಿ ಛೆಃ! ಛೆಃ! ಎನ್ನುತ್ತಾ ಎಲ್ಲರ ದನಿಗಳೂ ಅನುಕಂಪದಿಂದ ಮರ್ಮರಿಸಿದುವು. "ಎಂಥಹ ಅನ್ಯಾಯ! ಎಂಥಹ ಅನ್ಯಾಯ!" ಅಘೋರನ ದನಿಯೂ ಗೋಗರೆಯಿತು "ಎಂಥಹ ಅನ್ಯಾಯ!" ಸೌಮಾ ಉಕ್ಕಿಬಂದ ಕಂಬನಿಯನ್ನು ತೀಡಿಕೊಂಡಳು.

ನೆತ್ತರಿನಿಂದ ಒದ್ದೆಯಾದ ಬಟ್ಟೆಗಳನ್ನು ಸೇವಿಕೆ ನಡುಗುವ ಕೈಗಳಿಂದ ತೆಗೆದಳು. ಅಘೋರ ಶವದ ಮೇಲೆ ತೆರೆ ಎಳೆಯಲಾರದೆ ಎಳೆದಾಗ ಅರವಿಂದಳ ಮೇಲೆಯೇ ಎಳೆದಂತಾಗಿ ದೇಹದಾದ್ಯಂತ ಕಂಪಿಸಿದ.

"ಪಲ್ಮನರಿ ಎಂಬೊಲಿಜಂ"(Pulmonry Embolism)ಎಂದರು ಭಗವಾನ್. ದನಿ ಬಾವಿಯಾಳದಿಂದ ಹೊರ ಬಂದಂತೆ ಹೊರಬಿತ್ತು. ಮುಖದ ಮೇಲೆ ದುಃಖದ ಕಪ್ಪು ಛಾಯೆ ದಟ್ಟವಾಗಿ ಕವಿದಿತ್ತು. ಪುನಃ ಅವರೆಂದರು "ಆಪೆಂಡಿಕ್ಸ್‌ನಲ್ಲೂ ದೋಷವಿಲ್ಲ; ಆಪರೇಶನ್ನಿನಲ್ಲೂ ದೋಷವಿಲ್ಲ. ಪಾಪ! ಹುಡುಗಿಯ ಗ್ರಹಚಾರ. ತುಂಬ ಅನ್ಯಾಯ! ತುಂಬ ಅನ್ಯಾಯ!" ಅವರು ನಿಧಾನವಾಗಿ ಹೊರಬಿದ್ದರು. ಅವರನ್ನು ಹಿಂಬಾಲಿಸಿದ ಅಘೋರನ ಮೈ ರೋಮಾಂಚನಗೊಂಡಿತ್ತು. ಪುನಃ ಪುನಃ ಅವಳ ನುಡಿ ಕಿವಿಯಲ್ಲಿ ಝೇಂಕರಿಸಿತು "ಕೊಯ್ದು ನೋವುಂಟುಮಾಡುವ ಪಾಪಕಾರ್ಯ ನನಗೆ ಬೇಡ."

ಈ ಸಿಂಪಲ್ ಆಪರೇಶನ್ ಡಾಕ್ಟರಾಗಲಿದ್ದ ಹುಡುಗಿಯನ್ನು ಆಹುತಿ ತೆಗೆದುಕೊಳ್ಳುತ್ತದೆಂಬುದು ಮೊದಲೇ ಮನವರಿಕೆಯಾಗಿದ್ದರೆ ನಾನು ಮುಟ್ಟುತ್ತಿರಲಿಲ್ಲ. ದುಡಿಯುವ ಕೈಗಳೆಂದು–ಅರವಿಂದಳ ಪ್ರತೀಕವೆಂದು ಎಲ್ಲಿಲ್ಲದ ಶ್ರದ್ಧೆಯಿಂದ ಮಾಡಿದ್ದರೂ ವಿಧಿಯ ಮಾಯಾಜಾಲದಿಂದ ಬಿಡಿಸಿಕೊಳ್ಳಲಾಗಲಿಲ್ಲವಲ್ಲಾ? ಮನಸ್ಸು ಬಾರಿಬಾರಿಗೂ ತುಡಿದುಕೊಳ್ಳ ಹತ್ತಿತು. ಮನಸ್ಸಿಲ್ಲದ ಮನಸ್ಸಿನಿಂದ ಆಪರೇಶನ್ ಥಿಯೇಟರಿನಿಂದ ಬಂದ ಕರೆಗಾಗಿ ಅಘೋರ ಭಾರವಾದ ಹೆಜ್ಜೆಗಳನ್ನೆಳೆದುಕೊಳ್ಳುತ್ತಾ ಹೋದ. ಒಮ್ಮೆಲೇ ಮೇಜಿನ ಬಳಿಗೆ ಬಂದಾಗಲೇ ಅವನಿಗೆ ತಿಳಿವು. ಅದುವರೆವಿಗೆ ಹೇಗೆ ಹಾದಿ ಸಾಗಿತೋ ಗೊತ್ತೇ ಇರಲಿಲ್ಲ. ಅಘೋರ ತನ್ನ ಸ್ಥಿತಿಗೆ ತಾನೇ ಬೆರಗಾದ. ಕಣ್ಣುಗಳು ಮೇಜಿನ ಮೇಲೆ ಮಲಗಿದ್ದ ವ್ಯಕ್ತಿಯ ಮೇಲೆ ಹೊರಳಿದುವು. ಕ್ಷಣಕಾಲ ನಿಟ್ಟಿಸಿ ನೋಡಿ ನೋಟವನ್ನು ಅಸಿಸ್ಟೆಂಟ್ ಸರ್ಜನ್ನನ ಕಡೆ ಹೊರಳಿಸಿ ಕೇಳಿದ "ಪರೀಕ್ಷಿಸಿದ್ದೀರಾ ಡಾಕ್ಟರ್?"

"ಹೌದು. ಎಕ್ಸ್‌ರೇ ತೆಗೆದಿದ್ದೇವೆ. ಕರಳು 'ಟ್ವಿಸ್ಟ್' (Twist) ಆಗಿದೆ."

ಅಘೋರ ಪರೀಕ್ಷೆಯ ವರದಿಯನ್ನು ಒಂದೊಂದಾಗಿ ನೋಡಿದ. ಎಕ್ಸ್‌ರೇ ಪಟ ಕರುಳು ಟ್ವಿಸ್ಟ್ ಆದುದನ್ನು ತೋರಿಸುತಿತ್ತು. ವರದಿಯನ್ನೂ

ಓದಿ ನೋಡಿ ಮೈಮೇಲೆ ಹೊದಿಸಿದ್ದ ದುಪ್ಪಟಿಯನ್ನೆಳೆದು ಹೊಟ್ಟೆಯ ಮೇಲೆ ಯಾಂತ್ರಿಕವಾಗಿ ಬೆರಳಾಡಿಸುವಾಗ ಒಮ್ಮೆ ನೋಟ ಮೈಮೇಲೆಲ್ಲಾ ಹರಿದಾಡಿತು. ನೋಡೆ, ಕುಬ್ಜ! ಅಂಕುಡೊಂಕಿನ ದೇಹದ ಕುರೂಪಿ ಬಾಲಕ. ನೋಡುತಿದ್ದಂತೆ ಕ್ಷಣಕಾಲ ಮನಸ್ಸು ತಟಸ್ಥವಾಯಿತು. ವಿವೇಕಕ್ಕೂ ಧೈರ್ಯಕ್ಕೂ ಹೋರಾಟ ಆರಂಭವಾಯಿತು...ದೇಶಕ್ಕೆ ಅಗತ್ಯವಾಗಿ ಬೇಕಾಗಿದ್ದ ಸುಲೋಚನ ದಕ್ಕದೆ ಹೋಗಿರುವಾಗ ಇನ್ನು ಇವನು ಬದುಕಿ ದೇಶಕ್ಕೆ ಆಗಬೇಕಾದುದಾದರೂ ಏನು? ಇವನಿಗಾಗಿ ಶ್ರಮ ತೆಗೆದುಕೊಳ್ಳುವುದಾದರೂ ಏಕೆ? ಹೇಗೂ ಸಾವು ಸನ್ನಿಹಿತವಾಗಿದೆ, ನಾನೇಕೆ ಅದನ್ನು ತಡೆಗಟ್ಟಲಿ?... ವಿಚಾರಗತ್ತರಿಯಲ್ಲಿ ಸಿಕ್ಕ ಅಘೋರ ತತ್ತರಿಸಿದ.

"ನಿನ್ನ ತರ್ಕ ಸರಿಯಲ್ಲ." ಅಂತರಾತ್ಮ ಮರುಗಿ ನುಡಿಯಿತು.

"ನನ್ನ ಸೇವೆ ದುಡಿಯುವ ಕೈಗಳಿಗೆ ಮೀಸಲು." ದಿಟ್ಟತನದಿಂದ ಎದುರಿಸಿತು ಮನಸ್ಸು.

"ಅದೇನೆ ಇರಲಿ, ಜೀವನ್ಮರಣ ಹೋರಾಟದಲ್ಲಿ ಬಳಲಿದ ಬಾಲಕನಿಗೆ ಜೀವದಾನ ಮಾಡುವುದು ನಿನ್ನ ಮೊದಲ ಕರ್ತವ್ಯ."

"ಇವನ ಬದುಕಿನಿಂದಾಗುವ ಪ್ರಯೋಜನವಾದರೂ ಏನು ದೇವಾ?"

"ನಿನ್ನ ಕರ್ತವ್ಯದ ಪ್ರಶ್ನೆಯು ಮಾತ್ರ ನಿನಗೆ ಸೇರಿದ್ದು. ಇತರ ವಿಚಾರಗಳನ್ನು ಬದಿಗೊತ್ತಿ ಕರ್ತವ್ಯಶೀಲನಾಗು ಮಗೂ."

"ಅಂದರೆ ದೇಶಕ್ಕೊಬ್ಬ ಕುಬ್ಜನನ್ನು ನೀಡುವುದೇ ಸ್ವಾಮೀ?"

"ಕುಬ್ಜನೋ ಕುಂಟನೋ ಕುರೂಪಿಯೋ ಯಾರೇ ಆಗಿರಲಿ, ಅದನ್ನು ಕುರಿತು ಯೋಚಿಸುವ ಅಧಿಕಾರವನ್ನು ನಿನಗೆ ಕೊಟ್ಟವರಾರು ಮಗೂ?"

"ಆವನ ಬದುಕು ಒತ್ತಟ್ಟಗಿರಲಿ, ಬೆಳಗಿನಿಂದ ಇದುವರೆವಿಗೆ ಬಿಡುವಿಲ್ಲದೆ ದುಡಿದ ವ್ಯಕ್ತಿಗೆ ಇನ್ನೂ ಹೊರೆಯ ಮೇಲೆ ಹೊರೆಯನ್ನು ಹೊರಿಸುವುದೇ?"

"ಇದುವೇ ಜೀವನ ಮಗೂ."

ಅಘೋರ ಆ ಕ್ಷಣ ಥಿಯೇಟರಿನಿಂದ ಹೊರಗಡೆ ಬಂದ. ಬಾಗಿಲಲ್ಲಿ ಕಾದಿದ್ದ ತಂದೆತಾಯಿಗಳು ಖಿನ್ನ ಮನಸ್ಕರಾಗಿ ನಿಂತಿದ್ದರು. ಅಘೋರ ಅವರನ್ನು ನೋಡಿದೊಡನೆಯೆ ಕೇಳಿದ "ಬಾಲಕ ನಿಮ್ಮ ಮಗನೇ?"

"ಹೌದು."

"ಇವನಲ್ಲದೆ ಇನ್ನೆಷ್ಟು ಮಂದಿ ಮಕ್ಕಳಿದ್ದಾರೆ?"

"ಆರು ಮಂದಿ ಇದ್ದಾರೆ."

"ಗಂಡು ಮಕ್ಕಳೆಷ್ಟು?"

"ಇವನೂ ಸೇರಿ ನಾಲ್ವರು."

ಅಘೋರ ಕ್ಷಣಕಾಲ ಮಾತಿಲ್ಲದೆ ನಿಂತ. ಅವರಿಬ್ಬರೂ ಕೈ ಮುಗಿದು ಕೇಳಿ ಕೊಂಡರು. "ಸ್ವಾಮಿ ಹೇಗಾದರೂ ಬದುಕಿಸಿ ಕೊಡಿರಿ." ಮಾತು ಮುಗಿಯುವುದರೊಳಗಾಗಿ ತಾಯಿಯ ಕಣ್ಣಿನಲ್ಲಿ ಗಂಗೆ ಯಮುನೆಯರು ತುಂಬಿ ಹರಿದರು. ಅಘೋರನ ನೋಟ ಅವರ ಮೈಮೇಲೆ ಒಂದೆರಡು ಕ್ಷಣ ಹರಿದಾಡಿ ಬೇರೆಡೆಗೆ ಜಗಿಯಿತು. ಅವರ ಉಡಿಗೆ ತೊಡಿಗೆ ಮುಖಭಾವ ದೀನ ನೋಟ ದಾರಿದ್ರ್ಯವನ್ನು ಸೂಚಿಸುತಿತ್ತು. ಅಭ್ಯಾಸ ಬಲದಿಂದ "ದೇವರಿದ್ದಾನೆ, ಯೋಚಿಸಬೇಡಿರಿ." ಎಂದ.

ಅಘೋರ ಒಳ ಹೋದಾಗ ಹುಡುಗನಿಗೆ ಪ್ರಜ್ಞೆ ತಪ್ಪಿತ್ತು. ಅನಸ್ತೇಶಿಯ ಡಾಕ್ಟರು ಕರ್ತವ್ಯಶೀಲರಾಗಿದ್ದರು. ರೋಗಿಯ ಕೈಕಾಲುಗಳನ್ನು ಮೇಜಿಗೆ ಬಿಗಿದು ಕಟ್ಟಿಯಾಗಿತ್ತು. ತರುಣ ಡಾಕ್ಟರುಗಳ ವೃಂದ ಸುತ್ತುವರಿದು ನೆರೆ ದಿತ್ತು. ಇನ್ನು ಬೇಕು ಬೇಡಗಳ ಪ್ರಶ್ನೆ ಏಳುವಂತೆಯೇ ಇರಲಿಲ್ಲ. ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ತಂದೆ ತಾಯಿಯರು ಕುಬ್ಜ ಮಗನ ಪ್ರಾಣ ಭಿಕ್ಷೆ ಬೇಡಿದ ರೀತಿ ಕರುಣಾಜನಕವಾಗಿತ್ತು. ಮನೆ ತುಂಬಾ ಮಕ್ಕಳಿದ್ದು ಇವನ ಬದುಕಿಗಾಗಿ ಹಾತೊರೆಯುವುದೆಂದರೆ ಹುಚ್ಚುತನವಲ್ಲದೆ ಮತ್ತೇನಲ್ಲ ಎಂಬ ತಿರಸ್ಕಾರ ಭಾವನೆ ಮನದಲ್ಲಿ ಮೂಡಿತು. ಯಾಂತ್ರಿಕವಾಗಿ ತನ್ನ ಕೆಲಸಕ್ಕೆ ಕೈಹಚ್ಚಿದ. ಜೊತೆಗೆ ಸಹಾಯ ಹಸ್ತ ನೀಡುತಿದ್ದ ಅಸಿಸ್ಟೆಂಟ್ ಡಾಕ್ಟರು ಹೇಳಿದರು "ಇವನ ಮನೆಯವರು ಡಾ|| ಮದನ್ ಇರುವ ಬೀದಿಯಲ್ಲೇ ಇದ್ದಾರಂತೆ. ಡಾ|| ಮದನ್‌ರವರು ಆಪರೇಶನ್ ಮಾಡಿದ್ದರೆ ಒಳ್ಳೆಯದಿತ್ತು ಎಂಬ ಮನೋ ಭಾವ ಅವರಿಗೆ." ಮುಖದಲ್ಲಿ ಮಂದಹಾಸ ಮಿನುಗಿತು.

"ಹಾಗೆಂದರೆ?"

"ಅವರಿಗೆ ಡಾ|| ಮದನ್‌ರವರ ಪರಿಚಯ ಚೆನ್ನಾಗಿದೆ. ಅಂದಮೇಲೆ ಅವರೇ ಇದ್ದಿದ್ದರೆ ಒಳ್ಳೆಯದಿತ್ತು ಎಂಬ ಯೋಚನೆ ಅವರಿಗೆ."

"ಓಹೋ !" ಎನ್ನುತ್ತಾ ಅಘೋರ ನಕ್ಕುಬಿಟ್ಟ.

"ನನ್ನನ್ನು ಹುಡುಗನ ತಂದೆ ಕೇಳಿದರು ಡಾ॥ ಮದನ್ ಬರುವವರೆಗೆ ಕಾಯಲಾದೀತೆ? ಎಂದು. ಅವರು ಆಪರೇಶನ್ ಮಾಡುವುದು ಶುಕ್ರವಾರ ಎಂದೆ. ಅವರು ಸಪ್ಪೆಯಾದರು."

"ಪಾಪ, ಎಲ್ಲರಿಗೂ ಅವರವರದ್ದು ಹೆಚ್ಚು." ಎಂದರು ಅನಸ್ತೇಶಿಯಾ ಡಾಕ್ಟರು.

ಡಾ॥ ಅಘೋರ ಮಾತಾಡದೆ ತನ್ನ ಕೆಲಸವನ್ನು ಮುಂದುವರಿಸಿದ. ಅವರ ಹುಚ್ಚು ಆಸೆ ನಗು ತರಿಸಿತು. ಅದೇ ವಿಚಾರವನ್ನು ಕುರಿತು ಮೆಲಕು ಹಾಕುತ್ತಾ ಯೋಚಿಸಿದ...ನಮಗೆ ಬೇಕಾದುದು ಓಡಿ ಹೋಗುತ್ತದೆ. ನಮಗೆ ಬೇಡವಾದುದು ಅಂಟಿಕೊಳ್ಳುತ್ತದೆ....ಇದು ಜಗತ್ತು! ಇದು ಜೀವನ!ಮನಸ್ಸು ಹುಚ್ಚುಚ್ಚಾಗಿ ಪ್ರವಹಿಸಿತು. ಯಾವುದೋ ಕಾಣದ ಕೈ ಹೃದಯವನ್ನು ಹಿಸುಕಿದಂತಾಯಿತು. ಅಘೋರ ಯಾಂತ್ರಿಕವಾಗಿ ಕೈಯಾಡಿಸಿದ.

ನೋಟವು ಮತ್ತೊಮ್ಮೆ ಬಾಲಕನ ಮೈ ಮೇಲೆ ಹರಿದಾಡಿತು. ವಕ್ರ ದೇಹ ನಿರಾತಂಕವಾಗಿ ಉಸಿರಾಡುತಿತ್ತು. ಮುಂಗೈ ಮೇಲೆ ಮಾಗಿದ ಉದ್ದನೆಯ ಗಾಯದ ಗುರುತೊಂದು ಇತ್ತು. ಅದರ ಮೇಲೆಯೇ ಡ್ರಿಪ್ ನಳಿಕೆಯ ಮೂಲಕ ಮೈಗೆ ಹರಿಯುತಿತ್ತು. ವಿಲಕ್ಷಣವಾದ ಮುಖದಲ್ಲಿ ಕಣ್ಣುಗಳು ಅರೆ ಬಿರಿದಿದ್ದುವು. ಎದೆಯ ಗೂಡು ಮುರಿದ ಕುಕ್ಕೆಯಂತೆ ಮುಂದಕ್ಕೆ ಆತು ಕೊಂಡಿತ್ತು. ದಣಿದ ತನುಮನಗಳಿಗೆ ಹುಡುಗನ ವಿರೂಪ ಇನ್ನಷ್ಟು ಜಿಗುಪ್ಸೆ ಮೂಡಿಸಿತು. ಒಂದು ಕ್ಷುಲ್ಲಕ ಪ್ರಾಣಿಗಾಗಿ ನನ್ನ ಶಕ್ತಿ ಮತ್ತು ವೇಳೆಗಳೆರಡನ್ನೂ ಹಾಳು ಮಾಡುತಿದ್ದೇನಲ್ಲಾ ಎನ್ನಿಸಿತು. ಹೇಗೋ ಹಾಗೆ ಮುಗಿಸಿಬಿಟ್ಟರೆ ಸಾಕು ಎಂಬ ತುರಾತುರಿಯಲ್ಲಿ ಕೆಲಸ ಮುಂದುವರಿಯಿತು.

ಮೇಲಣ ಮಾಂಸದ ಪೊದರನ್ನು ಕತ್ತರಿಸಿ ನೆತ್ತರು ಸೂಸುವ ನರಗಳನ್ನು ಹಿಡಿದು ಕಟ್ಟಿ ಒಳಗಡೆ ಕೈಯಿಡುವಷ್ಟರಲ್ಲಿ ಪಾದರಕ್ಷೆಗಳ ಪಟ ಪಟ ಸದ್ದು ಮಾಡುತ್ತಾ ಮದನ್ ಒಳಗಡೆ ಬಂದ. ಮೇಜಿನ ಬಳಿಗೆ ಬಂದವನೇ—"ನನಗೆ ಕಾರಿಡಾರಿನಲ್ಲಿ ಯಮುನಾಚಾರ್ಯರನ್ನು ನೋಡಿ ಏಕೆ ಬಂದಿದ್ದೀರೆಂದು ಕೇಳಿದಾಗಲೇ ವಿಷಯ ಗೊತ್ತಾದುದು. ಪಾಪ, ನಿನಗಿಂದು ವಿಶ್ರಾಂತಿಯೇ ದೊರೆಯಲಿಲ್ಲವೆಂದು ತೋರುತ್ತೆ. ಗಂಟೆ ಐದೂವರೆಯಾಯಿತು."

"ಏನು ಮಾಡೋಣ? ಸರ್ಜನ್‌ಗಿರಿ!"

"ಪರೋಪಕಾರ!"

"ಹಾಗೆನ್ನುವುದಕ್ಕಿಂತ ಆತ್ಮಹತ್ಯ ಎಂದರೆ ತಪ್ಪಾಗಲಿಕ್ಕಿಲ್ಲ ಮದನ್!"

"ಆತ್ಮಹತ್ಯ? ನಿನಗೇನಾಗಿದೆ ಧಾಡಿ? ಕಲ್ಲು ಕಟ್ಟಿ ಕೆರೆಗೆ ಅದ್ದಿದರೂ ನೀನು ಅಷ್ಟು ಸುಲಭವಾಗಿ ಸಾಯಲಾರೆ!"

ಎಲ್ಲರೂ ಮುಸು ಮುಸು ನಕ್ಕರು. ಅಘೋರ ನಗು ನಗುತ್ತಾ ಹೇಳಿದ "ನಿನ್ನ ಯಮುನಾಚಾರ್ಯರಿಗೆ ಡಾ॥ ಮದನ್ ವಿನಾ ಬೇರೆ ಯಾರಲ್ಲೂ ನಂಬಿಕೆ ಯಿಲ್ಲ, ಮದನ್!"

"ಪಾಪ, ಅಂಥಾದ್ದೇನಿಲ್ಲ. ಆದರೂ, ಪರಿಚಯದವರು ಎಂದರೆ ಸಮಾ ಧಾನ ಇದ್ದೇ ತೀರಬೇಕಷ್ಟೆ?"

"ಡಾ॥ ಮದನ್ ಆಪರೇಶನ್ ಮಾಡಿದರೆ ಒಳ್ಳೆಯದಿತ್ತು ಎಂಬಷ್ಟು ಅಭಿಮಾನ ನಿನ್ನ ಮೇಲಿದೆ."

...ಜೀವದಾಸೆ ಇಲ್ಲದ ಪ್ರಾಣಿಯುಂಟೇ?...

"ಪಾಪ, ಬಡ ಕುಟುಂಬ."

ಕರುಳು ತಿರುಚಿಕೊಂಡಿದ್ದ ಭಾಗವನ್ನು ಪರೀಕ್ಷಿಸುತ್ತಾ ಅಘೋರ ಹೇಳಿದ "ನಮ್ಮ ಶಕ್ತಿಯನ್ನು ಇವರಿಗಾಗಿ ವ್ಯಯಿಸುವುದು ಏನು ಪ್ರಯೋಜನ ಮದನ್? ನಾವು ಯಾರಿಗಾಗಿ ಶಕ್ತಿ ಮೀರಿ ಕೆಲಸ ಮಾಡುತ್ತೇವೋ ಅವರನ್ನು ವಿನಾ ಕಾರಣ ನಮ್ಮಿಂದ ಕಿತ್ತುಕೊಂಡು ಯಾರು ಬೇಡವೋ ಅಂಥಹವರನ್ನು ಇಲ್ಲಿ ಒತ್ತೆ ಇಟ್ಟು ಬಿಡುತ್ತಾನೆ ಭಗವಂತ! ಒಮ್ಮೊಮ್ಮೆ ಅವನ ಮೇಲೇಕೆ ಸೇಡು ತೀರಿಸಿಕೊಳ್ಳಬಾರದು ಎನ್ನಿಸುವಷ್ಟು ರೋಷ ಬರುತ್ತದೆ! ನಮ್ಮ ಕಣ್ಣಿಗೆ ಮಣ್ಣೆರಚಿ ತೆರೆಮರೆಯಾಟ ಆಡುವ ಅವನು ಒಮ್ಮೆಯಾದರೂ ದೃಷ್ಟಿಗೆ ಬೀಳಬಾರದೆ? ನಿಜವಾಗಿಯೂ ಆ ದೇವರು ಎಂಬ ವಸ್ತು ನನ್ನ ಕೈಗೆ ಸಿಕ್ಕಿದ್ದಿದ್ದರೆ..." ಹಲ್ಲುಗಳು ಕಟಕಟನೆ ಸದ್ದು ಮಾಡಿದುವು.

ಒಂದು ವೇಳೆ.......?

ಒಡನೆ ನಗುವಿನ ಗುಲ್ಲು ಮಾಡು ಮುಟ್ಟುವಂತೆ ಮೊಳಗಿತು. ಅಘೋರ ಸ್ವಲ್ಪ ತಡೆದು ಮತ್ತೆ ಹೇಳಿದ "ಹೇಗೂ ಸಮಯಕ್ಕೆ ಸರಿಯಾಗಿ ಬಂದಿದ್ದೀ ಮದನ್. ಆಪರೇಶನ್ ಮುಗಿಯುವವರೆಗೂ ಇದ್ದುಹೋಗು. ಕೊನೆಗೆ ಯಾರಿಲ್ಲ

ದಿದ್ದರೂ ನೀನೇ ನನ್ನ ಮೇಲೆ ಅನುಮಾನಪಡಲಿಕ್ಕೊ ಸಾಕು. ಬಡವನ ಸಿಟ್ಟು ದವಡೆಗೆ ಮೂಲ ಕಣಪ್ಪಾ!"

"ತುಂಟ ಕುದುರೆಗೆ ಕಡಿವಾಣ ಇರುವುದು ಲೇಸು."

"ಹೌದು ಕಣಯ್ಯಾ, ಹೌದು." ಎಂದಃ ರಾಗವಾಗಿ ಅಣಕದ ದನಿಯಲ್ಲಿ ಹೇಳಿದ ಅಘೋರ. ಕಣ್ಣು ನೋಟ ಬಾಲಕನ ಮುಖದತ್ತ ಹರಿದಾಗ ಕಪೋಲದ ಮೇಲೆ ಕಪ್ಪನೆಯ ಅಗಲವಾದ ಮಚ್ಚೆಯನ್ನು ನೋಡಿ...ಈ ಚಂದಕ್ಕೆ ದೃಷ್ಟಿಬೊಟ್ಟು ಬೇರೆ....ಎಂದೆನಿಸಿ ಮನದಲ್ಲೇ ನಸುನಕ್ಕು ಕೆಲಸ ಮುಂದುವರಿಸಿದ. ಮರುಕ್ಷಣದಲ್ಲಿ ಕನಸಿನ ಲೋಕದಲ್ಲಿ ಸುಳಿದು ಕರವಸ್ತ್ರದೊಡನೆ ಕೈಯಾಡಿಸಿ ಟಾ! ಟಾ! ಹೇಳಿ ಹೋದ ಸುಲೋಚನಳ ಅಕಳಂಕ ಮುಗ್ಧಮೂರ್ತಿ ಮನದಲೆಯಲ್ಲಿ ಮೂಡಿ ನಿಂತಿತು.

ಹಾ, ಕ್ರೂರ ವಿಧಿ!

ಎದೆಯಾಳದಿಂದ ನೀಳವಾದ ನಿಟ್ಟುಸಿರೊಂದು ತನಗರಿಯದಂತೆಯೇ ತಪ್ಪಿಸಿಕೊಂಡಿತು.

ಅಧ್ಯಾಯ

೨೧

ಡಾ|| ಅಘೋರನದು ಸರ್ಜರಿಯಲ್ಲಿ ಎತ್ತಿದ ಕೈ. ಡಾ|| ಭಾರ್ಗವಾರವರಿಗೆ ಸರಿಸಮಾನವಾಗಿ ಕೆಲಸ ಮಾಡುತಿದ್ದ ಅವನನ್ನು ಡಾ|| ಭಾರ್ಗವಾ ಮನಸಾರೆ ಹೊಗಳುತಿದ್ದುದುಂಟು. ಆತ್ಮೀಯ ಗೆಳೆಯರಾದ ಮದನ್ ರತನ್ ಜಾನಕೀರಾಂ ಸುಧೀರರೂ ಅಘೋರನಂತೆ ಕಲಿಕೆಯಲ್ಲಿ ನಿಸ್ಸೀಮರಾಗಿದ್ದರೂ ಅವರೆಲ್ಲರನ್ನೂ ಮೀರಿಸಿ ಮುನ್ನಡೆದಿದ್ದ ಅಘೋರ.

ಮೊದಲನೆಯ ವರ್ಷದ ಹತ್ತು ತಿಂಗಳು ಸುಲಲಿತವಾಗಿ ಕಳೆದು ಹೋದುವು. ಕಲಿಕೆಯ ಪ್ರಗತಿಪಥದಲ್ಲಿ ತೀವ್ರವಾಗಿ ಮುನ್ನಡೆಯುತಿದ್ದ ಅಘೋರನಿಗೆ ಹೆಮ್ಮರವೊಂದು ದಾರಿಗಡ್ಡಲಾಗಿ ಬಿದ್ದಂತೆ ತಂದೆ ವಿಮಲ್ ದಾಸ್ ದಿನೇ ದಿನೇ ಹಾಸಿಗೆ ಹಿಡಿಯ ಹತ್ತಿದ. ವಯೋಧರ್ಮಕ್ಕನುಗುಣವಾಗಿ ಮುಪ್ಪಿನ ಹಾದಿ ಹಿಡಿದ ಅವನು ರೋಗಿಗಳ ಗಣಿಯಾದ. ಅದರ ಜೊತೆಗೆ ಅಂಗಡಿಯ ಜವಾಬ್ದಾರಿಯೂ ಕಾಡ ತೊಡಗಿತು. ಬೇರೆ ಯಾರಿಗಾದರೂ ಒಪ್ಪಿಸೋಣವೆಂದರೆ ವಿಮಲಾದಾಸ್ ಒಪ್ಪುತ್ತಿರಲಿಲ್ಲ. ಸಾಧ್ಯವಾದಾಗ ಹೋಗಿ ವ್ಯಾಪಾರ ನಡೆಸುವುದು ಇಲ್ಲವಾದಾಗ ಮುಚ್ಚಿ ಬಿಡುವುದು ಈ ರೀತಿಯಲ್ಲಿ ವಿಮಲ್‌ದಾಸನ ದಿನಚರಿ ಸಾಗತೊಡಗಿತು.

ತನ್ನೆಲ್ಲಾ ಸ್ಥಿತಿಗತಿಗಳನ್ನು ಆದ್ಯಂತವಾಗಿ ಪರೀಕ್ಷಿಸಿ ಹಿರಿಯ ವೈದ್ಯರ ಆದೇಶದಂತೆ ತಾನೇ ಚಿಕಿತ್ಸೆ ನೀಡುತಿದ್ದ ಮಗನ ಬಗ್ಗೆ ವ್ಯಾಪಾರ ಕೈಕೊಳ್ಳಲಿಲ್ಲವಲ್ಲಾ ಎಂಬ ಕೊರಗು ಮಾಯವಾಗಿ ನನ್ನ ಮಗ ಧೀಮಂತ ಡಾಕ್ಟರು ಎಂಬ ಎಲ್ಲಿಲ್ಲದ ಹೆಮ್ಮೆ ವಿಮಲ್‌ದಾಸನ ಹೃದಯವನ್ನು ಉಕ್ಕೇರಿಸಿತು. ವ್ಯಾಪಾರ ಹೋದರೂ ಹೋಗಲಿ ಎಂಬ ಸಮಾಧಾನದ ಉಸಿರು ಬಿಟ್ಟು ಹಾಯಾಗಿದ್ದ ವಿಮಲ್‌ದಾಸ್.

ಸಂಸಾರಿಕ ತೊಂದರೆಯೇನೇ ಇದ್ದರೂ ಅದನ್ನು ಗಮನಿಸದೆ ಅಘೋರ ತನ್ನ ಕಲಿಕೆ ಕೆಲಸ ಕಾರ್ಯಗಳನ್ನು ಯಥಾರೀತಿ ಮುಂದುವರಿಸಿದ. ಬೆಳಗಿನಿಂದ

ರಾತ್ರಿಯವರೆಗೂ ಬಿಡುವಿಲ್ಲದ ದುಡಿತ. ಒಮ್ಮೊಮ್ಮೆ ಮನೆಯಲ್ಲಿ ಒಂದೆರಡು ಗಂಟೆಗಳನ್ನು ಕಳೆಯುವುದೂ ದುಸ್ತರವಾಗುತಿತ್ತು. ಹಾಗಾದಾಗಲೆಲ್ಲಾ ನಂದಾ "ಇದೇನಪ್ಪಾ ಅಘೂ? ಹೀಗಾದರೆ ಹೇಗೆ?" ಎನ್ನುತಿದ್ದಳು ಬೇಸರ ದಿಂದ.

"ನಾನೇನಮ್ಮಾ ಮಾಡಲಿ?" ಎನ್ನುತ್ತಾ ಅಘೋರ ನಕ್ಕು ಬಿಡುತಿದ್ದ.

"ಕೆಲವು ದಿನ ರಜೆ ತೆಗೆದುಕೊ." ಎಂಬುದು ವಿಮಲ್‌ದಾಸನ ಸಲಹೆ.

"ವಿನಾ ಕಾರಣ ರಜೆಯೇಕಪ್ಪಾ? ಸಮಯ ಸಂದರ್ಭ ಬಿದ್ದಾಗ ತೆಗೆದು ಕೊಳ್ಳುವೆ."

"ಅತೀ ದುಡಿಮೆ ಬೇಗನೆ ಮುಪ್ಪು ಹಿಡಿಸೀತು!"

"ಓ ಹೋ ಹೋ!" ಎನ್ನುತ್ತಾ ಅಘೋರ ಕಿಲಕಿಲನೆ ನಕ್ಕುಬಿಡುತಿದ್ದ.

ರಾತ್ರಿ ಹೊತ್ತಾಗಿ ಹಾಸಿಗೆ ಸೇರುವಾಗ ಎಷ್ಟೋ ಸಲ ಅರವಿಂದಾ ನಿದ್ದೆ ಹೋಗಿರುತಿದ್ದಳು. ಪುಸ್ತಕ–ಪುಸ್ತಕ ಎಲ್ಲಿ ನೋಡಿದರೂ ಪುಸ್ತಕ! ಬಿಡುವಿನ ವೇಳೆಯಲ್ಲಿ ಪುಸ್ತಕ ಹಿಡಿದುಕೊಂಡನೆಂದರೆ ಮುಗಿಯಿತು. ವೇಳೆಯ ಕಡೆ ಗಮನವೇ ಹರಿಯುತ್ತಿರಲಿಲ್ಲ. ನಂದಾ ಹತ್ತಾರು ಬಾರಿ ಕಾಟ ಕೊಟ್ಟು ಊಟಕ್ಕೆ ಕರೆದೊಯ್ಯುವ ಪ್ರಸಂಗವೂ ಬಂದುದುಂಟು. ಅವಳ ಬೇಸರವನ್ನು ನಕ್ಕು ನಿವಾರಿಸಿಬಿಡುತಿದ್ದ ಅಘೋರ.

ಅಂದು ರತನ್ ಮದನ್‌ರವರೊಂದಿಗೆ ಅಘೋರ ಲೈಬ್ರರಿಯಲ್ಲಿ ಕುಳಿತು ಪುಸ್ತಕಾವಲೋಕನದಲ್ಲಿ ತೀವ್ರ ಮಗ್ನನಾಗಿದ್ದ. ಪರೀಕ್ಷೆಯು ಬಳಿ ಸಾರಿದ್ದುದ ರಿಂದ ಎಲ್ಲರೂ ಹೆಚ್ಚಿನ ಗಮನವನ್ನು ಓದಿನಲ್ಲಿ ಹೊರಳಿಸಿದ್ದರು. ದುಂಡು ಮೇಜಿನ ಸುತ್ತ ಸುತ್ತುವರಿದು ಕುಳಿತಿದ್ದರು. ಬಾಗಿಲ ಬಳಿ ಪಾದ ಸಪ್ಪಳ ಕೇಳಿ ಬರುತ್ತಲೂ ಎಲ್ಲರ ಗಮನವೂ ಅತ್ತ ಹೊರಳಿತು. ಡಾ|| ಸೌಮಾ ಒಳ ಬರುತ್ತಾ ಮೆಲು ದನಿಯಲ್ಲಿ–"Sorry Doctor!"

"ಪರವಾಯಿಲ್ಲ ಬನ್ನಿ." ಎಂದ ಮದನ್.

"ನಿಮ್ಮ ಓದಿಗೆ ತೊಂದರೆಯಾಯಿತೇ?"

"ಅಂಥಾದ್ದೇನಿಲ್ಲ." ಎಂದ ಅಘೋರ.

ಕುಳಿತುಕೊಳ್ಳುತ್ತಾ ಸೌಮಾ ಕೇಳಿದಳು "ನಿಮ್ಮ ಔರಸ ಪುತ್ರ ಹೇಗಿ ದ್ದಾನೆ ಮದನ್?"

"ಅವನು ಚೆನ್ನಾಗಿದ್ದಾನೆ. ವಂದನಾ ಇನ್ನೂ ಚೇತರಿಸಿಕೊಳ್ಳಲಿಲ್ಲ."

"ಡಾ|| ಚಲುವಾಂಬಾರವರಿಗೆ ತೋರಿಸಿದ್ದೀರಾ ?"

"ಡಾ|| ಸೌಮ್ಯಾ ಇರುವಾಗ ಡಾ|| ಚಲುವಾಂಬಾ ಏಕೆ ?" ಅಘೋರ ನಡುವೆ ಬಾಯಿ ಹಾಕಿದ.

"ನಮಗೆ ಬೇಕಾಗಿರುವುದು ಚೆಲುವಲ್ಲ–ಸೌಮ್ಯ !"

ಅವನ ತಿಳಿಹಾಸ್ಯ ಎಲ್ಲರ ಮುಖದಲ್ಲೂ ಎಳೆನಗೆಯನ್ನು ಅರಳಿಸಿತು.

"ನಿಮ್ಮ ಮಗ ಹೇಗಿದ್ದಾನೆ ?" ರತನ್ ಸೌಮ್ಯಳನ್ನು ಕೇಳಿದ.

"ಚೆನ್ನಾಗಿದ್ದಾನೆ." ಸೌಮ್ಯಾ ನಕ್ಕು ನುಡಿದಳು.

"ನೀವಿಲ್ಲಿ ಬಂದಾಗ ಅವನು ಗಲಾಟೆ ಮಾಡುವುದಿಲ್ಲವೇ ?" ಅಘೋರ ಕೇಳಿದ.

"ಇಲ್ಲ. ಅವನಿಗೆ ಅಭ್ಯಾಸವಾಗಿದೆ."

"ಓ ! ಅವನಿಗೇನು ? ಮನೆಯಲ್ಲಿ ತಾಯಿಯಿದ್ದಾರೆ ಸೊಗಸಾಗಿ ನೋಡಿಕೊಳ್ಳುತ್ತಾರೆ." ಮದನ್ ನುಡಿದ.

"ಹಾಗಿದ್ದರೆ ಬಿಡಿ. ನೀವು ಹತ್ತಾದರೂ ಹೆರಬಹುದು !"

"ಅದೇನು ಹಂದಿಯೆ ?" ಹಾಗೆಂದರೂ ಸೌಮ್ಯಳ ಮುಖ ಕೆಂಪಡರಿತು.

ಓದು ಮುಗಿಯುವ ಹೊತ್ತಿಗೆ ತೆಂಕಣಗಾಳಿ ತಣ್ಣಗೆ ಬೀಸುತಿತ್ತು. ಎಲ್ಲರೂ ಗೃಹಾಭಿಮುಖವಾಗಿ ಹೊರಟರು. ಮರುದಿನ ಮದನ್ ಮಡದಿಯೊಡನೆ ಬಂದಿಳಿದ. ಅವಳಿಗಾಗಿ ಡಾ|| ಸೌಮ್ಯಾ ದಾರಿ ನೋಡುತ್ತಾಳೆಂಬುದನ್ನು ತಿಳಿದಿದ್ದ ಮದನ್ ಐದು ನಿಮಿಷ ಮುಂಚಿತವಾಗಿಯೇ ಬಂದಿದ್ದ. ಕಾರಿಡಾರಿನಲ್ಲಿ ರತನ್ ಅಘೋರ್ ಜೋಡಿಯಾಗಿ ಬರುತಿದ್ದಾಗ ಮದನ್ ಕಣ್ಣಿಗೆ ಬೀಳುತ್ತಲೂ ಇಬ್ಬರೂ ಇತ್ತಲೇ ಬಂದರು. ಹೆಂಡತಿಯನ್ನು ಸೌಮ್ಯಳಿಗೊಪ್ಪಿಸಿ ಮದನ್ ಲೇಬರ್ ವಾರ್ಡಿನ ಹೊರಗಡೆ ಕಾಯುತ್ತಾ ನಿಂತಿದ್ದ.

"ಏನಪ್ಪಾ, ಸಮಾಚಾರ ?"

"ಡಾ|| ಚಲುವಾಂಬ ವಂದನಳನ್ನು ಪರೀಕ್ಷಿಸುತಿದ್ದಾರೆ."

"ಓ, ಹಾಗೇನು ?"

"ನಿನಗೆ ಗೊತ್ತೆ ? ಅಂಕಲ್ ಜರ್ಕ ಬಂದಿದ್ದಾನೆ."

"ಈಗೇಕೆ ಬಂದ?"

"ಅವನ ಹೆಂಡತಿ ತುಂಬಿದ ಗರ್ಭಿಣಿಯಂತೆ. ಇಲ್ಲಿ ಬಿಟ್ಟು ಹೋಗಲು ಬಂದಿದ್ದಾನೆ."

"ಪಾಪ, ಜರ್ಾ!"

ಎಲ್ಲರ ಮುಖದಲ್ಲೂ ನಗುವಿನಲೆ ಉಕ್ಕಿಹರಿಯಿತು. ನಗುವಿನಲೆ ಅಡಗುವುದರೊಳಗಾಗಿ ಜಾನಕೀರಾಂ ಅಲ್ಲಿ ಪ್ರತ್ಯಕ್ಷನಾದ. ಎಲ್ಲರೂ ಒಂದು ಗೂಡಿ ಪ್ರಶ್ನೆ ಹಾಕದರು. "ಏನಪ್ಪಾ, ಸಮಾಚಾರ?" ಎಲ್ಲರ ಮುಖದಲ್ಲೂ ತುಂಟ ನಗೆ ಲಾಸ್ಯವಾಡುತಿತ್ತು.

"ಕೊಂಚ ಕಾಲವಾದರೂ ಓದಿನ ಕಡೆ ಗಮನ ಕೊಡಬಾರದಿತ್ತೇ?" ರತನ್ ಹುಬ್ಬೇರಿಸಿ ಕೇಳಿದ. ಪುನಃ ಎಲ್ಲರ ಮುಖದ ಮೇಲೂ ತುಂಟ ನಗೆ ನಲಿಯಿತು. ಅಷ್ಟರಲ್ಲಿ ಜಾನಕೀರಾಮನ ಹೆಂಡತಿ ಒಬ್ಬ ಹಿರಿಯ ಹೆಂಗಸೊಡನೆ ಬಂದಳು. ಅವಳನ್ನು ನೋಡುತ್ತಲೂ ತುಂಟತನ ಹಾಗೇ ಅಡಗಿ ಹೋಯಿತು. ಅವಳ ಮುಖ ನೋಡುವುದರೊಳಗಾಗಿ ನೋವು ಆರಂಭವಾಗಿರುವುದು ಗೊತ್ತಾಗುವಂತಿತ್ತು. ಎಲ್ಲರ ದೃಷ್ಟಿಯೂ ಜಾನಕೀರಾಮನನ್ನು ಪ್ರಶ್ನಾರ್ಥಕವಾಗಿ ನಿಟ್ಟಿಸಿದುವು.

"ಹೌದು. ಇದೇ ತಾನೆ ನೋವು ಆರಂಭವಾಗಿದೆ." ಎಂದ ಜಾನಕೀರಾಂ.

"ಒಳ್ಳೇ ಚೆನ್ನಾಯಿತು! ನಿನ್ನೆ ಬಂದಿದ್ದೀಯೆ. ಇಂದು ನೋವು ಕಾಣಿಸಿಕೊಂಡಿದೆ. ಒಂದು ವೇಳೆ ಹಾದಿಯಲ್ಲಾಗಿದ್ದಿದ್ದರೆ?"

ಪುನಃ ಕಿಲಕಿಲ ನಗುವಿನಲೆಯೆದ್ದಿತು. ಅಘೋರ ಒಳ ಹೋಗಿ ಒಂದು ಕುರ್ಚಿಯನ್ನು ತಂದು ಅವಳಿಗೆ ಕುಳಿತುಕೊಳ್ಳುವಂತೆ ಹೇಳಿದ. ಅಷ್ಟರಲ್ಲಿ ಡಾ|| ಚಲುವಾಂಬ ಹೊರಬಂದು ಮದನನನ್ನು ಅಭಿನಂದಿಸಿ ನುಡಿದಳು "ನೀವು ಇನ್ನೊಮ್ಮೆ ತಂದೆಯಾಗಲಿದ್ದೀರಿ!"

ಎಲ್ಲೆಲ್ಲೂ ಪುನಃ ನಗುವಿನ ಹೊನಲು. ಎಲ್ಲರೂ ಮದನನಿಗೆ ಅಭಿನಂದನೆಯ ಸುರಿಮಳೆಯನ್ನು ಕರೆದರು. ಜಾನಕೀರಾಂ ಸತಿಯನ್ನು ಡಾ|| ಚಲುವಾಂಬಳಿಗೆ ಒಪ್ಪಿಸಿದ. ಅವಳನ್ನು ಒಳಗಡೆ ಕರೆದುಕೊಂಡು ಹೋಗುತ್ತಲೂ ಮದನ್ ಅಂದ "ಮೊದಲನೆಯ ಅಧ್ಯಾಯವನ್ನು ಒಂದೇ ಬಾರಿಗೆ ಮುಗಿಸಿಕೊಳ್ಳುವುದು ಲೇಸು."

"ನಿಜ ; ನಿಜ." ಎಲ್ಲರೂ ಅದನ್ನು ಅನುಮೋದಿಸಿದರು.

ಒಳಗಿನಿಂದ ಹೊರಬಂದ ವಂದನಾಳ ಮುಖದಲ್ಲಿ ದುಗುಡದ ಮುದ್ರೆಯೊತ್ತಿದ್ದು ಅವಳು ಯೋಚನೆಗೊಳಗಾಗಿದ್ದಾಳೆಂಬುದು ಸ್ಪಷ್ಟವಾಗಿ ತಿಳಿಯುವಂತಿತ್ತು. ಮೊದಲ ನೋಟಕ್ಕೆ "ಅಯ್ಯೊ" ಎನ್ನಿಸಿದರೂ ಒಂದೇ ಬಾರಿಗೆ ಮೊದಲನೆಯ ಅಧ್ಯಾಯ ಮುಗಿಸಿಕೊಳ್ಳುವುದು ಲೇಸು ಎಂಬ ಸಿದ್ಧಾಂತ ಸಮಾಧಾನದ ತಿಳಿನಗೆಯನ್ನು ಮೂಡಿಸಿತ್ತು. ಎಲ್ಲರೆದುರಿಗೆ ಮುಖವನ್ನು ತೋರಿಕೊಳ್ಳಲಾರದ ವಂದನಾ ಅತ್ತ ತಿರುಗಿ ನಿಂತು ಉಕ್ಕಿ ಬಂದ ಕಂಬನಿಯನ್ನು ಕಾಣದಂತೆ ಒರಿಸಿಕೊಂಡಳು.

ಮದನ್ ಸತಿಯೊಡನೆ ಹಿಂದಿರುಗುತ್ತಲೂ ಅಘೋರ ತನ್ನ ಕೆಲಸಕ್ಕೆ ಗಮನ ಕೊಟ್ಟ. ದಾದಿಯೊಬ್ಬಳು ಓಡುತ್ತಾ ಬಂದು ಹೇಳಿದಳು "ಬೆಳಿಗ್ಗೆ ಆಪರೇಶನ್ ಆದ ವ್ಯಕ್ತಿಯೊಬ್ಬರಿಗೆ ರಕ್ತಸ್ರಾವವಾಗುತ್ತಿದೆ!"

ಅಘೋರನ ಕಣ್ಣು ಗಡಿಯಾರದ ಮೇಲೆ ಹೊರಳಿತು. ಹೊತ್ತು ಆಗಲೇ ಒಂದರ ಅಂಚನ್ನು ದಾಟಿತ್ತು. ಹೊಟ್ಟೆಯಲ್ಲಿ ಹಸಿವಿನ ತಾಳ. ಬಿಸಿಲ ಬೇಗೆಯೊಡನೆ ಬಿಳಿಯ ಕೋಟಿನ ಭಾರ. ಮನದಲ್ಲಿ ಜಿಗುಪ್ಸೆ ಮೂಡಿದರೂ ತೋರ್ಗೊಳ್ಳದೆ ಆ ವ್ಯಕ್ತಿಯನ್ನು ಆಪರೇಶನ್ ಥಿಯೇಟರಿಗೆ ಕರೆತರಲು ಹೇಳಿದ. ಬಹುಮಂದಿ ಡಾಕ್ಟರೆಲ್ಲಾ ಮನೆಗೆ ಹೋಗಿಯಾಗಿತ್ತು. ತಕ್ಷಣ ಸಹಾಯಕ ಡಾಕ್ಟರಾರೂ ಸಿಕ್ಕಲಿಲ್ಲ—ಹೋಗುವವರೆಲ್ಲಾ ಆಗಲೇ ಹೋಗಿಬಿಟ್ಟಿದ್ದಾರೆ. ಬರುವವರಿನ್ನೂ ಬಂದಿಲ್ಲ—ಅಘೋರ ತಾನೇ ಅವನ ಹೊಲಿಗೆಯನ್ನು ಬಿಚ್ಚಿತೆಗೆದು ರಕ್ತಸ್ರವಿಸುವ ನರಗಳನ್ನು ಹಿಡಿದು ಕಟ್ಟಿ ಆಪರೇಶನ್ ಮುಗಿಸಿದ. ವ್ಯಕ್ತಿ ದೃಢಕಾಯನಾಗಿದ್ದರೂ ನೋವು ಸಹಿಸಿಕೊಳ್ಳದೆ ಅರಚುತ್ತಾ ಒದ್ದಾಡುತಿದ್ದ ರೀತಿ ಮನಸ್ಸಿಗೆ ಕಿನಿಸಿಗೆ ಮೂಡಿಸಿತು. "ಇದೆಲ್ಲೋ ಹೆಣ್ಣಿಗಿಂತ ಕಡೆ!" ಎಂದುಕೊಳ್ಳುತ್ತಾ ಹೊರ ಬರುವಷ್ಟರಲ್ಲಿ ಎಮರ್ಜನ್ಸಿ ಆಪರೇಶನ್ನೊಂದು ಕಾದಿತ್ತು. ರಸ್ತೆಯ ಅಪಘಾತಕ್ಕೊಳಗಾದ ಹದಿನಾರರ ತರುಣನ ಮುರಿದ ಕಾಲು ಜೋಲಾಡುತಿತ್ತು. ಹುಡುಗನನ್ನು ನೋಡುತ್ತಲೂ ಹೊಟ್ಟೆಯ ತಾಳವೆಲ್ಲಾ ಎಲ್ಲಿ ಅಡಗಿತೋ ಏನೋ. ಅಘೋರ ಆಕ್ಷಣ ಎಲ್ಲಿಲ್ಲದ ಶ್ರದ್ಧೆಯಿಂದ ಹುಡುಗನ ಕಾಲನ್ನು ಜೋಡಿಸಿ ಬ್ಯಾಂಡೇಜ್ ಬಿಗಿದ. ಅಲ್ಲಲ್ಲಿ ಆದ ಗಾಯಗಳಿಗೆ ಹೊಲಿಗೆ ಹಾಕಿ ಸೂಜಿ ಮದ್ದು ಚುಚ್ಚಿ, ಅವನಿಗೆ

ಬೇಕಾದ ಆಹಾರಪಾನಾದಿಗಳಿಗೂ ಹಾಸಿಗೆ ಮಂಚಗಳಿಗೂ ವ್ಯವಸ್ಥೆಮಾಡಿ ಹೊರಹೊರಡುವಷ್ಟರಲ್ಲಿ ಹೊತ್ತು ನಾಲ್ಕರ ಅಂಚನ್ನು ತಬ್ಬುವುದರಲ್ಲಿತ್ತು.

"ಇಂಥ ಹುಡುಗರಿಗೆ ನಾವು ಸೇವೆ ಸಲ್ಲಿಸಿದರೆ ದೇಶಕ್ಕೆ ಶಕ್ತಿ ನೀಡಿದಂತೆ ಎಂದು ತನಗೆ ತಾನೆ ಹೇಳಿಕೊಂಡ ಅಘೋರ. ಮನೆ ಮುಟ್ಟುವಾಗ ನಾಲ್ಕೂವರೆಯಾಗಿತ್ತು. ಆದೇ ತಾನೆ ಕಾಲೇಜಿನಿಂದ ಹಿಂದಿರುಗಿದ್ದ. ಅರವಿಂದಾ ಬಚ್ಚಲು ಮನೆಯಲ್ಲಿ ಮುಖ ತೊಳೆದುಕೊಳ್ಳುತಿದ್ದಳು. ವಿಮಲ್‌ದಾಸ್ ಹಾಸಿಗೆಯಿಂದಲೇ ಕರೆದು ಹೇಳಿದ "ಅಘೂ, ಇಷ್ಟೊತ್ತಾದರೂ ಊಟ ಮಾಡಲಿಲ್ಲವಲ್ಲಾ ? ಹೀಗಾದರೆ ಹೇಗೆ ಮಗೂ ?"

"ಒಂದೇ ಬಾರಿಗೆ ಎರಡು ಪಟ್ಟು ತಿಂದರಾಯಿತು!" ಅಘೋರ ಹಾಸ್ಯದ ಚಟಾಕಿ ಹಾರಿಸಿ ನೀರು ಮನೆಗೆ ಹೋದ. ಹೊರಬರುವಷ್ಟರಲ್ಲಿ ಊಟ ಅಣಿಯಾಗಿತ್ತು. ಹಸಿವು ಅಡಗಿದ ಮೇಲೆ ಊಟ ಹಿತವಾಗುವುದೆಂತು? ಹೇಗೋ ಹಾಗೆ ನಾಲ್ಕು ತುತ್ತು ನುಂಗಿ ಮುಗಿಸಿ ಕೊಂಡು ತನ್ನ ಕೊಠಡಿಗೆ ಹೋಗಿ ತುಸು ವಿಶ್ರಾಂತಿಗಾಗಿ ಹಾಸಿಗೆಯ ಮೇಲೆ ಬಿದ್ದುಕೊಂಡ. ಬೆಳಗಿನಿಂದ ಅರ್ಧಗಂಟೆ ಕುಳಿತುಕೊಳ್ಳಲೂ ಬಿಡುವಾಗಿರಲಿಲ್ಲ. ದಣಿದ ಮೈ ಹಾಸಿಗೆಯನ್ನು ಬಯಸಿತ್ತು. ಅರವಿಂದಾ ಅಡುಗೆ ಮನೆಯ ಕಳೆದುಳಿದ ಕೆಲಸವನ್ನು ಮುಗಿಸಿಕೊಂಡು ಒಳಬಂದು ಪಕ್ಕದಲ್ಲಿ ಕುಳಿತುಕೊಂಡಳು.

ನದಿಗಳ ಪವಿತ್ರ ಸಂಗಮದಂತೆ ನಾಲ್ಕು ಕಣ್ಣುಗಳೂ ಕೂಡಿ ನಲಿದುವು. ಅಘೋರ ನಸು ನಗು ಬೀರಿ–"ಮಾಸ್ತರಿಣೀ ! ನಿಮ್ಮ ತರಗತಿಗಳು ಹೇಗೆ ನಡೆಯುತ್ತಿವೆ ?"

"ಈ ಹುಡುಗರ ಸಹವಾಸ ಕಷ್ಟ." ನಸುನಗು ಬೀರಿದಳು ಅರವಿಂದಾ.

"ತುಂಬ ಗಲಾಟೆ ಮಾಡುತ್ತಾರೆಯೋ ?"

"ಹಾಗೇನಿಲ್ಲ. ಹೆಂಗಸರು ಎಂಬ ಗೌರವ ಇಟ್ಟುಕೊಂಡಿದ್ದಾರೆ. ಆದರೂ, ಇವರನ್ನು ನಿಭಾಯಿಸುವುದು ಸಾಮಾನ್ಯವಲ್ಲ."

"ಪ್ರತಿಯೊಂದು ಭಾಗವಿಭಾಗದಲ್ಲಿಯೂ ಹೋರಾಟ ಇದ್ದೇ ಇದೆ. ಹೋರಾಟವಿಲ್ಲದೆ ಜೀವನ ಇಲ್ಲವೇ ಇಲ್ಲ ಅರವಿಂದಾ."

"ಆದರೂ..."

"ಇರಲಿ...ಪ್ರತಿಯೊಬ್ಬರ ಜೀವನವೂ 'ಆದರೆ' ಮಯ. ಆದರೆ ಇಲ್ಲದ ಬಾಳುಂಟೇ ಅರವಿಂದಾ ?"

"ನಿಜ, ಅಘೂ."

"ಉಪಾಧ್ಯಾಯಗಿರಿ ಹೇಗೆನಿಸುತ್ತೆ ನಿನಗೆ ?"

"ಕೆಲವು ಬಾರಿ ಹಿತವಾಗಿರುತ್ತೆ. ಉಳಿದ ಕಾಲ ಸಾಕಾಗಿ ಬಿಡುತ್ತೆ."

"ಅನುಭವ ಬರಬೇಕಾದರೆ ಮಾಡಬೇಕು ಅರವಿಂದಾ."

ಸ್ವಲ್ಪ ಹೊತ್ತು ಸುಮ್ಮನೆ ಕುಳಿತ ಅರವಿಂದಾ ನಸುನಗುತ್ತಾ ಹೇಳಿದಳು. "ನಾನು ಅಲ್ಲಿಂದ ಹಿಂದಿರುಗುವ ಸ್ವಲ್ಪ ಮುಂಚೆ ಲೈಬ್ರರಿಗೆ ಹೋಗಿದ್ದೆ. ಒಂದೆರಡು ಪುಸ್ತಕ ಮಗುಚಿ ಹಾಕುವುದರೊಳಗಾಗಿ ಏಳೆಂಟು ಮಂದಿ ಹುಡುಗರು ಅಲ್ಲಿಗೆ ಬಂದರು. ನನ್ನನ್ನು ನೋಡಿದೊಡನೆಯೇ ಎಲ್ಲರೂ ಒಂದೇ ಬಾರಿಗೆ ನುಡಿದರು "ನಮಸ್ಕಾರ ಮೇಡಂ-ರವರಿಗೆ." ನಾನೂ ಪ್ರತಿ ನಮಸ್ಕಾರ ಹೇಳಿದೆ.

"ಏಕೆ ಮೇಡಂ-ಸಪ್ಪೆಯಾಗಿದ್ದೀರಿ ?" ಎಂದ ಒಬ್ಬ.

ಸರಿ, ಶುರುವಾಯಿತು ಪ್ರಶ್ನೆಗಳ ಸುರಿಮಳೆ.

"ಇಚ್ಛಾಮರಣೆ ಎಂದರೇನು ?"

"ಪ್ರಾಯೋಪವೇಶ ಎಂದರೇನು ?"

"ಕಾಮರೂಪಿ ಎಂದರೇನು ?"

"ನೀಲಿಯ ಬಣ್ಣ ಯಾವುದರ ಚಿನ್ಹೆ ?"

"ನೀವು ಹೆಚ್ಚಾಗಿ ನೀಲಿಯುಡುಪು ಧರಿಸಲು ಕಾರಣವೇನು ?"

"ಡಾಕ್ಟರಿಗೆ ನೀಲಿ ಪ್ರೀತಿಯೆ ?"

"ಗೃಹಿಣಿಯಾಗಿ ಮನೆಯಲ್ಲಿರುವುದು ಚೆನ್ನೋ, ಅಥವಾ ಮೇಡಂ-ಆಗಿ ಹೊರಗಡೆ ದುಡಿಯುವುದು ಚೆನ್ನೋ ?"

"ನಾನೀವರ್ಷ ಮದುವೆಯಾಗುವೆ. ಮನೆಯಲ್ಲಿರುವ ಹುಡುಗಿ ಉತ್ತಮವೋ ? ಅಥವಾ ಹೊರಗಡೆ ದುಡಿಯುವ ಹುಡುಗಿ ಉತ್ತಮವೋ ? ದಯಮಾಡಿ ನಿಮ್ಮ ಸಲಹೆ ಕೊಡಿರಿ."

(೧೫)

"ಸರಿ; ನನಗಂತೂ ಸಾಕಾಗಿ ಹೊರ ಬಂದು ಬಿಟ್ಟೆ." ಎನ್ನುತ್ತಾ ಅರವಿಂದಾ ನಗು ಮೂಡಿದರೂ ಮುಖ ಗಂಟಿಕ್ಕಿದಳು. ಅಘೋರ ಅಳ್ಳೆ ಬಿರಿಯುವಂತೆ ನಕ್ಕುಬಿಟ್ಟ. ಮನಸ್ಸು ಗತಕಾಲಕ್ಕೆ ಹಕ್ಕಿಯಂತೆ ಹಾರಿತು. ಎಂಥೆಂಥ ಪ್ರೊಫೆಸರುಗಳನ್ನೂ ಗೋಳು ಹುಯ್ಯುತ್ತಿದ್ದುದು ನೆನಪಾಗಿ ಮತ್ತಷ್ಟು ನಗು ಪುಕ್ಕಿ ಬಂತು. ನಗುತ್ತಾ ಅಂದ "ಅತ್ತೆಗೊಂದು ಕಾಲ; ಸೊಸೆಗೊಂದು ಕಾಲ. ಅರವಿಂದಾ!"

ಇಬ್ಬರೂ ನಗೆಗಡಲಲ್ಲಿ ಮುಳುಗಿದರು. ಪತಿ ಪತ್ನಿಯರ ಸಾನಿಧ್ಯದಲ್ಲಿ ಹೊತ್ತು ಸಾನಂದದಿಂದ ಕಳೆಯಿತು. ಆಸ್ಪತ್ರೆಗೆ ಹೊರಡುವ ಮುನ್ನ ಅಘೋರ ಎದ್ದು ಹೋಗಿ ತಂದೆಯನ್ನು ನೋಡಿದ. ದಿನೇ ದಿನೇ ಚೇತರಿಸಿಕೊಳ್ಳುತಿದ್ದ ಅವನು ಇಂದು ಗರಿಗೂಡಿ ಬಂದ ಹಕ್ಕಿ ಮರಿಯಂತಾಗಿದ್ದ. ನೋಡಿ ಮನಸ್ಸಿಗೆ ಎಲ್ಲಿಲ್ಲದ ಸಮಾಧಾನ ಮೂಡಿತು. ಕಳೆದಾರು ತಿಂಗಳಿಂದ ಪದೇ ಪದೇ ಹಾಸಿಗೆ ಹಿಡಿಯುತಿದ್ದ ತಂದೆಗೆ ಪೂರ್ಣ ವಿಶ್ರಾಂತಿ ಪಡೆಯದೆ ಗತ್ಯಂತರವಿಲ್ಲ ಎಂಬುದು ಮನವರಿಕೆಯಾಗಿ ಖಡ್ಡಾಯವಾಗಿ ನಿರ್ಬಂಧ ಹಾಕಿದ್ದ.

"ಪುನಃ ಹೋಗಬೇಕೆ ಅಘೂ?" ವಿಮಲ್‌ದಾಸ್ ಕೇಳಿದ. ದನಿಯಲ್ಲಿ ಅನುಕಂಪವಿತ್ತು.

"ಹೌದು. ಅಪ್ಪಾ!"

"ನಿನಗೆ ಬಿಡುವೆಂಬುದೇ ಇಲ್ಲವಲ್ಲಾ, ಮಗೂ?"

"ಹುಡುಗರಿಗೆ ದುಡಿಯದೇನು ದಾಡಿ ಅಪ್ಪಾ?"

"ಆದರೂ, ಈಗಿನಿಂದ ಕ್ರಮವಾಗಿ ನಡೆಸಿಕೊಂಡರೆ ಆಯಸ್ಸು ಹೆಚ್ಚಿಸಿಕೊಳ್ಳಬಹುದು. ಮಗೂ, ಹೀಗಾದರೆ ಹೇಗೆ?"

"ನಡೆದಷ್ಟು ದಿನ ನಡೆಯಲಿ ಬಿಡಿ. ಹೇಗೂ ಕೈಕಾಲು ಗಟ್ಟಿ ಇವೆ." ಅಘೋರ ನಕ್ಕುಬಿಟ್ಟ. ಬಳಿಯಲ್ಲಿದ್ದ ನಂದಾ ಕಳಕಳಿಯ ದನಿಯಲ್ಲಿ ಹೇಳಿದಳು "ಹೊತ್ತು ಹೊತ್ತಿಗೆ ನಿದ್ರಾಹಾರವೂ ಇಲ್ಲ. ವಿಶ್ರಾಂತಿಯೂ ಇಲ್ಲ. ಹೇಗಾದರೂ ಒಂದು ಸುವ್ಯವಸ್ಥೆಯನ್ನು ಮಾಡಿಕೊಳ್ಳುವುದು ಲೇಸು ಅಘೂ."

ಅಂಗಡಿ ಆಗಿದ್ದರೆ ಬಾಗಿಲು ಮುಚ್ಚಿ ಬರಬಹುದಾಗಿತ್ತು. ಇದು ಹಾಗಲ್ಲ. ಜೀವನ್ಮರಣಗಳ ಹೋರಾಟದಲ್ಲಿ ಹಸಿವನ್ನು ಗಮನಿಸಲಾದೀತೆ?"

ಎಂದ ವಿಮಲ್‌ದಾಸ್. ಸ್ವಲ್ಪ ತಡೆದು–"ಅಘೊ, ದೇವರು ದೊಡ್ಡವನು. ಅವನೇ ನಿನ್ನನ್ನು ನಡೆಸಿಕೊಳ್ಳಲಿ."

ಅಘೋರ ನಸುನಕ್ಕು ಹೊರಬಿದ್ದ. ಬಟ್ಟೆ ಬದಲಿಸಿ ಸಜ್ಜಾಗಿ ಆರು ಗಂಟೆಗೆ ತುಸು ಮುಂಚೆ ಆಸ್ಪತ್ರೆಗಭಿಮುಖವಾಗಿ ಹೆಜ್ಜೆ ಹಾಕಿದ. ನಂದಾ ದೇವಿ ಸೊಸೆಯೊಡನೆ ದೂರದಲ್ಲಿ ರಸ್ತೆಯ ನೇರಕ್ಕೆ ಅಘೋರ ಕಣ್ಮರೆಯಾಗು ವವರೆಗೂ ನಿಂತು ನೋಡಿದಳು.

ಅಘೋರ ಆಸ್ಪತ್ರೆಯನ್ನು ಮುಟ್ಟಿ ಹತ್ತು ಹೆಜ್ಜೆ ಹೋಗುವುದರೊಳ ಗಾಗಿ ಜಾನಕೀರಾಂ ಎದುರಾದ. ಅವನ ಮುಖ ಹಿಗ್ಗಿ ಬಿರಿಯುವಂತಿತ್ತು. ಅಘೋರನನ್ನು ಕಾಣುತ್ತಲೂ ಅವನ ಬಳಿಗೆ ಕುಪ್ಪಳಿಸಿ ಭುಜದ ಮೇಲೆ ಕೈಹಾಕಿ ಸಂತೋಷಾತಿರೇಕದಿಂದ–"ಡಾಕ್ಟರ್! ನಾನು ಗೆದ್ದು ಬಿಟ್ಟೆ ಕಣಯ್ಯಾ."

"ಏನು? ಸರಿಯಾಗಿ ಹೇಳಪ್ಪಾ."

"ಏನಿರಬಹುದು ನೀನೇ ಊಹಿಸಿಕೋ!" ಹೆಮ್ಮೆಯಿಂದ ಹೇಳಿದ ಜಾನಕೀರಾಂ.

"ಕುಮಾರ ಸಂಭವ!"

"ಉಹೂ, ನಿನ್ನ ಊಹೆ ಸರಿಯಾಗಲಿಲ್ಲ ಮಗೂ!"

"ಕನ್ಯಾರತ್ನ ಜನನ!"

"ಈಗಲೂ ಸರಿಯಾಗಿ ಊಹಿಸಲಿಲ್ಲ."

"ಹಾಗಿದ್ದರೆ ಇನ್ನೇನಿರಬಹುದು?"

"ಕುಮಾರ ಕುಮಾರಿ ಇಬ್ಬರೂ!"

"ನಿಜವಾಗಿ?"

"ಹೌದು!"

"ಓ! ಹೃತ್ಪೂರ್ವಕವಾದ ಅಭಿನಂದನೆ ಕಣಯ್ಯಾ!" ಎನ್ನುತ್ತಾ ಹಾರ್ದಿಕವಾಗಿ ಕೈಕುಲುಕಿದ ಅಘೋರ. ಆತ್ಮೀಯ ಗೆಳೆಯರ ಮುಖಗಳು ಹೂವಿನಂತರಳಿದುವು.

"ಪ್ರಥಮ ಅಧ್ಯಾಯ ದಾಟಬಿಟ್ಟೆ ಅಘೋರ್!" ಜಾನಕೀರಾಮನ

ನುಡಿ ಉಬ್ಬಿದ ಹೃದಯದಾಳದಿಂದ ಹೊರಬಿತ್ತು.

"ಧೀರ!"

"ಹೌದಪ್ಪಾ, ದಿನೇ ದಿನೇ ಕಷ್ಟ ಪಡುವುದಕ್ಕಿಂತ ಇದು ಉತ್ತಮವಲ್ಲವೇ?"

"ನಿಜ, ಜಾನ್! ಹೇಗಿದ್ದಾರೆ ಮಕ್ಕಳು?"

"Quite Normal!"

"Hurrah!"

ಅಧ್ಯಾಯ

೨೨

ಮಧ್ಯರಾತ್ರಿ. ಚಂದ್ರಮನಿಲ್ಲದ ನೀಲಾಕಾಶ. ಕಾಳಗಪ್ಪನ್ನು ಭೇದಿಸಿ ಮಿನುಮಿನುಗುವ ಅಸಂಖ್ಯಾತ ನಕ್ಷತ್ರಗಳ ರಾಶಿ. ಸದ್ದಿಲ್ಲದ ಮಹಾ ಶಾಂತಿಯಲ್ಲಿ ತೀಡಿ ತಣ್ಣಗೆ ಬರುವ ತಂಗಾಳಿ. ತನುಮನಗಳಿಗೆ ಸಾನಂದವನ್ನೊಡಿಸುವ ಮಧುರ ವಾತಾವರಣ. ಒಯ್ಯೊಯ್ಯನೆ ಸುಯ್ದು ಬರುವ ಸುಯ್ಯೆಲರ ಸುಮಧುರ ಕೇಳಿಯಲ್ಲಿ ಓಲಾಡುವ ಗಿಡ ಮರದೆಲೆಗಳ ಮೊರೆತವು ವೈನವಿರೇಳಿಸುವ ಚೈತನ್ಯಭರಿತ ಮಂತ್ರೋಚ್ಚಾರಣೆಯಂತೆ ಕಿವಿಯಲ್ಲಿ ಮರ್ಮರಿಸುತ್ತದೆ.

ಡಾ|| ಅಘೋರ ಸದ್ದಿಲ್ಲದ ಶಾಂತಿಯಲ್ಲಿ ಪಾದರಕ್ಷೆಗಳ ಲರಕ್ ಲರಕ್ ಲರಕ್ ಸುದ್ದು ಮಾಡುತ್ತಾ ಆಸ್ಪತ್ರೆಯ ಕಾರಿಡಾರಿನಲ್ಲಿ ಹೆಜ್ಜೆ ಹಾಕುತ್ತಿದ್ದ. ರಾತ್ರಿ ಡ್ಯೂಟಿಯಲ್ಲಿದ್ದ ಅಘೋರ ಎಮರ್ಜನ್ಸಿ ವಾರ್ಡಿನಿಂದ ಕರೆ ಬಂದುದರಿಂದ ಹೊರಟಿದ್ದು ಅಲ್ಲಿಗೆ. ರಾತ್ರಿಯ ನೀಳವಾದ ನಿಲುವಂಗಿಯನ್ನು ಮೈ ಅಲಂಕರಿಸಿತ್ತು. ಕೈಯಲ್ಲಿ ಟಾರ್ಚನ್ನು ಹಿಡಿದುಕೊಂಡು ಕಣ್ಣು ಕುಕ್ಕಿಸುವ ಬೆಳಕನ್ನು ಚೆಲ್ಲುತ್ತಾ ಅಘೋರ ದಾಪುಕಾಲು ಹಾಕಿದ. ಜೊತೆಯಲ್ಲಿ ಒಬ್ಬ ವಾರ್ಡ್‌ಬಾಯ್ ಮತ್ತು ಹಿರಿಯ ಮೇಟ್ರನ್ ನಡೆದಿದ್ದರು.

ಆಗತಾನೆ ಕರೆತಂದಿದ್ದ ರೋಗಿಯ ಬಗ್ಗೆ ವಿವರಣೆ ನೀಡುತ್ತಾ ಮೇಟ್ರನ್ ಹೇಳಿದಳು. "ಅವನು ಶಿಕಾರಿಗೆ ಹೋದಾಗ ಆಕಸ್ಮಿಕವಾಗಿ ಕೋವಿ ಏಟು ತಗುಲಿತಂತೆ! ಏಟು ಬಿದ್ದು ಒಂಭತ್ತು ದಿನಗಳಾಗಿವೆ. ಇದುವರೆವಿಗೆ ಅದೇನು ಮಾಡುತಿದ್ದರೋ ದೇವರೇ ಬಲ್ಲ. ಏಟು ಬಿದ್ದ ಭಾಗ ಕೊಳೆತು ದುರ್ನಾತ ಬಡಿಯುತ್ತಿದೆ! ಮನುಷ್ಯನಿಗೆ ಪ್ರಜ್ಞೆಯೇ ಇಲ್ಲ ಡಾಕ್ಟರ್ !"

...ಓ...ಹಾಗಾದರೆ !

"ನಮ್ಮವರೇ ಹಾಗೆ ಸಿಸ್ಟರ್ ! ಊರು ಕೊಳ್ಳೆ ಹೊಡೆದ ಮೇಲೆ ಕೋಟೆಯ ಬಾಗಿಲು ಮುಚ್ಚಿದರು, ಎಂಬ ಗಾದೆ ನಮ್ಮಲ್ಲಿದೆ. ಅದು ಅಕ್ಷರಶಃ ಸತ್ಯ. ನಮ್ಮವರು ಜಾಗೃತರಾಗಬೇಕಾದರೆ ಇನ್ನೂ ಶತಮಾನಗಳು ಉರುಳಬೇಕು. ಏಟು ಬಿದ್ದು ಒಂಭತ್ತು ದಿನಗಳಾಗುವವರೆಗೆ ಮನೆಯಲ್ಲಿಟ್ಟು

ಕೊಂಡು ಈಗ ಅಂತ್ಯ ಸಮಯದಲ್ಲಿ ಆಸ್ಪತ್ರೆಗೆ ಕರೆತಂದು ನಮ್ಮನ್ನು ಗೋಳು ಹುಯ್ಯುತ್ತಾರೆ, ನೋಡಿ." ದನಿಯಲ್ಲಿ ಅಸಮಾಧಾನವಿತ್ತು. ಹುಬ್ಬುಗಳು ಗಂಟಿಕ್ಕಿದುವು.

ಇನ್ನಷ್ಟು ಹೊತ್ತಿನೊಳಗಾಗಿ ಮೂವರೂ ಎಮರ್ಜನ್ಸಿ ವಾರ್ಡನ್ನು ಸೇರಿದರು. ದುರ್ನಾತ...ಮೂಗು ಮುಚ್ಚಿಕೊಂಡರೂ ಅಲ್ಲಿ ನಿಲ್ಲಲಾಗದಂತಹ ದುರ್ನಾತ! ಅಘೋರ ಮೂಗು ಸೆಟೆದುಕೊಂಡೇ ಗಾಯಾಳನ್ನು ಪರೀಕ್ಷಿಸಿದ. ಏಟು ಬಿದ್ದ ಕಾಲು ಕೊಳೆತು ಹೋಗಿತ್ತು. ನೋಡಿದರೆ, ಕಟ್ಟಾಮುಟ್ಟಾ ಗಂಡಾಳು!

....ಛಿಃ! ಬುದ್ಧಿ ಎಲ್ಲಾ ಎಲ್ಲಿ ಹೋಯಿತು? ಅದನ್ನೇನು ಬಾಡಿಗೆ ಕೊಟ್ಟಿದ್ದಾರೆಯೆ?...

ಅಘೋರ ಕರೆತಂದವರನ್ನು ಸಿಟ್ಟಿನಿಂದ ಕೇಳಿದ "ಇಷ್ಟಾಗುವವರೆಗೆ ಏನು ಮಾಡುತಿದ್ದಿರಿ? ಇದೇನು ಮಕ್ಕಳಾಟವೇ? ಸಾವು ಬದುಕಿನ ಪ್ರಶ್ನೆ!"

"ಪೋಲೀಸಿನವರಿಗೆ ಗೊತ್ತಾದರೆ......" ವ್ಯಕ್ತಿ ಬಿಕ್ಕಿತು.

"ಹೇಗೆ ಪೆಟ್ಟು ತಾಗಿತು?"

"ಆಕಸ್ಮಿಕವಾಗಿ."

"ಪೋಲೀಸಿಗೆ ರಿಪೋರ್ಟ್ ಮಾಡಿದ್ದೀರಾ?"

"ಇಲ್ಲ."

"ನೀವು ಇಲಿಯ ಬಾಯಿಗೆ ಹೆದರಿ ಹುಲಿಯ ಬಾಯಿಗೆ ಬೀಳುತ್ತೀದ್ದೀರೆಂಬುದನ್ನು ಬಲ್ಲಿರಾ? ಬುದ್ಧಿಹೀನ ವ್ಯವಹಾರ? ನಿಮಗೆ ಮಿದುಳಿಲ್ಲವೇ?" ಕಣ್ಣುಗಳು ರಂಗೇರಿದುವು.

ಅವರ ಮುಸುಮುಸು ಅಳುವೇ ಉತ್ತರವಾಯಿತು.

ಅಘೋರ ತಕ್ಷಣ ಪೋಲೀಸಿನವರಿಗೆ ವರದಿ ಮಾಡಿ ಅವರನ್ನು ಆ ಕ್ಷಣ ಬರುವಂತೆ ತಿಳಿಸಿ ಆಪರೇಶನ್ ಥಿಯೇಟರಿಗೆ ಹೊರಟುಹೋದ. ಮನಸ್ಸು ಅದೇ ಚಿಂತನೆಯಲ್ಲಿತ್ತು...ಪೋಲೀಸಿನವರಿಗೆ ಹೆದರಿ ಜೀವಕ್ಕೆ ಮಾರಕವಾದರಲ್ಲಾ! ಎಂಥಾ ತಿಳಿಗೇಡಿ ಜನ? ಸನ್ನಿಯೇರಿ ಪ್ರಜ್ಞಾಹೀನನಾಗುವವರೆಗೂ ಸುಮ್ಮನಿದ್ದು ಬಿಡುವುದೇ?...ಇನ್ನು ನನ್ನದೇನಿದ್ದರೂ ವ್ಯರ್ಥಸಾಹಸ. ಆದರೂ ಕರ್ತವ್ಯಕ್ಕೆ ಗಂಟು ಬೀಳಲೇಬೇಕು...ಶಿವ, ಶಿವಾ!

ಪೋಲೀಸರ ಕಾರುಬಾರು ಒಂದೆಡೆ ನಡೆಯುತ್ತಿತ್ತು. ಅಘೋರ ಇನ್ನೊಂದೆಡೆ ತನ್ನ ಕಾರ್ಯರಂಗಕ್ಕೆ ಕೈ ಹಚ್ಚಿದ್ದ. ಮೇಜಿನ ಮೇಲೆ ವ್ಯಕ್ತಿ ಅಲುಗದೆ ಮಲಗಿತ್ತು. ಮೂಗು ಮುಚ್ಚಿಕೊಂಡೇ ಪರೀಕ್ಷಿಸಿದ. ಮೊಣ ಕಾಲಿನವರೆಗೆ ಮಾಂಸ ಖಂಡ ಕೊಳೆತುಹೋಗಿತ್ತು. ಮೊಣಕಾಲಿನಿಂದ ತುಸು ಮೇಲಕ್ಕೆ ಕಾಲನ್ನು ಕತ್ತರಿಸುವ ಮಹಾ ಕಾರ್‍ಯ ನಡೆಯಿತು. ಕತ್ತರಿಸಿ ನೋಡಿದರೆ ಇನ್ನೂ ಮೇಲಕ್ಕೆ ಕೊಳೆತ ಅಂಶವಿತ್ತು. ಅಘೋರ ಪುನಃ ನಾಲ್ಕು ಇಂಚು ಕತ್ತರಿಸಲು ಗರಗಸ ಅಳವಡಿಸಿದ. ಅದಾದ ಮೇಲೂ ಅಘೋರ ಬೇಸ್ತು ಬಿದ್ದಿದ್ದ. ಪುನಃ ಸ್ವಲ್ಪ ಕತ್ತರಿಸಿ ಆಪರೇಷನ್ ಮುಗಿಸುವಾಗ ಬೆಳಗಿನ ತಿಳಿಗಾಳಿ ತಣ್ಣಗೆ ಬೀಸ ತೊಡಗಿತ್ತು. ಘನ ತಿಮಿರ ರಾಶಿಯಲ್ಲಿ ತೂರಿ ಬರುವ ಮಂಜಿನ ತುಂತುರುಗಳಂತೆ ಬೆಳಕು ತೆರೆ ತೆರೆಯಾಗಿ ಹರಿದು ಬರ ತೊಡಗಿತು. ಖಗ ಪಕ್ಷಿಗಳು ಸಾಸಿರ ಸಾಸಿರ ಇನಿದನಿಗಳಿಂದ ಸುಪ್ರಭಾತವನ್ನು ಹಾಡಿ ನಲಿದುವು. ಕರ್ತವ್ಯದ ಭಾರವನ್ನಿಳುಹಿ ಕೈ ತೊಳೆದು ಮುಖಮಜ್ಜನ ಮಾಡಿ ಟವಲ್ಲಿನಿಂದ ಒರೆಸಿಕೊಂಡು ಕಿಟಕಿಯ ಬಳಿ ನೈದೋರಿದ ಹೊರ ಜಗತ್ತನ್ನು ನಿಟ್ಟಿಸುತ್ತಾ ತುಸು ನಿಂತ ಅಘೋರ. ಮೂಡುವೆಣ್ಣು ಸಡಗರ ದಿಂದ ಮೈ ಸಿಂಗರಿಸಿಕೊಳ್ಳುತ್ತಿದ್ದಾಳೆ, ಇಳೆಯನ್ನು ಮುಸುಕುವ ಎಳೆಬೆಳಕು ತೆರೆತೆರೆಯಾಗಿ ಹರಿದುಬರುತ್ತಿದೆ. ನೋಡುನೋಡುತ್ತಾ ಹೃದಯವನ್ನು ಉಕ್ಕೇರಿಸುವ ಬೆಳಗಿನ ಸುಂದರ ವಾತಾವರಣಕ್ಕೆ ಮನತೆತ್ತು ಅಲುಗದೆ ಮಂತ್ರ ಮುಗ್ಧನಂತೆ ಅಘೋರ ನಿಂತಿದ್ದಾನೆ. ತುಸು ಹೊತ್ತು ಉರುಳಿತು. ಯೋಚನೆಯ ಝರಿಯೊಂದು ಮೆಲ್ಲನೆ ಮನದಾಳದಿಂದ ಹರಿದುಬಂತು...ಈ ಪ್ರಕೃತಿ ಮಾತೆಯ ಮುಂದೆ ನಾವೆತ್ತ ? ಆಕೆಯು ಹುಟ್ಟಿಸಿದ ಮನುಷ್ಯನನ್ನು ನಾವು ಕಾಲು ಕತ್ತರಿಸ ಬಹುದು, ಅಥವಾ ಇನ್ನೇನಾದರೂ ಸಣ್ಣ ಆಪರೇಷನ್ ಮಾಡಬಹುದು. ಆದರೆ, ಅದೇ ಮಾನವನನ್ನು ನಾವು ಸೃಷ್ಟಿಸಬಲ್ಲೆವೇ ? ಪ್ರಕೃತಿಜನ್ಯವಾದ ಯಾವುದೇ ವಿಚಾರವನ್ನು ತೆಗೆದುಕೊಂಡರೂ ನಾವು ಅತ್ಯಂತ ಸಣ್ಣವರಾಗುತ್ತೇವೆ–ಅಣುತೃಣಗಳಿಗಿಂತಲೂ ಕಡೆಯಾಗುತ್ತೇವೆ...

ಅಘೋರ ನೀಳವಾದ ಉಸಿರುಬಿಟ್ಟು ರೋಗಿಯ ನಾಡಿಯನ್ನೊಮ್ಮೆ ಪರೀಕ್ಷಿಸಿದ. ಅದು ಸ್ಥಿರವಾಗಿರಲಿಲ್ಲ. ರಕ್ತ ಒತ್ತಡದ ಯಂತ್ರದ ಕಡೆಗೂ ಕಣ್ಣುಗಳನ್ನು ಹಾಯಿಸಿದ. ನೋಡಿದೊಡನೆಯೇ ಮನಸ್ಸು ಮುದುಡಿ

ಕೊಂಡಿತು. ಅಲ್ಲಿಯೇ ಒಂದು ಕುರ್ಚಿ ಹಾಕಿಕೊಂಡು ಕುಳಿತು ತನ್ನ ನಿರಂತರ ಪ್ರಯತ್ನ ಸಾಗಿಸಿದ...ಎಂತಹ ಮಂದಬುದ್ಧಿ ? ಕಾಲಿಗೆ ತಾಗಿದುದು ಅಪಾಯಕಾರಿ ಗುಂಡೇನಲ್ಲ. ಆಗಲೇ ಚಿಕಿತ್ಸೆಗೊಳಪಡಿಸಿದ್ದರೆ ವಾಸಿಯಾಗು ತಿತ್ತು. ಆದರೆ, ಇವರು ಮಾಡಿದ್ದೇನು ?

ಈ ಸಾಮಾನ್ಯ ಜನರ ಮಟ್ಟ ಸುಧಾರಿಸದ ಹೊರತು ದೇಶ ಸುಧಾರಿ ಸುವುದಿಲ್ಲ. ನೂರಕ್ಕೊಬ್ಬ ಬುದ್ಧಿವಂತನಾಗಿ ಆಡಂಬರ ಜೀವಿಯಾದರೆ ಸಾಕೆ? ಈ ಗಾಂಪತನವನ್ನು ಬಡಿದೋಡಿಸಿ ಈ ಜನರನ್ನು ಮೇಲಕ್ಕೆತ್ತದ ಹೊರತು ದೇಶೋನ್ನತಿಯಾಗದು—ಇತರ ರಾಷ್ಟ್ರೀಯರೊಡನೆ ನಾವು ಸರಿಸಮಾನರಾಗಿ ನಿಲ್ಲಲಾರೆವು ಎಂದೆನಿಸಿದಾಗ ಹೃದಯ ಭಾರವಾಯಿತು.

ಆದರೆ......?

ಅಘೋರ ವ್ಯಕ್ತಿಯ ಕಡೆಗೊಮ್ಮೆ ದಿಟ್ಟಿಸಿನೋಡಿ ಅಲ್ಲಿಂದ ಹೊರ ಬಿದ್ದ. ಇಡೀ ರಾತ್ರಿ ನಿದ್ದೆಯಿಲ್ಲ. ಕಣ್ಣುಗಳು ಉರಿಯತೊಡಗಿದುವು. ಶೌಚದ ಮನೆಗೆ ಹೋಗಿ ಮುಖ ಮಜ್ಜನ ಮಾಡಿ ಕೂದಲು ತಿದ್ದಿ ರಾತ್ರಿಯುಡುಪು ಬದಲಿಸಿದ. ಪೂರ್ವ ದಿಶೆಯಲ್ಲಿ ಬಾಲ ರವಿ ಬಾನೇರ ತೊಡಗಿದ್ದ. ಅಘೋರ ಮತ್ತೊಮ್ಮೆ ಆಪರೇಷನ್ ಥಿಯೇಟರಿಗೆ ಹೋಗಿ ರೋಗಿಯನ್ನು ನೋಡಿದ ಆತನ ಸ್ಥಿತಿ ಯಥಾರೀತಿ ಇತ್ತು. ಸಹ ಡಾಕ್ಟರಿಗೆ ಹೇಳ ಬೇಕಾದುದನ್ನು ಹೇಳಿ ಅಲ್ಲಿಂದ ಹೊರಬಂದ.

ತನ್ನ ಕೊಠಡಿಯನ್ನು ಸಮೀಪಿಸುವುದರೊಳಗಾಗಿ ನರ್ಸೊಬ್ಬಳು ಓಡುತ್ತಾ ಬಂದು ಹೇಳಿದಳು "ಡಾಕ್ಟರ್, ಜನರಲ್ ವಾರ್ಡಿನಲ್ಲಿ ಹತ್ತನೆಯ ಹಾಸಿಗೆಯಲ್ಲಿದ್ದವರಿಗೆ ವೆರಿಕೋಸ್ ವೈನ್ (Vericose veins) ಹರಿದು ವಿಪರೀತ ರಕ್ತಸ್ರಾವವಾಗಿದೆ!"

ಅಘೋರ ಪ್ರತಿಯಾಡದೆ ಜನರಲ್ ವಾರ್ಡಿನ ಹಾದಿ ಹಿಡಿದ. ಕಣ್ಣು ಗಳು ಆದೇಶವಿಲ್ಲದೇನೇ ಗಡಿಯಾರದತ್ತ ಹೊರಳಿದುವು. ಹೊತ್ತು ಏಳರ ಅಂಚನ್ನು ತಬ್ಬುವುದರಲ್ಲಿತ್ತು. ಅಂದ ಮೇಲೆ ಇತರ ಡಾಕ್ಟರುಗಳು ಬರು ವುದು ಇನ್ನೂ ಅರ್ಧ ಗಂಟೆಯಾದೀತು. ಅವರನ್ನು ಕಾಯುವಂತೆಯೇ ಇಲ್ಲ; ಎಂಬುದು ನೆನವರಿಕೆಯಾಗುತ್ತಲೂ ಅಘೋರ ನಡಿಗೆಯನ್ನು ಇನ್ನಿಷ್ಟು ಚುರುಕು ಗೊಳಿಸಿದ.

ಅರವತ್ತು ವರ್ಷಕ್ಕೂ ಮೀರಿದ ಹೆಂಗಸೊಬ್ಬಳು ರಾತ್ರಿ ನಿದ್ದೆಯಲ್ಲಿರುವಾಗ ಕಾಲಿಗೆ ಕಾಲು ತಗಲಿ ವೆರಿಕೋಸ್ ವೈನ್ ಹರಿದಿದ್ದು ರಕ್ತದ ಕೋಡಿ ಹರಿದು ಹಾಸಿಗೆ ತೊಯ್ದುಹೋಗಿತ್ತು. ಹೆಪ್ಪುಕಟ್ಟಿ ನಿಂತ ರಕ್ತವನ್ನು ನೋಡಿ ಹೆದರಿ ಅವಳಿಗೆ ಮೈ ನಡುಕ ಬಂದಿದೆ. ಬೆಳಗಾಗುವವರೆಗೂ ಅವಳಿಗೆ ಗೊತ್ತಾಗಿರದೆ ವಿಪರೀತ ರಕ್ತ ಸ್ರಾವದಿಂದ ಅವಳು ಬಳಲಿದ್ದಾಳೆ. ನೋಡಿದೊಡನೆ ಅಘೋರ ಅವಳನ್ನು ಆಪರೇಷನ್ ಥಿಯೇಟರಿಗೆ ಸಾಗಿಸಿದ.

ಅಘೋರ ತನ್ನೆಲ್ಲಾ ಕಾರ್ಯಭಾರವನ್ನಿಳುಹಿ ಮನೆಯ ಹಾದಿ ತುಳಿಯುವಷ್ಟರಲ್ಲಿ ಒಂಭತ್ತೂವರೆಯಾಗಿತ್ತು. ಸಹ ಡಾಕ್ಟರುಗಳೆಲ್ಲಾ ಆಗಲೇ ಬಂದು ಕೆಲಸದ ಮೇಲೆ ಹಾಜರಿದ್ದರು. ಕಾರ್ಯಭಾರದ ಉತ್ತರಾರ್ಧವನ್ನು ಅವರಿಗೆ ವಹಿಸಿ ಹೊರಬಿದ್ದ. ಹಾದಿ ಸಾಗುತ್ತಿದ್ದಂತೆ ಅದೇ ವಿಚಾರ ಮೆಲುಕು ಹಾಕ ತೊಡಗಿದ...ಕಾಲು ತುಂಡುಗಡಿದ ಕಟ್ಟುಮುಟ್ಟಾ ಗಂಡಾಳು ಇನ್ನೇನು ಇಂದೋ ನಾಳೆಯೋ ಸಾಯುತ್ತಾನೆ. ಶೀಶೆಗಟ್ಟಲೆ ರಕ್ತಸುರಿದರೂ ಸಾಯದೆ ಬಡ ಮುದುಕಿ ಬದುಕಿಕೊಂಡಳು. ಭಗವಂತ ದುಡಿಯುವ ಕೈಗಳನ್ನು ಕಿತ್ತುಕೊಂಡು ಉಣ್ಣುವ ಬಾಯಿಗಳನ್ನು ಬಿಟ್ಟುಹೋಗುತ್ತಾನೆ! ಹಿಂದೂಸ್ಥಾನದ ಗ್ರಹ ಬಲವೇ ಹೀಗಿದೆಯೋ? ಅಥವಾ ಪೂರ್ವಜರ ಅಭಿಶಾಪವೋ?...ಎಂದೆನಿಸಿದಾಗ ಎದೆಯಾಳದಿಂದ ನಿಟ್ಟುಸಿರೊಂದು ಹೊರಹೊಮ್ಮಿತು. ತನ್ನ ಧ್ಯೇಯ ಬಿಂಕದ ರಮಣಿಯಂತೆ ನಿಮಿರಿ ನಡೆಯಿತು! ಅಘೋರ ತಲೆಬಾಗಿ ಹೆಜ್ಜೆ ಹಾಕಿದ.

ಅಘೋರ ಮನೆ ಮುಟ್ಟುವಷ್ಟರಲ್ಲಿ ಹತ್ತು ಗಂಟೆಯಾಗಿತ್ತು. ಇಂದು ರಜೆಯಿದ್ದುದರಿಂದ ಅರವಿಂದಾ ಅತ್ತೆಯೊಂದಿಗೆ ಅವನಿಗಾಗಿ ಕಾದಿದ್ದಳು. ಹೋಗಿ ಸ್ನಾನ ಮಾಡಿ ತಿಂಡಿ ಮುಗಿಸಿದ. ರಾತ್ರಿ ಡ್ಯೂಟಿಯಿದ್ದುದರಿಂದ ಹಗಲು ಬಿಡುವು. ಅಘೋರನಿಗೆ ಕಣ್ಣು ತೂಕಡಿಸುವ ಸ್ಥಿತಿಯಲ್ಲಿದ್ದರೂ ಅರವಿಂದಳ ಸಾನಿಧ್ಯ ನಿದ್ದೆಯನ್ನು ದೂರಗೊಳಿಸಿತ್ತು. ನೀರು ಮನೆಗೆ ಹೋದ ಅವಳ ಆಗಮನವನ್ನೆದುರು ನೋಡುತ್ತಾ ಪುಸ್ತಕವೊಂದನ್ನು ತಿರುವಿಹಾಕಿದ. ರೇಡಿಯೋ ತನ್ನ ಪಾಡಿಗೆ ತಾನು ಹಾಡಿಕೊಳ್ಳುತ್ತಿತ್ತು. ಅದರ ಮಧುರ ಕಂಠವೊಂದು ಆಕರ್ಷಿಸಲಾಗಿ ಅತ್ತ ಗಮನವನ್ನು ಹೊರಳಿಸಿದ. ಮನಸ್ಸಾಗರದ ಅಲ್ಲೋಲ ಕಲ್ಲೋಲವಾದ ಅಲೆಗಳನ್ನು ಸ್ವಾಂತನಗೊಳಿಸುವ ಧಾಟಿಯಲ್ಲಿ

ಶ್ಲೋಕವೊಂದು ಹರಿದು ಬಂತು. ಹೆಣ್ದನಿಯೊಂದು ಸುಮಧುರವಾಗಿ ಹಾಡುತಿತ್ತು.

ಯುದ್ಧಾತ್ರಾನಿಜಫಾಲಪಟ್ಟಲಿಖಿತಂ ಸ್ತೋಕಂಮಹದ್ವಾಧನಂ ।
ತತ್ರಾಪ್ನೋತಿಮರುಸ್ಥಲೇಪಿ ನಿತರಾಂ ಮೇರೌಚನಾತೋಧಿಕಂ ।
ತದ್ಧೀರೋಭವತ್ತವತ್ಸುಕೃಪಣಾಂ ವೃತ್ತಿಂ ವೃಥಾಮಾಕೃಥಾಃ ।
ಕೂಪೇಪಶ್ಯಪಯೋನಿಧಾವಪಿ ಘಟೋ ಗೃಹ್ಣಾತಿ ತುಲ್ಯಂಜಲಂ ॥

ನಿಜ, ನಿಜ. ಭೋಗ ಭಾಗ್ಯವೆಷ್ಟಿದ್ದರೂ ನಮಗೆ ಯೋಗವಿದ್ದಷ್ಟೆ ಎಂದು ತನಗೆ ತಾನೇ ಉದ್ಗಾರ ತೆಗೆದ ಅಘೋರ. ಕೆಲವು ದಿನಗಳ ಹಿಂದೆ ಅಳಿದ ಆಧುನಿಕ ಗರತಿ ಅರುಂದಾ ಮನದಲೆಯಲ್ಲಿ ಮೂಡಿ ನಿಂತಳು. ಅಯ್ಯೊ, ಪಾಪ ! ಭಗವಂತ ಅವಳ ಬಗ್ಗೆ ಅನುಕಂಪ ತೋರಬೇಕಿತ್ತು. ಆದರೆ ಆದುದು ತೀರ ವ್ಯತಿರಿಕ್ತ. ಕುಬೇರನ ಸಂಪತ್ತಿದ್ದರೂ ಇಂದ್ರನ ಭೋಗಭಾಗ್ಯವಿದ್ದರೂ ಆಕೆ ಅದೆಷ್ಟು ಮುಗ್ಧೆ ? ಅದೆಷ್ಟು ನಿಗರ್ವಿ ? ಪಾಪ, ತುಂಬ ಅನ್ಯಾಯ ಎಂದು ತನಗೆ ತಾನೇ ಮರ್ಮರಿಸಿದ. ಸೀರೆಯ ನಿರಿಯನ್ನು ಚಿಮ್ಮುತ್ತಾ ಒಳ ಬಂದ ಅರವಿಂದಾ ನಗುನಗುತ್ತಾ ತುಂಟನೋಟ ಬೀರಿ ಕೇಳಿದಳು "ನೀವು ನೀವೇ ಮಾತಾಡಿ ಕೊಳ್ಳುತ್ತಿದ್ದೀರಲ್ಲಾ ? ಏನು ಸಮಾಚಾರ ಅಘೂ ?"

"ನಿನ್ನ ಕುರಿತೇ ಮರ್ಮರಿಸುತ್ತಿದ್ದೆ."

"ಅಲ್ಲ. ಅದು ನನ್ನ ವಿಚಾರ ಅಲ್ಲವೇ ಅಲ್ಲ." ತಲೆಯಾಡಿಸುತ್ತಾ ನಿರಾಕರಿಸಿದಳು ಅರವಿಂದಾ.

"ಒಬ್ಬ ಬಿಳೀ ಹುಡುಗಿ ಕುರಿತು ಯೋಚಿಸುತ್ತಿದ್ದೆ."

"ಇದ್ದರೂ ಇರಬಹುದು ?"

"ಹಾಗೇನಾದರೂ ಆದರೆ ನಿನಗೆ ಬೇಸರವಿಲ್ಲವೇ ಅರವಿಂದಾ ?"

"ಉಹೂ, ಉಹೂ." ಕಿಲಕಿಲನೆ ನಕ್ಕಳು ಅರವಿಂದಾ.

ಅವಳೊಂದಿಗೆ ಅಘೋರನೂ ನಕ್ಕು–"ಹೋ !...ನನ್ನ ಅರವಿಂದಳ ಮುಂದೆ ನೂರು ಬಿಳಿಯ ಹುಡುಗಿಯರೂ ನಿಲ್ಲಲಾರರು."

ಅರವಿಂದಾ ಕನ್ನಡಿಯ ಮುಂದೆ ನಿಂತು ಉಬ್ಬಿ ನಿಂತ ಕೂದಲನ್ನು ತಿದ್ದಿ ಮುದ್ದಾದ ಶೈಲಿಯಲ್ಲಿ ಮುಡಿ ಕಟ್ಟಿ ಹಣೆಗೆ ತಿಲಕವಿಟ್ಟು ಮುಂಗುರುಳು

ಳನ್ನು ತಿದ್ದಿ ನಿಲುವುಗನ್ನಡಿಯ ಮೇಲಿದ್ದ ಧೂಳನ್ನು ಝಾಡಿಸಿ ಬಾಚಣಿಗೆಯನ್ನು ಸ್ವಚ್ಛಗೊಳಿಸಿದಳು. ಅವಳ ಒಂದೊಂದೂ ಅಚ್ಚುಕಟ್ಟನ್ನು ಗಮನಿಸುತ್ತಾ ಅಘೋರ–"ಅರೂ, ನೀನೇನೋ ಅಚ್ಚುಕಟ್ಟು ಮಾಡಿಕೊಂಡೆ. ನನ್ನದು ಹಾಗೆ ಉಳಿಯಿತು."

"ಏನು ಹೇಳಿರಿ."

"ಗಡ್ಡ ಹೆರೆದುಕೊಳ್ಳಲಿಲ್ಲ."

"ಹೋಗಲಿ ಬಿಡಿ, ನನಗೊಂದು ದಿನ ರೆಸ್ಟ್ !"

"ಓ...ಹೋ....ಹೋ ! ಅದೆಲ್ಲಾ ಬಿಟ್ಟುಬಿಡು !" ಎನ್ನುತ್ತಾ ಎದ್ದು ಕುಳಿತುಕೊಂಡ.

ಇಬ್ಬರ ಮುಖದ ಮೇಲೂ ನಗುವಿನಲೆ ಉಕ್ಕಿ ಹರಿಯಿತು. ಅರವಿಂದಾ ಬಂದು ಬಳಿಯಲ್ಲಿ ಕುಳಿತುಕೊಂಡ ನಂತರ ವಿಷಯವನ್ನು ಮುಂದಿಟ್ಟ, "ಅರೂ, ಕಳೆದ ತಿಂಗಳು ಆಸ್ಪತ್ರೆಗೆ ಅರುಂಧಾ ಎಂಬ ಮಹಿಳೆ ಬಂದಿದ್ದು ಅಲ್ಲೇ ಅಸು ನೀಗಿದಳು. ಅವಳು ಆಗರ್ಭ ಶ್ರೀಮಂತನ ಪತ್ನಿ. ನಯ ವಿನಯಗಳ ಗಣಿ. ಬಿ.ಎ., ಓದಿದ ಆಧುನಿಕ ಮಹಿಳೆ. ಮೂರು ಮಕ್ಕಳ ತಾಯಿ. ನೋಡಿದರೆ, ಹಸೆ ಮಣೆಯ ಮೇಲೆ ಕೂಡಿಸಬಹುದಾದಷ್ಟು ರೂಪ ಯೌವನಗಳ ಸಂಪತ್ತು ! ಎಷ್ಟೆಂದರೂ ಅವಳು ಗಂಡನನ್ನೂ ಮಕ್ಕಳನ್ನೂ ಬಿಟ್ಟು ಹೋಗುವಾಗಿನ ದೃಶ್ಯ ಕಲ್ಲಾದರೂ ಕರಗಿಸುವಂತಿತ್ತು ಅರವಿಂದಾ." ಎಂದ ಅಘೋರನ ಹೃದಯ ಅನುಕಂಪದಿಂದ ಮಿಡಿಯಿತು. ಸ್ವಲ್ಪ ತಡೆದು ಮುಂದುವರಿದ "ಅರವಿಂದಾ, ನಿಜವಾಗಿಯೂ ಹೇಳುವುದಾದರೆ ಭಗವಂತ ಎಷ್ಟು ಕ್ರೂರಿ ! ಅದು ಹೇಗಾದರೂ ಅವನಿಗೆ ಅವಳನ್ನು ಕೊಂಡೊಯ್ಯಲು ಮನಸ್ಸು ಬಂತೋ ಏನೋ! ಅವಳ ಗಂಡ ಎಷ್ಟು ಒಳ್ಳೆಯವನು ಎಂದರೆ, ಅಷ್ಟು ಪ್ರೀತಿಸುವ–ಅಷ್ಟು ದುಃಖಿಸುವ ಗಂಡದಿರು ಇದ್ದಾರೆಯೇ? ಎಂದು ನನಗಷ್ಟೇ ಅಲ್ಲ-ಎಲ್ಲರಿಗೂ ಆಶ್ಚರ್ಯವಾಗುವಂತಿತ್ತು ಅರವಿಂದಾ. ಅಂಥಾ ಒಂದು ಮುದ್ದಾದ ಸಂಸಾರವನ್ನು ಕ್ರೂರ ವಿಧಿ ಬೇರ್ಪಡಿಸಿತು." ಎಂದೆನ್ನುವಾಗ ಅನುಕಂಪದ ಹೊರೆಯಿಂದ ಅಘೋರನ ಹೃದಯ ಕುಸಿಯುವಂತಾಯಿತು. ನೋವು ತುಂಬಿದ ಕಣ್ಣುಗಳು ಗೋಡೆಯ ಮೇಲೆ ಹರಿದರೂ ಏನನ್ನೂ ನೋಡದಿದ್ದುವು.

"ಪಾಪ." ಸಣ್ಣಗಿನ ದನಿಯಲ್ಲಿ ನುಡಿದ ಅರವಿಂದಾ ಪುನಃ ಕೇಳಿದಳು "ಏನಾಗಿತ್ತು ?"

"ಒಟ್ಟಿನಲ್ಲಿ, ಅವರ ಗ್ರಹಚಾರ." ಎಂದ ಅಘೋರ ಪುನಃ ಮುಂದು ವರಿದ "ಆರೋಗ್ಯವಾಗಿದ್ದ ಅವಳಿಗೆ ಮೊದಲು ಸಣ್ಣ ಬೆನ್ನುನೋವು ಕಾಣಿಸಿ ಕೊಂಡಿತು. ಚಿಕಿತ್ಸೆ ನಡೆಯುತಿದ್ದರೂ ಅದು ಇದ್ದಂತೆಯೇ ಇತ್ತು. ಅನಂತರ ಮೈಯಲ್ಲಿ ಝಾಂಡೀಸ್ ಕಾಣಿಸಿಕೊಂಡಿತು. ಆಸ್ಪತ್ರೆಗೆ ಕರೆತಂದರು. ಸಂಪೂರ್ಣ ಪರೀಕ್ಷೆ ಮಾಡುವುದು ಒಳ್ಳೆಯದೆಂದು ಅಲ್ಲೇ ಇರಿಸಿಕೊಂಡು ಇನ್ವೆಸ್ಟಿಗೇಶನ್ ಪ್ರಾರಂಭಿಸಿದೆವು. ಯಾವ ದೋಷವೂ ಕಾಣಿಸಲಿಲ್ಲ. ಆದರೆ ಝಾಂಡೀಸ್ ಹೆಚ್ಚುತ್ತಲೇ ಇತ್ತು. ಅವಳಿಗೆ ಆಸ್ಪತ್ರೆಯ ವಾತಾವರಣ ಇಷ್ಟವಾಗುತ್ತಿರಲಿಲ್ಲ. ದಿನವೂ ಮನೆಗೆ ಹೋಗಿ ಮಕ್ಕಳೊಂದಿಗೆ ಕಾಲ ಕಳೆಯುವ ಹಂಬಲ ಬೇರೆ. ಅವಳ ಗಂಡ ಎಳೆಯ ಮಕ್ಕಳನ್ನು ಮುದ್ದು ಗೈದು ಸ್ವಾಂತನಗೊಳಿಸುವ ರೀತಿಯಲ್ಲಿ ಸಂತೈಸುತಿದ್ದ. ಛೇ! ಅವನು ನೋಡಿ ಕೊಳ್ಳುತಿದ್ದ ರೀತಿ ವರ್ಣಿಸಿ ಪೂರೈಸಲಾರೆ. ನಾನು ಈಗಲೂ ಎಷ್ಟೋ ಬಾರಿ ಯೋಚಿಸುವೆ ಅಷ್ಟು ಒಳ್ಳೆಯ ಗಂಡಸರು ನಮ್ಮಲ್ಲಿ ಇದ್ದಾರೆಯೇ ? ಎಂತ."

...ಓಹ್! ಅವನ ಒಳ್ಳೆಯತನ ಇನ್ನೂ ಒಗಟಾಗಿಯೇ ಉಳಿದಿದೆ! ನನ್ನ ಕಣ್ಣುಗಳನ್ನೂ ನಾನು ನಂಬಲಾರೆ....

"ಏಕೆ, ಸುಮ್ಮನಾದಿರಿ? ಆಮೇಲೆ ?"

"ನಮ್ಮ ಎಲ್ಲಾ ಇನ್ವೆಸ್ಟಿಗೇಶನ್ ಮುಗಿದ ಮೇಲೆ ಇದು ಲಿವರ್-ಗೆ ಸಂಬಂಧ ಪಟ್ಟಿರಬಹುದೆಂದು ಅನುಮಾನ ತೋರಿ ಬಯಾಪ್ಸಿ (Biopsy) ಮಾಡಿ ನೋಡಿದರೆ ಕ್ಯಾನ್ಸರ್ ! (Cancer) ಅನಂತರ ಅವಳು ಬದು ಕಿದ್ದುದು ಎರಡೇ ವಾರ. ಆ ಮರಣಾಂತಿಕ ಗೋಳು ದೇವರಿಗೇ ಪ್ರೀತಿ ಅರ ವಿಂದಾ." ಎಂದ ಅಘೋರ ಪುನಃ ಅನುಕಂಪದಿಂದ ನುಡಿದ "ತುಂಬ ಅನ್ಯಾಯ...ಪಾಪ."

ತವಕದಿಂದ ಕೇಳಿದಳು ಅರವಿಂದಾ "ಇದೇನು ? ನೀವು ಅವಳಿಗೆ ಕ್ಯಾನ್ಸರ್ ಎಂತ ತಿಳಿಸಿಬಿಟ್ಟಿರೋ ಹೇಗೆ ?"

"ಇಲ್ಲಮ್ಮಾ, ಅದ್ಹೇಗೆ ಅವಳಿಗೆ ಹೇಳುವುದಾಗುತ್ತೆ ?"

"ಮತ್ತೆ ಕ್ಯಾನ್ಸರ್ ಆದವರು ಅಷ್ಟು ಬೇಗ ಮರಣ ಹೊಂದುವುದು ಹೇಗೆ ? ವರ್ಷಗಟ್ಟಲೆ ನರಳುತ್ತಾ ಇರುತ್ತಾರಲ್ಲವೇ ?"

"ಅದು ನಿಜ; ಅರವಿಂದಾ."

"ಮತ್ತೆ ಹೇಗೆ ಹೀಗಾಯಿತು ಅಘೂ ?"

"ನಮಗೆ ತಿಳಿದಾಗಲೇ ಅದು ಮೀರಿ ಬೆಳೆದಿತ್ತು."

"ಸರಿ ಬಿಡಿ; ಲಿವರ್‌ಗೆ ಬಂದ ಮೇಲೆ ಮುಗಿದೇ ಹೋಯಿತು."

"ಆದರೂ ಚಿಕಿತ್ಸೆ ಮಾಡುತ್ತಲೆ ಇದ್ದೇವೆ. ಹಗಲೂ ರಾತ್ರಿ ಸೇವೆ ನಡೆಯುತ್ತಲೇ ಇದೆ. ಅವಳ ಕುಟುಂಬದವರೊಬ್ಬರು ಕಲಕತ್ತೆಯ ಹಿರಿಯ ವೈದ್ಯರು. ವಿಷಯ ತಿಳಿದು ಅಲ್ಲಿಂದ ಓಡಿ ಬಂದರು. ಕ್ರೂರ ವಿಧಿಯೊಡನೆ ನಾವು ಕ್ಷಣಕ್ಷಣವೂ ಹೋರಾಡಿದ್ದೇವೆ. ಕೇಳು ಅರವಿಂದಾ, ಪ್ರಾಣಹೋಗುವ ಸ್ವಲ್ಪ ಮುಂಚೆ ಕುಸಿದು ಬಿದ್ದಿದ್ದ ಅವಳ ಬ್ಲಡ್ ಪ್ರೆಜರ್ ನಾರ್ಮಲ್ಲಿಗೆ ಬಂದಿತು. ಮೂರು ದಿನಗಳಿಂದ ಊಟ ನಿದ್ರೆಗಳಿಲ್ಲದೆ ಬಳಲಿ ಹೆಣವಾಗಿದ್ದ ಅವಳ ಪತಿಯನ್ನು ಡಾಕ್ಟರು ಬಲಾತ್ಕಾರವಾಗಿ ಮನೆಗೆ ಕಳುಹಿಸಿಕೊಟ್ಟರು. ಇನ್ನು ಬದುಕುತ್ತಾಳೆ. ಯೋಚಿಸಬೇಡಿ. ಎಂದೆಲ್ಲಾ ಅವನಿಗೆ ಧೈರ್ಯ ಹೇಳಿದ್ದೆವು. ಆದರೆ, ಅವನು ಆಸ್ಪತ್ರೆ ಬಿಟ್ಟ ಕೆಲವೇ ನಿಮಿಷಗಳೊಳಗಾಗಿ ಅವಳು ಅಸು ನೀಗಿದಳು......" ಹೇಳಲಾರದೆ ಹೇಳಿದ ಅಘೋರ.

"ಅಯ್ಯೋ, ಈ ಜಗತ್ತೇ ಹಾಗೆ ಅಘೂ. ನಾವು ಬೇಡಿದ್ದು ವಿನಾ ಈ ಪ್ರಪಂಚದಲ್ಲಿ ಮತ್ತೆಲ್ಲಾ ಉಂಟು."

"ಆದರೆ, ಒಂದು ವಿಷಯ ಅರವಿಂದಾ. ನಾನು ಅವರ ಹಣಕಾಸು ವೈಭವ ರೂಪ ಸಂಪತ್ತು ಇವುಗಳಿಗೆ ಮಾರು ಹೋಗಲಾರೆ. ಆದರೆ ಆ ಒಂದು ಪ್ರೀತಿಯ ಸಂಸಾರವನ್ನು ದೇವರು ಅಗಲಿಸಬಾರದಿತ್ತು."

"ಯಾವುದು ಅಗತ್ಯವೋ ಅದು ನಮಗಿಲ್ಲ."

"ಅದನ್ನು ಅರಿತೂ ಅರಿತೂ ನಾವು ಬೇಸ್ತು ಬೀಳುತ್ತೇವೆ, ಇದು ಆಶ್ಚರ್ಯವಲ್ಲವೇ ಅರವಿಂದಾ ?"

"ಮನಸ್ಸು ! ಈ ಮನಸ್ಸೆಂಬುದು ಬಲು ಕೆಟ್ಟದ್ದು ! ಈ ಮನಸ್ಸೇ ಸುಖದುಃಖಕ್ಕೆ ಕಾರಣ."

"ಹಾಗೆಂದು ಮನಸ್ಸನ್ನು ತುಚ್ಛೀಕರಿಸುವುದಕ್ಕಾಗುವುದಿಲ್ಲ. ಈ ಮನಸ್ಸಿಲ್ಲದಿದ್ದಲ್ಲಿ ನಾನು ನಿನ್ನನ್ನು ಪಡೆಯುತ್ತಲೇ ಇರಲಿಲ್ಲ !"

ಇಬ್ಬರ ಮುಖದಲ್ಲೂ ನಗುವಿನಲೆ ಉಕ್ಕಿ ಹರಿಯಿತು.

ಅಧ್ಯಾಯ

೨೩

ಸಾಯಂಸಮಯ. ತಣ್ಣನೆಯ ವಾತಾವರಣ ತನುಮನಗಳನ್ನು ತಣಿಸುವಂತಿದ್ದರೂ ಅದೊಂದು ಕ್ರೂರ ಸಂಜೆಯಾಗಿ ತೋರಿತು ಅಘೋರನಿಗೆ. ತನ್ನೆಲ್ಲಾ ಶಕ್ತಿಯನ್ನೂ ಕಡೆಗಣಿಸಿ ವಿಕಟ್ಟಾಸದಿಂದ ನಕ್ಕಿತ್ತು ವಿಧಿ.

ಅರವಿಂದಾ ಗರ್ಭಿಣಿಯಾದಾಗಿನಿಂದ ಅವಳ ಆರೈಕೆಯನ್ನು ಎಷ್ಟೆಷ್ಟು ಶ್ರದ್ಧೆಯಿಂದ ನೋಡಿಕೊಂಡಿದ್ದರೂ ಪ್ರಯೋಜನವಾಗದೆ ಅವಳು ಬಲಹೀನತೆಯಿಂದ ಇಂದು ಆಸ್ಪತ್ರೆಗೆ ಸೇರಿದಳು. ತಿಂಗಳೈದು ತುಂಬಿದ್ದರೂ ಗರ್ಭಗತ ಶಿಶುವಿನ ಬೆಳವಣಿಗೆ ಸಾಕಾದಷ್ಟಿರದೆ ಅರವಿಂದಾ ದಿನೇ ದಿನೇ ಕಳೆಗುಂದ ತೊಡಗಿದಳು.

ಅಘೋರನಿಗೆ ಪರೀಕ್ಷೆ ಸನ್ನಿಹಿತವಾಗಿದ್ದರೂ ತನ್ನ ವೇಳೆಯನ್ನು ಅವಳ ಬಳಿ ಕಳೆಯತೊಡಗಿದುದನ್ನು ನೋಡಿ ಅವಳೇ ಅಂದಳು–"ಹೀಗಾದರೆ ನಿಮ್ಮ ಪರೀಕ್ಷೆಯ ಗತಿಯೇನು ಅಘೂ ?" ದನಿ ಕಳಕಳಿಯಿಂದ ಹೊರಬಿತ್ತು.

"ಹೋದರೆ ಹೋಗಲಿ, ಅದು ನಿನಗಿಂತ ಹೆಚ್ಚಲ್ಲ. ಅರವಿಂದಾ!" ಒಂದೇ ನಿರ್ಧಾರದಿಂದ ಅವನ ದನಿ ಹೊರಬಿತ್ತು. ಖಿನ್ನವಾದ ಮುಖದಲ್ಲಿ ಕಿರುನಗೆ ತೇಲಿಸಿ ಅವಳಿಗೆ ಧೈರ್ಯ ತುಂಬುವ ಧಾಟಿಯಲ್ಲಿ–"ಅರೂ, ನೀನು ಹಸನ್ಮುಖಿಯಾಗಿದ್ದರೆ ಒಂದಲ್ಲ ನೂರು ಪರೀಕ್ಷೆಗಳಾಲ್ಲಾದರೂ ಗೆದ್ದುಬರುವೆ. ಮುಖ್ಯವಾಗಿ ನೀನು ಚೆನ್ನಾಗಿರುವುದಕ್ಕೆ ಪ್ರಯತ್ನಪಡು, ಅರವಿಂದಾ."

"ನನಗಿನ್ನೇನೂ ಇಲ್ಲ, ಈಗಲೇ ರಜೆ ತೆಗೆದುಕೊಂಡು ಮನೆಯಲ್ಲಿ ಕುಳಿತುಕೊಳ್ಳುವಂತಾದುದು ಬೇಜಾರು."

"ಏನು ಮಾಡಲಾಗುತ್ತೆ ? ಅದಕ್ಕೇಕೆ ಅಷ್ಟೊಂದು ಬೇಸರ ? ಬೇಸರ ಪಟ್ಟುಕೊಂಡಷ್ಟೂ ದೇಹ ಸ್ಥಿತಿ ಕೆಡುವುದಿಲ್ಲವೇ, ಅರವಿಂದಾ ?"

"ಕೆಲಸ ಕಾರ್ಯಗಳಿಲ್ಲದೆ ಹೀಗಿರುವುದೆಂದರೆ ಎಷ್ಟು ಕಷ್ಟ ಎಂಬುದು ನಿಮಗೆ ಗೊತ್ತಾಗುವುದಾದರೂ ಹೇಗೆ ? ಸಾಯಬೇಕು, ಸ್ವರ್ಗ ಕಾಣಬೇಕು !"

ಅದಕ್ಕಾಗಿಯೇ ನನ್ನ ಕಳಿದುಳಿದ ಹೊತ್ತನ್ನೆಲ್ಲಾ ನಿನ್ನ ಬಳಿ ಕಳಿಯುತ್ತಲಿದ್ದೇನೆ. ಆದರೂ, ನೀನು ಪ್ರಸನ್ನಳಾಗಿರುವುದಿಲ್ಲವಲ್ಲಾ ?"

"ಮೈಯಲ್ಲಿ ಆಲಸ್ಯವಿದ್ದಾಗ ಮನಸ್ಸು ಪ್ರಸನ್ನವಾಗುವುದಾದರೂ ಹೇಗೆ ?"

"ಮನಸ್ಸಿಗೆ ಹಚ್ಚಿಕೊಳ್ಳದಿದ್ದಲ್ಲಿ ಮೈ ಬೇಗನೆ ಚೇತರಿಸಿಕೊಳ್ಳುತ್ತದೆ. ನೀನು ಸದಾ ಕೊರಗುತ್ತಿರುವುದರಿಂದಲೇ ಮೈ ಚೇತರಿಸಿಕೊಳ್ಳುವುದಿಲ್ಲ. ಏನೇ ಬರಲಿ, ಮನಸ್ಸಿಗೆ ಹಚ್ಚಿಕೊಳ್ಳಬೇಡ."

"ನಾನೇನೂ ಹಚ್ಚಿಕೊಂಡಿಲ್ಲ."

"ನೀನು ಹಾಗೆಂದರೂ ನಿನ್ನ ಮುಖಮುದ್ರೆಯೇ ಹೇಳುತ್ತದೆ." ಎಂದ ಅಘೋರ ಹಣೆಯ ಮೇಲೆ ಕೈಯಿಟ್ಟು ಹೇಳಿದ "ನಿನಗೆ ವಿದ್ಯೆ ಕಡಿಮೆಯೆ ? ಬುದ್ಧಿ ಕಡಿಮೆಯೆ ? ಇದನ್ನೆಲ್ಲಾ ನಾನು ನಿನಗೆ ತಿಳಿಯ ಹೇಳಬೇಕೆ ಅರವಿಂದಾ ?" ದನಿಯು ಅನುಕಂಪದಿಂದ ಭಾರವಾಗಿತ್ತು.

ಅವಳು ಮಾತಾಡದೆ ನಸು ನಕ್ಕಳು.

"ಮಾನಸಿಕ ಭಾರ ಹೃದಯಕ್ಕೆ ಹೊರಲಾರದ ಹೊರೆ ಅರವಿಂದಾ ?"

"ನನಗೆ ಇಲ್ಲಿ ಇರುವುದೇ ಇಷ್ಟವಾಗುತ್ತಿಲ್ಲ. ಈ ಚಿಕಿತ್ಸೆ ಮನೆಯಲ್ಲಿ ತೆಗೆದುಕೊಂಡರಾಯಿತು. ನಾನಿನ್ನು ಅಲ್ಲೇ ಇರುವೆ."

"ನಾನಿಲ್ಲೇ ಇರುವಾಗ ಮನೆಯಾದರೇನು ? ಇಲ್ಲೇನು ?"

"ತುಂಬಾ ಬೇಸರ."

"ಕೆಲವು ಕಾಲವಷ್ಟೆ ?"

"ಹೊತ್ತು ಕಳೆಯುವುದು ಕಷ್ಟ ಅಘೊ."

"ಇಷ್ಟೊಂದು ಪುಸ್ತಕಗಳಿವೆಯಲ್ಲಾ !"

"ಈಗೀಗ ಓದುವುದೂ ಬೇಸರ."

"ಮುಖ್ಯವಾಗಿ ಧೃಢ ಮನಸ್ಸು ಮಾಡು."

ಆಸ್ಪತ್ರೆಯ ವಾತಾವರಣ ಅರವಿಂದಳ ಮನದಲ್ಲಿ ಆಂಧೋಳನೆಬ್ಬಿಸಿತ್ತು. ದಿನವೂ ಒಂದಲ್ಲ ಒಂದು ಸಾವು. ಎಡ ಬಲಗಳಲ್ಲಿ ಕರ್ಣಕಠೋರವಾದ ರೋದನ. ಕೆಲಸವಿಲ್ಲದೆ ಬೇಸರ ಪಟ್ಟುಕೊಳ್ಳುವುದರೊಂದಿಗೆ ರುದ್ರ ಭಯಂಕರ ಸನ್ನಿವೇಶವೂ ಸೇರಿಕೊಂಡು ಮನಸ್ಸಾಗರದಲ್ಲಿನ ಅಲೆಗಳನ್ನು

ಅಲ್ಲೋಲಕಲ್ಲೋಲ ಮಾಡಿತು. ತಾನು ಚೇತರಿಸಿಕೊಳ್ಳಲೇಬೇಕೆಂದು ಸರ್ವ ಪ್ರಯತ್ನ ಮಾಡುತಿದ್ದರೂ ವಾತಾವರಣ ಹಿತದಾಯಕವಾಗಿರಲಿಲ್ಲ. ಡಾ|| ಚಲುವಾಂಬಾ ಮತ್ತು ಡಾ|| ಸೌಮಾರವರ ಆರೈಕೆಯಲ್ಲಿ ಅರವಿಂದಾ ಅರಗಿಳಿಯಂತೆ ಪಂಜರದ ಪಕ್ಷಿಯಾದಳು. ರಕ್ತದ ಅಗತ್ಯವಿದ್ದಾಗಲೆಲ್ಲಾ ಅಘೋರ ಕೈ ನೀಡುತಿದ್ದ.

ಅಂದು ಅದೇ ತಾನೇ ಆಪರೇಶನ್‌ಗಳನ್ನು ಮುಗಿಸಿಕೊಂಡು ಬಂದ ಅಘೋರ ಅರವಿಂದಳ ಬಳಿ ಕುಳಿತುಕೊಂಡ. ಬಿಳಿಯ ಹೊದ್ದಿಕೆಯಡಿ ಮುದುರಿ ಮಲಗಿದ್ದ ಅವಳು ಒಮ್ಮೆಲೆ ಅಂದಳು “ಇನ್ನೂ ಊಟ ಮಾಡಲಿಲ್ಲ ವಲ್ಲಾ ? ಊಟ ತಣ್ಣಗಾಗುತ್ತಿದೆ.”

“ನನ್ನದಿರಲಿ, ನೀನು ಊಟ ಮಾಡಿದೆಯಾ ?”

“ಹೌದು.”

ಅವಳ ಮಾತಿನಲ್ಲಿ ನಂಬಿಕೆಯಾಗದೆ ದಾದಿಯನ್ನು ಕರೆದ. ಅವಳು ಆಸ್ಪತ್ರೆ ಸೇರಿದಾಗಿನಿಂದ ಅವಳಿಗಾಗಿಯೇ ಒಬ್ಬ ದಾದಿಯನ್ನು ನಿಯಮಿಸಿ ಕೊಂಡಾಗಿತ್ತು. ಚಾರ್ಟನ್ನು ನೋಡಿದ. ಅಂದಿನ ಔಷಧಿಯ ಕ್ರಮ ಮತ್ತು ಆಹಾರದ ಕ್ರಮಗಳನ್ನು ಅದು ಸಾರಿ ಹೇಳುತಿತ್ತು. ಅಷ್ಟರಲ್ಲಿ ದಾದಿ ಬಂದಳು. ಅವಳು ವಿವರ ನೀಡುತ್ತಿದ್ದಂತೆಯೇ ವಾರ್ಡ್ ಬಾಯ್ ಓಡಿ ಬಂದು ಹೇಳಿದ “ಒಂದು ಎಮರ್ಜನ್ಸಿ ಕೇಸು ಬಂದಿದೆ ಸಾರ್ !”

“ಏನಾಗಿದೆ ?”

“ಕೋತಿ ಪರಚಿ ಮಗುವಿಗೆ ಗಾಯವಾಗಿದೆ. ಕಂಠನಾಳ ಹರಿದು ಮಗು ಅಪಾಯ ಸ್ಥಿತಿಯಲ್ಲಿದೆ !”

“ಆಪರೇಶನ್ನಿಗೆ ಅಣಿಗೊಳಿಸಿರಿ. ಈ ಕ್ಷಣ ಬಂದೆ.”

“ನೀವಿನ್ನೂ ಊಟ ಮಾಡಲಿಲ್ಲವಲ್ಲಾ ? ಹೀಗಾದರೆ ನಿಮ್ಮ ಗತಿ ಯೇನು ?”

“ಇರಲಿ, ಈಗ ಬಂದು ಬಿಡುವೆ. ತಣ್ಣೀರಿನಲ್ಲಿ ಮೈ ತೊಳೆಯದೆ ಊಟ ಹಿತವಾಗಲಿಕ್ಕಿಲ್ಲ.”

ಅರವಿಂದಾ ಗಡಿಯಾರದತ್ತ ಕಣ್ಣು ಹೊರಳಿಸಿದಳು. ಮೂರು ಗಂಟೆಯಾಗಿತ್ತು. ಇನ್ನೊಂದು ಆಪರೇಶನ್ ಮುಗಿಸಿ ಊಟ ಮಾಡುವು

ವೆಂದರೆ ಇನ್ನೆಷ್ಟು ಹೊತ್ತೊ ? ಪುನಃ ಒತ್ತಾಯಪೂರ್ವಕವಾಗಿ ಹೇಳಿದಳು. "ಹೀಗಾದರೆ ನೀವೂ ಹಾಸಿಗೆ ಹಿಡಿಯಬೇಕಾದೀತು !"

ಒಂದು ಲೋಟ ನೀರನ್ನು ಗಟಗಟನೆ ಕುಡಿದು ಅಘೋರ ನಕ್ಕು ನುಡಿದ "ನೋಡು ! ನಾನು ನಿನ್ನ ಹಾಗೆ ಹೀಚಲ್ಲ ! ನಮ್ಮಪ್ಪ ಅಮ್ಮ ಕೈಕಾಲು ಗಟ್ಟಿಯಾಗಿ ಇಟ್ಟಿದ್ದಾರೆ."

ಅರವಿಂದಳ ನೋಟ ಅವನನ್ನೇ ಹಿಂಬಾಲಿಸಿತು. ಅರೆ ಕ್ಷಣದಲ್ಲಿ ಕಣ್ಣು ಗಳಲ್ಲಿ ನೀರು ತುಂಬಿತು. ಅಘೋರ ಮಾರುಗಾಲು ಹಾಕಿ ಆಪರೇಷನ್ ಥಿಯೇಟರನ್ನು ಸೇರಿದ. ಬಾಗಿಲಲ್ಲಿ ಮಗುವಿನ ತಂದೆ ತಾಯಿಯರು ಕಾತರತೆ ಯಿಂದ ಕಾದಿದ್ದರು. ಮಗು ಪ್ರಜ್ಞಾಹೀನವಾಗಿತ್ತು. ಹುಡುಗಿಯ ಮುಖದ ಮೇಲೆ ಕೋತಿ ಪರಚಿದ ಗಾಯಗಳಲ್ಲಿ ನೆತ್ತರು ಹೆಪ್ಪುಗಟ್ಟಿತ್ತು. ಕಂಠ ನಾಳ ಹರಿದು ಉಸಿರು ಅದರಿಂದಲೇ ನುಗ್ಗಿ ಬರುತ್ತಿತ್ತು. ಮೊದಲು ನಾಡಿ ಮತ್ತು ಹೃದಯಗಳನ್ನು ಪರೀಕ್ಷಿಸಿದ ಅವು ಸಮರ್ಪಕವಾಗಿದ್ದುವು. ಹೊಟ್ಟೆ ಯಲ್ಲಿ ಹಸಿವು ತಾಂಡವವಾಡುತ್ತಿದ್ದರೂ ಗಮನಿಸದೆ ಮಗುವಿಗೆ ಜೀವದಾನ ಮಾಡಿದ ಮನಸ್ಸು ಅದೇ ವಿಚಾರವನ್ನು ಮೆಲುಕು ಹಾಕುತಿತ್ತು...ಸ್ವೇಚ್ಛೆ ಯಾಗಿರಲು ಕೋತಿಗಳಿಗೆ ಅವಕಾಶ ನೀಡಿರುವುದರಿಂದ ಎಂತೆಂತಹ ಅನಾ ಹುತ ? ದೇಶದ ಹಿತಸಾಧನೆಯಾಗಬೇಕಾದರೆ ಈ ಅನಿಷ್ಟಗಳೆಲ್ಲಾ ತೊಲಗಲೇ ಬೇಕು. ಆಳುವ ಸರ್ಕಾರ ಕಣ್ತೆರೆಯದ ಹೊರತು ಇವುಗಳ ಹತೋಟಿ ಸಾಧ್ಯವೇಯಿಲ್ಲ. ಹಗಲೇ ನಿದ್ದೆಹೋಗುವ ಜನಕ್ಕೆ ಇವೆಲ್ಲಾ ಅರ್ಥವಾಗುವು ದಾದರೂ ಹೇಗೆ ?...

ಯೋಚಿಸುತ್ತಲೇ ಅಘೋರ ಅರವಿಂದಳ ಕೊಠಡಿಗೆ ಕಾಲಿಟ್ಟ. ಅವಳ ಕಣ್ಣುಗಳು ಇತ್ತಲೇ ನಿಟ್ಟಿಸುತ್ತಿದ್ದುವು. ನೋಡಿ ನಸುನಕ್ಕು ಕೇಳಿದ "ನಿದ್ದೆ ಮಾಡಲಿಲ್ಲವೇ ?"

"ಹೀಗಾದರೆ ನಿದ್ದೆ ಬರುವುದಾದರೂ ಹೇಗೆ ?"

"ಏಕೆ ? ಏನಾಯಿತು ಅರವಿಂದಾ ?"

"ಆಗುವುದೇನು ? ನಿಮಗಾಗಿಯೇ ಕಾದಿದ್ದೆ."

"ಓಹೋ! ನಾನು ನಿನ್ನ ಹಾಗಿದ್ದೇನೆಯೆ ? ನೋಡು !" ನಸುನಕ್ಕು ಕೈಗಳೆರಡನ್ನೂ ನೀಡಿ ಮಡಿಚಿ ಉಬ್ಬಿದ ಮಾಂಸ ಖಂಡಗಳಿಂದ ಉಕ್ಕಿನ ಶಕ್ತಿಯನ್ನು ಪ್ರದರ್ಶಿಸುತ್ತಾ ಹಾಸ್ಯದ ಚಟಾಕಿಯನ್ನು ಹಾರಿಸಿದ. ಅರವಿಂದಾ ನಸುನಕ್ಕಳು.

"ಮೊದಲಿಷ್ಟು ಊಟ ಮಾಡಿರಿ. ಅದೆಲ್ಲಾ ಅನಂತರ !"

"ಮೊದಲಿಷ್ಟು ಮೈತೊಳೆದುಕೊಳ್ಳುವೆ" ಎನ್ನುತ್ತಾ ಶೌಚದ ಮನೆಗೆ ಹೋದ.

ಅರವಿಂದಾ ಎದ್ದು ಊಟಕ್ಕೆ ಅಣಿ ಮಾಡಿದಳು. ಅರವಿಂದಾ ಆಸ್ಪತ್ರೆಯನ್ನು ಸೇರಿದಲಾಗಾಯಿತು ಇಬ್ಬರಿಗೂ ಊಟ ವಾರ್ಡಿಗೆ ಬರುತಿತ್ತು. ಊಟ ಆರಿ ತಂಗಳಾಗಿತ್ತು. ನಂದಾ ಚಹದೊಡನೆ ಒಳ ಬಂದಾಗ ಆಗ ತಾನೇ ತಟ್ಟೆಯ ಮುಂದೆ ಕುಳಿತಿದ್ದ ಮಗನನ್ನು ನೋಡಿ ಮನಸ್ಸು ಮುದುಡಿ ಕೊಂಡಿತ್ತು. ಇಲ್ಲಿಗೆ ಊಟ ಬಂದರೂ ಹೊತ್ತಿಗೆ ಸರಿಯಾಗಿ ಊಟ ಮಾಡದಿದ್ದರೆ ಹೇಗೆ? ಎಂದೆನಿಸಿ ಹೃದಯ ಅನುಕಂಪದಿಂದ ಮಿಡಿಯಿತು. ಒಳ ಬರುತ್ತಲೂ ಅವಳೆಂದಳು "ಅಘೂ, ನೀನೂ ಮೈಕೆಡಿಸಿಕೊಳ್ಳಬೇಡಪ್ಪಾ."

"ಅಂದೇ ಹೇಳಿದೆನಲ್ಲಾ. ಒಂದೇ ಬಾರಿಗೆ ಎರಡು ಪಟ್ಟು ತಿಂದು ಬಿಡುವೆ !" ಕಿಲಕಿಲ ನಕ್ಕುಬಿಟ್ಟ ಅಘೋರ. ಮಗನ ಉಲ್ಲಾಸದಿಂದ ಮನ ತುಂಬಿದರೂ ಸೊಸೆಯ ಸ್ಥಿತಿ ಹೃದಯವನ್ನು ಭಾರವಾಗಿಸಿತು. ಅರವಿಂದಳಿಗೆ ಚಹ ತಿಂಡಿ ತಿನಿಸುಗಳನ್ನು ನೀಡಿ ಬಳಿಯಲ್ಲಿದ್ದ ಕುರ್ಚಿಯ ಮೇಲೆ ಕುಳಿತುಕೊಂಡಳು. ಸೊಸೆಯ ಕಳೆಗುಂದಿದ ಮುಖವನ್ನು ನೋಡು ನೋಡುತ್ತಿದ್ದಂತೆ ಎದೆಯಲ್ಲಿ ಅಳುಕು ಮೂಡಿ ಹೃದಯ ಡಬಡಬನೆ ಬಡಿದುಕೊಳ್ಳತೊಡಗಿತು.

ಹಲವಾರು ಡಾಕ್ಟರುಗಳೊಂದಿಗೆ ಡಾ|| ಚಲುವಾಂಬ ಕೊಠಡಿಯನ್ನು ಪ್ರವೇಶಿಸಿದಾಗ ಅಘೋರ ಅರವಿಂದಳ ರಕ್ತದ ಒತ್ತಡವನ್ನು ಪರೀಕ್ಷಿಸುತ್ತಿದ್ದ. ಡಾ|| ಸೌಮಾ ಡಾ|| ಚಂಪಾ ಡಾ|| ಶಾರದಾರವರೊಂದಿಗೆ ನಿಂತು ನೋಡಿದ ಡಾ|| ಚೆಲುವಾಂಬ ಸಮಾಧಾನದ ಉಸಿರು ಬಿಟ್ಟಳು. ರಕ್ತದ ಒತ್ತಡ ವ್ಯಾಪ್ತಿಗೆ ತುಸು ಅಂತರದಲ್ಲಿತ್ತು. ಚೆಲುವಾಂಬ ಹೃದಯವನ್ನು ಪರೀಕ್ಷಿಸಿ "ಮುಖ್ಯವಾಗಿ ಮನಸ್ಸು ಉಲ್ಲಾಸದಿಂದಿರಬೇಕು. ಅಘೋರರಂತ ಪ್ರತಿಭಾನ್ವಿತ ಡಾಕ್ಟರ ಪತ್ನಿಗೇಕೆ ಭಯ ? ಅಘೋರ ಇದ್ದೆಡೆ ರುದ್ರನೂ ಸುಳಿಯಲಾರ.

ಎಲ್ಲರೂ ನಗತೊಡಗಿದರು. ಅರವಿಂದಾ ನಗುನಗುತ್ತಾ ಎದ್ದು ಕುಳಿತು ಕೊಂಡಳು. ಚೆಲುವಾಂಬ ಪುನಃ ಕೇಳಿದಳು "ಮನದಲ್ಲಿ ಅಷ್ಟೊಂದು ಭಯವೇಕೆ? ನಿಮ್ಮ ಕಣ್ಣುಗಳ ಆಳದಲ್ಲಿ ಭಯದ ಊಟಿಯೇ ಇದೆ. ಹೀಗಾದರೆ ಹೇಗೆ ? ಈಚೆಗೆ ಅಘೋರರು ಪಳಗುತ್ತಿರುವುದನ್ನು ನೋಡುವಾಗಲೆಲ್ಲಾ ಅರವಿಂದಾ ಬಹಳ ಮಟ್ಟಿಗೆ ಪಳಗಿಸಿದ್ದಾರೆ ಎಂದುಕೊಂಡಿದ್ದೆವು !" ಮಾತು ಹೊರಬಿದ್ದೊಡನೆಯೇ ಅಘೋರ ಸಹಪಾಟಿಯರ ನಗುವಿನ ಗುಲ್ಲಿನೊಂದಿಗೆ ತನ್ನ ನಗುವನ್ನೂ ತೇಲಿಬಿಟ್ಟ.

"ಮನೆಯಲ್ಲಿ ಪುಕ್ಕಲು ಹೆಂಡತಿ ಇರುವುದರಿಂದಲೇ ಅಘೋರರರು ಇಷ್ಟು ಜೋರಾದುದು !"

"ನೀವು ಎಂ. ಎ., ಓದಿಯೂ ಪ್ರಯೋಜನವಿಲ್ಲ !"

"ನಿಮ್ಮ ಬಳಿ ಮಿದುವಾಗುವಷ್ಟು ಅಘೋರರು ಇನ್ಯಾರ ಬಳಿಯೂ ಮಿದುವಾಗುವುದಿಲ್ಲ. ಸಮಯ ಸಾಧಿಸಿ ಜುಟ್ಟು ಹಿಡಿಯುವ ಚಮತ್ಕಾರ ಇಲ್ಲದಿದ್ದರೆ ಹೇಗೆ ?"

ನಗುವಿನ ಗುಲ್ಲು ಇಡೀ ಕೊಠಡಿಯನ್ನೇ ಮರ್ಮರಿಸಿತು.

ಅಘೋರ ಮನಸ್ಸಿಲ್ಲದ ಮನಸ್ಸಿನಿಂದ ಪರೀಕ್ಷೆಯನ್ನು ಮುಗಿಸಿ ಅರವಿಂದಳ ಕೊಠಡಿಗೆ ಕಾಲಿಟ್ಟಾಗ ಅವಳ ನೋಟ ಕಿಟಕಿಯಲ್ಲಿ ತೂರಿ ಹೊರ ಜಗತ್ತಿನಲ್ಲಿ ನೆಟ್ಟಿತ್ತು. ಒಳ ಬಂದವನೇ–"ಹೇಗಿದ್ದೀ ಅರವಿಂದಾ ? ಮುಖ ವೇಕೆ ಬಾಡಿದೆ ?"

ಅವಳು ಸ್ವಲ್ಪ ಹೊತ್ತು ಮಾತಾಡದೆ ಕುಳಿತಿದ್ದು ಅನಂತರ ಕೇಳಿದಳು "ಹೇಗೆ ಮಾಡಿದ್ದೀರಿ ?"

"ಏನೋ ಸುಮಾರಾಗಿ," ಅಸಡ್ಡೆಯ ದನಿಯಲ್ಲಿ ನುಡಿದ ಅಘೋರ.

"ಇಂದೇಕೋ ಮೈಸ್ವಸ್ಥವಿಲ್ಲ." ಹೇಳಲಾರದೆ ಹೇಳಿದಳು ಅರವಿಂದಾ. ಕಣ್ಣುಗಳಲ್ಲಿ ನೀರಾಡಿತು.

"ನೀನೇಕೆ ಇಷ್ಟೊಂದು ಭಯ ಪಟ್ಟುಕೊಳ್ಳುತ್ತೀ? ಇಷ್ಟೆಲ್ಲಕ್ಕೂ ನಿನ್ನ ಮನಸ್ಸೇ ಕಾರಣ ಅರವಿಂದಾ." ದನಿ ದುಗುಡದಿಂದ ಕೂಡಿತ್ತು. ಹಣೆಯ ಮೇಲೆ ಕೈಯಿಟ್ಟು ಪುನಃ–"ಅರೂ, ಏಕೆ ಸಪ್ಪಗಿದ್ದಿ ? ಏನು ತೊಂದರೆ ?"

ಅರವಿಂದಳ ದೃಷ್ಟಿ ದೂರ ದಿಗಂತದಲ್ಲಿ ನೆಟ್ಟಿತ್ತು. ಕುರ್ಚಿಯ ಮೇಲೆ ಕುಳಿತಿದ್ದ ಅವಳು ಸ್ವಲ್ಪ ಹೊತ್ತು ಮಾತಾಡಲಿಲ್ಲ. ಕಣ್ಣಂಚಿನಲ್ಲಿ ನೀರು ಫಳಫಳನೆ ಮಿನುಗಿತು.

"ಏನು ಅರವಿಂದಾ ?"

ಅವಳು ಮಾತಾಡಲಿಲ್ಲ. ಕಣ್ಣುಗಳಿಂದ ಕೆಲವು ಹನಿ ಕೆನ್ನೆಯ ಮೇಲುರುಳಿದುವು.

"ಏನಿದ್ದರೂ ಹೇಳು. ಮರೆ ಮಾಚುವುದೇಕೆ ?"

"ಹೊಟ್ಟೆಯಲ್ಲಿ ಏನೋ ಸಂಕಟ; ತಳಮಳ."

ಅಘೋರ ಹೊಟ್ಟೆಯ ಮೇಲೆ ಕೈಯಾಡಿಸಿದ. ನೋವಿರುವುದು ತಿಳಿಯಿತು. ತಕ್ಷಣ ಕೇಳಿದ "ನೋವಿದ್ದಂತಿದೆಯಲ್ಲಾ?" ದನಿಯಲ್ಲಿ ದುಗುಡವಿತ್ತು.

"ಹೌದು" ಮೆಲ್ಲನೆ ಮುಖ ಹಿಂಡುತ್ತಾ ಅವಳೆಂದಳು.

ದಾದಿಯನ್ನು ಕರೆದು ಡಾ|| ಚೆಲುವಾಂಬಳನ್ನು ಕರೆತರಲು ಕಳುಹಿಸಿದ. ಅವರು ಬರುವಷ್ಟರಲ್ಲಿ ನೋವು ಹೆಚ್ಚುತ್ತಲೇ ಹೋಯಿತು. ಅಘೋರ ಖಿನ್ನವದನನಾಗಿ ನಿಂತು, ಡಾ|| ಚಲುವಾಂಬ ಸಹ ಡಾಕ್ಟರುಗಳೊಡನೆ ಬಂದೊಡನೆ ಅರವಿಂದಳನ್ನು ಲೇಬರ್ ವಾರ್ಡಿಗೆ ಕಳುಹಿಸಿ ಹೊರಗಡೆ ಉಳಿದ. ಕೆಲವೇ ನಿಮಿಷಗಳೊಳಗಾಗಿ ಸೌಮಾ ಹೊರ ಬಂದು ಹೇಳಿದಳು "ಅವರಿಗೆ ನೋವು ಬರುತ್ತಿದೆ. ಇನ್ನು ಕೆಲವೇ ನಿಮಿಷಗಳೊಳಗೆ ಗರ್ಭಪಾತವಾಗಲಿದೆ."

ಅಘೋರ ವಿಷಣ್ಣವದನನಾಗಿ ನಿಂತ. ತಮ್ಮಿಬ್ಬರ ಆರೋಗ್ಯ ಸಮರ್ಪಕವಾಗಿದ್ದರೂ ಹೀಗಾಯಿತೇಕೆ ? ಎಂಬ ಯೋಚನೆ ಹಿರಿದು ತಿನ್ನತೊಡಗಿತು. ಯೋಚನೆಯ ಭರದಿಂದ ಹೃದಯ ಭಾರವಾಯಿತು. ಹಾಗೇ ಶತಪಥ ಸುತ್ತತೊಡಗಿದ. ಡಾ|| ಘನಶ್ಯಾಮ್ ಕಾರಿಡಾರಿನ ಮೂಲಕ ಇತ್ತ ಬರುತ್ತಿದ್ದುದು ಕಾಣ ಬಂತು. ಅವರ ಹಿಂದೆ ಏಳೆಂಟು ಮಂದಿ ಡಾಕ್ಟರುಗಳ ದಳವಿತ್ತು. ಬಿಳಿಯ ಕೋಟು ಸ್ಟೆತೊಸ್ಕೋಪಿನ ಹಾರಗಳಿಂದಲಂಕೃತರಾದ ಅವರು ಕ್ಷಣ ಕ್ಷಣವೂ ಹತ್ತಿರವಾಗುತಿದ್ದರು. ಅಘೋರನ ಖಿನ್ನ ವದನವನ್ನು ಅಲ್ಲಿಂದಲೇ ಗಮನಿಸಿದ ಘನಶ್ಯಾಮ್ ಕೇಳಿದರು "ಏಕೆ ಸಪ್ಪಗಿದ್ದೀರಿ ? ಏನು ಸಮಾಚಾರ ?"

ಅಘೋರ ವಿನೀತನಾಗಿ ವಿಷಯವನ್ನು ಮುಂದಿಟ್ಟ.

"ಇಷ್ಟಕ್ಕೆಲ್ಲಾ ಕುಗ್ಗುವುದೇ ? That which cannot be cured must be endured."

ಅಘೋರ ಮಾತನಾಡದೆ ತಲೆಬಾಗಿ ನಿಂತ.

"ಸುಖವಾಗಿದ್ದಾರೆ ತಾನೆ ?"

"ಹ್ಞೂ."

ಮತ್ತೇಕೆ ವ್ಯಥೆ ? ಒಂದು ಹೋದರೆ ಇನ್ನೊಂದು ಬರುತ್ತೆ."

ಸಂತೈಸುವ ರೀತಿಯಲ್ಲಿ ಅಘೋರನ ಬೆನ್ನು ತಟ್ಟಿ ಡಾಕ್ಟರ ದಳ ಮುಂದುವರಿಯಿತು. ಲೇಬರ್ ವಾರ್ಡಿನ ಬಾಗಿಲು ತೆರೆಯಿತು. ಚಂಪಾ ಬಂದು ಹೇಳಲಾರದೇ ಹೇಳಿದಳು "ಅರವಿಂದಾ ಸುಖವಾಗಿದ್ದಾರೆ. ಮಗು ಹೋಯಿತು."

ಭಾರವಾದ ಎದೆಯಿಂದ ನೀಳವಾದ ನಿಟ್ಟುಸಿರು ಹೊರಹೊಮ್ಮಿತು. ಅಘೋರ ಒಳಹೋಗಿ ಮಡದಿಯ ಮುಖ ನೋಡಿದ. ಬಳಲಿದ್ದರೂ ತೋರ ಗೊಡಲಿಲ್ಲ. ಇಬ್ಬರ ಮುಖದಲ್ಲೂ ನೋವಿನ ಕಪ್ಪು ಛಾಯೆ ಮುದ್ರೆ ಯೊತ್ತಿತು.

ಅದೇ ದಿನ ಸಂಜೆ ವಂದನಾ ಅರವಿಂದಳನ್ನು ನೋಡಲು ಬಂದಳು. ಅವಳು ಮೂರನೆಯ ಗರ್ಭಿಣಿ. ಐದು ತಿಂಗಳಾಗಿತ್ತು. ಅವಳು ಈ ಸಲ ಅಷ್ಟೊಂದು ಬಳಲಿರದೆ ದೇಹಸ್ಥಿತಿ ಉತ್ತಮವಾಗಿತ್ತು. ಅವಳನ್ನು ನೋಡು ನೋಡುತ್ತಾ ಅರವಿಂದಾ–"ವಂದನಾ, ಈ ಸಲ ನೀನು ಪರವಾಗಿಲ್ಲ ಕಣೆ."

"ಸಧ್ಯ, ಈ ಅಂಕ ಮುಗಿದರೆ ಸಾಕು." ದನಿ ದುಗುಡದಿಂದ ಹೊರ ಬಿತ್ತು.

"ಇಬ್ಬರು ಸೊಗಸಾದ ಗಂಡುಮಕ್ಕಳಿದ್ದಾರೆ. ಸ್ವಲ್ಪ ಕಾಲ ವಿರಾಮ ಚೆನ್ನಾಗಿ ಹಾಕಬಹುದಾಗಿತ್ತು."

"ಹಾಗೆಂದರೆ ಮದನ್ ಕೇಳಬೇಕಲ್ಲ? ಒಂದು ಹೆಣ್ಣು ಹೆತ್ತುಬಿಡು. ಒಂದೇ ಸಲ ಈ ಅಂಕ ಮುಗಿದು ಹೋಗಲಿ, ಎನ್ನುತ್ತಾರೆ."

"ಒಂದು ವೇಳೆ ಇದೂ ಗಂಡಾದರೆ ?"

"ಮುಗಿದೇ ಹೋಯಿತು ! ಅವರಿಗೆ ಹೆಣ್ಣು ಮಕ್ಕಳೆಂದರೆ ಪ್ರಾಣ."

"ನಿನಗೆ ಹೆಣ್ಣು ಮಗುವಿನ ಮೇಲೆ ಆಸೆ ಇಲ್ಲವೇನು ?"

"ಸದ್ಯ, ಇದು ಹೆಣ್ಣಾಗಲೀ ಎಂದು ಎಲ್ಲಾ ದೇವರಿಗೂ ಹರಕೆ ಹೊತ್ತಿದ್ದೇನೆ."

ಅರವಿಂದ ವಂದನಳ ಮುಖ ನೋಡಿ ನಸು ನಕ್ಕು ಹೇಳಿದಳು "ನಿನಗಾಗಿ ನಾನು ಪ್ರಾರ್ಥಿಸುವೆ. ನನಗಾಗಿ ನೀನು ಪ್ರಾರ್ಥಿಸು ವಂದನಾ."

ತನುಮನಗಳಲ್ಲಿ ನೋವು ತುಂಬಿದ್ದರೂ ಮೇಲುಮೇಲಕ್ಕೆ ಪ್ರಯತ್ನಪೂರ್ವಕವಾಗಿ ಧೈರ್ಯ ಪ್ರದರ್ಶನ ಮಾಡುತಿದ್ದ ಅವಳ ಬಗೆಗೆ ಎಲ್ಲಿಲ್ಲದ ಕನಿಕರ ಮೂಡಿತು. ಮಾತು ಮರೆಸಲು ವಂದನಾ–"ಸುಧೀರ್‌ರವರಿಗೆ ಈ ಸಲ ಹೆಣ್ಣು ಮಗು. ಅವರಿಗೀಗ ತಂಟೆ ತಾಪತ್ರಯವೆಲ್ಲಾ ಮುಗಿದಂತಾಯಿತು. ಇನ್ನು ಪೂರ್ಣ ವಿರಾಮ ಹಾಕುವುದಾಗಿ ನುಡಿದಳು ಸುಮತಿ."

"ಮೊದಲನೆಯುವರಿಬ್ಬರೂ ಗಂಡು ಮಕ್ಕಳು. ಸಾಕು, ಬೇಕಾದಷ್ಟಾಯಿತು." ಎಂದ ಅರವಿಂದಾ ಪುನಃ–"ನನ್ನಂಥಾ ಅದೃಷ್ಟ ಹೀನರಿಗೆ ಕೈಗೆ ಬಂದದ್ದು ಬಾಯಿಗೆ ಬರುವುದಿಲ್ಲ." ದನಿಯಲ್ಲಿ ದುಗುಡವಿತ್ತು.

"ಅರವಿಂದಾ."

"........."

"ಅರವಿಂದಾ, ಅದನ್ನಿಷ್ಟು ಮನಸ್ಸಿಗೆ ಹಚ್ಚಿಕೊಳ್ಳಬೇಡಮ್ಮಾ."

"ಏನು ಮಾಡಲಿ ಹೇಳು."

"ಹಾಗೆಂದು ಕೊರಗುತ್ತಾ ಕುಳಿತರೆ ಆದೀತೆ ? ಕಳೆದು ಹೋದ ದುರ್ದಿನಗಳನ್ನು ಬದಿಗಿಟ್ಟು ಮುಂಬರುವ ಸುದಿನಗಳಿಗಾಗಿ ಎದುರು ನೋಡು ಅರವಿಂದಾ."

ಕಣ್ಣಂಚಿನಲ್ಲಿ ಮಿನುಗಿದ ಬಿಂದು ಉತ್ತರ ನೀಡಿತು. ವಂದನಳ ಕಣ್ಣುಗಳಲ್ಲೂ ಪ್ರತಿ ಬಿಂದುಗಳು ಮಿನುಗಿದುವು. ನೀರವದ ಮಧ್ಯೆ ಎರಡು ಹೃದಯಗಳೂ ಅನುಕಂಪದಿಂದ ಮಿಡಿದುವು.

ವಂದನಾ ಹೊರಟು ಹೋದ ತುಸು ಹೊತ್ತಿನೊಳಗಾಗಿ ರತನ್‌ಮಿಶ್ರ ಪತ್ನಿಯೊಡನೆ ಆಗಮಿಸಿದ. ಹಿಂದೆಯೇ ಅಘೋರನೂ ಆಗಮಿಸಿದ. ರತನ್ ಮಿಶ್ರನ ಪತ್ನಿ ಮೈಸೂರಿನವಳು. ಮದುವೆಯಾದಂದಿನಿಂದ ಜೀವನದ ಸಾರವನ್ನು ಸವಿದು ಸುಖವಾಗಿ ದಿನಗಳನ್ನು ತಳ್ಳಿದ ದಂಪತಿಗಳು ಅವರು. ಚಂದ್ರಿಕಾ

ಬಳಿಯಲ್ಲಿ ಕುಳಿತುಕೊಂಡು ಅರವಿಂದಳ ಕೈಯನ್ನು ಅದುಮಿ ಹಿಡಿದುಕೊಂಡು ಕೇಳಿದಳು "ಹೇಗಿದ್ದೀರಿ ?"

"ಬಳಲಿಕೆ ಇದೆ."

ಅಘೋರ ರತನ್‌ಮಿಶ್ರನೊಡನೆ ಕುಳಿತುಕೊಂಡ. ಅದೇ ತಾನೆ ಸಂಜೆಯ ರೌಂಡು ಮುಗಿಸಿಕೊಂಡು ಬಂದಿದ್ದುದರಿಂದ ಇಬ್ಬರಿಗೂ ಕೆಲಸ ಮುಗಿದಿತ್ತು. ಆರಾಮವಾಗಿ ಕುಳಿತುಕೊಂಡರು.

"ಸುಧೀರ್ ಬಂದಿದ್ದಾನೆ ಸಿಕ್ಕಿದನೋ ?"

"ಇಲ್ಲವಲ್ಲಾ ?"

ಮಾತು ಮುಗಿಯುವುದರೊಳಗಾಗಿ ಜಾನಕೀರಾಂ ಸುಧೀರ್ ಮದನ್ ಅಲ್ಲಿ ಪ್ರತ್ಯಕ್ಷರಾದರು. ಅಘೋರ ಎಲ್ಲರನ್ನೂ ಆತ್ಮೀಯತೆಯಿಂದ ಬರಮಾಡಿ ಕೊಂಡ. ಎಲ್ಲರೂ ಅರವಿಂದಳಿಗೆ ಒಂದೇ ಪ್ರಶ್ನೆ ಹಾಕಿದರು "ಹೇಗಿದ್ದೀರಿ ?"

ಎಲ್ಲರಿಗೂ ಅವಳು ಒಂದೇ ಉತ್ತರ ನೀಡಿದಳು "ಸ್ವಲ್ಪ ಬಳಲಿಕೆ."

ತುಸು ಹೊತ್ತು ಉರುಳುವುದರೊಳಗಾಗಿ ಡಾ|| ಚಲುವಾಂಬ ತನ್ನ ದಳ ದೊಂದಿಗೆ ಅಲ್ಲಿಗೆ ಬಂದಳು. ಹೆಂಗಳೆಯರ ಕಿಲಕಿಲ ನಗುವಿನಲೆಯೊಂದಿಗೆ ಅತ್ತರಿನ ಸುಗಂಧ ಮೊದಲು ನುಗ್ಗಿ ಬಂದು ಡಾಕ್ಟರಮ್ಮನವರುಗಳ ಆಗಮನದ ಸುದ್ದಿಯನ್ನು ನಲವಿಂದ ಬಿತ್ತರಿಸಿತು.

ಘಮ. ಘಮ. ಘಮ...!

"ಓ ! ಹೋ ! ಹೋ ! ಬರೀ ಡಾಕ್ಟರುಗಳೇ ! ನಿನಗೆ ಏನನ್ನಾದರೂ ಸೃಷ್ಟಿಸಿ ಕೊಡಬಲ್ಲರು ! ಏನು ಬೇಕಾದರೂ ಹೇಳು !" ಎನ್ನುತ್ತಾ ಅರವಿಂದಳ ಕಡೆ ಹುಬ್ಬು ಹಾರಿಸಿದ ಅಘೋರ.

"ಎಲ್ಲರೂ ಕೂಡಿ ಸ್ವರ್ಗದ ಬಾಗಿಲಿಗೆ ಬೀಗ ಹಾಕಿ ಬಿಡಿರಿ ! ಅಷ್ಟಾದರೆ ಸಾಕು." ಎಂದಳು ಚಂದ್ರಿಕಾ.

ಎಲ್ಲೆಲ್ಲೂ ಕಿಲಕಿಲ ನಗುವಿನಲೆ ಎದ್ದಿತು. ಅರವಿಂದಳ ಮುಖದಲ್ಲೂ ನಗು ಮಿನುಗಿ ಮಾಯವಾಯಿತು.

ಅಧ್ಯಾಯ

೨೪

ಮರು ವರ್ಷದ ಪರೀಕ್ಷೆಯಲ್ಲಿಯೂ ಅಘೋರ ಇದೇ ತೊಂದರೆಗೊಳ ಪಟ್ಟ. ಅನವಿಂದಾ ಆರು ತಿಂಗಳು ಕೆಲಸ ಮಾಡಿ ಪುನಃ ಆಸ್ಪತ್ರೆಗೆ ಸೇರಿ ಕೊಂಡಳು. ಪೂರ್ವಭಾವೀ ಸಿದ್ಧತೆಗಳಿದ್ದು ಅನವರತ ಉತ್ತಮ ಚಿಕಿತ್ಸೆ ನಡೆದರೂ ಆರನೆಯ ತಿಂಗಳಿನಲ್ಲಿ ಪುನಃ ಗರ್ಭಪಾತವಾಯಿತು. ಅಘೋರ ದಂಪತಿಗಳು ಅತುಲ ಸಂಕಟಕ್ಕೊಳಗಾದರು.

ಆದರೂ ಅಘೋರ ಸರ್ಜರಿಯಲ್ಲಿ ಪ್ರಥಮ ಸ್ಥಾನ ಗಳಿಸಿದ. ಅನಂತರ ಡಾ|| ಅಘೋರನ ಹೆಸರು ಎಲ್ಲೆಲ್ಲೂ ಮನೆ ಮಾತಾಯಿತು. ಈಗೀಗ ಅಘೋರನಿಗೆ ಹಗಲೆಲ್ಲಾ ದುಡಿದರೂ ಮುಗಿಯದ ಕೆಲಸ. ಅರವಿಂದಳಿಗೆ ಅವನ ದರ್ಶನ ಲಾಭವೂ ದುರ್ಲಭವೆನ್ನುವಷ್ಟು ಅಘೋರನ ದಿನಚರಿ ಮಾರ್ಪಟ್ಟಿತು. ಬೆಳಗ್ಗೆ ಏಳುವುದರೊಳಗಾಗಿ ಬಂದು ಮನೆಯ ಬಳಿ ಕಾದಿರುತಿದ್ದ ರೋಗಿಗಳನ್ನು ಪರೀಕ್ಷಿಸಿ ಅವಸರವಸರವಾಗಿ ಪ್ರಾತಃವಿಧಿಗಳನ್ನು ಮುಗಿಸಿ ಹೊರಟನೆಂದರೆ ಸಂಜೆಯೇ ಮನೆಗೆ ಹಿಂದಿರುಗುತ್ತಿದ್ದುದು. ಮಧ್ಯಾಹ್ನದ ಊಟವೂ ಅಲ್ಲೆ. ಇತರ ಆಸ್ಪತ್ರೆಗಳಿಂದ ಕರೆ. ಪುನಃ ಸಂಜೆ ರೋಗಿಗಳ ಕಾಟ. ಹೀಗಾಗಿ ಬಲಿಷ್ಠನಾದ ಅಘೋರನೂ ಒಮ್ಮೊಮ್ಮೆ ಬಳಲಿ ಹೋಗುತ್ತಿದ್ದ.

ಅರವಿಂದಾ ಕಾಲೇಜಿನಿಂದ ಹಿಂದಿರುಗಿದೊಡನೆಯೇ ನಂದಾದೇವಿಯೊಂದಿಗೆ ಕಾಲಹರಣ ಮಾಡತೊಡಗಿದಳು. ಒಮ್ಮೊಮ್ಮೆ ನಾನೂ ಡಾಕ್ಟರ್ ಆಗಿದ್ದಿದ್ದರೆ ? ಎಂಬ ಪ್ರಶ್ನೆಯೂ ಮನದಲ್ಲಿ ಏಳುತಿತ್ತು. ಮರು ಕ್ಷಣದಲ್ಲಿ ಅಯ್ಯೊ, ವಿಧಿ ಸಂಕಲ್ಪದ ಮುಂದೆ ನಮ್ಮದೇನು ? ಎಂದು ತನಗೆ ತಾನೇ ಸಮಾಧಾನ ಪಟ್ಟುಕೊಳ್ಳುತಿದ್ದಳು.

ಅಂದು ಕಾಲೇಜಿಗೆ ರಜೆಯಿತ್ತು. ಕೈತುಂಬ ಕೆಲಸವಿರುವಾಗ ಹೇಗೋ ಹೊತ್ತು ಹೋಗುತಿತ್ತು. ಕೆಲಸವಿಲ್ಲದಾಗ ಮನೋವೇದನೆಯಿಂದ ಅರವಿಂದ

ತತ್ತರಿಸಿ ಹೋಗುತಿದ್ದಳು...ಈ ಜೀವನ ಎಷ್ಟು ಘೋರ ?...ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ ! ಆಗ ಜೀವನ ಎಷ್ಟೊಂದು ಸಾರವತ್ತಾಗಿ ತೋರುತಿತ್ತು ? ಎಷ್ಟೊಂದು ಆಕರ್ಷವಾಗಿತ್ತು ? ಮದುವೆಯಾಗಿ ಐದು ವರ್ಷಕ್ಕೆಲ್ಲಾ ದೇಹದ ಶಕ್ತಿ ಸಮಸ್ತವನ್ನೂ ಬಸಿದುಕೊಂಡಿತ್ತೇ ಬಾಳು ? ಇಬ್ಬರೂ ಕಲಿತವರು ಅಂದಮೇಲೆ ಬಾಳು ಬಂಗಾರವಾಗುತ್ತೆ ಎಂದೆಲ್ಲಾ ಹಾರೈಸಿದುದು ಎಷ್ಟು ಬಾರಿ? ಉಕ್ಕಿ ಬಂದ ಸಂತಸದಿಂದ–ಉಬ್ಬಿದ ಹೃದಯದಿಂದ–ಒಲವು ತುಂಬಿದ ನೋಟದಿಂದ–ಆನಂದ ತುಂಬಿದ ಮನದಿಂದ ಹೊಕ್ಕಿದ ಬಾಳು ಎಷ್ಟು ಬೇಗ ನಿಸ್ಸಾರವಾಗಿ ತೋರುತ್ತಿದೆ!...ಯೋಚಿಸುತ್ತಾ ಯೋಚಿಸುತ್ತಾ ಅರವಿಂದಾ ಅನೇಕ ವೇಳೆ ಒಬ್ಬಳೇ ಕುಳಿತು ಕಳೆದುದುಂಟು. ಹಾಗೆ ಕುಳಿತುಕೊಂಡಾಗಲೆಲ್ಲಾ ಅವಳನ್ನು ನಂದಾ ತೋಟಗಾರಿಕೆಗೆ ಎಳೆದೊಯ್ಯುತಿದ್ದಳು.

"ಮಗೂ, ಹಾಗೆ ಒಬ್ಬಳೇ ಕುಳಿತು ಯೋಚನೆಗೊಳಗಾಗುವುದಕ್ಕಿಂತ ಇದು ಎಷ್ಟೋ ಲೇಸು." ಎಂದು ಅತ್ತೆಯೆಂದಾಗ ಅರವಿಂದಳಿಗೆ ಎಲ್ಲಿಲ್ಲದ ನಾಚಿಕೆ ಮೂಡುತಿತ್ತು. ಮರುಕ್ಷಣದಲ್ಲಿ ನಕ್ಕು "ನಿಜ, ಅಮ್ಮಾ. ನಾನು ಕಲಿತೂ ಪ್ರಯೋಜನವಿಲ್ಲ." ಎನ್ನುತ್ತಾ ಅವಳನ್ನು ಹಿಂಬಾಲಿಸುವಳು. ಹಗಲೆಲ್ಲಾ ತೋಟದಲ್ಲಿ ಇಬ್ಬರೂ ಬಿಡುವಿಲ್ಲದೆ ಕೈ ತುಂಬ ಕೆಲಸ ಮಾಡುತಿದ್ದರೂ ಮನಸ್ಸು ಮಾಡುತಿದ್ದುದೇನು? ಅತ್ತೆಯೊಡನೆ ಸಂಸಾರಿಕವಾಗಿ ಎಷ್ಟು ಹೊತ್ತು ಮಾತಾಡುವುದಾಗುತ್ತೆ ?

ಈ ಸಮಸ್ಯೆಗೂ ನಂದಾ ಒಮ್ಮೆ ಪರಿಹಾರ ಸೂಚಿಸಿದಳು "ಒಳ್ಳೊಳ್ಳೆಯ ಇಂಗ್ಲೀಷ್ ಪುಸ್ತಕಗಳನ್ನು ಓದಿ ನನಗೆ ಅರ್ಥ ವಿವರಿಸಿ ಹೇಳಮ್ಮಾ." ಅರವಿಂದಾ ಪುಸ್ತಕ ಪಠಣವನ್ನೂ ಕೈಕೊಂಡಳು. ಕ್ರಮ ಕ್ರಮೇಣ ಓದುವುದರಲ್ಲೂ ಆಸಕ್ತಿ ಉಳಿಯಲಿಲ್ಲ. ಎಷ್ಟೋ ಬಾರಿ ಬಲಾತ್ಕಾರವಾಗಿ ಓದಿದರೂ ಮನಸ್ಸು ವಿಷಯವನ್ನು ಗ್ರಹಣ ಮಾಡುತ್ತಿರಲಿಲ್ಲ. ಇದಕ್ಕೇನು ಪರಿಹಾರ? ಈಚೀಚೆಗೆ ವಿಮಲ್‌ದಾಸ್ ಹೆಚ್ಚಾಗಿ ಮನೆಯ ಕಡೆ ಇರುತಿದ್ದುದರಿಂದ ಸ್ವಲ್ಪ ಮಟ್ಟಿಗೆ ಪರಿಹಾರ ಎನ್ನಬಹುದು. ಅರವಿಂದಾ ಮನೆಯಲ್ಲಿದ್ದಷ್ಟು ಹೊತ್ತೂ ತನ್ನ ಬಳಿ ಇರಬೇಕು ಎಂಬ ಪೂರ್ಣ ಪ್ರೇಮ ಅವನದ್ದು. ಓದುತಿದ್ದರೂ ಮರುದಿನ ಪಾಠ ಪ್ರವಚನಗಳಿಗೆ ತಯಾರಿ ನಡೆಸಿದ್ದರೂ "ಇಲ್ಲೇ ಓದಮ್ಮಾ." ಎಂದು ಬಳಿಗೆ ಕರೆಯುತಿದ್ದ.

ಕಸೂತಿ ಕೆಲಸ ಮಾಡುವಾಗಲೂ ಅಲ್ಲೇ ಕುಳಿತುಕೊಳ್ಳುತ್ತಿದ್ದರೂ ಅವಳ ಚಿತ್ತವೆಲ್ಲಾ ಗತಕಾಲಕ್ಕೆ ಹಕ್ಕಿಯಂತೆ ಹಾರಿ ದುಃಖದೂಟಿಯಲ್ಲಿ ಮಿಂದು ಬರುತಿತ್ತು. ಅರವಿಂದಾ ತನ್ನನ್ನೇ ಮರೆತು ಮರಳಿನ ರಾಶಿಯಲ್ಲಿ ಹೊರಳಾಡುವ ಅಣುಗನಂತಾದಳು.

ಅಘೋರ ದಿನೇ ದಿನೇ ಅನ್ಯಮನಸ್ಕಳಾಗುತಿದ್ದ ಅರವಿಂದಳಿಗೆ ಒಂದು ಕಾರ್ಯಾಗಾರವನ್ನು ರೂಪಿಸಿ—"ಅರೂ, ಇನ್ನು ಮೇಲೆ ನೀನೂ ನನ್ನೊಂದಿಗೆ ಡಾಕ್ಟರ್. ದಿನವೂ ಹತ್ತಾರು ಮಂದಿಯಲ್ಲಿ ಬೆರೆತು ಅವರ ಕಷ್ಟಸುಖಗಳನ್ನು ಅರಿತುಕೊಂಡರೆ ನಿನ್ನ ಮನೋವೇದನೆ ಹೇಳ ಹೆಸರಿಲ್ಲದೆ ಓಡಿ ಹೋಗುತ್ತದೆ!" ನಕ್ಕು ನುಡಿದ ದನಿಯಲ್ಲಿ ಉತ್ಸಾಹವಿತ್ತು. ಪುನಃ ಅಂದ "ನಾನು ಪರೀಕ್ಷಿಸಿ ಹೇಳಿದಂತೆ ಚೀಟಿ ಬರೆದು ಕೊಡುವುದು. ಒಬ್ಬರಾದ ಮೇಲೊಬ್ಬರನ್ನು ಬರ ಮಾಡಿಕೊಂಡು ಅವರವರ ತೊಂದರೆ ಕೇಳಿ ಬರೆದುಕೊಳ್ಳುವುದು. ಇತ್ಯಾದಿ ಕೆಲಸವೆಲ್ಲಾ ನಿನ್ನದು."

ಅರವಿಂದಾ ನಸು ನಕ್ಕು ಒಪ್ಪಿಕೊಂಡಳು. ಅದೇ ರೀತಿ ದಿನಚರಿಯೂ ಕೆಲವು ದಿನ ಸಾಗಿತು. ಕ್ರಮ ಕ್ರಮೇಣ ಅದರಲ್ಲೂ ನಿರಾಸಕ್ತಿ ತಳೆಯ ಹತ್ತಿದಳು ಅರವಿಂದಾ. ನಂದಾದೇವಿ ತೀರ್ಥಯಾತ್ರೆಯಲ್ಲಿ ನಂಬುಗೆ ಇದ್ದವಳು. ಅಘೋರನನ್ನು ಒಮ್ಮೆ ಕೇಳಿದಳು "ಅಘೂ, ನೀವು ಎಷ್ಟೇ ಕಲಿತರೂ ದೇವರು ಎಂಬ ವ್ಯಕ್ತಿಯನ್ನು ಮರೆಯಬಾರದು. ಹೇಗೂ ನಿನ್ನ ಪ್ರಯತ್ನ ಎರಡು ಬಾರಿ ನಡೆದಿದೆ. ಈ ಸಲ ಒಂದು ಬಾರಿ ತೀರ್ಥಯಾತ್ರೆ ಹೋಗಿ ಬರೋಣ. ನಮಗೂ ವಯಸ್ಸಾಯಿತು. ನಿಮ್ಮೊಂದಿಗೆ ನಮಗೂ ಒಂದಿಷ್ಟು ದೇವರ ದರ್ಶನ ಮಾಡಿಸಪ್ಪಾ."

ಅವಳ ದನಿಯಲ್ಲಿ ಪ್ರೇಮವೊಂದೇ ಅಲ್ಲ, ಬೇಡಿಕೆಯೂ ಇತ್ತು.

"ಇಷ್ಟೊಂದು ಮಂದಿ ರೋಗಿಗಳನ್ನು ಏನಮ್ಮಾ ಮಾಡಲಿ ? ನೀವೇ ಹೋಗಿ ಬರುವುದಾದರೆ ನಾನು ಭಗವಂತನಿಗೆ ಇಲ್ಲಿಂದಲೇ ಕೈಮುಗಿಯುವೆ."

"ಹಾಗೆನ್ನಬೇಡ, ಮಗೂ."

"ವಿಧಿ ಇಲ್ಲಮ್ಮಾ."

"ನಾವೆಷ್ಟೇ ದೊಡ್ಡವರಿರಲಿ, ನಮಗಿಂತ ದೊಡ್ಡವನೊಬ್ಬನು ಇದ್ದಾನೆ ಎಂಬುದನ್ನು ನೆನವರಿಕೆ ಮಾಡಿಕೋ ಮಗೂ."

ಕೊಠಡಿಯಿಂದ ಅಲ್ಲಿಗೆ ಬಂದ ಅರವಿಂದಾ ಸಂವಾದ ಕೇಳಿ–"ಹೇಗಾದರೂ ಎರಡು ವಾರ ಬಿಡುವು ಮಾಡಿಕೊಳ್ಳಲಾರಿರಾ ?"

"ಹೇಗೆ ಅರವಿಂದಾ ?" ಎಂದ ಅಘೋರ ತುಸು ಯೋಚಿಸಿ ಹೇಳಿದ "ಒಂದು ವೇಳೆ ನಾನು ಹೊರಟರೆ ನಿಮ್ಮ ಯಾತ್ರೆ ಅಪೂರ್ಣವಾದೀತು. ನೀವೇ ಹೋಗಿ ಬಂದರೆ ಬಯಸಿದಷ್ಟು ಕಾಲ ಹೋಗಿಬರಬಹುದು."

"ಆದರೂ..."

"ನಿನಗೆಲ್ಲವೂ ಕರತಲಾಮಲಕ ಅರವಿಂದಾ."

ಅರವಿಂದಾ ಮಾತಾಡಲಿಲ್ಲ. ಮನದಾಳದಲ್ಲಿ ಗೊತ್ತುಗುರಿಯಿಲ್ಲದ ವ್ಯಥೆಯೊಂದು ಕೀಟದಂತೆ ಕೊರೆಯತೊಡಗಿತು. ಮರು ಮಾತಾಡದೆ ಕೈಗೊಂದು ಮಾಸಿಕವನ್ನು ತೆಗೆದುಕೊಂಡು ತನ್ನ ಕೊಠಡಿಯನ್ನು ಸೇರಿಕೊಂಡಳು. ಒಂದೊಂದಾಗಿ ಅನೇಕ ಪುಟಗಳನ್ನು ತಿರುವಿ ಹಾಕಿದರೂ ಅದರಲ್ಲಿ ಮನಸ್ಸನ್ನು ತೊಡಗಿಸಲಾರಲಿಲ್ಲ. ಅದನ್ನು ಬದಿಗಿಟ್ಟು ದೈನಿಕವೊಂದನ್ನು ತೆಗೆದುಕೊಂಡಳು. ಕಣ್ಣು ನೋಟ ಮೊದಲು ತಲೆ ಬರಹಗಳ ಕಡೆ ಹರಿಯಿತು. ರೈಲೊಂದು ಉರುಳಿ ಬಿದ್ದು ನೂರಾರು ಮಂದಿಯನ್ನು ಆಹುತಿ ತೆಗೆದುಕೊಂಡ ವಿಚಾರ ಒಂದೆಡೆ ಪ್ರಕಟವಾಗಿತ್ತು. ಇನ್ನೊಂದೆಡೆ ಶಾಲೆಯ ಕಟ್ಟಡವೊಂದು ಕುಸಿದು ಬಿದ್ದು ಹಸು ಮಕ್ಕಳನ್ನು ಆಹುತಿ ತೆಗೆದುಕೊಂಡ ವಿಚಾರ ಹೊರಬಿದ್ದಿತ್ತು...ಇತರ ನಾನಾ ವಿಚಾರಗಳಿದ್ದರೂ ಈ ಹೃದಯವಿದ್ರಾವಕವಾದ ವಿಚಾರಗಳು ಮನಸೆಳೆದುದೇಕೆ ? ಗಾಯದ ಮೇಲೆ ಉಪ್ಪು ಸುರಿದಂತಾಗಲೆಂದೇ ? ಅಥವಾ ಕ್ರೂರಿ ವಿಧಿಯ ಕಾಣದ ಕೈ ಈ ಬಡ ಜೀವನವನ್ನು ಹಿಸುಕಿ ಹಿಸುಕಿ ಹಣ್ಣು ಮಾಡಲೆಂದೇ ?....ಯೋಚನೆಯ ಸುಳಿಯಲ್ಲಿ ಸಿಕ್ಕಿದ ಅರವಿಂದಳ ಮೈಯಲ್ಲಿ ನಸುಕಂಪನದ ಅಲೆ ಹರಿದಾಡಿ ಹೋಯಿತು.

"ಪೆಟ್ಟು ಬಿದ್ದಲ್ಲದೆ ಕಲ್ಲು ವಿಗ್ರಹವಾಗದು ಮಗೂ." ಒಲಿದು ನುಡಿಯಿತು ಅಂತರಾತ್ಮ,

ಉಕ್ಕಿ ಬಂದ ಕಂಬನಿಯನ್ನು ಮೆಲ್ಲನೆ ತೀಡಿಕೊಂಡಳು ಅರವಿಂದಾ.

"ಸಾಕಪ್ಪಾ ಸಾಕು. ಈ ರೀತಿ ಪೆಟ್ಟುಬಿದ್ದರೆ ವಿಗ್ರಹವಾಗುವುದಿರಲಿ, ಬದುಕು ಉಳಿಯುವುದಾದರೂ ಹೇಗೆ ಸ್ವಾಮಿ?" ದುಗುಡದಿಂದ ಪ್ರಶ್ನಿಸಿತು ಮನಸ್ಸು.

"ಕಹಿ–ಸಿಹಿಗಳ ಮಿಶ್ರಣವೇ ಜೀವನ ಮಗೂ !"

"ಆದರೂ..."

"ಆದರೂ ಏನು ?"

"ಕಹಿ–ಸಿಹಿಗಳ ಮಿಶ್ರಣವಾದರೆ ಹೇಗಾದರೂ ಕಳೆದೀತು ? ಬರೀ ಕಹಿಯೇ ಆದರೇ ಏನು ಗತಿ ?"

"ಧೈರ್ಯಂ ಸರ್ವತ್ರ ಸಾಧನಂ."

"ಹೇ, ಶಿವಾ !"

ತುಸು ಹೊತ್ತು ಉರುಳಿತು. ಕಣ್ಣುಗಳು ಪುನಃ ಪತ್ರಿಕೆಯ ಮೇಲೆ ಹರಿದಾಡಿದುವು. ವಿಷಯವೊಂದು ಮನಸೆಳೆಯಿತು...ಜೀವನದಲ್ಲಿ ಜುಗುಪ್ಸೆ ಹೊಂದಿ ವಿಷ ಪ್ರಾಸನ ಮಾಡಿದವಳೊಬ್ಬಳನ್ನು ಯಾರೋ ಕಂಡವರು ಪ್ರಜ್ಞೆ ತಪ್ಪಿದ್ದರೂ ಕೊಂಡೊಯ್ದು ಆಸ್ಪತ್ರೆಗೆ ಸೇರಿಸಿದ್ದಾರೆ. ಅಲ್ಲಿ ಅವಳು ಬದುಕಿದ್ದಾಳೆ. ಅನಂತರ ಪೋಲೀಸರು ಇದು ಆತ್ಮಹತ್ಯ ಪ್ರಕರಣವೆಂದು ಅವಳ ಮೇಲೆ ಕೇಸು ಹಾಕಿದ್ದಾರೆ !

ಎಂಥಹ ವಿಚಿತ್ರ ? ಕಡ್ಡಾಯವಾಗಿ ಇವರನ್ನು ಬದುಕಲೇ ಬೇಕೆನ್ನುವ ಸರಕಾರ ಇವರಿಗೆ ಜೀವನೋಪಾಯ ಕಲ್ಪಿಸಲಿಲ್ಲವೇಕೆ ? ಆತ್ಮಹತ್ಯೆ ಮಹಾ ಪಾಪ ಎಂದು ಗಿಣಿಪಾಠ ಮಾಡುವ ಸಮಾಜ ಇವರಿಗೆ ನೀಡುತ್ತಿರುವ ರಕ್ಷಣೆಯೇನು ? ಹೊಣೆಗಾರಿಕೆ ಇಲ್ಲದ ಸಮಾಜಕ್ಕೆ ನೀತಿ ಭೋದೆ ಮಾಡುವ ಹಕ್ಕಾದರೂ ಎಲ್ಲಿದೆ ?...ಯೋಚಿಸಿದಷ್ಟೂ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯಿತು. ಉತ್ತರ ದೊರೆಯಲಿಲ್ಲ. ಕೈಯಲ್ಲಿನ ಪತ್ರಿಕೆ ಹಾಗೇ ಉಳಿಯಿತು ಕಣ್ಣುಗಳು ಕಿಟಕಿಯಲ್ಲಿ ತೂರಿ ಹೊರ ಜಗತ್ತನ್ನು ನಿಟ್ಟಿಸುತಿದ್ದುವು. ಹಾಗೇ ಅದೆಷ್ಟು ಹೊತ್ತು ಕುಳಿತಿದ್ದಳೋ ಏನೋ. ಪಾದರಕ್ಷೆಯ ಪಟ ಪಟ ಸದ್ದು ಮಾಡುತ್ತಾ ಅಘೋರ ಒಳ ಬಂದಾಗಲೇ ಇತ್ತ ಗಮನ.

"ಅರವಿಂದಾ."

ಅವಳು ನಿಟ್ಟಿಸಿದ ನೋಟವೇ "ಏನು ?" ಎಂದಿತು.

"ಯಾವಾಗ ನೋಡಿದರೂ ಏನೋ ಯೋಚಿಸುತ್ತಾ ಇರುತ್ತಿ. ನಿನ್ನ ಶರೀರವನ್ನು ನೀನೇ ಕೆಡಿಸಿಕೊಳ್ಳುತ್ತಿ ಎಂದರೆ ತಪ್ಪಲ್ಲ." ನಲ್ಮೆಯಿಂದ ತಲೆಯ ಮೇಲೆ ಕೈಯಿಟ್ಟು ಅಂದ.

"ನಾನೇನೂ ಯೋಚಿಸುತ್ತಿರಲಿಲ್ಲ. ಸುಮ್ಮನೆ ನೋಡುತ್ತಾ ಕುಳಿತಿದ್ದೆ." ಎಂದು ನಸುನಕ್ಕಳು ಅರವಿಂದಾ.

"ನಾಳೆ ನಿನಗೆ ಕಾಲೇಜಿಲ್ಲವೇ, ಅರೂ?"

"ಓ! ಉಂಟು." ಕಣ್ಣರಳಿಸಿದ ಅವಳು ಮರು ದಿನದ ಪಾಠ ಪ್ರವಚನಗಳ ತಯಾರಿ ನಡೆಸಲು ಎದ್ದಳು.

ಅಘೋರ ಕೆಲವು ದಿನಗಳ ನಂತರ ಎರಡು ಮೂರು ವಾರಗಳ ಬಿಡುವು ಮಾಡಿಕೊಂಡು ತಂದೆ ತಾಯಿ ಅರವಿಂದಳೊಡನೆ ಸಣ್ಣ ತೀರ್ಥಯಾತ್ರೆ ಮಾಡಿ ಬಂದ. ಅದಾದ ಮೂರು ವರ್ಷಗಳ ನಂತರ ಅವಳು ಗಂಡು ಮಗುವಿನ ತಾಯಿಯಾದಳು. ಅವಳು ಗರ್ಭಿಣಿಯಾದೊಡನೆಯೇ ಅಘೋರ ಪೂರ್ವಭಾವಿ ಚಿಕಿತ್ಸೆಗಾಗಿ ಎಂದಿಲ್ಲದ ಶ್ರಮ ವಹಿಸಿದ. ಪ್ರಯತ್ನವಂತೂ–ದೈವ ಪ್ರಯತ್ನದಿಂದಲೋ ಮನುಷ್ಯ ಪ್ರಯತ್ನದಿಂದಲೋ–ಬಹಳ ಕಷ್ಟದಿಂದ ಸಫಲವಾಯಿತು.

ಸುಖ ಪ್ರಸವವಾದ ದಿನ ಅಘೋರ ಎಳೆಯ ಮಕ್ಕಳಂತೆ ಜಿಗಿದಾಡಿದ. ದಷ್ಟ ಪುಷ್ಟನಾದ ಮಗು ಟೊಮೆಟೋ ಹಣ್ಣಿನಂತಿತ್ತು. ಮಗುವನ್ನು ನೋಡುನೋಡುತ್ತಾ ತನ್ನ ಉಕ್ಕಿನಂತಹ ತೋಳುಗಳನ್ನು ನೀಡಿ ಸಂತಸದಿಂದ ಉಕ್ಕೇರಿದ ಹೃದಯದಿಂದ ಎದೆಯನ್ನು ಉಬ್ಬಿಸಿ ನಿಂತು ಹೇಳಿದ "ಈ ಬಲ ಭೀಮನ ಮಗ ಇನ್ನೇಗೆ ಇದ್ದಾನು!"

ಅರವಿಂದಾ ಮಾತಾಡದೆ ನಸುನಕ್ಕಳು. ನಂದಾದೇವಿ ಮತ್ತು ವಿಮಲ್‌ದಾಸರ ಸಂತಸಕ್ಕೂ ಪಾರವೇಯಿಲ್ಲದಂತಾಯಿತು. ಬಾಳಿನ ಕುಡಿ ಚಿಗುರೊಡೆಯಿತೆಂದು ಎಲ್ಲಾ ದೇವರಿಗೂ ಹರಕೆ ಸಲ್ಲಿಸಿದರು. ಅಂದಮೇಲೆ ವಿಮಲ್‌ದಾಸ್ ಮತ್ತು ನಂದಾದೇವಿಯರ ದೃಷ್ಟಿಯಲ್ಲಿ ಮಗು ತೀರ್ಥಯಾತ್ರೆಯ ಫಲವೆಂಬುದಾಗಿತ್ತು. ಆದರೂ, ಅಬಲತೆಯ ಮೇಲೆ ತಾನೇ ವಿಜಯ ಸಾಧಿಸಿದ್ದೇನೆಂದು ಅಘೋರ.

ಅಘೋರನ ಗೆಳೆಯರ ಬಳಗವೆಲ್ಲಾ 'ಸಿಹಿ ಎಲ್ಲಪ್ಪಾ?' ಎನ್ನ ತೊಡಗಿದರು. ಅಘೋರ ಹುಬ್ಬೇರಿಸಿ ಹೆಮ್ಮೆಯಿಂದಲೇ ಉತ್ತರಿಸಿದ "ಇದ್ದೇ ಇದೆ!" ಇಡೀ ಆಸ್ಪತ್ರೆಯೇ ಅಘೋರನಿಗೆ ಅಭಿನಂದನೆಗಳನ್ನು ಸಲ್ಲಿಸುವಾಗ ಸ್ಮೈ ಮರೆತು ಸಾನಂದದಿಂದ ಎಲ್ಲರನ್ನೂ ಪ್ರತಿವಂದಿಸಿ ಕೃತಜ್ಞತೆಯನ್ನು ತೋರಿ

ಸಿದ. ಡಾ॥ ಚಲುವಾಂಬ ತನ್ನ ಸಹಡಾಕ್ಟರುಗಳೊಡನೆ ಕುಲು ಕುಲು ನಗೆಯೊಡನೆ ವಾರ್ಡಿಗೆ ಥಾಳಿಯಿಟ್ಟಳು. , ಎಲ್ಲರನ್ನೂ ಅಘೋರ ಆತ್ಮೀಯತೆಯಿಂದ ಸ್ವಾಗತಿಸಿ ಹೇಳಿದ "ನಿಮ್ಮ ಶ್ರಮ ಸಾರ್ಥಕವಾಯಿತು."

"ನನ್ನ ಮಗಳು ಇವನಿಗೇ ಮೀಸಲು!" ಎನ್ನುತ್ತಾ ಸೌಮಾ ಮಗುವ ನೆತ್ತಿ ಮುದ್ದಾಡಿದಳು. ಆನಂದದಿಂದ ಮುಖ ಅರಳಿತ್ತು.

"ಮೊದಲು ವರದಕ್ಷಿಣೆ ಇಡಿ! ಅನಂತರ ನಿಮ್ಮ ಮಗಳು!" ಅಘೋರ ಹೆಮ್ಮೆಯಿಂದ ನಗೆ ಚಟಾಕಿ ಹಾರಿಸಿದ. ಒಮ್ಮೆಲೇ ನಗುವಿನ ಲಹರಿ ಉಕ್ಕಿ ಹರಿಯಿತು.

"ಓ! ಪರವಾಯಿಲ್ಲ...ಮಗಳೂ ಕೊಟ್ಟು, ವರದಕ್ಷಿಣೇನೂ ಕೊಡುತ್ತಾರೆ!" ಸೌಮಾ ಹುಬ್ಬೇರಿಸಿ ನುಡಿದಳು. ನಗುವಿನ ಗುಲ್ಲು ಕೊಠಡಿಯನ್ನೇ ಮರ್ಮರಿಸಿತು. ಎಲ್ಲರೂ ಅಘೋರ ದಂಪತಿಗಳನ್ನು ಅಭಿನಂದಿಸಿ ಹೊರಟರು.

ಅಘೋರ ನಾಮಕರಣದ ಅಂಗವಾಗಿ ಗೆಳೆಯರಿಗೆಲ್ಲಾ ಔತಣ ನೀಡಿ ಸಿಹಿ ಹಂಚಿದ. ವಿಮಲ್‌ದಾಸ್ ನಂದಾದೇವಿ ಆತ್ಮೀಯತೆಯಿಂದ ಅತಿಥಿಗಳನ್ನು ಉಪಚರಿಸಿದರು. ಪುಟ್ಟ ಸಂಸಾರದಲ್ಲಿ ಸಗ್ಗವೇ ಧರೆಗಿಳಿದು ಬಂದಂತೆ ಸಂತಸ ಮೂಡಿ ಬಂತು.

o o o o

ಅಂದು ಆಪರೇಶನ್ ಮುಗಿಸಿಕೊಂಡು ಥಿಯೇಟರಿನಿಂದ ಹೊರಬರುವಷ್ಟರಲ್ಲಿ ಹೊತ್ತು ನಾಲ್ಕರ ಸಂಖ್ಯೆಯನ್ನು ದಾಟುತಿತ್ತು. ಬೆಳಗಿನಿಂದ ಮಧ್ಯಾಹ್ನದವರೆಗೆ ನಿಂತು ನಿಂತು ಕಾಲುಗಳೂ ನೋಯಹತ್ತಿದುವು. ಅಘೋರ ಗೆಳೆಯರ ತಂಡದೊಂದಿಗೆ ಹೆಜ್ಜೆಹಾಕಿದ. ಹಾದಿ ಸಾಗುತಿದ್ದಂತೆ ಮದನ್ ಕೇಳಿದ "ಹೇಗಿದ್ದಾರೆ ನಿಮ್ಮ ತಂದೆ?"

"ಅವರದ್ದೇ ಯೋಚನೆ ಆಗಿದೆ."

"ಈಚೆಗೆ ಘನಶ್ಯಾಮರಿಗೆ ತೋರಿಸಿದ್ದೀಯೇನು?"

"ಹೌದು. ಅವರ ಹೇಳಿಕೆ ಮೇರೆಯೇ ಚಿಕಿತ್ಸೆ ನಡೆಸುತಿದ್ದೇನೆ. ದಿನೇ ದಿನೇ ಮೆತ್ತಗಾಗುತಿದ್ದಾರೆ. ಡಯಾಬಿಟಸ್ (Diabetes) ಇದೆ. ಯಾವಾಗಲೂ ಇಂಜಕ್ಷನ್ ತೆಗೆದುಕೊಳ್ಳುವುದೆಂದರೆ ಇಷ್ಟವಿಲ್ಲ."

"ಈಗಲೂ ಅಂಗಡಿಗೆ ಹೋಗುತ್ತಾರೆಯೇ?"

"ಇಲ್ಲ. ಅದನ್ನು ಬೇರೆಯವರಿಗೆ ವಹಿಸಿಕೊಟ್ಟು ಮುಕ್ತಾಯ ಗೊಳಿಸಿ ಬಿಟ್ಟೆ."

"ಒಳ್ಳೆಯದಾಯಿತು."

"ಅವರಿಗೀಗ ಹೊತ್ತು ಕಳೆಯುವುದು ಅಷ್ಟು ಕಷ್ಟವೇನಿಲ್ಲ. ತಿಲೋತ್ತಮ ಇದ್ದಾನೆ. ಸುಖವಾಗಿ ಹೊತ್ತು ಕಳೆಯುತ್ತಾರೆ." ಎಂದೆನ್ನುವಾಗ ಅಘೋರನ ಮುಖ ಹೂವಿನಂತರಳಿತು.

"ಅದಿನ್ನೂ ಒಳ್ಳೆಯದು."

ಹೊತ್ತು ಇಳಿಮುಖವಾಗಿದ್ದರೂ ನೆತ್ತಿಯುರಿಯುತಿತ್ತು. ಹೊಟ್ಟೆಯ ಹಸಿವೂ ಮಿತಿಮೀರಿದ್ದುದರಿಂದ ನಡಿಗೆಯೂ ಚುರುಕಾಗಿತ್ತು. ಅಘೋರ ಜಾನಕೀರಾಮನ ಭುಜದ ಮೇಲೆ ಕೈಹಾಕಿ ಅಮುಕಿ ಹೇಳಿದ "ನೀನೇನೋ ಸುಪ್ರಸಿದ್ಧ ಗೈನಕಾಲಜಿಸ್ಟ್ ಆಗಿಬಿಟ್ಟೆ. ಕೆಲಸ ನೋಡಿದರೆ ಅಷ್ಟೇ ಹಗುರ. ನಮಗಂತೂ ಇದು ಹೊರಲಾರದ ಹೊರೆ."

"ನಮಗಿಂತ ಸುಧೀರನದು ವಾಸಿ."

"ಓ ನನಗೇನು ಕೆಲಸ ಕಡಿಮೆಯೇ? ಎಲ್ಲೆಲ್ಲಿಂದಲೂ ಕರೆ ಬರುತ್ತಿರುತ್ತದೆ. ನಮ್ಮ ದಳದಲ್ಲಿ "ರತನ್ ಸುಖಿ. ಹಾರ್ಟ್ ಸ್ಪೆಷಲಿಸ್ಟ್‌ಗಳು ಬಹಳ ಮಂದಿ ಇರುವುದರಿಂದ ಕೆಲಸ ಹಂಚಿ ಹೋಗುತ್ತದೆ."

ಮೂವರೂ ಕ್ಯಾಂಟೀನಿನ ಒಳಗಡೆ ಹೋದರು. ದೋಸೆ ಮತ್ತು ಕಾಫಿಯನ್ನು ತರಲು ಹೇಳಿದ ಅಘೋರ ಮುಖ್ಯ ಅತಿಥಿಯಂತೆ ಮಧ್ಯೆ ಕುಳಿತುಕೊಂಡ. ತುಸು ಹೊತ್ತಿನೊಳಗಾಗಿ ಬಿಸಿಬಿಸಿ ದೋಸೆಯೂ ಬಂತು. ಮೆಲ್ಲುತ್ತಾ ಅಘೋರ ಕೇಳಿದ "ಜಾ಼ನ್! ಸದಾ ಸ್ತ್ರೀ ರಾಜ್ಯದಲ್ಲಿಯೇ ಮುಳುಗಿರುವುದೆಂದರೆ ಹೇಗೆನಿಸುತ್ತೆ ನಿನಗೆ?"

"ಅವರೂ ಮನುಷ್ಯರೇ! ಅದರಲ್ಲಿ ವಿಶೇಷವೇನೂ ತೋರುವುದಿಲ್ಲ."

ಎಲ್ಲರ ಮುಖದಲ್ಲೂ ನಗು ಮಿನುಗಿತು. ಅಘೋರನೆಂದ "ಹಾಗಲ್ಲಪ್ಪಾ, ಸದಾ ಅವರ ಸೇವೆ ಅವರ ಒಡನಾಟ ಗಂಡಸಾದವನಿಗೆ ಹೇಗೆನಿಸುತ್ತೆ?"

"ಎಲ್ಲಾ ಒಂದೇ ಎಂಬ ಮನೋಭಾವದಿಂದ ಕೆಲಸ ಮಾಡುವುದರಿಂದ ಕಳೆಯುತ್ತಿದೆ. ಇಲ್ಲದಿದ್ದರೆ ತುಂಬ ಕಷ್ಟ." ಎಂದ ಜಾನಕೀರಾಂ ತುಸು ತಡೆದು–"ಡಾಕ್ಟರ್...ಎಷ್ಟೆಂದರೂ ಹೆಣ್ಣು ನಂಜಿನ ಮಿಶ್ರಣ!"

ಎಲ್ಲರೂ ಕಿಲಕಿಲನೆ ನಗತೊಡಗಿದರು. ಮದನ್ ನಕ್ಕು ನುಡಿದ “ಈಗ ಡಾ|| ಸೌಮಾ ಇದ್ದಿದ್ದರೆ ?”

ಪುನಃ ಎಲ್ಲರೂ ನಗ ತೊಡಗಿದರು. ನಗುವಿನಲೆಯುಡಗುವುದರೊಳಗಾಗಿ ಎದುರು ಬಾಗಿಲಿನಿಂದ ಡಾ|| ಸೌಮಾ ಡಾ|| ಚಂಪಾ ಡಾ|| ಶಾರದಾರವರುಗಳು ಪಾದರಕ್ಷೆಗಳ ಪಟ ಪಟ ಸದ್ದು ಮಾಡುತ್ತಾ ಒಳಗಡೆ ಬಂದರು. ಅವರ ಮುಖವನ್ನು ನೋಡುತ್ತಲೂ ತರುಣರ ತಂಡ ಪುನಃ ಕುಲುಕುಲು ನಗ ತೊಡಗಿತು. ಸುಧೀರ್ ಹಾಸ್ಯದ ಧಾಟಿಯಲ್ಲಿ ಅಂದ “ಡಾಕ್ಟರಮ್ಮನವರುಗಳೇ! ನೀವೆಲ್ಲರೂ ತಿಳಿದಿರಲೇ ಬೇಕಾದ ವಿಷಯವೊಂದಿದೆ !”

ಏನಿರಬಹುದು ? ಎಲ್ಲರ ಕಿವಿಗಳೂ ನಿಮಿರಿದುವು.

ತರುಣರೆಲ್ಲರೂ ಪುನಃ ನಗೆಗಡಲಲ್ಲಿ ಮುಳುಗಿದರು. ಅವರ ಅರ್ಥವಿಲ್ಲದ ನಗು ಸೌಮಾ ಮತ್ತು ಗೆಳತಿಯರಿಗೆ ಒಗಟಾಗಿ ಉಳಿಯಿತು. ಸೌಮಾ ತನ್ನ ದೃಷ್ಟಿಯನ್ನು ಒಮ್ಮೆ ಮೈಮೇಲೆಲ್ಲಾ ಹರಿಸಿದಳು. ನಾಲ್ಕು ತಿಂಗಳ ಗರ್ಭಿಣಿಯಾದ ಅವಳ ಮೈ ರಸವೂಡುವ ಹಣ್ಣಿನಂತೆ ತುಂಬಿಕೊಳ್ಳುತಿತ್ತು. ಆದರೂ, ಅಷ್ಟುಬೇಗನೆ ಅವರಿಗೆ ತಿಳಿದಿರಲಾರದು. ಅಂದಮೇಲೆ ವಿಷಯವಿಲ್ಲದೆ ಅವರು ನಗುತ್ತಿರುವುದಾದರೂ ಏಕೆ ? ಎಂಬ ಯೋಚನೆಯಿಂದ ಕಕ್ಕಾಬಿಕ್ಕಿಯಾದಳು–ಸೌಮಾ. ಪಕ್ಕದಲ್ಲಿದ್ದ ಚಂಪಾ ಕಣ್ಣು ಮಿಟುಕಿಸಿ–“ಅವರು ನಿನ್ನನ್ನು ನೋಡಿಯೇ ನಗುತಿದ್ದಾರೆ.” ದನಿ ಸ್ವತಃ ಅವಳಿಗೂ ಕೇಳಿಸದಷ್ಟು ಮೆಲ್ಲನೆ ಹೊರಬಿದ್ದಿತು.

ಸೌಮಳ ಮುಖ ಕೆಂಪಡರಿತು. ಮುಖವನ್ನು ಕರವಸ್ತ್ರದಿಂದ ಒರಿಸಿಕೊಳ್ಳುತ್ತಾ ಅವಳೆಂದಳು “ಅದೇನು ವಿಷಯ ? ಹೇಳಿ ಬಿಡಿರಿ. ಸುಮ್ಮನೆ ನಗುವುದರಿಂದ ಪ್ರಯೋಜನವಿಲ್ಲ.”

“ಅದೆಲ್ಲಾ ಜರ್ನಿಗೆ ಗೊತ್ತು. ಅವನೇ ಅದಕ್ಕೆ ಉತ್ತರ ಹೇಳಬೇಕು. ಅವನನ್ನೇ ಕೇಳಿರಿ.”

ಎಲ್ಲರ ನೋಟವೂ ಜಾನಕೀರಾಮನತ್ತ ಸಿಡಿಯುತ್ತಲೂ ಅವನೆಂದ “ನಂದೇನಿಲ್ಲಮ್ಮಾ, ಅದೆಲ್ಲಾ ಘೋರನಿಗೆ ಸೇರಿದ್ದು !”

“ಓ, ಹಾಗೆಲ್ಲಾ ತಪ್ಪಿಸಿಕೊಳ್ಳುವಹಾಗಿಲ್ಲ. ಗೈನಕಾಲಜಿಸ್ಟ್ ಆಗಿ ಹೊಸ ವಿಷಯ ಕಂಡು ಹಿಡಿದಿದ್ದರೆ ಹೇಳಿರಿ !” ಎಂದಳು ಡಾ|| ಶಾರದಾ.

"ನಿಮ್ಮಂಥಾ ಬುದ್ಧಿವಂತರು ಡಾ|| ಮದನ್‌ರವರಿಗೆ ಸ್ವಲ್ಪ ಸಹಾಯ ಮಾಡಿದ್ದಿದ್ದರೆ ಮಂದನಳಿಗೆ ಇನ್ನೊಮ್ಮೆ ಹೆರುವ ತೊಂದರೆ ಬರುತ್ತಿರಲಿಲ್ಲ !" ಡಾ|| ಸೌಮಾ ಹುಬ್ಬೇರಿಸಿ ನುಡಿದಳು.

"ನಂಜಿನ ಮಾತಾಡಿ ನಗುವುದಕ್ಕಿಂತ ಅದು ಎಷ್ಟೋ ಮೇಲು." ಡಾ|| ಚಂಪಳ ದನಿಯೂ ಒಂದು ಗೂಡಿ ಹೊರಬಿತ್ತು.

ಪೂರ್ವರ ಇನಿದನಿಗಳೂ ಚಟಪಟ ಸಿಡಿದುಬಂದರೂ ಜಾನಕೀರಾಂ ಮಾತಾಡದೆ ಮಂದಸ್ಮಿತನಾಗಿ ದೋಸೆಯನ್ನು ಮೆಲ್ಲುತಿದ್ದುದನ್ನು ನೋಡಿ ಅಘೋರ ಹೇಳಿದ–"ಸುಪ್ರಸಿದ್ಧ ಗೈನಕಾಲಜಿಸ್ಟ್ ಆದ ಮೇಲೆ "ಹೆಣ್ಣು ನಂಜಿನ ಮಿಶ್ರಣ." ಎಂಬ ತೀರ್ಮಾನಕ್ಕೆ ಬಂದಿದ್ದಾನೆ ಅಂಕಲ್ ಜಾರ್ಜ !"

ಪುನಃ ನಗುವಿನ ಲಹರಿ ಹೊರ ಹೊಮ್ಮಿತು.

"ಕೋಪ ನಂಜು ಒರಟು ಅಹಂಕಾರಗಳ ತಳಿ ಗಂಡು !" ಎಂದ ಡಾ|| ಸೌಮಾ ಗೆಳತಿಯರ ತಂಡದೊಂದಿಗೆ ಪಕ್ಕದ ಮೇಜಿನ ಬಳಿ ಕುಳಿತು ಕೊಂಡಳು.

o o o o

ಅಘೋರ ಮನೆ ಮುಟ್ಟುವಷ್ಟರಲ್ಲಿ ಆರು ಗಂಟೆಯಾಗಿತ್ತು. ಒಳ ಬಂದವನೇ ನೇರವಾಗಿ ತಂದೆಯ ಕೊಠಡಿಗೆ ಹೋದ. ಹಣ್ಣು ಹಣ್ಣಾದ ಶರೀರ ಬಳಲಿ ಮಲಗಿತ್ತು. ನಾಡಿ ನೋಡಿ ದೇಹ ಪರೀಕ್ಷಿಸಿದನಂತರ ತನ್ನ ಕೊಠಡಿಗೆ ಹೋದ. ಮಗು ಹಾಯಾಗಿ ಆಟವಾಡುತಿತ್ತು. ಅವನಿಗೆ ಮುಖ ತೊಳೆದು ಅಲಂಕರಿಸಲು ಅರವಿಂದಾ ಹೆಣಗುತಿದ್ದಳು. ಅವನು ಕೈ ಕಾಲು ಬಡಿಯುತ್ತಾ ಆಟದಲ್ಲಿ ಸಂಪೂರ್ಣ ಮಗ್ನನಾಗಿದ್ದುದರಿಂದ ಅಂಗಿ ಹಾಕಿಸಿ ಕೊಳ್ಳುವಷ್ಟು ಸಹನೆ ಇರದೆ ಗಲಾಟೆ ಮಾಡುತಿದ್ದುದನ್ನು ನಗು ಮುಖದಿಂದ ನೋಡುತ್ತಾ ನಿಂತ ಅಘೋರನ ಹೃದಯ ಸಂತಸದಿಂದ ಉಬ್ಬಿಬಂದಿತು. ಬಾಗಿ ಎತ್ತಿಕೊಳ್ಳಹೋಗುತ್ತಲೂ ಅವಳೆಂದಳು "ಅಯ್ಯೊ, ಮೊದಲಿಷ್ಟು ಲೋಷನ್ ಹಾಕಿ ಕೈ ತೊಳೆದುಕೊಳ್ಳಿರಿ. ಮಗುವಿಗೆ ಕ್ರಿಮಿಗಳು ಅಂಟ ಯಾವು !"

ಅಘೋರ ಮರು ಮಾತಾಡದೆ ಬಚ್ಚಲಿಗೆ ಹೋದ. ಮುಖ ತೊಳೆದು ಕೊಂಡು ಬರುವಷ್ಟರಲ್ಲಿ ಹಾಲಿನ ಲೋಟಿಯನ್ನು ಹಿಡಿದುಕೊಂಡು ತಾಯಿ

ಎದುರಾದಳು. ಅಘೋರ ಹಾಲನ್ನು ತೆಗೆದುಕೊಂಡು–"ಅಮ್ಮಾ, ಈಗ ಪುನಃ ಆಸ್ಪತ್ರೆಗೆ ಹೋಗಬೇಕು. ಆಪರೇಶನ್ ಕೇಸುಗಳು ಏನೇನಾಗಿವೆಯೋ." ಎಂದೆನ್ನುವಾಗ ಮುಖದಲ್ಲಿ ತವಕ ತಾನೇತಾನಾಗಿತ್ತು.

"ಈಗಷ್ಟೆ ಬಂದೆಯಲ್ಲಾ ಅಘೂ ?"

"ಅಪ್ಪನನ್ನು ನೋಡೋಣವೆಂದು ಬಂದೆ. ಇಲ್ಲದಿದ್ದರೆ ಸಂಜೆಯ ರೌಂಡ್ ಮುಗಿಸಿಯೇ ಬರಬಹುದಾಗಿತ್ತು."

ಹಾಲನ್ನು ಒಂದೇ ಬಾರಿ ಹೀರಿ ಮಗುವನ್ನು ಮನವಾರೆ ಮುದ್ದಿಟ್ಟು ಬಂದ ನೇರಕ್ಕೆ ಹೊರಟುಬಿಟ್ಟ. ಅರವಿಂದಾ ಅತ್ತೆಯೊಡನೆ ಅವನು ಕಣ್ಮರೆಯಾಗುವವರೆಗೂ ನಿಂತು ನೋಡಿದಳು. ಮನೆಯಲ್ಲಿ ಒಂದು ಗಂಟೆಯೂ ನಿಲ್ಲುವಂತಿಲ್ಲವಲ್ಲಾ. ಎಂದು ಅತ್ತೆ ಸೊಸೆಯರಿಬ್ಬರೂ ತಮ್ಮ ತಮ್ಮಲ್ಲೇ ಮಾತಾಡಿಕೊಂಡರು. ಅರವಿಂದಾ ಅತ್ತೆಯ ಹಿಂದೆ ಒಳಬಂದಳು. ಸದಾ ನರಳುವ ಮಾವನಿಂದಾಗಿ ನಂದಾದೇವಿಗೆ ಮಗುವನ್ನು ನೋಡಿಕೊಳ್ಳಲಾಗುವುದಿಲ್ಲವೆಂದು ಕೆಲಸವನ್ನು ಬಿಟ್ಟು ಕೊಟ್ಟಿದ್ದ ಅವಳಿಗೆ ಹೃದಯ ಭಾರವಾಗಿತ್ತು. ಅವಳನ್ನು ನೋಡುನೋಡುತ್ತಾ ನಂದಾದೇವಿಯೆಂದಳು "ಈಚೀಚೆಗೆ ನಿನ್ನ ಆರೋಗ್ಯವೂ ಅಷ್ಟು ಸಮರ್ಪಕವಾಗಿಲ್ಲ. ಮಕ್ಕಳಾದ ಮೇಲೆ ಮೈ ಕ್ಷೀಣಿಸಿದೆ ಹೋಗಿ ಡಾಕ್ಟರಿಗೆ ತೋರಿಸಿಕೊಳ್ಳಮ್ಮಾ."

"ಟಾನಿಕ್ಕು ತೆಗೆದುಕೊಳ್ಳುತಿದ್ದೇನೆ."

"ಆದರೂ, ಸರಿ ಹೋಗಲಿಲ್ಲವಲ್ಲಾ ?"

"ಕ್ರಮೇಣ ಸರಿ ಹೋದೀತು."

"ಅಸಡ್ಡೆ ಮಾಡಬೇಡ ಮಗೂ."

ಅರವಿಂದಾ ನಗುತ್ತಾ ಮಾವನ ಕೊಠಡಿಗೆ ಹೋದಳು. ಅವನ ಕಣ್ಣುಗಳೂ ತನಗಾಗಿ ತುಡುಕುತ್ತಿದ್ದುದನ್ನು ನೋಡಿದೊಡನೆ ಅಂತಃಕರಣ ಮಂಜಿನಂತೆ ಕರಗಿತು. ಅವಳು ತಕ್ಷಣ ಕೇಳಿದಳು "ಪುಸ್ತಕ ಓದಲೇ ಮಾವಾ?"

"ಹ್ಞೂ" ಎನ್ನುತ್ತಾ ವಿಮಲ್‌ದಾಸ್ ಹೊದಿಕೆಯನ್ನೆಳೆದುಕೊಂಡ.

೦ ೦ ೦ ೦

ಮರುದಿನ ಅಘೋರನೊಂದಿಗೆ ಅರವಿಂದಾ ಆಸ್ಪತ್ರೆಗೆ ಹೋದಳು. ಚೆಲುವಾಂಬ ಅವಳನ್ನು ಪರೀಕ್ಷಿಸಿ ಔಷಧ ಮತ್ತು ಆಹಾರವನ್ನು ತೆಗೆದು

ಕೊಳ್ಳುವ ಕ್ರಮವನ್ನು ಬರೆದು ಉದ್ದವಾದ ಪಟ್ಟಿಯನ್ನು ನೀಡಿದಳು. ತೆಗೆದು ಕೊಳ್ಳುತ್ತಾ ಅಘೋರ ಹೇಳಿದ "ಡಾಕ್ಟರ್, ಕೊನೆಯ ಪಕ್ಷ ಅವಳು ಹತ್ತು ಪೌಂಡು ಮೈ ತುಂಬಿಕೊಳ್ಳಬೇಕು."

"ಬಹುಶಃ ಅವರ ಪಾಲೆಲ್ಲಾ ನೀವೇ ಉಂಡುಬಿಡುತ್ತೀರೋ ಏನೋ!"

ಎಲ್ಲರ ಮುಖದಲ್ಲೂ ನಗು ಮಿನುಗಿತು. ಕಾರಿಡಾರಿನತ್ತ ದೃಷ್ಟಿ ಹರಿಸಿದ ಅರವಿಂದಾ ಉತ್ಸುಕತೆಯಿಂದ ನುಡಿದಳು "ವಂದನಾ ಬರುತಿದ್ದಾಳೆ!"

ಅಘೋರ ಮದನನತ್ತ ಹುಬ್ಬು ಹಾರಿಸಿ ಹೇಳಿದ "ಏನಪ್ಪಾ ವಿಶೇಷ? ಮತ್ತೇನಾದರೂ...?"

ಹಾಸ್ಯದ ಚಟಾಕಿ ಹಾರುತ್ತಲೂ ಎಲ್ಲರ ಮುಖದಲ್ಲೂ ನಗು ಮಿನುಗಿತು. ವಂದನಾ ನಾಚಿ ನೀರಾಗಿ ಅರವಿಂದಳೊಡನೆ ಮಾತಾಡುವ ನೆವದಲ್ಲಿ ಅತ್ತ ತಿರುಗಿ ನಿಂತುಕೊಂಡಳು. ಅಷ್ಟರಲ್ಲಿ ಒಳಗಿನಿಂದ ಜಾನಕೀರಾಂ ಹೊರ ಬಂದ. ಅವನೆಡೆಗೆ ತುಂಟ ನೋಟ ಬೀರಿ ಅಘೋರ್–

"ನೀವೆಲ್ಲಾ ಗೈನಕಾಲಜಿ ಓದಿಬಂದರೂ ಮದನನಿಗೆ ಪ್ರಯೋಜನ ವಾಗಲಿಲ್ಲ!"

"ಎಷ್ಟೇ ಗಂಡು ಮಕ್ಕಳಿದ್ದರೂ ಒಂದು ಹೆಣ್ಣು ಮಗು ಇದ್ದಂತಾಗುವು ದಿಲ್ಲಪ್ಪಾ!" ಎಂದ ಮದನ್.

"ಅದು ಮದನನ ಬಯಕೆಯೋ ಅಥವಾ ವಂದನಾರವರದ್ದೋ?"

"ಮಕರಂದದ ಸಿಹಿ ದುಂಬಿಯನ್ನು ಆಕರ್ಷಿಸುತ್ತದೆ ಅಷ್ಟೆ."

"ಈಗ ದುಂಬಿ ಯಾರು? ಮಕರಂದ ಯಾರು!"

"ಮದನನೇ ಮಕರಂದ!"

"ಅದರಲ್ಲೇನೂ ಅನುಮಾನವಿಲ್ಲ."

"ನೀನು ಹುಡುಗಿಯಾಗಿದ್ದಿದ್ದರೆ ನಾನಂತೂ ಪಕ್ಕಾದುಂಬಿಯಾಗುತಿದ್ದೆ ಮದನ್!" ಎಂದ ಅಘೋರ. ಎಲ್ಲೆಡೆಯೂ ನಗುವಿನಲೆಯೆದ್ದಿತು.

ಅಧ್ಯಾಯ

೨೫

ಡಾ॥ ಮದನ್ ಆಪರೇಶನ್ ಥಿಯೇಟರಿನೊಳಗೆ ಬಂದಾಗ ಒನ್ಮೆ ಮುಳ್ಳು ತುಳಿದಂತೆ ಮಿಡುಕಿಬಿದ್ದ. ಎದುರಿಗೆ ಕಂಡ ದೃಶ್ಯ ಹೌದೋ ಅಲ್ಲವೋ ಎನ್ನುವಂತಾಯಿತು. ಅಘೋರ ಮೇಜಿನ ಮೇಲೆ ಮಲಗಿದ್ದ. ವಾಸೆಕ್ಟಮಿ (Vasectomy) ಆಪರೇಶನ್ ನಡೆಯುತ್ತಿತ್ತು. ಡಾ॥ ಭಗವಾನ್ ಮಾಡುತಿದ್ದರು. ಆಪರೇಶ್ ಮುಗಿದು ಹೊಲಿಗೆ ಹಾಕುತಿದ್ದುದನ್ನು ನೋಡಿದ ಮೇಲೆ ಇನ್ನು ಮಾತಾಡಿ ಪ್ರಯೋಜನವಿಲ್ಲವೆಂದುಕೊಂಡು ಮನೋವೇಗವನ್ನು ಅದುಮಿ ಹಿಡಿದು ಪಕ್ಕದ ಕೊಠಡಿಗೆ ಹೋದ. ಅಲ್ಲಿನ ಕೆಲಸ ಮುಗಿಸಿ ಈಚೆ ಬರುವಷ್ಟರಲ್ಲಿ ಡಾ॥ ಭಗವಾನ್ ಹೊರಹೋಗಿದ್ದರು. ಅಘೋರ ಮನೆಗೆ ಹೊರಡಲು ತಯಾರಾಗುತಿದ್ದ.

"ಇದೇನಪ್ಪಾ ? ನಿನಗೇನು ಹುಚ್ಚೇ ?" ಮದನ್ ಹೌಹಾರಿ ಕೇಳಿದ.

"ನಿನಗೇಕೆ ಅಷ್ಟು ಆಶ್ಚರ್ಯ ಮದನ್ ?"

"ಒಂದೇ ಮಗು ! ಆಷ್ಟರೊಳಗಾಗಿ ವಾಸೆಕ್ಟಮಿ ?"

"ಒಂದಿದ್ದರೆ ಸಾಲದೇ ?"

"ಅರವಿಂದಾ ಒಪ್ಪಿದ್ದಾರೆಯೇ ?"

"ಅವಳಿಗಿದು ಗೊತ್ತೇ ಇಲ್ಲ. ಅವಳು ಮದರಾಸಿಗೆ ಹೋಗಿ ಒಂದುವಾರವಾಯಿತು. ಎಂದ ಅಘೋರನ ಕಣ್ಣುಗಳಲ್ಲಿ ತುಂಟತನ ನಲಿಯುತಿತ್ತು.

"ತುಂಬ ಅನ್ಯಾಯ ಅಘೋರ್ !"

"ಅವಳು ಅಷ್ಟು ಆರೋಗ್ಯವಾಗಿಲ್ಲ. ಇನ್ನೂ ಹೆಚ್ಚು ಮಕ್ಕಳ ಭಾರವನ್ನು ಹೊರಲಾರಳೆಂದೇ ಮಾಡಿಸಿಕೊಂಡೆ." ದನಿ ಎದೆಯಾಳದಿಂದ ಹೊರಬಿತ್ತು.

"ಅವರನ್ನು ಕೇಳದೆ ಮಾಡಿಸಿಕೊಳ್ಳುವುದೇ ? ನಿನಗೆ ಹಾಗೆನ್ನಿಸಿರಬಹುದು. ಆದರೆ ಆವರಿಗೆ ?"

"ಬಲ ಭೀಮನಂಥಾ ಮಗನಿದ್ದಾನೆ ಇನ್ನೇನು ಬೇಕು ? ನಮ್ಮಪ್ಪನಿಗೆ

ನಾನು ಒಬ್ಬನೇ ಮಗ!" ಕಣ್ಣುಗಳು ಅರಳಿದುವು. ಹುಬ್ಬುಗಳು ಏರಿ ಇಳಿದುವು.

"ಅದೇನೇ ಇರಲಿ, ಇದು ಸರಿಯಲ್ಲ." ತಲೆಯಲ್ಲಾಡಿಸುತ್ತಾ ನುಡಿದ ಮದನ್.

ಅಘೋರನ ಮುಖದಲ್ಲಿ ಹೊರಹೊಮ್ಮಿದ ಕಿಲಕಿಲ ನಗುವೇ ಉತ್ತರವಾಯಿತು. ಗೆಳೆಯನ ಮಾತನ್ನು ಅಷ್ಟಾಗಿ ಗಣನೆಗೆ ತೆಗೆದುಕೊಳ್ಳದೆ ಅವನೊಂದಿಗೆ ಹೊರ ಬರುವುದಕ್ಕೂ ಕಾರಿಡಾರಿನಲ್ಲಿ ಗೆಳೆಯರ ತಂಡ ಎದುರಾಗುವುದಕ್ಕೂ ಸರಿ ಹೋಯಿತು. ಅವನು ಅಡ್ಡಗಾಲು ಹಾಕಿ ನಡೆಯುತ್ತಿದ್ದುದನ್ನು ನೋಡಿ "ಏನು ಸಮಾಚಾರ?" ಎಂದ ಜಾನಕೀರಾಂ. ಎಲ್ಲರೂ ಅವನ ಉತ್ತರಕ್ಕಾಗಿ ನಿರೀಕ್ಷಿಸಿದರು. ಅಘೋರ ಮಾತಿಲ್ಲದೆ ಮುಖದಲ್ಲಿ ನಸುನಗೆಯನ್ನು ತೇಲಿಸಿದ.

"ಏನಪ್ಪಾ? ಏಕೆ ಹೀಗಿದ್ದಿ?"

"ವಾಸೆಕ್ಟಮಿ!"

"ಹಾ, ನಿಜವಾಗಿ?"

"ಹೌದು."

"ಅದೇಕೆ ಅಷ್ಟೊಂದು ಆತುರ?"

"ಕುಮಾರ ಕಂಠೀರವ ಇದ್ದಾನಲ್ಲಾ ಇನ್ನೇನು ಬೇಕು?"

"ಘೋರ್!"

"ಏನಪ್ಪಾ?"

"ಇದು ಅವಸರದ ಕ್ರಮವೆಂದು ಹೇಳದಿರಲಾರೆ."

"ಒಂದು ವೇಳೆ ನಿನಗೆ ಒಬ್ಬನೇ ಮಗನ ಭಾಗ್ಯ ಇದ್ದಿರಲೂ ಬಹುದು. ಅದು ಹೇಳುವಂತಿಲ್ಲ. ಅಘೋರ್...ಆದರೂ ಹೆಂಡತಿ ಇಲ್ಲದಾಗ ಈ ಕ್ರಮ ಸರಿಯಲ್ಲಪ್ಪಾ."

"ಹೋಗಲಿ ಬಿಡು, ಅವಳಿಗೆ ಹೇಳುವುದೇ ಇಲ್ಲ." ಎಂದ ಅಘೋರ.

ಗೆಳೆಯರೆಲ್ಲರೂ ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಪ್ರತಿಯೊಬ್ಬರೂ ಒಂದೇ ಬಾರಿಗೆ ಧಾಳಿ ಮಾಡಿದರೂ ತನ್ನ ಕ್ರಮ ಅಕ್ರಮವೆನ್ನಿಸಲಿಲ್ಲ. ಅಘೋರ ನಸು ನಗುತ್ತಾ ತನ್ನ ಹಾದಿ ಹಿಡಿದ. ನರಳುವ ಹತ್ತು

ಮಕ್ಕಳಿಗಿಂತ ಒಬ್ಬ ಬಲಿಷ್ಠ ಮಗನಿದ್ದರೆ ಸಾಕು. ಮತ್ತೇಕೆ ಮಕ್ಕಳ ಹಂಬಲ? ಅರವಿಂದಳಿರುವ ರೀತಿಯಲ್ಲಿ ಹೆಚ್ಚು ಮಕ್ಕಳ ಭಾರ ಹೊರಿಸುವುದು ಸಾಧ್ಯವೇಯಿಲ್ಲ ಎನ್ನಿಸಿ ಅಘೋರ ಸಮಾಧಾನದ ಉಸಿರನ್ನು ಬಿಟ್ಟ... ಹಗಲೆಲ್ಲಾ ದುಡಿದು ದಣಿದು ಮನೆಗೆ ಬಂದರೆ ಎಡಕ್ಕೊಬ್ಬರು ಬಲಕ್ಕೊಬ್ಬರು ನರಳುತ್ತಿದ್ದರೆ ಹೇಗೆ ? ಅಪ್ಪ ಅಂತೂ ಸದಾ ರೋಗಿಯಾಗಿ ಬಿಟ್ಟಿದ್ದಾರೆ. ಜೊತೆಗೆ ಅರವಿಂದಳೂ ಹಾಗಾಗುವುದು ಬೇಡ...ಎಂದು ತನಗೆ ತಾನೇ ಭಾವೋದ್ವೇಗದಿಂದ ಹೇಳಿಕೊಂಡ.

ಮರುದಿನ ಅಘೋರ ಆಸ್ಪತ್ರೆಗೆ ಹೋಗದೆ ಮನೆಯಲ್ಲೇ ಉಳಿದ. ನಂದಾ ದೇವಿ ಮಗನಿಗೆ ಕಾಫಿಯನ್ನು ನೀಡುತ್ತಾ ಅಚ್ಚರಿಯಿಂದ–"ಏಕೆ ಮಗೂ, ಹೀಗಿದ್ದಿ ? ನಡಿಗೆಯೇಕೆ ನಿಧಾನವಾಗಿದೆ ?"

"ಕಾಲು ಸ್ವಲ್ಪ ಉಳುಕಿತು ಅಷ್ಟೇ."

ತಾಯಿಗೆ ಸುಳ್ಳು ಹೇಳಬೇಕಾಗಿಬಂದುದು ಹಿತವೆನಿಸಲಿಲ್ಲ. ನುಡಿಯುವಾಗ ಮಾತಿನೆಳೆಯನ್ನು ಜಗ್ಗುತಿತ್ತು ಮನಸ್ಸು. ಆದರೂ, ಗತ್ಯಂತರವಿಲ್ಲದೆ ಹೇಳಲಾರದೇ ಹೇಳಿದ್ದ.

"ತೈಲ ಉಜ್ಜಿಸಿಕೊಳ್ಳಬೇಕಿತ್ತು ಅಘೂ."

"ಒಂದಿನ ಹೋದರೆ ತಾನಾಗಿಯೇ ಸರಿ ಹೋಗುತ್ತೆ. ಮತ್ತೇಕೆ ತೈಲ ?"

"ನೀನೆಂದೂ ನೋವು ಪಟ್ಟವನಲ್ಲ."

"ಅದಕ್ಕೇನು ಮಾಡೋಣ ? ಆನೆಯೂ ಒಂದಿನ ಕಾಹಿಲೆ ಬೀಳುತ್ತೆ."

"ವಾಸ್ತವ್ಯ." ಎಂದ ನಂದಾದೇವಿ ಖಾಲಿ ಲೋಟವನ್ನು ಕೈಗೆ ತೆಗೆದುಕೊಳ್ಳುತ್ತಾ ಪುನಃ ಹೇಳಿದಳು "ನಾಲ್ಕಾರು ದಿನಗಳಿಂದ ಅರವಿಂದಳ ಕಾಗದವೇ ಬರಲಿಲ್ಲ ಅಘೂ."

"ಈ ದಿನ ಬರಬಹುದು."

"ಮಗು ಮನೆಯಲ್ಲಿಲ್ಲದೆ ಹೊತ್ತು ಹೋಗುವುದೇ ಕಷ್ಟ."

ಮಗುವಿನ ವಿಷಯ ಕಿವಿಯ ಮೇಲೆ ಬೀಳುತ್ತಲೂ ಅಘೋರನ ಹೃದಯ ರವಿಯ ದರ್ಶನದಿಂದ ಬಿರಿಯುವ ಕಮಲದಂತೆ ಅರಳಿತು. ಮರಿಯಾನೆಯಂತೆ ದಿಮಿದಿಮಿ ಹೆಜ್ಜೆಯಿಟ್ಟು ನಡೆಯಲು ಅಭ್ಯಾಸಿಸುತಿದ್ದ

ತಿಲೋತ್ತಮನ ಮುದ್ದು ಚಿತ್ರ ಮನದಲೆಯಲ್ಲಿ ನಲಿಯ ತೊಡಗಿತು. "ಅಪ್ಪ, ಅಪ್ಪ." ಎನ್ನುವ ಮೊದಲ ಮುದ್ದುನುಡಿ ಕಿವಿಯಲ್ಲಿ ಮಾರ್ನುಡಿಯಿತು. ಎದೆಯಾಳದಲ್ಲಿ ಆನಂದಸುಧೆ ಉಕ್ಕಿ ಹರಿಯತೊಡಗಿತು. ಒಡನೆಯೇ ಅವನ ಚಿತ್ತ ಮದರಾಸಿಗೆ ಹಕ್ಕಿಯಂತೆ ಹಾರಿಹೋಯಿತು.

"ಅಘೂ." ಪಕ್ಕದ ಕೊಠಡಿಯಿಂದ ತಂದೆ ಕರೆದ ದನಿ ಕಿವಿಯನ್ನು ತಾಗುತ್ತಲೂ ಅಘೋರ ಎದ್ದು ಹೋದ.

ನಾಲ್ಕಾರು ಬಾರಿ ಕೆಮ್ಮಿ ವಿಮಲ್‌ದಾಸ್ ಅಸಮಾಧಾನದಿಂದ–"ನನಗಂತೂ ಸಾಕಾಗಿ ಬಿಟ್ಟಿದೆ. ಹಾವೂ ಸಾಯುವುದಿಲ್ಲ ; ಕೋಲೂ ಮುರಿಯುವುದಿಲ್ಲ."

"ಹಾಗೆಂದರೆ ಹೇಗಪ್ಪಾ ? ಎಲ್ಲರಿಗೂ ಒಂದೊಂದು ಬಗೆಯ ಕಷ್ಟ ಇದ್ದೇ ಇರುತ್ತೆ. ಅದಕ್ಕೆ ಬೇಸರಪಟ್ಟುಕೊಂಡರೆ ಆಗುತ್ತದೆಯೆ ?"

ಎನ್ನುತ್ತಾ ನಾಡಿ ಪರೀಕ್ಷಿಸಿದ. ಅಂದಿನ ಔಷಧ ಮೇಜಿನ ಮೇಲೆ ಹಾಗೇ ಉಳಿದಿತ್ತು. ನೋಡಿ ತುಸು ಅಚ್ಚರಿಯಿಂದ ಕೇಳಿದ "ಇಂದು ಔಷಧ ತೆಗೆದುಕೊಳ್ಳಲಿಲ್ಲವೇ ?"

"ಈಗೀಗ ಔಷಧದಲ್ಲಿಯೂ ಜುಗುಪ್ಸೆ ಬಂದಿದೆ."

"ಜುಗುಪ್ಸೆ ಪಟ್ಟುಕೊಂಡರೆ ಬದುಕುವುದು ಹೇಗೆ ? ಹೇಗಾದರೂ ಸುಧಾರಿಸಿಕೊಳ್ಳಬೇಕು." ನಾಲಿಗೆ ಹಾಗೆಂದರೂ ತಲೆ ಯೋಚಿಸುತಿದ್ದ ರೀತಿಯೇ ಬೇರೆ. ಕ್ಷಣ ಕಾಲ ಮೈಯ್ಯೆಲ್ಲೆಲ್ಲಾ ನಸು ಕಂಪನದ ಅಲೆ ಹರಿದಾಡಿ ಹೋಯಿತು. ಅಘೋರ ತಂದೆಯ ತೋಳು ಹಿಡಿದುಕೊಂಡು ಕೈಯಾಸರೆಯಿಂದ ಹೊರಗಡೆ ಕರೆದುಕೊಂಡು ಬಂದು ಕುರ್ಚಿ ಹಾಕಿ ಕುಳ್ಳಿರಿಸಿದ.

"ಅಘೂ. ಇಳಿವಯಸ್ಸಿನಲ್ಲಿ ಟಾನಿಕ್ಕು ಹಿಡಿಯುತ್ತದೆಯೇ ? ವೃಥಾ ಅದಕ್ಕೆಷ್ಟು ಹಣ ಖರ್ಚು ಮಾಡುತ್ತಿದ್ದಿ."

"ನಿಮ್ಮ ವಯಸ್ಸೇನು ಹೆಚ್ಚಲ್ಲ." ಅಘೋರ ಸಮಾಧಾನ ಹೇಳಿದ.

"ಅರವತ್ತು ದಾಟಿದ ಮೇಲೆ ಮುಗಿಯಿತು. ಹೆಚ್ಚಲ್ಲದೆ ಮತ್ತೇನು ?"

ಅಷ್ಟರಲ್ಲಿ ಅಲ್ಲಿಗೆ ಬಂದ ನಂದಾ ತುಸು ಸಿಡುಕಿನಿಂದ ಅಂದಳು "ಇದೆಂಥಾ ಮಾತು ? ವಯಸ್ಸು ಎಷ್ಟಾದರೂ ಆಗಿರಲಿ. ಅದರ ಚಿಂತೆ ಈಗ್ಯಾಕೆ ? ಸುಧಾರಿಸಿಕೊಳ್ಳುವುದನ್ನು ಮಾತ್ರ ಯೋಚಿಸಿರಿ."

ಅಘೋರ ತಾಯಿಯ ಮನಸ್ಸಿನಲ್ಲಿದ್ದ ಆತಂಕವನ್ನು ಗಮನಿಸುತ್ತಿದ್ದ. ಅವಳು ಪುನಃ ಅದೇ ಧಾಟಿಯಲ್ಲಿ ಮುಂದುವರಿದಳು ಔಷಧಿ ಕಷಾಯಕ್ಕೆ ನಾವೇನು ಡಾಕ್ಟರನ್ನು ಹುಡುಕಿಕೊಂಡು ಹೋಗಬೇಕಾಗಿಲ್ಲ. ಮಗ ಇದ್ದಾನೆ. ನೋಡಿಕೊಳ್ಳುತ್ತಾನೆ. ಸುಮ್ಮಸುಮ್ಮನೆ ಇಲ್ಲದ್ದನ್ನು ಮನಸ್ಸಿಗೆ ಹಚ್ಚಿಕೊಳ್ಳುತ್ತೀರಿ."

ವಿಮಲ್‌ದಾಸ್ ಮಾತಾಡದೆ ಸ್ವಲ್ಪ ಊದಿಕೊಂಡಿದ್ದ ತನ್ನ ಕೈ ಕಾಲುಗಳ ಮೇಲೆ ದಿಟ್ಟಿ ಹೊರಳಿಸಿದ್ದ. ಚರ್ಮದ ಮೇಲೆ ನಿರಿಗಳು ಎದ್ದು ತೋರುತ್ತಿದ್ದುವು. ಒರಟು ಬೆರಳುಗಳಿಂದ ಮುಂಗೈಯನ್ನು ಉಜ್ಜುತ್ತಾ ಸುಮ್ಮನಾದ. ಪ್ರತಿ ಮಾತಾಡದೆ ಕುಳಿತ ಅವನ ರೀತಿ ಅಘೋರನ ಅಂತಃಕರಣವನ್ನು ಮಂಜಿನಂತೆ ಕರಗಿಸಿತು. ಅವನು ಅತ್ತಿತ್ತ ತಿರುಗಿನೋಡಿ ಸಮಾಧಾನ ನೀಡುವ ಸಲುವಾಗಿ ಅಂದ "ಛೀಃ ! ಛೀಃ ! ಇದೇನು ಹೆಚ್ಚಲ್ಲ. ಯಾರಿಗೂ ಬರದ ಕಾಹಿಲೆ ನಿಮಗೆ ಬಂದಿದೆಯೆ ? ಅದಕ್ಕೇಕೆ ಬೇಸರ ? ಡಯಾಬಿಟಿಸ್ ಯಾವಾಗಲೂ ಸ್ವಲ್ಪ ಸತಾಯಿಸುತ್ತೆ. ಪಥ್ಯ ಪಾನಾದಿಗಳಲ್ಲಿ ಸದಾ ಎಚ್ಚರಿಕೆ ವಹಿಸಿದರಾಯಿತು."

ತಾಯಿ ಸಮಾಧಾನದ ಉಸಿರನ್ನು ಬಿಟ್ಟಳು. ವಿಮಲ್‌ದಾಸನ ಮುಖದಲ್ಲೂ ಸಣ್ಣ ನಗೆ ಅರಳಿತು. ನೋಡಿ ಅಘೋರನ ಹೃದಯವೂ ಹಗುರಾಯಿತು. ಪ್ರಾಣ ಚಿಮ್ಮುವವರೆಗೂ ಬದುಕಿಸುವ ಭರವಸೆ ನೀಡಿರಿ." ಎಂಬ ಹಿರಿಯ ವೈದ್ಯರ ಉಪದೇಶ ಕಿವಿಯಲ್ಲಿ ಮಾರ್ನುಡಿಯಿತು. ಏನೆನ್ನಿಸಿತೋ, ಅಘೋರ ತನ್ನಷ್ಟಕ್ಕೆ ತಾನೇ ನಕ್ಕು ಬಿಟ್ಟ.

ಂ ಂ ಂ ಂ

ಅಂದು ಅಘೋರ ವಾರ್ಡುಗಳನ್ನೆಲ್ಲಾ ಸುತ್ತು ಹಾಕಿ ಹೊರ ಬಂದಾಗ ತನಗಾಗಿ ಕಾಯುತ್ತಿದ್ದವರ ತಂಡದಲ್ಲಿ ಸೋದರ ಮಾವನನ್ನು ಕಂಡು ಕಣ್ಣರಳಿಸಿದ–

"ಏಕೆ ಬಂದಿದ್ದೀರಿ ? ಏನು ಸಮಾಚಾರ ?"

"ಅಮ್ಮನಿಗೆ ತುಂಬ ಹೊಟ್ಟೆ ನೋವು ಬಂದಿದೆಯಪ್ಪಾ."

"ಕರೆ ತಂದಿದ್ದೀರೇನು ?"

"ಹೌದು."

ಅಘೋರ ಕೂಡಲೆ ಗಾಲಿಯ ಕುರ್ಚಿಯನ್ನು ತರಿಸಿ ಅಜ್ಜಿಯನ್ನು ಒಳಗಡೆ ಕರೆದೊಯ್ದ. ಅಜ್ಜಿ ಕಣ್ಣುಗಳನ್ನು ಪಿಳಿ ಪಿಳಿ ಬಿಟ್ಟು ಆಪರೇಶನ್ ಥಿಯೇಟರಿನ ಸುತ್ತಲೂ ಕಣ್ಣುಹೊರಳಿಸಿತು. ಕೂಡಲೆ ಭಯದ ಊಟೆ ಮನದಲ್ಲಿ ಮೊಳೆತು ಮುಖ ಬಿಳಿಚಿಕೊಂಡಿತು.

"ಅಘೂ, ನನಗೇನೂ ಮಾಡಬೇಡಪ್ಪ. ಏನಾದರೂ ಸ್ವಲ್ಪ ಔಷಧ ಕೊಟ್ಟರೆ ಸಾಕು."

"ಏಕಜ್ಜೀ, ಅಷ್ಟೊಂದು ಭಯವೇ? ಹೇಗಿದ್ದರೂ ಒಂದಲ್ಲ ಒಂದು ದಿನ ಸಾಯಬೇಕಷ್ಟೆ?" ಅಘೋರ ನಗೆ ಚಟಾಕಿ ಹಾರಿಸಿ ಗೇಲಿ ಮಾಡಿದ.

"ಅಯ್ಯೊ, ಕೊಯ್ಯಿಸಿಕೊಂಡು ಸಾಯುವುದೆಂದರೆ ಸುಮ್ಮನೇನೇ?" ದನಿ ಗೋಗರೆಯಿತು.

"ನಿಮಗೆ ಗೊತ್ತೇ ಆಗದ ಹಾಗೆ ಕೊಯ್ದುಹಾಕಿ ಬಿಡುತ್ತೇನಜ್ಜೀ!" ತಮಾಷೆಯ ಧಾಟಿಯಲ್ಲಿ ಅಂದ ಅಘೋರ.

"ಬೇಡಪ್ಪಾ, ಬೇಡ." ನರಳಿತು ಅಜ್ಜಿ. ಕಣ್ಣುಗಳಲ್ಲಿ ಕಂಬನಿಯ ಕೋಡಿ ಹರಿಯಿತು.

ಅಘೋರ ಪರೀಕ್ಷಿಸಿದ. ನರಳು ದನಿಯಲ್ಲಿ ಮತ್ತೆ ಹೇಳಿತು ಅಜ್ಜಿ "ನಾನು ಹೀಗೇ ಸತ್ತರೂ ಚಿಂತೆ ಇಲ್ಲಪ್ಪಾ. ನನ್ನ ಕೊಯ್ದು ಸಾಯಿಸಬೇಡ."

ಹೇಳುಹೇಳುತಿದ್ದಂತೆಯೇ ಅಜ್ಜಿಗೆ ಪ್ರಜ್ಞೆ ಹೋಯಿತು. ಪರ್ಫರೇಟೆಡ್ ಡಿಯೋಡಿನಲ್ ಅಲ್ಸರ್(Perforated Duodenal ulcer)ಏನು ಮಾಡುವುದೆಂದು ಯೋಚಿಸಿದ...ಹೈ ಬ್ಲಡ್ ಪ್ರೆಷರ್ ಬೇರೆ ಇದೆ. ಮುಟ್ಟದೆ ಬಿಟ್ಟರಂತೂ ಸಾಯುವುದು ಖಂಡಿತ. ಆಪರೇಶನ್ ಮಾಡುವಾಗ ಮೇಜಿನ ಮೇಲೆ ಹೋದರೂ ಹೋಗಬಹುದು...ಫಿಜಿಶಿಯನ್ನರಿಗೆ ಟೆಲಿಫೋನಿನಲ್ಲಿ ಕರೆ ನೀಡಿ ಏನು ಮಾಡುವುದೆಂದು ಸ್ವಲ್ಪ ಯೋಚಿಸುತ್ತಾ ನಿಂತ.

ಮನೆಯಿಂದ ತಾಯಿಯ ಸವಾರಿ ಆಗಮಿಸಿತು. ಪ್ರಜ್ಞೆ ಇಲ್ಲದೆ ಮಲಗಿದ್ದ ತಾಯಿಯನ್ನು ಸ್ವಲ್ಪ ಹೊತ್ತು ನೋಡಲು ಅಘೋರ ಅವಳನ್ನು ಆಪರೇಶನ್ ಥಿಯೇಟರಿನೊಳಗೆ ಕರೆದೊಯ್ದು ತೋರಿದ. ಇನ್ನು ಹೆಚ್ಚು ಕಾಲ ತಡಮಾಡುವಂತಿಲ್ಲದಿದ್ದುದರಿಂದ ನಂದಾ ಮಗನಿಗೆ "ಚೆನ್ನಾಗಿ ನೋಡಿಕೊಳ್ಳಪ್ಪಾ ಅಘೂ. ಪಾಪ, ವಯಸ್ಸಾಗಿದೆ." ಎಂದಳು ಕಂಬನಿ ಸೂಸಿ.

ಹೋಗಲಾರದೇ ಬಿಟ್ಟುಹೋದ ತಾಯಿಯನ್ನು ನೋಡುವಾಗ ಮರುಕ ಮನದ ಕಿಂಡಿಯಲ್ಲಿ ಕಳ್ಳ ಬೆಕ್ಕಿನಂತೆ ತೂರಿ ಬಂತು. ಫಿಜಿಶಿಯನ್ನರ ಆಗಮನವನ್ನೆದುರು ನೋಡುತ್ತಾ ನಿಂತ ಅಘೋರ ಮಾನಸಿಕ ಹೋರಾಟಕ್ಕೆ ಒಳಗಾದ...."ಹೇಗೂ ಸಾಯುವ ಅಜ್ಜಿ. ಅಂದಮೇಲೇಕೆ ಶ್ರಮ ?"...ಎಂಬು ದೊಂದಾದರೆ..."ಹೇಗೂ ಸಾಯುವುದೊಂದು ಇದ್ದೇ ಇದೆಯಲ್ಲಾ. ಉಳಿಸುವ ಪ್ರಯತ್ನವನ್ನೂ ಒಂದು ಬಾರಿ ಮಾಡಿ ನೋಡು." ಎಂಬುದು ಇನ್ನೊಂದು.

ತರ್ಕವಿತರ್ಕಗಳ ಸುರುಳಿಯಲ್ಲಿ ಸಿಕ್ಕು ಮನಸೋತಿತ್ತು. ಹೋಗುವಾಗ ತಾಯಿ ನುಡಿದ ನುಡಿ ಕಿವಿಯಲ್ಲಿ ಮೆಲ್ಲನೆ ಮರ್ಮರಿಸಿತು "ತುಂಬ ವಯಸ್ಸಾಗಿದೆ. ಚೆನ್ನಾಗಿ ನೋಡಿಕೊಳ್ಳಪ್ಪಾ ಅಘೂ."

ಬಾಗಿಲಲ್ಲಿ ಕಾದು ನಿಂತಿದ್ದ ಸೋದರ ಮಾವನನ್ನು ನೋಡಲು ಹೊರ ಹೋದ. ಅವನ ಮುಖ ಕೂಡಲೇ ಸ್ವಲ್ಪ ಅರಳಿತು.

"ಏನಾದರೂ ಆಗಲಿ, ಆಪರೇಶ್ಷ ಮಾಡಿಬಿಡಪ್ಪಾ ಅಘೂ."

ಮಾವನ ಅಭಿಪ್ರಾಯವನ್ನು ಹೊತ್ತು ಒಳಬರುವಷ್ಟರಲ್ಲಿ ಡಾ|| ಜೀವನ್ ದಾಸ್ ಒಳ ಬಂದರು. ರೋಗಿಯನ್ನು ಪರೀಕ್ಷಿಸಿ ಅವರೆಂದರು "ಆಪರೇಶ್ಷ ಮಾಡುವಾಗ ಮೇಜಿನ ಮೇಲೆಯೇ ಪ್ರಾಣ ಹೋಗುವ ಸಂಭವವಿದೆ."

ಚಾರ್ಟನ್ನು ನೋಡಿದರು...ಎಪ್ಪತ್ತಾರು ವರ್ಷವೆಂಬುದನ್ನು ಸಾರಿ ಹೇಳುತಿತ್ತು ಅದು ಹಾಗೇ ಸ್ವಲ್ಪ ಯೋಚಿಸಿ ಪುನಃ ನಸುನಕ್ಕು "ಹೇಗೂ ತುಂಬ ವಯಸ್ಸಾಗಿದೆ. ಆಪರೇಶ್ಷ ಮಾಡದಿದ್ದರಂತೂ ಉಳಿಯುವ ಸಂಭವವೇ ಇಲ್ಲ. ಒಂದು ವೇಳೆ, ಈ ಗಡು ದಾಟಿದಲ್ಲಿ ಇನ್ನೂ ಹತ್ತು ವರ್ಷ ಬದುಕಿದರೂ ಬದುಕಬಹುದು. ಆ ಒಂದು ಆಶಾಕಿರಣಕ್ಕಾಗಿಯಾದರೂ ಆಪರೇಶ್ಷ ಮಾಡ ಬಹುದು ನೋಡಿ. ಹೇಗೂ ನಿಮ್ಮ ಅಜ್ಜಿ. ನಾನು ನಿಮಗೇ ಬಿಟ್ಟುಬಿಡುವೆ. ನಿಮಗೆ ಹೇಗೆ ಸೂಕ್ತವೋ ಹಾಗೆ ಮಾಡಿ ಡಾಕ್ಟರ್."

ಡಾ|| ಜೀವನ್‌ದಾಸ್ ತನ್ನ ಸಲಹೆ ಇತ್ತು ಹೊರಟು ಹೋದನಂತರ ಯೋಚಿಸಲೂ ಅವಕಾಶವಿಲ್ಲದಂತೆ ತನ್ನ ಕೆಲಸಕ್ಕೆ ಕೈ ಹಚ್ಚಿದ ಅಘೋರ. ಹೊತ್ತು ಎರಡರ ಅಂಚನ್ನು ದಾಟುವುದರಲ್ಲಿತ್ತು. ಹೊಟ್ಟೆಯ ಹಸಿವೆ ಯೊಂದು ಕಡೆ; ಧ್ಯೇಯಕ್ಕೆ ವಿರುದ್ಧವಾದ ಕೃತಿಯೊಂದು ಕಡೆ; ತನಗೇ ಕಟ್ಟಿಟ್ಟ ಜವಾಬ್ದಾರಿಯೊಂದು ಕಡೆ; ಎಲ್ಲವೂ ಕೂಡಿ ತನುಮನಗಳನ್ನು ಹಣ್ಣು ಮಾಡಿ

ದುವು. ಅಘೋರ ಯಾಂತ್ರಿಕವಾಗಿ ಕೈಯಾಡಿಸುತಿದ್ದ.

ಮೇಜಿನ ಸುತ್ತ ಸುತ್ತುವರಿದು ನಿಂತು ಸಹಾಯ ಹಸ್ತ ನೀಡುತಿದ್ದ ಆರೇಳು ಮಂದಿ ಡಾಕ್ಟರುಗಳ ಗುಂಪಿನಿಂದ ದನಿಯೊಂದು ಹೊರಬಿತ್ತು. "ಸಾರ್, ಅಜ್ಜಿ ಒಂದು ಗಂಟೆ ಅಥವಾ ಅರ್ಧದಿನ ಬದುಕಿದರೂ ಅದು ಜೀವ ದಾನ!" ಅಘೋರ ಕತ್ತೆತ್ತಿ ನೋಡಿದ. ಡಾ|| ಅನಿಲ್ ಹಾಗೆಂದಿದ್ದರು.

ಅಘೋರ ಮಾತಾಡದೆ ಮೆಲುನಗೆ ನಕ್ಕ. ಜಠರ ಅರ್ಧದಷ್ಟು ಹುಣ್ಣಿನಿಂದ ಕೂಡಿ ಕೆಟ್ಟುಹೋಗಿದ್ದುದರಿಂದ ಅದಷ್ಟನ್ನು ತೆಗೆದು ಹಾಕಿ ಜೋಡಿಸಿದ್ದ. ಆಹಾರ ಪದಾರ್ಥಗಳನ್ನು ಬಳಿದು ಶುದ್ಧಗೊಳಿಸಿ ಆಪರೇಷನ್ ಮುಗಿಸುವಾಗ ರೋಗಿಗಿಂತ ಡಾಕ್ಟರೇ ಬಳಲಿದಂತೆ ತೋರಿತು. ತನ್ನ ಕೊಠಡಿಗೆ ಹೋಗಿ ಮುಖ ಮಜ್ಜನ ಮಾಡಿ ಕ್ಯಾರಿಯರಿನಲ್ಲಿದ್ದ ಊಟವನ್ನು ಮುಗಿಸುವಾಗ ಅದು ತಂಗಳಾಗಿತ್ತು.

ಸಂಜೆಯಲ್ಲಿ ಡಾ|| ಜೀವನ್‌ದಾಸ್ ನೋಡಲು ಬಂದಾಗ ಅಘೋರ ಡಾ|| ಅನಿಲ್‌ರೊಡನೆ ಅಜ್ಜಿಯ ಬಳಿಯಲ್ಲಿ ಕುಳಿತಿದ್ದ.

"ಹೇಗಿದ್ದಾರೆ?" ವಾರ್ಡಿನೊಳಗೆ ಪದಾರ್ಪಣೆ ಮಾಡುತ್ತಲೇ ಕೇಳಿದರು ಡಾ|| ಜೀವನ್‌ದಾಸ್.

"ಅಜ್ಜಿಗೆ ಆಯುಸ್ಸು ಗಟ್ಟಿಯಿದೆ."

"ಭೇಷ್!" ಎಂದ ಜೀವನ್‌ದಾಸ್ ತಾವೊಮ್ಮೆ ಪರೀಕ್ಷಿಸಿದ ನಂತರ ನಗುಮುಖದಿಂದ ನುಡಿದರು "ಜೀವದಾನ ಮಾಡಿದ್ದೀರಿ ಅಘೋರ್. ದೇವರು ಒಳ್ಳೆಯದು ಮಾಡಲಿ." ದನಿಯಲ್ಲಿ ಉತ್ತೇಜನವಿತ್ತು. ಅದೇ ಸಮಯಕ್ಕೆ ಸರಿಯಾಗಿ ಬಾಗಿಲಲ್ಲಿ ಮುಖಹಾಕಿದ ತಾಯಿಯ ಮುಖದಲ್ಲಿ ಆತಂಕದ ಮುದ್ರೆಯೊತ್ತಿದುದನ್ನು ನೋಡಿದ ಡಾ|| ಜೀವನ್‌ದಾಸ್ ಮುಖದಲ್ಲಿ ನಗೆ ಮಲ್ಲಿಗೆ ಬಿರಿಯಿತು.

"ಓ. ನಿಮಗೇಕೆ ಅಷ್ಟೊಂದು ಆತಂಕ? ಮಗ ಕತ್ತರಿ ಹಿಡಿದನೆಂದರೆ ತೀರಿತು. ಯಮಧರ್ಮರಾಯ ಈ ಬಳಿಯಲ್ಲಿ ಸುಳಿಯಲಾರ!"

ಅವರ ಹಾಸ್ಯದ ಚಟಾಕಿ ಎಲ್ಲರ ಮುಖದಲ್ಲೂ ನಗುವನ್ನು ಮೂಡಿಸಿತು. ನಂದಾದೇವಿ ಹಸನ್ಮುಖಿಯಾಗಿ ಒಳಬಂದಳು.

ಮರುದಿನ ಅಜ್ಜಿಯ ಕೊಠಡಿಯಲ್ಲಿ ಸ್ವಲ್ಪ ಹೊತ್ತು ಕುಳಿತು ಸೋದರ

ಮಾವನೊಡನೆ ಮಾತಾಡಿ ಅಘೋರ ಗೃಹಾಭಿಮುಖವಾಗಿ ಹೆಜ್ಜೆ ಹಾಕಿದ. ನೆತ್ತಿಯುರಿಯುವಂತೆ ಹೊತ್ತು ಉರಿಯುತ್ತಿತ್ತು. ಈ ದಿನ ಮನೆಗೇನೆ ಊಟಕ್ಕೆ ಬರುವುದಾಗಿ ಹೇಳಿ ಬಂದಿದ್ದುದರಿಂದ ತಂದೆ ತಾಯಿ ಕಾದಿರುತ್ತಾರೆಂಬ ಯೋಚನೆ ಬಂದೊಡನೆ ಕಣ್ಣುಗಳನ್ನು ಗಡಿಯಾರದ ಕಡೆ ಹೊರಳಿಸಿದ. ಹೊತ್ತು ಎರಡು ಗಂಟೆಯಾಗಿತ್ತು. ನೋಡಿದೊಡನೆಯೇ ಹೆಜ್ಜೆಗಳು ತಾನಾಗಿಯೇ ಚುರುಕುಗೊಂಡುವು.

ಆಸ್ಪತ್ರೆಯ ಆವರಣವನ್ನು ದಾಟಬೇಕಾದರೆ ಇನ್ನೂ ಹತ್ತು ಹೆಜ್ಜೆ ನಡೆಯಬೇಕು. ಅಷ್ಟರಲ್ಲಿ ಹಿಂದಿನಿಂದ ದುಡುದುಡು ಸದ್ದು ಮಾಡುತ್ತಾ ಕಲಿಕೆಯ ಡಾಕ್ಟರೊಬ್ಬ ಓಡುತ್ತಾ ಬಂದ. ಆಗಲೇ ಎಮರ್ಜನ್ಸಿ ಕೇಸೊಂದು ಹಾಜರಾಗಿತ್ತು. ವೈದ್ಯರೆಲ್ಲರೂ ಮಧ್ಯಾಹ್ನದ ಬಿಡುವಿಗಾಗಿ ಮನೆಗೆ ತೆರಳಿದ್ದರು. ಇನ್ನು ಆಸ್ಪತ್ರೆಯಲ್ಲಿ ಹಿರಿಯ ವೈದ್ಯರಾರೂ ಇರಲಿಲ್ಲವಾದ್ದರಿಂದ ಅವನು ಓಡಿ ಬಂದು ಸಹಾಯ ಕೋರಿದ—

"ಸಾರ್ ಈಗಲೇ ಆಪರೇಶನ್ ಆಗದಿದ್ದರೆ ರೋಗಿಯುಳಿಯುವಂತಿಲ್ಲ."

ಅಘೋರ ಕ್ಷಣಕಾಲ ಯೋಚಿಸಿದ...ಪಾಪ, ಮನೆಯಲ್ಲಿ ಎಲ್ಲರೂ ನನಗಾಗಿ ಕಾದಿರುತ್ತಾರೆ. ಹಾಗೆಂದು ಹೇಳಿ ಬಂದುದೇ ತಪ್ಪು...ತನ್ನ ಉತ್ತರಕ್ಕಾಗಿ ಕಾದು ನಿಂತಿದ್ದ ಡಾ|| ಪ್ರೇಂ ಅಹುಜನಿಗೆ ಏನಾದರೂ ಹೇಳಲೇಬೇಕಾಗಿತ್ತು. ಹೇಳಲಾರದೇ ಹೇಳಿದ "ಹೂಂ, ತಯಾರು ಮಾಡಿರಿ ಬಂದೆ. ಡಾ|| ಅನಿಲ್ ಇದ್ದಾರಷ್ಟೆ?"

ಹಸಿವು ಹೊಟ್ಟೆಯಲ್ಲಿ ಉರಿ ಎಬ್ಬಿಸಿದ್ದುದರಿಂದ ಕ್ಯಾಂಟೀನಿನತ್ತ ಹೆಜ್ಜೆಗಳು ತಾವಾಗಿ ಮುಂದುವರಿದುವು. ಅವಸರದಿಂದ ಬರೀ ಕಾಫಿ ತೆಗೆದುಕೊಂಡು ಹೊರಬಿದ್ದ. ಹಸಿದ ಹೊಟ್ಟೆ ಬರೀ ಕಾಫಿ ಬಿದ್ದುದರಿಂದ ಚುರುಚುರು ಎನ್ನತೊಡಗಿತು. ಒಂದಿಡ್ಲಿ ತೆಗೆದು ಕೊಂಡಿದ್ದಿದ್ದರೆ ಒಳ್ಳೆಯದಿತ್ತು. ಅವಸರಪಟ್ಟುದುದು ತಪ್ಪಾಯ್ತು ಎಂದುಕೊಂಡು ಆಸ್ಪತ್ರೆಯನ್ನು ಮುಟ್ಟಿದ. ಅವಸರವಸರವಾಗಿ ಹೆಜ್ಜೆ ಹಾಕಿದರೂ ಕಾರಿಡಾರು ಸವೆಯದು. ಏನಿಲ್ಲೆಂದರೂ ಈ ಕಡೆಯಿಂದ ಆ ಕಡೆಗೆ ಸೇರಬೇಕೆಂದರೆ ಹತ್ತು ನಿಮಿಷಗಳ ಹಾದಿ.

ಓ...ಅದೇನು ಸಾಮಾನ್ಯವೇ ? ಮೊದಲೇ ದಣಿದ ಮೈ.

ಅಘೋರ ಮೇಜಿನ ಮೇಲೆ ಪ್ರಜ್ಞಾವಿಹೀನನಾಗಿ ಮಲಗಿದ್ದ ವ್ಯಕ್ತಿ

ಯನ್ನು ನಿಟ್ಟಿಸಿ ಕೈಗೆ ಚಾರ್ಟನ್ನು ತೆಗೆದುಕೊಂಡ. ಮನೋ ಮಂದಿರದಲ್ಲಿ ಭುಗಿಲ್ಲೆಂದು ಬೆಂಕಿ ಹತ್ತಿಕೊಂಡಿತು. ಕಣ್ಣುಗಳು ಪುನಃ ವ್ಯಕ್ತಿಯ ಕಡೆ ಹರಿದುವು. ನಿಸ್ತೇಜವಾದ ಮುಖ; ಗುಳಿ ಬಿದ್ದ ಕಣ್ಣುಗಳು; ಸುಕ್ಕು ಗಟ್ಟಿದ ಚರ್ಮ; ಅಚ್ಚ ಬೆಳ್ಳಿಯಂತೆ ಹೊಳೆ ಹೊಳೆಯುವ ಕೂದಲು; ಸ್ನಾನ ಕಾಣದ ಮೈ; ನೀರು ತೋರದ ಬಟ್ಟೆ; ನೂರು ವಸಂತಗಳನ್ನು ಮೆಟ್ಟಿ ನಿಂತ ಗ್ರಾಮ್ಯ ವ್ಯಕ್ತಿ. ಕಣ್ಣುಗಳು ಚಾರ್ಟಿನ ಮೇಲೆ ಪುನಃ ಹೊರಳಿದುವು. ಆತನಿಗೆ ನೂರು ವರ್ಷವೆಂಬುದನ್ನು ಸಾರಿ ಹೇಳುತಿತ್ತು–ಅದು.

ಶತಾಯುಷಿ....!

ಎತ್ತು ಹಾದಾಗ ಅದರ ಕೊಂಬು ಹೊಟ್ಟೆಯನ್ನು ತೂರಿ ಕರುಳನ್ನು ಹರಿದಿತ್ತು. ನೆತ್ತರಿನಿಂದ ಮೈ ತೊಯ್ದ ದೃಶ್ಯ ಕರುಣಾಜನಕವಾಗಿತ್ತು. ಒಂದು ಕ್ಷಣ, ಒಂದೇ ಒಂದು ಕ್ಷಣ ಕಣ್ಣುಗಳು ತಾವಾಗಿಯೇ ಮುಚ್ಚಿಕೊಂಡುವು. ಮನಸ್ಸಿಗೆ ಮುಳ್ಳು ನೆಟ್ಟಂತಾಗಿ ಮೈ ಜುಮುಜುಮುಗುಟ್ಟಿತು. ಈ ಮನುಷ್ಯ ಅರೆಜೀವವಾಗಿ ಇಲ್ಲಿಗೆ ಬರುವುದಕ್ಕಿಂತ ಸ್ಥಳದಲ್ಲೇ ಮೃತನಾಗಿದ್ದಿದ್ದರೆ ದೇಶಕ್ಕೆ ಏನು ನಷ್ಟವಾಗುತಿತ್ತು ?....ಎಂದೆನಿಸಿ ಮನದಲ್ಲಿ ಎಲ್ಲಿಲ್ಲದ ಅಸಡ್ಡೆ ಮೂಡಿತು...ಒಂದು ವೇಳೆ ಬದುಕಿದರೂ ಇನ್ನೆಷ್ಟು ಕಾಲ ಬದುಕಿಯಾನು ? ಈತನಿಗಾಗಿ ನನ್ನ ವೇಳೆಯಾದರೂ ಏಕೆ ವ್ಯಯವಾಗಬೇಕು ?... ನೆಟ್ಟ ನೋಟ ಕೂಗಿ ಹೇಳಿತು...ಹೊಟ್ಟೆಗೆ ಹಿಟ್ಟಿಲ್ಲದೆ ದುಡಿಯುವುದೆಂದರೆ ನಿನಗೆ ಅರ್ಥ ಆಯುಸ್ಸು!...ಹಸಿದ ಹೊಟ್ಟೆ ಘೀಳಿಟ್ಟಿತು. ಅಘೋರ ಅರೆ ಹುಚ್ಚನಂತೆ ಅಲ್ಲಿಂದ ಕಾಲ್ತೆಗೆದ. ಅವನು ಹೇಳದೆ ಕೇಳದೆ ಬಾಗಿಲವರೆಗೂ ಹೋಗುವುದನ್ನು ಸಹ ಡಾಕ್ಟರುಗಳೊಡನೆ ಅಲ್ಲಿಯ ಸಿಬ್ಬಂದಿ ಅಚ್ಚರಿ ತುಂಬಿದ ಕಣ್ಣುಗಳಿಂದ ನಿಟ್ಟಿಸಿತು. ಅನಿಲ್ ಅಚ್ಚರಿಯಿಂದ ಕೂಗಿದ "ಸಾರ್ ಸಾರ್ !"

ದನಿಯು ಕಿವಿಯನ್ನು ತಾಗುತ್ತಲೂ ಅಘೋರನ ಹೆಜ್ಜೆಗಳು ಹಿಮ್ಮೆಟ್ಟಿದುವು. ನೀರಸ ದನಿಯಲ್ಲಿ ಕೇಳಿದ "ಏನಪ್ಪಾ, ಅನಿಲ್ ?"

ಅಘೋರನ ನಾಲಿಗೆ ಏನನ್ನೋ ನುಡಿಯಲು ತೊದಲಿತಾದರೂ ನುಡಿಯದಾಯಿತು. ತುಸು ಹೊತ್ತು ಹಾಗೇ ನಿಂತು ಪುನಃ ಮೇಜಿನ ಬಳಿಗೆ ಹಿಂದಿರುಗಿದ.

"ಯಾಕೋ ನಿಮಗೆ ಸ್ವಾಸ್ಥ್ಯವಿಲ್ಲವೆಂದು ತೋರುತ್ತೆ. ಇನ್ನೂ ಊಟ ಮಾಡಲಿಲ್ಲ ಕೂಡಾ. ನೀವೊಪ್ಪಿದರೆ ನಾನೇ ಮಾಡುವೆ. ನೀವು ಪಕ್ಕದಲ್ಲಿದ್ದು ನೋಡಿಕೊಂಡರೆ ಸಾಕು." ಎಂದ ಅನಿಲ್.

"ಆಗಲಿ ನೀನೇ ಮಾಡು." ಮಾರುತ್ತರ ಸಲೀಸಾಗಿ ಹೊರಬಿತ್ತು.

ಅಧ್ಯಾಯ

೨೬

ಅಘೋರ ಮದನ್, ರತನ್, ಸುಧೀರ್ ಜಾನಕೀರಾಂ ಕಾರಿಡಾರಿನಲ್ಲಿ ಸಾಲುಗಟ್ಟಿ ನಡೆದಿದ್ದಾರೆ. ಅದೇ ತಾನೇ ಆರಂಭಿಸಿದ ದಿನಚರಿ ತನುಮನಗಳಿಗೆ ಚೈತನ್ಯ ಊಡಿಸಿತ್ತು. ರಾತ್ರಿ ಡ್ಯೂಟಿ ಮುಗಿಸಿ ಹೊರಹೋಗಲಿದ್ದ ಡಾಕ್ಟರುಗಳೂ ಅದೇ ದಾರಿಯ ಮೂಲಕ ಹೊರಹೊರಟಿದ್ದರು. ದಾರಿಯುದ್ದಕ್ಕೂ ನಮಸ್ಕಾರ ಪ್ರತಿ ನಮಸ್ಕಾರಗಳು ಸಲ್ಲಿಸಲ್ಪಟ್ಟುವು. ಹಿಂದೆಯೇ ರಾತ್ರಿಯ ಡ್ಯೂಟಿ ಮುಗಿಸಿ ಹೊರಹೋಗಲಿದ್ದ ಶ್ವೇತವಸ್ತ್ರಧಾರಿಣಿಯರೂ ಸಾಲುಗಟ್ಟಿ ಮಂಜಿನ ಬೊಂಬೆಗಳಂತೆ ಸಾಗಿ ಹೋದರು. "ನಮಸ್ಕಾರ ಸಾರ್." ದನಿ ಸಾಲುದ್ದಕ್ಕೂ ಮರ್ಮರಿಸಿತು.

ನಮಸ್ಕಾರ……ನಮಸ್ಕಾರ!

ಮುಂದೆ ಹತ್ತು ಹೆಜ್ಜೆ ಹೋಗುವುದರೊಳಗಾಗಿ ಹಿಂದಿನಿಂದ ಮೊಳಗಿದ ಢನ್! ಢನ್! ನಿನಾದ ಸುಪ್ತವಾಗಿದ್ದ ತನುಮನಗಳನ್ನು ಬಡಿದೆಬ್ಬಿಸಿತು. ಹೋ! ಕೋಡ್ ನಂ. ಒಂಭತ್ತು. ಎಲ್ಲರೂ ಏನಿರಬಹುದೆಂದು ತಿರುಗಿ ನೋಡುವುದರೊಳಗಾಗಿ ಓಡಿ ಬರುತ್ತಿದ್ದ ದಾದಿಯೊಬ್ಬಳು ಅಲ್ಲಿಂದಲೇ ಕೂಗಿಕೊಂಡಳು "help! help!" ಮರುಗಳಿಗೆಯಲ್ಲಿ ಹತ್ತಿರ ಬಂದ ಅವಳು ಒಂದೇ ಉಸುರಿಗೆ ಹೇಳಿದಳು "ರಂಗಯ್ಯನಿಗೆ ಎದೆನೋವು ಬಂದಿದೆ!" ಮಾತು ಹೊರಬಿತ್ತೋ ಇಲ್ಲವೋ ರತನ್ ಬಿರುಗಾಳಿಯಂತೆ ಧಾವಿಸಿದ. ಹಿಂದೆಯೇ ಉಳಿದವರೂ ಧಾವಿಸಿದರು. ಆ ಕಡೆಯಿಂದ ಈ ಕಡೆಯಿಂದ ಸಹಾಯ ಹಸ್ತಗಳು ತಕ್ಷಣ ಒದಗಿದುವು. ಔಷಧಿಯ ಟ್ರೇ ಒಂದೇ ಕುತ್ತಿಗೆ ನೆಗೆದು ಬಂತು. ಕೇಳಿ, ಎಲ್ಲೆಲ್ಲೂ ಪಾದರಕ್ಷೆಗಳ ಪಟ ಪಟ ಸದ್ದು!

ರಾಣೀ ಜಗತ್ತಾರಣಿಯ ತುರ್ತು ಕರೆ ಅಂದರೆ ಸಾಮಾನ್ಯವೇ?

ಕೆಂಪು ದೀಪ ವಾರ್ಡಿನ ನಂಬರನ್ನು ತೋರದಿದ್ದರೂ ಕೋಡ್ ನಂಬರ್ ಒಂಭತ್ತು ಎಲ್ಲರಿಗೂ ತುರ್ತು ಕರೆ ನೀಡಿತ್ತು. ದಾದಿಯ ಹೇಳಿಕೆಯ ಪ್ರಕಾರ ಕೆಲಸದ ಮೇಲಿದ್ದ ರಂಗಯ್ಯ ಅನಿರೀಕ್ಷಿತವಾಗಿ ಕಾರಿಡಾರಿನಲ್ಲಿ ಕುಸಿದು

ಬಿದ್ದಿದ್ದ. ಆಕ್ಷಣ ಅವನಿಗೆ ಅಲ್ಲಿಯೇ ಹಾಸಿಗೆ ಒದಗಿಸಲಾಗಿತ್ತು. ದಾದಿ ಹೇಳಿದೆಡೆಗೆ ಇವರೇನೋ ಧಾವಿಸಿದರೂ ಅನೇಕರಿಗೆ ಕೆಂಪು ದೀಪ ವಾರ್ಡು ನಂಬರನ್ನು ತೋರಿಸದಿದ್ದುದರಿಂದ ಕಕ್ಕಾಬಿಕ್ಕಿಯಾಗಿ ಅತ್ತಿತ್ತ ಅಲೆಯುವಂತಾಯಿತು.

ರಂಗಯ್ಯ ಹಾಸಿಗೆಯ ಮೇಲೆ ಮಲಗಿದ್ದ. ಅವನ ಬಿಳಿಯ ಸಮವಸ್ತ್ರ ಅವನು ಆಸ್ಪತ್ರೆಯ ಜವಾನ ಎಂಬುದನ್ನು ಸೂಚಿಸುತಿತ್ತು. ಆಗಾಗ ಬಲವಾಗಿ ಕೆಮ್ಮುತ್ತಾ ಎರಡೂ ಕೈಗಳಿಂದ ಎದೆಯನ್ನು ಒತ್ತಿ ಹಿಡಿದುಕೊಂಡು ನೋವನ್ನು ತಾಳಲಾರದೆ "ಅಯ್ಯೊ" ಎಂದು ನರಳುತಿದ್ದ. ಡಾಕ್ಟರುಗಳ ಕಡೆ ದೈನ್ಯ ನೋಟವನ್ನು ಬೀರಿ ಕೈ ಮುಗಿದುಕೊಂಡು–"ನನ್ನನ್ನು ಬದುಕಿಸಿ ಡಾಕ್ಟರೇ !" ಅಳು ದನಿಯಿಂದ ಅಂಗಲಾಚಿದ. ಕಣ್ಣುಗಳಲ್ಲಿ ಕೆಂಪು ಮೂಡಿ ಕಂಬನಿಗಳುಕ್ಕಿದುವು. ಭಯ ಉದ್ವೇಗಗಳಿಂದ ಮುಖ ಬೆಳ್ಳಗೆ ಬಿಳಿಚಿಕೊಂಡಿತ್ತು.

ರತನ್ ತಕ್ಷಣ ಇಂಜಕ್ಷನ್ ಚುಚ್ಚಿದ. ಸಹ ಡಾಕ್ಟರುಗಳು ಅವನು ಬಯಸಿದ ಇಂಜಕ್ಷನ್‌ಗಳನ್ನು ತುಂಬಿ ಕ್ಷಣ ಕ್ಷಣಕ್ಕೂ ನೀಡಿದರು. ಒಬ್ಬರ-ಮೆಲ್ಲನೆ ಎದೆಯನ್ನು ನೀವಿದರು. ಇನ್ನೊಬ್ಬರು ಗಾಳಿ ಹಾಕಿದರು. ಸೆಟೆದು ನಿಲ್ಲುತಿದ್ದ ಕೈಗಳನ್ನು ನೀವುತಿದ್ದಂತೆಯೇ ನಾಡಿ ಬಡಿತ ಕ್ಷೀಣಿಸ ತೊಡಗಿತು. ಮೇಲು ನೋಟ ಕದಲದೆ ಉಳಿಯಿತು. ಬಾಯಿಯಲ್ಲಿ ಬುದುಬುದು ನೊರೆಯುಕ್ಕಿತು. ರತನ್ ಅವನ ಬಾಯಿಗೆ ಬಾಯಿಕೊಟ್ಟು ಉಸಿರು ನೀಡಿದ. ಆದರೂ ಪ್ರಾಣಪಕ್ಷಿ ನಿಮಿಷಾರ್ಧದಲ್ಲಿ ಹಾರಿಹೋಯಿತು. ರತನನ ಸರ್ವ ಪ್ರಯತ್ನವನ್ನೂ ಗಮನಿಸುತಿದ್ದ ಅಘೋರ ಬಳಿಯಲ್ಲಿದ್ದ ದಾದಿಯನ್ನು ಕೇಳಿದ "ಈತನಿಗೆ ಹಿಂದೆ ಎಂದಾದರೂ ಹೃದಯಾಘಾತವಾಗಿತ್ತೆ ?"

"ಇಲ್ಲವೇ ಇಲ್ಲ. ಇಂತಹ ಉಕ್ಕಿನಾಳು ! ಚಿಕ್ಕ ವಯಸ್ಸಿನಲ್ಲಿ ಹೀಗಾಗಿಬಿಟ್ಟರೆ ಹೆಂಡತಿ ಮಕ್ಕಳ ಗತಿಯೇನು ? ಪಾಪ, ತುಂಬ ಅನ್ಯಾಯ." ಎಂದ ಅವಳ ಉಬ್ಬಿದೆದೆಯಿಂದ ಸಂತಾಪದ ಬಿಸಿಯುಸಿರು ಹರಿದು ಬಂದಿತು. ಕಣ್ಣುಗಳಂಚಿನಲ್ಲಿ ಹನಿಗಳು ಫಳಫಳನೆ ಮಿನುಗಿದುವು.

ಅಯ್ಯೊ...ಪಾಪ !

ಅಘೋರ ಕ್ಷಣಕಾಲ ಆ ದೀರ್ಘ ದೇಹವನ್ನು ನಿಟ್ಟಿಸಿದ. ಕಣ್ಣುಗಳಲ್ಲಿ ಮೊಳೆದ ಕಂಬನಿಯಾರಿರಲಿಲ್ಲ. ಮುಗಿದ ಕೈಗಳು ಇನ್ನೂ ಹಾಗೆ ಇವೆ.

ಒಂದೇ ನೆಗೆತಕ್ಕೆ ಕುಪ್ಪಳಿಸಿ ಎದೆಗೆತ್ತಿಕೊಂಡು ಮುದ್ದಾಡುತ್ತಾ ಕೇಳಿದ "ಅರವಿಂದಾ ಎಲ್ಲಿ?"

"ಇದುವರೆವಿಗೆ ಇಲ್ಲೇ ಇದ್ದಳು. ಈಗೆಲ್ಲೋ ಒಳಗಡೆ ಹೋಗಿರಬೇಕು."

ಅಘೋರನ ಕಣ್ಣುಗಳು ಸುತ್ತಲೂ ಹರಿದುವು. ಎಲ್ಲೂ ಅವಳು ಕಾಣದಿರಲು ಒಳಗಡೆ ಹೋಗುತ್ತಲೂ ಬಾಗಿಲಲ್ಲಿ ಎದುರಾದ ಅರವಿಂದಾ ಅವನಿಂದ ಮಗುವನ್ನೆತ್ತಿಕೊಂಡು ಕಣ್ಣರಳಿಸಿ–

"ಇದೆಂಥ ವ್ಯವಹಾರ? ಆಸ್ಪತ್ರೆಯಿಂದ ಬಂದವರು ಕೈ ತೊಳೆಯದೇ ಎತ್ತಿಕೊಳ್ಳುವುದೇ?"

"ನನ್ನ ಕೊಠಡಿಯಿಂದ ನೇರವಾಗಿ ಬಂದೆ. ಅಲ್ಲೇ ಕೈ ತೊಳೆದಾಗಿದೆ."

"ಆದರೂ ಮನೆಯಲ್ಲೊಂದು ಬಾರಿ ತೊಳೆದುಕೊಳ್ಳಿರಿ."

ಅಘೋರ ಕೇಕೆ ಹಾಕಿ ನಕ್ಕುಬಿಟ್ಟ.

ಅರವಿಂದಾ ಕಣ್ಣುಗಳನ್ನರಳಿಸಿ–"ಚೆನ್ನಾಯ್ತು. ದಿನಾ ಸಾಯುವವರನ್ನು ನೋಡಿ ನೋಡಿ ನಿಮ್ಮ ಜೀವ ಕಲ್ಲಾಗಿದೆ. ಮಕ್ಕಳು ಸೂಕ್ಷ್ಮ. ಅವರಿಗಿಂತ ಸಾವು ಸೂಕ್ಷ್ಮವಾಗಿದ್ದ ಹೊರತು ಗತ್ಯಂತರವಿಲ್ಲ ನೋಡಿ." ದನಿ ಸ್ವಲ್ಪ ದುಗುಡದಿಂದ ಕೂಡಿತ್ತು. ಮಗುವನ್ನೆತ್ತಿಕೊಂಡು ಕೊಠಡಿಗೆ ಹೋಗಿ ಒದ್ದೆಟವಲ್ಲಿನಿಂದ ಅವನ ಕೈಕಾಲು ಮುಖವನ್ನು ಒರೆಸತೊಡಗುತ್ತಲೂ ಅವನು ಅವಳಿಂದ ತಪ್ಪಿಸಿಕೊಳ್ಳಲು ಕೊಸರಾಡತೊಡಗಿದ. ಆದರೂ ಬಿಡದೆ ಒರಸಿ ಪೌಡರು ಬಳಿದು ಕಣ್ಣಿಗೆ ಕಾಡಿಗೆ ಇಟ್ಟಳು. ಶುಕ್ಲ ಪಕ್ಷದ ಚಂದ್ರನಂತೆ ದಿನೇ ದಿನೇ ವೃದ್ಧಿಯಾಗುತಿದ್ದ ಮಗು ನೋಡಿದವರ ಕಣ್ಣೆಸರಾಗುವಷ್ಟು ಮುದ್ದು ಮುದ್ದಾಗಿತ್ತು. ಅರವಿಂದಾ ಮನಸಾರೆ ಮುದ್ದಿಟ್ಟುಕೊಂಡಳು. ಮಗನ ಮುದ್ದು ಮುದ್ದು ಆಟ ಪಾಠಗಳು ಮನಸ್ಸಿಗೆ ಆರೋಗಣೆಯನ್ನೂಡಿಸಿದರೂ ಬೆಣ್ಣೆಯಂತ ಕಾಲಲ್ಲಿನ ಇಸುಬು ಮನಕ್ಕೆ ಮುಳ್ಳಿನಂತೆ ಚುಚ್ಚುತಿತ್ತು.

ಶೌಚದ ಮನೆಯಿಂದ ಬಂದ ಅಘೋರ ನಸುನಕ್ಕು ಅಚ್ಚರಿಯ ಕಣ್ಣುಗಳಿಂದ ನಿಟ್ಟಿಸಿದ–"ಓ! ಅವನಿಗೆ ಇನ್ನೊಂದು ಸ್ನಾನ ಮಾಡಿಸಿ ಬಿಟ್ಟೆಯೇನು?"

"ಇಲ್ಲ. ಒದ್ದೆ ಬಟ್ಟೆಯಿಂದ ಒರಸಿದೆ. ನೀವು ಕೈತೊಳೆಯದೆ ಮುಟ್ಟುವುದರಿಂದಲೋ ಏನೋ ಅವನಿಗೆ ಇಸುಬು ಬಂದುದು!"

ಅಘೋರನ ಮುಖದಲ್ಲಿ ಮಿನುಗಿದ ನಗುವೇ ಉತ್ತರವಾಯಿತು.

ನಂದಾ ತಿಂಡಿತಿನಿಸುಗಳೊಡನೆ ಬಿಸಿಬಿಸಿ ಹಾಲನ್ನು ತಂದಳು. ಅಘೋರ ಕೈಗೆ ಹಾಲನ್ನು ಮಾತ್ರ ತೆಗೆದುಕೊಂಡು "ಹೊತ್ತಾಗಿ ಬಿಟ್ಟಿದೆ. ನನಗೀಗ ಏನೂ ಬೇಡವಮ್ಮಾ." ಎಂದ. ತಿಂಡಿ ತಟ್ಟೆಯನ್ನು ಕಂಡೊಡನೆಯೇ ತಿಲೋತ್ತಮ ಧಾವಿಸಿ ಬಂದು ಎರಡೂ ಕೈಗಳನ್ನೂ ನೀಡಿ ಕಣ್ಣುಗಳನ್ನರಳಿಸಿ ಒಂದೇ ಉಸುರಿಗೆ ಚೀರಿದ "ನಂಗೇ !"

"ಅಯ್ಯೊ, ಈಗಷ್ಟೇ ತಿಂದಿದ್ದಾನೆ !"

ಅರವಿಂದಾ ಅವನನ್ನು ಹಿಡಿದುಕೊಳ್ಳಹೋದಳು. ಆದರೆ ಅವನು ಜಗ್ಗಬೇಕಲ್ಲ? ಹಾಗೇ ಕೊಸರಾಡತೊಡಗಿದ. ಅವನನ್ನು ತಡೆಯಲಾರದೆ ಅವಳೆಂದಳು "ಅವನನ್ನು ಆಚೆಗೆ ಕರೆದೊಯ್ಯುವುದೇ ಅನುಕೂಲ. ಪದೇ ಪದೇ ತಿಂದು ಅವನ ದೇಹಸ್ಥಿತಿ ಕೆಟ್ಟುಹೋದೀತು."

"ಹೋಗಲಿ ಬಿಡು. ಅವನು ಬಲ ಭೀಮ ಜೀರ್ಣಿಸಿಕೊಳ್ಳುತ್ತಾನೆ."

ಎಷ್ಟು ತಡೆದರೂ ಕೇಳದೆ ತಿಲೋತ್ತಮ ಎರಡೂ ಕೈಗಳಿಂದ ಬಾಚಿ ಕೊಂಡು ಮುಕ್ಕತೊಡಗಿದ. ಅವಳ ಕಷ್ಟ ನೋಡಲಾರದೇ ನಂದಾ ಮಗು ವನ್ನು ಆಚೆಗೆ ಎತ್ತಿಕೊಂಡು ಹೋದಳು. ಅವನು ಸಿಟ್ಟಿನಿಂದ ಚೀರಿದ "ನನಗೆಲ್ಲಾ ಬೇಕು !"

...ಬೆಳೆಯುವ ಮಕ್ಕಳೇ ಹಾಗೆ...!...

ಅಘೋರ ಹಾಲು ಕುಡಿದು ಅಂಗಳದಲ್ಲಿದ್ದ ಕುರ್ಚಿಯ ಮೇಲೆ ಕುಳಿತು ಕೊಂಡ. ಬಳಿಯಲ್ಲಿ ಇನ್ನೊಂದು ಕುರ್ಚಿಯ ಮೇಲೆ ಅರವಿಂದಾ ಕುಳಿತು ಕೊಂಡಳು. ಅವಳನ್ನೇ ನೆಟ್ಟದಿಟ್ಟಿಯಿಂದ ನೋಡುತ್ತಾ ಅಘೋರ ಮನ ಬಿಚ್ಚಿದ–

"ಆಸ್ಪತ್ರೆಯಲ್ಲಿ ಕೆಲಸ ಮಾಡುವಾಗಲೂ ನಿನ್ನದೇ ಯೋಚನೆಯಾಗುತ್ತೆ. ನೀನು ಸ್ವಲ್ಪವೂ ನಿನ್ನ ದೇಹದ ಕಡೆ ಗಮನಕೊಡುತ್ತಿಲ್ಲವಲ್ಲಾ ಎಂಬುದು ನಿಜಕ್ಕೂ ದೊಡ್ಡ ಯೋಚನೆ."

"ನಾನೆಷ್ಟು ನೋಡಿಕೊಳ್ಳಬೇಕೋ ಅಷ್ಟು ನೋಡಿಕೊಳ್ಳುತ್ತಿದ್ದೇನೆ. ಅದಕ್ಕೂ ಮೀರಿ ನನ್ನಿಂದ ಏನಾದೀತು ?"

"ನೀನು ತೆಗೆದುಕೊಳ್ಳುವ ಆಹಾರ ತೀರ ಅಲ್ಪ."

"ಇದಕ್ಕಿಂತ ಹೆಚ್ಚಿಗೆ ನನ್ನಿಂದ ಆಗುವುದಿಲ್ಲ."

"ಹಾಗೆಂದರೆ ಹೇಗೆ ಅರವಿಂದಾ?"

"......"

"ನೀನು ಮನಸ್ಸು ಮಾಡದ ಹೊರತು ಸಾಧ್ಯವಿಲ್ಲ."

"ನಾಲ್ಕು ದಿನ ಹೋದರೆ ತಾನಾಗಿ ಸರಿಹೋಗುತ್ತದೆ."

"ನಿನ್ನ ಆರೋಗ್ಯ ನಿನ್ನ ಕೈಯ್ಯಲ್ಲುಂಟು ಅರವಿಂದಾ."

ಒಳಗಡೆಯಿಂದ ದುಡುದುಡು ಓಡಿ ಬಂದ ತಿಲೋತ್ತಮ ತನ್ನೆಲ್ಲಾ ಹಲ್ಲುಗಳನ್ನೂ ಬಿಟ್ಟು ಸಂತೋಷಾತಿರೇಕದಿಂದ ಕಣ್ಣುಗಳನ್ನರಳಿಸಿ ಬಿತ್ತರಿಸಿದ "ಅಪ್ಪಾ! ಎರಡು ಲಡ್ಡು ತಿಂದೆ!" ಮೈಯೆಲ್ಲಾ ಸಂತಸದ ಬೀಡಾಗಿದ್ದ ಅವನು ಹೇಳುಹೇಳುತ್ತಾ ಜಿಗಿದಾಡಿದ. ಕೈ ಬಾಯಿ ಎಲ್ಲಾ ಲಡ್ಡು ತಿಂದು ಜಿಡ್ಡುಜಿಡ್ಡಾಗಿತ್ತು.

"ಹಾ! ನಿಜವೇ? ಅದೆಲ್ಲಿತ್ತು?"

"ಮೇಜಿನ ಮೇಲಿತ್ತು!" ಕಿಲಕಿಲನೆ ನಗತೊಡಗಿದ ತಿಲೋತ್ತಮ.

"ನಿನಗೆ ಹೇಗೆ ಸಿಕ್ಕಿತು ಮಗೂ?"

"ಮೇಜಿನ ಮೇಲೆ ಹತ್ತಿ ತೆಗೆದುಕೊಂಡೆ!"

ತನ್ನ ಸಾಹಸ ಕಾರ್ಯವನ್ನು ಹೆಮ್ಮೆಯಿಂದ ಬಣ್ಣಿಸಿತು ಮಗು. ಅರಳಿದ ಕಣ್ಣುಗಳಲ್ಲಿ ಸಂತಸವಿತ್ತು. ಮಗುವನ್ನು ನೋಡುತ್ತಾ ಇಬ್ಬರೂ ಅಚ್ಚರಿಯಿಂದ ತುಸು ನಿಂತರು. ಅರವಿಂದಳಿಗೆ ಮನದಲ್ಲಿ ಎಲ್ಲಿಲ್ಲದ ಗಾಬರಿ. ಪುಟ್ಟ ಮಗು ಎರಡು ಲಡ್ಡು ತಿಂದರೆ ಗತಿಯೇನು? ಅಜೀರ್ಣವಾಗಿ ವಾಂತಿ ಬೇಧಿಗಳಾದರೆ? ಅರವಿಂದಾ ಭಯದಿಂದ ಚಡಪಡಿಸಿದಳು.

"ಏನು ಗತಿ ಅಘೂ?"

"ಏನೂ ಆಗೋಲ್ಲ ನೀನು ಸುಮ್ಮನಿರು."

ಮಗುವಿನೊಂದಿಗೆ ಇಬ್ಬರೂ ಒಳಗಡೆ ಹೋದರು. ಮೇಜಿನ ಮೇಲಿದ್ದ ಲಡ್ಡುಗಳು ಮಾಯವಾಗಿದ್ದುದು ನಿಜ. ಆದರೆ ಅವು ಹೇಗೆ ಮಗುವಿಗೆ ಎಟುಕಿದುವು? ಯೋಚನೆ ಮೂಡುವುದರೊಳಗಾಗಿ ತಿಲೋತ್ತಮ ತನ್ನ ಸಾಹಸವನ್ನು ಬಣ್ಣಿಸಿದ.

"ಸ್ಟೂಲಿನ ಮೇಲೆ ಹತ್ತಿ ತೆಗೆದುಕೊಂಡೆ!" ಮಾತು ಕಿಲಕಿಲ ನಗುವಿನೊಂದಿಗೆ ಹೊರ ಹೊಮ್ಮಿತು.

ಮೂಲೆಯಲ್ಲಿದ್ದ ಸ್ಟೂಲಿನ ಮೇಲೆ ಹೂದಾನಿ ಮತ್ತು ವೃದ್ಧ ಮಹಾಶಯನ ಪ್ರತಿಮೆಗಳು ಇದ್ದುವು. ಅದನ್ನು ಕೆಳಗಿರಿಸಿ ಸ್ಟೂಲನ್ನು ತಳ್ಳಿಕೊಂಡು ಬಂದು ತನ್ನ ಸಾಹಸ ಕಾರ್‍ಯವನ್ನೆಸಗಿದ್ದ ತಿಲೋತ್ತಮ !

"ಅಜೀರ್ಣವಾದರೆ ?"

"ಅಷ್ಟೇಕೆ ಗಾಬರಿ ಅರವಿಂದಾ ? ಹೇಗೂ ತಿಂದದ್ದಾಗಿದೆಯಷ್ಟೆ. ಮಕ್ಕಳು ಹೇಗಾದರೂ ಜೀರ್ಣಿಸಿಕೊಳ್ಳುತ್ತಾರೆ. ಅಜೀರ್ಣವಾದರೆ ಮಾತ್ರೆ ನುಂಗಿಸಿದರಾಯಿತು."

ಅರವಿಂದಳಿಗೆ ಸಮಾಧಾನವಾಗಲಿಲ್ಲ. ಅತ್ತೆ ಮಾವನ ಕೊಠಡಿಗೆ ಹೋಗಿ ವಿಷಯವನ್ನು ಒಂದೇ ಉಸುರಿಗೆ ವರದಿ ಮಾಡಿದಳು. ಅವಳ ಮುಖದ ಮೇಲಿನ ಗಾಬರಿ ನೋಡಿ ವಿಮಲ್‌ದಾಸ್ ಸಮಾಧಾನ ಪೂರ್ವಕವಾಗಿ ನುಡಿದ "ಏನೂ ಆಗುವುದಿಲ್ಲ. ರಾತ್ರಿ ಬರೀ ಹಾಲು ಕೊಟ್ಟು ಮಲಗಿಸು."

"ಏನೂ ಭಯವಿಲ್ಲ. ಅದಕ್ಕೇಕೆ ಯೋಚನೆ ?"

ನಗುತ್ತಾ ಅಘೋರ ತಿಲೋತ್ತಮನನ್ನು ಎತ್ತಿಕೊಂಡು ಭುಜದ ಮೇಲೆ ಕೂರಿಸಿಕೊಂಡು ಕುದುರೆಯಾಟ ಆಡಿಸಿದ. ಮಗು 'ಹೈ ! ಹೈ !' ಎನ್ನುತ್ತಾ ನಕ್ಕು ನಲಿಯಿತು. ಅಘೋರ ಅಂಗಳದಲ್ಲೆಲ್ಲಾ ಹೊತ್ತು ನಲಿದ. ತಿಲೋತ್ತಮ ನಕ್ಕು ನಲಿದ ಹೈ ! ಹೈ ! ಹೈ !

ರಾತ್ರಿ ಹತ್ತರ ಸಮಯ. ಕಿಟಕಿಯ ಬಾಗಿಲನ್ನು ವಿಶಾಲವಾಗಿ ತೆರೆದು ಸವಿಗಾಳಿಯನ್ನು ಆಹ್ವಾನಿಸಿ ಹಾಸಿಗೆಯ ಮೇಲೆ ಹಾಯಾಗಿ ಅಡ್ಡಾದ. ಸುತ್ತುವರಿದ ಸೊಳ್ಳೆಯ ಪರದೆ ಧವಳ ಕಾಂತಿಯನ್ನು ವಸರುತಿತ್ತು. ಮಗ್ಗುಲಲ್ಲಿ ಮಲಗಿದ್ದ ಅರವಿಂದಾ ಎದೆಯಮೇಲೆ ಕೈಗಳೆರಡನ್ನೂ ಕಟ್ಟಿಕೊಂಡು ದಿಟ್ಟಿಯನ್ನು ಮಾಡಿನ ನೇರಕ್ಕೆ ಹರಿಸಿದ್ದಾಳೆ. ಹೊದಿಕೆಯನ್ನು ಎಳೆದುಕೊಳ್ಳುತ್ತಾ ಅಘೋರ ಅಂದ "ಮೂರು ತಿಂಗಳ ಹಿಂದೆ ಆಪರೇಶ‍ನ್ ಮಾಡಿಸಿಕೊಂಡವಳಿಗೆ ಈಗ ಯಥಾರೀತಿ ಹೊಟ್ಟೆ ನೋವು ಬರುತ್ತಿದೆ ಅರವಿಂದಾ. ಆಪರೇಶನ್ ಮಾಡಿದಾಗ ಕರುಳಿನ ಮೇಲೆ ಬೆಳೆದಿದ್ದ ದುರ್ಮಾಂಸ ಮತ್ತು ಅಪೆಂಡಿಸೈಟಿಸ್ ತೆಗೆದಿದ್ದೇವೆ. ಒಳಗಿನ ಇನ್ನೆಲ್ಲಾ ಅವಯವಗಳನ್ನೂ ಪರೀಕ್ಷಿಸಿದ್ದಾಗಿದೆ. ಮತ್ಯಾವ ಭಾದಕವೂ ಇರಲಿಲ್ಲ. ಅಂದಮೇಲೆ ಯಥಾರೀತಿ ನೋವು ಬರಲು ಕಾರಣವೇನು ಅರವಿಂದಾ ? ಪುನಃ ನೋವು ಕಾಣಿಸಿಕೊಂಡಾಗಿನಿಂದ

ನಾವು ಅವಳ ದೇಹಸ್ಥಿತಿಯನ್ನು ಪರೀಕ್ಷಿಸುತಿದ್ದೇವೆ. ನೋಡಿದರೆ, ಯಾವ ಲೋಪದೋಷವೂ ಇಲ್ಲ. ಇದಕ್ಕೇನು ಹೇಳುತ್ತಿ? ನಾವು ನೋವಿಲ್ಲ ಎನ್ನುವಂತೆಯೂ ಇಲ್ಲ. ಅವಳು ನೋವು ಅನುಭವಿಸುತ್ತಿರುವುದೂ ಸಹಜ· ವಾಂತಿಯೂ ಆಗುತ್ತಿದೆ. ತುಂಬ ನಿಶ್ಶಕ್ತಿಯೂ ಬಂದಿದೆ. ಏನಿರಬಹುದು ಊಹಿಸು ಅರವಿಂದಾ?"

ಮಾತಿನೆಳೆ ಕೊಕ್ಕೆಯಂತೆ ಅವಳ ಅಂತರಂಗವನ್ನು ಎಳೆದು ಜಗ್ಗಿತು. ಮುಖಕ್ಕೆ ಅಡರಿಬಂದ ತಲೆಗೂದಲನ್ನು ಹಿಂದಕ್ಕೆ ತಳ್ಳುತ್ತಾ ಅವಳೆಂದಳು "ನೋವಿದೆ ವಾಂತಿಯಾಗುತ್ತಿದೆ ನಿಶ್ಶಕ್ತಿಯಾಗಿದೆ ಎನ್ನುತ್ತೀರಿ. ಅಂದಮೇಲೆ ನಿಮ್ಮ ಆಪರೇಶನ್ ಅಪೂರ್ಣವಾಗಿರಲೇ ಬೇಕು. ಇದನ್ನು ಕಾಲ್ಪನಿಕ ಎನ್ನುವುದಕ್ಕಾಗುವುದಿಲ್ಲ ಅಘೂ."

"ಇದು ನಿಜವಾಗಿಯೂ ಮಾನಸಿಕ ಯಾತನೆ ಅರವಿಂದಾ. ಹೇಗೆ ಈ ದೇಹಕ್ಕೆ ಕಣ್ಣು ಕಿವಿ ಮೂಗು ಬಾಯಿಗಳಿವೆಯೋ ಹಾಗೆಯೇ..."ಮಾತು ಮುಂದುವರಿಸಗೊಡದೆ ಅರವಿಂದಾ ನಡುವೆ ಬಾಯಿ ಹಾಕಿದಳು.

"ಏನೇ ಇರಲಿ ಇದನ್ನು ಮಾನಸಿಕ ಅಥವಾ ಕಾಲ್ಪನಿಕ ಎನ್ನುವುದು ಸಾಧ್ಯವೇ ಇಲ್ಲ. ಏನೋ ತೊಂದರೆ ಇದ್ದೇ ಇದೆ. ಅದನ್ನು ನೀವು ಕಂಡುಕೊಳ್ಳಲಿಲ್ಲ ಅಷ್ಟೆ. ಮತ್ತೊಮ್ಮೆ ಪರೀಕ್ಷಿಸಿರಿ."

"ಕಲ್ಪನಾ ಲೋಕದಲ್ಲಿ ವಿಹರಿಸುವ ವ್ಯಕ್ತಿಯು ಸರ್ವೇ ಸಾಮಾನ್ಯವಾಗಿ ಇಂತಹ ಅನುಭವಗಳನ್ನು ಪಡೆಯಬಲ್ಲ ಅರವಿಂದಾ. ಹಿಂದಿನ ನೋವಿನ ಕಹಿ ನೆನಪೇ ಇಂದಿನ ನೋವನ್ನು ಮೂಡಿಸುತ್ತಿದೆ."

"ನೋವಿದೆ ಅಂದಮೇಲೆ ಕಲ್ಪನೆ ಹೇಗೆ ಅಘೂ? ನಿಮ್ಮ ಲೋಪದೋಷಗಳನ್ನು ಮುಚ್ಚಿಡಲು ನೈಜರಾಶಿಗೆ ಕಲ್ಪನೆಯ ಬಣ್ಣ ಬಳಿಯುತ್ತೀರಿ! ಎಲ್ಲಾ ಡಾಕ್ಟರುಗಳು ಮಾಡುವುದೇ ಹಾಗೆ."

...ಎಲ್ಲಾ ಡಾಕ್ಟರುಗಳು ಮಾಡುವುದೂ ಹಾಗೆಯೆ...

"ಅದನ್ನೇ ನಾನೀಗ ಹೇಳ ಬಯಸುವುದು. ಮುಖ್ಯವಾಗಿ ಇವೆಲ್ಲವೂ ಮನೋದೌರ್ಬಲ್ಯದಿಂದ ಉಂಟಾಗುವ ಸಮಸ್ಯೆಗಳು. ನಮಗೆ ಎಂತಹ ನೋವನ್ನಾದರೂ ಅರಿದು ಜೀರ್ಣಿಸಿಕೊಳ್ಳುವೆನೆಂಬ ಕೆಚ್ಚಿಲ್ಲದ ಮೇಲೆ ಸಣ್ಣ ಸಣ್ಣ ನೋವೂ ನಮ್ಮ ಮೇಲೆ ಅಧಿಕಾರ ನಡೆಸುವಷ್ಟು ಬೃಹದಾಕಾರವಾಗಿ

ಬೆಳೆಯ ಬಲ್ಲವು ಅರವಿಂದಾ."

"........."

"ತಿಲೋತ್ತಮ ಲಡ್ಡು ತಿಂದುದಕ್ಕಾಗಿ ನೀನೆಷ್ಟೊಂದು ಗಾಬರಿಯಾದೆ ? ಆ ಭಯ ಮನದಲ್ಲಿ ಉಳಿಯಿತೆಂದರೆ ನಿಜಕ್ಕೂ ಮಗುವಿಗೆ ತೊಂದರೆ ಯಾಗುತ್ತದೆ. ಅಜೀರ್ಣವಾಗಿ ವಾಂತಿ ಬೇಧಿಗಳಾಗಿ ಜ್ವರ ಬಂದು ಹಿಂಸೆ ಯಾಗುವುದರಲ್ಲಿ ಅನುಮಾನವಿಲ್ಲ. ಲಡ್ಡು ತಿಂದುಬಂದ ತಿಲೋತ್ತಮನ ಅರಳಿದ ಮುಖವನ್ನು ಜ್ಞಾಪಕದಲ್ಲಿಟ್ಟುಕೋ ಅರವಿಂದಾ. ಆ ನಗುಮುಖ ಹೂವಿಗಿಂತ ಹಗುರವಾದ ಮನಸ್ಸು, ಆನಂದದಿಂದ ಉಬ್ಬಿದ ಹೃದಯ, ಯಾವು ದಕ್ಕೂ ಜಗ್ಗದ ಕೆಚ್ಚು ಇವುಗಳಿದ್ದರೆ ಎಂಥೆಂಥ ಕಷ್ಟತಮವಾದ ಸನ್ನಿವೇಶ ಗಳಲ್ಲಿಯೂ ನಮ್ಮನ್ನು ಅರಳೆಗಿಂತ ಹಗುರವಾಗಿ ಬಾಳನದಿಯನ್ನು ಕಡೆ ಹಾಯಿಸ ಬಲ್ಲವು. ಮುಖ್ಯವಾಗಿ ಮನಸ್ಥೈರ್ಯ ಬೇಕು ಅರವಿಂದಾ.

"........."

"ಆತ್ಮ ಬಲ ಚಿತ್‌ಶಕ್ತಿಗಳು ಕರಗತವಾದರೆ ದುಃಖ ದುಗುಡಗಳು ಹೇಳ ಹೆಸರಿಲ್ಲದೆ ಓಡಿ ಹೋಗುತ್ತವೆ...ಬಾಳು ಬಂಗಾರವಾಗಬೇಕೆಂದರೆ ತಿಲೋ ತ್ತಮನ ಹೂ ಮನಸ್ಸೊಂದಿದ್ದರೆ ಸಾಕು ಅರವಿಂದಾ. ಬದುಕಿನಲ್ಲಿ ಕಲಿ ಯುವುದು ಬಹಳವಿದೆ. ನಾವಿನ್ನೂ ಕೂಪಕೂರ್ಮ ನ್ಯಾಯದಲ್ಲೇ ಮುಳು ಗಿದ್ದೇವೆ. ಜೀವನದ ಹೆಬ್ಬಾಗಿಲು ತೆರೆದಾಗಲೇ ವಿಶಾಲವಾಗಿ ಕಣ್ತೆರೆಯುವ ಬದಲು ಮುಚ್ಚಿಕೊಳ್ಳುವುದು ನಮ್ಮವರ ವಾಡಿಕೆ. ಕಲಿಯದವರು—ಆಳವಾಗಿ ಯೋಚಿಸಲಾರದವರು ಕುರುಡಾದರೆ ಕೀಳಲ್ಲ. ಆದರೆ ಕಲಿತವರು ಪ್ರಗತಿ ಪಥದಲ್ಲಿ ಕಾಲಿಟ್ಟವರು ಭಾವನೆಗಳನ್ನು ಅದುಮಿಟ್ಟು ತಲೆಯನ್ನು ಜೊಳ್ಳು ಮಾಡಿಕೊಂಡರೆ ಹೇಗೆ ಅರವಿಂದಾ."

ಅವಳು ನಿರುತ್ತರಳಾದುದನ್ನು ನೋಡಿ ಅಘೋರ ಅವಳೆಡೆಗೆ ದಿಟ್ಟಿ ಹೊರಳಿಸಿದ. ಕಣ್ಣು ಮುಚ್ಚಿ ನಿದ್ರಿಸುತಿದ್ದ ಅವಳ ಮುಖದ ಮೇಲಿನ ಬೆವರಿನ ಕಣಗಳು ತುಂತುರು ತುಂತುರಾಗಿ ಮೂಡಿದ್ದುವು. ಕನಸಿನ ಲೋಕದ ಕಹಿ ಗುಳಿಗೆಯನ್ನು ನುಂಗಿದ ಅವಳ ಮುಖದಲ್ಲಿ ನೋವಿನ ಮುದ್ರೆಯೊತ್ತಿತ್ತು.

ಅಧ್ಯಾಯ
೨೭

ಅಘೋರ್ ಸುಧೀರ್ ರತನ್ ಸಾಲಾಗಿ ಹೊರಟಿದ್ದಾರೆ. ಆಸ್ಪತ್ರೆಯ ಆವರಣಕ್ಕೆ ಕಾಲಿಡುವ ತುಸು ಮುಂಚೆ ರತನ್ ಅಘೋರನ ಭುಜದ ಮೇಲೆ ಕೈ ಹಾಕಿ ಸಮಾಧಾನ ಹೇಳುವ ಧಾಟಿಯಲ್ಲಿ ನುಡಿದ "ಈಚೀಚೆಗೆ ನೀನು ಮೊದಲಿನಂತಿಲ್ಲ. ಮನಸ್ಸಿಗೆ ಹಚ್ಚಿಕೊಂಡಂತೆ ತೋರುತ್ತೆ."

"ಇಲ್ಲವಲ್ಲಾ."

"ಆದರೂ ಸ್ವಲ್ಪ ಕುಗ್ಗಿದಂತೆ ತೋರುತ್ತೆ."

"ವಯಸ್ಸಾಯಿತು ಬಿಡು." ಅಘೋರ ಮುಗುಳು ನಕ್ಕ.

"ಸರಿ, ಸರಿ. ನೀನೂ ಮನಸ್ಸಿಗೆ ಹಚ್ಚಿಕೊಂಡು ತಲೆ ಕೆಡಿಸಿಕೊಳ್ಳ ಬೇಡ."

"ಅಂಥಾದ್ದೇನಿಲ್ಲ ಡಾಕ್ಟರ್." ಎಂದ ಅಘೋರ ಸ್ವಲ್ಪ ತಡೆದು ಪುನಃ ಮುಂದುವರಿದ "ಅರವಿಂದಾ ಹಳ್ಳಿಯ ಮುಗ್ಧೆಯಲ್ಲ. ಆದರೂ, ಮನಬಿಚ್ಚಿ ವಿಷಯವನ್ನು ಮುಂದಿಡುವುದಿಲ್ಲ. ಯಾವುದೋ ಸಣ್ಣ ನೋವನ್ನು ಮನಸ್ಸಿಗೆ ಹಚ್ಚಿಕೊಂಡು ಕೊರಗುತಿದ್ದಾಳೆಂಬುದರಲ್ಲಿ ಸಂಶಯವಿಲ್ಲ. ತಿಲೋತ್ತಮನ ಇಸುಬೇ ಕಾರಣವೇ ಅಥವಾ ಇನ್ನೂ ಏನಾದರೂ ಹಚ್ಚಿಕೊಂಡಿದ್ದಾಳೋ ಎಂಬುದನ್ನು ನಾನಿನ್ನೂ ಕಂಡುಕೊಳ್ಳಲಾಗಲಿಲ್ಲ. ಸದಾ ನಕ್ಕು ನಲಿಯು ತಿದ್ದ ಮನೆ ಈಗ ಸಪ್ಪೆ ಸಪ್ಪೆಯಾಗಿದೆ."

"ಇಸುಬು ಪ್ರಾಣಾಂತಕವಾದ ಕಾಹಿಲೆಯಲ್ಲ- ಅದು ಎಂದಾದರೂ ಹೋದೀತು. ಅದಕ್ಕೇಕೆ ಕೊರಗು ?"

"ಅವಳ ಮನಸ್ಸು ಬಲು ಸೂಕ್ಷ್ಮ. ನನಗೆ ಅದೊಂದೇ ಯೋಚನೆ."

"ಸರಿ, ಇದು ಸರಪಳಿ ಇದ್ದಹಾಗೆ. ಮಗುವಿಗಾಗಿ ಅವರು, ಅವರಿಗಾಗಿ ನೀನು, ನಿಮಗಾಗಿ ನಿಮ್ಮ ತಾಯಿ ತಂದೆ ಕೊರಗುವುದಾಯ್ತು. ಅಲ್ಲಿಗೆ ಒಂದು ಸಂಸಾರ ಹಾಳು."

"ನಿಜ ಸುಧೀರ್."

ಸ್ವಲ್ಪ ಹೊತ್ತು ಮೌನವಾವರಿಸಿತು. ಹತ್ತು ಹೆಜ್ಜೆ ಸಾಗಿತು. ರತನ್ ಹಿಂದಿನ ದಿನದ ರೋಗಿಯನ್ನು ನೆನೆದುಕೊಂಡು ಮೌನ ಮುರಿದ "ನಿನ್ನೆಯೆಲ್ಲಾ ವಿಶ್ರಾಂತಿ ದೊರೆಯದಿದ್ದುದರಿಂದ ಇಂದು ಎಲ್ಲಿಲ್ಲದ ಬಳಲಿಕೆ. ನಿನ್ನೆ ಬೆಳಗ್ಗೆ ಆಸ್ಪತ್ರೆಗೆ ಬಂದವನು ಇಂದು ಮುಂಜಾನೆ ನಾಲ್ಕು ಗಂಟೆಗೆ ಮನೆಗೆ ಹೋದೆ. ಹಾರ್ಟ್ ಕೇಸುಗಳು ಬಂದರೆ ತುಂಬ ಕಷ್ಟ. ಸಾಕಾಗಿ ಬಿಡುತ್ತೆ." ಎಂದ ರತನ್ ಎರಡು ಮೂರು ಬಾರಿ ಸೀನಿ ಕರವಸ್ತ್ರದಿಂದ ಮೂಗು ಶೀಡಿಕೊಂಡು ಪುನಃ ಮುಂದುವರಿದ "ನಿನ್ನೆ ಏನಿಲ್ಲವೆಂದರೂ ಅವನಿಗೆ ಕೊನೆಯ ಪಕ್ಷ ಇನ್ನೂರು ಬಾರಿ ಹೃದಯದ ಚಲನೆ ನಿಂತು ನಿಂತು ಆಡಿದೆ. ವಯಸ್ಸು ಚಿಕ್ಕದು. ಒಳ್ಳೆ ಆರೋಗ್ಯವಂತ ದೇಹ: ಬಡ ಕುಟುಂಬ. ಮಕ್ಕಳು ಮರಿ ಸಂಸಾರವಂದಿಗ. ನೋಡಿದರೆ 'ಅಯ್ಯೋ' ಎನ್ನಿಸುತ್ತೆ. ಮಧ್ಯರಾತ್ರಿಯ ನಂತರ ಅವನು ಸುಧಾರಿಸಿಕೊಂಡ."

"ನೀನು ಬಲಗೈಯಲ್ಲಿ ನೀಡಿದುದನ್ನು ಭಗವಂತ ಎಡಗೈಯಿಂದ ದಕ್ಕಿಸಿಕೊಳ್ಳುನೆತ್ತಾ. ಆದರೂ ನಮ್ಮ ಕರ್ತವ್ಯಕ್ಕೆ ನಾವು ಕಟ್ಟುಬೀಳಬೇಕು ಅಷ್ಟೆ."

"ನಿಜ...ಅವನು ದುಡಿದರೇನೇ ಜೀವನ. ಅಂದಮೇಲೆ ಅವರ ಜೀವನ ಇನ್ನು ಕಷ್ಟ."

"ಹೌದು, ದುಡಿಯುವವನೊಬ್ಬ ಉಣ್ಣುವವರು ಹತ್ತು ಮಂದಿ."

"ಹಾಗೆನ್ನುತ್ತಲೇ ಶತಶತಮಾನಗಳು ಉರುಳಿದುವು. ಈ ಕಾಲದಲ್ಲಿ ವಿದ್ಯೆಗೇನು ಕಡಿಮೆ? ಹೆಂಗಸರೂ ಸಾಕಷ್ಟು ಕಲಿತಿರುತ್ತಾರೆ. ಅವರಿಗೂ ನಾವು ಅವಕಾಶ ಕೊಟ್ಟರೆ ಸಂಸಾರಕ್ಕೆ ಚೈತನ್ಯ ತುಂಬಿಯಾರು. ಅವರನ್ನು ಗೃಹ ಬಂದಿಯರ್ನಾಗಿಟ್ಟು ತಾನೊಬ್ಬನೇ ದುಡಿಯುವವ ಎಂದು ಹೇಳಿಕೊಂಡರೆ ಹೇಗೆ? ನಮ್ಮ ದೇಶ ಮುಂದುವರಿಯಬೇಕಾದರೆ ಮುಖ್ಯವಾಗಿ ಹೆಂಗಳೆಯರಿಗೆ ಆರ್ಥಿಕ ಸ್ವಾತಂತ್ರ್ಯ-ವೈಯಕ್ತಿಕ ಸ್ವಾತಂತ್ರ್ಯ ಬರಲೇಬೇಕು. ಈಗಿನ ವಿದ್ಯಾವಂತ ಮಹಿಳೆಯರಿಗಾದರೂ ಇದು ಲಭಿಸಿದೆಯೇ? ಏನಿದ್ದರೂ ಅಲ್ಪ-ಸ್ವಲ್ಪ. ಅವಳಿಗೊಂದಿಷ್ಟು ಒಡವೆ ವಸ್ತು ಸೀರೆಬಟ್ಟೆ ತೋರಿ ಬಿಟ್ಟರಾಯಿತು. ನಾವು ನಾಯಿಗೆ ರೊಟ್ಟಿ ತೋರಿ ದಾಸಾನುದಾಸನಾಗಿ ಮಾಡಿಕೊಳ್ಳುವುದಿಲ್ಲವೇ ಹಾಗೆ!" ಅಘೋರ ತುಟಿ ಕಚ್ಚಿದ.

ಅಚ್ಚುಕಟ್ಟಾಗಿ ಕತ್ತರಿಸಿದ ಕುಡಿಮೀಸೆ, ಎಣ್ಣೆ ಬಳಿದು ನುಣ್ಣಗೆ ಬಾಚಿದ್ದ ಕೂದಲು, ಶುಭ್ರವಾದ ಬಿಳಿಯುಡುಪು, ದಟ್ಟಪುಷ್ಟವಾದ ಮೈ, ಎಳಸು ದೇಹ ಒಂದೊಂದೂ ಕಣ್ಣು ಕುಕ್ಕುವಂತಿತ್ತು. ಉಟ್ಟ ಬಿಳಿಯುಡುಪೇ ಮಾಸದಿರುವಾಗ ಜೀವವಿಲ್ಲವಾಯಿತೇ ಎನ್ನಿಸದಿರಲಿಲ್ಲ. "ನನ್ನ ಸೇವೆ ದುಡಿಯುವ ಕೈಗಳಿಗೆ!" ಧ್ಯೇಯದ ರಮಣಿ ಬಿಂಕದ ರಾಣಿಯಂತೆ ಅಣಕಿಸಿದಳು. ಭಾರವಾದ ತಲೆ ತನಗೆ ತಾನೇ ತೂಗಿತು. ಎದೆಯ ಹಕ್ಕಿ ಕೂಗಿತು "ನೀನು ಸೋತೆ !" ಅಘೋರ ಯೋಚನಾ ಪರವಶನಾದ.

ಆ ದೀರ್ಘ ದೇಹದ ಮೇಲೆ ಬಿಳಿಯ ಬಟ್ಟೆಯನ್ನೆಳೆಯುವಾಗ ಅಘೋರನ ಮನಸ್ಸು ಕ್ಷಣಕಾಲ ಮಿಡುಕಿತು. ಎಲ್ಲರೂ ಅಲ್ಲಿಂದ ಭಾರವಾದ ಹೆಜ್ಜೆಯನ್ನೆಳೆದುಕೊಂಡು ಹೊರಟರು. ಅಘೋರ ಹಾಗೇ ಯೋಚಿಸಿದ....ಆ ದಿನ ಶತಾಯುವಿಗೆ ಇನ್ನೂ ಕಲಿಕೆಯ ಎಳಸು ಡಾಕ್ಟರು ಆಪರೇಷನ್ ಮಾಡಿದರೂ ಬದುಕಿದ. ಅವನು ಆಸ್ಪತ್ರೆಯನ್ನು ಬಿಡುವಂದು ಸಂತೋಷಾತಿರೇಕದಿಂದ ಎರಡು ಕೈಗಳನ್ನೂ ಜೋಡಿಸಿಕೊಂಡು–"ನಿಮ್ಮಿಂದ ಬದುಕಿತು. ಈ ಬಡ ಜೀವ ಸ್ವಾಮಿ." ಆ ವೃದ್ಧನ ವಿನೀತ ಸ್ವಭಾವದೊಂದಿಗೆ ತುಂಬಿ ತುಳುಕುತಿದ್ದ ಆಸೆ ಮನಃಪಟಲದ ಮೇಲೆ ಸುಳಿಸುಳಿದಳಿಯಿತು. ಸಂತಸದುಬ್ಬರದಲ್ಲಿ ಹಿಗ್ಗಿ ಆಸ್ಪತ್ರೆಯನ್ನು ಬಿಟ್ಟ ಅವನನ್ನು ನೋಡು ನೋಡುತಿದ್ದಂತೆ ಎದೆಯ ಹಕ್ಕಿ ಕೂಗಿ ಹೇಳಿತು "ವೃದ್ಧ ಮಹಾಶಯಾ ! ನೀನು ಬದುಕಿದುದು ಭಗವಂತನಿಂದ." ಆದರೂ ಕೆಟ್ಟ ಮನಸ್ಸು ಅಣಕಿಸಿ ನುಡಿದಿತ್ತು "ಇನ್ನೂ ಎಷ್ಟುಕಾಲ ಬದುಕಬೇಕೆಂಬ ಆಸೆ ಈತನಿಗಿದ್ದಿರಬಹುದು ? ಶುದ್ಧ ಜೀವಗಳ್ಳ! ಮೂವತ್ತೆರಡು ಹಲ್ಲುಗಳನ್ನೂ ಬಿಡುತಿದ್ದಾನೆ !...."

ಅಘೋರ ಅಂದಿನ ದೃಶ್ಯವನ್ನು ಪುನಃಪುನಃ ನೆನಪಿಗೆ ತಂದುಕೊಂಡ. ಭಗವಂತ ಬೇಡದ ವ್ಯಕ್ತಿಗಳನ್ನು ಆರಿಸುವುದೇ ಇಲ್ಲ. ಬೇಕಾದ ವ್ಯಕ್ತಿಗಳ ಕತ್ತನ್ನು ಸದ್ದಿಲ್ಲದೆ ಹಿಸುಕಿಬಿಡುತ್ತಾನೆ. ಅಂದು ಅವನನ್ನು ಅಸಡ್ಡೆಯಿಂದ ಕಂಡಿದ್ದರೂ ವ್ಯಕ್ತಿ ಸರಾಗವಾಗಿ ಗಡುವನ್ನು ದಾಟಿತು. ಆದರೆ ಇಂದು ? ಬದುಕಲೇಬೇಕಾದ ವ್ಯಕ್ತಿಗೆ ಕೈತುಂಬ ಸಹಾಯ ಮಾಡಿದರೂ ಬದುಕಿಸಲಾಗಲಿಲ್ಲವಲ್ಲಾ ? ಎಂದೆನಿಸಿದಾಗ ಮುಖದ ಮೇಲೆ ವ್ಯಸನದ ಕಪ್ಪು ಛಾಯೆ

ಸುಳಿದಳಿಯಿತು.

ಎಲ್ಲರೂ ಸಾಲಾಗಿ ಹೆಜ್ಜೆ ಹಾಕುತಿದ್ದಂತೆ ಜಾನಕೀರಾಂ ಅಘೋರನತ್ತ ಕಣ್ಣು ಹೊರಳಿಸಿದ—

"ಹೇಗಿದ್ದಾರೆ ಶ್ರೀಮತಿ ಅಘೋರ್ ?"

"ಹಾಗೇ ಇದ್ದಾಳೆ. ಎಷ್ಟು ಟಾನಿಕ್ ಔಷಧಗಳನ್ನು ಕೊಟ್ಟರೂ ಮೈ ತುಂಬಿಕೊಳ್ಳಲಿಲ್ಲ. ಏನೆಂಬುದೇ ಅರ್ಥವಾಗುತ್ತಿಲ್ಲ."

"ಸಣ್ಣಗಿರುವುದರ ಹೊರತು ಬೇರೆ ಏನೂ ತೊಂದರೆ ಇಲ್ಲವಲ್ಲಾ ?" ಎಂದ ಮದನ್.

"ಅಂತಾದ್ದೇನೂ ಇಲ್ಲ. ಆದರೂ ಸಣ್ಣಗಿದ್ದಾಳೆ. ನಿಶ್ಶಕ್ತಿಯಿದೆ."

"ಚೆನ್ನಾಗಿ ತಿನ್ನಿಸು."

"ಅದೂ ಅವಳ ಹಣೆಯಲ್ಲಿ ಬರೆಯಲಿಲ್ಲ ರತನ್."

"ಅವರಿಗೇ ಬಿಟ್ಟರೆ ಹೇಗಾಗುತ್ತೆ ? ಅದನ್ನೆಲ್ಲಾ ನೀನು ನೋಡಿಕೊಳ್ಳ ಬೇಕು."

"ಸಣ್ಣ ಪುಟ್ಟ ಚಿಂತೆಗಳನ್ನು ಬೃಹದಾಕಾರವಾಗಿ ಬೆಳೆಸಿಕೊಳ್ಳುವ ಸ್ವಭಾವ ಅವಳದು. ಎಷ್ಟೆಂದರೂ ಒಳಗೊಳಗೇ ಕೊರಗುತ್ತಾಳೆ. ಏನೆಂಬು ದನ್ನು ಅವಳು ಮನ ಬಿಚ್ಚಿ ಹೇಳುವುದಿಲ್ಲ. ನನಗೀಗ ಅವಳದೇ ಯೋಚನೆ ಯಾಗಿ ಬಿಟ್ಟಿದೆ." ದುಗುಡದಿಂದ ಕೂಡಿದ ದನಿ ಎದೆಯಾಳದಿಂದ ಹೊರ ಬಿತ್ತು.

"ಯಾರು ನೋಡುತಿದ್ದಾರೆ ?"

"ಡಾ|| ಘನಶ್ಯಾಮ್."

"ಅವರೇನೆನ್ನುತ್ತಾರೆ ?"

"ಆದಿಯಿಂದ ಅಂತ್ಯದವರೆಗೆ ಪರೀಕ್ಷೆ ಮಾಡಿಸಿದ್ದಾಯ್ತು. ಎಲ್ಲವೂ ಸಮರ್ಪಕವಾಗಿದೆ. ಮತ್ತೇಕೆ ಸುಧಾರಿಸಿಕೊಳ್ಳುವುದಿಲ್ಲ ಎಂಬುದು ಅವರಿಗೂ ನುಂಗಲಾರದ ತುತ್ತಾಗಿದೆ."

"ಒಬ್ಬೊಬ್ಬರು ಮಕ್ಕಳಾದ ಮೇಲೆ ಸಣ್ಣಗಾಗುವುದುಂಟು."

"ಜರ್ಾ, ಅದಷ್ಟಾದರೆ ಏನೂ ತೊಂದರೆಯಿಲ್ಲ. ಆದರೆ ಅವಳು ಎಲ್ಲದ ರಲ್ಲೂ ನಿರಾಸಕ್ತಿ ತಳೆಯುತಿದ್ದಾಳೆ."

"ಅದೇಕೆ ನೀನೂ ಅಷ್ಟು ಹಚ್ಚಿಕೊಳ್ಳುತ್ತೀ? ಸ್ವಲ್ಪ ದಿನ ಹವೆ ಬದಲಾವಣೆ ಮಾಡಿದರೆ ಒಳ್ಳೆಯದು. ಎಲ್ಲಾದರೂ ಹೊರಗಡೆ ಕಳುಹಿಸುವುದು ಒಳ್ಳೆಯದು."

"ಕೆಲವು ದಿನ ಊಟಿಯಲ್ಲಿ ಕಳೆದರೆ ಆದೀತು. ಅಥವಾ ನಂದಿಯಲ್ಲಿ?"

"ನಾನೀಗ ಅವಳನ್ನು ಹೆಚ್ಚಾಗಿ ಮದರಾಸಿಗೆ ಕಳುಹಿಸುತ್ತೇನೆ. ಅಲ್ಲಿ ಮೂರು ತಿಂಗಳಿದ್ದು ಈಗಷ್ಟೆ ಇಲ್ಲಿಗೆ ಬಂದಿದ್ದಾಳೆ."

"ದೀರ್ಘಕಾಲ ಘಟಪ್ರಭಾದಲ್ಲಿದ್ದರೆ ಅನುಕೂಲ ಅಘೋರ್!"

"ಮನೆಯಲ್ಲಿ ನರಳುವ ತಂದೆ. ಅವಳನ್ನು ಅಲ್ಲಿ ಇಟ್ಟುಕೊಂಡು ನೋಡುವವರಾದರೂ ಯಾರಿದ್ದಾರೆ? ಇಷ್ಟಕ್ಕೂ ಅವಳಿಗೆ ಅನಾರೋಗ್ಯವೇನೂ ಇಲ್ಲವಲ್ಲಾ?"

"ಅವರನ್ನು ಲೆಕ್ಚರರ್ ಆಗಿ ಕಳುಹಿಸಿ ಬಿಡು. ಮನಸ್ಸು ಬೇರೆ ಕಡೆ ಆಕರ್ಷಿಸಲ್ಪಡಲಿ."

"ಅದೂ ಹೇಳುತ್ತಿದ್ದೇನೆ. ಅವಳೊಪ್ಪುವುದಿಲ್ಲ. ಅಮ್ಮನಿಗೆ ಮಾವಾ ಮತ್ತು ಮಗನನ್ನು ನೋಡಿಕೊಂಡು ಮನೆಯನ್ನೂ ನೋಡಿಕೊಳ್ಳುವುದು ಕಷ್ಟ ಎನ್ನುತ್ತಾಳೆ. ತಿಲೋತ್ತಮನಿಗೆ ಕಾಲಿನ ಮೇಲೆ ಇಸುಬು ಬಂದಿದೆ. ಅವನಿಗೆ ಏನೇನು ಮಾಡಿದರೂ ಅದು ಗುಣವಾಗುತ್ತಿಲ್ಲ. ಅದನ್ನೇನಾದರೂ ಮನಸ್ಸಿಗೆ ಹಚ್ಚಿಕೊಂಡಿದ್ದಾಳೋ ಅದೂ ನನಗೆ ಅರ್ಥವಾಗುತ್ತಿಲ್ಲ."

"ಯಾವುದಾದರೂ ಅಲರ್ಜಿ ಇರಬಹುದೇ?"

"ಅದನ್ನೂ ಒಂದೊಂದಾಗಿ ಪರೀಕ್ಷಿಸಿದ್ದೇನೆ."

"ಸ್ಕಿನ್ ಸ್ಪೆಷಲಿಸ್ಟ್‌ಗೆ ತೋರಿಸಿದೆಯಾ?"

"ಅದೂ ಆಯಿತು. ಅವರು ಕೊಟ್ಟ ಔಷಧಿಗಳನ್ನೇ ಉಪಯೋಗಿಸುತ್ತಿದ್ದೇನೆ."

"ಸ್ವಲ್ಪವೂ ಗುಣವಿಲ್ಲವೇ?"

"ಇಲ್ಲ."

"ಇಸುಬ ಬೇಗನೆ ಗುಣವಾಗುವುದೂ ಕಷ್ಟ."

ತಾನು ಹೋಗಿ ನೋಡಬೇಕಾಗಿದ್ದ ವಾರ್ಡು ಸಿಗುತ್ತಲೂ ಒಳಹೋಗಿ ನೋಡಿಕೊಂಡು ಪುನಃ ದಳವನ್ನು ಕೂಡಿಕೊಂಡ ಅಘೋರ. ಅನಂತರ

ಮೈನರ್ ಆಪರೇಶನ್ ಥಿಯೇಟರಿನಲ್ಲಿ ಕೆಲಸ. ಆಪರೇಶನ್ ಆದವರಿಗೆ ಡ್ರೆಸಿಂಗ್ ಇತ್ತು. ಮತ್ತೆ ಸಣ್ಣಪುಟ್ಟ ಗಾಯಗಳಾದವರ ಚಿಕಿತ್ಸೆಯೂ ಇತ್ತು. ಎಲ್ಲವನ್ನೂ ಮುಗಿಸಿಕೊಂಡು ತನ್ನ ಕೊಠಡಿಗೆ ಬರುವಷ್ಟರಲ್ಲಿ ಎರಡು ಗಂಟೆಯಾಗಿತ್ತು. ಕ್ಯಾರಿಯರ್‌ನಲ್ಲಿದ್ದ ಊಟ ಬಿಚ್ಚಿದ. ಕ್ಯಾಬೇಜು, ಸೊಪ್ಪು, ಈರುಳ್ಳಿ ಚಟ್ನಿ. ಎರಡು ಜಾಮೂನು. ಎಲ್ಲವೂ ತನಗೆ ಪ್ರೀತಿಯಾದವುಗಳೇ. ಅಘೋರ ಊಟವನ್ನು ಸಾಂಗವಾಗಿ ಮುಗಿಸಿ ಸ್ವಲ್ಪ ವಿಶ್ರಾಂತಿಗಾಗಿ ಹಾಸಿಗೆಯ ಮೇಲೆ ಅಡ್ಡಾದ. ಚಿತ್ತಭಿತ್ತಿಯಲ್ಲಿ ಅರವಿಂದಳ ಅಶಕ್ತ ಶರೀರ ಮೂಡಿನಿಂತಿತು. ಏನು ಮಾಡಿದರೆ ಸರಿಹೋಗುತ್ತದೆಂಬುದನ್ನು ಕುರಿತು ಯೋಚಿಸತೊಡಗಿದ. ಹೊತ್ತು ಉರುಳಿದರೂ ಪರಿಹಾರ ದೊರೆಯಲಿಲ್ಲ. ಕಣ್ಣುಗಳು ಗಡಿಯಾರದತ್ತ ಹೊರಳಿದುವು. ಕ್ಷಣ ಕ್ಷಣಗಳು ನಿಮಿರಿ ನಡೆಯುತ್ತಿದ್ದುವು. ನೋಟವನ್ನು ಕಿಟಕಿಯಲ್ಲಿ ನೆಟ್ಟು ಎದೆಯ ಮೇಲೆ ಕೈಕಟ್ಟಿ ಯೋಚನಾಲಹರಿಯಲ್ಲಿ ಮೈಮರೆತು ಮಲಗಿದ ಅಘೋರ.

ನಿಮಿಷಗಳೈದು ಉರುಳಿದುವು. ಒಮ್ಮಿಂದೊಮ್ಮೆಲೇ ಟೆಲಿಫೋನಿನ ಕರೆಗಂಟೆ ಬಾರಿಸಿತು. ಅಘೋರ ಧಡಕ್ಕನೆದ್ದು ಮಾತಾಡಿದ. ಆ ಕಡೆಯಿಂದ ವದನನ ದನಿ ಕೇಳಿ ಬಂತು "ಅಘೋರ್ ಒಂದು ಕುತೂಹಲಕರವಾದ ಆಪರೇಷನ್ ಇದೆ."

"ಏನದು ?"

"ಹೆರಿಗೆ ಆಸ್ಪತ್ರೆಗೆ ಸೇರಿದ ಮಹಿಳೆಯೊಬ್ಬಳನ್ನು ಇಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ. ಅವಳನ್ನು ಒಂದು ತಿಂಗಳ ಹಿಂದೆಯೇ ಹೆರಿಗೆ ಸಂಬಂಧವಾಗಿ ಸೇರಿಸಿಕೊಂಡು ಚಿಕಿತ್ಸೆ ನಡೆಸಿದ್ದಾರೆ. ಗೈನಕಾಲಜಿಸ್ಟ್ ನೋಡಿ ಗರ್ಭಿಣಿ ಎಂದಿದ್ದಾರೆ. ಎಂಟೊಂಭತ್ತು ತಿಂಗಳ ಗರ್ಭಿಣಿಗೆ ಎಷ್ಟು ಗರ್ಭ ಬೆಳೆಯಬೇಕೋ ಅಷ್ಟೂ ಬೆಳೆದಿದೆ. ನಿನ್ನೆಯಿಂದ ಅವಳಿಗೆ ನೋವು ಕಾಣಿಸಿಕೊಂಡಿದೆ. ಅನಂತರ ಪರೀಕ್ಷಿಸಿ ಅವರು ಗರ್ಭಿಣಿಯಲ್ಲವೆಂಬ ತೀರ್ಮಾನಕ್ಕೆ ಬಂದಿದ್ದಾರೆ. ಒವೇರಿಯನ್ ಸಿಸ್ಟ್ ಇದ್ದು ಟ್ವಿಸ್ಟ್ (Twisted overian cys t ಆಗಿದೆ ಆಪರೇಶನ್ ಮಾಡಿರಿ ಎಂದಿದ್ದಾರೆ ನಮಗೆ. ಹಾಗಿದ್ದರೆ ಇದೆಂತ ವಿಷಯ ? ಇದಕ್ಕೇನೆನ್ನುತ್ತೀ ?"

"ಆಶ್ಚರ್ಯ. ಅವರು ಎಕ್ಸ್‌ರೇ ನೋಡಿದ್ದಾರೆಯೆ ?"

"ನೋಡಿದ್ದಾರೆ. ಅದರಲ್ಲಿ ಮಗು ಕಾಣಿಸುತ್ತಿಲ್ಲ."

"ಇಲ್ಲಿ ಇನ್ನೊಂದು ಬಾರಿ ನೋಡಿಬಿಡಿ."

"ನೋಡುತ್ತೇನೆ."

"ಇನ್ನೊಮ್ಮೆ ಗೈನಕಾಲಜಿಸ್ಟ್ ನೋಡುವುದೂ ಒಳ್ಳೆಯದು."

"ಜಾನಕೀರಾಮನಿಗೆ ಆಗಲೇ ಕರೆ ಹೋಗಿದೆ."

"ನಿನಗೇನೆನಿಸುತ್ತೆ ಮದನ್ ?"

"ನನಗೂ ತುಂಬ ಅನುಮಾನವಾಗುತ್ತಿದೆ. ಅವರೆಂದಂತೆ ಒವೇರಿಯನ್ ಸಿಸ್ಟ್ ಟ್ವಿಸ್ಟ್ ಆಗಿದ್ದಿರಲಿಕ್ಕೂ ಸಾಕು. ಅಥವಾ ಒಂದು ಪಕ್ಷ ಇಸ್ಟೆಸ್ಟೈನ್ ಅಬ್ಸ್ಟ್ರಕ್ಷನ್ (Intestine obstruction) ಇದ್ದರೂ ಇರಬಹುದು. ಹೇಗೆಂತಲೂ ಹೇಳುವುದಕ್ಕಾಗುತ್ತಿಲ್ಲ. ಒಂದು ವೇಳೆ ಎಂಟೊಂಭತ್ತು ತಿಂಗಳ ಮಗುವಿದ್ದರೆ ಗೊತ್ತಾಗುವುದಿಲ್ಲವೇ ? ಅದರ ಹೃದಯದ ಮಿಡಿತವೂ ಗೊತ್ತಾಗುತ್ತಿಲ್ಲವಲ್ಲಾ !"

"ಒಂದು ವೇಳೆ ಅದು ಸತ್ತಿದ್ದರೆ ?"

"ಅದೂ ಗೊತ್ತಾಗುವಂತಿಲ್ಲ. ಮುಖ್ಯವಾಗಿ ಎಕ್ಸ್‌ರೇಯಲ್ಲಿ ಏನೂ ತೋರುತ್ತಿಲ್ಲ."

"ಇನ್ನೊಮ್ಮೆ ಎಕ್ಸ್‌ರೇ ನೋಡದ ಹೊರತು ಯಾವ ನಿರ್ಧಾರವನ್ನೂ ಕೈಗೊಳ್ಳುವುದು ಬೇಡ."

"ಎಕ್ಸ್‌ರೇ ಫಲಿತಾಂಶ ತಿಳಿದನಂತರ ನಿನಗೆ ಇನ್ನೊಮ್ಮೆ ರಿಂಗ್ ಮಾಡುವೆ."

"ಅಚ್ಛಾ !"

...ಇದೊಂದು ವಿಚಿತ್ರ ?....

ಅಘೋರ ಪುನಃ ಹಾಸಿಗೆಯ ಮೇಲೆ ಅಡ್ಡಾದ. ಚಿತ್ತ ಭಿತ್ತಿಯಲ್ಲಿ ಅರವಿಂದಾ ಮೂಡಿ ನಿಂತಳು. ಏನು ಮಾಡಿದರೆ ಸರಿಹೋದೀತು ಎಂಬ ಯೋಚನೆಯೂ ಒಂದಿಗೇನೇ ಮೂಡಿ ಬಂದಿತು. ಎಷ್ಟು ಯೋಚಿಸಿದರೂ ಬಗೆಹರಿಯದು. ಏಕೆ ಹೀಗೆ ? ಎಂದು ತನಗೆ ತಾನೇ ಪ್ರಶ್ನೆ ಹಾಕಿಕೊಂಡ. ಹೊತ್ತು ಮಿಂಚಿನಂತೆ ಉರುಳಿತು.

....ಅರೂ....ಅರವಿಂದಾ....

ಪುನಃ ಟೆಲಿಫೋನಿನ ಟಂಟಣಿನಾದ. ಎದ್ದು ಹೋಗಿ ರಿಸೀವರನ್ನು ಎತ್ತಿಕೊಂಡು "ಹೆಲೋ" ಎಂದ.

"ಅಘೋರ್, ಎಕ್ಸ್‌ರೇ ನೋಡಿದ್ದಾಯಿತು. ಅದರಲ್ಲಿ ಏನೂ ತೋರುತ್ತಿಲ್ಲ. ನೀನೂ ನೋಡುವುದು ಒಳ್ಳೆಯದು." ಮದನನ ದನಿ ಹೊರ ಬಿತ್ತು.

"ಈಗ ಅವಳಿಗೆ ನೋವಿದೆಯೆ ?"

"ಹೌದು. ಸಾಧಾರಣ ನೋವು ಇದೆ."

"ಅವಳೇನೆನ್ನುತ್ತಾಳೆ ?"

"ಅವಳು ತಾನು ಗರ್ಭಿಣಿಯೆಂದೇ ತಿಳಿದಿದ್ದಾಳೆ. ಎಂಟನೆಯ ತಿಂಗಳು ನಡೆಯುತ್ತಿದೆ ಎನ್ನುತ್ತಾಳೆ. ಅವಳಿಗೆ ಪೂರ್ಣ ನಂಬಿಕೆಯುಂಟು."

"ಹಾಗಿದ್ದರೆ ಅವಳು ಇನ್ನು ಕೆಲವು ದಿನ ತಾಳಿಕೊಳ್ಳಲಾರಳೇ ?"

"ಛೆ ! ನಿನ್ನೆಯಿಂದ ನೋವುಂಡು ತೀರ ಬಳಲಿದ್ದಾಳೆ. ನಾವೀಗ ಏನಾದರೂ ಮಾಡಲೇ ಬೇಕು."

"ಹಾಗಿದ್ದರೆ ಬರುವೆ."

"ಈಗಲೇ ಬಾ."

ಅಘೋರ ಶೌಚದ ಮನೆಗೆ ಹೋಗಿ ಮುಖಮಜ್ಜನ ಮಾಡಿಕೊಂಡು ಕೊಠಡಿಯಿಂದ ಹೊರಬಿದ್ದ. ಮೂರುಗಾಲು ಹಾಕಿ ಕಾರಿಡಾರನ್ನು ದಾಟಿ ಆಪರೇಶನ್ ಥಿಯೇಟರನ್ನು ಸೇರಿದ. ಮೇಜಿನ ಮೇಲೆ ಅವಳು ಮಲಗಿದ್ದಳು. ಆಪರೇಶನ್ನಿನ ತಯಾರಿ ನಡೆದಿತ್ತು. ಉಬ್ಬಿದ ಹೊಟ್ಟೆ ಮೇಲೆದ್ದು ತೋರು ತಿತ್ತು. ಬಳಲಿ ನಿಸ್ತೇಜವಾದ ಮುಖ ಬಿಳಿಚಿಕೊಂಡಿದೆ. ಜೆಲುವಾಂಬ ಸೌಮಾ ಜಾನಕೀರಾಂ ಆಗಲೇ ಅಲ್ಲಿದ್ದಾರೆ.

ಎಲ್ಲರ ಮುಖಗಳೂ ಮೆಲುನಗೆಯಿಂದ ಸ್ವಾಗತಿಸಿದುವು. ಅಘೋರ ಚಾರ್ಟ್ ಕೈಗೆತ್ತಿಕೊಂಡು ನೋಡಿದ. ಅವಳಿಗೆ ಮದುವೆಯಾಗಿ ಆರುವರ್ಷ. ಇದೇ ಮೊದಲ ಬಾರಿ ಗರ್ಭಿಣಿಯಾಗಿದ್ದಾಳೆ. ಗರ್ಭಸ್ಥ ಶಿಶುವಿಗೆ ಎಂಟನೆಯ ತಿಂಗಳ ಮೊದಲವಾರ ನಡೆಯುತ್ತಿದೆ. ಆಪರೇಶನ್ ಮಾಡಿಸಿಕೊಳ್ಳಲು ಒಪ್ಪಿ ಅವಳು ಪತ್ರಕ್ಕೆ ಸಹಿ ಹಾಕಿದ್ದಾಳೆ. ಹೆರಿಗೆ ಆಸ್ಪತ್ರೆಯ ವರದಿಯನ್ನು ನೋಡಿದ. ಮದನ್ ಹೇಳಿದ ವರದಿ ಅದರಲ್ಲಿತ್ತು....ಏನಿರಬಹುದು ?

ಒಂದು ವೇಳೆ ಮಗು ಇಲ್ಲದೆ ಹೋದರೆ ಇನ್ನೇನಿದ್ದಿರಬಹುದು ? ಎಂಬ ಪ್ರಶ್ನೆ ಎಲ್ಲರ ತಲೆಯಲ್ಲೂ ಎದ್ದು ನಿಂತಿತ್ತು. ಆಪರೇಶನ್ ಮಾಡಿ ನೋಡು ವುದು ಒಳ್ಳೆಯದು ಎಂಬ ತೀರ್ಮಾನವನ್ನು ಎಲ್ಲರೂ ಕೈಕೊಂಡು ಆಪರೇಶನ್ ಆರಂಭಿಸಿದರು. ದೊಗಲನ್ನು ಕತ್ತರಿಸಿ ಮಾಂಸದ ಪದರುಗಳನ್ನು ಹರಿದು ಒಳ ಪ್ರದೇಶವನ್ನು ಪರೀಕ್ಷಿಸಿದಾಗ ಇನ್ಟೆಸ್ಟೈನ್ ಅಬ್ಸ್ಟ್ರಕ್ಷನ್ ಆಗಿರದೆ ಒವೇರಿ ಯನ್ ಸಿಸ್ಟ್ ಇದ್ದು ಅದು ಟ್ವಿಸ್ಟ್ ಆಗಿದ್ದುದು ನಿಜವಾಗಿತ್ತು. ಅದು ಬೆಳೆದ ಗರ್ಭಕೋಶವನ್ನು ಮುಚ್ಚಿ ಹಿಂದಕ್ಕೆ ತಳ್ಳಿ ಬಿಟ್ಟದ್ದುದರಿಂದ ಒಳಗಣ ವಿವರ ಎಕ್ಸ್‌ರೇ ಚಿತ್ರಕ್ಕೂ ಸಿಕ್ಕಿರಲಿಲ್ಲ. ಗರ್ಭಕೋಶಕ್ಕೆ ಕೈಯಿಟ್ಟಾಗ ಜಾನಕಿರಾಂ ಅಚ್ಚರಿಯಿಂದ ನುಡಿದ "ಮಗು ಇದೆ !"

ಎಲ್ಲರೂ ಪರೀಕ್ಷಿಸಿದರು. ಮಗು ಇದ್ದುದು ನಿಜವಾಗಿತ್ತು. ಮಗುವಿನ ಎದೆಯ ಮಿಡಿತವು ಕೇಳಿಸದಿದ್ದುದರಿಂದ ಎಲ್ಲರೂ ಒಬ್ಬರ ಮುಖ ಒಬ್ಬರು ನೋಡಿಕೊಂಡರು. ವಿಷಯ ತಲೆ ಕೆಳಗಾಗಲು ಕಾರಣವಾದರೂ ಏನು ? ಎಂಬ ಪ್ರಶ್ನೆ ಎಲ್ಲರ ಮುಖದಲ್ಲೂ ಮುದ್ರೆಯೊತ್ತಿತ್ತು. ಮಗು ಬದುಕಿದೆಯೋ ಇಲ್ಲವೋ ಎಂಬುದೂ ಅನುಮಾನ ತೋರಿತು.

...ಈಗೇನು ಮಾಡುವುದು ? ಬಹು ದೊಡ್ಡ ಪ್ರಶ್ನೆ...

"ಮಗು ಬದುಕಿರುವುದು ಅಸಂಭವ. ತೆಗೆದು ಬಿಟ್ಟರೆ ಅನುಕೂಲ ಮದನ್."

"ಒಂದು ವೇಳೆ ಮಗು ಬದುಕಿದ್ದರೇನು ಮಾಡುವುದು ?

"ಅವಳಿಗೆ ನೋವಿದೆಯಾದ್ದರಿಂದ ಹಾಗೆಯೇ ಮುಚ್ಚಿ ಬಿಡುವುದೂ ಸಾಧ್ಯವಿಲ್ಲ ಡಾಕ್ಟರ್."

"ಈಗೇನು ಮಾಡೋಣ ಹೇಳಿರಿ, ಡಾಕ್ಟರ್ ?"

"ನೋವು ಯಾತರಿಂದ ಕಾಣಿಸಿಕೊಂಡಿರಬಹುದು ? ಮಗುವಿನಿಂದಲೇ ಅಥವಾ ಒವೇರಿಯನ್ ಸಿಸ್ಟಿನಿಂದಲೇ ?"

ಎಲ್ಲರೂ ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಯಾರಿಗೂ ಖಚಿತವಾಗಿ ಹೇಳಲಾಗಲಿಲ್ಲ.

"ಬಹುಶಃ ಒವೇರಿಯನ್ ಸಿಸ್ಟಿನಿಂದ ಬಂದಿರಬಹುದು, ಡಾಕ್ಟರ್."

"ಒಂದು ವೇಳೆ ಮಗು ಹೋಗಿದ್ದು, ಗರ್ಭಸ್ರಾವವಾಗಲು ನೋವು

ತೋರಿರಬಾರದೇಕೆ ?"

ಇಬ್ಬಗೆಯ ಅಭಿಪ್ರಾಯ ಎಲ್ಲರ ಮನದಲೆಗಳನ್ನೂ ಹೊಡೆದೆಬ್ಬಿಸಿತು.

"ಈಗೇನು ಮಾಡೋಣ ಡಾಕ್ಟರ್ ?"

"ಒಂದು ವೇಳೆ ಮಗು ಸತ್ತಿದ್ದರೆ ತೆಗೆಯದೆ ಬಿಡುವುದು ತಾಯಿಗೆ ಅಪಾಯ. ಇನ್ನೊಂದು ವೇಳೆ ಮಗು ಬದುಕಿದ್ದರೆ ಈಗಲೇ ತೆಗೆದರೆ ಮಗು ವಿಗೆ ಅಪಾಯ."

"ಎರಡರಲ್ಲೂ ಅಪಾಯವಿದೆಯಾದರೂ ನಾವು ಒಂದನ್ನು ಆರಿಸಿ ಕೊಳ್ಳಲೇ ಬೇಕು."

"ತಾಯಿಯನ್ನು ಉಳಿಸಿಕೊಳ್ಳುವುದು ನಮ್ಮ ಮೊದಲ ಕರ್ತವ್ಯ, ಡಾಕ್ಟರ್."

"ಈಗ ಹೆಚ್ಚು ಯೋಚಿಸಲು ಸಮಯವೇ ಇಲ್ಲ. ಹೇಗೂ ಕೈ ಹಾಕಿದ್ದೇವೆ. ತೆಗೆದು ಬಿಡುವುದೇ ಲೇಸು. ಕೊನೆಯಪಕ್ಷ ತಾಯಿಯಾದರೂ ಬದುಕಿಕೊಳ್ಳಲಿ."

ಎಲ್ಲರೂ ಅದೇ ತೀರ್ಮಾನಕ್ಕೆ ಬಂದರು. ಅನಂತರ ಗರ್ಭಕೋಶವನ್ನು ತೆರೆದು ನೋಡಿದರೆ ಸರಿಯಾಗಿ ಬೆಳೆಯದ ಜೀವಂತ ಶಿಶು ! ಎಲ್ಲರಿಗೂ ಎಲ್ಲಿಲ್ಲದ ಅಚ್ಚರಿ ಮೂಡಿ ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಸುತ್ತುವರಿದು ನಿಂತ ಕಲಿಕೆಯ ಎಳಸು ಡಾಕ್ಟರುಗಳು ಹಣಿಕಿ ನೋಡಿದರು. ಭ್ರೂಣ ಹತ್ಯೆ. ಹಾ, ವಿಧಿ !

"ವಿಧಿ ನಮಗೊಂದು ಸವಾಲು ಹಾಕಿದೆ !" ಎಂದಳು ಡಾ|| ಸೌಮಾ.

○ ○ ○ ○

ಅಘೋರ ಮನೆ ಮುಟ್ಟುವಷ್ಟರಲ್ಲಿ ಏಳೂವರೆ ಗಂಟೆಯಾಗಿತ್ತು. ಕತ್ತ ಲೆಯ ತೆರೆ ಇಳೆಯನ್ನು ಮುಸುಗಿ ಬಿಟ್ಟಿತ್ತು. ಧಗಧಗಿಸುವ ದೀಪಗಳ ಮಾಲೆ ಸಾಲುಸಾಲಾಗಿ ಬೆಳಕು ಬೀರುತಿದ್ದುವು. ದಣಿದ ಮೈಗೆ ತಣ್ಣನೆಯ ವಾತಾ ವರಣ ತಂಪನ್ನೂಡಿತು. ಅಘೋರ ಮನೆಯನ್ನು ತಲುಪಿದಾಗ ನಂದಾ ಮಗು ವಿನೊಂದಿಗೆ ಅಂಗಳದಲ್ಲಿದ್ದಳು. ತಿಲೋತ್ತಮ ಧಿಮಿಧಿಮಿ ಹೆಜ್ಜೆಯಿಟ್ಟು ಅಂಗಳದಲ್ಲೆಲ್ಲಾ ಓಡಾಡುತಿದ್ದ. ನಲಿದಾಡುವ ಮಗುವನ್ನು ನೋಡುತಿದ್ದಂತೆ ಮೈಯೆಲ್ಲಾ ಮನಸ್ಸಾಗಿ ನೂರ್ಮಡಿ ಉತ್ಸಾಹ ಮೂಡಿ ಬಂದಿತು. ಮಗುವಿನೆಡೆಗೆ

ಒಮ್ಮೆಲೇ ಮೂವರ ಮುಖದಲ್ಲೂ ನಗುವಿನಲೆ ಉಕ್ಕಿ ಹರಿಯಿತು. ಪುನಃ ಅಘೋರ ಮುಂದುವರಿದ "ಈಗಿನ ನಾಗರಿಕ ಯುಗದಲ್ಲಿಯೂ ಅವಳು ಹೆರುವ ಯಂತ್ರವಾಗಿಯೇ ಉಳಿದಿದ್ದಾಳೆ ಎಂದರೆ ಶೋಚನೀಯವಲ್ಲವೇ? ಹೀಗಿದ್ದರೆ ಸಂಸಾರ ಚೇತನಭರಿತವಾಗುವುದಾದರೂ ಹೇಗೆ? ಇಷ್ಟರ ಮೇಲೆ ಮಾತಿನ ಧಾಟಿ ನೋಡಿದರೆ 'ದುಡಿಯುವನೊಬ್ಬ' !"

ಪುನಃ ನಗುವಿನೊಂದಿಗೆ ನುಡಿ–"ಎಡಬಲಗಳಲ್ಲಿ ಮಾಸಿದ ಬಟ್ಟೆಯ ನಾಲ್ಕಾರು ಮಕ್ಕಳನ್ನಿಟ್ಟುಕೊಂಡು ಸೀರಿ ಸೀಕಲಾದ ತಾಯಂದಿರು ಆಸ್ಪತ್ರೆಗೆ ಸಾಲುಗಟ್ಟಿ ಬರುವುದನ್ನು ದಿನನಿತ್ಯ ನೋಡುವವರಿಗಲ್ಲದೆ ಇತರೆಯವರಿಗೆ ಹೆಣ್ಣಿನ ಕಷ್ಟ ತಿಳಿಯುವುದಾದರೂ ಹೇಗೆ?"

"ನಿಜ, ಅಘೋರ್. ಜೀವನ ಅರ್ಥವಾಗಬೇಕಾದರೆ ಡಾಕ್ಟರಾಗ ಬೇಕು."

ಆಸ್ಪತ್ರೆಯ ಮೆಟ್ಟಿಲು ಹತ್ತುತ್ತಿದ್ದಂತೆ ರೋಗಿಯೊಬ್ಬ ಮನೆಗೆ ಹೋಗಲು ತಯಾರಾಗಿ ನಿಂತಿದ್ದ. ಅವನಿಗಾಗಿ ವ್ಯಾನು ಬಾಗಿಲಲ್ಲಿ ಕಾದಿತ್ತು. ನೋಡುನೋಡುತ್ತಾ ರತನ್ ಅವನ ವಿಷಯವನ್ನು ಮುಂದಿಟ್ಟ "ಅವನು ಡಾ|| ಗಜಾನನರ ಪೇಷಂಟ್. ಬಹಳ ವರ್ಷಗಳಿಂದ ಚಿಕಿತ್ಸೆ ನಡೆಸಿ ಗುಣವಾಗದೆ ಈಗ ಅರ್ಧ ಬ್ರೈನ್ ತೆಗೆದುಹಾಕಿದ್ದಾರೆ. ಇನ್ನು ಸಂಸಾರಕ್ಕೆ ಅವನೇನು ದುಡಿದಾನು? ನಾಲ್ಕಾರು ಮಕ್ಕಳಿವೆ. ಅವನಿರುವುದು ನಮ್ಮ ಮಗ್ಗಲು ಮನೆಯಲ್ಲಿ. ಮಕ್ಕಳು ಕಾಹಿಲೆ ಬಿದ್ದಾಗಲೆಲ್ಲಾ ಅವನ ಹೆಂಡತಿ ನಮ್ಮ ಮನೆಗೆ ಓಡಿ ಬರುತ್ತಾಳೆ. ಮನೆಯಲ್ಲಿ ಬೇರೆ ದುಡಿಯುವವರಿಲ್ಲ. ಆಕೆ ವಿದ್ಯಾವಂತೆಯೂ ಅಲ್ಲ ಅಂದಮೇಲೆ, ಅವರ ಗತಿ ಹೇಗಾಗಬಹುದು? ಮುಖ್ಯವಾಗಿ ಈ ಕುಂದುಕೊರತೆಗಳು ನಿವಾರಣೆಯಾಗದ ಹೊರತು ನಮ್ಮ ದೇಶ ಸುಧಾರಿಸುವುದಿಲ್ಲ."

"ಎಷ್ಟೆಂದರೂ ಮಾನವ ನಿರ್ಮಿತ ಸಮಾಜ..." ಮುಂದೆ ಮಾತು ಮುಂದುವರಿಯುಗೊಡವೆ ಸುಧೀರನೆಂದ "ಈ ಸಮಾಜದಿಂದಲೇ ಮಾನವ ನಿಸರ್ಗದಿಂದ ದೂರಕ್ಕೆ ಓಡುತಿದ್ದಾನೆ?"

(೧೯)

ಮೂವರ ಮುಖದಲ್ಲೂ ನಗುವಿನಲೆ ಉಕ್ಕಿಹರಿಯಿತು. ಅಲ್ಲಿಂದ ಮೂವರೂ ತಮ್ಮ ತಮ್ಮ ಕೆಲಸಗಳಿಗಾಗಿ ಮೂರು ದಿಕ್ಕಿಗೆ ತೆರಳಿದರು. ಇಂದು ಆಪರೇಶನ್ ಥಿಯೇಟರಿನ ಒಡೆತನ ಡಾ|| ಭಾರ್ಗವಾರವರಿಗೆ ಸೇರಿದ್ದು. ಅಘೋರ ಹಾಯಾಗಿ ಉಸಿರಾಡುತ್ತಾ ರೋಗಿಗಳನ್ನು ನೋಡಿಕೊಂಡು ತನ್ನ ಕೊಠಡಿಗೆ ಹೋಗಿ ಕಾಗದಪತ್ರಗಳನ್ನು ನೋಡತೊಡಗಿದ. ಹಿಂದಿನ ದಿನಗಳಲ್ಲಿ ಬಿಡುವು ದೊರೆಯದಿದ್ದುದರಿಂದ ಮೂರು ನಾಲ್ಕು ದಿನಗಳ ಟಪ್ಪಾಲು ಮೇಜಿನ ಮೇಲಿತ್ತು.

ಬಾಗಿಲಲ್ಲಿ ಕಟಕಟ ಸದ್ದು ಕೇಳಿ ಬರುತ್ತಲೂ "Yes Please" ಎನ್ನುತ್ತಾ ಸ್ವಾಗತಿಸಿದ ಅಘೋರ. ಬಾಗಿಲನ್ನು ತಳ್ಳಿಕೊಂಡು ಒಳಬಂದವನು ಜಾನಕೀರಾಂ. ಅವನ ಎತ್ತರದ ನಿಲುವು ನಸು ಬಾಗಿದಂತೆ ಕಂಡು ಬಂದಿತು. ಅಘೋರ ನೆಟ್ಟ ದಿಟ್ಟಿಯಿಂದ ನೋಡುತ್ತಾ "ಇದೇನಪ್ಪಾ?" ಎಂದ.

"ಬೆನ್ನು ನೋವು. ಬೆಳಿಗ್ಗೆ ಏಳುವಾಗ ಸ್ವಲ್ಪ ಉಳುಕಿತು."

"ಉಜ್ಜಿಸಿಕೊಂಡೆಯೇನು?"

"ಹೌದು. ಅನಂತರ ಸ್ವಲ್ಪ ಕಡಿಮೆಯಿದೆ."

ಜಾನಕೀರಾಂ ಕುಳಿತುಕೊಂಡು ತಾನು ಬಂದ ವ್ಯವಹಾರವನ್ನು ಮುಂದಿಟ್ಟ "ಮೈತ್ರೇಯಿಯ ತಮ್ಮನಿಗೆ ಹರ್ನಿಯಾ ಆಪರೇಶನ್ ಆಗಬೇಕಾಗಿದೆ. ನಾಳೆ ಬೆಳಗ್ಗೆ ಕರೆತರಲೇ? ನಿನಗೆ ಬಿಡುವುಂಟೇ?"

"ಬೆಳಗ್ಗೆ ಯಾವಾಗ ಬರುತ್ತಿ?"

"ನೀನು ಹೇಳಿದಾಗ."

"ಬೆಳಗ್ಗೆ ನೀನು ಬರುವಾಗಲೇ ಕರೆತಂದರೆ ಅನುಕೂಲ."

"ಹಾಗೇ ಮಾಡುವ." ಎಂದ ಜಾನಕೀರಾಂ ಸ್ವಲ್ಪ ತಡೆದು ಪುನಃ ಕೇಳಿದ "ಹೇಗಿದ್ದಾನೆ ತ್ರಿಲೋತ್ತಮ.?"

"ಹಾಗೇ ಇದ್ದಾನೆ. ಕೆಲವು ದಿನ ಸ್ವಲ್ಪ ಕಡಿಮೆಯಾಗುತ್ತೆ. ಅನಂತರ ಒಂದಕ್ಕೆರಡರಷ್ಟು ಹೆಚ್ಚಾಗುತ್ತೆ. ಶಾಲೆಯಲ್ಲೂ ಪ್ರತ್ಯೇಕ ಬೆಂಚು. ಪ್ರತ್ಯೇಕ ಪಾಠ. ಇದೊಳ್ಳೆ ಕಷ್ಟಕ್ಕೆ ಬಂತು." ದನಿಯಲ್ಲಿ ದುಗುಡವಿತ್ತು.

ಸ್ವಲ್ಪ ಹೊತ್ತು ಮೌನವಾವರಿಸಿತು. ಅನಂತರ ಜಾನಕೀರಾಂ ಮೌನ

ಮುರಿದ "ಅರವಿಂದಾ ಚೆನ್ನಾಗಿದ್ದಾರೆಯೆ ?"

"ಅನಾರೋಗ್ಯವೇನೂ ಇಲ್ಲ. ಹಾಗೇ ಇದ್ದಾಳೆ."

"ಊಟ ತಿಂಡಿ ಚೆನ್ನಾಗಿ ತೆಗೆದುಕೊಳ್ಳಲು ಹೇಳು."

"ದಿನವೂ ಆರೈಕೆ ನಡೆಯುತ್ತಲೇ ಇದೆ. ಆದರೂ, ಹಾಗೆಹಾಗೆಯೆ."

ಜಾನಕೀರಾಂ ಮಾತಾಡಲಿಲ್ಲ. ವಿಷಯ ಗಂಟಲ ಗಾಳವಾಗಿತ್ತು. ಗೋಡೆಯ ಮೇಲಿನ ಕ್ಯಾಲೆಂಡರಿನ ಮೇಲೆ ದಿಟ್ಟಿ ಹೊರಳಿಸಿ ಕುಳಿತುಕೊಂಡ. ಅದರಲ್ಲಿದ್ದ ಎತ್ತರನೆಯ ದೇವಸ್ಥಾನದ ಗೋಪುರವು ಮನವನ್ನು ತುಸು ಸೆಳೆದಿತ್ತು.

"ನಾನಿನ್ನು ಹೊರಡುವೆ. ವಂದನಾ ಹೆರಿಗೆಗೆ ಬಂದಿದ್ದಾರೆ."

"ಓಹೋ."

"ಒಮ್ಮೆ ನೋಡಿ ಬಂದೆ. ಡಾ|| ಚೆಲುವಾಂಬಾ ಇದ್ದಾರೆ. ಮಧ್ಯಾಹ್ನದ ನಂತರ ಹೆರಿಗೆಯಾದೀತು."

"ಈ ಸಲವಾದರೂ ಹೆಣ್ಣಾಗಲಿ." ಎನ್ನುತ್ತಾ ಅಘೋರ ನಸುನಕ್ಕ. ಜಾನಕೀರಾಮನ ತುಟಿಗಳೂ ಬಿರಿದುವು. ಅಘೋರ ಪುನಃ ನುಡಿದ "ಸೊಗಸಾದ ನಾಲ್ಕು ಮಂದಿ ಗಂಡು ಮಕ್ಕಳಿದ್ದಾರೆ. ಹೇಗೂ ನಾಲ್ಕು ಮಂದಿ ಸೊಸೆಯರು ಬರುತ್ತಾರೆ. ವೃಥಾ ಇದೆಂಥ ಗೋಳು ?"

"ಅವರವರ ಇಷ್ಟ."

"ಪಾಪ, ಮದನ್."

ಇಬ್ಬರ ಮುಖದಲ್ಲೂ ಮುಗುಳುನಗೆ ಮೂಡಿತು. ಜಾನಕೀರಾಂ ಹೊರಟುಹೋದನಂತರ ಕಳೆದುಳಿದ ತನ್ನ ಕೆಲಸ ಮುಗಿಸಿ ಅಘೋರ ಮನೆ ಮುಟ್ಟಿದಾಗ ಶಿಲೋತ್ತಮ ನೆರೆಮನೆಯ ಮಕ್ಕಳೊಂದಿಗೆ ಚೆಂಡಾಡುತಿದ್ದ. ಇಸುಬು ದಾಟೀತೆಂದು ಅವರ ತಾಯಂದಿರು ಇಲ್ಲಿಗೆ ಕಳುಹಿಸುತ್ತಿರಲಿಲ್ಲವಾದ್ದರಿಂದ ಮಕ್ಕಳು ಶಾಲೆಯಿಂದ ಹೀಗೆಯೇ ಬಂದಿದ್ದರು. ಅದನ್ನರಿತಿದ್ದ ಅಘೋರನಿಗೆ ಕರುಣೆ ಮೂಡಿತು.

"ಮನೆಯಲ್ಲಿ ಹೇಳಿ ಬಂದಿದ್ದೀರಾ ?"

"ಮನೆಗಿನ್ನೂ ಹೋಗಲಿಲ್ಲ ಮಾವಾ."

"ಇನ್ನೂ ಊಟ ಮಾಡಲಿಲ್ಲವೇ ?"

"ಇಲ್ಲ ಮಾಮ."

"ಹೋಗಿ ಮತ್ತೆ. ಹೊತ್ತಾಯಿತಲ್ಲಾ."

"ಈಗಷ್ಟೆ ತಿಂಡಿ ತಿಂದಿದ್ದೇನೆ."

"ಈಗ?" ಎನ್ನುತ್ತಾ ಅಘೋರ ಕಣ್ಣುಗಳನ್ನು ಗಡಿಯಾರದ ಮೇಲೆ ಹೊರಳಿಸಿದ. ಹೊತ್ತು ಎರಡರ ಅಂಚನ್ನು ದಾಟುವುದರಲ್ಲಿತ್ತು. ಈಗಷ್ಟೆ ತಿಂಡಿ ತಿಂದಿದ್ದೇವೆ ಎಂದುದು ತುಸು ಅಚ್ಚರಿ ಮೂಡಿಸಿತು. "ನಿಜವಾಗಿಯೂ?" ಎಂದ.

"ಶಾಲೆಗೆ ಬ್ರೆಡ್ಡು ಬೆಣ್ಣೆ ತೆಗೆದುಕೊಂಡು ಹೋಗಿದ್ದೆವಲ್ಲಾ."

"ಅದು ಸಾಕೆ? ಹಸಿವಾಗುವುದಿಲ್ಲವೇ?"

"ಹೋಗಿ ಉಣ್ಣುತ್ತೇವೆ."

"ಅವರು ಮನೆಗೆ ಹೋದರೆ ಪುನಃ ಇಲ್ಲಿಗೆ ಕಳುಹಿಸುವುದಿಲ್ಲಪ್ಪಾ."

ಇದುವರೆವಿಗೂ ಸುಮ್ಮನಿದ್ದ ತಿಲೋತ್ತಮ ಹುಬ್ಬೆತ್ತಿ ಕಣ್ಣರಳಿಸಿ ಅಂದ. ಅಘೋರನಿಗೀಗ ಗಂಟಲಲ್ಲಿ ಗಾಳ ಸಿಕ್ಕಂತಾಯಿತು. ಏನೂ ಹೇಳಲಾರದೆ ಒಳಗಡೆ ಹೋದ. ಮೇಜಿನ ಮೇಲೆ ತಟ್ಟೆ ಅಣಿಯಾಗಿತ್ತು. ಊಟ ಮುಗಿಸಿ ಅರವಿಂದಳ ಆಗಮನವನ್ನು ಎದುರು ನೋಡುತ್ತಾ ಕುಳಿತುಕೊಂಡ. ಮರುಗಳಿಗೆಯಲ್ಲಿ ದುಡುದುಡು ಹೆಜ್ಜೆಯಿಡುತ್ತಾ ಓಡಿ ಬಂದ ತಿಲೋತ್ತಮ ಹುಬ್ಬೆತ್ತಿ ಕುಡಿನೋಟ ಬೀರಿ–"ಅಪ್ಪಾ, ನೀವೇಕೆ ಹಾಗೆಂದಿರಿ? ಅವರಿಬ್ಬರೂ ಹೋಗಿ ಬಿಟ್ಟರು. ಇನ್ನು ನನ್ನೊಂದಿಗೆ ಆಡುವವರ್ಯಾರು?" ಇನಿ ದನಿಯಲ್ಲಿ ಆತಂಕವಿತ್ತು. ಕಣ್ಣಾಲಿಗಳಲ್ಲಿ ಭಾವೋದ್ವೇಗವಿತ್ತು. ನೋಡಿದೊಡನೆ ಅಘೋರ ತುಸು ಬೆಚ್ಚಿ ಧಡಕ್ಕನೆದ್ದು–"ನಾನೇ ಬರುವೆ."

ಇಬ್ಬರೂ ಅಂಗಳಕ್ಕೆ ನಡೆದರು. ಪ್ರಯತ್ನ ಪೂರ್ವಕವಾಗಿ ಎಸೆದರೂ ಚೆಂಡು ತುಸು ಬಿರುಸಾಗಿಯೇ ಬೀಳುತ್ತಿತ್ತು. ತಿಲೋತ್ತಮ ನಸುಕೋಪದಿಂದ ಎದುರಿಸಿದ "ನೀವು ಬೇಕುಬೇಕಾಗಿಯೇ ಜೋರಿನಿಂದ ಎಸೆಯುತ್ತೀರಿ."

"ಇಲ್ಲ ತಿಲೋ."

"ಹೂಂ. ಇನ್ನೊಮ್ಮೆ." ಎನ್ನುತ್ತಾ ತಿಲೋತ್ತಮ ಬ್ಯಾಟು ಹಿಡಿದು ನಿಂತ. ಅದೇ ನೇರಕ್ಕೆ ಚೆಂಡು ಪುನಃ ಜಿಗಿದು ಬಂತು. ಈ ಸಲ ಹೊಡೆದ ಏಟು ಸರಿಯಾಗಿ ಬಿದ್ದುದರಿಂದ ಚೆಂಡು ಪುಟ ನೆಗೆದು ಹಾರಿತು. ತಿಲೋತ್ತಮ ಆನಂದದಿಂದ ಜಿಗಿದಾಡಿ–"ಹೀಗೆ ಅಮ್ಮ ಆಟಕ್ಕೆ ಬರುವುದೇ ಇಲ್ಲ. ನೀವು

ದಿನವೂ ಇಲ್ಲಿದ್ದರೆ ಆಟ ಆಡಬಹುದು !"

"ನನಗೆ ಕೆಲಸವಿದೆಯಲ್ಲಾ."

"ನನ್ನೊಂದಿಗೆ ಆಟ ಆಡುವವರ್ಯಾರು ?"

ಅಘೋರನಿಗೆ ಏನು ಹೇಳಲೂ ತೋಚಲಿಲ್ಲ. ವಿಧಿ ಅಣಕಿಸಿ ನಕ್ಕಂತಾಯಿತು. ಆ ಮಾತು ಮರೆಸಲು ಮಗನನ್ನು ಎರಡೂ ಕೈಯಲ್ಲಿ ಎತ್ತಿ ಹಿಡಿದು ಮುದ್ದಿಟ್ಟುಕೊಂಡು ಭುಜದ ಮೇಲೆ ಕುಳ್ಳಿರಿಸಿಕೊಂಡು ಕುದುರೆ ಆಟ ಆಡಿಸಿದ. ಹೊರಬಾಗಿಲಲ್ಲಿ ಅರವಿಂದಾ ತಲೆ ಹಾಕಿ ತಂದೆ ಮಕ್ಕಳ ಆಟವನ್ನು ಗಮನಿಸಿ ಅಂದಳು "ಅವನೊಂದಿಗೆ ಆಡುವವರೇ ಇಲ್ಲ. ಪಾಪ, ನತದೃಷ್ಟ ಮಗು."

"ನೀನೇ ಇದ್ದೀಯಲ್ಲ. ಮಗುವಿನೊಂದಿಗೆ ಮಗುವಾಗಿ ಕಳೆಯುವುದಕ್ಕಿಂತ ಹೆಚ್ಚಿನ ಆನಂದ ಇನ್ನುಂಟೇ ಅರವಿಂದಾ ?"

ಅರವಿಂದಾ ಮಾತಾಡಲಿಲ್ಲ. ದಿಟ್ಟಿ ಬೀದಿಯ ಮೇಲೆ ಹರಿದಿತ್ತು. ಭರ್ರನೆ ಓಡಾಡುವ ನೂರಾರು ವಾಹನಗಳ ಸದ್ದೂ ಸಾಲುಗಟ್ಟಿ ಸಾಲು ಮರಗಳಡಿಯಲ್ಲಿ ತಿರುಗಾಡುವ ಜನರ ಮಾತುಕತೆಗಳ ಗುಜುಗುಂಪುಲೂ ಕೂಡಿ ಕಿವಿಗೆ ಕರ್ಕಶವನ್ನುಂಟು ಮಾಡುತಿತ್ತು. ಆದರೂ ಅದರೆಡೆಗೆ ಗಮನ ಹರಿಸದೆ ಅತ್ತ ಶೂನ್ಯ ನೋಟವನ್ನು ಬೀರಿ ಬಾಗಿಲಿಗಾಂತು ನಿಂತ ರೀತಿಯನ್ನು ಅಘೋರ ಕ್ಷಣಕಾಲ ನಿಟ್ಟಿಸಿದ. ಅವಳ ದೇಹ ಬಳ್ಳಿಯಂತೆ ಬಾಗಿಲಿನಾಶ್ರಯ ಪಡೆದಿತ್ತು. ಅಘೋರ ಮಗುವಿನೊಂದಿಗೆ ಅಲ್ಲಿಗೆ ಬಂದು ಮೈಗೆ ಮೈ ಹಚ್ಚಿ ನಿಂತು "ಅರೂ" ಎಂದ.

ಮೆಲ್ಲನೆ ಮುಖವೆತ್ತಿ ನೋಡಿ ಅಚ್ಚರಿಯ ನೋಟ ಬೀರಿದಳು ಅರವಿಂದಾ.

"ಮನೋಲ್ಲಾಸವಿಲ್ಲದಿದ್ದರೆ ಬಾಳೇ ವ್ಯರ್ಥ ಅರವಿಂದಾ."

"ಅಲ್ಲಾ ಅಂದವರ್ಯಾರು ?"

"ಮತ್ತೇಕೆ ಹೀಗೆ ?"

"ಹಾಗೆಂದರೆ ?"

"ನೀನೇಕೆ ಇಷ್ಟೊಂದು ಸಪ್ಪೆ ?"

"ಸಪ್ಪೆಯಾಗಿದ್ದೇನೆಯೆ ?"

"ಅಲ್ಲದಿನ್ನೇನು ?"

"........."

"ನೀನು ಯಾವುದೋ ಚಿಂತೆಯನ್ನು ಮನಸ್ಸಿಗೆ ಅಂಟಿಸಿಕೊಂಡಿದ್ದಿ."

"ಇಲ್ಲ ಅಘೂ."

ಒಳಗಿನಿಂದ ವಿಮಲ್‌ದಾಸ್ ಕೆಮ್ಮುತ್ತಾ ಹೊರಬಂದುದನ್ನು ನೋಡಿ ಅರವಿಂದಾ ಕುರ್ಚಿಯನ್ನು ತರಹೋದಾಗ ವಿಮಲ್‌ದಾಸ್ ತಡೆದು ಹೇಳಿದ "ಬೇಡಮ್ಮಾ. ಅಂಗಳದಲ್ಲಿ ನಾನೊಂದಿಷ್ಟು ತಿರುಗಾಡುವೆ." ಅನಂತರ ಅಘೋರನೆಡೆಗೆ ತಿರುಗಿ "ಅಂಗಡಿ ಮುಚ್ಚಿದುದು ಆತುರದ ಕ್ರಮವಾಯಿತು. ಈಗ ಶರೀರ ಪ್ರಕೃತಿ ಸುಧಾರಿಸಿಕೊಂಡಿದೆ. ಕೈಗೆ ಕೆಲಸವಿಲ್ಲದೆ ಮನಸ್ಸಿಗೆ ತುಂಬ ಬೇಸರ."

"ಸರಿ ಸರಿ."

"ಕೆಲಸವಿಲ್ಲದೆ ಕಳೆಯುವುದು ಕಷ್ಟ ಮಗೂ."

"ತಿಲೋತ್ತಮನೊಂದಿಗೆ ಆಟ ಆಡಿದರಾಯಿತು."

"ನಾನೀಗ ಕಳೆಯುತ್ತಿರುವುದೇ ಹಾಗೆ."

ವಿಮಲ್‌ದಾಸ್ ತಿಲೋತ್ತಮನೊಂದಿಗೆ ಚೆಂಡು ಆಡಲು ಮುಂದಾದ. ಅಜ್ಜ ಮೊಮ್ಮಗನ ಆಟವನ್ನು ಸ್ವಲ್ಪಹೊತ್ತು ಗಮನಿಸುತ್ತಾ ನಿಂತ ಅಘೋರ ಅರವಿಂದಳೊಂದಿಗೆ ಒಳಹೋದ. ಅವಳಿಗೆ ಪ್ರಿಯವಾದ ಮಾಸಿಕ ಮತ್ತು ಸಾಪ್ತಾಹಿಕಗಳೆಲ್ಲಾ ಅಲ್ಲೇ ಇವೆ. ಒಂದನ್ನೂ ತೆರೆದೇ ಇರಲಿಲ್ಲ.

"ಇವೊಂದನ್ನೂ ಓದಲಿಲ್ಲವೇ ಅರೂ ?" ದನಿಯಲ್ಲಿ ಅಚ್ಚರಿಯಿತ್ತು.

"ಇಲ್ಲ."

"ಏಕೆ ?"

"ಬಿಡುವಾಗಲಿಲ್ಲ."

ಅವಳು ಹಾಗೆಂದರೂ ಅದು ಕಾರಣವಲ್ಲವೆಂಬುದನ್ನು ತಿಳಿದಿದ್ದ ಅಘೋರ ಪುನಃ ಕೇಳಿದ. ಅದೇ ಪ್ರಶ್ನೆ ನಾಲ್ಕಾರು ಬಾರಿ ಹೊರಬಿದ್ದರೂ ಬಂದ ಉತ್ತರ ಅದೆ "ಬಿಡುವಾಗಲಿಲ್ಲ." ದನಿಯಲ್ಲಿನ ನಿರಾಸಕ್ತಿ ತನುಮನಗಳಿಗೆ ಕಹಿಯನ್ನೂಡಿಸಿತು. ಅದೇ ಯೋಚನೆಯ ಗುಂಗಿನಲ್ಲಿ ಕಿಟಕಿಯ ಬಳಿ ತುಸು ನಿಂತ. ಅರವಿಂದಾ ಹಾಸಿಗೆಯ ಮೇಲೆ ಅಡ್ಡಾಗಿ ಕೈಗೆ ಮಾಸಿಕ

ವೊಂದನ್ನು ತೆಗೆದುಕೊಂಡಳು. ಕೈಗಳು ಯಾಂತ್ರಿಕವಾಗಿ ಅದನ್ನು ತಿರುವಿ ಹಾಕಿದುವು. ಮನಸ್ಸು ದಿಕ್ಕೆಟ್ಟ ಕುದುರೆಯಂತೆ ಎಲ್ಲೋ ಓಡಿತು. ಕಣ್ಣು ಗಳು ಶೂನ್ಯ ದಿಟ್ಟಿಯನ್ನು ಬೀರಿದುವು.

ಎದೆಯ ಮೇಲೆ ಎರಡೂ ಕೈಗಳನ್ನು ಕಟ್ಟಿ ಗೋಡೆಗಾಂತು ನಿಂತು ಕೊಂಡು ಅವಳ ಚಲನವಲನದ ಬಗ್ಗೆ ಕುತೂಹಲದಿಂದ ನಿಟ್ಟಿಸುತ್ತಾ ನಿಂತ– ಅಘೋರ. ಎಷ್ಟೋ ಹೊತ್ತು ನಿಂತು ಗಮನಿಸಿದರೂ ಅವಳಲ್ಲಿ ಯಾವ ವಿಶೇಷವೂ ಕಾಣ ಬರಲಿಲ್ಲ. ಪುಸ್ತಕವನ್ನು ಸ್ವಲ್ಪ ಹೊತ್ತಿನ ಮೇಲೆ ಬದಿಗಿಟ್ಟು ಅವಳು ಮಗುವಿನಂತೆ ಹೊರಳಿ ಮಲಗಿದಳು.

ಅಘೋರ ಬಳಿಯಲ್ಲಿ ಕುಳಿತುಕೊಂಡು “ಅರೂ.” ಎಂದ.

ಅವಳು ಮಾತಾಡಲಿಲ್ಲ. ನೋಡಿದ ನೋಟವೇ ಏನೆಂದು ಪ್ರಶ್ನಿಸಿತು.

“ನಾಳೆ ತಿಲೋನ ಹುಟ್ಟುಹಬ್ಬವಲ್ಲವೇ ?”

“ನಾಳೆಯಲ್ಲ ನಾಡಿದ್ದು.”

ಅಘೋರ ಯೋಚಿಸಿನೋಡಿದ. ಅವಳ ಉತ್ತರ ಸರಿಯಾಗಿತ್ತು.

“ಏಕೆ ಸುಮ್ಮನಿದ್ದಿ ? ಅವನಿಗೆ ಬಟ್ಟೆ ಕೊಂಡುಕೊಳ್ಳುವುದಿಲ್ಲವೇ ?”

“ಅಯ್ಯೊ, ಈಗ ಇರುವುದೇ ಹೆಚ್ಚಾಗಿದೆ.”

“ಆದರೂ ಕೊಳ್ಳಬೇಕಷ್ಟೆ ?”

“ಹ್ಞೂಂ.”

“ತಿಂಡಿತಿನಿಸುಗಳಿಗೆ ಆರ್ಡರು ಕೊಟ್ಟು ಅವನಿಗೊಂದು ಜೊತೆ ಬಟ್ಟೆ ತರೋಣ ಏಳು.”

“ನಾಳೆ ಹೋದರಾಯಿತು.”

“ಏಳು ವರ್ಷ ತುಂಬಿತು. ಡಾಕ್ಟರುಗಳಲ್ಲಿ ಬಹುಮಂದಿಯನ್ನು ಕರೆಯ ಬೇಕು. ಯಾರ್ಯಾರನ್ನು ಕರೆಯಲಿ ಹೇಳು.”

“ನಿಮ್ಮಿಷ್ಟದಂತೆ ಮಾಡಿರಿ. ಯಾರು ಬಂದರೂ ಸರಿಯೆ.”

ಅವನ ಒರಟು ಕೈ ಮುಂಗುರುಳು ಮುಖ ಮೈಗಳನ್ನೆಲ್ಲಾ ನೇವರಿಸಿತು. ಕಣ್ಣು ನೋಟ ದೈನ್ಯತೆಯಿಂದ ನಿಟ್ಟಿಸಿ ನೋಡಿ ಅರ್ಥಮಾಡಿಕೊಳ್ಳಲಾರೆನಲ್ಲಾ ಎಂದು ಚಡಪಡಿಸಿತು. ಹೇಳಲಾಸದೇ ಹೇಳಿದ ಅಘೋರ “ನಿನ್ನ ರೀತಿಯೇ ನನಗೆ ಅರ್ಥವಾಗುತ್ತಿಲ್ಲ ಅರವಿಂದಾ.”

"ಹೋಗಲಿ ಬಿಡಿ." ಹಸನಾದ ಮುಗುಳುನಗೆ ನಕ್ಕಳು ಅವಳು.

ಅಘೋರ ಆಸ್ಪತ್ರೆಗೆ ಅಣಿಯಾಗಿ ನಿಂತಾಗ ತಿಲೋತ್ತಮನನ್ನು ಎದೆಗಪ್ಪಿಕೊಂಡು–"ತಿಲೋ, ನಿನಗೇನು ಬಹುಮಾನ ಬೇಕು ಹೇಳು."

ಕ್ಷಣಕಾಲ ಯೋಚಿಸಿದ ತಿಲೋತ್ತಮ ಹುಬ್ಬೆತ್ತಿ ಕಣ್ಣರಳಿಸಿ ತನ್ನ ಅಭಿಲಾಷೆಯನ್ನು ಅತ್ಯಂತ ಆಸಕ್ತಿಯಿಂದ ಮುಂದಿಟ್ಟ–"ನನಗೆ ಕೋವಿ ಬೇಕು !"

"ಏಕೆ ? ನೀನು ಸೈನ್ಯಕ್ಕೆ ಸೇರುತ್ತೀಯೇನು ?"

"ಹ್ಞೂ, ಅಪ್ಪಾ ! ಎಲ್ಲರನ್ನೂ ಒಂದೇ ಬಾರಿಗೆ ಢಂ ! ಢಂ ! ಎನ್ನಿಸುವೆ!"

"ಓ ! ಹೋ ! ನನ್ನ ಮಗ ಧೀರ !"

ಅಘೋರ ಮಗನನ್ನು ಮನವಾರೆ ಮುತ್ತಿಟ್ಟುಕೊಳ್ಳುವುದನ್ನು ನೋಡುತ್ತಾ ನಿಂತ ನಂದಾ ಖಿನ್ನಳಾಗಿ–"ತಂದೆ ಡಾಕ್ಟರಾಗಿಯೂ ಮಗನಿಗೆ ಗುಣವಾಗಲಿಲ್ಲ."

"ಅದು ಎಂದಾದರೂ ಗುಣವಾದೀತು."

ಹಾಗೆನ್ನುತ್ತಲೇ ದಿನಗಳು ಕಳೆದುಹೋದುವು ಎಂದು ಚಿಂತಿಸಿತು ಅರವಿಂದಳ ಮನಸ್ಸು. ಅವಳು ಮಾತಾಡದೆ ದಿಟ್ಟಿಯನ್ನು ಕಿಟಿಕಿಯಿಂದಾಚೆಯ ಹೊರಜಗತ್ತಿನಲ್ಲಿ ನೆಟ್ಟು ಮರವಟ್ಟಂತೆ ನಿಂತಳು.

ಪ್ರಾಕಾರದ ಬಾಗಿಲನ್ನು ಹಾಕಿಕೊಳ್ಳುತಿದ್ದ ಅಘೋರನಿಗೆ ತಿಲೋತ್ತಮ ಕೂಗಿ ಹೇಳಿದ "ಅಪ್ಪಾ, ನನಗೆ ಕೋವಿ ಬೇಕು, ಕೋವಿ !"

"ಹ್ಞೂ"

"ಒಳ್ಳೆ ಕೋವಿ !"

"ಒಳ್ಳೆಯದೇ ತರುವೆ"

"ದೊಡ್ಡದು ಬೇಕು."

"ಹ್ಞೂ ಮಗೂ." ಅಘೋರ ಮೈಯೆಲ್ಲಾ ಸಂತಸದ ಬೀಡಾಗಿ ಉತ್ತರಿಸಿದ. ಬಾಗಿಲ ಬಳಿ ನೋಡುತ್ತಾ ನಿಂತ ಅರವಿಂದಾ ನಸುನಕ್ಕಳು,

ಅಘೋರ ಆಸ್ಪತ್ರೆ ಮುಟ್ಟಿದಾಗ ಇನ್ನೂ ಆರರ ಸಮಯ. ಎಲ್ಲೆಲ್ಲೂ ವಿದ್ಯುದ್ದೀಪಗಳು ಜಗಜಗಿಸುತಿದ್ದುವು. ರೋಗಿಗಳ ಸಂಬಂಧಿಕರು ನೋಡಲು ಬರುವ ಹೊತ್ತು. ಎಲ್ಲೆಡೆಯೂ ಹೋಗಿ ಬರುವವರಿಂದ ತುಂಬಿ ಹೋಗಿತ್ತು.

ಒಂದೆಡೆ ವಿಷಮಾವಸ್ಥೆಯಲ್ಲಿರುವ ರೋಗಿಗಳ ಬಂಧು ಬಾಂಧವರ ಕಣ್ಣೀರು ಕೋಡಿಗಟ್ಟಿ ಹರಿಯುತಿದ್ದರೆ ಇನ್ನೊಂದೆಡೆ ಗುಣವಾಗಿ ಮನೆಗೆ ಹಿಂದಿರುಗುವವರ ಕಿಲಕಿಲ ನಗುವಿನ ಲಹರಿ ಪ್ರವಹಿಸುತಿತ್ತು. ಇಬ್ಬಗೆಯ ವಾತಾವರಣವನ್ನು ದಿನವಹಿ ಗಮನಿಸುತಿದ್ದರೂ ಇಂದೇಕೋ ಒಂದು ರೀತಿಯೆನ್ನಿಸಿತು.

ಯೋಚನೆಯ ಗುಂಗಿನಲ್ಲೇ ಅಘೋರ ಪಾದರಕ್ಷೆಯ ಲರಕ್ ಲರಕ್ ಸದ್ದು ಮಾಡುತ್ತಾ ವಾರ್ಡ್ ಭೇಟಿಯನ್ನಾರಂಭಿಸಿದ. ಆಪರೇಶ‌ನ್ ಆದವರಲ್ಲಿ ಕೆಲವರು ಗುಣಮುಖರಾಗುತಿದ್ದರು. ಕೆಲವರು ಇನ್ನೂ ಮಾಗದ ನೋವಿನಿಂದ ನರಳುತಿದ್ದರು. ಆಪರೇಶನ್ ಆಗಲಿರುವವರು ಭಯ ಉದ್ವೇಗಗಳಿಂದ ಭೀಭತ್ಸ ಸನ್ನಿವೇಶವನ್ನು ಎದುರಿಸಲಾರದೆ ನಖಶಿಖಾಂತ ಕಂಪಿಸುತಿದ್ದರು. ಎಲ್ಲರ ಸಂಕಷ್ಟಗಳನ್ನೂ ಹೊತ್ತು ಅಘೋರ ದಾಪುಗಾಲು ಹಾಕುತ್ತಾ ಕಾರಿಡಾರಿಗೆ ಕಾಲಿಟ್ಟ. ಎದುರಿಗೆ ಡಾ|| ಚೆಲುವಾಂಬಳ ದಳ ಸಾಲುಗಟ್ಟಿ ಬರುವುದನ್ನು ಕಾಣುತ್ತಲೂ ಮುಖ ಮೆಲುನಗುವಿನಿಂದ ಅರಳಿತು.

ಡಾ|| ಸೌಮಾ ಡಾ|| ಶಾರದಾ ಡಾ|| ಪಂಕಜಾರವರೊಂದಿಗೆ ಇನ್ನೂ ಕಲಿಕೆಯ ಎಳಸು ಡಾಕ್ಟರುಗಳು ನಾಲ್ವರಿದ್ದರು. ಹೆಜ್ಜೆಗಳು ಬಳಿ ಸಾರುತ್ತಲೂ ನಮಸ್ಕಾರ ಪ್ರತಿನಮಸ್ಕಾರಗಳು ಎಲ್ಲರ ಬಾಯಲ್ಲೂ ಮರ್ಮರಿಸಿದುವು. ಒಮ್ಮೆಲೇ ಡಾ|| ಚೆಲುವಾಂಬ ನಕ್ಕು ಹುಬ್ಬೇರಿಸಿ ಅಂದಳು "ಡಾ|| ಮದನ್ ರವರಿಗೆ ಐದನೇ ಪುತ್ರ ರತ್ನ ಜನಿಸಿದ್ದಾನೆ!"

"Poor Madan"

ಎಲ್ಲೆಲ್ಲೂ ಮೆಲುನಗೆಯ ತಿಳಿಸದ್ದು ಮರ್ಮರಿಸಿತು.

"ಪಾಪ, ಮಂದಸಾರವರ ಗೋಳು ಹೇಳತೀರದು." ಎಂದಳು ಸೌಮಾ.

ಮಾತು ಮುಗಿಯುವುದರೊಳಗಾಗಿ ಜಾನಕೀರಾಮನೊಂದಿಗೆ ಮದನ್ ಆಗಮಿಸಿದ. ಒಡನೆಯೇ ಕಿಲಕಿಲ ನಗುವಿನಲೆ ಹುಚ್ಚೆದ್ದು ಹರಿಯಿತು.

"ಮದನ್! ಹೃತ್ಪೂರ್ವಕವಾದ ಅಭಿನಂದನೆಗಳು!" ತುಂಟ ನಗುವನ್ನು ಬೀರಿ ಹಳೆಯ ಪದ್ಯವೊಂದನ್ನು ಪುನಃ ಹಾಸ್ಯದ ಧಾಟಿಯಲ್ಲಿ ಬಿತ್ತರಿಸಿದ ಅಘೋರ "ಮರಳಿ ಯತ್ನವ ಮಾಡು ಮರಳಿ ಯತ್ನವ ಮಾಡು."

"ನಿಮಗೆಲ್ಲಾ ತಮಾಷೆ ಮಾಡುವ ಕಾಲ. ಮಾಡಿ, ಮಾಡಿ."

"ತಮಾಷೆಯಲ್ಲಪ್ಪಾ, ಐದು ಮಂದಿ ಗಂಡು ಮಕ್ಕಳಿದ್ದರೆ ಯಾರಿಗೆ

ಬೇಡ ?"

"ಹೆಣ್ಣಾಗದಿದ್ದರೂ ನಿಮಗೆ ನಷ್ಟವೇನೂ ಆಗಲಿಲ್ಲವಲ್ಲಾ ?"

"ಪಂಚಪಾಂಡವರು."

"ನಿಮ್ಮಂಥವರು ಮನಸ್ಸುಮಾಡಿದರೇನೇ ದೇಶಕ್ಕೆ ಭುಜಬಲ ಬರೋದು."

"ನಿಜ, ನಿಜ. ನಮ್ಮ ದೇಶಕ್ಕೆ ಬುದ್ಧಿವಂತರ ಅಗತ್ಯವಿದೆ. ಬಡವರು ಹತ್ತು ಮಕ್ಕಳನ್ನು ಹೆತ್ತರೆ ದೇಶಕ್ಕೆ ಏನು ಉಪಯೋಗ?"

"ಪಾಪ, ಎಲ್ಲರೂ ತಮಾಷೆ ಮಾಡುವುದಾದರೆ ಹೇಗೆ? ಇನ್ನೊಮ್ಮೆ ಪ್ರಯತ್ನಮಾಡಿ ನೋಡಪ್ಪಾ ಮದನ್. I wish you good luck!" ಎನ್ನುತ್ತಾ ಅಘೋರ ಮದನನನ್ನು ಬಿಗಿದಪ್ಪಿದ.

ಎಲ್ಲರ ಮುಖದಲ್ಲೂ ನಗುವಿನಲೆ ಉಕ್ಕಿಹರಿಯಿತು. ಮದನ್ ಅವರೊಂದಿಗೆ ತನ್ನ ನಗುವಿನ ಇನಿದನಿಯನ್ನೂ ತೇಲಿಬಿಟ್ಟ.

ದೂರದ ದೇಗುಲದ ಗಂಟಾ ನಿನಾದ ಕಿವಿಗಿಂಪಾಗಿ ಮೊಳಗಿತು ಢನ್. ಢನ್. ಢನ್. ಢನ್. ಢನ್.

ಅಧ್ಯಾಯ

೨೮

ವಾರ್ಡುಗಳ ಭೇಟಿ ಅದೇತಾನೇ ಮುಗಿದಿತ್ತು. ಬೆಳಿಗ್ಗೆ ಎಂಟು ಗಂಟೆಯಿಂದಲೇ ಆರಂಭಿಸಿದ್ದ ಅಘೋರ ಕಣ್ಣುಗಳನ್ನು ಕೈಗಡಿಯಾರದತ್ತ ಹೊರಳಿಸಿದ. ಹೊತ್ತು ಹತ್ತೂವರೆಯಾಗಿತ್ತು. ಖಿನ್ನ ಮುಖಮುದ್ರೆಯಿಂದ ಅಘೋರ ಇಂತೆಂದ "ಮದನ್, ತಿಲೋತ್ತಮನಿಗೆ ಇಸುಬು ನಖಶಿಖಾಂತ ವ್ಯಾಪಿಸಿಬಿಟ್ಟಿದೆ. ಈ ಕಷ್ಟಕ್ಕಿಂತ ಅರವಿಂದಳ ವ್ಯಸನ ಹೇಳತೀರದು. ಹೇಗೋ ಬರುತ್ತೆ ಹೇಗೋ ಹೋಗುತ್ತೆ ನೀನದನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡ ಎಂದರೆ ಅವಳು ಕೇಳುವುದಿಲ್ಲ. ಹಾಗೆನ್ನುವುದಕ್ಕಿಂತ ಅವಳಿಗೆ ಧೈರ್ಯವಿಲ್ಲ ಎನ್ನುವುದು ಲೇಸು." ಮನದಲ್ಲಿನ ದುಗುಡ ದನಿಯಲ್ಲಿ ಹೊರಹೊಮ್ಮುತಿತ್ತು.

"ಅವರನ್ನು ಪುನಃ ಲೆಕ್ಚರರ್ ಆಗಿ ಕಳುಹಿಸುವುದು ಲೇಸು. ಒಪ್ಪಿಸಿ ನೋಡು."

"ಆಗಿನಿಂದಲೂ ಹೇಳುತ್ತಲೇ ಇದ್ದೇನೆ. ಅವಳು ಮಗುವಿಗೆ ವಾಸಿಯಾಗಲಿ ಎನ್ನುತ್ತಲೇ ಇದ್ದಾಳೆ."

"ಸ್ಕಿನ್ ಸ್ಪೆಷಲಿಸ್ಟ್ ಏನು ಹೇಳುತ್ತಾರೆ ?"

"ಅವರ ಚಿಕಿತ್ಸೆ ಆರಂಭಿಸಿದೊಡನೆಯೇ ಅದು ಮೈಯೆಲ್ಲಾ ವ್ಯಾಪಿಸಿತು."

"ಫಿಜಿಶಿಯನ್ನರಿಗೂ ತೋರಿಸು. ಅವರೂ ನೋಡಲಿ."

"ಡಾ|| ಘನಶ್ಯಾಮರೂ ನೋಡುತಿದ್ದಾರೆ." ಎಂದ ಅಘೋರ ನೀಳವಾದ ಉಸಿರು ಬಿಟ್ಟು ಪುನಃ ಹೇಳಿದ "ತಿಲೋತ್ತಮನನ್ನು ನೋಡುವುದಕ್ಕಾಗುವುದಿಲ್ಲ. ನೋಡಿದರೆ ಎಂತಹವರಿಗೂ ಸಂಕಟವಾದೀತು."

"ಪಾಪ."

"ಮನಸ್ಸಿಗೆ ತುಂಬ ಬೇಜಾರು."

ಹಾಗೆಯೇ ಇಬ್ಬರೂ ಕಾರಿಡಾರಿನಲ್ಲಿ ಮುಂದುವರಿದರು.

"ಅಘೋರ್, ನಿಮ್ಮ ಮನೆಯಲ್ಲಿ ಯಾರಿಗೂ ಇದು ಇದ್ದಂತಿಲ್ಲ ?"

"ಇಲ್ಲ ಮೇಡಂ. ಯಾವುದೋ ಅಲರ್ಜಿ ಇರಬಹುದು. ಮನೆಯಲ್ಲಿನ ವಸ್ತುವಸ್ತುವನ್ನೂ ಪರೀಕ್ಷಿಸುತಿದ್ದೇನೆ. ಯಾವುದೆಂಬುದೇ ತಿಳಿಯುತ್ತಿಲ್ಲ."

ಕಾರಿಡಾರಿನ ತುತ್ತ ತುದಿಯಲ್ಲಿ ಡಾ|| ಘನಶ್ಯಾಮ್ ತಮ್ಮ ದಳದೊಂದಿಗೆ ಬರುತಿದ್ದರು. ಬಿಳಿಯ ಕೋಟು ಸ್ಟೆತೊಸ್ಕೋಪಿನ ಕೊರಳಹಾರದೊಡನೆ ಅವರ ದಳ ಇನ್ನಷ್ಟು ಹೊತ್ತಿನೊಳಗಾಗಿ ಸಮೀಪಿಸಿತು. ಡಾ|| ಘನಶ್ಯಾಮ್ ಕೇಳಿದರು "ಹೇಗಿದ್ದಾರೆ ಕುಮಾರ ಕಂಠೀರವ ?"

"ಹಾಗೇ ಇದ್ದಾನೆ. ಈಗೀಗ ಮೈಯಲ್ಲಿ ಲವಲೇಶವೂ ಸ್ಥಳವಿಲ್ಲದಂತೆ ವ್ಯಾಪಿಸಿಬಿಟ್ಟಿದೆ."

"ಸ್ಕಿನ್ ಸ್ಪೆಷಲಿಸ್ಟ್‌ಗೆ ತೋರಿಸಿದ್ದೀರೇನು ಪುನಃ ?"

"ಹೌದು." ಸಪ್ಪೆ ಮೋರೆಯಿಂದ ನುಡಿದ ಅಘೋರ.

ತುಸು ಯೋಚಿಸಿ ಅವರೆಂದರು "ಇನ್ನೊಮ್ಮೆ ಕರೆದುಕೊಂಡು ಬನ್ನಿರಿ ನೋಡೋಣ."

"ಆಗಲಿ."

"ಇಷ್ಟೊಂದು ಮನಸ್ಸಿಗೆ ಹಚ್ಚಿಕೊಂಡರೆ ಹೇಗೆ ಡಾಕ್ಟರ್ ?"

"......."

"ಯೋಚಿಸಬೇಡಿ ದೇವರಿದ್ದಾನೆ."

ತಾನೂ ದಿನಕ್ಕೊಮ್ಮೆಯಾದರೂ ಹಾಗೆನ್ನುವುದು ನೆನಪಾಗಿ ತನ್ನನ್ನೇ ತಾನು ಅಣಕಿಸಿದಂತಾಯಿತು.

ಡಾಕ್ಟರುಗಳ ದಳ ಅಘೋರನೆಡೆಗೆ ಕರುಣಾದೃಷ್ಟಿಯನ್ನು ಬೀರಿ ಮುಂದುವರಿಯಿತು. ಗೆಳೆಯರಿಬ್ಬರೂ ಒಂದು ಗುಟುಕು ಕಾಫಿಗಾಗಿ ಕಾಫಿ ಮನೆಯತ್ತ ಹೆಜ್ಜೆಹಾಕಿದರು. ಕಾಫಿ ಮುಗಿಸಿ ಹಿಂದಿರುಗುವಷ್ಟರಲ್ಲಿ ಎಮರ್ಜನ್ಸಿ ಕೇಸೊಂದು ಹಾಜರಿತ್ತು. ಆತ್ಮಹತ್ಯೆಗಾಗಿ ಪ್ರಯತ್ನಿಸಿ ಸಫಲನಾಗದೆ ಉಳಿದ ವ್ಯಕ್ತಿಯೊಂದು ಮೇಜಿನ ಮೇಲೆ ಜೀವಚ್ಛವವಾಗಿ ಬಿದ್ದಿತ್ತು. ಅರ್ಧ ಕತ್ತರಿಸಿದ್ದ ಕಂಠನಾಳದಿಂದ ಉಸಿರು ಭೋರ್ಗರೆದು ಬರುತಿತ್ತು. ರಕ್ತ ಚಿಮ್ಮಿ ಹರಿದು ಮೈ ತೊಯ್ದು ಹೆಪ್ಪುಗಟ್ಟಿತ್ತು. ಧೃಡಾಂಗನಾದ ವ್ಯಕ್ತಿ ಪ್ರಜ್ಞಾಹೀನನಾಗಿದ್ದ.

...ಗಂಡಾಗಿ ಹುಟ್ಟಿ..........ಛೀ!

ಆಗಲೇ ಆಪರೇಷನ್ನಿಗಾಗಿ ಎಲ್ಲ ತಯಾರಿಯೂ ನಡೆದಿತ್ತು. ಇನ್ನು ಕೈ ಹಚ್ಚುವುದೊಂದು ಬಾಕಿ. ಅಘೋರ ಕ್ಷಣಕಾಲ ನಿಟ್ಟಿಸಿನೋಡಿದ. ವಿವೇಕಕ್ಕೂ ಮನಸ್ಸಿಗೂ ಹೋರಾಟ ಆರಂಭವಾಯಿತು.

"ಹೇಗೂ ವ್ಯಕ್ತಿ ಸಾವನ್ನು ಬಯಸಿದ್ದಾನೆ. ಅಂದಮೇಲೆ ಇವನ ರಿಪೇರಿ ಏಕೆ?"

"ವಿಧಿಯ ಕೈವಾಡದಿಂದ ಉಳಿದು ನಿನ್ನ ಉಡಿಗೆ ಬಿದ್ದಮೇಲೆ ನೀನು ಆಪದ್ಬಾಂಧವನಾಗು."

"ಯಾವುದು ಸರಿ? ಅಘೋರ ಯೋಚಿಸುತ್ತಾ ಒಂದು ಗಳಿಗೆ ನಿಂತ. ಮನದಲ್ಲಿ ಕಹಿಭಾವನೆ ಬೇರೂರಿ ಮೈಯಲ್ಲೆಲ್ಲಾ ನಂಜಿನ ಛುರಿ ಹರಿದಾಡಿದಂತಾಯಿತು. ಅಘೋರ ತುಸು ಬೆಚ್ಚಿದ. ಮೈನಸು ಕಂಪಿಸಿತು. ಭಾರವಾದ ಹೃದಯವನ್ನು ಹೊರಲಾರದೆ ಹೊತ್ತುನಿಂತ. ಬೆನ್ನಿನ ಮೇಲೆ ಮೃದು ಘಾತವೊಂದು ಬೀಳುತ್ತಲೂ ಯೋಚನೆಯಿಂದ ವಿಮುಖನಾಗಿ ಹಿಂತಿರುಗಿ ನೋಡಿದ. ಸ್ವಲ್ಪ ನಿಧಾನಿಸಿ ಒಳಬಂದಿದ್ದ ಮದನ್ ಹಿಂದೆ ನಿಂತಿದ್ದ.

"ಮದನ್, ನೀನು ಬಂದದ್ದು ಒಳ್ಳೆಯದಾಯಿತು. ಇಂದು ನನ್ನ ಮನಸ್ಸಿಗೇಕೋ ಸಮಾಧಾನವಿಲ್ಲ, ದಯಮಾಡಿ ನೀನೇ ನೋಡಿಕೊಳ್ಳಪ್ಪಾ." ಎನ್ನುತ್ತಾ ಹೊರಟೇಹೋದ. ಉತ್ತರಕ್ಕೂ ನಿರೀಕ್ಷಿಸಲಿಲ್ಲ. ಅಲ್ಲಿಯ ಸಿಬ್ಬಂದಿಯೊಡನೆ ಮದನ್ ಅವನು ಹೊರಟು ಹೋಗುವುದನ್ನೇ ಬೆರಗುಗಣ್ಣುಗಳಿಂದ ನೋಡುತ್ತಾ ನಿಂತು ಬಿಟ್ಟ.

ಅಘೋರ ಹೊರಬಂದ ಮೇಲೆ ಕಣ್ಣುಗಳನ್ನು ಗಡಿಯಾರದ ಮೇಲೆ ಹೊರಳಿಸಿದ. ಹೊತ್ತು ಹನ್ನೆರಡರ ಅಂಚನ್ನು ದಾಟಿ ಮುಂದುವರಿದಿತ್ತು. ಕಾಲುಗಳು ಯಾರ ಆದೇಶವನ್ನೂ ಕಾಯದೆ ಮುಂದುವರಿದುವು. ಅಘೋರ ಕೊಠಡಿಯನ್ನು ಸೇರಿದ. ಮೇಜಿನ ಮೇಲೆ ಊಟ ಕಾದಿತ್ತು. ಅತ್ತ ಗಮನ ಕೊಡದೆ ಬಾಗಿಲನ್ನು ಮುಚ್ಚಿಕೊಂಡು ಕುರ್ಚಿಯ ಮೇಲೆ ಕುಕ್ಕರಿಸಿದ.

ಮನಸ್ಸು ತಿರಸ್ಕಾರದಿಂದ ಮೂದಲಿಸಿತು. ಮೇಜಿನ ಮೇಲಿದ್ದ ಪತ್ರಿಕೆ ಪುಸ್ತಕಗಳು ಅಣಕಿಸಿದುವು. ವಿಧಿ ವಿಕಟಾಟ್ಟಹಾಸದಿಂದ ನಕ್ಕಿತು. ಅಘೋರ ಎರಡೂ ಕೈಗಳಿಂದ ತಲೆಯನ್ನು ಭದ್ರವಾಗಿ ಹಿಡಿದುಕೊಂಡ. ಗಾಳಿಯ

ಹೊಡೆತದಿಂದ ಮುಚ್ಚಿದ್ದ ಬಾಗಿಲು ಧಡಾರನೆ ತೆಗೆದುಕೊಂಡಿತು.

ಹೊರಗಡೆಯಿದ್ದ ಬೀದಿ ನಾಯಿಯೊಂದು ತುತ್ತು ಅನ್ನಕ್ಕಾಗಿ ಬಾಲ ಅಲ್ಲಾಡಿಸುತ್ತಾ ನಿಂತುಕೊಂಡಿತ್ತು. ಅದರ ಕಣ್ಣುಗಳಲ್ಲಿ ಹೊರಹೊಮ್ಮು ತಿದ್ದ ಹಿರಿಯಾಸೆ ಈಟಿಯಂತೆ ಇರಿಯಿತು. ಅಘೋರ ಕ್ಷಣಕಾಲ ಕಣ್ಮುಚ್ಚಿ ಕೊಂಡ. ಬುಸುಬುಸು ಸದ್ದು ಕೇಳುತ್ತಲೂ ಕಣ್ತೆರೆದ. ನಾಲಿಗೆಯನ್ನು ಇಳಿಬಿಟ್ಟು ಬಿಸಿಲ ಬೇಗೆಗೆ ಏದುತ್ತಾ ನಿಂತಿತ್ತು ಅದು.

ಹತ್ತಾರು ನಾಯಿಗಳು ಆಸ್ಪತ್ರೆಯನ್ನು ಸೇರಿಕೊಂಡಿದ್ದು ಅಲ್ಲಿರುವವ ರಿಂದ ತುತ್ತು ಗಳಿಸಿ ಕಾರಿಡಾರಿನಲ್ಲಿ ಮಲಗಿ ಯಾರ ಅಭ್ಯಂತರವೂ ಇಲ್ಲದೆ ಜೀವನ ಯಾತ್ರೆಯನ್ನು ಸುಸೂತ್ರವಾಗಿ ಕಳೆಯುತಿದ್ದುವು. ದುಡಿಮೆಯ ಕಷ್ಟವಿಲ್ಲ. ರೋಗಾದಿಗಳ ಭಾದೆಯಿಲ್ಲ. ಮನೆಮಠಗಳ ಹೊರೆಯಿಲ್ಲ. ಋತು ಮಾಸದಲ್ಲಿ ರಾಸಲೀಲೆಯಾಡಿ ಸ್ವೇಚ್ಛೆಯಾಗಿ ವಂಶಾಭಿವೃದ್ಧಿಗೊಳಿಸುವ ಅವು ನಮಗಿಂತ ಎಷ್ಟೋ ಸುಖಿಯಲ್ಲವೇ ? ನಮಗೆ ಬೇಕಾದುದು ಒಂದೂ ಇಲ್ಲ. ಬೇಡವಾದುದು ಎಲ್ಲಾ ಉಂಟು. ಮನಸ್ಸು ಥೂತ್ಕರಿಸಿತು. ಅದನ್ನು ಗದರಿಸಿ ಓಡಿಸಿ ಬಾಗಿಲು ಮುಚ್ಚಿಕೊಂಡು ಶೌಚದ ಮನೆಗೆ ಹೋಗಿ ಕೈಕಾಲು ತೊಳೆದು ಮುಖ ಮಜ್ಜನ ಮಾಡಿ ಊಟಕ್ಕೆ ಕುಳಿತ. ಮನೆಯಿಂದ ಬಂದ ಊಟ ರುಚಿಯಾಗಿತ್ತು. ಇಂದೇನೋ ಅಪರೂಪವಾಗಿ ಸಮಯಕ್ಕೆ ಸರಿಯಾಗಿ ಊಟಮಾಡಲು ಅವಕಾಶವಾಗಿತ್ತು. ನೆಮ್ಮದಿಯಿಂದ ಉಣಹತ್ತಿದ. ನಾಲ್ಕು ತುತ್ತು ಉಂಡಿರಲಿಕ್ಕಿಲ್ಲ. ಟೆಲಿಫೋನಿನ ಟಂಟಣಿನಾದ ಕರೆನೀಡಿತು. ಅಲ್ಲಿಂದಲೇ ರಿಸೀವರ್ ಎತ್ತಿಕೊಂಡ. ಆ ಕಡೆಯಿಂದ ರತನನ ದನಿ ಕೇಳಿ ಬಂತು. ಮೊಟ್ಟ ಮೊದಲೇ ಅವನೆಂದ "ಕ್ಷಮಿಸು ಅಘೋರ್."

ಇದೆಂಥಾ ಮಾತು ? ಮೊಟ್ಟ ಮೊದಲೇ ಹಾಗೆನ್ನುವುದೇ ? ಅಘೋರ ತವಕದಿಂದ ಕೇಳಿದ "ಏನಪ್ಪಾ, ಅಂಥಾದ್ದೇನು ?"

"ಏನಾದರೂ ಇದ್ದೀತು. ಮನಸ್ಸಿಗೆ ಹಚ್ಚಿಕೊಳ್ಳಬೇಡ."

"ಹಾಗೆಂದರೇನು ? ಸರಿಯಾಗಿ ಹೇಳು."

"ಡಾಕ್ಟರ್, ವಿಮಲ್‌ದಾಸರಿಗೆ ಮೈಚೆನ್ನಾಗಿಲ್ಲ. ಎಮರ್ಜನ್ಸಿ ವಾರ್ಡಿನಲ್ಲಿದ್ದಾರೆ. ತಕ್ಷಣ ಹೊರಟು ಬಾ."

"ಏನಾಗಿದೆ ಡಾಕ್ಟರ್ ?" ಅಘೋರ ಗಾಬರಿಯಿಂದ ಕೂಗಿದ.

ಟೆಲಿಫೋನಿನ ಬಾಯಿಕಟ್ಟಿತು. ಏನಿರಬಹುದೆಂದು ಯೋಚಿಸು ವುದರೊಳಗಾಗಿ ಕರೆಗಂಟೆ ಬಾರಿಸಿತು ಥನ್! ಥನ್! ಥನ್! ಫ್ಲ್ಯಾಷ್ ಲೈಟು ಹತ್ತಿ ಕೊಠಡಿಯ ನಂಬರನ್ನು ತೋರಿಸಿತು. ಕತ್ತೆತ್ತಿ ನೋಡಿದ. ಎಮರ್ಜನ್ಸಿ ವಾರ್ಡ್!

ರಾಣೀ ಜಗತ್ತಾರಿಣಿಯ ತುರ್ತು ಕರೆ!

ಅಘೋರ ತಟ್ಟೆಯನ್ನತ್ತ ತಳ್ಳಿ ಒಂದೇ ಉಸುರಿಗೆ ದೌಡಾಯಿಸಿದ. ಎಮರ್ಜೆನ್ಸಿ ವಾರ್ಡಿಗೆ ತಲುಪಬೇಕಾದರೆ ಐದು ನಿಮಿಷ ಹಿಡಿಯಿತು. ಬಿರು ಗಾಳಿಯಂತೆ ಒಳನುಗ್ಗಿದ. ಇನ್ನೂ ಮನೆಗೆ ಹೋಗದೆ ಉಳಿದ ಡಾಕ್ಟರು ಗಳೆಲ್ಲಾ ಆಕಡೆ ಈಕಡೆಗಳಿಂದ ಓಡೋಡಿ ಬಂದರು. ಆಪರೇಶನ್ನಿನ ಥಿಯೇ ಟರಿನಿಂದ ಔಷಧಿಗಳ ಟ್ರೇಗಳು ಧಾವಿಸಿ ಬಂದುವು. ಬೇಕುಬೇಕಾದ ಸಲ ಕರಣೆಗಳೂ ಓಡೋಡಿ ಬಂದವು.

ಅಘೋರ ವಾರ್ಡನ್ನು ಮುಟ್ಟುವುದರೊಳಗಾಗಿ ಬೇಕು ಬೇಕಾದ ಸೂಜಿ ಮದ್ದನ್ನು ಚುಚ್ಚಿಯಾಗಿತ್ತು. ಚಿಕಿತ್ಸೆ ಅವ್ಯಾಹತವಾಗಿ ನಡೆಯುತಿತ್ತು. ಮದನ್ ಎದೆಯನ್ನು ನೀವುತಿದ್ದ. ಎಲ್ಲರ ನೆರವಿನಿಂದ ವಿಮಲ್‌ದಾಸ್ ಉಸಿರಾಡಿದನಾದರೂ ಅಲುಗುವಂತಿರಲಿಲ್ಲ. ಅವನಿಗೆ ಎದೆ ನೋವು ಕಾಣಿಸಿ ಕೊಂಡೊಡನೆಯೇ ಅತ್ತೆ ಸೊಸೆಯರು ಆಸ್ಪತ್ರೆಗೆ ಕರೆತಂದಿದ್ದರು. ಅದೃಷ್ಟ ವಶಾತ್ ಸಹಾಯವೂ ಆ ಕ್ಷಣ ಒದಗಿತ್ತು.

"ನೀವು ತಕ್ಷಣ ಕರೆತರದಿದ್ದಿದ್ದರೆ ಅಪಾಯವಿತ್ತು."

ರತನನೆನ್ನುತ್ತಲೂ ನಂದಾದೇವಿ ಸಮಾಧಾನದ ಉಸಿರು ಬಿಟ್ಟಳು. ಅಘೋರ ನಾಡಿ ಹಿಡಿದಿದ್ದ. ಅರವಿಂದಳ ಕಣ್ಣುಗಳಲ್ಲಿ ಗಾಬರಿ ಮಿಂಚು ತಿತ್ತು.

ಮೂರು ದಿನಗಳ ಪರ್ಯಂತ ವಿಮಲ್‌ದಾಸನನ್ನು ಅಲುಗಿಸಲಾಗದಿದ್ದು ದರಿಂದ ಎಮರ್ಜನ್ಸಿ ವಾರ್ಡಿನಲ್ಲಿ ಉಳಿದ. ಹಗಲೂ ರಾತ್ರಿ ಡಾಕ್ಟರುಗಳು ನೀಡಿದ ಸಹಕಾರದಿಂದ ವಿಮಲ್‌ದಾಸ್ ಚೇತರಿಸಿಕೊಂಡರೂ ಹೃದಯ ದುರ್ಬಲನಾಗಿತ್ತು. ವಾರ್ಡು ಬದಲಾಯಿಸಿ ಚಿಕಿತ್ಸೆಗಾಗಿ ಆಸ್ಪತ್ರೆಯಲ್ಲಿ ಉಳಿಸಿ ಕೊಂಡ ರತನ್.

ಅಘೋರ ತಿಲೋತ್ತಮನನ್ನೂ ಕರೆತಂದು ತಂದೆಯೊಂದಿಗೆ ವಾರ್ಡಿ

ನಲ್ಲಿಟ್ಟುಕೊಂಡು ಡಾ|| ಘನಶ್ಯಾಮರ ಚಿಕಿತ್ಸೆಗೊಳಪಡಿಸಿದ. ಕೆಲ ದಿನ ಇಸುಬು ಬಾಡಿದರೂ ಕೆಲವು ದಿನ ಮರುಕಳಿಸುತಿತ್ತು. ಅರವಿಂದಾ ಮಗುವಿನ ಸ್ಥಿತಿಯನ್ನು ನೋಡುನೋಡುತಿದ್ದಂತೆ ಅರೆ ಹುಚ್ಚಳಾದಳು. ಡಾ|| ಘನ ಶ್ಯಾಮ್ ಅವಳನ್ನು ಸೈಕಾಲಜಿಸ್ಟರ ಬಳಿಗೆ ಕರೆದೊಯ್ಯುವುದು ಲೇಸು ಎಂದು ಸಲಹೆ ಕೊಟ್ಟರು.

ಕಳೆದೆರಡು ತಿಂಗಳಿನಿಂದ ವಿಮಲ್‌ದಾಸ್ ಆಸ್ಪತ್ರೆಯಲ್ಲಿಯೇ ಇದ್ದಾನೆ. ಹೃದ್ರೋಗ ಪೂರ್ಣ ಗುಣವಾಗದಿದ್ದರೂ ಮೈ ಚೇತನ ಪೂರ್ಣವಾಗಿತ್ತು. ಮೊಮ್ಮಗ ಬಳಿಯಲ್ಲಿದ್ದುದರಿಂದ ಸಂಸಾರವೇ ಅಲ್ಲಿತ್ತು. ತಿಲೋತ್ತಮನಿಗಷ್ಟೇ ಅಲ್ಲದೆ ಡಾಕ್ಟರುಗಳಿಗೂ ವಿಮಲ್‌ದಾಸ್ ತಾತನಾದ. ಏರುಪೇರಿಲ್ಲದಂತೆ ಹೊತ್ತು ಸಾನಂದದಿಂದ ಉರುಳಿತು. ವಿಮಲ್‌ದಾಸ್ ಉಲ್ಲಾಸ ಭರಿತ ನಾಗ ತೊಡಗಿದ.

ಅಂದು ಅಘೋರ ಮನೆಮುಟ್ಟಿದಾಗ ಇಳಿ ಹೊತ್ತಾಗಿತ್ತು. ತಿಲೋ ತ್ತಮ ತನ್ನ ಮೋಟಾರು ಗಾಡಿಯಲ್ಲಿ ಕುಳಿತು ಅಂಗಳದಲ್ಲೆಲ್ಲಾ ನಡೆಸಿಕೊಂಡು ಅದರಲ್ಲಿ ಪೂರ್ಣ ತನ್ಮಯನಾಗಿದ್ದ. ಅವನ ಆಟ ಪಾಠದಲ್ಲೂ ಆಸಕ್ತಿ ತೋರದೆ ಅರವಿಂದಾ ಒಬ್ಬಳೇ ಒಳಗಡೆ ಕುಳಿತುದುದನ್ನು ನೋಡುತ್ತಲೂ ಹೃದಯ ಭಾರವಾಯಿತು. ತಿಲೋತ್ತಮ ಹಿಂದೆಯೇ ಓಡಿಬಂದು ತಂದೆಯನ್ನು ಅಪ್ಪಿ ಕೊಂಡು–"ಅಪ್ಪಾ! ಅಪ್ಪಾ! ನನಗೆ ಐಸ್‌ಕ್ರೀಂ ಬೇಕು." ದನಿ ಗೋಗರೆಯಿತು.

ನುಡಿ ಕೇಳಿ ಗಾಬರಿಯಿಂದ ಅಂದಳು ಅರವಿಂದಾ "ಬೇಡ ತಿಲೋ, ಹವೆ ತಂಡಿಯಿದೆ. ನಿನ್ನ ಮೈಗದು ಆಗುವುದಿಲ್ಲ."

ಆದರೂ ಬಿಡದೆ ತಿಲೋತ್ತಮ ಕಾಡಹತ್ತಿದ. ಮಾರಾಟಗಾರನನ್ನು ಮುಂದೆ ಹೋಗದಂತೆ ತಡೆ ಹಿಡಿದು ಬಂದಿದ್ದ ಅವನ ಕಣ್ಣುಗಳಲ್ಲಿ ಆಸೆ ತಾನೇ ತಾನಾಗಿತ್ತು. ಒಂದೇ ಸಮನೆ ಐಸ್‌ಕ್ರೀಮಿಗಾಗಿ ಗೋಗರೆಯತೊಡಗಿದ– ತಿಲೋತ್ತಮ.

ಅಘೋರ ಮಗನನ್ನು ಮುದ್ದಿಟ್ಟು ಒಲ್ಮೆಯಿಂದ–"ನಿನಗೆ ಕ್ಯಾಡ್ ಬರೀಸ್ ಚಾಕಲೇಟ್ ಕೊಡಿಸುವೆ. ಐಸ್‌ಕ್ರೀಂ ಬೇಡ ತಿಲೋ"

ಮಗು ಕೇಳಲಿಲ್ಲ. ಅರವಿಂದಳಿಗಾಗಿ ಅವನನ್ನು ಒಪ್ಪಿಸಬೇಕಾದರೆ ಸಾಕು ಸಾಕಾಯಿತು ಅಘೋರನಿಗೆ. ಮುದ್ದು ಗೈದು ಹೇಗೋ ಹಾಗೆ ಒಪ್ಪಿಸಿ

ಅವನು ಕೇಳಿದ ಚಾಕಲೇಟ್ ಕೊಡಿಸಿದಮೇಲೆ ತಿಲೋತ್ತಮ ತನ್ನ ಮೋಟಾರಿನ ಕಡೆ ಗಮನಕೊಟ್ಟ. ಅಘೋರ ಸ್ನಾನಗೃಹಕ್ಕೆ ಹೋಗಿ ಮುಖಮಜ್ಜನ ಮಾಡಿಕೊಂಡು ಬಂದಾಗಲೂ ಅರವಿಂದಾ ಅನ್ಯಮನಸ್ಕಳಾಗಿ ಸೋಫಾದ ಮೇಲೆ ಕುಳಿತೇ ಇದ್ದಳು. ಅಘೋರ ನಿತ್ಯವಿಧಿಗಳನ್ನು ಮುಗಿಸಿ ಕೊಂಡು ಬಂದು ಬಳಿಯಲ್ಲಿ ಕುಳಿತು–"ಈಗ ಎಲ್ಲಾದರೂ ಹೊರಗಡೆ ಹೋಗೋಣವೇ ಅರೂ ?"

"ಬೇಡಪ್ಪಾ." ಎಂದಳು ಅವಳು. ಹುಸಿ ನಗು ಮಿನುಗಿ ಮಾಯ ವಾಯಿತು.

"ಏಕೆ ಅರವಿಂದಾ ?" ದನಿ ಭಾರವಾಗಿತ್ತು.

"ಏಕೋ ಮನಸ್ಸಿಲ್ಲ ನನಗೆ." ಅವಳು ಆಕಳಿಸಿ ಮೈಮುರಿದಳು. ಮಿನಃ ಮಿನುಗುವ ಕಣ್ಣುಗಳ ಹಿಂದೆ ಅವಿತಿದ್ದ ನೋವು ಅಕ್ಷಿಪಟಲದ ಮೇಲೆ ಲಾಸ್ಯ ವಾಡಿತು.

"ಸಿನಿಮಾಕ್ಕೆ ಹೋದರೆ ಬೇಸರಕಳೆಯಬಹುದು."

"ಎಲ್ಲೂ ಬೇಡ."

"ಅರೂ."

"ನಾನಿಂದು ಮಾವನವರನ್ನು ನೋಡಲಿಲ್ಲ."

"ಅವರೀಗ ಚೆನ್ನಾಗಿದ್ದಾರೆ."

ಸ್ವಲ್ಪ ಹೊತ್ತು ಮೌನವಾವರಿಸಿತು. ಅನಂತರ ಅಘೋರನೇ ಮೌನ ಮುರಿದ.

"ಈಗ ತಿಲೋ ದೊಡ್ಡವನಾಗಿದ್ದಾನೆ. ನೀನು ಪುನಃ ಲೆಕ್ಚರರ್ ಆಗು ವುದು ಲೇಸು. ಹೀಗೆ ಸದಾ ಒಬ್ಬಳೇ ಕುಳಿತು ಮಾಡುವುದೇನು ? ಜೀವನ ದಲ್ಲಿ ಏನೋ ಬರುತ್ತೆ ಏನೋ ಹೋಗುತ್ತೆ. ಅದಕ್ಕೆಲ್ಲಾ ಯೋಚಿಸಬಾರದು."

ಬಹಳ ಹೊತ್ತು ಸುಮ್ಮನೆ ಕುಳಿತಿದ್ದು ಅನಂತರ ಉತ್ತರ ನೀಡಿದಳು "ಮೊದಲೊಮ್ಮೆ ತಿಲೋ ಸರಿಹೋಗಲಿ."

ಮಾತು ಮುಗಿಯುವುದರೊಳಗಾಗಿ ಬಾಗಿಲ ಕರೆಗಂಟೆ ಕರೆ ನೀಡಿತು. ಅಘೋರ ಎದ್ದುಹೋದ. ರೋಗಿಗಳ ತಂಡ ಅವನಿಗಾಗಿ ಕಾಯುತಿತ್ತು. ಅವರಿಂದ ತಪ್ಪಿಸಿಕೊಳ್ಳಲು ಮನೆಗೆ ತನ್ನ ಹೆಸರನ್ನು ಹಚ್ಚಿರಲಿಲ್ಲ ಅಘೋರ.

ಮೊದಲಿನಿಂದ ಇದ್ದ ವಿಮಲ್‌ದಾಸ್ ಎಂಬ ನಾಮಫಲಕ ಮಾತ್ರ ಇತ್ತು. ಆದರೂ ಜನರಿಂದ ತಪ್ಪಿಸಿಗೊಳ್ಳದಾದ.

೦ ೦ ೦ ೦

ಒಮ್ಮೆ ಅಘೋರ ಅರವಿಂದಳೊಂದಿಗೆ ಸೈಕಾಲಜಿಸ್ಟ್ ಡಾ|| ಗಜಾನನರ ಬಳಿಗೆ ಹೋದ. ಉದ್ದನೆಯ ಬಿಳಿಯ ನಿಲುವಂಗಿ ಧರಿಸಿದ ಅವರು ಬೀರುವಿನ ಬಳಿ ನಿಂತುಕೊಂಡು ಒಳಗಿನ ಪುಸ್ತಕಗಳಲ್ಲಿ ಒಂದನ್ನು ಆರಿಸಿಕೊಳ್ಳುವುದರಲ್ಲಿದ್ದರು. ಹೆಜ್ಜೆಯ ಸದ್ದು ಕೇಳಿ ಡಾಕ್ಟರು ಇತ್ತ ತಿರುಗಿದರು. ಅವರ ಎತ್ತರವಾದ ನಿಲುವು ಅವರ ವ್ಯಕ್ತಿತ್ವಕ್ಕೊಂದು ಶೋಭೆಯನ್ನು ನೀಡಿತ್ತು.

ಅವರ ಮುಗುಳ್ನಗು ಸ್ವಾಗತ ನೀಡಿತು. ಅಘೋರ ದಂಪತಿಗಳು "ನಮಸ್ಕಾರ" ಎಂದರು. ಡಾಕ್ಟರು ಪ್ರತಿ ವಂದಿಸಿ ಕುಳಿತು ಕೊಳ್ಳಲು ಹೇಳಿ ತಾವೂ ಕುಳಿತರು. ಅಘೋರ ಪತ್ನಿಯ ಪರಿಚಯ ಮಾಡಿಕೊಟ್ಟ–"ಅವಳು ಈಚೀಚೆಗೆ ದುರ್ಬಲವಾಗುತ್ತಿರುವುದರೊಂದಿಗೆ ದಿನೇ ದಿನೇ ಅನ್ಯಮನಸ್ಕಳಾಗುತಿದ್ದಾಳೆ. ನಮ್ಮ ಔಷಧ ಟಾನಿಕ್ಕುಗಳೊಂದೂ ಕೆಲಸ ಮಾಡುತ್ತಿಲ್ಲ."

ಅವನು ವಿಷಯವನ್ನು ಮುಂದಿಟ್ಟಾಗಲೂ ಅದರಲ್ಲಿ ಅವಳು ಆಸಕ್ತಿ ತಳೆಯಲಿಲ್ಲ. ದೃಷ್ಟಿ ಎಡಗಡೆ ಗೋಡೆಯ ಮೇಲಿದ್ದ ಕ್ಯಾಲೆಂಡರಿನತ್ತ ಹರಿದಿತ್ತು. ಮೂವರು ಮುದ್ದು ಮಕ್ಕಳನ್ನೊಳಗೊಂಡ ಅದು ಅತ್ಯಂತ ಆಕರ್ಷಣೀಯವಾಗಿತ್ತು.

...ಪುಟ್ಟ ಪುಟಾಣಿಗಳೆಂದರೆ ಯಾರ ಮನಸ್ಸು ಅರಳಲಿಕ್ಕಿಲ್ಲ ?....

ಡಾ|| ಗಜಾನನರು ಅವಳನ್ನೇ ನಿಟ್ಟಿಸಿ ನೋಡುತ್ತಾ ಕೇಳಿದರು "ನಿಮಗೆ ನಿದ್ದೆ ಬರುತ್ತದೆಯೇ ?"

ಗಮನವನ್ನು ಬೇರೆಡೆಗೆ ಹರಿಸಿದ್ದ ಅವಳು ಕೇಳಿಸಿಕೊಳ್ಳಲಿಲ್ಲ. ಪುನಃ ಅದೇ ಪ್ರಶ್ನೆ ಹಾಕಿದರು ಗಜಾನನ. ಅಘೋರ ಅವಳ ಗಮನ ಸೆಳೆದುಕೊಂಡು ಡಾಕ್ಟರ ಪ್ರಶ್ನೆಯನ್ನು ಮುಂದಿಟ್ಟ,

"ಒಮ್ಮೊಮ್ಮೆ ಚೆನ್ನಾಗಿ ಬರುತ್ತೆ. ನಿದ್ದೆಯಿಲ್ಲದ ದಿನಗಳೇ ಹೆಚ್ಚು."

"ನೀವು ಪುನಃ ಲೆಕ್ಚರರ್ ಆಗಿ ಕೆಲಸಮಾಡುವ ಇಚ್ಛೆ ಹೊಂದಿದ್ದೀರಾ ?"

"ಈಗೀಗ ಆ ಆಸೆಯೂ ಉಳಿಯಲಿಲ್ಲ."

ಮಾತಿನ ಮಧ್ಯೆಯೂ ಅವಳ ದೃಷ್ಟಿ ಕ್ಯಾಲೆಂಡರಿನತ್ತ ಹರಿಯುತ್ತಲೇ

ಇತ್ತು. ಅದನ್ನು ಗಮನಿಸಿದ ಅವರು ಎದ್ದು ನಿಂತು ಅಂದರು "ಸ್ವಲ್ಪ ಕೆಲಸ ವಿದೆ. ಇನ್ನಷ್ಟು ಹೊತ್ತಿನೊಳಗಾಗಿ ಬರುವೆ."

ಅಘೋರ ಆಗಬಹುದೆಂದು ತಲೆಯಲ್ಲಾಡಿಸಿ ಸೂಚಿಸಿದ. ಅವರು ಪಕ್ಕದ ಕೋಣೆಗೆ ಹೋಗಿ ಸ್ವಿಚ್ ಒಂದನ್ನು ಒತ್ತಿದರು. ಅದು ಅವರ ಕೊಠಡಿಯಲ್ಲಿದ್ದ ಟೇಪ್ ರಿಕಾರ್ಡರ್‌ಗೆ ಸಂಬಂಧಪಟ್ಟದ್ದು. ಅದನ್ನು ಯಾರಿಗೂ ಕಾಣಿಸದಂತೆ ಅಳವಡಿಸಲಾಗಿತ್ತು. ಒಳಮನಸ್ಸನ್ನು ತೆರೆದು ಮುಂದಿಡಲಾರದ ರೋಗಿಗಳ ಗುಟ್ಟನ್ನು ಅರಿಯಲು ಹೊಂಚುಹಾಕಿ ತಿಳಿಯುವ ಸಂಚು ಅದು. ಇವರಿಗರಿಯದಂತೆಯೇ ಅದು ತನ್ನ ಕಾರ್ಯಕಲಾಪ ದಲ್ಲಿ ನಿರತವಾಗಿತ್ತು.

ಅವಳ ಗಮನವನ್ನು ಸೆಳೆದುಕೊಳ್ಳಲು ಅಘೋರ ಪ್ರಯತ್ನಿಸಿದ.

"ಅದೇನು ಮಹಾ ಚೆನ್ನಾಗಿದೆಯೆಂದು ಅದನ್ನೇ ನೋಡುತ್ತಿದ್ದಿ ?"

"ಮಕ್ಕಳಿಗಿಂತ ಮಿಗಿಲಾದದ್ದು ಇನ್ನೇನುಂಟು ?"

"ಆಶಾದೃಷ್ಟಿಯಿಂದ ನೋಡುವುದಕ್ಕಿಂತ ಕಲಾದೃಷ್ಟಿಯಿಂದ ನೋಡುವುದು ಒಳ್ಳೆಯದು ಅರವಿಂದಾ. ಆ ಬೀರುವೊಳಗಿನ ಸಾಲಾಗಿನ ಆನೆಗಳ ಕಲಾಕೃತಿಯನ್ನು ನೋಡು. ಅವೆಷ್ಟು ಸೊಗಸಾಗಿವೆ ?"

ಆಶಾದೃಷ್ಟಿ ಇಲ್ಲದೆ ಹೋದರೆ ಕಲಾದೃಷ್ಟಿ ಎಲ್ಲಿಂದ ಬಂದೀತು ?"

ಅನಂತರ ಮೌನವಾವರಿಸಿತು. ಅವಳು ಎದ್ದುಹೋಗಿ ಕಿಟಕಿಯ ಬಳಿ ಬೀರುವಿನ ಬಳಿ ಸುತ್ತಾಡಿಬಂದು ಕುಳಿತು ಕೊಂಡಳು. ಎಡಗೈ ಶಿರಸ್ಸಿನ ಭಾರವನ್ನು ಹೊತ್ತಿತ್ತು. ಪುನಃ ಅನ್ಯಮನಸ್ಕತೆ ಮೂಡಿ ಕಿಟಕಿಯಾಚೆ ದಿಟ್ಟಿಯನ್ನು ಚೆಲ್ಲಿಕೊಟ್ಟು ಏನನ್ನೂ ನೋಡದೆ ಸುಮ್ಮನೆ ಕುಳಿತಳು. ಡಾಕ್ಟರ್ ಗಜಾನನ ಒಮ್ಮೆ ಬಾಗಿಲಲ್ಲಿ ಕಟಕಟ ಸದ್ದು ಮಾಡಿ ಒಳ ಬಂದು ಕುಳಿತುಕೊಂಡರು. ಅವರ ನೋಟ ಅವಳನ್ನು ಸೂಕ್ಷ್ಮವಾಗಿ ಪರೀಕ್ಷಿಸ ಹತ್ತಿತು.

"ನಿಮಗೆ ಎಷ್ಟು ಮಂದಿ ಮಕ್ಕಳಿದ್ದಾರೆ ?" ಗಜಾನನ ಕೇಳಿದರು.

ಅನ್ಯಮನಸ್ಕಳಾಗಿದ್ದ ಅರವಿಂದಾ ಮಾತಾಡಲಿಲ್ಲ. ಗಜಾನನ ಪುನಃ ಅದೇ ಪ್ರಶ್ನೆಹಾಕಿದರು. ಅವರ ನೋಟ ಒಮ್ಮೆ ಅಘೋರನನ್ನೂ ಇನ್ನೊಮ್ಮೆ ಅರವಿಂದಳನ್ನೂ ಪರೀಕ್ಷಿಸುತಿತ್ತು. ಮತ್ತೊಮ್ಮೆ ಹೊರಬಿದ್ದ

ಅದೇ ಪ್ರಶ್ನೆ ಕಿವಿಯ ಮೇಲೆ ಬೀಳುತ್ತಲೂ ಚಾಟಿಯ ಏಟು ಬಿದ್ದ ಕುದುರೆ ಯಂತೆ ಮಿಡುಕಿಬಿದ್ದ ಅವಳು ಸ್ವಲ್ಪ ಹೊತ್ತು ಮುಖಮಡಿಯಾಗಿ ಕುಳಿತು ಕೊಂಡಳು. ಕೆನ್ನೆಗಳು ಒಮ್ಮೆಂದೊಮ್ಮೆಲೇ ರಂಗೇರಿ ಕಣ್ಣುಗಳಲ್ಲಿ ಕೆಂಪು ಮೂಡಿತು. ಮೈಯಲ್ಲಿ ನಸು ಕಂಪನದ ಅಲೆ ಹರಿದಾಡಿದಂತಾಯಿತು.

"ಏಕೆ ಉತ್ತರವಿಲ್ಲ ? ನನ್ನ ಬಳಿ ಸಂಕೋಚವೇ ?"

ಅರವಿಂದಾ ತಕ್ಷಣ ಎದ್ದುಹೋಗಿ ಕಿಟಕಿಯ ಬಳಿ ನಿಂತುಕೊಂಡಳು. ಯಾವುದೋ ಕಾಣದ ಕೈ ಹೃದಯವನ್ನು ಸಾಸಿರ ಸಾಸಿರ ಪಟ್ಟು ಹಿಸುಕಿತು. ಕಣ್ಣಂಚಿನಲ್ಲಿ ಕಂಬನಿಗಳು ತುಳುಕಾಡಿದುವು. ತನ್ನನ್ನೇ ತಾನು ಹತೋಟಿ ಯಲ್ಲಿಟ್ಟುಕೊಳ್ಳಲು ಪ್ರಯತ್ನಪಟ್ಟರೂ ಸಫಲವಾಗಲಿಲ್ಲ. ತನುಮನಗಳು ಮಿಡುಕಿದುವು. ಎರಡೂ ಕೈಗಳಿಂದ ಮುಖ ಮುಚ್ಚಿಕೊಂಡಳು. ಅಘೋರ ಎದ್ದುಹೋಗಿ ಬೆನ್ನಿನ ಮೇಲೆ ಕೈಯಿಟ್ಟು ಕರೆದ "ಬಾ ಅರವಿಂದಾ ನಿನಗಾಗಿ ಡಾಕ್ಟರು ಕಾಯುತಿದ್ದಾರೆ."

ಕಣ್ಣುಗಳನ್ನು ತೀಡಿಕೊಂಡು ಅರವಿಂದಾ ಹಿಂದಿರುಗಿಬಂದು ಕುಳಿತು ಕೊಂಡಳು. ಅವಳ ಚಲನವಲನಗಳು ಯಾಂತ್ರಿಕವಾಗಿ ನಡೆಯುತಿದ್ದುವು.

"ನಿಮ್ಮ ಮದುವೆಯಾಗಿ ಎಷ್ಟು ವರ್ಷಗಳಾದುವು ?"

"ಹನ್ನೊಂದು, ಡಾಕ್ಟರ್."

"ನೀವೇಕೆ ಲೆಕ್ಚರರ್ ಆಗಿ ಮುಂದುವರಿಯಲು ಇಷ್ಟಪಡುತ್ತಿಲ್ಲ ?"

"ಏನೋ ಮನಸ್ಸಿಲ್ಲ."

"ಏಕೆ ಎಂಬುದನ್ನು ತಿಳಿಯಬಹುದೇ ?"

ಸಜಲನಯನೆಯಾದ ಅವಳು ಬಾರಿಬಾರಿಗೂ ಅದೇ ಕ್ಯಾಲೆಂಡರಿನ ಮೇಲೆ ದಿಟ್ಟಿ ಹೊರಳಿಸುತಿದ್ದುದನ್ನು ಡಾಕ್ಟರು ಸೂಕ್ಷ್ಮವಾಗಿ ಗಮನಿಸು ತಿದ್ದರು.

"ಈ ದಿನ ನಮ್ಮನ್ನು ಹೋಗಗೊಡಿರಿ. ಇನ್ನೊಮ್ಮೆ ಬರುವೆ." ಎಂದ ಅವಳು ಉತ್ತರಕ್ಕೂ ನಿರೀಕ್ಷಿಸದೆ ಕೈಮುಗಿದು ಹೊರಡಲನುವಾದಳು. ವಿಧಿ ಯಿಲ್ಲದೆ ಡಾ॥ ಗಜಾನನ ಅಪ್ಪಣೆ ನೀಡಿ "ಆಗಲಿ, ಇನ್ನೊಮ್ಮೆ ಸಾವಕಾಶವಾಗಿ ಮಾತಾಡೋಣ" ಎಂದರು.

ಅಘೋರ ಕರಗಳನ್ನು ಜೋಡಿಸಿ ಅರವಿಂದಳೊಡನೆ ಅಲ್ಲಿಂದ ಹೊರಟ.

ಅನಂತರ ಅರವಿಂದಾ ಅಲ್ಲಿಗೆ ಹೋಗಲೊಪ್ಪದುದರಿಂದ ಎರಡನೆಯ ಭೇಟಿ ಮುಂದುವರಿಯಿತು. ಎರಡು ಮೂರು ತಿಂಗಳ ನಂತರ ಅಘೋರ ಡಾ| ಗಜಾನನರ ಬಳಿಗೆ ಹೋದಾಗ ಅವರು ಹೊರಗೆಲ್ಲೋ ಹೋಗಿದ್ದರು. ಇಬ್ಬರೂ ಅವರ ನಿರೀಕ್ಷಣೆಯಲ್ಲಿ ಸ್ವಲ್ಪ ಹೊತ್ತು ಕುಳಿತುಕೊಂಡರು. ಅವಳ ಗಮನವೆಲ್ಲಾ ಮತ್ತೆ ಅದೇ ಕ್ಯಾಲೆಂಡರಿನಲ್ಲಿ ಕೇಂದ್ರೀಕೃತವಾಗಿತ್ತು. ಇದ್ದಕ್ಕಿದ್ದಂತೆ ಅವಳು ಕಳಾಹೀನಳಾಗತೊಡಗಿದಳು.

ಅವಳ ಗಮನವನ್ನು ಬೇರೆಡೆಗೆ ಸೆಳೆಯಲು ಅಘೋರ ಮಾತು ಆರಂಭಿಸಿದ.

"ಇಲ್ಲಿಂದ ಹಿಂದಿರುಗುವಾಗ ಆಸ್ಪತ್ರೆಗೆ ಹೋಗಿ ಮನೆಗೆ ಹೋಗೋಣವೇ? ಅಪ್ಪ ಕಾದಿರುತ್ತಾರೆ."

ಸಂಚು ನಿಷ್ಪ್ರಯೋಜನವಾಯಿತು. ಅವಳ ಕೆನ್ನೆಗಳಲ್ಲಿ ರಂಗು ಮೂಡಿ ಕಣ್ಣುಗಳಲ್ಲಿ ಧಾರಾಕಾರವಾಗಿ ನೀರು ಸುರಿಯಹತ್ತಿತು. ಹೃದಯ ದುಃಖ ದೂಟಿಯಾಯಿತು. ತನ್ನನ್ನು ತಾನು ಹತೋಟಿಯಲ್ಲಿಟ್ಟುಕೊಳ್ಳಲಾರದೆ ತತ್ತರಿಸಿದಳು—ಅವಳು. ಡಾ|| ಗಜಾನನ ಒಳಬರುತ್ತಲೂ ಎದ್ದು ನಿಂತು ಅಘೋರ ಕರಜೋಡಿಸಿದ. ಅರವಿಂದಾ ಅವರನ್ನು ಗಮನಿಸದೆ ಮುಖ ಮಡಿಯಾಗಿ ಕುಳಿತುಕೊಂಡಿದ್ದಳು.

"ಏಕೆ ಹೀಗಿದ್ದೀರಿ ಮಿಸೆಸ್ ಅಘೋರ್ ?" ಡಾಕ್ಟರು ಕೇಳಿದರು.

ಅರವಿಂದಾ ಬೆಚ್ಚಿಬಿದ್ದು ಕಂಬನಿಯನ್ನು ತೀಡಿಕೊಂಡಳು. ಪುನಃ ಅದೇ ಪ್ರಶ್ನೆ ಹೊರಬಿತ್ತು. ಏರಿಳಿಯುವ ಹೃದಯವನ್ನು ಎರಡೂ ಕೈಗಳಿಂದ ಒತ್ತಿಹಿಡಿದು ಏನೂ ಇಲ್ಲವೆಂಬಂತೆ ತಲೆಯನ್ನು ಅಲುಗಿಸಿ ಸೂಚಿಸಿದಳು.

ಮೊದಲ ಭೇಟಿಯ ದಿನ ಟೇಪ್ ರೆಕಾರ್ಡರ್ ಮೂಲಕ ತಿಳಿದುಬಂದ ದಂಪತಿಯರ ಸಂಭಾಷಣೆ ಮತ್ತು "ನಿಮಗೆಷ್ಟು ಮಂದಿ ಮಕ್ಕಳಿದ್ದಾರೆ ?" ಎಂಬ ಪ್ರಶ್ನೆಗೆ ಉತ್ತರ ಬಾರದುದು ಡಾಕ್ಟರ ಗಮನದಲ್ಲಿತ್ತು. ಅವರು ಇಂದು ಅದೇ ಪ್ರಶ್ನೆ ಹಾಕಿದರು.

ಪ್ರಶ್ನೆ ಕಾದ ಸೀಸದಂತೆ ಕಿವಿಯ ಮೇಲೆ ಬಿತ್ತು. ಅರವಿಂದಾ ಧಿಗ್ಗನೆದ್ದು ಹೊರಟುಬಿಟ್ಟಳು. ವಿದ್ಯುತ್ ಶಾಕ್ ಬಡಿದವರಂತೆ ಮೈ ಸೆಟೆದುಕೊಂಡು ಕೊಂಡು ರಕ್ತಮಯವಾಗಿ ಅವಳು ಹೊರಟುಹೋದ ರೀತಿಯನ್ನು ನೋಡಿ

ಡಾಕ್ಟರೆಂದರು "ಮನೋವ್ಯಥೆಯೇ ಸಕಲ ರೋಗಕ್ಕೂ ಕಾರಣ. ಮಾನಸಿಕ ಘಾಸಿಯಿಂದ ಬುದ್ಧಿ ವಿಕಲ್ಪವಾಗುತ್ತದೆ. ಈಗಲೇ ಅವರ ಮನಸ್ಸಿಗೆ ಇತರ ಆಕರ್ಷಣೆ ನೀಡಿ ಮನದಲ್ಲಿನ ಅಶಾಂತಿಯನ್ನು ಬಡಿದೋಡಿಸಲಾರಿರಾದರೆ ಬುದ್ಧಿ ವಿಕಲ್ಪವಾಗಲಿಕ್ಕೂ ಸಾಕು." ಅವರ ದನಿ ಮೆಲ್ಲನೆ ಹೊರಬಿತ್ತು.

ಅಘೋರನ ಮೈಯಲ್ಲಿ ಚಿಲ್ಲನೆ ಕಂಪನದ ಅಲೆ ಹರಿದಾಡಿಹೋಯಿತು. ಅಘೋರ ಆವರಿಗೆ ವಂದಿಸಿ ಲಗುಬಗನೆ ಅರವಿಂದಳನ್ನು ಹಿಂಬಾಲಿಸಿದ. ಮನೆ ಸೇರುವಷ್ಟರಲ್ಲಿ ಇಳಿಹೊತ್ತಾಗಿತ್ತು. ಅಂಗಳದಲ್ಲಿ ಸೈಕಲ್ ಸವಾರಿ ಮಾಡುತಿದ್ದ ಶಿಲೋತ್ತಮ ಓಡೋಡಿ ಬಂದು ಮುದ್ದಾದ ಕಣ್ಣುಗಳನ್ನರಳಿಸಿ ಕೇಳಿದ "ಅಪ್ಪಾ, ನಾನೂ ಬರಲೇ ?"

ಅಘೋರ ಎರಡೂ ಕೈಗಳಿಂದ ಮಗುವನ್ನಪ್ಪಿ ಕೇಳಿದ "ಎಲ್ಲಿಗೆ ಮಗೂ ?"

"ಆಸ್ಪತ್ರೆಗೆ. ನಾವು ತಾತನನ್ನು ನೋಡಲಿಲ್ಲವಲ್ಲಾ ?" ಕಣ್ಣುಗಳಲ್ಲಿ ಆಸೆ ಮಿನುಗುತಿತ್ತು. ಮತ್ತೊಮ್ಮೆ ಗೋಗರೆದ "ನಾನೂ ಬರುವೆ."

ಅರವಿಂದಾ ಅದ್ಯಾವುದನ್ನೂ ಗಮನಿಸದೆ ಹೋಗಿ ಹಾಸಿಗೆಯ ಮೇಲೆ ಅಡ್ಡಾದಳು. ಕಾಂತಿಹೀನವಾದ ಮುಖದಲ್ಲಿ ಕಣ್ಣುಗಳಿಗೆ ರಂಗೇರಿತ್ತು. ಬೆವರಿನ ಕಣಗಳು ತುಂತುರು ತುಂತುರಾಗಿ ಹಣೆಯಮೇಲೆ ಮೂಡಿದುವು. ಹೃದಯಾಂತರಾಳದಿಂದ ನೋವನ್ನು ಮುಖ ಪ್ರತಿಬಿಂಬಿಸುತಿತ್ತು. ಅಘೋರ ಮಗನನ್ನು ಮುದ್ದಿಟ್ಟು ಸಂತೈಸಿ ಮರುದಿನ ಕರೆದೊಯ್ಯುವುದಾಗಿ ಹೇಳಿ ಅರವಿಂದಳಲ್ಲಿಗೆ ಬಂದ. ಅನಿರೀಕ್ಷಿತವಾದ ಅವಳ ಸ್ಥಿತಿ ಅಂತರಾಳದಲ್ಲಿನ ಅಂತಃಕರಣವನ್ನು ಮಂಜಿನಂತೆ ಕರಗಿಸಿಬಿಟ್ಟಿತು. ಗರಬಡಿದವನಂತೆ ಕ್ಷಣಕಾಲ ನಿಂತು ಅನಂತರ ಕೇಳಿದ "ಏನಾಯಿತು ಅರವಿಂದಾ !"

"ಏನೂ ಇಲ್ಲ" ತಲೆಯಲ್ಲಾಡಿಸುತ್ತಾ ಅವಳೆಂದಳು. ಎದೆಯಾಳದಿಂದ ನಿಟ್ಟುಸಿರೊಂದು ಹೊರಹೊಮ್ಮಿತು.

"ನಿಜವಾಗಿಯೂ ಹೇಳು. ನನ್ನಲ್ಲಿ ಮರೆ ಮಾಚುವುದೇಕೆ ?" ದನಿಯಲ್ಲಿ ದುಗುಡವಿತ್ತು. ಹೃದಯ ಏರಿಳಿಯಿತು. ತುಸು ತಡೆದು ಪುನಃ ಕೇಳಿದ, "ಅರವಿಂದಾ, ನನ್ನಲ್ಲಿ ಮುಚ್ಚು ಮರೆಯಿಲ್ಲವಷ್ಟೆ ?"

"ಸ್ವಲ್ಪ ಆಯಾಸ. ಮತ್ತೇನೂ ಇಲ್ಲ. ನೀವು ಆಸ್ಪತ್ರೆಗೆ ಹೊರಡಿ.

ನಿಮಗೆ ಹೊತ್ತಾಯಿತು." ಎಂದಳು. ದನಿಯಲ್ಲಿ ನಸು ಕಂಪನವಿತ್ತು.

ಅಘೋರ ಗಡಿಯಾರದ ಕಡೆ ನೋಡಿದ. ಹೊತ್ತು ಮೀರಿತ್ತು. ನಂದಾ ದೇವಿಯನ್ನು ಕುರಿತು "ಅಮ್ಮಾ, ಇಂದು ನಾನು ಯಾರಿಗೂ ಕಾಯುವಂತಿಲ್ಲ. ಹೊತ್ತಾಗಿಬಿಟ್ಟದೆ. ಅಪ್ಪನನ್ನು ನಾನೇ ನೋಡಿಬರುವೆ. ನೀವು ನಾಳೆ ಹೋಗಿರಿ," ದನಿಯಲ್ಲಿ ಅವಸರವಿತ್ತು.

ಯಾರೂ ಪ್ರತಿಯಾಡಲಿಲ್ಲ. ಅಘೋರ ಭಾರವಾದ ಹೃದಯದಿಂದ ಆಸ್ಪತ್ರೆಯ ದಾರಿ ಹಿಡಿದ. ದಾರಿ ಮಿಂಚಿನಂತೆ ಸಾಗಿತು. ಆಸ್ಪತ್ರೆಯನ್ನು ಹೊಕ್ಕಿದವನೇ ನೇರವಾಗಿ ತಂದೆಯ ವಾರ್ಡಿಗೆ ಕಾಲಿಟ್ಟ. ಮಗನಾಗಮನ ವನ್ನು ನಿರೀಕ್ಷಿಸುತಿದ್ದ ಕಣ್ಣುಗಳು ಒಮ್ಮೆಲೇ ಪ್ರಜ್ವಲಿಸಿದುವು. ಎರಡೂ ಕೈ ಗಳಿಂದ ಮಗನ ಕೈಗಳನ್ನು ಅದುಮಿ ಹಿಡಿದುಕೊಂಡು ವಿಮಲ್‌ದಾಸ್– "ನೀನೊಬ್ಬನೇ ಬಂದೆಯಾ ? ಅದೇಕೆ ಇಷ್ಟೊತ್ತು ಮಗೂ ?"

"ಅರವಿಂದಳನ್ನು ಡಾಕ್ಟರಲ್ಲಿಗೆ ಕರೆದೊಯ್ದುದರಿಂದ ಹೊತ್ತಾಯಿತು. ಆದ್ದರಿಂದಲೇ ಯಾರನ್ನೂ ಕರೆತರಲಾಗಲಿಲ್ಲ."

"ನನ್ನನ್ನು ಬಹಳ ಹೊತ್ತು ಕಾಯಸಿಬಿಟ್ಟೆ ಅಘೂ."

"ಏಕೆ ಅಪ್ಪಾ, ಏನಾದರೂ ಬೇಕಾಗಿತ್ತೆ ?"

"ನಿನಗೆ ಕೆಲಸ ಕೆಲಸ ಕೆಲಸದಕಡೆಯೇ ಗಮನ ಹೆಚ್ಚು. ಹೀಗಾದರೆ ಹೇಗೆ ಅಘೂ ? ಮೊದಲು ನಿನ್ನವರ ಕ್ಷೇಮ ನೋಡಿಕೊ. ಅರವಿಂದಳ ಮನಸ್ಸು ಬಹು ಸೂಕ್ಷ್ಮ. ಮಗುವಿನಂತೆ ನೋಡಿಕೊ–ಅವಳನ್ನು: ನಂದಾ ತಿಲೋತ್ತಮರೂ ಅಷ್ಟೆ. ನಿನ್ನನ್ನು ಬಿಟ್ಟರೆ ಯಾರಿದ್ದಾರೆ ಅವರಿಗೆ ? ನಿನ್ನ ಪ್ರಥಮ ಕರ್ತವ್ಯ ಮನೆಯವರ ಕ್ಷೇಮ. ಉಳಿದ ಹೊತ್ತನ್ನು ಇತರರಿಗೆ ಮೀಸಲಿಡು ಅಘೂ." ಎದೆಯಾಳದಿಂದ ಹರಿದು ಬಂತು–ದನಿ.

...ಇಂದೇಕೆ ಹೀಗೆ...

ತಂದೆಯ ಇಂದಿನ ಹೊಸ ರೀತಿಯನ್ನು ನೋಡಿ ಇದೇನೆಂದು ಯೋಚಿಸು ವುದರೊಳಗಾಗಿ ಪುನಃ ವಿಮಲ್‌ದಾಸ್–"ಅದೇಕೆ ಇಂದು ನನ್ನನ್ನು ಬಹಳ ಹೊತ್ತು ಕಾಯಿಸಿಬಿಟ್ಟೆ ? ಅಘೂ, ಆಗಿನಿಂದ ನಿನ್ನ ಹಾದಿ ನೋಡಿ ನೋಡಿ ಕಣ್ಣುಗಳೇ ಮಂಜಾದುವು." ಮುಖದಲ್ಲಿ ಮೆಲುನಗೆ ಮೂಡಿ ಮಾಯ ವಾಯಿತು.

"ನನಗೆ ಗೊತ್ತಾಗಲಿಲ್ಲವಲ್ಲಾ ಅಪ್ಪಾ."

"ಹೋಗಲಿ ಬಿಡು. ಇನ್ನಾದರೂ ಅಪ್ಪಣೆಕೊಡು."

ತಂದೆಯ ಹಿಡಿತ ಇನ್ನಷ್ಟು ಬಿಗಿಗೊಂಡಿತು. ಏಕಿರಬಹುದೆಂದು ಯೋಚಿಸುವುದರೊಳಗಾಗಿ ಕತ್ತು ಹೊರಳಿತು. ಅಘೋರ ಸ್ತಂಭೀಭೂತನಾದ.

ಭಗವಾನ್ ಶ್ರೀಕೃಷ್ಣ ಪರಮಾತ್ಮನ ಸಂದೇಶವನ್ನು ಜಗತ್ತಿಗೆ ಮಧುರ ವಾಣಿಯಲ್ಲಿ ಸಾರುತಿತ್ತು—ಮೇಜಿನ ಮೇಲಿದ್ದ ಟ್ರಾನ್ಸಿಸ್ಟರ್.

ಅಥ ಚೈನಂ ನಿತ್ಯಜಾತಂ ನಿತ್ಯಂ ವಾ ಮನ್ಯಸೇ ಮೃತಮ್ ।
ಕಥಾಪಿ ತ್ವಂ ಮಹಾಬಾಹೋ ನೈವಂ ಶೋಚಿತುಮರ್ಹಸಿ ॥

ಅಧ್ಯಾಯ

೨೯

ಡಾ|| ಅಘೋರ ತನ್ನ ವಿಶ್ರಾಂತಿ ಕೊಠಡಿಯಲ್ಲಿ ಒಬ್ಬನೇ ಕುಳಿತು ಕೊಂಡಿದ್ದಾನೆ. ಬಾಳಿನ ಜಂಝಾಟದಲ್ಲಿ ದುಃಖದ ಬೀಡಾದ ಮನಸ್ಸು ಭೀಕರ ಸಮಸ್ಯೆಗಳನ್ನು ಎದುರಿಸಲಾರದೆ ತುಸು ತತ್ತರಿಸಿದೆ. ಧ್ಯೇಯ ಧೋರಣೆ ಗಳು ವಿವೇಕದೊಡನೆ ಹೋರಾಟಕ್ಕೆ ಕತ್ತಿ ಮಸೆಯತೊಡಗಿವೆ. ಮೇಲಾಗಿ, ಅವಿಶ್ರಾಂತವಾಗಿ ದುಡಿದ ಮೈ ಬಳಲಿ ಬೆಂಡಾಗಿತ್ತು.

ಹಾಗೇ ಕಣ್ಮುಚ್ಚಿ ಒರಗು ಕುರ್ಚಿಯ ಮೇಲೆ ಒರಗಿದ. ಕ್ಷಣಕ್ಷಣ ಗಳು ಉರುಳಿದುವು. ಗಳಿಗೆಗಳಿಗೆಗಳು ನಿಮಿರಿ ನಡೆದುವು. ಕಣ್ತೆರೆಯಲಾರದೆ ಹಾಗೇ ಒರಗಿದ್ದಾನೆ. ಸುಖಸಂತೋಷಗಳು ಬಿಂಕದ ರಮಣಿಯರಂತೆ ದೂರದೂರ ಸರಿಯುತ್ತಿವೆ. ಒಲವುದುಂಬಿದ ಅಂತರಾಳದಲ್ಲಿ ದುಃಖ ದೂಟಿ ತಾನೇ ತಾನಾಗಿ ಬಸರುತ್ತಿದೆ. ಭೂತ ವರ್ತಮಾನಗಳನ್ನು ಬದಿಗಿಟ್ಟು ಯೋಚಿಸಿದ—ಮುಂದೇನು? ಸುಖಸಂತೋಷ ಒಲವುಗಳ ಬಿಂಕದರಾಣಿಯ ಅಪ್ಪುಗೆ ಹೇಗೆ? ಅವಳಿಲ್ಲದ ಜೀವನವಾದರೂ ಏಕಿರಬೇಕು?

ಕಿಟಕಿಯ ಬಾಗಿಲಮೇಲೆ ಕಾಗೆಯೊಂದು ಕುಳಿತು ಕರ್ಕಶವಾಗಿ ಕೂಗಿತು. ಕಾ! ಕಾ! ಅಘೋರ ಸಿಟ್ಟಿನಿಂದ ಕಣ್ತೆರೆದ. ಅದು ಇತ್ತಲೇ ನೋಡುತ್ತಾ ಮತ್ತೆ ಕೂಗಿತು. ಅಘೋರ ಎದ್ದು ಗದರಿಸಿ ಓಡಿಸಿ ಬಂದು ಕುಳಿತುಕೊಂಡ. ಮರುಕ್ಷಣದಲ್ಲಿ ಅದು ಬಂದು ಅಲ್ಲೇ ಕುಳಿತು ಕರ್ಕಶ ದನಿ ಯಲ್ಲಿ ಕೂಗತೊಡಗಿತು. ಮತ್ತೊಮ್ಮೆ ಅಲ್ಲಿಂದಲೇ ಗದರಿಕೊಂಡರೆ ಅದು ಹೋಗಬೇಕೆ? ಇನ್ನೊಮ್ಮೆ ಎದ್ದು ಓಡಿಸಲಾರದೆ ಹಾಗೇ ಕುಳಿತುಕೊಂಡ. ಆದರದು ಸುಮ್ಮನಿರಬೇಕೆ? ಎಡೆಬಿಡದೆ ಕೂಗತೊಡಗಿತು. ಅಘೋರ ಸಿಟ್ಟಿನ ಭರದಲ್ಲಿ ಎದ್ದು ಕಿಟಕಿಯ ಸನಿಹಕ್ಕೆ ಹೋಗುತ್ತಲೂ ಅದು ಬಿರ್ರನೆ ಹಾರಿಹೋಯಿತು. ಆದರೆ ಮರುಗಳಿಗೆಯಲ್ಲಿಯೇ ಅದು ಮತ್ತೆ ಪ್ರತ್ಯಕ್ಷ ವಾಗಿ ತನ್ನ ಕೆಲಸ ಮುಂದುವರಿಸಿತು.

...ಅದು ಕಾಗೆಯೆ? ಅಲ್ಲ, ಅಲ್ಲ, ವಾಯಸ ರೂಪಿ ವಿಧಿ!...

ಅದು ಪ್ರಯತ್ನಪೂರ್ವಕವಾಗಿ ಅಣಕಿಸುವಂತೆ ತೋರಿ ಅಘೋರ ಎರಡೂ ಕೈಗಳಿಂದ ತಲೆಯನ್ನು ಒತ್ತಿಹಿಡಿದುಕೊಂಡ. ತಲೆಯಲ್ಲಿ ಪಟಪಟ ಸಿಡಿತ. ಮನದಲ್ಲಿ ಏನೋ ಒಂದು ಬಗೆಯ ಕಿನಿಸಿಗೆ. ಮಾಡಬೇಕಾದ ಕೆಲಸ–ಅಲ್ಲ–ಮಾಡಿ ಮುಗಿಸಲಾಗದ ಕೆಲಸ. ತಾನು ಏನೂ ಮಾಡಲಾರೆನೆನ್ನಿಸಿದಾಗ ಮೈ ನಸುಕಂಪಿಸಿತು. ಹಾಗೇ ಕಣ್ಮುಚ್ಚಿ ಕುಳಿತುಕೊಂಡ.

ವಾಯಸ ರೂಪಿ ವಿಧಿ ಒಂದೇ ಸಮನೆ ಅರಚಿ ಅಣಕಿಸುತಿತ್ತು–ಎದೆಯ ಬೇಗೆಗೆ ತುಪ್ಪ ಹೊಯ್ಯುವಂತೆ. ಎದ್ದು ಓಡಿಸಲೂ ಇಷ್ಟವಾಗದೆ ಕುಳಿತುಕೊಂಡ. ಧೈರ್ಯ–ಧೋರಣೆಗಳು ಆಸೆ–ಆಕಾಂಕ್ಷೆಗಳು ನವಿರು ಸೀರೆಯುಟ್ಟ ಬಿಂಕದ ರಮಣಿಯಂತೆ ಸುತ್ತಮುತ್ತ ಸುಳಿಸುಳಿದು ನಕ್ಕುನಲಿದುವು. ಎದೆಯಾಳದಿಂದ ನಿಟ್ಟುಸಿರೊಂದು ಹೊರಹೊಮ್ಮಿತು...ಪರದೇಶಕ್ಕೆ ಹೋಗಿ ಬರಬೇಕೆಂದು ಯೋಚಿಸುತಿದ್ದ ದಿನಗಳು ಚಿತ್ತಭಿತ್ತಿಯಲ್ಲಿ ಸುಳಿದಳಿದುವು. ವಿಮಲ್‌ದಾಸನ ಅನಾರೋಗ್ಯದಿಂದಾಗಿ ಅದನ್ನೆಂದೋ ಸ್ಮರಣೆಯಿಂದ ಅಳಿಸಿ ಹಾಕಿದ್ದ. ಹೋಗಲಿ ಎಂದರೆ ಅರವಿಂದಳೂ ಹೀಗಾಗಬೇಕೆ ? ಮರಿಯಾನೆಯಂಥ ತಿಲೋತ್ತಮ ?...ಯೋಚನೆಯ ಭರದಲ್ಲಿ ಮನಸ್ಸಾಗರವು ಕದಡಿ ಬಗ್ಗಡವಾಯಿತು. ಅದರೊಂದಿಗೆ ಕಾಗೆಯ ದನಿಯೂ ಕರ್ಕಶವಾಗಿ ಕಿವಿಯ ಮೇಲೆ ಬೀಳುತಿತ್ತು. ಅಘೋರ ತಡೆಯಲಾರದೆ ಸಿಟ್ಟಿನಿಂದ ಎದ್ದು ಕಿಟಕಿಯ ಬಳಿಗೆ ಹೋಗುತ್ತಲೂ ಅದು ಹೇಳದೆ ಕೇಳದೆ ಪಲಾಯನ ಬೆಳೆಸಿತು.

...ಕ್ರೂರ...ವಿಧಿ...

ಬಾಗಿಲಲ್ಲಿ ಕಟಕಟ ಸದ್ದು ಕೇಳಿಬಂದಿತು. “Yes please” ಎಂದ ಅಘೋರ. ಜವಾನ ಒಳಬಂದು ಕೆಲವು ಕಾಗದಪತ್ರಗಳನ್ನು ಮೇಜಿನಮೇಲಿಟ್ಟು ಹೋದ. ಎಲ್ಲವನ್ನೂ ಒಂದೊಂದಾಗಿ ಒಡೆದು ಓದಿದ. ಅವುಗಳಲ್ಲಿ ಹತ್ತು ಸಾವಿರ ಮೈಲಿಯಾಚೆಯಿಂದ ಬಂದ ಕಾಗದವೊಂದಿತ್ತು. ......ಆಧುನಿಕ ಜಗತ್ತಿನಲ್ಲಿ ವಿಜ್ಞಾನದಾಹ ದಿನೇ ದಿನೇ ಹೆಚ್ಚುತ್ತಿದೆ. ಅದಕ್ಕನುಸಾರವಾಗಿ ವಿಜ್ಞಾನವೂ ಕ್ಷಣೇಕ್ಷಣೇ ಮುಂದುವರಿಯುತ್ತಿದೆ. ಶಸ್ತ್ರ ಚಿಕಿತ್ಸಾ ಪರಿಣಿತ ವೈದ್ಯರನ್ನು ಸಂದಿಗ್ಧ ಪರಿಸ್ಥಿತಿಗೆ ಸಿಲುಕಿಸುತಿದ್ದ ವೈದ್ಯಕೀಯ ಸಾವು-ಭೌತಿಕ ಸಾವು ಪ್ರಶ್ನೆಯ ಬಗ್ಗೆ ಈಗೀಗ ಅಂತಿಮ ನಿರ್ಧಾರಕ್ಕೆ ಬರಲು ಸಾಧ್ಯವಿದೆ. ಭೌತಿಕವಾಗಿ ಸತ್ತ ವ್ಯಕ್ತಿಯ ಮೆದುಳು ಪುನಃ ದೇಹದ

ಅಂಗಾಂಗಗಳ ಚಲನವಲನಗಳನ್ನು ನಿಯಂತ್ರಿಸುವುದು ಅಸಂಭವವೆಂದು ಖಚಿತಪಟ್ಟಲ್ಲಿ ಹೃದಯದ ಚಲನೆ ಇನ್ನೂ ಉಳಿದಿದ್ದರೂ ವ್ಯಕ್ತಿ ಸತ್ತಿರುವ ನೆಂದು ಘೋಷಿಸಿ ಅವನ ಶರೀರದ ಉಪಯುಕ್ತವಾದ "ಜೀವಂತ ಅಂಗ" ಗಳನ್ನು ಬೇರ್ಪಡಿಸಿ ಪ್ರಾಣಾಪಾಯ ಸ್ಥಿತಿಯಲ್ಲಿರಬಹುದಾದ ರೋಗಿಗಳನ್ನುಳಿಸಲು ಸದುಪಯೋಗಪಡಿಸಿಕೊಳ್ಳಬಹುದಾದ ಅವಕಾಶ ಒದಗಿಸಿಕೊಳ್ಳಲು ಇನ್ನು ಬಹಳ ಕಾಲವಿಲ್ಲ.

ಭೌತಿಕವಾಗಿ ಸತ್ತ ಶರೀರದಲ್ಲಿರುವ ಹೃದಯ ಶ್ವಾಸಕೋಶ ಪಿತ್ತ ಕೋಶವೇ ಮೊದಲಾದ ಅಂಗಾಂಗಳನ್ನು ಆಧುನಿಕ ವೈದ್ಯಕೀಯ ಯಂತ್ರೋಪಕರಣಗಳ ಮೂಲಕ ಸುಸ್ಥಿತಿಯಲ್ಲಿಡುವುದು ಸಾಧ್ಯವಿದೆ.

"ಪ್ರಿಯ ಗೆಳೆಯಾ," ನನ್ನ ಪತ್ನಿ ಒಮ್ಮೆ ಕೇಳಿದಳು "ಒಬ್ಬರಿಂದೊಬ್ಬರಿಗೆ ಅಂಗಾಂಗಗಳನ್ನು ಕಸಿ ಮಾಡುವುದರಿಂದ ರಕ್ತ ವೀರ್ಯಗಳನ್ನು ಪಡೆಯುವುದರಿಂದ ಮಿಶ್ರ ತಳಿಯಾಗುವುದಿಲ್ಲವೇ ? ಇದು ಪಾಪಕರವಲ್ಲವೇ ?"

ಎಂತಹ ಪ್ರಶ್ನೆ ?

"ನೀನು ಇದಕ್ಕೇನು ಹೇಳುತ್ತೀ ಮಿತ್ರಾ?" ಅವಳ ಪ್ರಶ್ನೆಗೆ ಉತ್ತರ ಹೇಳುವಾಗ ನಾನು ಹಾಗೇ ಯೋಚಿಸಿದೆ. "ಮಿಶ್ರ ತಳಿಯಾಗುವುದು ಸಹಜ. ಇದು ಪಾಪಕರ ಎಂಬುದನ್ನು ಒಪ್ಪಿಕೊಳ್ಳುವುದೂ ನ್ಯಾಯವೇ. ಆದರೆ ಇವೆರಡನ್ನೂ ಮೀರಿದ ಪ್ರಶ್ನೆ ಬದುಕು."

ಅವಳೆಂದಳು "ರಕ್ತದಾನ ಪಡೆಯುವುದರಿಂದ ಎಂಥೆಂಥಹ ಕೀಳು ಮಂದಿಯ ರಕ್ತ ಸೇರಿಹೋಗುತ್ತದೆ? ಆದ್ದರಿಂದ ರಕ್ತ ಪಡೆಯುವವರ ಮತ್ತು ಅವರ ಮುಂದಿನ ಪೀಳಿಗೆಯ ಅನುವಂಶಿಕ ವೀರ್ಯ ತೇಜಸ್ಸುಗಳು ನಷ್ಟ ಹೊಂದಿ ವಂಶ ತೇಜೋಹೀನವಾಗದೇ ?"

ನಿಜವಾಗಿಯೂ ಇದು ಯೋಚಿಸಬೇಕಾದ ವಿಷಯ. ವಂಶದಾತರಿಂದಲೇ ರಕ್ತಪಡೆಯುವುದು ಸಾಧ್ಯವಾದರೆ ಅದು ಕ್ಷೇಮವೇ ಆಯಿತು. ಹಾಗೊಂದುವೇಳೆ ದೊರೆಯದ ಪಕ್ಷದಲ್ಲಿ ಇನ್ನೇನು ಇದ್ದೇ ಇದೆ ಪರರ ರಕ್ತ. ಗೆಳೆಯಾ, ಬದುಕು ಅದಕ್ಕಿಂತಲೂ ಮೀರಿದ್ದು.......

ಅಘೋರ ಹಾಗೇ ಯೋಚಿಸಿದ...ಅನುವಂಶಿಕವಾಗಿ ಬರಬಹುದಾದ ವೀರ್ಯ ತೇಜಸ್ಸುಗಳು ಒತ್ತಟ್ಟಿಗಿರಲಿ, ದೋಷಗಳಿಗೇನು ಮಾಡೋಣ?

ಆನುವಂಶಿಕವಾಗಿ ಬರುವ ದೋಷಗಳನ್ನು ತಡೆಗಟ್ಟಿ ಮಾನವತಳಿಯನ್ನು ಅಭಿವೃದ್ಧಿಗೊಳಿಸುವುದು ಹೇಗೆ? ಹೇಗೆ?? ದೋಷಯುಕ್ತರಿಗೆ ಹೆರಲೇ ಬಾರದೆಂದು ನಿಯಮಗೊಳಿಸಿ ಆರೋಗ್ಯವಂತರಿಗೆ ಅವಕಾಶ ನೀಡಿದರೆ ಶಾರೀರಕವಾಗಿ ಮಾನವ ತಳಿಯನ್ನು ಅಭಿವೃದ್ಧಿಗೊಳಿಸ ಬಹುದು. ಆದರೆ....ಇದು ಸಾಧ್ಯವೇ?

ಬೌದ್ಧಿಕವಾಗಿ ಜನ ಪ್ರಗತಿಯನ್ನು ಸಾಧಿಸುವುದು ಹೇಗೆ? ಒಂದೆಡೆ ಕುರುಡು ಸಂಪ್ರದಾಯಗಳ ಹಾವಳಿ. ಇನ್ನೊಂದೆಡೆ ಜಾತಿ ನೀತಿಗಳ ಹಾವಳಿ, ಮತ್ತೊಂದೆಡೆಬಡವ ಬಲ್ಲಿದರ ಹಾವಳಿ. ಯೋಚಿಸುತ್ತಾಹೋದರೆ ಅವುಗಳಿಗೆ ಕೊನೆ ಮೊದಲುಂಟೇ? ಈ ನ್ಯೂನತೆಗಳೆಲ್ಲಾ ಸರಿಹೋಗದ ಹೊರತು ಜನ ಪ್ರಗತಿ ಸಾಧ್ಯವೇಯಿಲ್ಲ. ನೂರಕ್ಕೋ ಸಾವಿರಕ್ಕೋ ಒಬ್ಬ ಬುದ್ಧಿವಂತನಾದರೆ ಏನು ಸುಖ?...ಬಾಗಿಲ ಬಳಿ ಕಟಕಟ ಸದ್ದಾಗುತ್ತಲೂ ಯೋಚನೆ ತುಂಡು ಗಡಿದು ಗಮನ ಅತ್ತ ಹರಿಯಿತು. 'Yes please' ಎಂದ. ಬಾಗಿಲನ್ನು ತಳ್ಳಿ ಒಳ ಬಂದವನು ಜಾನಕೀರಾಂ.

"ಏನೋ ಒಂದು ಬಗೆಯಾಗಿದ್ದೀಯಲ್ಲ, ಮೈಯಲ್ಲಿ ಚೆನ್ನಾಗಿಲ್ಲವೇ ಡಾಕ್ಟರ್?"

"ಬಾಪ್ಪಾ, ಕುಳಿತುಕೊ." ಎಂದ ಅಘೋರ ಸ್ವಲ್ಪ ತಡೆದು ಪುನಃ— "ಡಾಕ್ಟರ್, ಮೈಗಷ್ಟೇ ಅಲ್ಲ, ಮನಸ್ಸಿಗೂ ಸ್ವಸ್ಥವಿಲ್ಲ."

"ಏನು?"

ಅಘೋರ ಕಿಲಕಿಲನೆ ನಕ್ಕು ಹೇಳಿದ "ಇದು ಜೀವನ."

"ಹೇಗಿದ್ದಾರೆ ಅರವಿಂದಾ?"

'ಯಥಾರೀತಿ."

"ತಿಲೋತ್ತಮ?"

"ಯಥಾಸ್ಥಿತಿ."

"ಗಜಾನನರ ಬಳಿಗೆ ಮತ್ತೊಮ್ಮೆ ಹೋಗಲಿಲ್ಲವೇ?"

"ಅವಳೇಕೋ ಇಷ್ಟಪಡುವುದಿಲ್ಲ."

"ಒಪ್ಪಿಸಿ ನೋಡು."

"ಅಂದಿನಿಂದಲೂ ಹೇಳುತಿದ್ದೇನೆ. ಅವಳು ಮುಂದೂಡುತ್ತಲೇ

ಇದ್ದಾಳೆ. ನನಗೆ ಈಗೀಗ ಏನು ಮಾಡಬೇಕೆಂಬುದೇ ಅರ್ಥವಾಗುವುದಿಲ್ಲ. ತಿಲೋತ್ತಮನಿಗಾಗಿ ಮನೆಯಲ್ಲಿನ ಪ್ರತಿ ವಸ್ತುವನ್ನೂ ಪರೀಕ್ಷಿಸಿದ್ದಾಯಿತು. ನನಗಂತೂ ಅರ್ಥವೇ ಆಗುತ್ತಿಲ್ಲ. ವಿಧಾತ ನನ್ನ ಮೇಲೆ ಸವಾಲು ಹಾಕುತಿದ್ದಾನೆ."

ಜಾನಕೀರಾಂ ಮಾತಿಲ್ಲದೆ ಯೋಚಿಸುತ್ತಾ ಕುಳಿತುಕೊಂಡ.

"ಇಂದು ಕೆಲಸ ಮಾಡುವುದೇ ಬೇಡವಾಗಿದೆ. ಯಾಕೋ ಮನಸ್ಸಿಗೆ ಸಮಾಧಾನವಿಲ್ಲ. ಮನೆಗೆ ಹೋಗೋಣ ಎಂದುಕೊಂಡಿದ್ದೇನೆ."

"ಮನೆಯಲ್ಲಿ ಆರೋಗ್ಯವಿಲ್ಲದ ಮೇಲೆ ಮನಸ್ಸಿಗೆ ಸ್ವಾಸ್ಥ್ಯ ಬರುವುದಾದರೂ ಹೇಗೆ?"

"ನಿಜ ಜಾರ್. ನನಗೆ ಏನಾಗಿದ್ದರೂ ಸಹಿಸಿಕೊಳ್ಳಬಹುದಾಗಿತ್ತು. ಇವರಿಬ್ಬರಿಗೂ ಹೀಗಾಗಿರುವುದು ಎಲ್ಲಿಲ್ಲದ ಸಂಕಟತರುತ್ತದೆ. ನಮ್ಮವರು ಚೆನ್ನಾಗಿದ್ದಿದ್ದರೆ ನನಗೆ ಸ್ವರ್ಗವೇ ಬೇಕಿರಲಿಲ್ಲ. ಜೀವನ ಎಂದರೆ ಹೂವಿಗಿಂತ ಹಗುರ ಎಂದುಕೊಂಡಿದ್ದೆನೇ ಹೊರತು ಈ ಪುಟ್ಟ ಸಂಸಾರ ದೊಡ್ಡ ಹೊರೆಯಾದೀತೆಂದು ನಾನೆಣಿಸಿರಲಿಲ್ಲ." ದನಿ ಎದೆಯಾಳದಿಂದ ಹೊರಬಿತ್ತು.

"ಇದೆಲ್ಲಾ ಏನು ಮಹಾ ವಿಷಯ ಘೋರ್. ಎಂದಾದರೂ ಇವೆಲಾ ನಿವಾರಣೆಯಾಗಲಿವೆ."

"ಅಪ್ಪ ಹೋದರು. ನಮಗೆ ಅದರಲ್ಲಿ ನೋವಿಲ್ಲ. ವಯಸ್ಸಾಗಿತ್ತು. ಅವರು ಸಂಸಾರಕ್ಕೆ ಎಷ್ಟು ಮಾಡಬೇಕೋ ಅಷ್ಟು ಮಾಡಿದ್ದಾರೆ. ನಾವೆಷ್ಟು ಸೇವೆ ಸಲ್ಲಿಸಬೇಕೋ ಅಷ್ಟು ಸಲ್ಲಿಸಿದ್ದೇವೆ. ಅಂದಮೇಲೆ, ಅದರಲ್ಲಿ ಆತ್ಮಸಮಾಧಾನವಿದೆ. ನಾವಿನ್ನೂ ಕಣ್ಣುಬಿಡುವುದರೊಳಗಾಗಿ ಜೀವನ ಕಹಿಯಾದರೆ ಮಾಡುವುದೇನು?"

"ನಿನಗೆ ಗ್ರಹಗತಿಗಳು ಚೆನ್ನಾಗಿಲ್ಲ. ಕಾಲಾನಂತರ ಎಲ್ಲವೂ ಸರಿ ಹೋಗುತ್ತದೆ ಡಾಕ್ಟರ್."

"ಪರವಾಯಿಲ್ಲ. ನೀನೇ ಸುಖಿ. ದೇವರು ನಿನ್ನನ್ನಾದರೂ ಸುಖವಾಗಿಟ್ಟಿರಲಿ."

"ಧನ್ಯವಾದಗಳು. ಕಷ್ಟ ಸುಖ ಯಾರಿಗೇನು ಕಟ್ಟಿಟ್ಟ ಮುಡುಪಲ್ಲ. ಎಲ್ಲರ ಜೀವನದಲ್ಲೂ ಏರುಪೇರುಗಳು ಇದ್ದೇ ಇರುತ್ತವೆ."

"ನಿಜ ಜರ್ಾ."

...ಸ್ವಲ್ಪ ಹೊತ್ತು ಮೌನವಾವರಿಸಿತು...

"ಇನ್ನೊಂದು ವಿಷಯ ನಿನಗೆ ಗೊತ್ತೆ?" ಜಾನಕೀರಾಂ ಮೌನ ಮುರಿದು ಗೆಳೆಯನ ಮನವನ್ನು ಬೇರೆಡೆಗೆ ಸೆಳೆದ.

"ಏನು ?"

"ಡಾ|| ಸೌಮಾರವರ ಗಂಡ ಇನ್ನೊಬ್ಬಳನ್ನು ಮದುವೆಯಾಗಿದ್ದಾನಂತೆ! ಅಘೋರ್."

"ವಿಚಿತ್ರ ಮನುಷ್ಯ."

"ಅವನಿಗಾಗಲೇ ನೂರು ಹೆಣ್ಣುಗಳಾಗಿತ್ತು. ಈ ನೂರೊಂದನೆಯದರಲ್ಲಿ ಏನು ಹೆಚ್ಚುಗಾರಿಕೆ ? ಮದುವೆಯ ಶಾಸ್ತ್ರವೊಂದು ಬೇಕಿತ್ತೆ ? ಶುದ್ಧ ಹಳಿಗೇಡಿ !"

"ಕೈಯಲ್ಲಿ ಅಪಾರವಾದ ಹಣ. ಮೈಯಲ್ಲಿ ಅಪಾರವಾದ ನೆಣ. ಮೇಲಾಗಿ ಗಂಡಸು—ಏನುಮಾಡಿದರೂ ತೀರುತ್ತೆ. ಅವನ ನಡತೆ ಚೆನ್ನಾಗಿಲ್ಲದಿದ್ದುದರಿಂದಲೇ ಸೌಮಾ ತಾಯಿಯೊಂದಿಗೆ ಉಳಿದುದು. ಪಾಪ, ಅವರು ಇದನ್ನೆಲ್ಲಾ ಗುಟ್ಟಾಗಿಟ್ಟಿದ್ದರು."

"ತನ್ನ ಗಳಿಕೆಯನ್ನು ಸೌಮಾಳಿಗೆ ಕೊಡದಿರಲು ಹೂಡಿದ ಆಟ ಇದು. ಇಲ್ಲದಿದ್ದರೆ ಅವನಿಗೇನು ಹೆಣ್ಣುಗಳಿಗೆ ಕಡಿಮೆ? ಕಂಡಕಂಡಲ್ಲೆಲ್ಲಾ ಚಟ ತೀರಿಸಿಕೊಳ್ಳುವ ವ್ಯಕ್ತಿ."

"ಪಾಪ, ಸೌಮಾ ಎಷ್ಟು ಒಳ್ಳೆಯವರು. ಅವರಿಗೆ ಇಂಥಾ ಧೂರ್ತ ಗಂಡ." ದನಿ ದುಗುಡದಿಂದ ಕೂಡಿತ್ತು.

"ಛೀ ! ಅವರೊಂದು ರಮಣೀರತ್ನ !"

ಅಘೋರನ ಎದೆಯಾಳದಿಂದ ಬಿಸಿಯುಸಿರೊಂದು ಮೆಲ್ಲನೆ ತಪ್ಪಿಸಿಕೊಂಡಿತು. ಉಬ್ಬಿದೆದೆಯ ಮೇಲೆ ಕೈ ಕಟ್ಟಿ ಸ್ವಲ್ಪ ಹೊತ್ತು ಯೋಚಿಸಿ "ಜರ್ಾ, ಡಾ|| ಸೌಮಾ ಯಾವುದರಲ್ಲಿ ಕಡಿಮೆ? ಯಾವ ವಿಚಾರ ತೆಗೆದುಕೊಂಡರೂ ಸೌಮಾರವರ ನೂರರ ಒಂದಂಶವೂ ಅವನು ತೂಗಲಾರ. ಅಂದ ಮೇಲೆ, ಹೀಗೂ ಉಂಟೇ ? ಮುತ್ತಿನಂಥ ಎರಡು ಮಕ್ಕಳಿದ್ದಾರೆ. ಇನ್ನೇನು ಬೇಕಾಗಿತ್ತು ಅವನಿಗೆ? ಶುದ್ಧ ಪಶು !"

"ಇದು ಜಗತ್ತು! ಇದು ಸಮಾಜ! ಇದುಃ ಜೀವನ!"

"ನಿಜ ಜರ್ನ್. ಅಷ್ಟೇ ಅಲ್ಲ, ಇಂದು ಈ ವಿಚಾರ ಕೋರ್ಟು ಕಛೇರಿ ಹತ್ತಲಿ ಬೇಕಾದರೆ, ಅವನು ಮಾಡಿದ್ದೇ ಸರಿ ಎನ್ನುತ್ತದೆ ನಮ್ಮ ನ್ಯಾಯ ಸ್ಥಾನ!"

ಇಬ್ಬರ ಮುಖದಲ್ಲೂ ನಗು ಮಿನುಗಿತು. ಇಬ್ಬರೂ ಎದ್ದು ಮನೆಯ ಕಡೆ ಹೆಜ್ಜೆಹಾಕಿದರು. ಆಸ್ಪತ್ರೆಯ ಮೆಟ್ಟಿಲನ್ನು ಇಳಿದು ಅಂಗಳಕ್ಕೆ ಕಾಲಿಡುತ್ತಲೂ ಮುಖದ ಮೇಲಿನ ತುಂತುರು ಬೆವರನ್ನು ಒರಸಿಕೊಳ್ಳುತ್ತಾ ಅಘೋರ ಇಂತೆಂದ "ನನ್ನ ಧ್ಯೇಯ ಅಭಿಲಾಷೆಗಳೆಲ್ಲಾ ಎತ್ತ ಹೋದುವೋ? ನಾನು ಏನೋ ತಿಳಿದುಕೊಂಡಿದ್ದೆ. ನಾನು ಏನೇನೋ ಕಲ್ಪಿಸಿಕೊಂಡಿದ್ದೆ. ಆದರೆ, ಆದುದೆಲ್ಲಾ ಕಲಸುಮೇಲೋಗರ. ನಾನು ಇಷ್ಟೊಂದು ಬೇಸ್ತು ಬೀಳುತ್ತೇನೆಂದು ಎಂದೂ ಯೋಚಿಸಿರಲಿಲ್ಲ." ದನಿ ಭಾರವಾಗಿತ್ತು.

...ನಮಗಿಂತ ಹಿರಿದಾದ ಶಕ್ತಿಯೊಂದಿದೆ...

ಜಾನಕೀರಾಂ ಸ್ವಲ್ಪ ಹೊತ್ತು ಮಾತಾಡಲಿಲ್ಲ. ಭಾರವಾದ ನಿಟ್ಟುಸಿರೊಂದು ಹೊರಹೊಮ್ಮಿತು. ಕವಲುದಾರಿ ಹಿಡಿಯುವಮುನ್ನ ಹೇಳಿದ "ನಾವು ಬಯಸಿದ್ದೆಲ್ಲಾ ಸುಲಭವಾಗಿ ಕೈಗೂಡುವುದಾದಲ್ಲಿ ವಿಧಾತನಿರುವುದಾದರೂ ಏತಕ್ಕೆ? ಎಂದೆಂದೂ ನಮಗಿಂತ ಹಿರಿದಾದ ಶಕ್ತಿ ಇದೆಯೆಂಬುದನ್ನು ನಾವು ನೆನಪಿನಲ್ಲಿಟ್ಟಿರಬೇಕು ಡಾಕ್ಟರ್." ದನಿ ಎದೆಯಾಳದಿಂದ ಹೊರಬಿತ್ತು.

ಭಾರವಾದ ದೇಹವನ್ನು ಹೊರಲಾರದೆ ಹೊತ್ತು ಅಘೋರ ತಲೆಬಾಗಿ ಹೆಜ್ಜೆಹಾಕಿದ. ಯೋಚನೆಯ ಹುಚ್ಚುಹೊಳೆಯಲ್ಲಿ ಮುಳುಗಿ ತೊಳಲಾಡಿದ ಜೀವ ಬಳಲಿತ್ತು. ಅದರೂ, ಯಾವುದೋ ಒಂದು ಅದಮ್ಯ ಶಕ್ತಿ ತನ್ನನ್ನು ನಡೆಸುತ್ತಿದೆಯೆಂಬುದನ್ನು ಮನಸ್ಸು ಒಪ್ಪಿಕೊಂಡಿತ್ತು. ಹಾದಿ ಸಾಗುತಿದ್ದಂತೆ ಯೋಚನೆಯ ಝುರಿಯೂ ಪ್ರವಹಿಸಿತು...ಈಗ ಮನುಷ್ಯ ಯಾವುದರಲ್ಲಿ ಕಡಿಮೆ ವಿಧಾತನಿಗೆ? ಅವನಂತೆಯೇ ಇವನೂ ಸೃಷ್ಟಿಕರ್ತ. ಬುದ್ಧಿಯುಂಟು ವಿದ್ಯೆಯುಂಟು ಶಕ್ತಿಯುಂಟು ಆದರೂ, ನಾವು ವಿಧಿಯ ಕೈಗೊಂಬೆಯೆಂದರೆ ನಾಚಿಕೆಗೇಡಲ್ಲವೇ?...ಮೂದಲಿಸಿತು ಮನಸ್ಸು

ಪ್ರಶ್ನೆಯೇಳುತ್ತಲೂ ಮೆಲುನಗುವೂ ಮಿನುಗಿತು.

"ನಾವು ಬಯಸುವುದೊಂದು ಆಗುವುದು ಇನ್ನೊಂದು. ಹೆಜ್ಜೆ ಹೆಜ್ಜೆಗೂ ವಿಧಿಯ ಹೊಡೆತ. ಹೀಗಾದರೆ ಹೇಗೆ? ಅದಕ್ಕೊಂದು ಇತಿಮಿತಿ ಬೇಡವೆ?" ಮತ್ತೆ ನರಳಿತು ಮನಸ್ಸು.

ಕೆರಳಿ ನಿಂತ ಮನಸ್ಸಿಗೆ ಸಮಾಧಾನ ನೀಡಿತು ಅಂತರಾತ್ಮ–

"ಜೀವನವೆಂದೂ ಹೂವಿನ ಹಾಸಿಗೆಯಲ್ಲ. ಈಸಬೇಕು, ಇದ್ದು ಜೈಸಬೇಕು."

"ಈಸುವಾಗ ಅದುಮುತ್ತಲೇ ಇದ್ದರೆ ಹೇಗೆ ದೇವಾ?"

"ಅದೇ ಜೀವನ ಮಗೂ."

"ಈ ಜೀವನ ಎಷ್ಟು ಘೋರ?"

"ಈಶ್ವರಾರ್ಪಣಮಸ್ತು."

ಅಘೋರ ಮನೆ ಮುಟ್ಟಿದಾಗ ಅರವಿಂದಾ ಹಾಸಿಗೆಯ ಮೇಲೆ ಬೋರಲಾಗಿ ಬಿದ್ದುಕೊಂಡಿದ್ದಳು. ನೋಡಿದವನೇ ಕೋಟನ್ನು ಕಳಚಿಟ್ಟು ಪಕ್ಕದಲ್ಲಿ ಕುಳಿತುಕೊಂಡು ತಲೆಯನ್ನು ನೇವರಿಸಿ 'ಅರವಿಂದಾ' ಎಂದ. ದನಿಯಲ್ಲಿ ಕಾರುಣ್ಯವಿತ್ತು.

ಅವಳು ಮಾತಾಡದೆ ಪಿಳಿಪಿಳಿ ನೋಡಿದಳು.

"ಅರವಿಂದಾ."

"ಏನೂ ಇಲ್ಲ." ಎಂಬಂತೆ ತಲೆಯಲ್ಲಾಡಿಸಿದಳು.

"ಮಲಗಿದುದೇಕೆ?"

"ಸ್ವಲ್ಪ ತಲೆನೋವು."

"ಸಾರಿಡಾನ್ ಕೊಡಲೇ?" ಕಳಕಳಿಯಿಂದ ಕೇಳಿದ.

"ಏನೂ ಬೇಡ."

ಅಘೋರ ಹಣೆ ಮುಟ್ಟಿ ನೋಡಿದ ಜ್ವರವಿರಲಿಲ್ಲ. ನಾಡಿ ಹೃದಯಗಳನ್ನು ಪರೀಕ್ಷಿಸಿದ ಲೋಪವಿರಲಿಲ್ಲ. ಅಚ್ಚರಿಯಿಂದ ಕಣ್ಣರಳಿಸಿ–"ಏನು?...ಏನೆಂಬುದನ್ನು ಹೇಳಬಾರದೇ ಅರವಿಂದಾ?" ಕೈ ಮುಖವನ್ನೈಗಳನ್ನೆಲ್ಲಾ ನೇವರಿಸಿತು,

ಅವಳ ಮುಖದಲ್ಲಿ ಮಿನುಗಿದ ಮೆಲುನಗುವೇ ಉತ್ತರವಾಯಿತು.

"ಏಳು, ಒಂದಿಷ್ಟು ಗಾಳಿಯಲ್ಲಿ ತಿರುಗಾಡಿದರಾಯಿತು."

"ಈಗಷ್ಟೆ ಹೊರಗಡೆಯಿಂದ ಬಂದೆನಲ್ಲಾ?"

"ಆಗಲಿ, ಇನ್ನೊಮ್ಮೆ ಹೋದರಾಯಿತು."

"ನೀವು ಹೋಗಿರಿ. ಹೊರಗಡೆ ತಿಲೋತ್ತಮ ಇದ್ದಾನೆ."

"ನೀನು ಬಂದ ಹೊರತು ನಾನು ಹೋಗುವುದಿಲ್ಲ."

"ತಿಲೋತ್ತಮ ಮಾಡುವುದೇ ಹಾಗೆ." ಎನ್ನುತ್ತಾ ನಸುನಕ್ಕಳು ಅರವಿಂದಾ.

"ಹೌದು ಮತ್ತೆ, ಹಾಗಿದ್ದರೇನೇ ಜೀವನ. ಮನೆಯೆಲ್ಲಾ ಕಲಕಲ ಮಯವಾಗಿದ್ದರೇನೇ ಚೆನ್ನ. ಇದೆಂಥ ವಿಚಿತ್ರ? ಸದಾ ನಿಶ್ಶಬ್ದ, ಹಾಳು ಮನೆ ಇದ್ದ ಹಾಗೆ."

"ನೀವು ಮನೆಯಲ್ಲಿದ್ದರೆ ತಂತಾನೇ ಕಲಕಲವಾದೀತು."

"ನಾನಿದ್ದಾಗಲೂ ಇಲ್ಲವಲ್ಲಾ ಅರೂ ?"

"ಏನು ಮಾಡೋಣ ಹೇಳಿ, ವಿಧಿ ಎಂಬುವನೊಬ್ಬನಿದ್ದಾನೆ."

ಆ ವಿಧಿಯ ಹೆಸರು ಕಿವಿಯಮೇಲೆ ಬೀಳುತ್ತಲೂ ಸಿಟ್ಟು ಬಂತು ಅಘೋರನಿಗೆ "ಅವನು ಹಾಳಾಗಲಿ, ಏಳು ಹೋಗೋಣ."

"ಊಹೂ."

"ನೀನು ಏನೋ ಮನಸ್ಸಿಗೆ ಹಚ್ಚಿಕೊಂಡಿದ್ದಿ. ಮಾನಸಿಕ ವೇದನೆ ಎಂಥಾ ಬಲಿಷ್ಠರನ್ನೂ ಸುಟ್ಟುಬಿಡುತ್ತದೆ. ಅಂದಮೇಲೆ ನಿನ್ನ ಪಾಡೇನು ಅರವಿಂದಾ?"

"ಓ, ನನಗೇನೂ ಆಗುವುದಿಲ್ಲ."

"ಸ್ವಲ್ಪವೂ ಮೊದಲಿನ ಉಲ್ಲಾಸವಿಲ್ಲವಲ್ಲಾ ?"

"ನೀವು ಏನು ತಿಳಿದಿದ್ದೀರೋ ನಾನಂತೂ ಮೊದಲಿನ ಹಾಗೇ ಇದ್ದೇನೆ."

"ಇಲ್ಲ ಅರವಿಂದಾ."

"ಹೋಗಲಿ ಬಿಡಿ. ಎಂದಾದರೂ ಬಂದೀತು."

"ಹಾಗೆಂದರೆ ಹೇಗೆ ಅರವಿಂದಾ ? ಇಂದೇ ಗಳಿಸುತ್ತೇನೆನ್ನುವ ಕೆಚ್ಚಿಲ್ಲದ ಮೇಲೆ ಏನು ಸುಖ ?"

ಅವಳು ಮಾತಾಡಲಿಲ್ಲ. ನೋಟ ಎತ್ತಲೋ ನೋಡಿತು.

"ಅರವಿಂದಾ."

"ಏನು ಹೇಳಿ."

"ನನ್ನ ಮಾತನ್ನಿಷ್ಟು ಕೇಳು..."

ಮಾತು ಮುಗಿಯುವುದರೊಳಗಾಗಿ ಒಂದೇ ಉಸುರಿಗೆ ದುಡುದುಡು ಓಡಿಬಂದ ತಿಲೋತ್ತಮ ಮೈಯೆಲ್ಲಾ ಸಂತಸದ ಬೀಡಾಗಿ ಕೈ ಚಪ್ಪಾಳೆ ತಟ್ಟಿ ಹೇಳಿದ "ಅಪ್ಪಾ, ಅಪ್ಪಾ! ನಾನು ಐಸ್ ಕ್ರೀಮ್ ತಿಂದೆ!"

"ಅಯ್ಯೊ, ಅದನ್ನು ತಿಂದಾಗಲೆಲ್ಲಾ ಅವನಿಗೆ ಇಸುಬು ಮರುಕಳಿಸುತ್ತೆ!"

ಭಯ ಉದ್ವೇಗ ದುಃಖಗಳಿಂದ ಕೆಂಪಡರಿದ ಅರವಿಂದ ಎರಡೂ ಕೈಗಳಿಂದ ಮುಖ ಮುಚ್ಚಿಕೊಂಡಳು. ತನುಮನಗಳು ಗಡಗಡ ನಡುಗಿದುವು.

ಅಘೋರ ಅವಾಕ್ಕಾದ. ತುಸು ಹೊತ್ತು ಸದ್ದಿಲ್ಲದೆ ಉರುಳಿತು.

"ಅರವಿಂದಾ!"

"......."

ಮುಚ್ಚಿ ಹಿಡಿದ ಎರಡು ಕೈಗಳನ್ನೂ ಕಿತ್ತು ಅವಳ ಮುಖವನ್ನು ತನ್ನೆಡೆಗೆ ತಿರುಗಿಸಿಕೊಂಡು ಸಂತೈಸುವ ಧಾಟಿಯಲ್ಲಿ ಅಂದ "ಅರೂ, ಹೀಗಾದರೆ..."

ಮಾತು ಮುಂದುವರಿಯಗೊಡದೆ ತಟ್ಟನೆ ಅವಳೆಂದಳು "ಅಘೂ... ತಮಾಷೆಯಲ್ಲ. ನಾಳೆಯಿಂದ ಅವನ ದೇಹ ಸ್ಥಿತಿಯನ್ನು ಗಮನಿಸಿರಿ."

"ಅದೇನೇ ಇರಲಿ ಅರೂ, ಈ ಸೂಕ್ತಿ ಕೇಳು,

> ಚಿಂತಾಯಾಶ್ಚ ಚಿತಾಯಾಶ್ಚ ಬಿಂದುಮಾತ್ರಂ ವಿಶೇಷತಾ।
> ಚಿತಾ ದಹತಿ ನಿರ್ಜೀವಂ ಚಿಂತಾ ದಹತಿ ಜೀವಿನಂ॥

"ಚಿತೆ ನಿರ್ಜೀವಿಯನ್ನು ಸುಟ್ಟೀತು. ಆದರೆ, ಚಿಂತೆ ಜೀವಿಯನ್ನೇ ಸುಡುತ್ತದೆ. ನೀನು ತಿಳಿದೂ ತಿಳಿದೂ ನಿನ್ನನ್ನೇ ನೀನು ಸುಡುತಿದ್ದೀಯಲ್ಲಾ ಎಂಬುದೇ ನನಗೆ ವ್ಯಥೆ. ಅಷ್ಟೇ ಅಲ್ಲ. ನನ್ನನ್ನೂ ಸುಡುತಿದ್ದಿ ಅರವಿಂದಾ."

ತಿಲೋತ್ತಮ ಓಡಿಬಂದು ಇಬ್ಬರ ನಡುವೆ ಕುಳಿತುಕೊಂಡ. ಮುಖ ಮೈಗಳು ಸಂತಸದಿಂದ ಹಿಗ್ಗಿ ಬಿರಿಯುವಂತಿದ್ದುವು.

ಹಿ ಹ್ಹಿ ಹ್ಹಿ!

ಮಾಧುರ್ಯ ತುಂಬಿದ ಎಳೆಯ ದನಿ ಕಿವಿಗಿಂಪಾಗಿ ಹರಿಯಿತು.

ಅಧ್ಯಾಯ

೩೦

ಖಾನಾವಳಿಯಲ್ಲಿ ದುಂಡು ಮೇಜಿನ ಸುತ್ತ ಐವರೂ ಕುಳಿತಿದ್ದಾರೆ–ದುಂಡು ಮೇಜಿನ ಪರಿಷತ್ತಿಗೆ ಕೂಡುವ ಮಹಾ ನಾಯಕರುಗಳಂತೆ.

"ಐದು ಮಂದಿ ಸುಪುತ್ರರನ್ನು ಪಡೆದರೂ ನೀನು ಸಿಹಿ ಹಂಚಲಿಲ್ಲ. ನಮಗೊಂದು ಗ್ರಾಂಡ್ ಪಾರ್ಟಿ ಕೊಡಲೇ ಬೇಕು" ಎಂದೊಮ್ಮೆ ಉಳಿದ ನಾಲ್ವರೂ ಮದನನಿಗೆ ಗಂಟು ಬಿದ್ದಿದ್ದರು.

"ಮನೆಯಲ್ಲಿ ನಾಮಕರಣಕ್ಕೆ ಆಹ್ವಾನಿಸಿ ಊಟ ಕೊಟ್ಟಿದ್ದೇನಲ್ಲಾ ?"

"ಮನೆಯಲ್ಲಿ ಕೊಟ್ಟದ್ದು ಶ್ರೀಮತಿ ಮದನ್. ನೀನಲ್ಲ."

ಈ ಪ್ರಕಾರ ಸಾಗಿತ್ತು ಅಂದಿನ ವಾದ ವಿವಾದ. ಅದರ ಸಲುವಾಗಿಯೇ ಇಂದು ಇದ್ದಕ್ಕಿದ್ದಂತೆ ಗೆಳೆಯರನ್ನು ಖಾನಾವಳಿಗೆ ಕರೆದೊಯ್ದು ಸಿಹಿ ಕಾರ ತಿಂಡಿಗಳಿಗೆ ಆರ್ಡರು ಕೊಟ್ಟ ಮದನ್. ಬಿಡುವಿನ ವೇಳೆಯಾದುದರಿಂದ ಎಲ್ಲರ ಮನಸ್ಸೂ ಪ್ರಸನ್ನವಾಗಿತ್ತು. ಅಘೋರ ರತನನ ಕಡೆ ಹುಬ್ಬೇರಿಸಿ ಅಂದ "ನೀನೇನಪ್ಪಾ ಹಾಯಾಗಿದ್ದಿ ? ಮಕ್ಕಳು ಮರಿಗಳ ಸದ್ದೇ ಇಲ್ಲವಲ್ಲಾ ? ಇನ್ನೂ ಪ್ಲ್ಯಾನಿಂಗೋ ?"

"ಪರವಾಯಿಲ್ಲ. ಹಾಯಾಗಿರುವ ಹಂಚಿಕೆ ಇದ್ದಿರಬಹುದು."

"ಕೈಯ್ಯಲ್ಲಿ ಸಾಗಲಿಲ್ಲವೆ ಡಾಕ್ಟರ್ ?"

"ಎದುರು ಪಾರ್ಟಿಯಿಂದ ಸಹಕಾರ ದೊರೆತಿರಲಿಕ್ಕಿಲ್ಲ !"

ರತನ್ ಎಲ್ಲರ ಹಾಸ್ಯದ ಚಟಾಕಿಯನ್ನೂ ಕೇಳುತ್ತಾ ನಗು ಮುಖದಿಂದ ಕುಳಿತಿದ್ದ.

"ಈಗಲೇ ಸರಿಯಾಗಿ ನೋಡಿಸಿಕೊಳ್ಳಪ್ಪಾ ವಯಸ್ಸಾದ ಮೇಲೆ ಮಕ್ಕಳಾಗದೇ ಹೋದೀತು. ಉದಾಸೀನ ಮಾಡಬೇಡ."

"ಅವಳ ಚಿಕಿತ್ಸೆಯೆಲ್ಲಾ ಮೈಸೂರಿನಲ್ಲಿ."

"ಅಂಕಲ್ ಜಾರ್ಜ–ನಿಗೊಮ್ಮೆ ತೋರಿಸು."

"ನನಗೇಕೆ? ಡಾ|| ಚೆಲುವಾಂಬ ಇದ್ದಾರೆ. ಹಿರಿಯರು ಮೊದಲು ನೋಡಲಿ."

"ನಿನ್ನ ಸತ್ವಪರೀಕ್ಷೆ ಮಾಡಿಸಿಕೊಂಡಿದ್ದೀಯೇನು?"

"ಇಬ್ಬರದೂ ಸರಿಯಾಗಿದೆ. ತೊಂದರೆಯೇನಿಲ್ಲ."

"ಹೋಗಲಿ ಬಿಡು. ಕೆಲವು ದಿನ ಹಾಯಾಗಿರಿ."

"ಅಯ್ಯೊ, ಅವನು ಇನ್ನೂ ಎಷ್ಟು ದಿನ ಹಾಯಾಗಿರೋದು? ನಮಗೆ ಸಿಹಿ ಬೇಕು."

ಮಾಣಿ ತಿಂಡಿಯನ್ನು ತಂದು ಮುಂದಿಟ್ಟ. ಸಿಹಿಯನ್ನು ಮೆಲ್ಲುತ್ತಾ ಸುಧೀರ್ ಅಂದ "ಮದನ್, ನಾವೇನೋ ನಿನಗೆ ತಮಾಷೆಗೆ ಅಂದದ್ದು. ಈಗ ನೋಡಿದರೆ ಇಷ್ಟೊಂದು ತಿನ್ನುವುದು ಹೇಗೆ ಎನ್ನಿಸುತ್ತಿದೆ."

"ತಿಂಡಿ ಬಂದಮೇಲೆ ಹಾಗೆನ್ನುವುದು ನಮ್ಮಲ್ಲಿ ಮೊದಲಿನಿಂದ ಬಂದ ಸತ್ ಸಂಪ್ರದಾಯ!" ಅಘೋರ ನಗೆಯ ಚಟಾಕಿ ಹಾರಿಸಿದ.

ಒಡನೆ ಎಲ್ಲರ ಮುಖದಲ್ಲೂ ನಗು ಮಿನುಗಿ ಮಾಯವಾಯಿತು.

ಮಾಣಿ ಮತ್ತೆ ಬಂದು ಹಲ್ಕಿರಿದು ನಿಂತು–

"ಚಹ ತರಲೇ ಕಾಫಿ ತರಲೇ?"

ಎಲ್ಲರೂ ಒಮ್ಮೆಲೇ ಅಂದರು "ಕಾಫಿ ಬರಲಿ."

ಎಲ್ಲರೂ ಕೈಗೂ ಬಾಯಿಗೂ ಕಾಳೆಗ ಹೂಡಿದರು. ಹಲ್ವದ ತುಂಡನ್ನು ಮೆಲ್ಲುತ್ತಾ ಜಾನಕೀರಾಂ ಅಂದಿನ ಅನುಭವವನ್ನು ಮುಂದಿಟ್ಟ,

"ಈ ದಿನ ಒಂದು ಹೆರಿಗೆಯ ಕೇಸು ಬಂದಿದೆ. ಅವಳಿಗೆ ಹೆರಿಗೆಯಾದ ಒಂದು ವಾರದನಂತರ ಮನೆಗೆ ಹೋದ ಮೇಲೆ ಅವಳಿಗೆ ದಿನವೂ ಚಳಿಜ್ವರ ಪ್ರಾರಂಭವಾಯಿತಂತೆ. ಹೆರಿಗೆಯಾದುದು ಒಂದು ನರ್ಸಿಂಗ್ ಹೋಂ–ನಲ್ಲಿ. ಅವರೇ ಅವಳಿಗೆ ಚಿಕಿತ್ಸೆ ಮಾಡಿದ್ದಾರೆ. ಹೊಟ್ಟೆಗೂ ಬ್ಯಾಂಡೇಜು ಬಿಗಿದು ಮನೆಯ ಆರೈಕೆ ಮಾಡಿದ್ದಾರೆ. ಆದರೂ, ಜ್ವರ ಬಿಡಲಿಲ್ಲ. ಬಾಯಿ ತೆರೆದರೆ ದುರ್ನಾತ ಬರ ಹತ್ತುತ್ತಲೂ ಅವಳಿಗೆ ಅನುಮಾನ ತೋರಿ ಡಾಕ್ಟರಿಗೆ ಹೇಳಿ ಕೊಂಡಿದ್ದಾಳೆ. ಅನಂತರ ಅವರು ಇಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ. ನೋಡಿದರೆ ಹೊಟ್ಟೆಯಲ್ಲಿ ಮಗು ಸತ್ತು ಕೊಳೆತು ಹೋಗಿದೆ!"

"ಹಾಗಾದರೆ ಅವಳಿಗಿದ್ದುದು ಅವಳಿ ಮಕ್ಕಳು?"

"ಹೌದು. ಒಂದು ಸುಖವಾಗಿ ಹೆರಿಗೆಯಾಗಿದೆ. ಇನ್ನೊಂದು ಸತ್ತು

ಹೊಟ್ಟೆಯಲ್ಲೇ ಉಳಿದುಹೋಗಿದೆ !"

"ಅವಳಿಗೆ ಅಪಾಯವಾಗದುದು ದೊಡ್ಡ ಮಾತು."

"ನೋಡು ಹೇಗಿದೆ ?"

"ಅವಳಿಗೆ ವಿಷಯ ಗೊತ್ತಾಗಿ ಆಪರೇಶ್ ಆಗಬೇಕೆಂಬುದು ತಿಳಿದಾಗ ಆದ ಭಯ ಅಪನಂಬಿಕೆ ಅಷ್ಟಿಷ್ಟಲ್ಲ. ಅವಳು ಒಪ್ಪುವಂತಿಲ್ಲ. ನಾವು ಮಾಡು ವಂತಿಲ್ಲ. ಅದರಲ್ಲೂ ನಾನು ಗಂಡಸಾದುದರಿಂದ ಗಂಡಸಾದವನಿಗೆ ಇದೆಲ್ಲಾ ಹೇಗೆ ತಿಳಿಯಬೇಕು ಎಂಬ ಅನುಮಾನ ಬೇರೆ. ಅನಂತರ ಡಾಕ್ಟರಮ್ಮನವರು ಗಳನ್ನು ಕರೆಸಿದ್ದಾಯಿತು. ಅವರು ಬಂದು ಅವಳಿಗೆ ತಿಳಿಯ ಹೇಳಿದ ಮೇಲೆ ಒಪ್ಪಿಕೊಂಡಳು. ಆಮೇಲೆ ಆಪರೇಶ್ ಮಾಡಿದ್ದಾಯಿತು."

"ಹಾಗಾದರೆ ನಿನಗಲ್ಲಿ ಬೆಲೆಯೇ ಇಲ್ಲ !"

"ಅಪ್ಪಟ ಸ್ತ್ರೀರಾಜ್ಯದಲ್ಲಿ ಗಂಡಸಿಗೆ ಬೆಲೆ ಬರುವುದಾದರೂ ಹೇಗೆ ?"

ಒಡನೆ ಎಲ್ಲರ ಮುಖದಲ್ಲೂ ನಗು ಮಿನುಗಿತು. ಮದನ್ ಕೇಳಿದ "ಕೊನೆಗೆ ಏನಾಯಿತು ಕೇಸು ?"

"ಈಗ ಸುಖವಾಗಿದ್ದಾಳೆ. ಇನ್ನರ್ಧ ದಿನ ಕಳೆದಿದ್ದರೆ ಕಷ್ಟವಿತ್ತು." ಕಾಫಿಯನ್ನು ಗುಟುಕು ಗುಟುಕಾಗಿ ಹೀರುತ್ತಾ ಜಾನಕೀರಾಂ ಮುಂದುವರಿದ, "ನಮ್ಮಲ್ಲಿಗೆ ಬರುವವರೆಲ್ಲಾ ಇಂತಹವರೇ. ಸಾಯುವ ತುತ್ತ ತುದಿಯಲ್ಲಿ ಬಂದು ನಮಗೆ ಗೋಳಿಗೆ ತಂದಿಡುತ್ತಾರೆ. ನಮ್ಮವರು ಎಚ್ಚೆತ್ತುಕೊಳ್ಳ ಬೇಕಾದರೆ ಬಹಳ ಕಾಲ ಬೇಕು."

"ಮಂದ ಬುದ್ಧಿಗಳು."

"ಸಾವು ಸನ್ನಿಹಿತವಾದ ಮೇಲೆ ಬಂದು ಸೇರಿಕೊಂಡು ನಮ್ಮನ್ನೇ ಸಾಯಿಸಿದರು ಎನ್ನುವುದು ಬೇರೆ." ನಗುತ್ತಾ ನುಡಿದ ರತನ್.

"ನಿಜ ಕಣಯ್ಯಾ."

ಹಿ ಹ್ಹಿ ಹ್ಹೀ !

ಖಾನಾವಳಿಯಿಂದ ಹೊರ ಬರುತ್ತಾ ಮದನ್ ಕೇಳಿದ "ಬೀಡಾ ತೆಗೆದು ಕೊಂಡಿರಾ ?"

ಎಲ್ಲರೂ "ಹ್ಞೂ" ಎಂದರು.

"ಓ, ನಾನೇ ತೆಗೆದುಕೊಳ್ಳಲಿಲ್ಲ."

ಮದನ್ ಹಿಂದಿರುಗಿ ಹೋಗಿ ಬೀಡ ತೆಗೆದುಕೊಂಡು ಬಂದ. ಎಲ್ಲರೂ ಸಾಲಾಗಿ ಹೆಜ್ಜೆ ಹಾಕಿದರು. ಮದನ್ ನಗು ಮುಖದಿಂದ ನುಡಿದ "ನಾನು ಇಂಗ್ಲೆಂಡಿಗೆ ಹೋಗಿ ಬರೋಣವೆಂದುಕೊಂಡಿದ್ದೇನೆ."

"ಅವರು ಹೆಣ್ಣು ಮಗು ಪಡೆಯುವ ವಿಧಾನ ಹೇಳಿ ಕೊಡುತ್ತಾರೆಯೆ?"

ಎಲ್ಲರ ಮುಖದಲ್ಲೂ ಮೆಲುನಗು ಮಿನುಗಿತು.

"ಓ. ಇದೇ ಕೊನೆಯಲ್ಲ. ಮಗಳು ಹುಟ್ಟಿದರೆ ನಮ್ಮದೊಂದು ಪಾರ್ಟಿ ಉಂಟು!"

"ಓ. ಪರವಾಯಿಲ್ಲ!"

ಪುನಃ ಎಲ್ಲರ ಮುಖದಲ್ಲೂ ಕಿಲಕಿಲ ನಗು ಮೂಡಿತು

ಕೈ ಮಣಿಕಟ್ಟನ್ನು ಮುಂದೆ ಮಾಡಿ ತೋರಿಸುತ್ತಾ ಸುಧೀರನೆಂದ "ನಾದೊಂದು ಹೊಸ ಗಡಿಯಾರ ಕೊಂಡುಕೊಂಡೆ."

"ಅದರಲ್ಲಿ ಏನು ವಿಶೇಷ? ಮುಳ್ಳುಗಳಿಲ್ಲವೇ?" ಅಘೋರ ನಗೆಯ ಚಟಾಕಿ ಹಾರಿಸಿದ. ಪುನಃ ಎಲ್ಲರ ಮುಖದ ಮೇಲೂ ನಗೆ ಮಲ್ಲಿಗೆ ಅರಳಿತು.

"ಆಗಲೇ ಐದೂವರೆಯಾಯಿತು. ಆಸ್ಪತ್ರೆಯ ಭೇಟಿ ಮುಗಿಸಿಕೊಂಡೇ ಮುಂದಣ ಕಾರ್ಯಕ್ರಮ."

"ಓಹೋ, ನಾನೊಂದು ತಪ್ಪು ಮಾಡಿದೆ" ಜಾನಕೀರಾಂ ಮರೆತ ವಿಷಯವನ್ನು ಜ್ಞಾಪಿಸಿ ಕೊಳ್ಳುತ್ತಾ ಅಂದ.

"ಏನಪ್ಪಾ ಅಂಥಾದ್ದು?"

"ಈ ದಿನ ಡಾ|| ಘನಶ್ಯಾಮರ ಮಗಳ ಮದುವೆಯೆಂಬುದನ್ನು ಮರೆತೇ ಬಿಟ್ಟೆ. ಬರುವಾಗಲೇ ಡ್ರೆಸ್ ಮಾಡಿಕೊಂಡಿದ್ದರೆ ಚೆನ್ನಾಗಿತ್ತು. ಇನ್ನು ಮನೆಗೆ ಹೋಗಿ ಬರುವುದು ಆಗದ ಮಾತು."

ಜಾನಕೀರಾಮನ ಮನಸ್ಸು ಚಡಪಡಿಸಿತು. ತಲೆ ಕೆರೆದುಕೊಂಡ.

"ಹೋಗಲಿ ಬಿಡಯ್ಯಾ, ಯಾರು ನೋಡುತ್ತಾರೆ ನಿನ್ನ?"

"ಆದರೂ, ರಿಸೆಪ್ಷನ್ನಿಗೆ ಈ ಉಡುಗೆಯೆ?"

"ಎಂಟು ಗಂಟೆಯ ಮೇಲೆ ಹೋದರೆ ಜನ ಕಡಿಮೆಯಾಗಿರುತ್ತಾರೆ."

ಎಲ್ಲರ ಮುಖದಲ್ಲೂ ಮುಗುಳು ನಗೆ ಮೂಡಿತು.

"ನೀನು ಇನ್ನೊಂದು ಕೆಲಸ ಮಾಡಬಹುದು."

"ಏನು ?"

"ಆಸ್ಪತ್ರೆಯ ನಿಲುವಂಗಿ ತೊಟ್ಟುಕೊಂಡು ಹೋಗು ! ಕೊಳಕು ಪ್ಯಾಂಟು ಕಾಣಿಸುವುದಿಲ್ಲ. !"

ಎಲ್ಲರೂ ಕಿಲಕಿಲ ನಗತೊಡಗಿದರು. ಜಾನಕೀರಾಮನೂ ಅವರೊಂದಿಗೆ ದನಿ ಗೂಡಿಸಿದ. ನಗು ಮುಖದಿಂದಲೇ ಎಲ್ಲರೂ ಆಸ್ಪತ್ರೆಯನ್ನು ಸೇರಿದರು. ಹಿರಿಯ ವೈದ್ಯರೆಲ್ಲಾ ಮದುವೆಯ ರಿಸೆಪ್ಷನ್ ಸಲುವಾಗಿ ಹೋಗಿಯಾಗಿತ್ತು. ಉಳಿದವರಲ್ಲಿ ಅನೇಕರು ಹೋಗುವವರಿದ್ದರು. ಇವರೂ ದಿಕ್ಕಾಪಾಲಾಗಿ ತಮ್ಮ ತಮ್ಮ ಕೆಲಸಗಳಿಗೆ ಹೊರಟರು. ಅಘೋರನ ಹಾದಿ ಕಾರಿಡಾರಿನಲ್ಲಿ ಸಾಗುತಿತ್ತು. "ಸ್ವಾಮಿ" ಹಿಂದಿನಿಂದ ದನಿ ಕೇಳಿಬರುತ್ತಲೂ ಅಘೋರ ಹಿಂದಿರುಗಿ ನೋಡಿದ. ಹಳೆ ಹಳೆಯ ಸೀರೆಯೊಂದನ್ನು ಸುತ್ತಿಕೊಂಡಿದ್ದ ಹೆಣ್ಣೊಂದು ಮುದುರಿ ನಿಂತಿತ್ತು–ದಾರಿದ್ರ್ಯವೇ ಮೈವೆತ್ತು ಬಂದಂತೆ.

....ಹಿಂದೂಸ್ಥಾನದ ಪ್ರತೀಕ...

"ಏನಮ್ಮಾ? ಏನಾಗಬೇಕು ?"

ಅವಳ ಕಣ್ಣುಗಳಲ್ಲಿ ಮಿನುಗಿದ ಹನಿಯೇ ಉತ್ತರವಾಯಿತು.

"ಏನಾಗಬೇಕು ? ದಯವಿಟ್ಟು ಹೇಳಿರಿ."

"ನನ್ನ ಮಗಳಿಗೆ ತುಂಬ ಕಾಹಿಲೆಯಾಗಿದೆ."

"ಎಲ್ಲಿದ್ದಾಳೆ ?"

"ಮನೆಯಲ್ಲಿ."

"ಏಕೆ ಕರೆತರಲಿಲ್ಲ ?"

ದೊಡ್ಡ ಹುಡುಗಿ. ಎತ್ತಿಕೊಂಡು ಬರುವಂತಿಲ್ಲ."

"ರಿಕ್ಷಾದಲ್ಲಿ ಕರೆತರಬಹುದಿತ್ತಲ್ಲಾ."

"ಕಾಸಿಲ್ಲ."

ಹೇಳಲಾರದೇ ಹೇಳಿದ ಅವಳು ಗಳಗಳನೆ ಅಳತೊಡಗಿದಳು. ಡಾಕ್ಟರ ಕರುಳು ಚುರುಚುರು ಗುಟ್ಟಿತು.

"ಹತ್ತಿರದಲ್ಲಿ ಯಾರೂ ಡಾಕ್ಟರಿಲ್ಲವೇ ?"

"ಕಾಸು ಕೊಡದೆ ಯಾರೂ ಬರುವುದಿಲ್ಲ."

ರಿಕ್ಷಾದಲ್ಲಿ ಕರೆತರಲು ಕಾಸಿಲ್ಲದವಳು ಡಾಕ್ಟರನ್ನು ಕರೆತರಲಾದೀತೆ ?

ತನ್ನ ಮರುಳುತನಕ್ಕೆ ತಾನೇ ನಕ್ಕು ನುಡಿದ "ನನಗೆ ಸ್ವಲ್ಪ ಕೆಲಸವಿದೆ. ಅದನ್ನು ಮುಗಿಸದ ಹೊರತು ಹೊರಡುವಂತಿಲ್ಲ."

"ನೀವದನ್ನು ಮುಗಿಸುವವರೆಗೂ ಕಾಯುವೆ."

"ಸರಿ."

ಅಲ್ಲಿಂದ ಅಘೋರ ಪಟಪಟನೆ ಹೆಜ್ಜೆ ಹಾಕಿದ. ತನ್ನ ದೈನಂದಿನ ಕೆಲಸವನ್ನು ಮುಗಿಸಿಕೊಂಡು ಬರುವವರೆಗೂ ಅವಳು ಅಲ್ಲಿಂದ ಕದಲಿರಲಿಲ್ಲ. "ಅಮ್ಮಾ ಹೋಗೋಣ ನಡೆಯಿರಿ." ಎಂದ. ಅಲ್ಲಿಂದಲೇ ಮದುವೆಗೆ ಹೋದರಾಯಿತೆಂದುಕೊಂಡು ಅವಳ ಮನೆಯ ಹಾದಿ ಹಿಡಿದಿದ್ದ. ಅವಳ ಮನೆ ಆಸ್ಪತ್ರೆಯ ಹತ್ತಿರದಲ್ಲೇ ಇತ್ತು. ಕೀಳು ದರ್ಜೆಯ ಕೊಠಡಿಯಲ್ಲಿ ಮಲಿನವಾದ ಹಾಸಿಗೆಯ ಮೇಲೆ ಹದಿನೈದು ಹದಿನಾರರ ಹುಡುಗಿ ನರಳುತ್ತಾ ಮಲಗಿದ್ದಳು. ಮುಗುಟು ವಾಸನೆ ಬಡಿಯುತಿದ್ದ ಆ ಕೊಠಡಿಯೇ ಅವಳ ಪೂರ್ಣ ವಾಸಸ್ಥಾನವಾಗಿತ್ತು. ಅಘೋರ ಒಮ್ಮೆಲೇ ಸುತ್ತಲೂ ಕಣ್ಣಾಡಿಸಿದ. ಅವರ ಸ್ಥಿತಿಗತಿಯನ್ನು ನೋಡುತ್ತಲೂ ಹೃದಯ ಅನುಕಂಪದ ಹೊರೆಯಿಂದ ಕುಸಿಯಿತು. ಹೆಜ್ಜೆಯ ಸದ್ದು ಕೇಳುತ್ತಲೂ ಹುಡುಗಿ ಬಾಗಿಲ ಕಡೆ ಪಿಳಿಪಿಳಿ ನೋಡಿದಳು.

ಹಾಸಿಗೆಯ ಬಳಿ ನೆಲದ ಮೇಲೆ ತುದಿಗಾಲಿನಲ್ಲಿ ಕುಳಿತು ಅಘೋರ ಕೇಳಿದ "ಏನಮ್ಮಾ. ಏನಾಗುತ್ತಿದೆ?"

"ಬಹಳ ಹೊಟ್ಟೆ ನೋವು." ನರಳು ದನಿ ನುಡಿಯಿತು.

ಕೊಠಡಿಯಲ್ಲೆಲ್ಲಾ ಕತ್ತಲೆಯ ಮುಸುಕು ಆವರಿಸಿದ್ದುದರಿಂದ ರೋಗಿ ಸ್ಪಷ್ಟವಾಗಿ ಕಾಣಿಸುತ್ತಿರಲಿಲ್ಲ. ಅಘೋರ ದೇಹ ಪರೀಕ್ಷೆ ಮಾಡುತ್ತಾ ಕೇಳಿದ "ನಿನ್ನ ಹೆಸರೇನಮ್ಮಾ?"

"ಮೀರಾ"

ಜ್ವರದ ಕಾವಿನಿಂದ ಮೈ ಸುಡುತಿತ್ತು ಅಪೆಂಡಿಸೈಟಿಸ್ (Appendicitis) ಇದ್ದು ಅದು ಒಡೆಯುವ ಸ್ಥಿತಿಯಲ್ಲಿದ್ದುದರಿಂದಹುಡುಗಿ ಅಪಾಯಕರ ಸ್ಥಿತಿಯಲ್ಲಿದ್ದಳು. ಅಘೋರ ಸುತ್ತುಮುತ್ತೂ ಕಣ್ಣಾಡಿಸಿದ. ಅಲ್ಲಿ ಗಂಡಸರ ಸುಳಿವು ಕಾಣಲಿಲ್ಲ. ಹತ್ತು ಹನ್ನೆರಡರ ಹುಡುಗರಿಬ್ಬರು ಬದಿಯಲ್ಲಿ ನಿಂತು ಇತ್ತ ಕಡೆಯೇ ನೋಡುತಿದ್ದರು. ನಿರಿ ನಿರಿ ನಿಟ್ಟಿಸುತಿದ್ದ ಅವರ

ಕಣ್ಣುಗಳಲ್ಲಿ ಹೊಳಪಿತ್ತು. ಅಘೋರ ಎದ್ದು ನಿಂತು ಹುಡುಗಿಯ ತಾಯಿಯನ್ನು ಕೇಳಿದ "ಇವಳ ತಂದೆ ಎಲ್ಲಿದ್ದಾರೆ?"

ಆವಳ ಕಣ್ಣುಗಳಲ್ಲಿ ಹನಿಗಳುಕ್ಕಿದುವು. ಏನೋ ಮಾತಾಡಲು ಪ್ರಯತ್ನಿಸಿದರೂ ದನಿ ಬಿಗಿದು ಬಂದಿತು.

ಹುಡುಗ ಅಂದ "ಅಪ್ಪ ತೀರಿಕೊಂಡಿದ್ದಾರೆ."

"ಇಲ್ಲಿ ಇನ್ಯಾರೂ ಗಂಡಸರಿಲ್ಲವೇ?"

"ಇಲ್ಲ."

"ಈಗಲೇ ಹುಡುಗಿಯನ್ನು ಆಸ್ಪತ್ರೆಗೆ ಸೇರಿಸದಿದ್ದರೆ ಅಪಾಯವಿದೆ. ದಯವಿಟ್ಟು ಭಯಪಟ್ಟುಕೊಳ್ಳಬೇಡಿ. ಆಸ್ಪತ್ರೆಗೆ ಕರೆದೊಯ್ಯಬೇಕು. ಇದು ಆಪರೇಶನ್ ಕೇಸು."

"ಮನೆಯಲ್ಲೇ ಚಿಕಿತ್ಸೆ ಮಾಡಿದರಾಗದೇ?"

"ಇದು ಚಿಕಿತ್ಸೆಯಿಂದ ಗುಣವಾಗುವುದಿಲ್ಲ. ಆಪರೇಶನ್ ಆಗಲೇಬೇಕು."

ಹೆಂಗಸು ನುಡಿ ಕೇಳಿ ಗಡಗಡ ನಡುಗುತ್ತಾ ಏನು ಹೇಳಬೇಕೋ ತಿಳಿಯದೆ ಮರವಟ್ಟಂತೆ ಗೋಡೆಗಾಂತು ನಿಂತುದುದನ್ನು ನೋಡಿ ಅಘೋರನ ಹೃದಯ ಮಂಜಿನಂತೆ ಕರಗಿತು. ಅವನು ಸಮಾಧಾನ ಹೇಳುವ ಧಾಟಿಯಲ್ಲಿ ನುಡಿದ,

"ಆಪರೇಶನ್ ಆಗದಿದ್ದಲ್ಲಿ ಹುಡುಗಿಯ ಜೀವಕ್ಕೆ ಅಪಾಯವಿದೆ. ಆದುದರಿಂದ ದಯವಿಟ್ಟು ಧೈರ್ಯಮಾಡಿಕೊಳ್ಳಿರಿ. ನೀವು ಹೆದರಬೇಕಾಗಿಲ್ಲ."

"ನನಗೆ ಒಬ್ಬಳೇ ಮಗಳು ಡಾಕ್ಟರ್?"

"ಹೊತ್ತು ಮೀರಿದಷ್ಟೂ ಅಪಾಯವಿದೆ. ಎಷ್ಟು ಸಾಧ್ಯವೋ ಅಷ್ಟು ಬೇಗನೆ ನಿರ್ಧರಿಸಿರಿ."

"ಏನು ಮಾಡಲಿ ಡಾಕ್ಟರ್?"

"ಆಪರೇಶನ್ ಮಾಡಿಸಿರಿ."

"ಅದರಿಂದ ಏನೂ ತೊಂದರೆಯಾಗುವುದಿಲ್ಲವೇ!"

"ಏನೂ ಆಗುವುದಿಲ್ಲ."

"ನನ್ನ ಬಳಿ ಹಣವಿಲ್ಲ."

"ಅದನ್ನು ಆಸ್ಪತ್ರೆಯೇ ನೋಡಿಕೊಳ್ಳುತ್ತೆ."

ತಾಯಿಯ ಕಂಬನಿಯೇ ಉತ್ತರವಾಯಿತು.

ಹುಡುಗಿ ತಾಯಿಯ ಮನಸ್ಥಿತಿಯನ್ನರಿತು ತಾನೇ ಅಂದಳು "ನನ್ನನ್ನು ಆಸ್ಪತ್ರೆಗೆ ಸೇರಿಸಿರಿ. ನಾನು ಈ ನೋವನ್ನು ಸಹಿಸಿಕೊಳ್ಳಲಾರೆ."

"ಆಪರೇಶ್ವ ಮಾಡಿಸಿ ಕೊಳ್ಳುತ್ತೀಯೇನಮ್ಮಾ ?"

"ನೀವು ಹೇಗೆ ಹೇಳಿದರೆ ಹಾಗೆ. ನಮ್ಮಮ್ಮನಿಗಾಗಿ ನನ್ನ ಜೀವದಾನ ಮಾಡಿ ಡಾಕ್ಟರ್. ಅಷ್ಟು ಮಾತ್ರ ಕೇಳಿಕೊಳ್ಳುವೆ." ಹುಡುಗಿ ಕೈಜೋಡಿಸಿದಳು. ಕಣ್ಣುಗಳಲ್ಲಿ ಕಂಬನಿಗಳುಕ್ಕಿದುವು.

"ದೇವರಿದ್ದಾನೆ ಮಗೂ."

"ಡಾಕ್ಟರ್..."

ಮಾತು ಮುಗಿಯುವುದರೊಳಗಾಗಿ ಹುಡುಗಿ ಪ್ರಜ್ಞಾಹೀನಳಾದಳು. ಅಘೋರ ಆ ಬಡ ಸಂಸಾರಕ್ಕಾಗಿ ಮರ್ಮರ ಮರುಗಿದ. ತಕ್ಷಣ ಆಸ್ಪತ್ರೆಗೆ ಹಿಂದಿರುಗಿ ಅಲ್ಲಿಯ ಆ್ಯಂಬುಲೆನ್ಸ್ ವ್ಯಾನ್ ತೆಗೆದುಕೊಂಡು ಬಂದು ಹುಡುಗಿಯನ್ನು ಆಸ್ಪತ್ರೆಗೆ ಕರೆದೊಯ್ದು ತುರ್ತು ಆಪರೇಶನ್ನಿನ ತಯಾರಿ ನಡೆಸುವಾಗ ಹೊತ್ತು ಎಂಟರ ಅಂಚನ್ನು ದಾಟುತಿತ್ತು. ಡಾ|| ಘನಶ್ಯಾಮರ ಮಗಳ ಮದುವೆಯು ತಪ್ಪಿಹೋಯಿತಾದರೂ ಅದಕ್ಕಿಂತ ಉತ್ತಮವಾದ ಕೆಲಸ ಕೈಗೊಂಡಿದ್ದೇನೆ ಎಂಬ ಎಲ್ಲಿಲ್ಲದ ಸಮಾಧಾನ ಮೈ ತುಂಬಿಕೊಂಡಿತ್ತು. ಕತ್ತರಿಗೆ ಕೈ ಹಚ್ಚುವ ಮುನ್ನ ಅಘೋರ ಮೇಜಿನ ಬಳಿ ಮಂಡಿಯೂರಿ ತಲೆಬಾಗಿ ಮೌನವಾಗಿ ಭಗವಂತನಿಗೆ ಪ್ರಾರ್ಥನೆ ಸಲ್ಲಿಸಿದ. ಇಂದಿನ ಅವನ ಹೊಸ ರೀತಿಯನ್ನು ಅಚ್ಚರಿ ತುಂಬಿದ ಕಣ್ಣುಗಳಿಂದ ನಿಟ್ಟಿಸುತ್ತಾ ನಿಂತ ಅಲ್ಲಿನ ಸಿಬ್ಬಂದಿ ತುಟಿಪಿಟಕೆನ್ನದೆ ಉಸಿರಾಡಿದರು. ಮೇಜಿನ ಮೇಲೆ ಪ್ರಜ್ಞಾಹೀನಳಾಗಿ ಮಲಗಿದ್ದ ಹುಡುಗಿಯೂ ಬಿಸುಕಾಡದೆ ಉಸಿರಾಡಿದಳು. ಅಘೋರ ಐದು ನಿಮಿಷಗಳ ಕಾಲ ಪ್ರಾರ್ಥಿಸಿ ಎದ್ದು ನಿಂತೊಡನೆಯೇ ಇತರ ಡಾಕ್ಟರುಗಳು ಕೇಳಿದರು "ಇದೇನು ಸಾರ್ ಹೊಸರೀತಿ ?"

"ಪಾಪ, ಬಡ ಹುಡುಗಿ ಕೈ ಜೋಡಿಸಿಕೊಂಡು ನನ್ನ ಜೀವದಾನ ಮಾಡಿ ಎಂದು ಕೇಳಿಕೊಂಡಿದ್ದಾಳೆ. ತಂದೆಯಿಲ್ಲ. ಇವಳೇ ಹಿರಿಯ ಮಗು. ತಾಯಿಗಾಗಿ ಬೇಡಿಕೊಂಡಿದ್ದಾಳೆ. ಕೇಸ್ ಬಹಳ ಸೀರಿಯಸ್. ಅಂದಮೇಲೆ

ನಾನವಳಿಗೆ ಮಾರಕವಾಗಬಾರದಷ್ಟೆ?" ಎನ್ನುತ್ತಾ, ಮೆಲುನಗೆ ಬೀರಿ ಕತ್ತರಿಗೆ ಕೈ ಹಚ್ಚಿದ ಅಘೋರ. ಕತ್ತರಿಯೊಡನೆ ಕೈಗಳು ಸರಸರ ಓಡಾಡಿದುವು. ತನ್ನ ಅನುಭವದ ನಾನಾ ವಿಚಾರಗಳನ್ನು ಕಲಿಯಲಿದ್ದ ಹೊಸ ಡಾಕ್ಟರುಗಳಿಗೆ ತಿಳಿಯಹೇಳುತ್ತಾ ಆಪರೇಶನ್ ಮುಗಿಸಿದ. ಹುಡುಗಿ ಅಪಾಯದಿಂದ ಪಾರಾಗಿದ್ದಾಳೆಂಬ ಸಮಾಧಾನವಿದ್ದರೂ ರಾತ್ರಿಯಲ್ಲಿ ಬಿಟ್ಟು ಹೋದರೆ ಅವಳ ಗತಿಯೇನು? ಅನನುಭವಸ್ಥ ಎಳೆಯ ಡಾಕ್ಟರುಗಳೇ ಇಂದಿನ ಡ್ಯೂಟಿಗೆ ಇರುವುದರಿಂದ ಜ್ವರದ ಕಾವು ಇನ್ನೂ ಆರದ ಹುಡುಗಿಯನ್ನು ಬಿಟ್ಟು ಹೋಗುವುದು ಸರಿಯಲ್ಲ ಎಂಬ ವಿವೇಕಕ್ಕೆ ಶರಣಾಗಿ ಮನೆಗೆ ಹೋಗುವ ವಿಚಾರವನ್ನು ಬಿಟ್ಟುಕೊಟ್ಟು ಅರವಿಂದಳಿಗೆ ಟೆಲಿಫೋನಿನಲ್ಲಿ ಸುದ್ದಿ ಮುಟ್ಟಿಸಿದ. ಕಾಫಿ ಮನೆಯಲ್ಲಿ ಬ್ರೆಡ್ಡು ಬೆಣ್ಣೆಯ ಭೋಜನ ಮುಗಿಸಿ ರಾತ್ರಿ ಡ್ಯೂಟಿಯ ಕಿರಿಯ ಡಾಕ್ಟರುಗಳೊಡನೆ ಕೂಡಿಕೊಂಡು ಮಧ್ಯರಾತ್ರಿಯು ಕಳೆಯುವವರೆಗೆ ಹುಡುಗಿಯ ಬಳಿ ಕುರ್ಚಿಯ ಮೇಲೆ ಕುಳಿತು ಅವಳ ಸ್ಥಿತಿ ಗತಿಗಳನ್ನು ಗಮನಿಸಹತ್ತಿದ. ಜ್ವರದ ಕಾವು ಇಳಿದನಂತರ ದೇಹಸ್ಥಿತಿ ಸ್ಥಿಮಿತಕ್ಕೆ ಬಂದಿತು. ಬೆಳಗಿನ ತಣ್ಣನೆಯ ತಿಳಿಗಾಳಿ ಬೀಸುವಾಗ ಹೋಗಿ ಹಾಸಿಗೆ ಸೇರಿದ ಅಘೋರ ಮಹಾಶಯ.

ಬೆಳಿಗ್ಗೆ ಪೂರ್ವದಿಶೆಯಲ್ಲಿ ಚಂದನರಾಗದ ಹಿನ್ನೆಲೆಯಲ್ಲಿ ಮೂಡಿದ ಬಾಲರವಿ ಬಾನೇರುತ್ತಿರುವಾಗ ಅಘೋರ ಕಣ್ತೆರೆದ. ಬೆಳಕು ಕಣ್ಣು ಕುಕ್ಕುವಂತಿತ್ತು. ಬೇಗನೆ ಮುಖಮಜ್ಜನ ಮಾಡಿಕೊಂಡು ಮೀರಳನ್ನು ನೋಡಲು ಹೋದ. ಅವಳು ಇತ್ತಲೇ ಬಿರುಬಿರುನೆ ನೋಡಿ ಅಂದಳು "ನೀವು ಆಪರೇಶನ್ ಮಾಡಿದಿರಾ?"

"ಏಕಮ್ಮಾ, ಅನುಮಾನವೇ?"

"ಹಾಗಲ್ಲಾ ಡಾಕ್ಟರ್. ಇಲ್ಲಿಗೆ ಹೇಗೆ ಬಂದೆನೆಂಬುದಾಗಲಿ ಯಾರು ಮಾಡಿದರೆಂಬುದಾಗಲಿ ನನಗೆ ತಿಳಿಯದು."

"ನಿಜ ಮಗೂ. ನಿನಗೆ ಪ್ರಜ್ಞೆ ತಪ್ಪಿತ್ತು."

"ನಮ್ಮ ಮನೆಗೆ ಬಂದವರು ನೀವಷ್ಟೆ?"

"ಹೌದು ಮಗೂ."

"ನೀವು ನನಗೆ ಜೀವದಾನ ಮಾಡಿದ್ದೀರಿ."

"ನಾನಲ್ಲ; ದೇವರು."

"ದೇವರ ಸಹಾಯವು ಯಾರ ಮೂಲಕವಾದರೂ ಬರಬೇಕಷ್ಟೆ ?"

"ನಿನ್ನ ಪುಣ್ಯಫಲ ಮಗೂ."

"ನನಗೆ ಅಣ್ಣ ಇಲ್ಲ. ತಂದೆ ಇಲ್ಲ ಡಾಕ್ಟರ್..." ಮಾತು ಮುಗಿಯು ವುದರೊಳಗಾಗಿ ಗಂಟಲು ಬಿಗಿದುಬಂದಿತು. ತಡೆತಡೆದು ಮುಂದುವರಿದಳು ವಿಾರ "ಆ ಕೊರತೆಯನ್ನು ನೀವು ನಿವಾರಿಸಿದ್ದೀರಿ ಡಾಕ್ಟರ್."

"ದೇವರು ದೊಡ್ಡವನು ಮಗೂ."

"ನಿಮ್ಮ ಹೃದಯವೂ ದೊಡ್ಡದು ಡಾಕ್ಟರ್."

"ನಾನೀಗ ಮನೆಗೆ ಹೋಗಿಬರುವೆ."

"ನಮಸ್ಕಾರ, ಡಾಕ್ಟರ್."

ಎರಡೂ ಕೈಗಳನ್ನು ಜೋಡಿಸಿದಳು ಹುಡುಗಿ.

ಅಘೋರ ಮನೆಗೆ ಹೋಗಿ ದೈನಂದಿನ ವಿಧಿಗಳನ್ನು ಮುಗಿಸಿಕೊಂಡು ಸಾವಕಾಶವಾಗಿ ಆಸ್ಪತ್ರೆಗೆ ಬಂದ. ಅಂದು ಆಪರೇಶನ್ ಥಿಯೇಟರಿನ ಒಡೆತನ ಮದನನಿಗೆ ಸೇರಿತ್ತು. ಬಹಳ ಆಪರೇಶನ್‌ಗಳಿದ್ದುದರಿಂದ ಅಘೋರನನ್ನು ಅವನು ಬರಮಾಡಿಕೊಂಡಿದ್ದ. ಅಲ್ಲಿ ಅವನಿಗಷ್ಟು ಸಹಕಾರಹಸ್ತ ನೀಡಿ ಹೊರಬರುವಷ್ಟರಲ್ಲಿ ಮಧ್ಯಾಹ್ನ ಮೂರು ಗಂಟೆಯಾಗಿತ್ತು. ತನ್ನ ಕೊಠಡಿಗೆ ಹೋಗಿ ಊಟ ಮುಗಿಸಿ ತುಸು ವಿಶ್ರಾಂತಿಗಾಗಿ ಪಲ್ಲಂಕದ ಮೇಲೆ ಅಡ್ಡಾದ. ಅವಿಶ್ರಾಂತವಾಗಿ ದುಡಿದು ದಣಿದ ಮೈ ವಿಶ್ರಾಂತಿಯನ್ನು ಬಯಸಿತ್ತು. ರಾತ್ರಿಯಲ್ಲಿ ನಿದ್ದೆ ಇರದಿದ್ದುದರಿಂದಲೋ ಏನೋ ಕಣ್ಣು ಮುಚ್ಚು ವುದರೊಳಗಾಗಿ ನಿದ್ದೆಯ ಜೊಂಪು ಹತ್ತಿತು.

ನಿದ್ದೆ ತಿಳಿದೇಳುವುದರಲ್ಲಿ ಹೊತ್ತು ಐದರ ಅಂಚನ್ನು ದಾಟುವುದರಲ್ಲಿತ್ತು. ನೋಡುತ್ತಲೂ ಎಲ್ಲಿಲ್ಲದ ಅಚ್ಚರಿ ಮೂಡಿತು. ಎಷ್ಟು ಸೊಗಸಾದ ನಿದ್ದೆ ! ಎಂದು ತನಗೆ ತಾನೇ ಉದ್ಗಾರ ತೆಗೆದ. ಇನ್ನಷ್ಟು ಹೊತ್ತು ಮಲಗಿದ್ದರೂ ನಿದ್ದೆ ಮಾಡುವಷ್ಟು ತಲೆಭಾರ ಉಳಿದಿತ್ತು. ಕಣ್ಣುಜ್ಜಿ ಕೊಳ್ಳುತ್ತಾ ಶೌಚದ ಮನೆಗೆ ಹೋಗಿ ಮುಖಮಜ್ಜನ ಮಾಡಿ ಮಧ್ಯಾಹ್ನದ ಗುಟುಕು ಚಹಕ್ಕಾಗಿ ಕಾಫಿಮನೆಯತ್ತ ಧಾವಿಸಿ ನಾಲಿಗೆಗೆ ತಣಿವನ್ನು ನೀಡಿ ಪುನಃ ಸಂಜೆಯ ವಾರ್ಡುಗಳ ಭೇಟಿಯನ್ನಾರಂಭಿಸಿದ. ತನ್ನಲ್ಲಿ ಕಲಿಯುತಿದ್ದ ಹತ್ತಾರು ಮಂದಿ

ಡಾಕ್ಟರುಗಳು ಕೂಡಿಕೊಂಡರು. ಹಿಂಡಿನಲ್ಲಿ ಮುನ್ನಡೆಯುವ ಗಜರಾಜನಂತೆ ಅಘೋರ ಹೆಜ್ಜೆಹಾಕಿದ.

ಮೀರಳನ್ನು ನೋಡಲು ಹೋದಾಗ ಅವಳು ಬಾಧೆಯಿಂದ ನರಳುತಿದ್ದರೂ ಕಣ್ಣರಳಿಸಿ ಅಂದಳು "ನನಗೆ ಅಣ್ಣ ಇಲ್ಲದ ಕೊರತೆಯನ್ನು ನೀವು ನೀಗಿಸಿದ್ದೀರಿ ಡಾಕ್ಟರ್. ನಾನದನ್ನು ಜನ್ಮ ಜನ್ಮಕ್ಕೂ ಮರೆಯಲಾರೆ."

ಅಘೋರ ಮಾತಾಡದೆ ನಾಡಿಯನ್ನು ಪರೀಕ್ಷಿಸಿ ರಕ್ತದ ಒತ್ತಡವನ್ನು ನೋಡಿದ. ಮೈಬಾಗಿ ರಕ್ತದ ಒತ್ತಡವನ್ನು ನೋಡುತಿದ್ದ ಅವನ ತೋಳನ್ನು ಹಿಡಿದುಕೊಂಡು ಅವಳು ಇನಿದನಿಯಲ್ಲಿ ಕೇಳಿದಳು "ನನ್ನನ್ನು ತಂಗಿಯನ್ನಾಗಿ ಸ್ವೀಕರಿಸುವಿರಾ ಡಾಕ್ಟರ್ ?"

ಅಘೋರ ಪರಸ್ತ್ರೀಯೆಂದರೆ ಎಂದೂ ಹತ್ತು ಮಾರು ಹಿಂದೆ. ಆಸ್ಪತ್ರೆಯಲ್ಲಿ ಹಲವಾರು ಮಂದಿ ಹೆಂಗಳೆಯರ ಮಧ್ಯೆ ಕೆಲಸ ಮಾಡುತ್ತಿದ್ದರೂ ವಿನಾಕಾರಣ ಒಂದು ಮುಗುಳುನಗುವನ್ನೂ ಅವರೆಡೆಗೆ ಹರಿಯಗೊಟ್ಟವನಲ್ಲ. ಇಂದು ಅವಳಾಗಿ ತೋಳು ಹಿಡಿದುಕೊಂಡರೂ ಕುಪಿತನಾಗಲಿಲ್ಲ. "ಆಗಲಿ ಮಗೂ." ಎಂದ ಮುಗುಳುನಗೆ ಬೀರಿ.

"ನಿಮ್ಮೊಂದಿಗೆ ಹೇಳಿಕೊಳ್ಳುವುದಿದೆ. ದಯಮಾಡಿ ನನಗೊಂದಿಷ್ಟು ಸಮಯ ನೀಡುವಿರಾ ?" ಅಂಗಲಾಚಿದಳು ಹುಡುಗಿ.

"ನಾನಿನ್ನೂ ವಾರ್ಡುಗಳ ಭೇಟಿಯನ್ನು ಪೂರ್ಣಗೊಳಿಸಲಿಲ್ಲ. ಇನ್ನಷ್ಟು ನೋಡುವುದಿದೆ."

"ಮನೆಗೆ ಹೋಗುವಾಗ ಹೀಗೆ ಬಂದರೂ ಸಾಕು."

"ಆಗಲಿ, ಮಗೂ."

"ನನ್ನಿಂದ ನಿಮಗೆ ತುಂಬ ತೊಂದರೆಯಾಯಿತು ಡಾಕ್ಟರ್."

"ಹಾಗೇನಿಲ್ಲ." ಎಂದ ಅಘೋರ ಪುನಃ ಬರುವುದಾಗಿ ಹೇಳಿ ತನ್ನ ತಂಡದೊಂದಿಗೆ ಹೊರಬಿದ್ದ. ಉಳಿದ ವಾರ್ಡುಗಳ ಭೇಟಿ ಮುಗಿಸಿ ಎಲ್ಲರ ಕಷ್ಟ ಸುಖಗಳನ್ನೂ ವಿಚಾರಿಸಿಕೊಂಡು ಹೊರಬರುವಷ್ಟರಲ್ಲಿ ಏಳು ಗಂಟೆಯಾಗಿತ್ತು. ಮನಸ್ಸು ಮನೆಯುಕಡೆ ಸೂಜಿಗಲ್ಲಿನಂತೆ ಎಳೆಯುತಿದ್ದರೂ ಮೀರಳ ಕೋರಿಕೆಯನ್ನು ನೆರವೇರಿಸುವುದೊಂದು ಬಾಕಿ ಉಳಿದಿತ್ತು. ಅಘೋರ ಮೀರಳ ವಾರ್ಡಿನತ್ತ ಹೆಜ್ಜೆಯಿಡುತ್ತಾ ಸಹಡಾಕ್ಟರಿಗೆ ಅವಳ

ವಿಷಯವನ್ನು ಕುರಿತು ಇಂತೆಂದ "ಈ ದೀನ ದಲಿತರ ಉದ್ಧಾರವಾಗದ ಹೊರತು ನಮ್ಮ ದೇಶ ಮುಂದುವರಿಯುವಂತಿಲ್ಲ. ನಮ್ಮಲ್ಲಿ ದುಡಿಯುವ ಕೈಗಳೆರಡಾದರೆ ಉಣ್ಣುವ ಬಾಯಿಗಳು ಹತ್ತು. ನಾವು ಇನ್ನೂ ಹೆಂಗಸಿಯ ರನ್ನು ಅನುಭೋಗಕ್ಕಾಗಿ ಬಳಸುತಿದ್ದೇವೆ. ಅವರಿಗೂ ಸ್ವಾತಂತ್ರ್ಯ ನೀಡಿ ಸಹಕಾರ ತೋರಿ ದುಡಿಯಿರಿ ಎಂದರೆ ಅವರೂ ದುಡಿದಾರು. ಈಗಿನ ನಮ್ಮ ಪದ್ಧತಿಯಲ್ಲಿ ಇನ್ನೊಂದು ಜನ್ಮಕ್ಕೂ ಅವರ ಬುದ್ಧಿ ವಿಕಾಸವಾಗಲವಕಾಶ ವಿಲ್ಲ. ಇಡೀ ಜೀವಮಾನವನ್ನೆಲ್ಲಾ ನಮಗಾಗಿ ನಾಲ್ಕು ಗೋಡೆಯ ಒಳಗೆ ಕಳೆಯುವ ಅವರ ಬಗೆಗೆ ನಾವು ತೋರುವ ಸೌಜನ್ಯವಾದರೂ ಎಂಥಾದ್ದು? ಮುಳ್ಳಿನ ಕಿರೀಟವಿಟ್ಟು ಕಂಬನಿಯಲ್ಲಿ ಕೈ ತೊಳೆಸುತ್ತೇವೆ." ದನಿ ಭಾರವಾ ಗಿತ್ತು. ಸ್ವಲ್ಪ ತಡೆದು ಪುನಃ ನುಡಿದ "ಈ ಕೂಪ ಕೂರ್ಮ ನ್ಯಾಯದಿಂದಲೇ ನಮ್ಮ ದೇಶದ ಪ್ರಗತಿ ಮಂದಗತಿಯಲ್ಲಿ ಸಾಗುತ್ತಿದೆ. ಸ್ವಾರ್ಥ...ಎಲ್ಲಿ ನೋಡಿ ದರೂ ಸ್ವಾರ್ಥ. ಸ್ವಾರ್ಥವಿಲ್ಲದೆ ಸಾಧನೆ ಇಲ್ಲವೇನೋ ಎಂಬಷ್ಟು ಸ್ವಾರ್ಥ ತುಂಬಿ ತುಳುಕುತ್ತಿದೆ." ಮುಖ ರಂಗೇರಿ ಕಣ್ಣುಗಳು ಹೊಳೆದುವು.

ಅಘೋರ ವಾರ್ಡಿನೊಳಗೆ ಕಾಲಿಡುತ್ತಲೇ ನಲ್ಮೆಯಿಂದ ಕೇಳಿದ "ಏನು ಹೇಳುವುದಿದೆಯಮ್ಮಾ?" ಮುಖದಲ್ಲಿ ಮೆಲುನಗೆ ತಾಂಡವವಾಡಿತು.

ಹುಡುಗಿಗೆ ಒಮ್ಮೆಲೇ ಹೇಗೆ ಪ್ರಾರಂಭಿಸಬೇಕೋ ಹೊಳೆಯದೆ ತುಸು ತಬ್ಬಿಬ್ಬಾಗಿ ಸುತ್ತಲೂ ಕಣ್ಣುಗಳನ್ನು ಹೊರಳಿಸಿದಳು. ಎಲ್ಲಾ ಡಾಕ್ಟರುಗಳ ಮುಖಗಳೂ ಇತ್ತಲೇ ಕುತೂಹಲದಿಂದ ನಿಟ್ಟಿಸುತಿದ್ದುದು ಕಾಣಬರುತ್ತಲೂ ಒಮ್ಮೆ ಮೈ ಬೆವರಿತು. ಹೊದ್ದಿಕೆಯನ್ನು ಮೇಲೆಳೆದುಕೊಂಡು ಹಣೆಯ ಮೇಲಿನ ಬೆವರನ್ನು ಒರಿಸಿಕೊಂಡು ಮೆಲುದನಿಯಲ್ಲಿ ಅಂದಳು "ಹೇಳಲಾರದೆ ಹೇಳುವ ವಿಷಯ ಇದು ಡಾಕ್ಟರ್."

"ಚಿಂತೆಯಿಲ್ಲ ಹೇಳು."

"ನನ್ನ ತಂದೆ......" ಮುಂದೆ ಮಾತಾಡಗೊಡದೆ ಅಘೋರ ತಡೆದು ಹೇಳಿದ "ನೀನು ಆ ವಿಚಾರವನ್ನೆಲ್ಲಾ ಈಗ ಮನಸ್ಸಿಗೆ ಹಚ್ಚಿಕೊಂಡು ಕೊರಗುವುದು ಸರಿಯಲ್ಲ—ಅದು ಕೂಡದು."

"ಹಾಗೇನಿಲ್ಲ. ಅಣ್ಣ ಮತ್ತು ತಂದೆಯ ಸ್ಥಾನದಲ್ಲಿ ನೀವಿದ್ದೀರಿ. ಮತ್ತೇಕೆ ಯೋಚನೆ? ನಾನು ನಿಮ್ಮನ್ನು ಅಣ್ಣನೆಂದೇ ಭಾವಿಸಿರುವುದರಿಂದ

ನನ್ನ ವಿಷಯ ನಿಮಗಿಷ್ಟು ತಿಳಿದಿರಲಿ ಎಂಬುದು ನನ್ನ ಆಸೆ."

"ಹ್ಞೂ, ಹೇಳು ವಿಶಾ."

"ನನ್ನ ತಂದೆ ಶಾಲಾ ಮಾಸ್ತರು. ಸರಕಾರಿ ಶಾಲೆಯಲ್ಲಿ ಇಪ್ಪತ್ತುವರುಷ ದುಡಿದಿದ್ದಾರೆ. ಜೊತೆಗೆ ಮನೆ ಪಾಠಗಳನ್ನೂ ಹೇಳುತ್ತಿದ್ದರು. ಅವರಿರುವಾಗ ನಮ್ಮ ಜೀವನ ಉತ್ತಮವಾಗಿತ್ತು. ಅವರು ಇತ್ತೀಚೆಗೆ ಟಿ. ಬಿ. ಕಾಹಿಲೆಗೆ ಒಳಗಾದರು. ಅವರಿಗೆ ವಿಶ್ರಾಂತಿಯೂ ಸಿಕ್ಕಲಿಲ್ಲ. ಸರಿಯಾದ ಔಷಧೋಪಚಾರವೂ ದೊರೆಯಲಿಲ್ಲ. ನಾವೆಲ್ಲಾ ಅವರಿಗೆ ರಜೆ ತೆಗೆದುಕೊಳ್ಳಿ ಎಂದು ಎಷ್ಟು ಕೇಳಿಕೊಂಡರೂ ತೆಗೆದುಕೊಳ್ಳದೆ ಶಾಲೆಗಾಗಿ ದುಡಿದರು. ಅವರು ಅತ್ಯುತ್ತಮ ಮಾಸ್ತರುಗಳಲ್ಲಿ ಒಬ್ಬರೆಂದು ಪರಿಗಣಿಸಲ್ಪಟ್ಟಿದ್ದರೂ ಅವರ ಚಿಕಿತ್ಸೆಯ ಬಗ್ಗೆ ಸರಕಾರ ಆಸ್ಥೆ ತೋರಲಿಲ್ಲ. ನಾವು ಬರೆದು ಬೇಡಿಕೊಂಡರೂ ಅದು ಕಿವುಡಾಗಿಯೇ ಇತ್ತು. ವರ್ಷಾಂತ್ಯದವರೆವಿಗೂ ಕೆಲಸ ಮಾಡಿ ಬೇಸಗೆ ರಜೆಯಲ್ಲಿ ಪ್ರಾಣಬಿಟ್ಟಿದಾರೆ ನಮ್ಮ ತಂದೆ." ಕಣ್ಣುಗಳಲ್ಲಿ ಹನಿ ಮೂಡಿದರೂ ತಡೆಹಿಡಿದು ಮುಖವನ್ನು ಒರಸಿಕೊಂಡು ಪುನಃ ಮುಂದುವರಿದಳು "ನನಗೊಬ್ಬ ಅಣ್ಣ ಇದ್ದ ಡಾಕ್ಟರ್...ಅವನು ಎಸ್.ಎಸ್.ಎಲ್.ಸಿ. ಓದುತ್ತಿದ್ದ. ಒಂದು ದಿನ ನನ್ನ ಹಾಗೇ ಹೊಟ್ಟೆಯಲ್ಲಿ ಏನೋ ತೊಂದರೆ ಕಾಣಿಸಿತು. ಮನೆಯ ಔಷಧ-ಡಾಕ್ಟರ ಔಷಧ ಏನೇನೋ ಮಾಡಿದರು. ಗುಣವಾಗಲಿಲ್ಲ. ಡಾಕ್ಟರು ಬಂದು ಬೀದಿಗೆ ಕೊಟ್ಟರು. ಅಂದೇ ಅವನು ತೀರಿಕೊಂಡ..." ಅವಳು ಬಹಳ ಕಷ್ಟದಿಂದ ದುಃಖದುಬ್ಬರವನ್ನು ತಡೆ ಹಿಡಿದಳು.

"ಅದನ್ನೆಲ್ಲಾ ಈಗ ನೀನು ಮನಸ್ಸಿಗೆ ಹಚ್ಚಿಕೊಳ್ಳಬಾರದು."

"...ಖಂಡಿತವಾಗಿಯೂ...ಇಲ್ಲ...."

"ನಾನೀಗ ಅದನ್ನು ಯೋಚಿಸುವುದೇ ಇಲ್ಲ. ನನ್ನ ದುರಂತ ಜೀವನದ ಹಿನ್ನೆಲೆಯನ್ನು ನಿಮಗಷ್ಟು ತೋರಿದೆ ಅಷ್ಟೆ. ಅವರಿಬ್ಬರ ಕೊರತೆಯನ್ನು ನೀವು ನೀಗಿಸಿದ್ದೀರಿ. ಮತ್ತೇಕೆ ದುಃಖ? ನಾನೇಕೆ ನನ್ನ ಜೀವದಾನ ಬೇಡಿದೆ ಎಂಬುದನ್ನು ನಿಮಗೆ ಹೇಳಿಕೊಳ್ಳಲೇಬೇಕಾಗಿತ್ತು. ಹೇಳುತ್ತಿದ್ದೇನೆ ದಯವಿಟ್ಟು ಕೇಳಿರಿ. ನಮ್ಮ ತಂದೆ ತೀರಿಕೊಂಡಂದೇ ನಾನು ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಪ್ರಥಮ ತರಗತಿಯಲ್ಲಿ ಉತ್ತೀರ್ಣಳಾದುದು ತಿಳಿದು ಬಂದಿತು. ತಂದೆಯ ಸ್ಥಾನದಲ್ಲಿ ನನ್ನನ್ನು ನೇಮಿಸಿಕೊಳ್ಳಿರೆಂದು ಬೇಡಿ

ಕೊಂಡರೂ ಸರಕಾರ ದಯೆದೋರಲಿಲ್ಲ. ಎಷ್ಟೆಷ್ಟು ಬೇಡಿಕೊಂಡರೂ ಅದು ಕಿವುಡಾಗಿಯೇ ಉಳಿಯಿತು.

"ತಂದೆ ಹೋದಾಗಿನಿಂದ ನಮ್ಮ ಬೀದಿಯಲ್ಲಿನ ಪುಟ್ಟ ಮಕ್ಕಳಿಗೆ ಮನೆ ಪಾಠ ಹೇಳುತಿದ್ದೇನೆ. ನಮ್ಮ ಮನೆಯಲ್ಲಿ ತಾವಿಲ್ಲ. ಮನೆಮನೆಗೂ ಹೋಗಿ ಪಾಠ ಹೇಳುವುದೆಂದರೆ ಕಷ್ಟ. ಪ್ರಾಯದ ಹುಡುಗಿ ಬೀದಿಗೆ ಕಾಲಿಟ್ಟ ಳೆಂದರೆ ನೂರು ಕಣ್ಣುಗಳು ನೋಡುತ್ತವೆ. ಹತ್ತಿಪ್ಪತ್ತು ಕೈಗಳು ಹಾಳು ಮಾಡುತ್ತವೆ. ಸಾವಿರಾರು ಮುಖಗಳು ಗಹಗಹಿಸಿ ನಗುತ್ತವೆ!... ಡಾಕ್ಟರ್, ರಕ್ಷಕರೇ ಭಕ್ಷಕರಾದರೆ ಮಾನವರೇ ದಾನವರಾದರೆ ನಾವು ತಲೆ ಯೆತ್ತುವುದು ಹೇಗೆ? ನಮ್ಮ ಸಮಾಜದಲ್ಲಿ ನಮಗೆ ರಕ್ಷಣೆಯುಂಟೇ? ಹೊಣೆ ಗಾರಿಕೆಯಿಲ್ಲದ ಸಮಾಜ ನೂರೆಂಟು ನೀತಿನಿಯಮಗಳನ್ನು ಮುಂದಿಟ್ಟು ಗಿಣಿಪಾಠ ಮಾಡುವುದಾದರೂ ಏಕೆ? ತತ್ವಬೋಧೆ ಮಾಡಿ ಶಾಸ್ತ್ರಗಳ ಸಂಕೋಲೆ ತೊಡಿಸಿ ನಾಲ್ಕೂ ನಿಟ್ಟನಿಂದ ಕತ್ತು ಹಿಸುಕುವ ಸಮಾಜದಲ್ಲಿ ನಾವು ನಿರ್ಮಲ ಜೀವನ ನಡೆಸುವುದಾದರೂ ಹೇಗೆ?...ಗಂಟಲು ಬಿಗಿದು ಬಂದು ಹುಡುಗಿ ಸ್ವಲ್ಪ ಹೊತ್ತು ಸುಮ್ಮನಾದರೂ, ಕರವಸ್ತ್ರದಿಂದ ಮುಖ ವನ್ನು ಶೀಡಿಕೊಂಡು ಉಗುಳು ನುಂಗಿ ಪುನಃ ಮುಂದುವರಿದಳು "ಡಾಕ್ಟರ್! ...ನನ್ನ ಕಷ್ಟವನ್ನು ನೋಡಲಾರದೆ ಎದುರು ಮನೆಯ ಅಜ್ಜಿಯೊಬ್ಬರು ತಮ್ಮ ಮನೆಯಲ್ಲಿ ಮಕ್ಕಳಿಗೆ ಪಾಠ ಹೇಳಲು ಜಾಗ ಕೊಟ್ಟಿದ್ದಾರೆ. ಕಳೆದ ತಿಂಗಳಿನಿಂದ ಅಲ್ಲಿ ಪಾಠ ಹೇಳುತಿದ್ದೇನೆ. ಒಂದು ಮಗುವಿಗೆ ಇಪ್ಪತ್ತು ರೂಪಾಯಿನಂತೆ ಹತ್ತು ಮಕ್ಕಳಿಂದ ಇನ್ನೂರು ರೂಪಾಯಿ ಸಂಪಾದಿಸಿ ನನ್ನ ಪುಟ್ಟ ತಮ್ಮಂದಿರನ್ನು ಕಾಪಾಡುತಿದ್ದೇನೆ...ಈ ದುಷ್ಟ ಸಮಾಜದಿಂದ ನಮ್ಮನ್ನು ನಾವು ರಕ್ಷಿಸಿಕೊಳ್ಳಬೇಕಾದರೆ ನಮಗೊಬ್ಬ ಅಣ್ಣ ಅಥವಾ ತಂದೆ ಇರಲೇಬೇಕು ಡಾಕ್ಟರ್. ಅದಕ್ಕಾಗಿ ನಾನು ನಿಮ್ಮ ಮೊರೆಹೊಕ್ಕಿದ್ದೇನೆ. ದಯಮಾಡಿ ಅಪಾರ್ಥ ಮಾಡಿಕೊಳ್ಳಬೇಡಿರಿ." ಮಾತು ಮುಗಿಯುವಷ್ಟರಲ್ಲಿ ಹುಡುಗಿ ಬೆವತು ನೀರಾಗಿದ್ದಳು.

"ಅಯ್ಯೊ, ಪಾಪ." ಎಲ್ಲರ ದನಿಯೂ ಮರ್ಮರಿಸಿತು. ಅಘೋರ ಕರುಣೆ ತುಂಬಿದ ದನಿಯಿಂದ ಕೇಳಿದ "ಇಲ್ಲಿ ನಿನಗೆ ಕೆಲಸ ಕೊಡಿಸಿದರೆ ಮಾಡುವೆಯೇನು?"

"ದಯಮಾಡಿ ಉಪಕಾರ ಮಾಡಿ ಡಾಕ್ಟರ್. ನಾನು ನರ್ಸ್ ಆಗಿ ಕೆಲಸ ಮಾಡಬಲ್ಲೆ."

ಎರಡೂ ಕೈಗಳನ್ನು ಜೋಡಿಸಿಕೊಂಡು ಅವಳೆಂದಳು. ಅಘೋರ ಮಂಜಿನಂತೆ ಕರಗಿಹೋದ.

"ಮೊದಲು ನಿನಗೆ ಗುಣವಾಗಲಿ ಮಿಾರಾ."

"ಈ ಬಡ ತಂಗಿಗಾಗಿ ಬಹಳ ತೊಂದರೆ ತೆಗೆದುಕೊಂಡಿದ್ದೀರಿ."

"ನಮ್ಮ ಕರ್ತವ್ಯ."

"ಸರಿ, ನಮ್ಮ ಕರ್ತವ್ಯ ಅಂತ ತಿಳಿದುಕೊಂಡವರು ಎಷ್ಟು ಮಂದಿ ನಮ್ಮಲ್ಲಿ ಇದ್ದಾರೆ ಡಾಕ್ಟರ್ ?"

"ಏನು ಮಾಡೋಣ ತಂಗೀ ?"

"ಈ ಸ್ವಾರ್ಥವೊಂದಿಲ್ಲದಿದ್ದರೆ ನಮ್ಮ ದೇಶ ನಂದನವನವಾಗುತಿತ್ತು."

"ನಿಜ ಮಗೂ."

"ನನ್ನ ತಮ್ಮಂದಿರಿಗಾಗಿ ನನ್ನ ತಾಯಿಗಾಗಿ ನಾನು ಬದುಕಲೇಬೇಕು ಡಾಕ್ಟರ್. ಅದರಿಂದಾಗಿ ನಾನು ನಿಮ್ಮಲ್ಲಿ ನನ್ನ ಜೀವದಾನ ಬೇಡಿದೆ."

"ಚೆನ್ನಾಗಿ ಬದುಕು ಮಗೂ, ದೇವರಿದ್ದಾನೆ."

"ನಿಮ್ಮ ಉಪಕಾರ ಮರೆಯಲಾರೆ ಡಾಕ್ಟರ್."

"ಇನ್ನು ಸುಖವಾಗಿ ಮಲಗು ಮಿಾರಾ. ಹೆಚ್ಚು ಮಾತಾಡದೆ ವಿಶ್ರಾಂತಿ ತೆಗೆದುಕೊ."

....ಅಯ್ಯೊ ನಮ್ಮ ಸಮಾಜವೇ ?....

ಅವಳು ಮಾತಾಡಲಿಲ್ಲ. ಕಣ್ಣುಗಳಲ್ಲಿ ಮಿನುಗಿದ ಹನಿಯೇ ಉತ್ತರವಾಯಿತು.

ಅಘೋರ ಅವಳ ತಲೆಯನ್ನು ನೇವರಿಸಿ ಕೈಹಿಡಿದುಕೊಂಡು ಸಾಂತ್ವನಗೈಯುವ ದನಿಯಿಂದ ನುಡಿದ "ನನಗೂ ತಂಗಿಯಿಲ್ಲ ಮಿಾರಾ. ನೀನು ಯೋಚಿಸಬೇಡ ನಿಶ್ಚಿಂತೆಯಿಂದ ಇರು."

ಅಘೋರ ಅವಳ ಕಂಬನಿಯನ್ನು ತನ್ನ ಕರವಸ್ತ್ರದಿಂದ ತೀಡಿ ಸಮಾ

ಧಾನ ಹೇಳಿ ಅಲ್ಲಿಂದ ಹೊರಬಿದ್ದ. ಅವಳ ಬಳಿ ಅರಳೆಗಿಂತ ಮೃದುವಾದ ಅವನನ್ನು ಸಹ ಡಾಕ್ಟರುಗಳು ಅಚ್ಚರಿತುಂಬಿದ ಕಣ್ಣುಗಳಿಂದ ನಿಟ್ಟಿಸಿದರು. ಅಘೋರ ಮಾತಾಡದೆ ಹೆಜ್ಜೆ ಹಾಕಿದ. ಮನದಾಳದಲ್ಲಿ ವಿಚಾರಗಳ ಯೋಚನೆ ತುಂಬಿಹೋಗಿತ್ತು. ಒಮ್ಮೆಲೇ ದುಷ್ಟ ಸಮಾಜದ ಮೇಲೆ ಸೇಡು ತೀರಿಸಿ ಕೊಳ್ಳಲೇ ಎಂಬಷ್ಟು ಕೋಪದಿಂದ ರಕ್ತ ಕುದಿಯಿತು. ಆದರೆ, ಮಾಡುವು ದೇನು ? ಪ್ರಶ್ನೆಯೆದ್ದೊಡನೆಯೇ ಮೌನವಿರೆದ್ದಿತು. ಕೋಪದ ಝರಿಯೂ ಜರ್ರನೆ ಇಳಿಯಿತು.

ಹಾದಿಯಲ್ಲಿ ವಿಚಾರಳ ತಾಯಿ ಮಾಸಿದ ಬಟ್ಟೆಯ ಇಬ್ಬರು ಬಾಲಕ ರೊಡನೆ ಎದುರಾದಳು.

"ನಿಮ್ಮ ಮಗಳು ಈಗ ಚೆನ್ನಾಗಿದ್ದಾರೆ. ಯೋಚಿಸಬೇಡಿರಿ."

"ತಮ್ಮ ದಯೆ."

ನೀರುದುಂಬಿದ ಕಣ್ಣುಗಳಿಂದ ನೋಡುತ್ತಾ ಅವಳು ಕೈಗಳನ್ನು ಜೋಡಿಸಿದಳು. ಅದನ್ನೋಡಿ ಬಾಲಕರೂ ಜೋಡಿಸಿದರು. ಅವರ ಸ್ಥಿತಿ ಯನ್ನು ನೋಡುತಿದ್ದಂತೆ ಅಘೋರನ ಹೃದಯ ಅನುಕಂಪದಿಂದ ಮಿಡಿ ಯಿತು. ಮಕ್ಕಳನ್ನು ಕೇಳಿದ "ನೀವು ಓದುತಿದ್ದೀರಾ ?"

"ಹೌದು."

"ಎಲ್ಲಿ ?"

"ಸರಕಾರಿ ಹೈಸ್ಕೂಲ್."

"ಅಲ್ಲೇ ನಮ್ಮ ತಂದೆ ಕೆಲಸ ಮಾಡುತಿದ್ದರು ಸಾರ್." ಚಿಕ್ಕವನು ಹೇಳಿದ.

"ನಿನ್ನ ಹೆಸರೇನು ಮಗೂ ?"

"ತಾರಾನಾಥ್."

"ನಿನ್ನ ಹೆಸರು ?"

"ಕಾಶೀನಾಥ್."

"ನಿಮ್ಮ ತಾಯಿ ಮತ್ತು ಅಕ್ಕನಿಗೆ ಕಷ್ಟಕೊಡದಂತೆ ನಡೆದುಕೊಳ್ಳ ಬೇಕು ತಿಳಿಯಿತೆ ?"

"ಆಗಲಿ ಸಾರ್."

"ಚೆನ್ನಾಗಿ ಓದಿಕಲಿತು ಹೇಳಿದಂತೆ ಕೇಳಿ ಬುದ್ಧಿವಂತರಾಗಿರಿ."

"ಆಗಲಿ ಸಾರ್."

"ದೇವರು ಒಳ್ಳೆಯದುಮಾಡಲಿ."

"ನಿಮ್ಮ ದಯೆ."

"ಅಲ್ಲ, ಭಗವಂತನ ದಯೆ."

ಬಾಲಕರ ಮುಖದಲ್ಲಿ ಎಳೆನಗು ಮಿನುಗಿತು. ಅಘೋರ ತನ್ನ ಹಾದಿ ಹಿಡಿದು ಮುಂದುವರಿದ. ನೋಟ ನೋಟವನ್ನು ಬೀಳ್ಕೊಟ್ಟಿತು.

ದೂರದ ಕೋಗಿಲೆಯ ಇನಿಗಾನ ಕಿವಿಗೆಬಿದ್ದಿತು "ಕುಹೂ." ಒಡನೆಯೇ ಮರುದನಿ ಕೊಟ್ಟ ಬಾಲಕರ ಇನಿದನಿಯೂ ಕಿವಿಗೆಬಿದ್ದಿತು. ಅಘೋರ ಹಿಂತಿರುಗಿ ನೋಡಿ ಮುಗುಳು ನಗುತ್ತಾ ಮುಂದುವರಿದ.

ಅಧ್ಯಾಯ

೩೧

ಜಾನಕೀರಾಂ ಸುಧೀರ್ ಮದನ್ ಸೌಮಾರವರುಗಳು ಆಸ್ಪತ್ರೆಯ ಕೆಲಸ ಮುಗಿಸಿಕೊಂಡು ಮನೆಯ ಕಡೆ ಹೆಜ್ಜೆ ಹಾಕಿದರು. ಸಂಜೆಯ ತಿಳಿ ಗಾಳಿ ತಣ್ಣಗೆ ತೀಡುತ್ತಾ, ಬಂದು ದಣಿದ ಮೈಗಳನ್ನು ನೇವರಿಸಿತು. ಗಾಳಿ ಯಾಟದಿಂದ ಚದುರಿ ಮುಖಕ್ಕೆ ಮುತ್ತಿದ ಅಲೆಗೂದಲನ್ನು ಹಿಂದಕ್ಕೆ ತಳ್ಳಿ ಖಿನ್ನವದನದಿಂದ ನುಡಿದಳು ಸೌಮಾ "ಅರವಿಂದಾ ಲೆಕ್ಚರರ್ ಆಗಿಯೇ ಉಳಿ ದಿದ್ದಲ್ಲಿ ಅವಳಿಂದು ಹುಚ್ಚರಾಸ್ಪತ್ರೆ ಕಾಣುತ್ತಿರಲಿಲ್ಲ. ಮನೆಯಿಂದ ಹೊರ ಗಡೆ ಹೋಗಿ ಇತರ ಆಕರ್ಷಣೆಗಳಿಂದ ಸ್ವಲ್ಪವಾದರೂ ಮನಸ್ಸಿಗೆ ನೆಮ್ಮದಿ ಪಡೆದುಕೊಂಡಿದ್ದಿದ್ದರೆ ಮತಿವಿಕಲ್ಪವಾಗುತ್ತಿರಲಿಲ್ಲ. ಪಾಪ, ಅವಳಿಗೀರೀತಿ ಆದುದು ವ್ಯಸನಕರ."

"ಅವರ ಹುಚ್ಚು ಉಗ್ರವಲ್ಲ. ಎಂದಾದರೂ ಚೇತರಿಸಿಕೊಳ್ಳಬಹುದು."

"ಅವರೇನೋ ಹುಚ್ಚಾಗಿ ಆಸ್ಪತ್ರೆ ಸೇರಿದ್ದಾರೆ. ಅದರಿಂದ ಅವರಿಗೆ ಏನೂ ತಿಳಿಯುವಂತಿಲ್ಲ. ಆದರೆ, ಅಘೋರನ ದುಃಖ ದೇವರಿಗೇ ಗೊತ್ತು."

"ಪಾಪ, ಹೆಂಡತಿ ಎಂದರೆ ಜೀವಬಿಡುವ ವ್ಯಕ್ತಿ."

"ಛೀಃ ! ತುಂಬ ಅನ್ಯಾಯ." ಎಂದ ಸೌಮಳ ದನಿಯಲ್ಲಿ ಅನುಕಂಪ ವಿತ್ತು. ತಲೆ ಬಾಗಿ ಹೆಜ್ಜೆ ಹಾಕಿದಳು.

"ಪಾಪ, ನಿಜ........." ಮದನ್ ಸ್ವಲ್ಪ ತಡೆದು ಮುಂದುವರಿದ "ಮೊದಲೆರಡು ಬಾರಿ ಗರ್ಭಸ್ರಾವವಾದಾಗಲೇ ಅವರ ಮನಸ್ಸು ನೊಂದಿತ್ತು. ಈಗ ಇದ್ದ ಒಬ್ಬ ಮಗನಿಗೂ ಇಸುಬು. ಅವರಿಗೆ ಇನ್ನು ಸಂತೋಷವಾದರೂ ಎಲ್ಲಿಂದ ಬಂದೀತು ? ದುಃಖದ ಹೊರೆಯಿಂದ ಮತಿವಿಕಲ್ಪವಾಯಿತು."

"ಛೀಃ ! ಛೀಃ ! ಅಘೋರನನ್ನು ನೋಡುವುದಕ್ಕಾಗುವುದಿಲ್ಲ."

"ಸದ್ಯ ಅವನಿಗೂ ಬುದ್ಧಿ ಕೆಟ್ಟುಹೋದೀತು."

"ಪಾಪ, ದೇವರೇ ಅವರಿಗೆ ಸಮಾಧಾನ ನೀಡಬೇಕು." ಎಂದ ಸೌಮಳ ಮುಖದಲ್ಲಿ ನೋವಿನ ಮುದ್ರೆಯೊತ್ತಿತು. ಭಾರವಾದ ದನಿ ಮೆಲ್ಲನೆ ಹೊರಬಿತ್ತು.

ಹಾದಿ ಸವೆಯುತ್ತಲಿತ್ತು. ಒಮ್ಮಿಂದೊಮ್ಮೆಲೇ ಬೀದಿಯ ದೀಪಗಳು ಧಗ್ಗನೆ ಹತ್ತಿಕೊಂಡುವು. ಬೀದಿಯಲ್ಲಿ ವಾಹನಗಳು ತೀವ್ರಗತಿಯಲ್ಲಿ ಓಡಾಡು ತಿದ್ದುವು. ಜನಗಳ ಮಾತುಕತೆಯ ಸದ್ದು ವಾಹನಗಳ ಗಡಗಡ ಸದ್ದಿನೊಂದಿಗೆ ಸಮ್ಮಿಳನವಾಗಿ ಕಿವಿಗಳನ್ನು ಕಿವುಡಾಗಿಸಿತ್ತು. ಒಂದು ತಿಂಗಳಿನಿಂದ ಅಘೋರ ರಜೆಯಲ್ಲಿದ್ದುದರಿಂದ ಅವನನ್ನು ನೋಡಿ ಬರಲು ಎಲ್ಲರೂ ಅವನ ಮನೆಯ ಹಾದಿ ತುಳಿದಿದ್ದರು. ಹಿಂದುಗಡೆ ಬಿರುಸಿನ ನಡಿಗೆಯ ಸದ್ದು ಕೇಳಿ ಬರು ತ್ತಲೂ ಎಲ್ಲರ ಕಣ್ಣುಗಳೂ ಅತ್ತ ಹೊರಳಿದುವು. ರತನ್ ವೇಗವಾಗಿ ಬರು ತಿದ್ದುದನ್ನು ಕಂಡು ಎಲ್ಲರೂ ತುಸು ನಿಂತರು. ಎಲ್ಲರ ಮುಖಗಳೂ ಸ್ವಾಗತದ ಕುರುಹಾಗಿ ನಸುನಗೆಯನ್ನು ಚೆಲ್ಲಿದುವು. ರತನ್ ಕೇಳಿದ "ಎಲ್ಲರೂ ಎಲ್ಲಿಗೆ ಹೊರಟಿರಿ ?"

"ಅಘೋರನಲ್ಲಿಗೆ. ನೀನೆಲ್ಲಿಗೆ ?"

"ಬ್ಲೇಡು ಬೇಕಾಗಿತ್ತು ಬಂದಿದ್ದೆ. ನಿಮ್ಮನ್ನು ನೋಡಿ ಹೀಗೆಯೇ ಬಂದೆ."

"ಬಾ, ಅಘೋರನನ್ನು ನೋಡಿಕೊಂಡು ಬರೋಣ."

"ನಾನು ನಿನ್ನೆ ಹೋಗಿದ್ದೆ."

"ಪರವಾಗಿಲ್ಲ ಬಾರಪ್ಪಾ, ನಿನ್ನ ಮರ್ಯಾದೆ ಹೋಗುವುದು ಅಷ್ಟರಲ್ಲೇ ಇದೆ."

ಎಲ್ಲರ ಮುಖದಲ್ಲೂ ನಗು ಮಿನುಗಿತು. ರತನ್ ಅವರೊಂದಿಗೂಡಿ ಹೆಜ್ಜೆ ಹಾಕಿದ. ಹಾದಿ ಸವೆದು ಅವರು ಅಘೋರನ ಮನೆಮುಟ್ಟುವಷ್ಟರಲ್ಲಿ ಏಳು ಗಂಟೆಯಾಗಿತ್ತು. ಅಘೋರ ಮಗನಿಗೆ ಮನೆಪಾಠ ಹೇಳುತಿದ್ದ. ನಂದಾ ಬಳಿಯಲ್ಲಿ ಕುಳಿತುಕೊಂಡು ಗಮನಿಸುತಿದ್ದಳು. ಒಮ್ಮಿಂದೊಮ್ಮೆಲೇ ಅಲ್ಲಿ ಪ್ರತ್ಯಕ್ಷರಾದ ಗೆಳೆಯರ ತಂಡವನ್ನು ಕಂಡೊಡನೆಯೇ ಅಘೋರನ ಮುಖ ಪ್ರಫುಲ್ಲವಾಯಿತು. ಎಲ್ಲರನ್ನೂ ಆತ್ಮೀಯತೆಯಿಂದ ಒಳಗಡೆ ಬರ

ಮಾಡಿಕೊಂಡ. ಎಲ್ಲರ ಗಮನವೂ ಮೊದಲು ತಿಲೋತ್ತಮನೆಡೆಗೆ ಹರಿಯಿತು. ಒಂಬತ್ತರ ಬಾಲಕ ಹದಿನೈದು ವರ್ಷದವನಂತೆ ಬೆಳೆದಿದ್ದ. ವಿಶಾಲವಾದ ಎದೆ, ಎತ್ತರವಾದ ಮೈಕಟ್ಟು, ಇಸುಬಿನಿಂದ ಚರ್ಮ ಅಂದಗೆಟ್ಟಿದ್ದರೂ ಶಾರೀರಿಕ ಸೌಂದರ್ಯ ತನುಮನಗಳನ್ನು ಆಕರ್ಷಿಸುವಂತಿತ್ತು. ಸಖಶಿಖಾಂತ ಬಟ್ಟೆಯ ತೆರೆಯಿಂದ ಮುಚ್ಚಿ ಮೈಯನ್ನು ಮರೆಮಾಡಿದ್ದರೂ ಮುಖವನ್ನು ಮರೆ ಮಾಡಲಾಗಿರಲಿಲ್ಲ. ಬಾಲಕ ಅಗಲವಾದ ಕಣ್ಣುಗಳನ್ನು ಇನ್ನಷ್ಟು ತೆರೆದು ಎಲ್ಲವನ್ನೂ ಮುಗುಳ್ನಗೆ ಸೂಸಿ ನಿಟ್ಟಿಸಿದ. ಎಲ್ಲರೂ ಕುಳಿತುಕೊಂಡರು. ನಂದಾದೇವಿಯೊಂದಿಗೆ ತಿಲೋತ್ತಮ ಕುಳಿತುಕೊಂಡ.

"ಅರವಿಂದಾ ಹೇಗಿದ್ದಾರೆ ?"

"ಕಳೆದ ತಿಂಗಳು ಜಾಸ್ತಿಯಾಗಿತ್ತು. ಈಗ ಸ್ವಲ್ಪ ಕಡಿಮೆಯಿದೆ. ತಿಲೋತ್ತಮನನ್ನು ನೋಡಿದೊಡನೆಯೇ ಇನ್ನಷ್ಟು ಕೆರಳುತ್ತದೆ. ನಾನೀಗ ಅವನನ್ನು ಕರೆದೊಯ್ಯುವುದೇ ಇಲ್ಲ. ನಾನು ಹೋಗುವುದೇ ತಡ ನಾನೂ ಬರುತ್ತೇನೆ ಎನ್ನುತ್ತಾಳೆ." ಅಘೋರನ ದನಿಯಲ್ಲಿ ದುಗುಡವಿತ್ತು. ಮುಖದ ಮೇಲೆ ದುಃಖದ ಕಪ್ಪು ಛಾಯೆ ಮಿನುಗಿ ಮಾಯವಾಯಿತು.

"ಮನೋವೇದನೆಗೆ ಅವಕಾಶವಿರದಂತೆ ಗಮನವನ್ನು ಇತ್ತ ಎಳೆದು ಕೊಳ್ಳುವಂತಹ ಆಕರ್ಷಣೆಗಳು ಬೇಕು."

"ಎಲ್ಲಕ್ಕೂ ಮೀರಿದೆ ಅವಳ ಚಿತ್ತಚಾಂಚಲ್ಯ."

"ತಿಲೋತ್ತಮನ ಇಸುಬೇ ಅವಳ ಮತಿ ಕೆಡಿಸಿತು." ನಂದಾ ಉಕ್ಕಿ ಬಂದ ಕಂಬನಿಯನ್ನು ತೊಡೆದುಕೊಂಡಳು. ಹೃದಯ ಸಂತಾಪದಿಂದ ಮಿಡಿಯಿತು.

"ನಾನೂ ನನ್ನ ಕೈಯಲ್ಲಾದ ಎಲ್ಲಾ ಪ್ರಯತ್ನಗಳನ್ನೂ ಮಾಡಿದ್ದೇನೆ. ದುಃಖದಿಂದ ಸುಖಕ್ಕೆ ಬರಬಹುದಾದ ಎಲ್ಲಾ ಆಗು–ಹೋಗುಗಳನ್ನು ಅವ ಳಿಗೆ ವಿವರಿಸಿ ಹೇಳುತಿದ್ದು ಅವಳ ಮನಸ್ಸಿಗೆ ಸಮಾಧಾನ ತುಂಬಲು ಸರ್ವ ಸಾಹಸ ಪಟ್ಟಿದ್ದೇನೆ. ಆದರೆ ಭಗವಂತನ ಇಚ್ಛೆ ಹಾಗಿತ್ತು. ನಾನೇನು ಮಾಡಲಿ ?"

"ಕೆಲವು ಕಾಲ ಹೀಗಿದ್ದು ಅನಂತರ ಸರಿ ಹೋದಾರು."

"ಮೊದಲು ಮನಸ್ಸಿನ ಮೇಲೆ ಹತೋಟಿ ಬರಬೇಕು."

"ಅಲ್ಲಿಯ ಡಾಕ್ಟರುಗಳೆಲ್ಲಾ ಬಹಳ ಆಸ್ಥೆವಹಿಸಿ ನೋಡಿಕೊಳ್ಳು ತಿದ್ದಾರೆ."

"ನೀನೂ ಅದನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡಪ್ಪಾ."

"ನೀನು ರಜೆ ತೆಗೆದುಕೊಂಡು ಮನೆಯಲ್ಲಿ ಕುಳಿತರೆ ನಿನಗೂ ತಲೆ ಕೆಟ್ಟೀತು ? ಅದನ್ನೆಲ್ಲಾ ಮನಸ್ಸಿಗೆ ಹಚ್ಚಿಕೊಳ್ಳಬೇಡ."

"ನಾಡಿದ್ದಿನಿಂದ ಕೆಲಸಕ್ಕೆ ಬರುವೆ. ಅಮ್ಮನೊಂದಿಗೆ ಕೆಲವು ದಿನಗಳಿರೋಣವೆನ್ನಿಸಿತು. ಅವರು ಮನಸ್ಸಿಗೆ ಬಹಳ ಹಚ್ಚಿಕೊಂಡಿದ್ದಾರೆ. ಅವರಿಗಾಗಿ ರಜೆ ತೆಗೆದುಕೊಂಡೆ ಅಷ್ಟೆ." ಅಘೋರ ಸ್ವಲ್ಪ ಯೋಚಿಸಿ ಪುನಃ ಅಂದ "ಅರವಿಂದಾ ಇಲ್ಲದೆ ಜೀವನ ಬಣಬಣ ಎನ್ನುತ್ತಿದೆ. ಒಮ್ಮೊಮ್ಮೆ ಒಂದೆರಡು ದಿನ ಕರೆತಂದು ಇಟ್ಟುಕೊಳ್ಳಲೇ ಎನ್ನಿಸುತ್ತದೆ. ಆದರೆ ತಿಲೋತ್ತಮನನ್ನು ಕಂಡೊಡನೆಯೇ ಅತಿರೇಕವಾಗುತ್ತೆ. ಅದೇ ಕಷ್ಟ." ಎಂದೆನ್ನುವಾಗ ಕಣ್ಣುಗಳು ಮಗನೆಡೆಗೆ ಹರಿದುವು. ಬಿಳಿಯ ಬಟ್ಟೆಯಿಂದ ಸುತ್ತುವರಿಯಲ್ಪಟ್ಟ ಅವನು ಮಂಜಿನ ಮುದ್ದೆಯಂತೆ ತೋರುತಿದ್ದ. ಗೆದ್ದಲು ಗೂಡಿನಲ್ಲಿ ಗೋಲಿಗಳೆರಡು ಸಿಕ್ಕಿಕೊಂಡಂತೆ ಕಣ್ಣಾಲಿಗಳು ಇಸುಬಿನಿಂದ ಅಂದಗೆಟ್ಟ ಮುಖದಲ್ಲಿ ಫಳಫಳನೆ ಹೊಳೆಯುತಿದ್ದುವು. ಮುಗ್ಧ ಮೌನಿಯಂತೆ ಕುಳಿತ ಅವನು ಎಲ್ಲರ ಮಾತುಕತೆಗಳನ್ನು ತದೇಕ ಚಿತ್ತದಿಂದ ಅವಲೋಕಿಸುತಿದ್ದ.

ಅಘೋರನ ಹೃದಯದಾಳದಲ್ಲಿ ಸಂತಾಪದ ಬಿಸಿಯುಸಿರು ಹರಿದಾಡಿತು. ಸೌಮಾ ಎದ್ದು ಬಂದು ತಿಲೋತ್ತಮನ ಬಳಿಯಲ್ಲಿ ಕುಳಿತುಕೊಂಡು "ತಿಲೋ, ಎರಡು ದಿನ ನಮ್ಮ ಮನೆಗೆ ಬಂದು ಇದ್ದು ಬಿಡು. ನಿಮ್ಮಮ್ಮನನ್ನು ಕರೆತಂದು ಎರಡು ದಿನ ಮನೆಯಲ್ಲಿಟ್ಟುಕೊಳ್ಳಲಿ. ಪಾಪ, ಅವರಿಗೆ ಆಸ್ಪತ್ರೆಯಲ್ಲಿದ್ದು ಬೇಸರವಾಗಿದೆ."

ತಿಲೋತ್ತಮ ಸ್ವಲ್ಪ ಹೊತ್ತು ಸುಮ್ಮನಿದ್ದು ಅನಂತರ 'ಹ್ಞೂ' ಎಂದ.

"ಜೊತೆಗೆ ಓಂಪ್ರಭಾ ಇದ್ದಾಳೆ."

"ಹೇಮಚಂದ್ರ ?"

"ಅವನೂ ಇದ್ದಾನೆ. ಮೂವರೂ ಕೂಡಿ ಆಡಿದರಾಯಿತು."

"ನಾನಲ್ಲಿರಲೇ ಅಪ್ಪಾ ?" ತಿಲೋತ್ತಮ ತಂದೆಯನ್ನು ಕೇಳಿದ.

"ಆದೀತು."

"ಎಷ್ಟು ದಿನ?"

"ಎರಡು ದಿನ."

"ನೀವು ಅರವಿಂದಳನ್ನು ನಿಮ್ಮ ರಜೆ ಮುಗಿಯುವ ಮುನ್ನವೇ ಕರೆ ತನ್ನಿ. ನಾನು ತಿಲೋತ್ತಮನನ್ನು ನೋಡಿಕೊಳ್ಳುವೆ."

"Thank you Doctor."

ತಿಲೋತ್ತಮ ಸ್ವಲ್ಪ ಹೊತ್ತು ಯೋಚಿಸಿ ಕೇಳಿದ "ನಾನಲ್ಲಿದ್ದರೆ ಅಮ್ಮ ನನ್ನು ನೋಡುವುದು ಹೇಗೆ? ನಾನೂ ನೋಡಬೇಕಲ್ಲಾ?"

"ಈ ಸಲ ಬೇಡ ಮಗೂ."

"ಕಿಟಕಿಯಿಂದ ನೋಡಿದರೆ...ಅಥವಾ ದೂರದಿಂದ ನೋಡಿದರೆ?"

ನುಡಿ ಕೇಳಿ ಎಲ್ಲರ ದನಿಗಳೂ "ಅಯ್ಯೋ, ಪಾಪ" ಎಂದುವು. ನಂದಾ ಮೆಲ್ಲನೆ ಕಣ್ಣೊರೆಸಿಕೊಂಡಳು.

"ಈ ಸಲ ಬೇಡ ತಿಲೋ. ಅವರಿಗೊಮ್ಮೆ ಗುಣವಾದರೆ ಸಾಕು. ಅನಂತರ ನಿನ್ನ ಬಳಿಯೇ ಉಳಿಯುತ್ತಾರೆ."

"ಗುಣವಾಗುವುದೆಂದಿಗೆ? ಅಂದಿನಿಂದಲೂ ಅಲ್ಲೇ ಇದ್ದಾರಲ್ಲಾ?"

"ಇದು ಬೇಗನೇ ಗುಣವಾಗುವ ಕಾಹಿಲೆಯಲ್ಲ ಮಗೂ."

"ನನಗೆ ಅಮ್ಮ ಇಲ್ಲದೆ ಬೇಜಾರು."

"ಏನು ಮಾಡುವುದಕ್ಕಾಗುತ್ತೆ ಮಗೂ."

ತಿಲೋತ್ತಮ ಕಣ್ಣರಳಿಸಿ ನೋಡಿದ. ಎಲ್ಲರ ದೃಷ್ಟಿಯೂ ತನ್ನ ಮೇಲಿದ್ದುದರಿಂದ ನಾಚಿಕೆಯಾಗಿ ಅಲ್ಲಿಂದ ಎದ್ದು ಓಡಿಹೋದ. ನಂದಾ ದೇವಿಯ ಕಣ್ಣುಗಳು ತೇವವಾದುವು. ನೊಂದ ಹೃದಯ ದಡದಡನೆ ಮಿಡಿಯಿತು.

ಮರುದಿನ ತಿಲೋತ್ತಮನನ್ನು ಸೌಮಳ ಮನೆಯಲ್ಲಿ ಬಿಟ್ಟು ಅಘೋರ ಅರವಿಂದಳನ್ನು ಕರೆತಂದು ತಾನೇ ಅವಳ ಕಾವಲುಗಾರನಾದ. ಮನೆಗೆ ಬಂದೊಡನೆಯೇ ಮನೆಯಲ್ಲೆಲ್ಲಾ ಓಡಾಡಿದಳು. ಸಂದಿಗೊಂದಿಗಳನ್ನೂ ಬಿಡದೆ ಸಂದರ್ಶಿಸಿದಳು. ಎಲ್ಲಿಯೂ ತಿಲೋತ್ತಮನ ಸುಳಿವಿಲ್ಲ. ಅವಳ ಆತಂಕಪೂರ್ಣನಯನಗಳು ತಿಲೋತ್ತಮನಿಗಾಗಿ ಚಡಪಡಿಸಿದುವು. ಅಂಗಳ

ದಲ್ಲೆಲ್ಲಾ ಓಡಾಡಿದಳು. ಒಮ್ಮೆ ತಪ್ಪು ಹೆಜ್ಜೆಯಿಟ್ಟು ಮೆಟ್ಟಲಿನ ಮೇಲೆ ಮುಗ್ಗರಿಸಿದಳು. ಬಳಿಯಲ್ಲಿದ್ದ ಅಘೋರ ಬೀಳದಂತೆ ಹಿಡಿದು ಒಳಗಡೆ ಕರೆತಂದ.

ಸೊಸೆಯ ಆಶಾಪೂರ್ಣಲೋಚನಗಳನ್ನು ನೋಡಿ ಗಮನವನ್ನು ತನ್ನೆಡೆಗೆ ಸೆಳೆದುಕೊಳ್ಳಲು "ಅರೂ ಬಾಮ್ಮಾ, ಕುಳಿತುಕೊ." ಎಂದಳು ನಂದಾ.

ನಿಂತೇ ಇದ್ದ ಅವಳು "ಕುಳಿತಿದ್ದೇನಲ್ಲಾ ?" ಎಂದಳು.

ನವಿರಾದ ಸೀರೆಗಳನ್ನು ಮುದುರಾಗದಂತೆ ಮುದ್ದಾದ ಶೈಲಿಯಲ್ಲಿ ಉಡುತಿದ್ದ ಅವಳನ್ನು ಅಸ್ತವ್ಯಸ್ತವಾದ ಸೀರೆಯೊಂದು ಬಳಸಿ ಸುತ್ತಿತ್ತು. ಕಂಗೆಟ್ಟ ಕಣ್ಣುಗಳು ಕಾಂತಿಹೀನವಾಗಿದ್ದುವು. ಕೆದರಿದ ಕೂದಲು ಒರಟಾಗಿತ್ತು. ಕಣ್ಣುಗಳನ್ನರಳಿಸಿ "ತಿಲೋ ಎಲ್ಲಿ ?" ಎಂದಳು. ಬೆರಗುಗಣ್ಣುಗಳನ್ನು ಸುತ್ತಲೂ ಅರಳಿಸಿ ಪುನಃ–"ತಿಲೋ ತಿಲೋ ತಿಲೋ !"

"ಹೊರಗಡೆ ಹೋಗಿದ್ದಾನೆ. ಕುಳಿತುಕೋ, ಅರವಿಂದಾ." ಅವಳನ್ನು ಒತ್ತಾಯ ಪೂರ್ವಕವಾಗಿ ಸೋಫಾದ ಮೇಲೆ ಕುಳ್ಳಿರಿಸಿ ಕೈಗೊಂದು ವರ್ತಮಾನ ಪತ್ರಿಕೆಯನ್ನು ಕೊಟ್ಟು–"ಓದು, ಅರವಿಂದಾ." ಎಂದ ಅಘೋರ.

ಅರವಿಂದಾ ಬೇರೆ ಬೇರೆ ಕಲಮುಗಳಲ್ಲಿದ್ದ ವಿಷಯಗಳನ್ನು ಬೇರೆಬೇರೆಯಾಗಿ ಓದದೆ ಎಲ್ಲವನ್ನೂ ಒಟ್ಟುಗೂಡಿಸಿ ಓದಿದಳು. ಪಕ್ಕದಲ್ಲಿ ಕುಳಿತಿದ್ದ ಅಘೋರ ಕಲಮಿನ ನೇರಕ್ಕೆ ಓದುವಂತೆ ಬೆರಳಿನಿಂದ ತೋರಿ ಹೇಳಿದ. ತುಸು ಓದಿ ಪತ್ರಿಕೆಯನ್ನು ಅತ್ತ ಎಸೆದು ಅಡುಗೆಯ ಮನೆಗೆ ಓಡಿದಳು. ಅಘೋರ ಹಿಂಬಾಲಿಸಿದ. ಒಲೆಯ ಮೇಲೆ ಹಾಲಿತ್ತು. ಅದನ್ನಿಳಿಸಿಟ್ಟು ಅಡುಗೆಗಾಗಿ ಪಾತ್ರೆಗಳಿಗೆ ತಡುಕಾಡುತ್ತಾ ಎಲ್ಲೆಡೆಯೂ ಕೈಹಾಕಿ "ಎಲ್ಲಾ ಸ್ಟೀಲ್ ಪಾತ್ರೆಗಳೇ ಇಲ್ಲವಲ್ಲಾ ?" ಎಂದಳು. ಅಘೋರ ಪಕ್ಕದಲ್ಲಿದು ಎಲ್ಲವನ್ನೂ ಗಮನಿಸುತಿದ್ದ. ಕಣ್ಣುಗಳ ಭಾವ ಕೂಗುತಿತ್ತು "ಏನಾದುವು ?"

"ನೀನೇ ನೋಡು ಇಲ್ಲೇ ಎಲ್ಲೋ ಇರಬೇಕು."

ಅವುಗಳು ಎದುರಿಗಿದ್ದರೂ ಗಮನಿಸದೆ "ಏನಾದುವು ? ಏನಾದುವು ?" ಎನ್ನುತ್ತಾ ಹುಡುಕಾಡತೊಡಗಿದಳು. ಕಡೆಗೆ ಸಿಟ್ಟಿನಿಂದ ಕೈಗೆ ಸಿಕ್ಕಿದ ಪಾತ್ರೆಯೊಂದನ್ನು ಧಡಾರನೆ ಕುಕ್ಕಿದಳು.

"ಹೀಗೆ ಮಾಡಿದರೆ ಹೇಗೆ ಅರವಿಂದಾ."

"ಕುದುರೆ ಬಂತು ಕುದುರೆ! ಹೆ ಹೆ ಹೇ!"

"ಅರವಿಂದಾ."

"ನೀನೊಂದು ಶುದ್ಧ ಮೊದ್ದು! ಪ್ರಿನ್ಸಿಪಾಲರಿಂದ ಕರೆಬಂದರೂ ಸುಮ್ಮನಿದ್ದೀಯಲ್ಲಾ?"

"ಹೆಚ್ಚು ಮಾತಾಡಬಾರದು ಅರವಿಂದಾ."

"ಅಘೂ, ಟೆನ್ನಿಸ್ ಆಡೋಣವೇ?"

"ಹ್ಞೂ."

"ಅಮ್ಮಾ, ಅಮ್ಮಾ," ಗಟ್ಟಿಯಾಗಿ ಏರಿದ ದನಿಯಲ್ಲಿ ಕರೆ ಹೊರ ಬಿತ್ತು.

"ಏನು ಅರೂ?"

"ನೀನೊಂದು ಹುಚ್ಚು ಅಮ್ಮ." ದೊಡ್ಡದನಿಯಲ್ಲಿ ನಗು ಹೊರ ಹೊಮ್ಮಿತು.

"ಮಾತು ಕಡಿಮೆ ಮಾಡು ಅರೂ."

"ಏಕೆ? ನನಗೇನು ಹುಚ್ಚೇ?"

"ಅರೂ, ಹಾಲು ಕುಡಿಯುತ್ತೀಯೇನು?"

"ನೀನೇ ಕುಡಿ. ಹಿ ಹಿ ಹ್ಹಿ!"

ಮನದಲ್ಲಿ ಮುಸುಗಿದ ಕತ್ತಲೆಯ ತೆರೆಯನ್ನು ಸೀಳಿ ಬೆಳಕಿನ ಕಿಡಿಯೊಂದು ಹರಿದುಬಂತು. ಒಮ್ಮೆಲೇ ಉದ್ವೇಗದಿಂದ ಅವಳು–"ವಿಮಲ್ ಮಾಮಾ ಇದ್ದಿದ್ದರೆ?" ಅಘೋರ ಮಾತಾಡಲಿಲ್ಲ. ಅವಳು ಓಡಿಹೋಗಿ ಮಾವನ ಹಾಸಿಗೆಯ ಮೇಲೆ ಬೋರಲಾಗಿ ಬಿದ್ದುಕೊಂಡು ಗಳಗಳನೆ ಅಳಲಾರಂಭಿಸಿದಳು.

ಹಿಂದೆಯೇ ಬಂದ ಅಘೋರ ಬೆನ್ನಮೇಲೆ ಕೈಯಾಡಿಸುತ್ತಾ "ಅರೂ." ಎಂದ.

"ಓ...ಅಘೂ...ನಾನು ತಡೆಯಲಾರೆ." ಎನ್ನುತ್ತಾ ಮುಸುಮುಸು ಅತ್ತಳು. ಅವಳನ್ನು ಸಂತೈಸಿ ಗಮನವನ್ನು ಬೇರೆಡೆಗೆ ಸೆಳೆದು ಕೊಳ್ಳಬೇಕಾದರೆ ಅಘೋರನಿಗೆ ಸಾಕುಸಾಕಾಯಿತು. ತುಸು ಹೊತ್ತು ಉರುಳಿತು.

ಹಾಸಿಗೆಯ ಮೇಲೆ ಬೋರಲಾಗಿ ಬಿದ್ದು ಮತ್ತೆ ಬಿಕ್ಕತೊಡಗಿದಳು. ಅಘೋರ ಕಿಟಕಿಯಲ್ಲಿ ದಿಟ್ಟಿಯನ್ನು ತೂರಿ ಸುಮ್ಮನೆ ನೋಡುತ್ತಾ ನಿಂತ. ಅವಳ ದುಃಖ ಹೆಚ್ಚುತ್ತಲೇ ಇತ್ತು. ದುಃಖದ ಕೋಡಿ ಹರಿದು ಎದೆಯ ಭಾರ ಕಡಿಮೆಯಾಗಲೆಂದು ಅಘೋರ ಮಾತಾಡದೆ ನೋಡುತ್ತಾ ಕುಳಿತುಕೊಂಡ. ಮನಸ್ಸು ಗತಕಾಲಕ್ಕೆ ಚಿಮ್ಮಿ ಅಲೆದಾಡಹತ್ತಿತು.

....ವಿಮಲ್‌ದಾಸ್ ವಿಧಿವಶನಾದ ತರುಣದಲ್ಲಿಯೇ ಅರವಿಂದಾ ಮತಿ ವಿಕಲ್ಪಹೊಂದಿ ಮೆಂಟಲ್ ಆಸ್ಪತ್ರೆಯನ್ನು ಸೇರಿದ ದೃಶ್ಯ ಕಣ್ಮುಂದೆ ಸುಳಿದ ಳಿಯಿತು. ತಿಲೋತ್ತಮ ಮುಖದ ಮೇಲಿದ್ದ ಇಸುಬಿನ ತುರಿಯನ್ನು ಪರಚಿ ಗಾಯಗೊಳಿಸಿಕೊಂಡಿದ್ದು ಮುಖವೆಲ್ಲಾ ನೆತ್ತರಿನಿಂದ ತೊಯ್ದು ಕೆಂಪು ಕೆಂಪಾಗಿತ್ತು. ಅದನ್ನು ನೋಡಿದೊಡನೆಯೇ ಅರವಿಂದಾ ತತ್ತರಿಸಿದಳು. ಅಂದೇನೋ ಒಂದು ಬಗೆಯ ಮಂಪರದಲ್ಲಿದ್ದ ಅವಳು ಮರುದಿನ ಅರೆ ಹುಚ್ಚಿ ಳಾದಳು. ತಿಲೋತ್ತಮನನ್ನು ಒಮ್ಮೆ ಪ್ರೀತಿಯಿಂದ ನೋಡಿದರೂ ಇನ್ನೊಮ್ಮೆ ಭಯಾನಕವಾಗಿ ಕೂಗಿ ಚೀತ್ಕರಿಸಿ ಓಡಿಹೋಗುತಿದ್ದಳು ಒಮ್ಮೊಮ್ಮೆ ಹಿಂಸ್ರಪಶುವಾಗುತಿದ್ದುದೂ ಉಂಟು. ಅವಳು ಹುಚ್ಚಾಗಿದ್ದಾ ಳೆಂಬುದನ್ನು ಅರಿಯದ ಹಸುಳೆ ತಿಲೋತ್ತಮನನ್ನು ಮಮತೆಯ ಮಾತೆ ಯಿಂದ ದೂರವಿಡಿಸುವುದು ಎಷ್ಟು ಕಷ್ಟವಾಗಿತ್ತು ?"

ಅಘೋರನ ಶೂನ್ಯ ದೃಷ್ಟಿ ಕಿಟಕಿಯಾಚೆ ತೂರಿತ್ತು. ಅಕ್ಷಿಪಟಲದ ಮೇಲೆ ಕಳೆದುಳಿದ ನಾನಾ ದೃಶ್ಯಗಳು ಸುಳಿದಳಿದುವು. ಅರವಿಂದಳ ಅಸೀಮ ಪ್ರೇಮ ಕಟ್ಟೆಯೊಡೆದ ಕೆರೆಯಂತಾಯಿತೆಂದೆನಿಸಿದಾಗ ಹೃದಯ ಸಂತಾಪ ದಿಂದ ಏರಿ ಇಳಿಯಿತು. ಯೋಚನೆಯಲೆಯಲ್ಲಿ ಅರವಿಂದಳ ಪ್ರಥಮ ಭೇಟಿ ಮೂಡಿ ಬಂದಿತು. ಹಾದಿಯಂಚಿನಲ್ಲಿ ಮಿಂಚಿನಂತೆ ಸುಳಿದು ಮೋಹ ಪಾಶ ದಿಂದ ಬಂಧಿಸಿ ಹಕ್ಕಿಯಂತೆ ಹಾರಿಹೋದ ಅವಳೆಲ್ಲಿ? ಶರೀರ ಸೊರಗಿ ರೂಪು ಗೆಟ್ಟು ನಾಗರೀಕ ವೇಶಭೂಷಣಗಳ ಹುಟ್ಟಡಗಿ ಮತಿ ವಿಕಲ್ಪಳಾದ ಇವಳೆಲ್ಲಿ? ಅಘೋರನ ಮೈಯಲ್ಲಿ ನಸು ಕಂಪನದ ಅಲೆ ಹರಿದಾಡಿ ಮೈನವಿರೆದ್ದಿತು. ಮುಖ ಮೆಲ್ಲಮೆಲ್ಲನೆ ಪ್ರೇತ ಕಳೆಯನ್ನು ತಳೆಯತೊಡಗಿತು.

ತಾನು ಡಾಕ್ಟರಾದರೂ ಕಿಂಚಿತ್ತೂ ಸಹಾಯ ಮಾಡಲಾಗಲಿಲ್ಲವೆನ್ನಿಸಿ

ದಾಗ ಎದೆಯಾಳದಿಂದ ನಿಟ್ಟುಸಿರೊಂದು ಹೊರಬಿತ್ತು. ನೋಟ ಅರವಿಂದಳ ಮೇಲೆ ಹರಿದಾಗ ಅವಳು ನಿದ್ದೆಯ ಮಂಪರಿನಲ್ಲಿದ್ದಳು. ಅವಳ ಮುಖದ ಮೇಲೆ ಒಮ್ಮೆ ಎಳೆನಗು ಸುಳಿದು ಮಾಯವಾಯಿತು. ಅದರ ಹಿಂದೆಯೇ ಹಲ್ಲುಗಳು ಕಟಕಟನೆ ಕಡಿದುವು. ಅವಳನ್ನೇ ನೋಡುತ್ತಾ ಅಲುಗದೆ ಕುಳಿತು ಕೊಂಡ. ಬಾಗಿಲಲ್ಲಿ ನಂದಾದೇವಿಯೊಮ್ಮೆ ಹಣಿಕಿ "ಏನು ಮಾಡುತಿದ್ದಾಳೆ?" ಎಂದು ಕೇಳಿದಳು. ದನಿಯಲ್ಲಿ ಸಂಕಟವಿತ್ತು.

"ಅರೆನಿದ್ದೆಯಲ್ಲಿದ್ದಾಳೆ."

ನಂದಾ ಅವಳಿಗಾಗಿ ತಂದಿದ್ದ ಸುಲಿದ ಹಣ್ಣನ್ನು ಮೇಜಿನ ಮೇಲಿಟ್ಟು "ಅವಳೆದ್ದನಂತರ ಕೊಡಪ್ಪಾ." ಎನ್ನುತ್ತಾ ಹೊರಹೋದಳು.

ಅರವಿಂದಳನ್ನು ಆಸ್ಪತ್ರೆಗೆ ಸೇರಿಸಿದ ನಂತರ ಹಾಸಿಗೆಯಲ್ಲಿನ ಅವಳ ತಾವನ್ನು ಉದ್ದನೆಯ ದುಂಡಗಿನ ದಿಂಬು ಅಲಂಕರಿಸಿತ್ತು. ಅದನ್ನೇ ಅರವಿಂದಳೋ ಎಂಬಂತೆ ತಬ್ಬಿ ನಿದ್ರಿಸುವುದು ಅಘೋರನ ಅನುದಿನದ ವಾಡಿಕೆ. ಕೆಂಪು ಬಣ್ಣದ ಹಿನ್ನೆಲೆಯಲ್ಲಿ ಪುಷ್ಪರಾಜಿಯ ಬೀಡಾದ ಅದು ಅಲಂಕರಿಸಿದ ಹೆಣ್ಣಿನಂತೆ ಮನಮೋಹಕವಾಗಿತ್ತು. ಅರವಿಂದಾ ಅತ್ತ ಹೊರಳಿದಾಗ ಅದನ್ನು ತಬ್ಬಿ ಹಿಡಿದುಕೊಂಡಳು. ಒಂದೆರಡು ಗಳಿಗೆಯ ನಂತರ ಕಣ್ಣು ಬಿಟ್ಟು ನೋಡಿ ಚಿಟ್ಟನೆ ಚೀರಿ ಅದನ್ನತ್ತ ತಳ್ಳಿ ಇತ್ತ ತಿರುಗಿದಳು. ಒಡನೆ ಅಘೋರ ಕಣ್ಣಿಗೆ ಬಿದ್ದ. ಅವನತ್ತ ಕೈಯನ್ನು ನೀಡಿ "ನಾನಿಷ್ಟು ನಿದ್ದೆ ಮಾಡುವೆ." ಎಂದಳು–ಮಗುವಿನಂತೆ.

"ಹ್ಞೂ ಮಾಡು." ಎನ್ನುತ್ತಾ ನೀಡಿದ ಕೈಯನ್ನು ಅದುಮಿ ಹಿಡಿದ. ಅವಳು ಹಾಗೇ ಕಣ್ಮುಚ್ಚಿದಳು."

ಅರವಿಂದಾ ಎಚ್ಚರವಾದಾಗ ಸಂಜೆಯ ತಣ್ಣನೆಯ ತಿಳಿಗಾಳಿ ಒಯ್ಯೊಯ್ಯನೆ ತೀಡುತಿತ್ತು. ಅವಳು ಅಗಲವಾಗಿ ಕಣ್ತೆರೆದು ನುಡಿದಳು "ಅದೇಕೆ ರೈಲೋಡುತ್ತಿದೆ?"

"ಎಲ್ಲಿ?"

"ಅಷ್ಟೂ ಕಾಣಿಸುವುದಿಲ್ಲವೇ? ಅಗೋ ಅಲ್ಲಿ."

ಅವಳು ಬೆರಳು ತೋರಿದತ್ತ ಅಘೋರನ ಕಣ್ಣುಗಳು ಹೊರಳಿದುವು. ಅಲ್ಲಿ ಏನೂ ಇರಲಿಲ್ಲ. ಪುನಃ ಅವಳು ಚೀರುದನಿಯಲ್ಲಿ ಚೀರಿದಳು "ಅಯ್ಯೊ,

ರೈಲು ಹೊರಟೇಹೋಯಿತು !"

ಅಂದು ರಾತ್ರಿ ಭಯದಿಂದ ತಾಯಿ ನಿಷೇಧಿಸಿದರೂ ಲೆಕ್ಕಿಸದೆ ಅಘೋರ ತನ್ನ ಹಾಸಿಗೆಯಲ್ಲಿನ ದಿಂಬನ್ನು ತೆಗೆದು ಅವಳಿಗೆ ಸ್ಥಳವನ್ನು ತೆರವು ಮಾಡಿದ. ಅವಳು ಸೊಳ್ಳೆಪರದೆಯನ್ನೇ ನೋಡುತ್ತಾ ಅಸ್ತವ್ಯಸ್ತವಾಗಿ ಬಿದ್ದುಕೊಂಡಿದ್ದಳು. ಹೊದ್ದಿಕೆಯನ್ನೆಳೆದುಕೊಂಡು ಅಘೋರ ಬಲುಮೆಯಿಂದ– "ಅರವಿಂದಾ, ಮನಸ್ಸನ್ನು ಭ್ರೂಮಧ್ಯೆ ಕೇಂದ್ರೀಕರಿಸಿ ಅದು ಅತ್ತಿತ್ತ ಚಲಿಸದಂತೆ ಕಟ್ಟಿಹಾಕುವುದೇ ಏಕಾಗ್ರತೆ. ನಿನ್ನಿಂದ ಎಷ್ಟು ಹೊತ್ತು ಹಾಗಿರುವುದಕ್ಕಾದೀತೋ ಪ್ರಯತ್ನ ಮಾಡು."

"ಮನಸ್ಸೆಲ್ಲಿದೆ?"

"ಆಳವಾಗಿ ಯೋಚಿಸು ಅರವಿಂದಾ."

ಅರವಿಂದಾ ಕಿಲಕಿಲನೆ ನಕ್ಕಳು. ತುಸು ಹೊತ್ತು ಅತ್ತಿತ್ತ ಹೊರಳಾಡಿ ಅಘೋರನ ಕೈಹಿಡಿದೆಳೆದುಕೊಂಡು "ರಂಗೀ ಬಾರೆ. ರಂಗೀ ರಂಗೀ !" ಎಂದು ಕೂಗಿದಳು.

ಅವಳನ್ನು ಮೃದುಡವಿ ಸಾಂತ್ವನ ಗೈಯುವ ದನಿಯಿಂದ ಮೆಲ್ಲನೆ– "ಅರವಿಂದಾ ಸ್ವಲ್ಪ ಹೊತ್ತು ಸುಮ್ಮನಿರು."

"ನಮ್ಮ ಗಿಳಿಯನ್ನು ಬೆಕ್ಕು ತಿಂದಿತು. ನೋಡಿದ್ಯಾ?"

"ಅರೂ ಹೆಚ್ಚು ಮಾತಾಡಬಾರದು."

"ರಾಮೂ, ರಾಮುಪ್ಪಾ ! ಬೆಕ್ಕು ಬಂತು ಮಿಯಾವ್, ಮಿಯಾವ್ ! ಅಯ್ಯೋ ಗಿಳಿ ಸತ್ತೇಹೋಗಿದೆ !"

"ಅರೂ, ಶಾಂತಳಾಗು."

"ಅಘೂ, ನಿನಗೊಂದು ಹುಚ್ಚು." ಹಲ್ಕಿರಿದು ಅಣಕಿಸಿದಳು ಅವಳು.

ರಾತ್ರಿಯ ಪ್ರಶಾಂತ ವಾತಾವರಣದಲ್ಲಿ ಎಲ್ಲೆಲ್ಲೂ ನೀರವ, ನಿಷ್ಪಂದ. ನೀರವದ ಮಧ್ಯೆ ಸಜ್ಜುಗೊಂಡ ಸೆಜ್ಜೆಯ ಮೇಲೆ ನೊಂದೆದೆಯಿಂದ ಬಿಸಿಯುಸಿರು ನೆಲೆಯಿಲ್ಲದೆ ಹೇದಾಡಿತು. ಅಘೋರ ಸಾವರಿಸಿಕೊಂಡು ನುಡಿದ. "ಅತಿ ಆಸೆ ನಿರಾಸೆಗಳಿಂದ ಮತಿವಿಕಲ್ಪವಾಗಿ ಬಾಳು ಬೆಂಗಾಡಾಗುತ್ತದೆ ಅರವಿಂದಾ."

ಅರವಿಂದಾ ಮಾತಾಡಲಿಲ್ಲ.

ಅಘೋರ ಪುನಃ ಮುಂದುವರಿದ "ಚಂಚಲ ಮನಸ್ಸೇ ಮತಿ ವಿಕಲ್ಪಕ್ಕೆ ಕಾರಣ. ಇಂದ್ರಿಯ ನಿಗ್ರಹವಿಲ್ಲದೆ ಮನಸ್ಸಿನ ಮೇಲೆ ಹತೋಟಿ ಸಾಧ್ಯವಿಲ್ಲ. ಮನಸ್ಸಿನ ಮೇಲಣ ಹತೋಟಿಯಿಲ್ಲದೆ ಬುದ್ಧಿ ಕಲ್ಪತರುವಾಗದು. ಒಲ್ಲದ ಯಾವುದೇ ಒಂದು ಸಣ್ಣ ವಿಚಾರವೂ ಮುಳ್ಳಿನಂತೆ ಮನವನ್ನು ಕುಕ್ಕುವುದು ಸಹಜ. ಆದರೂ ಅದನ್ನು ದಿಟ್ಟತನದಿಂದ ತಳ್ಳಿಹಾಕಿದಲ್ಲದೆ ಮಾನಸಿಕ ಹಿಂಸೆ ಹೋಗದು. ರಾಗಭಾವೋದ್ವೇಗಗಳ ಒತ್ತಡ ಹೆಚ್ಚಿದಾಗ, ಕಹಿ ತುಂಬಿದ ಮನಸ್ಸು ನೊಂದು ಭಾರವಾದರೆ ಭಾವನೆಗಳನ್ನು ಅದುಮಿ ಹಿಡಿಯದೆ ಹೊರ ಹರಿಯಗೊಟ್ಟು ಮನಸ್ಸನ್ನು ಹಗುರ ಮಾಡಿಕೊಳ್ಳುವುದು ಲೇಸು ಅರವಿಂದಾ.

"ಇಲ್ಲದ ವಸ್ತುಗಳಿಗಾಗಿ ಬಯಸಿ ಎದೆಯಾಳದಲ್ಲಿ ತಳಮಳ ತುಂಬಿ ರಾಗಭಾವೋದ್ವೇಗಗಳಿಗೆ ಸಿಕ್ಕಿ ತನು ತತ್ತರಿಸಿದಲ್ಲಿ ರೋಗಾದಿಬಾಧೆಗಳಿಗೆ ದೇಹ ಬಲಿಯಾದರೂ ಆಗಬಹುದು. ಅಥವಾ ಮತಿ ವಿಕಲ್ಪವಾದರೂ ಆಗ ಬಹುದು ಅರವಿಂದಾ."

ಅರವಿಂದಾ ಮಾತಾಡದಿರಲು, ಅವಳತ್ತ ತಿರುಗಿನೋಡಿದಾಗ ಅಘೋ ರನಿಗೆ ಎಲ್ಲಿಲ್ಲದ ಅಚ್ಚರಿ ಮೂಡಿತು. ಮತಿ ವಿಕಲ್ಪವಾದ ಮೇಲೆ ಅವಳ ಮುಖ ಮಂಡಲವು ಅಷ್ಟೊಂದು ಪ್ರಶಾಂತವಾಗಿದ್ದುದನ್ನು ಅವನೆಂದೂ ಕಂಡಿರಲಿಲ್ಲ. ಅರೆಮುಚ್ಚಿದ ಕಣ್ಣುಗಳಲ್ಲಿ ನಿದ್ದೆ ತುಂಬಿಬಂದಿತ್ತು. ಕನಸಿನ ಮಾಯಾ ಲೋಕದಲ್ಲಿ ಸಿಹಿಯನ್ನುಂಡಿದ್ದ ಅವಳ ಕೆನ್ನೆಗಳ ಮೇಲೆ ಸಂತಸದ ಎಳೆ ನಗು ಬೆಳುದಿಂಗಳಿಂತೆ ಪಸರಿಸಿತ್ತು. ಏರಿಳಿಯುವ ಎದೆಯ ಮೇಲೆ ಕೈಗಳೆರಡನ್ನೂ ಕಟ್ಟಿಕೊಂಡು ನಿದ್ರಾದೇವಿಯ ಉಡಿಯಲ್ಲಿ ಮಗುವಿನಂತೆ ಮಲಗಿದ ಅವಳನ್ನು ಕರುಣೆ ತುಂಬಿದ ಕಣ್ಣುಗಳಿಂದ ನೋಡುತಿದ್ದಂತೆ ಭಾರವಾದ ಎದೆ ತುಸು ಹಾಯಾಗಿ ಉಸಿರಾಡಿತು.

ಮೆಲ್ಲನೆ–ಬಹು ಮೆಲ್ಲನೆ ಸ್ವಿಚ್ ಒತ್ತಿ ದೀಪ ನಂದಿಸಿದ. ಕೊಠಡಿ ಯಲ್ಲಿನ ಪ್ರಕಾಶಮಾನವಾದ ದೀಪ ಆರುತ್ತಲೂ ಮಿಣುಮಿಣನೆ ಉರಿಯುವ ಕೆಂಪು ದೀಪವೊಂದು ಹತ್ತಿಕೊಂಡು ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿತು. ಅಘೋರ ಮೆಲ್ಲನೆ ಅವಳತ್ತ ತಿರುಗಿ ನೋಡಿದ. ಕನಸಿನ ಲೋಕದ ಪೆಂಪಳಿದು ನಿದ್ದೆಯ ಮಹಾ ಶಾಂತಿಯಲ್ಲಿ ಸಂಪೂರ್ಣ ಮುಳುಗಿದ್ದಳು ಅವಳು.

ಹಾಗೇ ಯೋಚಿಸಿದ. ತನ್ನ ಧ್ಯೇಯೋದ್ದೇಶಗಳು ಮನದಲೆಯಲ್ಲಿ ಮೂಡಿನಿಂತುವು. "ಏನಿದ್ದರೂ ನನ್ನ ಸೇವೆಯಲ್ಲಾ ದುಡಿಯುವ ಕೈಗಳಿಗೆ!" ಎಂದು ಭಾವೋದ್ವೇಗದಿಂದ ನುಡಿಯುತಿದ್ದ ದಿನಗಳು ಅಕ್ಷಿ ಪಟಲದ ಮೇಲೆ ಅಣಕಿಸುವಂತೆ ಸುಳಿಸುಳಿದಳಿದುವು. ಭಾವಪರವಶತೆಯಿಂದ ಕಣ್ಮುಚ್ಚಿದ ಅಘೋರ.

...ಈ ಜೀವನ ಎಷ್ಟು ಘೋರ!...

ಅಧ್ಯಾಯ
೩೨

ಇಂದು ತಿಲೋತ್ತಮನ ಹನ್ನೊಂದನೆಯ ಜನ್ಮದಿನ. ಅರವಿಂದಳಿಲ್ಲದಿದ್ದರೂ ಅಘೋರನ ಸಡಗರವೇ ಸಡಗರ. ನಂದಾ ಮೊಮ್ಮಗನಿಗೆ ಎಣ್ಣೆಯೊತ್ತಿ ನೀರೆರೆದು ಹೊಸ ಬಟ್ಟೆ ತೊಡಿಸಿ ಅಲಂಕರಿಸುವ ಕಾರ್ಯದಲ್ಲಿ ತೊಡಗಿದ್ದಾಳೆ. ಅಘೋರ ತನ್ನ ಗೆಳೆಯರ ವೃಂದವನ್ನು ಎದುರುನೋಡುತಿದ್ದ. ಮೇಜಿನ ಮೇಲೆ ನಾನಾ ಬಗೆಯ ಸಿಹಿತಿಂಡಿಗಳ ಜೋಡಣೆಯಾಗಿದೆ. ಚಹ ಕಾಫಿ ಶರಬತ್ತುಗಳೂ ತಯಾರಾಗಿವೆ. ಮನೆಯನ್ನು ಅಂದವಾಗಿ ಅಲಂಕರಿಸುವಾಗಲೆಲ್ಲಾ ಅರವಿಂದಳನ್ನು ನೆನೆನೆನೆದು ಮರುಗಿದ ಅಘೋರ. ಅವಳೊಬ್ಬಳು ಚೆನ್ನಾಗಿದ್ದಿದ್ದರೆ ನನಗೆ ಸ್ವರ್ಗವೇ ಬೇಕಿರಲಿಲ್ಲ ಎಂದು ತನ್ನಲ್ಲೇ ತಾನು ದುಃಖಿಸಿದ. ಅವಳಿಗಾಗಿ ಅಂತಃಕರಣವು ಕರಗಿ ನೀರಾಗಿ ಹರಿಯಿತು. ಮನೋವೇದನೆಯಿಂದ ಹುಚ್ಚೆದ್ದು ತನು ತತ್ತರಿಸಿದರೂ ಕೈಗಳು ಯಾಂತ್ರಿಕವಾಗಿ ಕೆಲಸ ಮಾಡುತಿದ್ದುವು.

ತಿಲೋತ್ತಮ ಮರಿಯಾನೆಯಂತೆ ಮುದ್ದುಮುದ್ದಾಗಿ ಓಡುಡುತಿದ್ದ. ಸುಂದರವಾದ ಮುಖಕ್ಕನುಗುಣವಾಗಿ ನಳನಳಿಸಿ ಬೆಳೆದ ಬಾಲ ಕೋಮಲ ಶರೀರ. ಅಗಲವಾದ ಹೊಳೆಹೊಳೆಯುವ ಕಣ್ಣುಗಳು. ನೀಳವಾದ ಮೂಗು, ಪುಟ್ಟಬಾಯಿ. ಕೆಂಪನ್ನು ಚೆಲ್ಲುವ ಚೆಂದುಟಿ. ಮೈಯಲ್ಲಿ ಇಸುಬಿನಸಾಮ್ರಾಜ್ಯವಿಲ್ಲದೆ ಹೋಗಿದ್ದರೆ ತಿಲೋತ್ತಮ ನಿಜವಾಗಿಯೂ ತಿಲೋತ್ತಮನೇ ಹೌದು. ಮುಖದಲ್ಲಿನ ಇಸುಬಿನ ಮೇಲೆ ಪೌಡರನ್ನು ಬಳಿದು ನಂದಾದೇವಿ ನಸು ಮರೆ ಮಾಚಿದ್ದಳು. ದೇಹಾಲಂಕಾರ ಮುಗಿದ ಮೇಲೆ ತಂದೆಯ ಬಳಿಗೆ ಓಡೋಡಿ ಬಂದು–"ಅಪ್ಪಾ! ಇಂದು ಓಂಪ್ರಭಾನೂ ಬರುತ್ತಾಳೆ."

"ಓಹೋ!" ನಗುನಗುತ್ತಾ ಅಘೋರ ಉದ್ಗಾರ ತೆಗೆದ.

"ನಿನ್ನೆ ನಾನೇ ಅವಳಿಗೆ ಹೇಳಿ ಬಂದಿದ್ದೇನೆ."

"ಅವಳೊಬ್ಬಳೆಯೇ? ಅಥವಾ ಇನ್ನೂ ಇತರ ಹುಡುಗಿಯರು ಬರಲಿದ್ದಾರೋ?"

"ಇಲ್ಲಪ್ಪಾ"

"ಅವಳೊಂದಿಗೆ ಕೂಡಲು ಇತರ ಹುಡುಗಿಯರು ಬೇಡವೇ ?"

"ಇನ್ನ್ಯಾರೂ ಬೇಡ."

"ಹಾಗೆಂದರೆ ಹೇಗೆ ತಿಲೋ ?"

"ಹುಡುಗರೇ ಬೇಕಾದಷ್ಟು ಮಂದಿ ಇದ್ದಾರಲ್ಲಾ ?"

"ಸರಿ, ಬಿಡು."

ಅಘೋರ ಮಗನ ಮುದ್ದು ಮುಖವನ್ನು ನೇವರಿಸಿ ಮುದ್ದಿಟ್ಟುಕೊಂಡ. ಹಳೆಯ ನೆನಪೊಂದು ಮನದಲೆಯಲ್ಲಿ ಸುಳಿದಳಿಯಿತು. ಒಡನೆ ಕಣ್ಣುಗಳು ಕೆಂಪುಕೆಂಪಾದುವು.

ಹೊತ್ತು ಐದರ ಅಂಚನ್ನು ಮುಟ್ಟುತ್ತಲೂ ಅಲ್ಲಿ ಪುಟ್ಟ ಪುಟಾಣಿಗಳ ದಂಡೇ ನೆರೆಯಿತು. ತಣ್ಣನೆಯ ಸುಳಿಗಾಳಿ ಒಲವಿನಿಂದ ಬೀಸಿ ಹೂ ಮಕ್ಕಳ ಮೈಗೆ ಚಾಮರವಿಕ್ಕಿತು. ಅಘೋರನ ಗೆಳೆಯ ವೃಂದವೂ ಒಮ್ಮೆಂದೊಮ್ಮೆಲೇ ಬಂದು ನೆರೆದರು. ಡಾ|| ಘನಶ್ಯಾಮ್ ಡಾ|| ಜಗಜೀವನ್ ಡಾ|| ಗಜಾನನ ಡಾ|| ಭಗವಾನ್ ಡಾ|| ಭಾರ್ಗವಾ ಡಾ|| ಲಾರೆನ್ಸ್ ಡಾ|| ಚೆಲುವಾಂಬಾ ಡಾ|| ಹುಸೇನ್ ಡಾ|| ಅಬ್ದುಲ್ ಸುಭಾನ್ ರವರಂಥ ಹಿರಿಯ ಡಾಕ್ಟರುಗಳೂ ತನ್ನ ಸಮಕಾಲೀನರಾದ ಕಿರಿಯ ಡಾಕ್ಟರುಗಳ ದಂಡೂ ಅಲ್ಲಿ ಕುಲುಕುಲು ನಗೆಯನ್ನು ಬೀರಿ ಹಾಸ್ಯದ ಚಟಾಕಿಗಳನ್ನು ಹಾರಿಸುತ್ತಾ ಆನಂದದಿಂದ ಕೂಡಿದರು. ಡಾ|| ಸೌಮಳ ಕೈಯನ್ನು ಹಿಡಿದುಕೊಂಡು ಅಪ್ಸರೆಯಂತೆ ಒಳ ಬಂದ ಓಂಪ್ರಭಾ ಒಮ್ಮೆ ಸುತ್ತಲೂ ಕಣ್ಣುಗಳನ್ನು ಹೊರಳಿಸಿದಳು. ಅವಳ ನೋಟಕ್ಕೆ ಹುಡುಗಿಯರು ಬೀಳದಿದ್ದುದರಿಂದ ಮನಸ್ಸು ಮುದುಡಿ ಕೊಂಡಿತು. ಪುನಃ ಪುನಃ ಕಣ್ಣಾಲಿಗಳನ್ನು ಎಲ್ಲೆಡೆಯೂ ಹೊರಳಿಸಿದಳು. ಹುಡುಗಿಯರ ಸುಳಿವೇಯಿಲ್ಲ.

ಪಕ್ಷಿಯ ಬಿಚ್ಚಿದ ರೆಕ್ಕೆಯಂತೆ ಅವಳ ತುಂಬು ನಿರಿಯ ಲಂಗ ಉಬ್ಬಿ ನಿಂತಿತ್ತು. ದೂರದಲ್ಲಿ ನಿಂತ ಅವಳ ನಿಲುವು ಎಲ್ಲರ ಮನಸ್ಸನ್ನೂ ತಕ್ಷಣ ಆಕರ್ಷಿಸಿತು. ಅಲ್ಲಿಂದಲೇ ಎಲ್ಲರೂ ಕರೆದರು "ಬಾಮ್ಮಾ."

ದನಿ ಕೇಳಿ ಹುಡುಗರ ಕೂಟದಲ್ಲಿದ್ದ ತಿಲೋತ್ತಮ ಕತ್ತೆತ್ತಿ ನೋಡಿದ.

"ಏನು ? ಅಲ್ಲೇ ನಿಂತುಬಿಟ್ಟಿಯಲ್ಲಾ ?" ಎನ್ನುತ್ತಾ ಓಡಿಬಂದ.

ಮತ್ತೊಮ್ಮೆ ಸುತ್ತಲೂ ನೋಡಿ "ಊಹ್ಞೂ." ಎಂದಳು ಅವಳು.

"ಏಕೆ ಮಗೂ ?" ಸೌಮ್ಯಾ ಕೇಳಿದಳು.

"ನನ್ನೊಂದಿಗೆ ಆಡಲು ಯಾರಿದ್ದಾರೆ ಇಲ್ಲಿ ?" ಮಗು ಬಿಗುಮಾನದಿಂದ ಕೇಳಿತು.

"ಎಷ್ಟೊಂದು ಮಂದಿ ಮಕ್ಕಳಿದ್ದಾರೆ ? ಇನ್ನೇನು ಬೇಕು ನಿನಗೆ ?"

"ಊಹ್ಞೂ. ಇಲ್ಲಿರುವುದೆಲ್ಲಾ ಬರೇ ಹುಡುಗರು !" ಹುಬ್ಬು ಗಂಟಿಕ್ಕಿ ಬಾಯಿ ಸೊಟ್ಟಮಾಡಿ ಮುಂದೆ ಹೆಜ್ಜೆ ಇಡದೆ ಬಿಗುಮಾನದಿಂದ ಅಲುಗದೆ ನಿಂತಳು–ಓಂಪ್ರಭಾ.

ಹುಡುಗರೆಲ್ಲಾ ಕೇಕೆಹಾಕಿ ನಕ್ಕರು. ತಿಲೋತ್ತಮ ಒತ್ತಾಯ ಮಾಡಿದ "ಇದೆಂಥಾ ಜಂಭ ?"

"ಅದೆಲ್ಲಾ ಬಿಡು ತಿಲೋ ! ನನಗೆ ಹುಡುಗಿಯರೇ ಬೇಕು." ಅದೇ ಧಾಟಿಯಲ್ಲಿ ಮತ್ತೆ ನುಡಿದಳು–ಓಂಪ್ರಭಾ.

"ಹಾಗೆಂದರೆ ಹೇಗೆ ಮಗೂ, ಇದ್ದವರೊಂದಿಗೆ ಆಡು."

ತಾಯಿಯ ಮಾತಿಗೆ ಮಗು ಮಣಿಯಲಿಲ್ಲ. ಸೀರೆಯ ಸೆರಗನ್ನು ಹಿಡಿದು ಕೊಂಡು ತಾಯಿಯ ಹಿಂದೆ ನಿಂತಳು. ದೊಡ್ಡವರನೇಕರು ಒತ್ತಾಯ ಮಾಡಿದರು. ಕೂಡಿದ ಮಕ್ಕಳೂ ಅವಳನ್ನು ಆಟಕ್ಕೆ ಕರೆದರು. ಆದರೂ, ಅವಳು ಅಲುಗಲಿಲ್ಲ ಅಘೋರ ನೆರೆಮನೆಯ ಒಂದಿಬ್ಬರು ಹೆಣ್ಣು ಮಕ್ಕಳನ್ನು ಬರಮಾಡಿಕೊಂಡ ಮೇಲೆ ಓಂಪ್ರಭಾ ಸಮಾಧಾನ ಹೊಂದಿ ಅವರ ಕೂಟಕ್ಕೆ ಕೂಡಿಕೊಂಡಳು. ಹುಡುಗರು ಅಲ್ಲಿಂದಲೇ ಅಣಕಿಸಿ ಕೇಕೆಹಾಕಿ ನಕ್ಕರು. ಬಣ್ಣಬಣ್ಣದುಡಿಗೆಯ ಮುದ್ದು ಮಕ್ಕಳ ಆಟಪಾಠಗಳನ್ನು ದೊಡ್ಡವರು ನೋಡುತ್ತಾ ಕುಳಿತರು.

ಮಹಿಳಾ ಅತಿಥಿಗಳನ್ನು ನಂದಾ ನಗುಮುಖದಿಂದ ಸ್ವಾಗತಿಸಿದರೂ ಮನದಲ್ಲಿ ಅರವಿಂದಾ ಚೆನ್ನಾಗಿದ್ದಿದ್ದರೆ ಎಂಬ ಯೋಚನೆ ಮೂಡ ದಿರಲಿಲ್ಲ. ಮನದಳಲನ್ನು ಹುಗಿದಿಟ್ಟು ನಲ್ಮೆಯಿಂದ ಎಲ್ಲರನ್ನೂ ಬರಮಾಡಿ ಕೊಂಡಳು. ಡಾ|| ಚೆಲುವಾಂಬ ಡಾ|| ಸೌಮ್ಯಾ ಡಾ|| ಶಾರದಾ ಚಂದ್ರಿಕಾ ಮೈತ್ರೇಯಿ ವಂದನಾರವರುಗಳಿದ್ದರು. ಗೆಳತಿಯಿಲ್ಲದ ಸಂತೋಷ ಸಮಾರಂಭ

ನಂದನಳ ಮನವನ್ನು ಈಟಿಯಂತೆ ಇರಿದಿತ್ತು. ಅವಳ ಚಿತ್ರಪಟವನ್ನೇ ನಿಟ್ಟಿಸಿ ನೋಡುತ್ತಾ ತುಸು ಹೊತ್ತು ಕುಳಿತುಕೊಂಡಳು.

ನೆರೆದ ಅತಿಥಿಗಳ ಬಳಿಗೆ ಮಗನನ್ನು ಕರೆತಂದು ಇಂದಿಗೆ "ಹತ್ತು ವರ್ಷ ತುಂಬಿತು." ಎಂದು ಹೆಮ್ಮೆಯಿಂದ ನುಡಿದ ಅಘೋರ. ತಿಲೋತ್ತಮ ಎಲ್ಲರ ಬಳಿಗೂ ಹೋಗಿ ತಲೆ ಬಾಗಿ ಕರಗಳನ್ನು ಜೋಡಿಸಿ ಎಲ್ಲರ ಆಶೀರ್ವಚನಗಳನ್ನು ಹೊತ್ತು ಹಿಂದಿರುಗಿದ ನಂತರ ಅಘೋರ ಎಲ್ಲರಿಗೂ ಸಿಹಿ ಹಂಚಿದ. ಅದ್ಧೂರಿಯಿಂದ ಟೀ ಪಾರ್ಟಿಯು ಮುಗಿಯುತ್ತಲೂ ಹೊರಡಲಿದ್ದಾಗ ತಿಲೋತ್ತಮನ ಇಸುಬು ಗುಣವಾಗದಿದ್ದುದನ್ನು ನೋಡಿ ಡಾ|| ಘನಶ್ಯಾಮ್ ಅಂದರು "ಮಗುವಿಗೆ ಕೆಲವು ಕಾಲ ಔಷಧ ನಿಲ್ಲಿಸಿ ನೋಡಿರಿ."

"ನಾನೂ ಅದನ್ನೇ ಯೋಚಿಸುತ್ತಿದ್ದೇನೆ." ಎಂದ ಅಘೋರ.

"ಯಾವುದೋ ಅಲರ್ಜಿ ಇರಬಹುದು."

"ಇದುವರೆವಿಗೂ ಏನೆಂಬುದನ್ನು ಕಂಡುಕೊಳ್ಳಲಾಗಲಿಲ್ಲ. ಈಚೆಗೆ ಸದಾ ನೆಗಡಿ ಬೇರೆ."

"ಇದುವರೆವಿಗೆ ಔಷಧ ಕೊಟ್ಟು ನೋಡಿದ್ದೀರಿ. ಇನ್ನು ಕೊಡದಿರುವುದು ಲೇಸು."

"ಪಾಪ, ಮಗುವನ್ನು ನೋಡಿದರೆ ಸಂಕಟವಾಗುತ್ತದೆ." ಎಂದರು ಲಾರೆನ್ಸ್.

"ತೊಂದರೆಗಳು ಬಂದರೆ ಹೀಗೆಯೇ ಒಂದಾದಮೇಲೊಂದರಂತೆ ಬರುತ್ತಲೇ ಇರುತ್ತವೆ. ಅದನ್ನು ಮನಸ್ಸಿಗೆ ಹಚ್ಚಿಕೊಳ್ಳಬಾರದು." ಸಮಾಧಾನ ಹೇಳಿದರು ಡಾ|| ಘನಶ್ಯಾಮ್. ಅಘೋರನ ಮುಖಮಂಡಲದ ಮೇಲೆ ವ್ಯಸನದ ಕಪ್ಪು ಛಾಯೆ ಕ್ಷಣಕಾಲ ಮಿನುಗಿ ಮಾಯವಾಯಿತು.

ಅತ್ತ ಕಡೆ ಹೆಂಗಸರ ಗುಂಪಿನಲ್ಲಿ ಕುಳಿತಿದ್ದ ನಂದಾ ಅದೇ ವಿಚಾರವಾಗಿ ಮಾತನಾಡುತ್ತಾ ಹೇಳಿದಳು "ತಿಲೋ ನೋಡಿದರೆ ಹೀಗೆ; ಅರವಿಂದಾ ನೋಡಿದರೆ ಹಾಗೆ. ಈ ಬದುಕೇ ನಿರರ್ಥಕ ಎನ್ನಿಸುವಷ್ಟು ಮನಸ್ಸಿಗೆ ಬೇಸರವಾಗಿದೆ. ನನಗೂ ವಾತದಿಂದ ಕೀಲುಕೀಲುಗಳಲ್ಲಿ ನೋವು. ಕೆಲವು ದಿನಗಳಂತೂ ಓಡಾಡುವುದೇ ಕಷ್ಟವಾಗುತ್ತದೆ." ಎಂದು ತನ್ನ ಸಂಕಟವನ್ನಷ್ಟು ತೋಡಿಕೊಂಡಳು. "ಮನೆಯಲ್ಲಿ ನಾನೊಬ್ಬಳೇ ಇರುವುದರಿಂದ

ನನ್ನ ಜೀವ ಈಗ ಅಮೂಲ್ಯವಾಗಿ ಬಿಟ್ಟಿದೆ. ನನಗಿಷ್ಟು ತಲೆ ನೋವು ಬಂದರೂ ಅಘೂ ಗಾಬರಿಯಾಗಿಬಿಡುತ್ತಾನೆ. ಅವನನ್ನು ಸಂತೋಷದಿಂದಿಡುವುದಕ್ಕಾಗಿ ನಾನು ಎಲ್ಲ ಸಂಕಟವನ್ನೂ ಹುಗಿದಿಟ್ಟುಕೊಳ್ಳುವೆ."

ನಂದಾದೇವಿಯು ಕಣ್ಣುಗಳಂಚಿನಲ್ಲಿ ನೀರಾಡಿತು. ಕರವಸ್ತ್ರದಿಂದ ತೀಡಿಕೊಂಡು ಮುಂದುವರಿದಳು "ಅರವಿಂದಾ ಸುಖವಾಗಿದ್ದಿದ್ದರೆ ಅದರ ರೀತಿಯೇ ಬೇರೆಯಾಗುತಿತ್ತು. ಯಾಕೋ ದೇವರಿಗೆ ನಮ್ಮ ಮೇಲೆ ದಯೆಬರಲಿಲ್ಲ."

"ಪಾಪ, ಎಲ್ಲರಿಗೂ ಒಂದೊಂದು ಬಗೆಯ ಕಷ್ಟ. ಅಘೋರ ಬಹಳ ಎಚ್ಚರಿಕೆ ತೆಗೆದುಕೊಳ್ಳುವ ವ್ಯಕ್ತಿ. ಆದರೂ ಹೀಗಾದುದು ಗ್ರಹಚಾರವಲ್ಲದೆ ಮತ್ತೇನಿಲ್ಲ." ಎಂದಳು ಡಾ|| ಚೆಲುವಾಂಬ.

"ಅವನು ಬೇಸರವಿಲ್ಲದೆ ಎಚ್ಚರಿಕೆ ತೆಗೆದುಕೊಳ್ಳುತ್ತಾನೆ. ತಿಲೋತ್ತಮನಿಗೆ ಕೊಡುವ ಪ್ರತಿಯೊಂದು ಅನ್ನ ಪಾನಾದಿಗಳನ್ನು ಕ್ರಮ ಬದ್ಧವಾಗಿ ಬರೆದಿಡುತ್ತಾನೆ. ಕಳೆದ ವರ್ಷ ಯಾವುದಾದರೂ ಗಿಡ ಗೆಂಟೆಯಿಂದ ಅಲರ್ಜಿಕ್ ಆಗಿರಬಹುದೇ ಎಂಬುದನ್ನು ಪರೀಕ್ಷಿಸಲೋಸುಗ ಮನೆಯಲ್ಲಿದ್ದ ಎಲ್ಲಾ ಗಿಡ ಗೆಂಟೆಗಳನ್ನು ಕಿತ್ತುಹಾಕಿಸಿದ. ಆದರೂ ಕಡಿಮೆಯಾಗದುದನ್ನು ನೋಡಿ ಅದಲ್ಲವೆಂಬ ನಿರ್ಧಾರಕ್ಕೆ ಬಂದ. ಈ ವರ್ಷ ನಾಯಿ ಬೆಕ್ಕುಗಳಿಂದ ಅಲರ್ಜಿ ಇರಬಹುದೇ ? ಎಂಬುದನ್ನು ಪರಿಶೀಲಿಸಲು ಅವುಗಳನ್ನೂ ಹೊರಹಾಕಿ ನೋಡಿದ್ದಾಯಿತು. ಈಗ ಸೋಪು ಸೀಗೆ ಎಣ್ಣೆ ಇವುಗಳನ್ನೂ ದೂರಮಾಡಿದ್ದಾನೆ. ಆದರೂ, ಇದುವರೆವಿಗೆ ಯಾವ ದೋಷವನ್ನೂ ಕಂಡು ಹಿಡಿಯಲಾಗಲಿಲ್ಲ."

"ಪಾಪ, ತುಂಬ ಅನ್ಯಾಯ."

ಅತಿಥಿಗಳು ತಿಲೋತ್ತಮನನ್ನು ಹರಸಿ ಉಡುಗೊರೆಗಳನ್ನಿತ್ತು ಹೊರಡಲನುವಾದರು. ತಿಲೋತ್ತಮ ಮುಖದಮೇಲೆ ಹಸನಾದ ನಗುವನ್ನು ಬೀರಿ ಓಂಪ್ರಭಾಳನ್ನು ಕೇಳಿದ "ನೀನೂ ಈಗಲೇ ಹೋಗಬೇಕೆ ?"

"ಹ್ನೂ."

"ಅಷ್ಟೇಕೆ ಅವಸರ ? ಇಂದು ಅಪ್ಪ ಆಸ್ಪತ್ರೆಗೆ ಹೋಗುವುದಿಲ್ಲ. ನಿಧಾನವಾಗಿ ಹೋದರಾಯಿತು."

"ನಾಳೆ ಟೆಸ್ಟ್ ಇದೆ. ಓದಿಕೊಳ್ಳಬೇಕು."

"ಅರ್ಧಗಂಟೆ ಓದಿದರೆ ಸಾಲದೇ?"

"ಈ ದಿನ ಒತ್ತಾಯಮಾಡಬೇಡ. ಇನ್ನೊಂದು ದಿನ ಬರುವೆ ತಿಲೋ."

ಡಾ|| ಸೌಮಾ ಮತ್ತು ಡಾ|| ಅಘೋರರು ಮಕ್ಕಳ ಸಂಭಾಷಣೆಯನ್ನು ಕೇಳಿ ನಸುನಕ್ಕರು. ತಿಲೋತ್ತಮ ಮುಖದಲ್ಲಿ ಅಸಮಾಧಾನ ಸೂಚಿಸಿ– "ಓಹೋ! ನಿನ್ನ ಹುಟ್ಟಿದ ಹಬ್ಬದಂದು ನಾನೂ ಹೀಗೇ ಮಾಡುವೆ. ಅಲ್ಲಿ ಸ್ವಲ್ಪ ಹೊತ್ತಾದರೂ ಇದ್ದರೆ ಕೇಳು!"

"ನೋಡೋಣ?" ಹುಬ್ಬೇರಿಸಿ ನುಡಿದಳು ಓಂಪ್ರಭಾ. ಮುಖದಲ್ಲಿ ತುಂಟನಗೆ ನಲಿಯುತ್ತಿತ್ತು.

"ನಾನು ಇಷ್ಟೇ ಹೊತ್ತು ಇರುವೆ!"

"ಅದೆಲ್ಲಾ ಬೂಟಾಟಿಕೆ!"

ಎಲ್ಲೆಲ್ಲಿಯೂ ನಗುವಿನಲೆಯೆದ್ದಿತು. ಹಿರಿಯರೊಂದಿಗೆ ಮಕ್ಕಳೂ ಜೆರೆತು ನಕ್ಕರು. ಆದರೂ, ಇವರು ಅಪ್ರತಿಭರಾಗಲಿಲ್ಲ. ಎಲ್ಲರ ನಗೆಯ ಹೊನಲೊಂದಿಗೆ ತಮ್ಮ ನಗುವಿನ ಇನಿದನಿಯನ್ನೂ ತೇಲಿಬಿಟ್ಟರು.

ಮರುದಿನ ಅಘೋರ ಆಸ್ಪತ್ರೆಯನ್ನು ಸೇರುವಷ್ಟರಲ್ಲಿ ರಸ್ತೆ ಅಪಘಾತ ಕ್ಕೊಳಗಾದ ಹುಡುಗನೊಬ್ಬನನ್ನು ಕರೆತಂದಿದ್ದರು. ತೊಡೆ ಮತ್ತು ಮುಂಗಾಲುಗಳ ಮೇಲಿನ ಚರ್ಮ ತೆರೆಚಿ ಹಣ್ಣಿನ ಸಿಪ್ಪೆ ಸುಲಿದು ಹೋದಂತೆ ಸುಲಿದುಹೋಗಿತ್ತು. ಹತ್ತು ವರ್ಷದ ಹುಡುಗನ ಸುಭದ್ರವಾದ ಮೈ ಕಟ್ಟನ್ನೇ ನಿಟ್ಟಿಸುತ್ತಾ ಅಘೋರ ಕ್ಷಣಕಾಲ ನಿಂತ...ಇಂಥ ಮಕ್ಕಳು ದೇಶಕ್ಕೆ ಬೇಕು....ಮರ್ಮರಿಸಿತು ಮನಸ್ಸು.

ಸುಲಿದುಹೋಗಿದ್ದ ಚರ್ಮವನ್ನು ಸರಿ ಹೊಂದಿಸಿ ಹೊಲಿಗೆ ಹಾಕಿದ. ಮಾಂಸ ಖಂಡಗಳಿಗಾಗಲೀ ಎಲುಬಿಗಾಗಲಿ ಪೆಟ್ಟು ತಾಗಿರದಿದ್ದುದು ತುಸು ಅಚ್ಚರಿಯನ್ನು ಮೂಡಿಸಿತು. ಕಾಲುಗಳೆರಡು ವಿನಾ ಮೈಗೆಲ್ಲೂ ಪೆಟ್ಟು ತಾಗಿರಲಿಲ್ಲ. ಪಾಪ, ಇಷ್ಟಾದುದು ದೊಡ್ಡ ಮಾತು. ತಂದೆ ತಾಯಿಗಳು ಪುಣ್ಯವಂತರು. "ಎಂದು ತನಗೆ ತಾನೇ ಹೇಳಿಕೊಂಡ. ಅವನನ್ನು ಎಮರ್ಜನ್ಸಿ ವಾರ್ಡಿನಲ್ಲಿಟ್ಟು ಡ್ರಿಪ್ ಕೊಟ್ಟು ರಕ್ತ ಒತ್ತಡವನ್ನು ನೋಡಿದ. ಸಮರ್ಪಕ ವಾಗಿತ್ತು. ಸಮಾಧಾನದಿಂದ ಹಾಯಾಗಿ ಉಸಿರಾಡಿದ.

ದೈನಂದಿನ ಕೆಲಸ ಕಾರ್ಯಗಳನ್ನು ಮುಗಿಸಿ ಮನೆಗೆ ಹೊರಡುವಾಗ ಕಣ್ಣು

ಗಳನ್ನು ಗಡಿಯಾರದಮೇಲೆ ಹೊರಳಿಸಿದ. ಹೊತ್ತು ಎರಡರ ಅಂಚನ್ನು ದಾಟಿ ನಿಂತಿತ್ತು. ಸಹಡಾಕ್ಟರು ಬಂದ ಮೇಲೆ ಅವರಿಗೆ ಉತ್ತರಾರ್ಧವನ್ನು ವಹಿಸಿಕೊಟ್ಟು ಮನೆಯ ಹಾದಿಹಿಡಿದ. ಈಚೀಚೆಗೆ ನಂದಾದೇವಿ ಸಂಧಿ ವಾತದಿಂದ ಹೆಚ್ಚುಹೆಚ್ಚಾಗಿ ನರಳುತ್ತಿದ್ದಳು. ಅವಳಿಗೆ ಎಷ್ಟು ಔಷಧೋಪ ಚಾರ ನಡೆಸಿದರೂ ಪ್ರಯೋಜನವಾಗದೆ ಮುಂದೇನು ಗತಿ ಎಂಬ ಪ್ರಶ್ನೆ ಹಿರಿದು ತಿನ್ನುತಿತ್ತು. ಅರವಿಂದಳೂ ಸುಧಾರಿಸಿಕೊಳ್ಳಲಿಲ್ಲ. ಹೇಗೆ ಇದರ ಪರಿಹಾರ ಎಂದು ಯೋಚಿಸುತ್ತಲೇ ಹಾದಿ ತುಳಿದಿದ್ದ.

ಹತ್ತು ಹೆಜ್ಜೆ ಹೋಗಿರಲಿಕ್ಕಿಲ್ಲ. ಹಿಂದಿನಿಂದ ಜಾನಕೀರಾಂ ಮದನ್ ರತನ್‌ರವರು ತಮ್ಮ ಕೆಲಸಗಳನ್ನು ಮುಗಿಸಿ ಹೊರಟಿದ್ದವರು ಇತ್ತಲೇ ಬಂದರು. ರತನ್ ಅಘೋರನ ಭುಜದ ಮೇಲೆ ಕೈಹಾಕಿ ಹೇಳಿದ "ಡಾಕ್ಟರ್, ನಿಮಗೊಂದು ಶುಭ ಸಮಾಚಾರವಿದೆ!"

"ಆ್ಞ! ಅದೇನಪ್ಪಾ ಅಂಥಾದ್ದು?" ಅಘೋರ ತುಸು ಹೊತ್ತು ಆಶ್ಚರ್ಯದಿಂದ ಅವನನ್ನು ಮಿಕಿಮಿಕಿ ನೋಡಿದ–"ಶುಭ ಸಮಾಚಾರಕ್ಕೂ ನನಗೂ ಹತ್ತು ಮಾರು ಅಂತರವಿದೆ. ಅಂದಮೇಲೆ ಇಂದು ಹೇಗೆ ಬಂದಿತು? ನಿಜವಾಗಿಯೂ ಇದೊಂದು ವಿಶೇಷ ಎನ್ನಲೇಬೇಕು. ಅಥವಾ ಏನಾದರೂ ತಮಾಷೆ ಮಾಡುತಿದ್ದೀಯೇ?"

"ಇಲ್ಲ ಡಾಕ್ಟರ್. ಹರಿಪುರದಲ್ಲಿ ಒಬ್ಬ ಶತಾಯು ಇದ್ದಾನೆ. ಅವನು ವಾತರೋಗಕ್ಕೆ ಔಷಧ ಕೊಡುತ್ತಾನೆ. ಅವನಿಂದ ನನ್ನ ಚಿಕ್ಕಮ್ಮನಿಗೆ ಪೂರ್ಣ ವಾಸಿಯಾಗಿದೆ. ನೀನು ನಂದಾದೇವಿಯವರಿಗೂ ಕೊಡಿಸಬಹುದು."

"ಆಯುರ್ವೇದವೇ?"

"ಹೌದು."

"ಅದರಲ್ಲಿ ನನಗೆ ನಂಬಿಕೆಯಿಲ್ಲ. ಆಯುರ್ವೇದವನ್ನು ಶಾಸ್ತ್ರೀಯವಾಗಿ ಬೆಳೆಸಿಕೊಂಡುಬಂದಿಲ್ಲ. ಅದು ಲೋಪ ದೋಷಗಳ ಕಲಸು ಮೇಲೋಗರ ವಾಗಿದೆ. ಅದನ್ನು ಕೊಡಿಸಿ ಒಂದಕ್ಕೆರಡಾದರೆ?"

"ಈಗ ಹೇಗೂ ನಿಮ್ಮ ಔಷಧ ನೋಡಿಯಾಗಿದೆಯಲ್ಲಾ?"

"ಆದರೂ, ಅಪಾಯವನ್ನು ಆಹ್ವಾನಿಸಬಾರದಷ್ಟೇ?"

"ಅಂಥಾದ್ದೇನಿಲ್ಲ. ನನ್ನ ಚಿಕ್ಕಮ್ಮನಿಗೆ ಪೂರ್ಣ ಗುಣವಾಗಿದೆ."

"ಸರಿ, ಹಾಗಿದ್ದರೆ ಅಮ್ಮನನ್ನು ಕೇಳಿ ಹೇಳುವೆ."

"ನೀನು ಹೇಳಿದ ದಿನ ಅವರನ್ನು ಕರೆಸುವೆ."

ಅರವಿಂದಳನ್ನು ನೋಡಿ ಬರಲೋಸುಗ ಅಂದು ಅರ್ಧ ದಿನದ ರಜೆಯನ್ನು ತೆಗೆದುಕೊಂಡಿದ್ದುದರಿಂದ ಸಂಜೆಯಲ್ಲಿ ಪುನಃ ಆಸ್ಪತ್ರೆಗೆ ಹೋಗದೆ ಮನೆಯಲ್ಲುಳಿದ ಅಘೋರ. ತಿಲೋತ್ತಮ ಕಲಿಕೆಯಲ್ಲಿ ನಿಸ್ಸೀಮನಾಗಿ ಶಾಲೆಯಲ್ಲಿ ಎಲ್ಲರ ಮೆಚ್ಚಿಗೆ ಗಳಿಸಿದುದು ಮನಸ್ಸಿಗೆ ಎಲ್ಲಿಲ್ಲದ ಹರ್ಷವನ್ನು ತಂದಿತ್ತು. ಮುಳ್ಳುಗಳ ನೆಲೆಯಲ್ಲಿ ಹೂವೊಂದು ಅರಳಿದಂತೆ ಎಂದು ತನಗೆ ತಾನೇ ಹೇಳಿಕೊಂಡ ಅಘೋರ. ಮನೆಯಲ್ಲಿ ಮಗನೊಂದಿಗೆ ಸಂತೋಷದಿಂದ ಹೊತ್ತು ಕಳೆದು ಆಯುರ್ವೇದ ಚಿಕಿತ್ಸೆ ಮಾಡಿಸಿಕೊಳ್ಳಲು ತಾಯಿಯ ಒಪ್ಪಿಗೆ ಕೇಳಿದ. ಹಾಸಿಗೆಯಮೇಲೆ ಅಡ್ಡಾಗಿದ್ದ ಅವಳು–"ನನಗೆ ಯಾವ ಚಿಕಿತ್ಸೆಯಾದರೂ ಸರಿ. ನಾನೂ ನಿನಗೊಂದು ಹೊರೆಯಾಗಲು ಇಷ್ಟಪಡುವುದಿಲ್ಲ."

"ಹೊರೆಯ ಪ್ರಶ್ನೆಯಲ್ಲವಮ್ಮಾ ಇದು. ಮುಖ್ಯ ನೀವು ಚೆನ್ನಾಗಿರಬೇಕು."

"ಹೇಗೆಂದರೂ ಒಂದೇ ಅಘೂ."

ಅಘೋರ ನಕ್ಕು ಬಿಟ್ಟ.

"ಅದನ್ನು ಕೊಡಿಸುವುದಕ್ಕೆ ನನಗೇನೇ ಭಯ."

"ಭಯವೇಕೆ? ನಾವೇ ಮನೆಯಲ್ಲಿ ಅಂಥ ಔಷಧಗಳನ್ನು ಮಾಡಿಕೊಳ್ಳುವುದಿಲ್ಲವೇ? ನಾನೂ ಮಲಗಿ ಬಿಟ್ಟರೆ ಇಲ್ಲಿ ಕೇಳುವವರೇ ಇರುವುದಿಲ್ಲ."

"ಅದೇ ಬೇಸರ."

ತಿಲೋತ್ತಮ ನಗು ನಗುತ್ತಾ ಅಂದ. "ಓಂಪ್ರಭಾಳನ್ನು ಕರೆತರಲೇ? ಅವಳು ಎರಡು ದಿನ ಇದ್ದರೆ ನಿಮಗೆಲ್ಲಾ ಮಾಡಿಕೊಡುತ್ತಾಳೆ."

ಅಘೋರ ನಂದಾದೇವಿಯರಿಬ್ಬರೂ ನಕ್ಕರು. ಅಘೋರ ಹುಬ್ಬೇರಿಸಿ ಅಂದ "ಒಳ್ಳೇ ದೋಸ್ತಿ ಸಂಪಾದಿಸಿದ್ದೀಯಲ್ಲೋ?"

ಅವರ ತಮಾಷೆಯನ್ನು ಮನಸ್ಸಿಗೆ ತಂದುಕೊಳ್ಳದೆ ತಿಲೋತ್ತಮ ನುಡಿದ–

"ಇಂದು ಸಾಯಂಕಾಲ ಹೇಮಚಂದ್ರ ಓಂಪ್ರಭಾ ಇಲ್ಲಿಗೆ ಬರುತ್ತಾರೆ. ಹೋಗಿ ಈಗಲೇ ಕರೆತಂದರೆ ನಿಮಗೊಂದಿಷ್ಟು ಸಹಾಯ ದೊರೆಯುತ್ತದೆ."

ನಂದಾ ಹಾಸಿಗೆಯಿಂದಲೇ ಅಂದಳು "ನೀನವಳನ್ನು ಮದುವೆಯಾದರೆ

ಬಂದು ಮಾಡಿಯಾಳು. ಸುಮ್ಮ ಸುಮ್ಮನೆ ಯಾರಾದರೂ ಮಾಡುತ್ತಾರೆಯೇ?"

"ಓಹೋ!" ಎನ್ನುತ್ತಾ ತಿಲೋತ್ತಮ ಅಂಗಳಕ್ಕೆ ಹಾರಿದ.

ಅಘೋರ ನಂದಾದೇವಿಯರಿಬ್ಬರೂ ಗಟ್ಟಿಯಾಗಿ ನಕ್ಕುಬಿಟ್ಟರು.

"ಹಾಗಿದ್ದರೆ ಅವರನ್ನು ಕರೆತರಲು ಹೇಳಲೀ? ಔಷಧ ತೆಗೆದು ಕೊಳ್ಳುತ್ತೀರೇನು?"

ಮಗನ ಪ್ರಶ್ನೆಗೆ ತಡೆಬಡೆಯಿಲ್ಲದೆ ನಂದಾ ಉತ್ತರ ಹೇಳಿದಳು. "ಆಯುರ್ವೇದದಲ್ಲಿ ಒಳ್ಳೊಳ್ಳೆಯ ಔಷಧಗಳಿವೆ. ಕೊಡುವವರು ಅನುಭವಸ್ಥ ರಾದರೆ ಸರಿ."

"ರತನನ ಚಿಕ್ಕಮ್ಮನಿಗೆ ಪೂರ್ಣ ಗುಣವಾಗಿದೆಯಂತೆ."

"ಅಂದಮೇಲೆ ಸರಿ, ತೆಗೆದುಕೊಳ್ಳುವೆ. ಗುಣವಾಗಲಿ, ಆಗದಿರಲಿ ಹತ್ತರೊಂದಿಗೆ ಇನ್ನೊಂದು."

"ನನಗೆ ಅನುಮಾನ."

"ಚಿಂತೆಯಿಲ್ಲ ಅಘೂ. ಕರೆಸು ನೋಡೋಣ."

ಅಘೋರ ತಾಯಿಯ ಕಾಲು ಗಂಟು ಕೈಗಂಟುಗಳನ್ನು ಅದುಮಿ ನೋಡಿದ. ಊತ ನೋವುಗಳು ಹಾಗೇ ಇದ್ದುವು. ಇದುವರೆವಿಗೆ ಹಲವಾರು ಬಾರಿ ಹಿರಿಯ ವೈದ್ಯರುಗಳಿಗೆ ತೋರಿಸಿಯಾಗಿತ್ತು. ಇದ್ದ ಅತ್ಯುತ್ತಮ ಔಷಧಗಳನ್ನೆಲ್ಲಾ ಪ್ರಯೋಗಿಸಿಯಾಗಿತ್ತು. ಇನ್ನುಳಿದಿರುವುದು ಅದೊಂದೇ ದಾರಿ ಎಂದು ಅಂತರಾತ್ಮ ಒಪ್ಪಿಕೊಂಡಿತು. ಅಘೋರ ಆಯುರ್ವೇದ ಔಷಧ ವನ್ನು ಕೊಡಿಸಿ ನೋಡುವುದೆಂಬ ತೀರ್ಮಾನಕ್ಕೆ ಶರಣಾದ.

ಮರುದಿನ ಬೆಳಿಗ್ಗೆ ಆಸ್ಪತ್ರೆಗೆ ಹೋದೊಡನೆಯೇ ತಿಳಿದುಬಂದ ಮೊದಲ ಸುದ್ದಿಯಲ್ಲಿ ಹಿಂದಿನ ದಿನ ಅಪಘಾತಕ್ಕೊಳಗಾದ ಬಾಲಕ ಮರಣ ಹೊಂದಿದ್ದ. ವಿಷಯ ಒಗಟಾಗಿ ತೋರಿ ಅಘೋರ ಆಶ್ಚರ್ಯಚಕಿತನಾದ. ಯಾವ ಕಾರಣ ದಿಂದ ಹೀಗಾಯಿತು? ಎಂಬ ಪ್ರಶ್ನೆ ಮನದಲೆಯಲ್ಲಿ ಮೂಡಿನಿಂತಿತು. ನೇರ ವಾಗಿ ಹೋಗಿ ಶವಪರೀಕ್ಷೆ ಮಾಡತೊಡಗಿದ. ಬೇರೆಲ್ಲೂ ಪೆಟ್ಟು ತಾಗಿರಲಿಲ್ಲ ಅಂದಮೇಲೆ ಮರಣಕ್ಕೆ ಕಾರಣವೇನು? ಪುನಃಪುನಃ ದೇಹದಾದ್ಯಂತ ಪರೀಕ್ಷೆ ಮಾಡಿ ನೋಡಿದರೂ ಮೂಲ ಕಾರಣವನ್ನು ಕಂಡು ಹಿಡಿಯಲಾಗಲಿಲ್ಲ. ಸ್ವಲ್ಪ ಕಾಲ ಯೋಚನಾಮಗ್ನನಾಗಿ ನಿಂತ. ಬಾಲಕನ ದಟ್ಟಪುಷ್ಟವಾದ ಶರೀರ

ಬಿಮ್ಮಗೆ ಬಿಗಿದುಕೊಂಡಿತ್ತು. ಬಿಟ್ಟ ಕಣ್ಣು ಮುಚ್ಚದೆ ನೆಟ್ಟ ನೋಟವನ್ನು ಕದಲಿಸದೆ ಪ್ರಾಣಬಿಟ್ಟ ಹುಡುಗನ ಸ್ಥಿತಿ ಅಂತಃಕರಣವನ್ನು ಕರಗಿ ನೀರಾಗಿಸಿತು. ಹಿಂದಿನಿಂದ ಕಾಲಸಪ್ಪಳ ಕೇಳಿಬಂದುದರಿಂದ ಕಣ್ಣುಗಳು ಅತ್ತ ಹೊರಳಿದುವು. ಒಳ ಬಂದವರು ಡಾ|| ಬಸಂತ್. ಹಿಂದಿನ ದಿನ ಉಳಿದ ಕಾರ‍್ಯ ಭಾರವನ್ನು ವಹಿಸಿಕೊಂಡಿದ್ದ ಅವರು ಹುಡುಗನ ಬಗ್ಗೆ ವಿವರಣೆ ನೀಡಲು ಅಲ್ಲಿಗೆ ಬಂದಿದ್ದರು.

"ಡಾಕ್ಟರ್, ಹುಡುಗನಿಗೆ ಎಷ್ಟು ಶೀಶೆ ಡ್ರಿಪ್‌ಗಳನ್ನು ಕೊಟ್ಟಿರಿ ?"

"ನೀವು ಕೊಟ್ಟು ಹೋದುದೇ ಕೊನೆಯದು. ಅನಂತರ ಕೊಡಲಿಲ್ಲ."

"ಹಾ ! ಅದೇ ತಪ್ಪು. ಹುಡುಗನಿಗೆ ಫ್ಲೂಯಿಡ್ ಸಾಕಾಗಲಿಲ್ಲ."

"........."

"ನೀವು ಇನ್ಯಾರನ್ನಾದರೂ ಕೇಳಬಹುದಾಗಿತ್ತು"

"........."

"ಛಿಃ ! ಛಿಃ ! ಎಂಥ ಹುಡುಗ. ಅನ್ಯಾಯವಾಯಿತು."

"......"

"ಏನೇ, ಇದರ ಪೋಸ್ಟ್‌ಮಾರ್ಟಂ ರಿಪೋರ್ಟ್ ನಾನು ನೋಡಲೇಬೇಕು."

"ಆಗಲಿ ಸಾರ್."

ಡಾ|| ಬಸಂತ್ ಇನ್ನೂ ಕಲಿಯಲಿದ್ದ ತರುಣ ಡಾಕ್ಟರು. ಅಘೋರ ಅವರ ಬಗ್ಗೆ ಆಕ್ಷೇಪಿಸುವಂತೆಯೂ ಇರಲಿಲ್ಲ. ತಲೆಯಲ್ಲೆಲ್ಲಾ ಅದೇ ವಿಚಾರ ತುಂಬಿಕೊಂಡು ಯೋಚನೆಯ ಭಾರದಿಂದ ಹೊರಬಿದ್ದ. "ನಾವೊಂದು ನೆನೆದರೆ ದೈವವೊಂದು ನೆನೆಯಿತು." ಹಳೆಯಗಾದೆ ಮನದಲೆಯಲ್ಲಿ ತೇಲಿಬಂತು. ಬೀಸಿಬರುವ ತಂಗಾಳಿ ಮರ್ಮರಿಸಿತು....ನಾವೊಂದು ನೆನೆದರೆ ದೈವವೊಂದು ನೆನೆಯಿತು...ಮರಗಿಡಗಳ ಮೇಲಿನ ಖಗಪಕ್ಷಿಗಳು ಮತ್ತೆಮತ್ತೆ ಅದೇ ಸ್ವರವನ್ನು ಹಾಡಿದುವು....ನಾವೊಂದು ನೆನೆದರೆ ದೈವವೊಂದು ನೆನೆಯಿತು.... ಅಘೋರ ತಲೆಬಾಗಿ ಕಾರಿಡಾರಿನಲ್ಲಿ ಹೆಜ್ಜೆ ಹಾಕಿದ. ರೋಗಿಯನ್ನೊಯ್ಯುತ್ತಿದ್ದ ಗಾಲಿ ಸ್ಟ್ರೆಚರಿನ ಗಡಗಡ ಸದ್ದಿನಲ್ಲಿಯೂ ಪಾದರಕ್ಷೆಗಳ ಪಟಪಟ ಸದ್ದಿನಲ್ಲಿಯೂ ಅದೇ ನುಡಿ ಹೊರಬಿದ್ದಂತೆ ಭಾಸವಾಯಿತು. ಪುರಾತನ ಗೀತೆಯ

ಸಣ್ಣ ತುಣುಕೊಂದು ಸ್ಮೃತಿಪಟಲದಲ್ಲಿ ಮೆಲ್ಲನೆ ತೇಲಿ ಬಂದಿತು...ಹರ ಕೊಲ್ಲಲ್ ಪರ ಕಾಯ್ವನೇ ಹರ ಹರಾ ಶ್ರೀಚೆನ್ನಸೋಮೇಶ್ವರಾ॥

ಪೋಸ್ಟ್ ಮಾರ್ಟಂ ವರದಿ ಈರೀತಿ ಇತ್ತು...ಅಡ್ರಿನಲ್ ಗ್ಲ್ಯಾಂಡಿನಲ್ಲಿ ರಕ್ತಸ್ರಾವವಾಗಿದೆ. ಅದೇ ಬಾಲಕನ ಮರಣಕ್ಕೆ ಕಾರಣ...ಅಘೋರನ ಮನಸ್ಸು ಅದೇ ವಿಚಾರವನ್ನು ಮೆಲಕುಹಾಕುತ್ತಾ ಹುಡುಗನಿಗೆ ಡ್ರಿಪ್ ಕೊಟ್ಟುದುದು ಸಾಕಾಗಲಿಲ್ಲ. ಎಂದು ಪದೇಪದೇ ಹೇಳುತಿತ್ತು.

....ಹರ ಕೊಲ್ಲಲ್ ಪರ ಕಾಯ್ವನೇ ಹರ ಹರಾ ಶ್ರೀಚೆನ್ನಸೋಮೇಶ್ವರಾ॥

ಅಧ್ಯಾಯ

೩೩

ಡಾ|| ಸೌಮ್ಯಳ ಮನೆಯಲ್ಲಿ ತಿಲೋತ್ತಮನನ್ನು ಬಿಟ್ಟು ಎರಡು ದಿನಗಳ ಮಟ್ಟಿಗೆ ಅರವಿಂದಳನ್ನು ಮನೆಗೆ ಕರೆತಂದು ಕಣ್ಣಿನಮೇಲೆ ಕಣ್ಣಿಟ್ಟು ಅಘೋರ ಅವಳನ್ನು ಕಾದಿದ್ದ. ಒಂದೆರಡು ಬಾರಿ ತಿಲೋತ್ತಮನಿಗಾಗಿ ತಡಕಾಡಿದ ಅವಳ ಕಣ್ಣುಗಳು ಮರುಕ್ಷಣವೇ ಮರೆತುಬಿಟ್ಟಂತೆ ಸುಮ್ಮ ನಾದುವು. ಕನ್ನಡಿಯ ಮುಂದೆ ಕುಳಿತು ಕೂದಲನ್ನು ಬಿಚ್ಚಿಕೊಳ್ಳುತ್ತಿದ್ದ ಅವಳನ್ನು ನೋಡಿದಾಗ ಅವಳು ಹಿಂದಿನ ಅರವಿಂದಳಂತೆಯೇ ತೋರಿದಳು. ಅಘೋರ ಕ್ಷಣಕಾಲ ಮೈಮರೆತು ಕುಳಿತುಕೊಂಡ. ನೆಟ್ಟನೋಟ ಅವಳನ್ನೇ ನಿಟ್ಟಿಸುತ್ತಿತ್ತು. ಕೂದಲನ್ನು ಬಿಚ್ಚಿದ ಅವಳು ಬಾಚಿಕೊಳ್ಳುವ ಗೋಜಿಗೆ ಹೋಗದೆ ಎಲ್ಲವನ್ನೂ ಮುಖದ ಮೇಲೆ ಎಳೆದುಕೊಂಡು ಮುಖವನ್ನು ಮುಚ್ಚಿಕೊಂಡಳು. ನೋಡುನೋಡುತ್ತಾ ಅಘೋರನ ಎದೆಯಾಳದಿಂದ ನಿಟ್ಟುಸಿರೊಂದು ಹೊರಹೊಮ್ಮಿತು. ಹಾಗೆಯೇ ಅವಳ ಮನಸ್ಥಿತಿಯನ್ನು ಅವಲೋಕಿಸುತ್ತಾ ಮೌನವಾಗಿ ಕುಳಿತುಕೊಂಡ. ಕ್ಷಣಕ್ಷಣಗಳು ತಾನೇ ತಾನಾಗಿ ಉರುಳಿದುವು. ನಿಮಿಷನಿಮಿಷಗಳು ಮುಗ್ಧ ಮೌನಿಗಳಂತೆ ನಡೆ ದುವು. ಅಘೋರ ಈಗೀಗ ತನ್ನನ್ನೇ ತಾನು ಹತೋಟಿಯಲ್ಲಿಟ್ಟುಕೊಳ್ಳ ತೊಡಗಿದ.

ಒಮ್ಮೆ ಎದ್ದುಹೋಗಿ ಅವಳಿಗೆ ತಲೆ ಬಾಚೋಣವೇ ಎನ್ನಿಸಿತು. ಆದರೆ, ಮರುಕ್ಷಣದಲ್ಲಿ ಅಷ್ಟೇಕೆ ಆತುರವೆಂದುಕೊಂಡು ತನ್ನ ಆಸೆಗೆ ತಾನೇ ತಡೆ ಹಿಡಿದ. ಕೂದಲನ್ನು ಇಬ್ಭಾಗ ಮಾಡಿ ಎರಡೂ ಕೈಗಳಿಂದ ಎರಡು ಕಡೆಯೂ ಹಿಡಿದುಕೊಂಡು ಇತ್ತನೋಡಿ ಹಲ್ಕಿರಿದು ಅಣಕಿಸಿದಳು. ಅಘೋರ ನೋಡಿದರೂ ನೋಡದಂತೆ ಕುಳಿತ. ಅವಳು ಪುನಃಪುನಃ ಅಣ ಕಿಸಿ ಅನಂತರ ಗಟ್ಟಿಯಾಗಿ ನಕ್ಕುಬಿಟ್ಟಳು. ಅಘೋರನ ಎದೆಯಾಳದಿಂದ ನಿಟ್ಟುಸಿರೊಂದು ಮೆಲ್ಲನೆ ತಪ್ಪಿಸಿಕೊಂಡಿತು.

ಒಮ್ಮೊಂದೊಮ್ಮೆಲೇ ಎರಡೂ ಕೈಗಳಿಂದ ಬಿಚ್ಚಿ ಹರಡಿದ್ದ ಕೂದಲನ್ನು ಕೀಳತೊಡಗುತ್ತಲೂ ಅಘೋರ ಎದ್ದು ಹೋಗಿ ಅವಳ ಎರಡು ಕೈಗಳನ್ನೂ ಹಿಡಿದುಕೊಂಡು ಕೇಳಿದ "ನಿನಗೆ ನೋವಾಗುವುದಿಲ್ಲವೇ? "ಅವಳು ಮಾತಾಡದೆ ಕೊಸರಾಡತೊಡಗಿದಳು.

"ಅರವಿಂದಾ."

"......"

"ಅರವಿಂದಾ."

"......"

"ಅರವಿಂದಾ ಏಕೆ ಹೀಗಾಡುತಿದ್ದಿ? ನಿನ್ನನ್ನೇ ನೀನು ಹತೋಟಿಯಲ್ಲಿಟ್ಟುಕೊಳ್ಳಬೇಕು ಅರವಿಂದಾ."

"ತೋಳ!"

"ಎಲ್ಲಿದೆ ತೋಳ?"

"ತೋಳ ಬಂತು ತೋಳ!"

"ತೋಳ ಕುರಿಮರಿಯ ಕತೆ ಗೊತ್ತೆ ಅರವಿಂದಾ?"

"ಹ್ಞೂ."

"ಹೇಳು ಮತ್ತೆ."

"ಒಂದು ತೋಳ ಇತ್ತು...ಒಂದು ಕುರಿಮರಿ ಇತ್ತು."

"ಅದೇಕೆ ನಿಲ್ಲಿಸಿಬಿಟ್ಟೆ. ಹೇಳು ಮುಂದೆ."

"ತೋಳ.......ತೋಳ...ತೋಳ"

"ಅರವಿಂದಾ..."

"ಅರವಿಂದಾನೂ ಇಲ್ಲ...ಮಣ್ಣೂ ಇಲ್ಲ."

ಅವಳ ತಲೆಗೂದಲನ್ನು ಹಿಂದಕ್ಕೆ ಬಾಚುತ್ತಾ–

"ನೀನು ಆಗ ಕಟ್ಟುತಿದ್ದ ಮುದ್ದಾದ ಮುಡಿಗಳನ್ನು ಮರೆತೇಬಿಟ್ಟೆಯೇನು? ಇಂದು ಅದನ್ನಿಷ್ಟು ಕಟ್ಟು ನೋಡೋಣ."

"ನೀನೇ ಕಟ್ಟು ಅಘೂ."

ಅಘೋರ ಹೇಗೆಹೇಗೋ ಸೊಟ್ಟ ಸೊಟ್ಟಾಗಿ ಜಡೆಹಾಕಿ ಮುಡಿ ಕಟ್ಟಿದ. ಅದು ಅವಳಿಗೆ ಹಿತವೆನಿಸದೆ ಕಿತ್ತುಹಾಕಿ ಜಡೆ ಬಿಚ್ಚಿ ಕೂದಲು

ಕೆದರಿಕೊಂಡಳು.

"ಏಕೆ ಅರವಿಂದಾ?"

"ನಿನಗೆಲ್ಲೋ ಹುಚ್ಚು! ಥೂ!"

ಕಣ್ಣು ಮಿಟುಕಿಸಿ ಹಲ್ಕಿರಿದು ಗಹಗಹಿಸಿ ನಕ್ಕಳು ಅವಳು.

"ಸ್ವಲ್ಪ ಹೊತ್ತು ಸುಮ್ಮನಿರುವುದನ್ನು ಅಭ್ಯಾಸಮಾಡು ಅರವಿಂದಾ."

"ಹಿ ಹ್ಹಿ ಹ್ಹೀ!"

ಅವನು ಮಾತಿಲ್ಲದೆ ಮೌನವಾಗಿ ಕುಳಿತ. ಮನದಲೆಯಲ್ಲಿ ಧ್ಯೇಯ ಘೋಷಣೆಗಳು ಹುಚ್ಚೆದ್ದು ನರ್ತಿಸಿದುವು. ಬಾಳು ಹೂವಿಗಿಂತಲೂ ಹಗುರ ವಾಗಿರಬೇಕೆಂಬ ಹಿರಿಯಾಸೆ ಎದೆಯಾಳದಲ್ಲಿ ಕಿಚ್ಚೆಬ್ಬಿಸಿತು. ಮೈಯಲ್ಲೆಲ್ಲಾ ನಸುಕಂಪನದ ಅಲೆ ಹರಿದಾಡಿಹೋಯಿತು. ಸಮಸ್ಯೆಯನ್ನು ಎದುರಿಸ ಲಾರದೆ ತನುಮನಗಳು ತತ್ತರಿಸಿದುವು.

"ಹುಚ್ಚರಿಗಾಗಿ ನಿನ್ನ ವೇಳೆಯನ್ನು ಹಾಳು ಮಾಡುವುದೇ?" ಮನಸ್ಸು ಅಣಕಿಸಿತು.

"ಹುಚ್ಚು ಎಂದಾದರೂ ಗುಣವಾಗುವ ಸಂಭವವಿದೆ." ಮರುಗಿ ನುಡಿ ಯಿತು ಅಂತರಾತ್ಮ.

"ಈ ಹೆಣ್ಣನ್ನು ಕಾದು ಕುಳಿತರೆ ನಿನ್ನ ಆಯುಸ್ಸು ನದಿಯ ನೀರಿನಂತೆ ಹರಿದು ಹೋಗುತ್ತದೆ. ಈ ಕಾಲದಲ್ಲಿ ಹೆಣ್ಣುಗಳಿಗೇನು ಕಡಿಮೆ? ಈ ಹೆಣ್ಣು ಆ ಹೆಣ್ಣು ಓ ಹೆಣ್ಣು ಎಷ್ಟು ಹೆಣ್ಣು ಬೇಕು ನಿನಗೆ? ಧ್ಯೇಯಕ್ಕೆ ವ್ಯತಿರಿಕ್ತ ವಾಗಿ ಹೋರಾಡುವುದೇ?" ಹಹ್ಹಹ್ಹಾ! ತಿರಸ್ಕಾರದ ನಗೆ ಹೊರಹೊಮ್ಮಿತು.

"ಧ್ಯೇಯವೇನೇ ಇರಲಿ ಕಾದುನೋಡುವ ಸಹನೆ ಇರಬೇಕು."

"ಜೀವನ ಶಾಶ್ವತವಲ್ಲ. ಇರುವಷ್ಟು ಕಾಲ ಸುಖವಾಗಿರಬಾರದೇ ಸ್ವಾಮಿ?"

"ಛೀಃ! ಅದಕ್ಕಿಷ್ಟು ಕಿಚ್ಚುಹಚ್ಚು."

"ಎಲ್ಲಿಯತನಕ ಹೀಗೆ?"

"ಏಕಷ್ಟು ಅವಸರ?"

"ಗಾಣದೆತ್ತಿನಂತೆ ದುಡಿಯುವ ಮನುಷ್ಯನಿಗೆ ಕಿಂಚಿತ್ ಮನಶ್ಶಾಂತಿ ಬೇಡವೆ?"

"ಎಲ್ಲಾ ಆಗು–ಹೋಗುಗಳನ್ನು ಪರಮಾತ್ಮನಿಗರ್ಪಿಸಿ ಸುಖವಾಗಿರು. ಅದೇ ಪರಮಸುಖ ಮಗೂ."

"ಅಘೋರ ದೇವರಲ್ಲ. ಅವನಿಗೂ ಮಾನವ ಸಹಜವಾದ ಆಸೆ ಆಕಾಂಕ್ಷೆಗಳಿವೆ."

"ದೇವತ್ವಕ್ಕೆ ಮನುಷ್ಯತ್ವವೇ ನಾಂದಿ ಎಂಬುದನ್ನು ಮರೆಯಬಾರದು."

"ಆದರೂ, ಅದೃಷ್ಟವಶಾತ್ ದೊರಕಿರುವ ಈ ಉತ್ತಮ ಜನ್ಮವನ್ನು ವ್ಯರ್ಥವಾಗಿಸುವುದೇ ದೇವಾ?"

"ವ್ಯರ್ಥವಾಗಿಲ್ಲ. ಪರಮಾತ್ಮನಿಗೆ ಅರ್ಪಿತವಾಗುತ್ತಿದೆ."

ಮನಸ್ಸಾಗರದಲ್ಲಿನ ದ್ವಂದ್ವಯುದ್ಧವನ್ನು ಅವಲೋಕಿಸುತ್ತಾ ಕುಳಿತಿದ್ದ ಅಘೋರನ ಮನವನ್ನು ಟೆಲಿಫೋನಿನ ಟಂಟಣಿನಾದ ಸೆಳೆಯಿತು. ಎದ್ದು ಹೋಗಿ ರಿಸೀವರನ್ನು ಎತ್ತಿಕೊಂಡ. ಆ ಕೊನೆಯಿಂದ ತಿಲೋತ್ತಮನ ದನಿ ಹೊರಬಿತ್ತು.

"ಅಮ್ಮಾ ಹೇಗಿದ್ದಾರೆ?"

"ಹಾಗೇ ಇದಾಳೆ. ತಿ..."

ತಕ್ಷಣ ನಾಲಿಗೆ ಕಚ್ಚಿಕೊಂಡ...ಒಂದು ವೇಳೆ ಅರವಿಂದಳಿಗೆ ತಿಲೋತ್ತಮ ಎಂಬ ಹೆಸರು ಕೇಳಿಸಿದರೆ...

ಹಿಂದಿನಿಂದ ಓಡಿಬಂದ ಅರವಿಂದಾ ರಿಸೀವರಿಗೆ ಕೈ ಹಾಕಿದಳು. "ನನ್ನ ದಾದನಂತರ ನೀನು ಮಾತಾಡು." ಎನ್ನುತ್ತಾ ಕೈಯನ್ನು ಅಡ್ಡ ಹಿಡಿದ. ಅವಳು ಒಂದೇ ಬಾರಿಗೆ ರೇಜಿಗೆದ್ದು ಕೈಯನ್ನು ತಳ್ಳಿದಳು.

"ನನಗೆ ನೋಡೋಣ ಎನ್ನಿಸುತ್ತೆ." ಆ ಕಡೆಯಿಂದ ತಿಲೋತ್ತಮನ ದನಿ.

"ಈ ಸಲ ಬೇಡ ಮಗೂ."

"ಮುಖ ಮೈಯೆಲ್ಲಾ ಮುಚ್ಚಿಕೊಂಡು ಬಂದರೆ?"

ಮಗನ ದನಿಯಲ್ಲಿನ ಆಸಕ್ತಿ ಕನಿಕರವನ್ನು ಮೂಡಿಸಿತು. ಉತ್ತರ ಹೇಳುವುದರೊಳಗಾಗಿ ಬೆನ್ನಿನ ಮೇಲೆ ದಿಢ್ನನೆ ಗುದ್ದು ಬಿತ್ತು. ಅಘೋರ ನಗುತ್ತಾ ಅವಳನ್ನು ಬಲಗೈಯಿಂದ ಬಳಸಿ ಬೆನ್ನಿಗವುಕಿ ಹಿಡಿದ. ಹಾಗೆ ಹಿಡಿದುಕೊಂಡಾಗ ಅಂದಿನ ಅರವಿಂದಳ ಪ್ರೇಮಮಯ ಸ್ಪರ್ಶದ ನೆನಪು

ಮೂಡಿ ಎದೆಯಾಳದಿಂದ ನಿಟ್ಟುಸಿರೊಂದು ಹೊರಹೊಮ್ಮಿತು. ಅಘೋರ ಅವಳನ್ನು ಅಮುಕಿಹಿಡಿದುಕೊಂಡೇ ಮಗನಿಗೆ ಹೇಳಿದ "ಅವಸರ ಬೇಡ. ಸ್ವಲ್ಪ ತಾಳಿಕೊ."

"ಟೆಲಿಫೋನಿನಲ್ಲಿ ಮಾತಾಡಲೇ....?"

"ಬೇಡಪ್ಪಾ."

"ನಾನು ಹೇಗೂ ಅವರಿಗೆ ಕಾಣಿಸುವುದಿಲ್ಲವಷ್ಟೆ ?"

ಒಂದುವೇಳೆ ನಾನು ನೋಡಿಯೇ ತೀರಬೇಕೆಂದು ರೇಜಿಗೆದ್ದರೇನು ಗತಿ? ಯೋಚನೆ ಬಂದೊಡನೆಯೇ ಮಗನಿಗೆಂದ–

"ಆದರೂ, ಬೇಡವೇ ಬೇಡ."

ನಿರಾಸೆಯ ದನಿಯಲ್ಲಿ ತಿಲೋತ್ತಮನ ನುಡಿ ಹೊರಬಿತ್ತು 'ಟಾ! ಟಾ!'

ಬೆನ್ನಿನ ಮೇಲೆ ತಲೆಯಿಟ್ಟಿದ್ದ ಅರವಿಂದಾ ಬೆನ್ನನ್ನು ಬಲವಾಗಿ ಕಚ್ಚಿದ್ದಳು. ಮೈಮೇಲೆ ಕೋಟು ಇದ್ದುದರಿಂದ ಹಲ್ಲು ತಾಗಿರಲಿಲ್ಲ. ಅಘೋರ ರಿಸೀವರನ್ನು ಅವಳ ಕೈಗಿಟ್ಟು 'ಮಾತಾಡು' ಎಂದರೂ ಅದು ಕೆಳಗೆ ಬೀಳದಂತೆ ಹಿಡಿದುದು ಅವಳಿಗೆ ಸರಿ ಎನ್ನಿಸಲಿಲ್ಲ. ಅವನನ್ನು ತಳ್ಳಿ ಬಿರಬಿರನೆ ಹೊರಟು ಹೋದಳು.

ಸಂಜೆಯ ತಂಪುಹೊತ್ತಿನಲ್ಲಿ ಅವಳನ್ನು ಮೆಂಟಲ್ ಆಸ್ಪತ್ರೆಗೆ ಹಿಂದಿರುಗಿಸಿ ಬರಬೇಕಾದರೆ ಅಘೋರನಿಗೆ ಸಾಕುಸಾಕಾಯಿತು. ಅಲ್ಲಿರಲೊಪ್ಪದೆ ಕೊಸರಾಡಿದ ಅವಳನ್ನು ಅಲ್ಲಿನ ಸೇವಿಕೆಯರು ಎಳೆದುಕೊಂಡು ಹೋದಾಗ ಎಲ್ಲಿಲ್ಲದ ಸಂಕಟವಾಯಿತು. ಅಘೋರ ಅಲ್ಲಿ ನಿಲ್ಲದೆ ಆಸ್ಪತ್ರೆಗೆ ಹೊರಟ. ದಡದಡನೆ ಮೆಟ್ಟಿಲು ಹತ್ತಿ ಕಾರಿಡಾರಿನ ಮೂಲಕ ವಾರ್ಡುಗಳತ್ತ ವೇಗವಾಗಿ ಹೆಜ್ಜೆಹಾಕಿದ. ಡಾ|| ಲಾರೆನ್ಸ್ ಡಾ|| ಭಗವಾನ್ ಡಾ|| ಭಾರ್ಗವಾ ಡಾ|| ಅಬ್ದುಲ್ ಸುಭಾನ್‌ರವರುಗಳು ಇತ್ತಲೇ ಸಾಲಾಗಿ ಬರುತಿದ್ದರು. ಹಿರಿಯ ಡಾಕ್ಟರುಗಳಿಗೆ ಅಘೋರ ತಲೆಬಾಗಿ ವಂದಿಸಿದ.

"ಹೇಗಿದ್ದಾರೆ ಶ್ರೀಮತಿ ಅಘೋರ್ ?"

"ಹಾಗೇ ಇದ್ದಾರೆ. ಹೆಚ್ಚಿನ ಬದಲಾವಣೆಯಿಲ್ಲ."

"ಎರಡು ದಿನಗಳಿಂದ ನೀವು ಕಾಣಲಿಲ್ಲವಲ್ಲಾ ?"

ಅಘೋರ ತಾನು ರಜೆ ತೆಗೆದುಕೊಂಡ ಕಾರಣವನ್ನು ಮುಂದಿಟ್ಟ. ಮಾತು ಮುಗಿಯುವುದರೊಳಗಾಗಿ ಮುಖ ಕೆಂಪುತಳೆಯಿತು. ಹಿರಿಯ ಡಾಕ್ಟರುಗಳ ಹೃದಯಗಳೂ ಅನುಕಂಪದಿಂದ ಮಿಡಿದುವು.

"ಕಾದುನೋಡುವುದೊಂದೇ ದಾರಿ." ಎಂದರು ಭಾರ್ಗವಾ.

"ಯಾವುದೋ ಚಿಂತೆಯೊಂದು ಅವರ ಮನದಲ್ಲಿ ಕೊರೆಯುತ್ತಿರಬಹುದು. ಅದನ್ನೇ ಬಹಳವಾಗಿ ಮನಸ್ಸಿಗೆ ಹಚ್ಚಿಕೊಂಡು ತಲೆಕೆಡಿಸಿಕೊಂಡಿದ್ದಾರೆಂದು ತೋರುತ್ತದೆ."

"ಆಗಾಗ ಹೀಗೆ ಮನೆಗೆ ಕರೆತಂದು ಮನಸ್ಸನ್ನು ಪ್ರಸನ್ನವಾಗಿರಿಸಲು ಪ್ರಯತ್ನಪಡಿರಿ."

"ದೇವರು ದೊಡ್ಡವನು. ಎದೆಗುಂದಬೇಡಿರಿ."

"ದೇವರು ಒಳ್ಳೆಯದು ಮಾಡಲಿ."

"ಥ್ಯಾಂಕ್ಯೂ ಡಾಕ್ಟರ್"

ಅಘೋರ ನಮ್ರತೆಯಿಂದ ತಲೆಬಾಗಿದ.

ಮರುದಿನ ಮನೆಯ ಹೂದೋಟದಲ್ಲಿ ಒಬ್ಬನೇ ಅಡ್ಡಾಡುತಿದ್ದ. ಶಾಲೆಗೆ ಹೋದ ತಿಲೋತ್ತಮ ಇನ್ನೂ ಹಿಂದಿರುಗಿರಲಿಲ್ಲ. ಮನೆಗೆಲಸಗಳ ಹಣಾಹಣಿಯಲ್ಲಿ ನಂದಾ ತೀವ್ರ ಮಗ್ನಳಾಗಿದ್ದುದರಿಂದ ಸದ್ದಿಲ್ಲದ ಮನೆ ಬಣಬಣ ಎನ್ನುತಿತ್ತು. ಒಳಗಡೆ ಇರಲಾರದೆ ಹೂದೋಟದಲ್ಲಿ ಅಡ್ಡಾಡಿದ. ಮನಸ್ಸನ್ನು ಅರವಿಂದಳ ಬಳಿಗೆ ಹಕ್ಕಿಯಂತೆ ಹಾರಗೊಟ್ಟು ಅಘೋರ ಭವಿಷ್ಯವನ್ನು ಕುರಿತು ಚಿಂತಿಸುತಿದ್ದ. ಏನು ಮಾಡಿದರೆ ಅರವಿಂದಾ ಸರಿಹೋಗುತ್ತಾಳೆಂಬ ಪ್ರಶ್ನೆ ಮನದಲೆಯಲ್ಲಿ ನಿಮಿರಿನಿಂತಿತ್ತು. ಹಾಗೇ ಯೋಚಿಸುತ್ತಾ ಶತಪಥ ತಿರುಗಿದ.

ಪ್ರಾಕಾರದ ಬಾಗಿಲು 'ಖಣಿಲ್' ಎಂದು ಸದ್ದುಮಾಡಿ ಗಮನವನ್ನು ಸೆಳೆಯುತ್ತಲೂ ಕಣ್ಣುಗಳು ತಾವಾಗಿ ಅತ್ತ ಹೊರಳಿದುವು. ಬಾಗಿಲನ್ನು ತಳ್ಳಿ ಜಾನಕೀರಾಂ ಒಳಬಂದ. ಮಕ್ಕಳಿಬ್ಬರೂ ಅವನ ಎರಡು ಕೈಗಳನ್ನೂ ಹಿಡಿದುಕೊಂಡಿದ್ದರು. ತಂದೆಯಂತೆ ಎತ್ತರವಾದ ನಿಲುವನ್ನು ಹೊಂದಿದ್ದ ಮಕ್ಕಳಿಬ್ಬರೂ ಒಂದೇ ತರದ ಮಾಟವಾದ ಮುಖವನ್ನು ಹೊಂದಿದ್ದು ಅತ್ಯಂತ ಆಕರ್ಷಣೀಯವಾಗಿದ್ದರು. ಹಿಂದೆ ಮೈತ್ರೇಯಿಯೂ ಒಳ ಬಂದಳು.

ಅವರನ್ನು ನೋಡಿದೊಡನೆ ಮುಗುಳ್ನಗು ಸೂಸಿ ಅಘೋರನೆಂದ "ಹಲೋ! ಅಂಕಲ್ ಜರ್ಜ!"

ಅಲ್ಲಿಂದಲೇ ಮಕ್ಕಳಿಬ್ಬರೂ ಕೇಕೆ ಹಾಕಿದರು "ಹೋ! ಅಂಕಲ್ ಘೋರ್!"

ಒಡನೆ ಎರಡೂ ಕಡೆಯಿಂದ ಕಿಲಕಿಲ ನಗುವಿನಲೆಯೆದ್ದಿತು. ಗೆಳೆಯನ ಅನಿರೀಕ್ಷಿತ ಆಗಮನದಿಂದ ಅಘೋರನ ಹೃದಯ ಹಗುರವಾಯಿತು. ಆತ್ಮೀಯತೆಯಿಂದ ಎಲ್ಲರನ್ನೂ ಬರಮಾಡಿಕೊಂಡ.

"ನನಗೀಗ ಮನೆಗೆ ಬಂದರೆ ಸದಾ ರೋಗಿಗಳು ಮುತ್ತಿರುತ್ತಾರೆ. ಎಲ್ಲೋ ಅಪರೂಪಕ್ಕೆ ಬಿಡುವಾಗಿರುವುದುಂಟು. ಹಾಗೆ ಬಿಡುವು ದೊರೆತಾಗಲೆಲ್ಲಾ ಹೊತ್ತು ಕಳೆಯುವುದು ತುಂಬ ಕಷ್ಟವಾಗುತ್ತೆ. ಅಮ್ಮನಿಗಾಗಿ ಓಡಿ ಬರುವೆ. ಅರವಿಂದಳಿಂದಾಗಿ ಓಡಿ ಹೋಗುವೆ."

"ತಿಲೋತ್ತಮ ಇದ್ದಾನಲ್ಲಾ?"

"ಅವನಾಯ್ತು ಅವನ ದಳವಾಯ್ತು. ಶಾಲೆ ಬಿಟ್ಟೊಡನೆ ಆಟದ ಬಯಲು. ನನಗೆ ಅವನು ಸಿಕ್ಕುವುದು ರಾತ್ರಿ ಮಾತ್ರ."

"ಪಾಪ, ಆಡುವ ಮಗು."

"ನಿಜ, ಆಡುವ ವಯಸ್ಸು ಆಡಲೇಬೇಕು." ಎಂದು ನಸು ನಕ್ಕ ಅಘೋರ "ನಾನವನಿಗೆ ಮನೆಯಲ್ಲಿರಲು ಹೇಳುವುದೇಯಿಲ್ಲ. ಅಮ್ಮನಿಗೂ ಜೊತೆಗಿಲ್ಲದೆ ಬೇಜಾರು. ಕೆಲಸ ಮುಗಿದೊಡನೆ ಹಾಸಿಗೆ ಸೇರಿ ಸೊಗಸಾದ ನಿದ್ದೆ ಹೊಡೆದು ಬಿಡುತ್ತಾರೆ. ಅಂದೊಂದೇ ದಾರಿ ಅವರಿಗೆ."

"ಪಾಪ, ಒಬ್ಬರೇ ಇರುವುದು ಕಷ್ಟ."

"ನಿಮ್ಮಂಥಹ ಗೆಳೆಯರಾರಾದರೂ ಬಂದರೆ ಈ ಮನೆಯಲ್ಲಿ ನಗುವಿನ ಲಹರಿ ಹರಿಯುತ್ತದೆ. ತುಸು ಹೊತ್ತು ಸಂತೋಷವಾಗಿ ಕಳೆಯುವೆ."

ಜಾನಕೀರಾಂ ಮಾತಿಲ್ಲದೆ ನೀರಸ ನಗುವನ್ನು ಬೀರಿದ. ಮೈತ್ರೇಯಿಯ ಹೃದಯ ಅನುಕಂಪದಿಂದ ಮಿಡಿಯಿತು. ಅಘೋರ ಮಕ್ಕಳಿಬ್ಬರನ್ನೂ ಅಕ್ಕ ಪಕ್ಕದಲ್ಲಿ ಕುಳ್ಳಿರಿಸಿಕೊಂಡು ಎರಡು ಕೈಗಳಿಂದಲೂ ತಬ್ಬಿ ಹಿಡಿದುಕೊಂಡು ಮುಖದಲ್ಲಿ ಆನಂದವನ್ನು ಹೊರಸೂಸುತ್ತಾ ನುಡಿದ "ನೀವಿಬ್ಬರೂ

ತಿಲೋತ್ತಮನ ಆಟಪಾಠಗಳನ್ನು ನೋಡಿದರೆ ಅಚ್ಚರಿ ಪಡಬಹುದು. ಅವನನ್ನು ನೂತನ ಹರ್ಕ್ಯುಲಸ್ ಎಂದರೂ ತಪ್ಪಾಗಲಿಕ್ಕಿಲ್ಲ. ಅವನ ಮೈಶಕ್ತಿಗನುಗುಣವಾಗಿ ಚಿತ್‌ಶಕ್ತಿಯೂ ಇದೆ. ಎಲ್ಲದರಲ್ಲೂ ನೂರಕ್ಕೆ ನೂರು ಅಂಕಗಳನ್ನು ಲೀಲಾಜಾಲವಾಗಿ ಗಳಿಸುತ್ತಾನೆ. ಹಾಗೆಂದು ಸದಾ ಪುಸ್ತಕದ ಹುಳುವಾಗಿಯೂ ಇರುವುದಿಲ್ಲ. ಅವನದೊಂದು ಪುಟ್ಟ ದಂಡಿದೆ. ಅವನು ಬಂದ ಎಂದರೆ ಅವನ ಹಿಂದೆ ಹತ್ತು ಮಂದಿ ಬಾಲಕರಿರುತ್ತಾರೆ. ಎಲ್ಲರೊಂದಿಗೆ ಕೂಡಿ ಆಡಿ ಕತ್ತಲಾಗುವ ಮುಂಚೆ ಮನೆಗೆ ಬರುತ್ತಾನೆ. ಹೆಜ್ಜೆಹೆಜ್ಜೆಯಲ್ಲೂ ಕ್ರಮಬದ್ಧವಾದ ನಿಯಮವಿಟ್ಟುಕೊಂಡಿರುವ ಬಾಲಕರು ಈ ಕಾಲದಲ್ಲಿ ಅತಿ ವಿರಳ. ನೋಡಿ, ನನಗೆ ಅಂಥ ಒಬ್ಬ ಮಗನಿದ್ದಾನೆಂದು ಹೇಳಿಕೊಳ್ಳುವುದಕ್ಕೆ ಎಷ್ಟೋ ಹೆಮ್ಮೆ ಎನಿಸುತ್ತೆ. ಅಂದರೆ ಈ ವಿಷಯವನ್ನು ಹೊಗಳಿಕೆಗಾಗಿ ಹೇಳುತಿಲ್ಲ. ನೀವೂ ಹಾಗಿರಬೇಕು ಎಂಬುದಕ್ಕಾಗಿ ಹೇಳುತಿದ್ದೇನೆ." ದನಿಯಲ್ಲಿ ಸಂತಸವುಕ್ಕುತಿತ್ತು. ಸ್ವಲ್ಪ ತಡೆದು ಗೆಳೆಯ ದಂಪತಿಗಳಿಗಿಂತಿಂದ "ಅರವಿಂದಳಿಗೆ ಏನು ಕಡಿಮೆಯಾಗಿತ್ತು ? ಇಂಥ ಕುಮಾರಕಂಠೀರವನನ್ನು ಇಟ್ಟುಕೊಂಡಿದ್ದರೂ ತೃಪ್ತಿಪಡಲಿಲ್ಲವಲ್ಲಾ. ಅವನಿಗಿರುವುದು ಒಂದು ಚರ್ಮರೋಗವಷ್ಟೆ ? ಅದು ಎಂದಾದರೂ ಹೋದೀತು ಎಂಬ ಸಣ್ಣ ನೆಚ್ಚಿದ್ದಿದ್ದರೆ ಅವಳಿಂದು ನನ್ನನ್ನು ಕೈಬಿಟ್ಟು ಹೋಗುತ್ತಿರಲಿಲ್ಲ. ಎಂ. ಎ, ಓದಿಯೂ ಇಷ್ಟಕ್ಕೆ ಮನಸ್ಸು ಕೆಡಿಸಿಕೊಂಡಳಲ್ಲಾ ಎಂಬುದೇ ನನಗೆ ವ್ಯಥೆ. ನಾನಂತೂ ನನ್ನಿಂದ ಸಾಧ್ಯವಾದಷ್ಟು ಅವಳ ಮನಸ್ಸಿಗೆ......ಒಟ್ಟಿನಲ್ಲಿ ನಮ್ಮ ಗ್ರಹಚಾರ ನೀನೊಮ್ಮೆ ಭವಿಷ್ಯ ನುಡಿದಿದ್ದೆ–ನಿಜವೋ ಸುಳ್ಳೋ ಅಂತೂ ನುಡಿದಿದ್ದೆ–ನಾನಾಗ ಎಷ್ಟು ಹಗುರವಾಗಿ ಕಂಡಿದ್ದೆ ಎಂಬುದನ್ನು ಈಗ ಒಮ್ಮೊಮ್ಮೆ ಜ್ಞಾಪಿಸಿಕೊಳ್ಳುವೆ." ಮುಖದಲ್ಲಿ ನೀರಸನಗೆ ಮೂಡಿತು. ಜಾನಕೀರಾಮನ ಹೃದಯ ಅನುಕಂಪದಿಂದ ಮಿಡಿಯಿತು.

ನಂದಾ ಅತಿಥಿಗಳಿಗೆ ತಿಂಡಿ ತಿನಿಸುಗಳನ್ನು ತಂದು ಮುಂದಿಟ್ಟಳು. ಗೆಳೆಯರ ಮಧ್ಯೆ ಹೊತ್ತು ಸಾನಂದದಿಂದ ಉರುಳಿತು. ಸಂಜೆಯ ಆಟ ಮುಗಿಸಿಕೊಂಡು ತಿಲೋತ್ತಮನು ದುಡುದುಡು ಓಡಿಬಂದ. ಆರಾಮವಾಗಿ ಕುಳಿತ ಅತಿಥಿಗಳನ್ನು ನೋಡುತ್ತಲೂ–"ಶರಣು ಮಾಮಾ !...ಶರಣು.... ಶರಣು....ಶರಣು !"

ಎದುರುಗಡೆಯಿಂದಲೂ ಎಲ್ಲರ ದನಿ ಮೊಳಗಿತು. ಶರಣು....ಶರಣು... ಶರಣು....ಶರಣು ! ಜಾನಕೀರಾಮನ ಬಳಿಯಲ್ಲಿ ಕುಳಿತುಕೊಂಡು "ಮಾಮಾ, ನೀವೆಲ್ಲಾ ದಿನವೂ ಹೀಗೆ ಬರುತ್ತಿದ್ದರೆ ಅಜ್ಜಿಗೂ ಅಪ್ಪನಿಗೂ ಸ್ವರ್ಗಕ್ಕೆ ಮೂರೇ ಗೇಣು !"

"ದಿನವೂ ಬರುವುದೆಂದರೆ ಹೇಗೆ ತಿಲೋ ?"

ತಿಲೋತ್ತಮನ ಬೆನ್ನನ್ನು ಬಳಸಿ ಹಿಡಿದುಕೊಂಡು ಜಾನಕೀರಾಂ ನಲ್ಮೆಯಿಂದ ನುಡಿದ.

"ಅವನು ಸುಪ್ರಸಿದ್ಧ ಗೈನಕಾಲಜಿಸ್ಟ್. ಮನೆಯ ಮುಂದೆ ಹೆಂಗಳೆಯರ ಸಂತೆಯೇ ನೆರೆದಿರುತ್ತದೆ. ಅವನೆಲ್ಲಿ ಬಂದಾನು ?" ಅಘೋರ ಮುಖದಲ್ಲಿ ಮುಗಳ್ನಗುವನ್ನು ಸೂಸಿ ನುಡಿದ.

ಜಾನಕೀರಾಂ ಮಾತಿಲ್ಲದೆ ಮುಗಳ್ನಗುವನ್ನು ಹರಿಯಗೊಟ್ಟ.

"ಓ, ಮಾವಾ ! ಅಷ್ಟೊಂದು ಮಂದಿಯನ್ನು ಸೇರಗೊಡಬೇಡರಿ. ಕೊನೆಗೆ ಮಾಮಾ ಹಾದಿ ತಪ್ಪಿಯಾರು !"

ತಿಲೋತ್ತಮ ನಗೆ ಚಟಾಕಿಯನ್ನು ಹಾರಿಸಿದ.

ಎಲ್ಲರ ಮುಖದಲ್ಲೂ ನಗುವಿನಲೆ ಉಕ್ಕಿಹರಿಯಿತು.

ಮರುದಿನ ಅಘೋರ ಆಸ್ಪತ್ರೆಯ ಆವರಣಕ್ಕೆ ಕಾಲಿಟ್ಟಾಗ ಮೀರಾ ಕೈಯಲ್ಲಿ ಪುಸ್ತಕಗಳನ್ನೂ ಊಟದ ಪುಟ್ಟ ಕ್ಯಾರಿಯರನ್ನೂ ಹಿಡಿದುಕೊಂಡು ಬಂದಳು. ಏಕಕಾಲದಲ್ಲಿ ಅವಳಿಗೆ ಲಜ್ಜೆ ಸಂತೋಷಗಳು ಮೂಡಿದುವು. ಬಾಗಿದ ತಲೆಯೆತ್ತದೆ ನುಡಿದಳು "ನಮಸ್ಕಾರ."

"ಓ, ಆಗಲೇ ನಿನ್ನ ತರಗತಿ ತೆರೆಯಿತೇನು ?"

"ಇಂದಿನಿಂದ ಮೊದಲಾಗಿದೆ."

"ಒಳ್ಳೆಯದು. ಚೆನ್ನಾಗಿ ಓದು."

"ನಿಮ್ಮ ದಯೆ."

"ಹಾಗೆನ್ನಬಾರದು. ದೇವರ ದಯೆ."

"..........."

"ನಿನ್ನ ಗಲೀಜು ಕೊಠಡಿ ಬಿಟ್ಟು ಬೇರಲ್ಲಾದರೂ ಸ್ಥಳ ನೋಡಿಕೊ ಮೀರಾ."

"ಆ ಬೀದಿಯಲ್ಲಿನ ಪುಟಾಣಿ ಮಕ್ಕಳಿಗಾಗಿ ಅಲ್ಲಿರಬೇಕಾಗಿದೆ. ಹತ್ತಿರ

ದಲ್ಲಿ ಕೊಠಡಿಗಳು ಖಾಲಿಬಿದ್ದರೆ ಬದಲಾಯಿಸಿಕೊಳ್ಳುವೆ."

"ಓ, ಇನ್ನೂ ಪಾಠ ಮಾಡುತಿದ್ದೀಯೇನು ?"

"ಹೌದು."

"ಅದನ್ನೂ ಮಾಡಿ ಇದನ್ನೂ ಮಾಡಿ ಫೇಲಾಗಬೇಡ."

"ಇಲ್ಲ ಸಾರ್, ನಾನು ಒಂದು ಕ್ಷಣವನ್ನೂ ಹಾಳು ಮಾಡುವುದಿಲ್ಲ."

"ಹ್ಞೂ, ಮಾಡಿಕೊ, ಚೆನ್ನಾಗಿ ಬದುಕು."

"ನಿಮ್ಮ ಆಶೀರ್ವಾದವಿರಲಿ."

ಮಾತು ಮುಗಿಯುವುದರೊಳಗಾಗಿ ಹುಡುಗಿ ಕಾಲಿಗೆಬಿದ್ದಳು.

"ಛೀ ! ಇದೇನು ಹುಡುಗಾಟ?" ದೂರ ಸಿಡಿದು ಪುನಃ ಅಂದ "ಯಾರಾದರೂ ನೋಡಿದರೆ ಏನೆಂದಾರು ? ಇದು ಚೆನ್ನಲ್ಲ...ಮಾಸ್ತರ ಮಗ ಳಾಗಿ ನಿರ್ಮಲ ಜೀವನ ನಡೆಸು. ನರ್ಸ್ ಪರೀಕ್ಷೆ ಮುಗಿಯುವವರೆಗೆ ಮದುವೆ ಯಾಗಬೇಡ. ನಿಶ್ಚಯಕ್ಕೆ ಮೊದಲು ನಿನ್ನನ್ನು ಕೆಲಸ ಮಾಡಿ ದುಡಿಯಲು ಅವಕಾಶ ನೀಡುವರೇ ಇಲ್ಲವೇ ಎಂಬುದನ್ನು ಖಚಿತ ಮಾಡಿಕೋ. ಬೇಸ್ತು ಬೀಳಬೇಡ. ನಮ್ಮಲ್ಲಿ ಅನೇಕರು ಹೆಣ್ಣಿಗೆ ಅವಕಾಶ ನೀಡುವುದಿಲ್ಲ."

"ನಿಜ ಸಾರ್."

ಅವಳು ಬಾಗಿದ ತಲೆಯೆತ್ತದೆ ನುಡಿದಳು. ಮುಖವೆಲ್ಲಾ ಕೆಂಪಗೆ ಕೆಂಪು ತಳೆದಿತ್ತು.ಅಘೋರ ನಸುನಗೆ ಬೀರಿ ಮುಂದುವರಿದ. ಮಾರಾ ಹಿಂಬಾಲಿಸಿ ದಳು.

ಅಧ್ಯಾಯ
೩೪

ರೋಗಿಯ ಮಗ್ಗುಲಲ್ಲಿ ಕುಳಿತು ಅವಳನ್ನು ಪರೀಕ್ಷಿಸುತ್ತಿದ್ದ ಅಘೋರ. ದೌರ್ಬಲ್ಯದಿಂದ ಸೀರಿ ಸೀಕಲಾದ ದೇಹ, ಗುಳಿಬಿದ್ದ ಕಣ್ಣುಗಳು, ಒಣಗಿ ಸುಲಿದು ನಿಂತ ತುಟಿ. ಬಿಳಿಚಿಕೊಂಡಿದ್ದ ಮುಖದ ಮೇಲೆ ಬೆವರಿನ ಕಣ ಗಳು ತುಂತುರು ತುಂತುರಾಗಿ ಮೂಡಿವೆ. ಬಾಚಿ ಶುದ್ಧಿಮಾಡದ ಕೂದಲು ಮುಖದ ಸುತ್ತೂ ತುಂಬಿ ಹರಡಿಕೊಂಡಿತ್ತು ರೋಗಾಧಿಕ್ಯದಿಂದ ಮೈಯಲ್ಲಿ ಚೈತನ್ಯ ಉಡುಗಿ ರಕ್ತಹೀನವಾಗಿದೆ.

ಕಣ್ಣ ನೋಟ ಒಮ್ಮೆ ಮೈಮೇಲೆಲ್ಲಾ ಹರಿದಾಡಿತು. ನೋಡಿದ ಪ್ರಥಮ ನೋಟದಲ್ಲೇ ಅಘೋರನ ಮನಸ್ಸು ಬೆಣ್ಣೆಯಂತೆ ಕರಗಿತು. ಕ್ಷೀಣಿತ ದೇಹ ಎಡೆಯಿಲ್ಲದೆ ಉಸಿರಾಡುತ್ತಿದೆ. ಕಣ್ಣುಗಳಲ್ಲಿ ಕೆಂಪು ಮೂಡಿ ನೀರಾಡುತ್ತಲೂ ಬೆವರನ್ನು ಒರಸಿಕೊಳ್ಳುವ ನೆವದಲ್ಲಿ ಕಂಬನಿಯನ್ನೂ ತೀಡಿಕೊಂಡಳು ಅವಳು. ಒಣಗಿದ ಬಿದಿರಿನ ದೆಬ್ಬೆಯಂತಿದ್ದ ಕೈಯಿಂದ ಕೂದಲನ್ನು ಹಿಂದಕ್ಕೆ ತೀಡಿ ಒಣಗಿದ ತುಟಿಯನ್ನು ನಾಲಗೆಯಿಂದ ಸವರಿಕೊಂಡಳು. ಏನನ್ನೋ ಹೇಳ ಬೇಕೆಂದು ಅವಳು ಪ್ರಯತ್ನಪಟ್ಟಿದ್ದರೂ ಯಾವುದೋ ಕಾಣದ ಕೈ ಕೊರ ಳನ್ನು ಅದುಮಿ ಹಿಡಿದಿತ್ತು.

ಬಳಿಯಲ್ಲಿದ್ದ ಅವಳ ಪತಿಯನ್ನು ಕುರಿತು ಅಘೋರ ವಿಷಯವನ್ನು ಮುಂದಿಟ್ಟ "ಇನ್ನು ಮಕ್ಕಳನ್ನು ಹೆರುವ ಶ್ರಮವನ್ನು ಇವರಿಗೆ ನೀವು ತಪ್ಪಿ ಸಲೇ ಬೇಕು."

"ದೇವರು ಕೊಡುವ ಮಕ್ಕಳನ್ನು ತಡೆಗಟ್ಟುವುದು ನಮ್ಮ ಧರ್ಮಕ್ಕೆ ವಿರುದ್ಧ. ನಾವು ಹಾಗೆ ಮಾಡುವಂತಿಲ್ಲ." ಪತಿಯ ಗೊಗ್ಗರ ದನಿ ನೋವಿಲ್ಲದ ನುಡಿಯಿತು.

"ನೀವು ಧರ್ಮವನ್ನು ಮೆಚ್ಚಿಕೊಳ್ಳುವುದಾದರೆ ಹೆಂಡತಿಯನ್ನು ಕಳೆದು ಕೊಳ್ಳುತ್ತೀರಿ. ತಿಳಿದೂ ತಿಳಿದೂ ಧರ್ಮದ ಹೆಸರಿನಲ್ಲಿ ಕೊಲೆ ಮಾಡುವುದು ಸರಿಯಲ್ಲ."

"ಏನೇ ಬಂದರೂ ನಾವು ಸಹಿಸಿಕೊಳ್ಳಬೇಕೇ ಹೊರತು ಎಂದೂ ಅಲ್ಲಾನ ವಿರುದ್ಧ ನಿಲ್ಲುವಂತಿಲ್ಲ."

ಹಾಸಿಗೆಯ ಮೇಲೆ ಮಲಗಿದ್ದ ಲತೀಫಳ ಕಣ್ಣುಗಳಲ್ಲಿ ಕಂಬನಿಗಳುಕ್ಕಿದುವು. ತೋರಗೊಡಲಿಚ್ಛಿಸದೆ ಅತ್ತ ತಿರುಗಿ ಮಲಗಿಕೊಂಡಳು.

"ನಿಮಗೆ ಧರ್ಮದ ಮೇಲೆ ಅಷ್ಟೊಂದು ನಂಬಿಕೆಯಿದ್ದರೆ ಸ್ವಲ್ಪ ಕಾಲ ಸಂಯಮದಿಂದಿದ್ದು ಅವರಿಗೆ ಪೂರ್ಣ ವಿಶ್ರಾಂತಿ ನೀಡಿರಿ."

ಮಹಮದ್ ಮಾತಾಡದೆ ಮುಗುಳುನಗೆ ಬೀರಿದ.

ಅಘೋರನ ಮುಖ ರಂಗೇರಿ ಕೆಂಡದಂತಾಯಿತು. ಕೊಠಡಿಯಿಂದ ಹೊರ ಬಂದ. ಕಾರಿಡಾರಿನಲ್ಲಿ ಮದನ್ ಸುಧೀರ್ ಜಾನಕೀರಾಂ ಎದುರಾದರು. ಅಲ್ಲಿಂದ ನಾಲ್ವರೂ ಕೂಡಿ ಮುಂದೆ ಹೆಜ್ಜೆ ಹಾಕಿದರು. ಅಘೋರನ ಮುಖ ಭಾವ ನೋಡುತ್ತಲೂ "ಏನಪ್ಪಾ ವಿಶೇಷ ?" ಎಂದ ಜಾನಕೀರಾಂ.

"ಜಾ‌ರ್ಕ್, ಬಹುಶಃ ನಮ್ಮಲ್ಲಿಂದ ಒಂದು ಕೇಸು ನಿಮ್ಮಲ್ಲಿಗೆ ಬರುತ್ತದೆಂದು ತೋರುತ್ತೆ. ಹಾಗೊಂದುವೇಳೆ ನಿನ್ನಲ್ಲಿಗೆ ಬಂದರೆ ನನಗೊಂದು ಉಪಕಾರ ಮಾಡಬೇಕಾಗುತ್ತೆ."

"ಏನು ?"

ಎಲ್ಲರ ಕಿವಿಗಳೂ ಉತ್ತರಕ್ಕಾಗಿ ನಿಮಿರಿದುವು. ಅಘೋರ ಮುಂದುವರಿದ "ಲತೀಫ ಇನ್ನೂ ಇಪ್ಪತ್ತೈದರ ತರುಣಿ. ಮೇಲಾಗಿ, ಆರು ಮಕ್ಕಳ ತಾಯಿ! ಮೂರು ಹೆಣ್ಣು. ಮೂರು ಗಂಡು. ಹೆರುವ ಯಂತ್ರವಾದ ಅವಳು ಸೋತು ಸುಣ್ಣವಾಗಿ ಆಸ್ಪತ್ರೆ ಸೇರಿದ್ದಾಳೆ. ಅವಳು ಪತಿ ಮಹಮದ್ ಮಜಭೂತಾದ ಆಳು. ಅವನಿಗೆ ಒಂದಲ್ಲ ನಾಲ್ಕು ಹೆಣ್ಣುಗಳಿದ್ದರೂ ಅನುಭೋಗಿಸಿಯಾನು! ಅಂದಮೇಲೆ ಸಂಯಮದಿಂದಿರುವ ಶಕ್ತಿ ಬರುವುದಾದರೂ ಹೇಗೆ? ಅವಳ ಬಗ್ಗೆ ಅನುಕಂಪವಂತೂ ಇಲ್ಲವೇ ಇಲ್ಲ. ಧರ್ಮದ ಹೆಸರಿನಲ್ಲಿ ಅವಳ ಕೊಲೆಯಾಗುತ್ತಿದೆ...!" ಸಿಟ್ಟಿನ ಭರದಲ್ಲಿ ಮಾತುಗಳು ಹೊರಡದಾದುವು. ಸ್ವಲ್ಪ ತಡೆದು ಅಘೋರ ಪುನಃ ಮುಂದುವರಿದ "ಅವಳಿಗೆ ಹೊಟ್ಟೆ ನೋವಿದೆ. ಅಲ್ಸರ್ ಇದ್ದರೂ ಇರಬಹುದು. ಜೊತೆಗೆ ಗರ್ಭಕೋಶವಲ್ಲೂ ಏನೋ ಇದ್ದಂತೆ ತೋರುತ್ತೆ ಎಕ್ಸ್-ರೇ ತೆಗೆದನಂತರ ಗರ್ಭಕೋಶಕ್ಕೆ ಸಂಬಂಧಟ್ಟಿದ್ದಾದರೆ ನಿನ್ನಲ್ಲಿಗೆ ಕಳುಹಿಸುವೆ. ಮಹಮ್ಮದನಿಗೆ ತಿಳಿಸದೆ ಹಿಸ್ಟೆರೆಕ್ಟಮಿ

(Hystrectomy) ಮಾಡಿದೆಯಾದರೆ ಒಂದು ಜೀವವುಳಿಯುತ್ತೆ. ಅಷ್ಟೇ ಅಲ್ಲ, ಆ ಬಡ ಮಕ್ಕಳಿಗೆ ಮಾತೃದಾನ ಮಾಡಿದ ಪುಣ್ಯವೂ ನಿನಗೆ ಬರುತ್ತದೆ. ಗಾಳಿ ಬೆಳಕಿಲ್ಲದ ಅವಳು ಬಿಳಿಚಿಕೊಂಡಿರುವ ರೀತಿ ಕಲ್ಲೆದೆಯನ್ನೂ ಕರಗಿಸೀತು! ಅವಳ ರಕ್ತವನ್ನು ಹಂತಹಂತವಾಗಿ ಹೀರಿಯೂ ಧರ್ಮದ ಹೆಸರನ್ನು ಮುಂದೊಡ್ಡುವ ಮಹಮ್ಮದನ ಬಗೆಗೆ ಏನೆನ್ನಬೇಕು?" ದನಿಯಲ್ಲಿ ತಿರಸ್ಕಾರ ತಾನೇತಾನಾಗಿತ್ತು. ಹುಬ್ಬುಗಳು ಗಂಟಿಕ್ಕಿದುವು. ಕಣ್ಣುಗಳಲ್ಲಿ ಕೆಂಪು ಮೂಡಿತು. ಅಘೋರ ಸಿಟ್ಟಿನಿಂದ ನುಡಿದ "ಕತ್ತಿ ದೊಣ್ಣೆಗಳಿಂದ ಕೊಲೆ ಮಾಡಿದರೆ ಮಾತ್ರ ಕೊಲೆಯೇ ? ಇದು ಕೊಲೆಯಲ್ಲವೇ ? ಅಬಲೆಯಾದ ಹೆಣ್ಣನ್ನು ದಿನವೂ ಹಿಂಡಿ ನೆತ್ತರನ್ನು ಹೀರಿ ಕಾಮಪಿಪಾಸೆಗೆ ಬಲಿಕೊಡಲು ಮದುವೆ ಎಂಬುದೊಂದು ರಹದಾರಿಯಲ್ಲವೇ? ಇಂತಹ ಕೊಲೆಗಳಿಗೆ ಶಿಕ್ಷೆಯೇಕಿಲ್ಲ ? ಈಗ ಆರು ಮಕ್ಕಳನ್ನು ಬಿಟ್ಟು ಅವಳು ಸತ್ತರೆ ಆ ಧೂರ್ತ ಮಕ್ಕಳನ್ನು ಗಮನಿಸುತ್ತಾನೆಯೇ ? ಇದು ದೇಶದ ತೇಜೋವಧೆಯಲ್ಲವೇ ? ಇದನ್ನು ಪರಿಶೀಲಿಸುವ ಅಧಿಕಾರ ಆಸ್ಪತ್ರೆಗಿರಲೇಬೇಕು. ಸತ್ತಾಕೆಯು ಯಾವ ಕಾರಣದಿಂದ ಸತ್ತಿದ್ದಾಳೆ ? ಅವಳಿಗೆ ಇನ್ನೂ ಮಕ್ಕಳ ಅವಶ್ಯಕತೆಯಿತ್ತೆ ? ಹೆರುವ ಶಕ್ತಿಯಿತ್ತೆ? ಇವುಗಳನ್ನು ಪರೀಶೀಲನೆ ಮಾಡಿದ ವರದಿ ಸರಕಾರಕ್ಕೆ ಹೋಗಿ ತಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸುವಂತಾಗಲೇಬೇಕು !

"ಇನ್ನು ಆ ಮಕ್ಕಳನ್ನು ನಿಸ್ವಾರ್ಥದಿಂದ ಕಾಣುತ್ತಾನೆಯೆ ? ಅಥವಾ ಬದಿಗೊತ್ತಿದ್ದಾನೆಯೇ ? ಎಂಬುದನ್ನು ಪರಿಶೀಲಿಸಿದರೇನೇ ಅಕಾಲಮರಣಕ್ಕೊಳಗಾದ ಅವಳ ಆತ್ಮಕ್ಕೆ ಚಿರಶಾಂತಿ ದೊರೆಯುತ್ತದೆ. ಇಷ್ಟಾದರೆ ಸಮಾಜದ ಪುನರ್ರಚನೆಯಾದೀತು. ವಿದ್ಯಾವಂತರೂ ಬುದ್ಧಿವಂತರೂ ಸ್ವಾರ್ಥಪರರಾಗಿರುವುದರಿಂದಲೇ ಸಮಾಜ ಇನ್ನೂ ಪಾಪಕೂಪದಲ್ಲಿ ಮುಳುಗಿದೆ."

ವಿಷಯ ಎದೆಯಾಳಕ್ಕಿಳಿದರೂ ನುಂಗಲಾರದ ತುತ್ತಿನಂತಾಯಿತು. ಮದರ್ ಅದೇ ವಿಚಾರವನ್ನು ಮೆಲಕುಹಾಕುತ್ತಾ ಹೇಳಿದ "ಕ್ರಿಶ್ಚಿಯನ್ನರದೂ ಇದೇ ಗೋಳು. ಅವರೂ ಮಾತೆತ್ತಿದರೆ ಧರ್ಮವನ್ನು ಮುಂದೊಡ್ಡುತ್ತಾರೆ. ಹಿಂದೆ ಇಂತಹದೇ ಒಂದು ಕೇಸು ಬಂದಿತ್ತು. ನಾನವರಿಗೆ ಮಕ್ಕಳನ್ನು ತಡೆಗಟ್ಟಲು ಹೇಳಿದೆ. ಅವರೊಪ್ಪಲಿಲ್ಲ. ಮೂರು ಹೆರಿಗೆಯಲ್ಲಿ ಆಕೆ ಸತ್ತುಹೋದರು!".

"ಈ ಗೋಳು ಇಷ್ಟಕ್ಕೆ ಮುಗಿಯುತ್ತದೆಯೇ ? ಮನುಸ್ಸೆಷ್ಟಾದರೇನು? ಗಂಡಸಾದವನು ಎಷ್ಟಾದರೂ ಮದುವೆ ಮಾಡಿಕೊಳ್ಳುತ್ತಾನೆ. ಮದುವೆಯಾದ ನಂತರ ಮೊದಲ ಮಕ್ಕಳನ್ನು ಕೈ ಬಿಡುವುದು ಸರ್ವೇಸಾಮಾನ್ಯ".

"ಲತೀಫ ಮಹಮ್ಮದನಿಲ್ಲದಾಗ ನಾನಿನ್ನು ಮಕ್ಕಳನ್ನು ಹೆರಲಾರೆ ಏನಾದರೂ ಮಾಡಿರಿ ಎಂದು ಅಂಗಲಾಚುತ್ತಾಳೆ. ಅವನೆದುರಿಗೆ ಅವಳು ಕೈಗೊಂಬೆ!"

"ಇದು ನಮ್ಮ ದೇಶಕ್ಕೆ ಒಂದು ಕಂಟಕ ಎಂದರೆ ತಪ್ಪಾಗಲಾರದು. ಕ್ರಿಶ್ಚಿಯನ್ನರೂ ಮುಸ್ಲಿಮರೂ ಧರ್ಮದ ಹೆಸರಿನಲ್ಲಿ ತಮ್ಮ ಜನಾಂಗವನ್ನು ಮನಸೇಚ್ಛೆ ವೃದ್ಧಿಗೊಳಿಸುತ್ತಾರೆ. ಹಿಂದೂಗಳಲ್ಲಿ ವಿದ್ಯಾವಂತರೂ ಬುದ್ಧಿ ವಂತರೂ ಸಂಸಾರದಲ್ಲಿ ಅಚ್ಚುಕಟ್ಟು ಸಾಧಿಸಲು ಹೆರುವುದನ್ನು ಕಡಿಮೆ ಮಾಡಿಕೊಳ್ಳುತ್ತಾರೆ. ನಮ್ಮಲ್ಲಿ ಕೆಳದರ್ಜೆಯ ಜನ ಬುದ್ಧಿಮಾರ್ಗದಲ್ಲಿ ನಡೆಯಲು ತಿಳಿವಳಿಕೆ ಸಾಲದೆ ಸಾಲುಸಾಲಾಗಿ ಮಕ್ಕಳನ್ನು ಹೆರುತ್ತಾರೆ. ಹೀಗಾಗಿ ನಮ್ಮ ಯೋಜನೆಯೆಲ್ಲಾ ತಲೆಕೆಳಗಾಗುತ್ತದೆ! ಸರಕಾರ ಇದನ್ನು ಪರಿಶೀಲಿಸದಿದ್ದರೆ ಅನಾಹುತವಾಗುವುದರಲ್ಲಿ ಸಂಶಯವಿಲ್ಲ. ತಿಳಿದೂ ತಿಳಿದೂ ದೇಶವನ್ನು ವಿನಾಶದ ಹಾದಿಗೆ ತಳ್ಳುವುದರಲ್ಲಿ ಅರ್ಥವಿದೆಯೇ ಜಾ?" ಅಘೋರ ಸಿಟ್ಟಿನ ಭರದಲ್ಲಿ ಒಣಗಿದ ತುಟಿಯನ್ನು ನಾಲಗೆಯಿಂದ ಒರಿಸಿ ಕೊಂಡು ಪುನಃ ಮುಂದುವರಿದ "ಸರಕಾರ ಮೂರು ಮಕ್ಕಳಿಗಿಂತ ಹೆಚ್ಚಿಗೆ ಇರುವವರಿಗೆ ತಲೆಗಂದಾಯ ಹಾಕುವುದೊಳ್ಳೆಯದು. ಒಂದು ನಿರ್ದಿಷ್ಟ ಕಾಲದವರೆಗಾದರೂ ಖಡ್ಡಾಯವಾದ ರೂಲ್ಸ್ ತರಲೇಬೇಕು."

"ನಿಜ ರೂಲ್ಸ್ ಎಂದರೆ ರೂಲ್ಸ್. ಅದು ಸಮಗ್ರ ದೇಶಕ್ಕೂ ಸಮಗ್ರ ಜನತೆಗೂ ಪಾಠ ಕಲಿಸುವಂತಿರಬೇಕು—ರೂಲ್ಸ್ ಊರಿಗೊಂದು ಕೇರಿಗೊಂದು ಜಾತಿಗೊಂದು ಆಗಲೇಬಾರದು."

"ಹ್ಞೂ, ಹ್ಞೂ! ಇಂದಿನ ಪರಿಸ್ಥಿತಿಯೇ ಬೇರೆ. ಕೊಳಚೆಗೆ ಕಲ್ಲೆಸೆದಂತೆ ಕಾನೂನುಗಳು ಹುಟ್ಟಿಕೊಳ್ಳುತ್ತಿವೆ. ಅವುಗಳಿಗೆ ಆದಿ ಅಂತ್ಯಗಳೇ ಇಲ್ಲ. ಸರಕಾರ ಬಯಸಿದ್ದೇನೋ ಅದು ಆಗುವುದಿನ್ನೇನೋ !" ಅಘೋರ ತಿರಸ್ಕಾ ರದ ನಗೆ ಬೀರಿದ.

ಕಾರಿಡಾರಿನ ಕೊನೆಯಲ್ಲಿ ಬಹಳಷ್ಟು ಮಂದಿ ಕೂಡಿದ್ದಾರೆ. ಅಲ್ಲಿ

ಗದ್ದಲವೋ ಗದ್ದಲ. ಅಳುವವರ ಮುಸು ಮುಸು ಸದ್ದು ಕಿವಿಯ ಮೇಲೆ ಬೀಳುತಿತ್ತು. ಎಲ್ಲರ ಗಮನವೂ ಅತ್ತ ಹೊರಳಿತು. ಆ್ಯಂಬುಲೆನ್ಸ್ ವಾಹನದಿಂದ ಗಾಯಾಳು ಒಬ್ಬನನ್ನು ಒಳಗಡೆ ಸ್ಟ್ರೆಚರಿನಲ್ಲಿ ಎತ್ತಿಕೊಂಡು ಬರುತ್ತಿರುವುದು ತೋರಿಬಂತು. ಇಂದು ಆಪರೇಶನ್ ಥಿಯೇಟರಿನ ಒಡೆಯನಾಗಿದ್ದ ಮದನ್ ತುಸು ನಿಂತ. ಒಳತಂದ ವ್ಯಕ್ತಿ ಟ್ರೆಜರಿ ಆಫೀಸರ್. ಕಳ್ಳರಾರೋ ಅವನ ಕತ್ತಿಗೆ ಚೂರಿಯಿಂದ ತಿವಿದು ಹಣವನ್ನು ಕೊಳ್ಳೆಹೊಡೆದಿದ್ದರು. ಕತ್ತಿಏಟು ಆಯತಪ್ಪಿ ಬಿದ್ದುದರಿಂದ ವ್ಯಕ್ತಿ ಅಪಾಯದಿಂದ ಪಾರಾಗಿದ್ದ–ಫಕ್ಕನೆ ಅತ್ತ ತಿರುಗಿದುದರಿಂದ ಕತ್ತಿಯ ಏಟು ಕತ್ತಿನ ಹಿಂಬಾಗಕ್ಕೆ ಬಿದ್ದಿತ್ತು. ಬಹಳ ದಢೂತಿ ಮೈಯವನಾಗಿದ್ದುದರಿಂದ ಏಟು ಸಲೀಸಾಗಿ ಎರಡಿಂಚಿನಷ್ಟು ಒಳಕ್ಕೆ ಇಳಿದಿತ್ತು. ವಿಪರೀತ ರಕ್ತ ಸ್ರಾವವಾದುದರಿಂದ ವ್ಯಕ್ತಿ ಬಹಳವಾಗಿ ಬಳಲಿದ್ದ.

ಕೇಸನ್ನು ನೋಡಿದೊಡನೆಯೇ ಮದನನೆಂದ ನನಗೊಂದಿಷ್ಟು ಸಹಾಯವನ್ನಾದರೂ ಮಾಡು ಘೋರ್ ಹೇಗೂ ನೀನಿಂದು ಹಾಜರಾಗಿದ್ದಿ."

ಅಘೋರ ನಸುನಕ್ಕು ಮದನನೊಂದಿಗೆ ಹೋದ. ಥಿಯೇಟರಿನಲ್ಲಿ ನಾನಾ ಬಗೆಯ ಆಪರೇಶನ್ನುಗಳಿಗೆ ತಯಾರಿ ನಡೆದಿತ್ತು. ಸುಸಜ್ಜಿತ ಕೊಠಡಿಯಲ್ಲಿ ಡಾಕ್ಟರುಗಳು ಮುಖವಾಡ ಕಟ್ಟಿಕೊಂಡು ಕಾರ್ಯತತ್ಪರರಾಗಿದ್ದರು. ಮೇಜಿನ ಬಳಿಗೆ ಬರುತ್ತಲೂ ಅಘೋರ ಕಣ್ಣುಗಳನ್ನು ಗಡಿಯಾರದ ಕಡೆ ಹೊರಳಿಸಿದ. ಗಂಟೆ ಎಂಟುವರೆಯಾಗಿತ್ತು. ಬೆಳಗಿನ ಬಾಲರವಿ ಕಿಟಕಿಯ ನೇರಕ್ಕೆ ಮೇಲೇರುತಿದ್ದ. ನಾನಾ ಪಕ್ಷಿಗಳ ಕಲಕಲರವವು ಕಿವಿಗಿಂಪಾಗಿ ಕೇಳಿಬರುತಿತ್ತು. ನೀಲ ಗಗನದಲ್ಲಿ ತೇಲುವ ಬಿಳಿ ಮೋಡಗಳು ಕಣ್ಮನಗಳನ್ನು ಅತ್ತತ್ತಲೇ ಸೆಳೆಯುತ್ತಿವೆ. ತೆರೆದ ಕಿಟಕಿಯಿಂದ ಹೊರ ಜಗತ್ತನ್ನು ನಿಟ್ಟಿಸುತ್ತಾ ಅಘೋರ ಕ್ಷಣಕಾಲ ನಿಂತ. ಹೊರ ಜಗತ್ತಿಗೂ ಒಳ ಜಗತ್ತಿಗೂ ಇರುವ ಅಂತರ ತನುಮನಗಳನ್ನು ಕಟ್ಟಿಹಾಕಿತು...ಕಾಲ ಕ್ರಮೇಣ ಮನುಷ್ಯ ನಿಸರ್ಗದೆತ್ತರಕ್ಕೂ ಏರ ಬಲ್ಲನೇ ? ಹಾಗಾದರೆ...

ಮೇಜಿನ ಮೇಲೆ ವ್ಯಕ್ತಿಯನ್ನು ಮಲಗಿಸುತ್ತಲೂ ಗಮನ ಇತ್ತ ಹರಿಯಿತು. ಕಡಿದು ಬಿದ್ದ ಹೆಮ್ಮರದಂತೆ ಮುಖಮುಡಿಯಾಗಿ ಮಲಗಿದ ವ್ಯಕ್ತಿ ಉಟ್ಟ ಉಡುಪು ರಕ್ತದಿಂದ ತೋಯ್ದು ಹೆಪ್ಪುಗಟ್ಟಿತ್ತು. ಅಘೋರ ಮುಖ

ವಾಡ ಧರಿಸಿಕೊಂಡು ಕೈಚೀಲಗಳನ್ನು ತೊಟ್ಟು ಗೆಳೆಯನಿಗೆ ಸಹಾಯ ಮಾಡಲು ಮುಂದಾದ.

ಪೆಟ್ಟು ನೇರವಾಗಿ ಅಳಕ್ಕೆ ಇಳಿದಿತ್ತು. ಗೆಳೆಯರಿಬ್ಬರೂ ಕೂಡಿ ಲಗುಬಗೆಯಿಂದ ಕೆಲಸಕ್ಕೆ ಕೈಹಚ್ಚಿದರು. ಹರಿದಿದ್ದ ನರಗಳನ್ನು ಸೇರಿಸಿ ಹೊಲಿಗೆಹಾಕಿ ಆಪರೇಶ್ ಮುಗಿಸಿದಾಗ ತಾಸೊಂದು ಉರುಳಿತು. ಅಘೋರ ಆ ಧಡೂತಿ ವ್ಯಕ್ತಿಯ ಬೆನ್ನ ಮೇಲೆ ಕೈಯಿಟ್ಟು ನುಡಿದ "ಇವರ ಅದೃಷ್ಟ ಚೆನ್ನಾಗಿತ್ತು ಮದನ್."

o o o o

ಅಂದು ಡಾ|| ಬಿಮಲ್ ಚಂದ್ರ ರೇ-ರವರ ಭಾಷಣವಿತ್ತು. ಭಾರತೀಯರಾದ ಅವರು ಅಮೆರಿಕದಲ್ಲಿ ನೆಲಸಿದ್ದು ಆಗಾಗ ಭಾರತಕ್ಕೆ ಬರುತ್ತಿದ್ದುದುಂಟು. ಹಾಗೆ ಬಂದಾಗಲೆಲ್ಲಾ ಭಾರತದ ಹಿರಿಯ ಆಸ್ಪತ್ರೆಗಳಿಗೆ ಭೇಟಿ ನೀಡಿ ಅಲ್ಲಿನ ವೈದ್ಯವೃಂದಕ್ಕೆ ನಾಲ್ಕು ಹಿತವಚನಗಳನ್ನು ಹೇಳಿ ಹೋಗುತ್ತಿದ್ದರು. ಆಸ್ಪತ್ರೆಯ ಆವರಣದಲ್ಲಿ ಅವರಿಗಾಗಿ ತಳಿರುತೋರಣದ ಸಿಂಗಾರ ನಡೆದಿತ್ತು–ಆಸ್ಪತ್ರೆಯ ಪ್ರತಿಯೊಂದು ಕೊಠಡಿಯೂ ಅವರಿಗಾಗಿ ಮೈಕೊಡವಿ ಮಡಿಯುಟ್ಟಿತ್ತು. ದಾಸದಾಸಿಯರು ಧವಳ ಕಾಂತಿಯಿಂದ ಬೆಳಗುತಿದ್ದರು. ಡಾ|| ಘನಶ್ಯಾಮ್ ತಾವೇ ಖುದ್ದಾಗಿ ಅತಿಥಿಗೆ ಸ್ವಾಗತನೀಡಿ ಬರಮಾಡಿಕೊಂಡರು. ನೂರಾರು ಮಂದಿ ವೈದ್ಯರುಗಳು ಹಸನ್ಮುಖದಿಂದ ಹಿರಿಯ ವ್ಯಕ್ತಿಗೆ ಹಸ್ತಲಾಘವ ನೀಡಿದರು.

ಡಾ|| ಬಿಮಲ್‌ಚಂದ್ರ ರೇಯವರು ಆಸ್ಪತ್ರೆಯ ಒಳಗೊಂದು ಬಾರಿ ಸುತ್ತು ಹಾಕಿ ಬಂದರು. ಅಲ್ಲಿನ ಲ್ಯಾಬೋರೇಟರಿ ಲೈಬ್ರರಿ ಆಪರೇಶ್ ಥಿಯೇಟರು ಮತ್ತು ಮೆಡಿಕಲ್ ಕಾಲೇಜನ್ನು ನೋಡಿಕೊಂಡು ಬಂದ ನಂತರ ಅವರು ವೈದ್ಯರುಗಳ ಸಭೆಗೆ ಆಗಮಿಸಿದರು. ಹೊರ ಆವರಣದಲ್ಲಿ ಹಸಿರು ಹುಲ್ಲಿನ ಮೆತ್ತೆಯ ಮೇಲೆ ಕುರ್ಚಿ ಮೇಜುಗಳನ್ನು ಅಳವಡಿಸಲಾಗಿತ್ತು. ಸಂಜೆಯ ತಿಳಿಗಾಳಿಗೆ ಮೈಯೊಡ್ಡಿ ಡಾಕ್ಟರುಗಳ ಸಭೆಸೇರಿತು. ಟೀ ಪಾರ್ಟಿಗೆ ಮುನ್ನ ಅವರು ವೈದ್ಯರುಗಳನ್ನುದ್ದೇಶಿಸಿ ಮಾತನಾಡಿದರು.

ನಮ್ಮ ವೈದ್ಯ ಬಂಧು ಭಗನಿಯರೇ,

"ಒಂದಾನೊಂದು ಕಾಲದಲ್ಲಿ ಪ್ರಕೃತಿಯ ಕೈಗೊಂಬೆಯಾಗಿದ್ದ ಮಾನವ ಇಂದು ಪ್ರಕೃತಿಯನ್ನೇ ಕೈಗೊಂಬೆಯನ್ನಾಗಿ ಮಾಡಿಕೊಳ್ಳುವ ಸಾಹಸಕ್ಕೇರು

ತಿದ್ದಾನೆ. ಮನುಷ್ಯನ ನಿಷ್ಪ್ರಯೋಜಕ ಅಂಗಗಳನ್ನು ತೆಗೆದುಹಾಕಿ ಕೃತಕ ಅಂಗಗಳನ್ನು ತಯಾರಿಸಿ ಜೋಡಿಸುವಲ್ಲಿಯೂ ಮೃತರ ಉಪಯುಕ್ತವಾದ ಅಂಗಗಳನ್ನು ತೆಗೆದು ಇತರರಿಗಿಟ್ಟು ಕಸಿ ಮಾಡುವಲ್ಲಿಯೂ ಮನುಷ್ಯ ಯಶಸ್ವಿಯಾಗಿದ್ದಾನೆ.

"ತರುಲತೆಗಳಲ್ಲಿಯೂ ದನಕರುಗಳಲ್ಲಿಯೂ ಉತ್ತಮ ತಳಿಗಳ ಅಭಿವೃದ್ಧಿಗಾಗಿ ಪ್ರಯೋಗ ನಡೆಸಿ ಯಶಸ್ವಿಯಾದಂತೆ ವಿಜ್ಞಾನಿಯು ಮಾನವ ಕುಲದಲ್ಲಿ ತಳಿಯನ್ನು ಅಭಿವೃದ್ಧಿಗೊಳಿಸಲು ಹೋರಾಡುವ ಕಾಲ ಬಹಳ ದೂರವಿಲ್ಲ. ಆನುವಂಶಿಕವಾಗಿ ಬರುವ ಶಾರೀರಕ ಗುಣ ದೋಷಗಳನ್ನೂ ಮಾನಸಿಕ ಗುಣ ದೋಷಗಳನ್ನೂ ಪರಿಶೀಲಿಸಿ ಬರಲಿರುವ ದೋಷಗಳನ್ನು ಹತ್ತಿಕ್ಕಿ ಮಕ್ಕಳು ಧೃಢಕಾಯರಾಗಿಯೂ ಬುದ್ಧಿವಂತರಾಗಿಯೂ ಹುಟ್ಟುವಂತೆ ಮಾಡುವುದು ಕಷ್ಟವೇನಲ್ಲ. ಪೀಳಿಗೆಯಿಂದ ಪೀಳಿಗೆಗೂ ಅಭಿವೃದ್ಧಿ ಹೊಂದಲಾರದಂಥ ದೋಷಯುಕ್ತರಿಗೆ ಮಕ್ಕಳನ್ನು ಪಡಯಲೇಬಾರದೆಂಬ ಖಡ್ಡಾಯವಾದ ನಿಷೇಧವು ಬಂದಲ್ಲಿ ಆಶ್ಚರ್ಯವೇನಿಲ್ಲ.

"ಆಧುನಿಕ ಚಿಕಿತ್ಸಾ ತಂತ್ರಗಳೂ ಶಸ್ತ್ರ ಚಿಕಿತ್ಸೆಯೂ ಸಾವನ್ನು ದೂರ ಮಾಡುತ್ತಿದೆ. ಕಾಲಾಂತರದಲ್ಲಿ ದೇಹದಿಂದ ದೇಹಕ್ಕೆ ಪ್ರಾಣವಾಯುವನ್ನು ಸ್ಥಳಾಂತರಿಸುವ ಮಹಾಕಾರ್ಯವನ್ನು ಮನುಷ್ಯ ಕೈಗೂಡಿಸಿಕೊಳ್ಳಲಿಕ್ಕೂ ಸಾಕು.

"ಮುಖ್ಯವಾಗಿ ಮಾನವತಳಿಯನ್ನು ಅಭಿವೃದ್ಧಿಗೊಳಿಸಿಕೊಳ್ಳಲು ಡಾಕ್ಟರುಗಳು ಹೆಣಗಲೇ ಬೇಕು. ಇಂದಿನ ಯಂತ್ರತಂತ್ರಗಳ ಯುಗದಲ್ಲಿ ಜನಸಾಮಾನ್ಯರ ಅಗತ್ಯವಿಲ್ಲ. ದಿನೇದಿನೇ ಸಾಮರ್ಥ್ಯ ಹೆಚ್ಚಿಸಿ ವಿಜ್ಞಾನವನ್ನು ಕರಗತಮಾಡಿಕೊಂಡು ಸಗ್ಗದೆತ್ತರಕ್ಕೆ ಏರಬಲ್ಲಂಥ ಸಾಹಸಿಗಳನ್ನು ನಿರ್ಮಾಣ ಮಾಡಬಲ್ಲ ಚೈತನ್ಯವನ್ನು ನೀವು ಕರಗತ ಮಾಡಿಕೊಳ್ಳಿರಿ.

"ಭಾರತ ದೇಶ ಬಡದೇಶವೆಂಬುದೇನೋ ಸಹಜ. ಇಲ್ಲಿನ ನ್ಯೂನತೆಯನ್ನು ಸರಿಹೊಂದಿಸಲು ಒಬ್ಬನಲ್ಲ, ನೂರು ಮಂದಿ ಗಾಂಧೀಜಿಗಳು ಹುಟ್ಟಿಕೊಂಡರೂ ಸಾಲದು. ಹಾದಿಬೀದಿಯಲ್ಲಿ ಸಂಸಾರ ಸಾಗಿಸುವವರ ಕಡೆ ನೋಡಿ! ಪಾಳು ಗುಡಿಗಳಲ್ಲಿ ಮಾರು ಕಟ್ಟೆಗಳಲ್ಲಿ ಸಂತಾನೋತ್ಪತ್ತಿಗೊಳಿಸುವವರಿಗೇನು ಕಡಿಮೆ? ಅಂಥಹವರಿಗೆ ಕಡ್ಡಾಯವಾಗಿ ವೀರ್ಯ ನಷ್ಟಗೊಳಿಸಿರಿ

ನಿಮ್ಮಂಥಹವರಿಗಲ್ಲ! ನೀವೀಗ ಮಾಡುತ್ತಿರುವುದೇನು? ಯಾರು ದೇಶಕ್ಕೆ ಉತ್ತಮ ಮಕ್ಕಳನ್ನು ನೀಡಬಲ್ಲರೋ ಅವರನ್ನು ನಿರ್ವೀರ್ಯರನ್ನಾಗಿಸುವುದೇ ?

"ಬಡವರ ಚಿಕಿತ್ಸೆಗೆ ನೀವೇನು ಮಾಡುತಿದ್ದೀರಿ? ಸರಕಾರ ಒದಗಿಸುವ ಸಹಾಯವನ್ನು ನೆಚ್ಚಿ ಕುಳಿತುಕೊಳ್ಳುವುದೇ? ಸರಕಾರದೊಂದಿಗೆ ನೀವೂ ಸಹ ಕಾರ ಹಸ್ತ ನೀಡಿದಲ್ಲಿ ಹನಿಗೂಡಿ ಹಳ್ಳವಾದೀತು. ನಿಮಗಾಗಿ ಬರುವ ಔಷಧದ ಸ್ಯಾಂಪಲ್ಲುಗಳನ್ನು ಎಲ್ಲರೂ ಒಂದೆಡೆ ಶೇಖರಿಸಿ ಅದರಿಂದ ಬಡವರಿಗೆ ಚಿಕಿತ್ಸೆ ನಡೆಸಿರಿ. ಔಷಧ ತಯಾರಿಕರಿಗೂ ಅವರ ಔಷಧಗಳಲ್ಲಿ ಹತ್ತರಲ್ಲೊಂದಂಶ ವನ್ನು ಬಡವರ ಚಿಕಿತ್ಸೆಗಾಗಿ ಮುಫತ್ತಾಗಿ ಕೊಡದ ಹೊರತು ಅವರ ಔಷಧ ವನ್ನು ಕೊಳ್ಳುವುದಿಲ್ಲವೆಂದು ಶಪಥ ಮಾಡಿರಿ. ಮಾನವತೆಯ ಬಗ್ಗೆ ಅನುಕಂಪ ವಿರಲಿ.

"ವೈದ್ಯ ಬಂಧುಗಳೇ ಭಾವೀ ಭಾರತದ ಪುನರ್ನಿರ್ಮಾಣದ ಹೊರೆ ನಿಮ್ಮ ಮೇಲಿದೆಯೆಂಬುದನ್ನು ಕನಸಿನಲ್ಲಿಯೂ ಮರೆಯ ಬೇಡಿರಿ. ಜೈ ಹಿಂದ್."

ಸಭೆ ಚದುರುವಷ್ಟರಲ್ಲಿ ಕತ್ತಲೆಯ ಕಾಳತೆರೆ ಇಳೆಯನ್ನು ದಟ್ಟವಾಗಿ ಮುಸುಗುತಿತ್ತು. ಅಘೋರನ ಗೆಳೆಯರನೇಕರು ಒಮ್ಮೆಲೇ ಧಾಳಿಯಿಟ್ಟರು, "ಹೇಳದೆ ಕೇಳದೆ ನೀನು ವಾಸೆಕ್ಟಮಿ ಮಾಡಿಸಿಕೊಂಡುದುದನ್ನು ಅವರಿಗೆ ಹೇಳ ಬೇಕೆನ್ನಿಸಿತ್ತು. ಆದರೆ, 'ಪಾಪ' ಎಂತ ಸುಮ್ಮನಾದೆವು."

ಅಘೋರ ಮಾತಾಡದೆ ಮುಗುಳ್ನಗೆ ಬೀರಿದ.

ಸೀರೆಯ ಸೆರಗನ್ನು ಎಳೆದುಕೊಂಡು ನಿರಿಯನ್ನು ಚಿಮ್ಮುತ್ತಾ ನಡೆದು ಬಂದ ಸೌಮಾ ಹೊಳೆಹೊಳೆಯುವ ಕಣ್ಣುಗಳನ್ನು ಅರಳಿಸಿ ನುಡಿದಳು "ನೀವು ವಾಸೆಕ್ಟಮಿ ಮಾಡಿಸಿಕೊಳ್ಳದಿದ್ದರೆ ಇಂದು ಅರವಿಂದಾ ಮೆಂಟಲ್ ಹಾಸ್ಪಿಟಲಿನಲ್ಲಿ ಇರಬೇಕಾಗಿರಲಿಲ್ಲ."

"ನಿಜ ಡಾಕ್ಟರ್. ನಾನಾಗ ತಿಳಿದುಕೊಳ್ಳಲಿಲ್ಲ." ದನಿಯಲ್ಲಿ ದುಗುಡ ವಿತ್ತು.

"ಗಾಯದ ಮೇಲೆ ಬರೆಯನ್ನೆಳೆಯುವುದೇ?"

ಮದನನ ನುಡಿಯಲ್ಲಿ ಅನುಕಂಪವಿತ್ತು. ಯಾರೂ ಮಾತಾಡಲಿಲ್ಲ.

ಅಧ್ಯಾಯ

೩೫

ಸಾಯಂಸಮಯ. ಎಡೆಬಿಡದೆ ನಡೆದು ದಣಿದ ದಿನಮಣಿ ಪಡುವಣ ಮಟ್ಟೆಗೆ ತುಸು ವಿಶ್ರಾಂತಿಗಾಗಿ ಬಿಜಯಂಗೈದಿದ್ದಾನೆ. ತಣ್ಣನೆಯ ಸುಳಿಗಾಳಿ ಸಾನಂದದಿಂದ ಸ್ವಾಗತ ನೀಡುತ್ತಿದೆ. ಖಗಪಕ್ಷಿಗಳ ಇನಿಗಾನ ಕಿವಿಗಿಂಪಾಗಿ ಕೇಳಿಬರುತ್ತಿತ್ತು. ತಣ್ಣನೆಯ ಸುಮಧುರ ವಾತಾವರಣಕ್ಕೆ ಮೈಗೊಟ್ಟು ಸಹಪಾಟಿಗಳೊಂದಿಗೆ ತಿಲೋತ್ತಮ ಆಟದಲ್ಲಿ ಮಗ್ನನಾಗಿದ್ದ. ಹತ್ತಾರು ಮಂದಿ ಹುಡುಗರು ಕೂಡಿ ಕೇಕೆಹಾಕಿ ನಕ್ಕುನಲಿದು ಆಡುತಿದ್ದ ಆಟ ನಂದಾದೇವಿಯ ಮನ ಸೆಳೆದಿತ್ತು. ಕೀಲುಗಳಲ್ಲಿನ ನೋವು ಹಿಂಸಾತ್ಮಕವಾಗಿದ್ದರೂ ಹುಡುಗರ ದಳ ಮನಸ್ಸನ್ನು ಮುಗಿಲೆತ್ತರಕ್ಕೆ ಏರಿಸಿತ್ತು. ನೋಡು ನೋಡುತ್ತಾ ಸಾನಂದದಿಂದ ಮೈಮರೆತು ಕುಳಿತಳು—ನಂದಾ.

ತುಸು ಹೊತ್ತು ಉರುಳುವುದರೊಳಗಾಗಿ ಮನೆಯ ಮುಂದೆ ವಾಹನವೊಂದು ಬಂದು ನಿಂತಿತು. ಅದರಿಂದ ರತನ್ ಇಳಿದ. ಹಿಂದೆಯೇ ಇನ್ನೊಬ್ಬ ವಯೋವೃದ್ಧರೂ ಇಳಿದರು. ಒಮ್ಮೆಲೇ ಹುಡುಗರು ಆಟವನ್ನು ನಿಲ್ಲಿಸಿ ಅತ್ತ ನೋಟ ಹರಿಸಿದರು. ತಿಲೋತ್ತಮ ಬಳಿಗೆ ಓಡಿದ. ರತನನ್ನು ನೋಡುತ್ತಲೂ ಎಳೆಯ ಮುಖ ಹೂವಿನಂತರಳಿತು.

"ಡಾಕ್ಟರು ಇದ್ದಾರೆಯೇ?" ರತನ್ ಕೇಳಿದ.

"ಇಲ್ಲ, ಕಾಹಿಲೆಯವರನ್ನು ನೋಡಲು ಹೋಗಿದ್ದಾರೆ."

"ಓಹೊ!...ಹೋಗಿ ಎಷ್ಟೊತ್ತಾಯಿತು!"

"ಸ್ವಲ್ಪ ಹೊತ್ತಾಯಿತು. ಹೋಗಿ ಕರೆತರಲೇ? ಅವರ ಮನೆ ಹತ್ತಿರದಲ್ಲೇ ಇದೆ."

"ಅವಸರ ಬೇಡ. ನೋಡೋಣ. ಬರಬಹುದು."

"ಹಾಗಿದ್ದರೆ ಬನ್ನಿ ಒಳಗಡೆ" ಎಂದ ತಿಲೋತ್ತಮ ತನ್ನ ದಳವನ್ನು ಬೀಳ್ಕೊಟ್ಟ.

ರತನ್ ತಿಲೋತ್ತಮನನ್ನು ಬಿಗಿದಪ್ಪಿ ಹಿಡಿದುಕೊಂಡು ಒಳಬಂದ. ನಂದಾದೇವಿ ಕುಳಿತಲ್ಲಿಂದ ಏಳಲಾರದೇ ಏಳತೊಡಗಿದಾಗ ರತನ್ ಮತ್ತು ತಿಲೋತ್ತಮ ಕೈಯಾಸರೆ ನೀಡಿ ಒಳಗಡೆ ಕರೆತಂದರು. ಎಲ್ಲರೂ ನಡುವಣ ದಿವಾನಖಾನೆಯಲ್ಲಿ ಕುಳಿತುಕೊಂಡರು. ರತನ್ ತನ್ನೊಂದಿಗೆ ಬಂದ ವೃದ್ಧ ಮಹಾಶಯರನ್ನು ಪರಿಚಯ ಮಾಡಿಕೊಟ್ಟ—"ನೋಡಿ, ನಿಮ್ಮ ಚಿಕಿತ್ಸೆಗೆಂದೇ ಇವರನ್ನು ಕರೆತಂದಿದ್ದೇನೆ." ನಗುಮುಖದಿಂದ ನುಡಿ ಹೊರಬಿತ್ತು.

ತಿಲೋತ್ತಮ ಅವರನ್ನೇ ಮಿಕಿ ಮಿಕಿ ನೋಡಿದ. ಅವರಿಗೆ ನೂರು ವರ್ಷಗಳಾಗಿವೆ ಎಂಬುದನ್ನು ಊಹಿಸುವಂತಿರಲಿಲ್ಲ. ದಿನನಿತ್ಯ ಕೆಲಸಮಾಡುವಷ್ಟು ಚಕಮಕಿಯಾಗಿದ್ದರು—ಅವರು. ಗ್ರಾಮ್ಯ ವ್ಯಕ್ತಿಯಾದರೂ ಮಾತಿನಲ್ಲಿ ನಯ ನಾಜೂಕುಗಳಿದ್ದುವು. ಕಚ್ಚೆ ಪಂಚೆಯುಟ್ಟು ಮೇಲೊಂದು ಬಿಳಿಯ ಅಂಗಿ ತೊಟ್ಟಿದ್ದರು. ಹೆಗಲ ಮೇಲೊಂದು ಉತ್ತರೀಯವಿದ್ದರೂ ಅದನ್ನು ಹೊದ್ದಿರಲಿಲ್ಲ. ಬಿಳಿಯ ಹುಬ್ಬು, ಬಿಳಿಯ ಮೀಸೆಗಳು ನೋಡಿದೊಡನೆಯೇ ಗೌರವ ಹುಟ್ಟಿಸುವಂತಿದ್ದುವು.

ವೃದ್ಧ ಮಹಾಶಯರು ಎದ್ದು ಬಂದು ನಂದಾದೇವಿಯ ನಾಡಿ ಹಿಡಿದು ನೋಡಿದರು ಕೀಲು ಕೀಲುಗಳಲ್ಲಿನ ಊತವನ್ನೂ ಅದುಮಿ ನೋಡಿ ಅಂದರು "ಅಮ್ಮಾ ಸಧ್ಯ, ನೀವೊಂದು ವಾರ ಯಾವ ಔಷಧಿಯನ್ನೂ ತೆಗೆದುಕೊಳ್ಳಕೂಡದು. ಅನಂತರ ನನ್ನ ಔಷಧ ತೆಗೆದುಕೊಳ್ಳಿರಿ."

"ಆಗಲಿ." ಒಂದೇ ನಿರ್ಧಾರದಿಂದ ನುಡಿದಳು ನಂದಾ.

ಮಾತು ಮುಗಿಯುವುದರೊಳಗಾಗಿ ಅಘೋರ ಬಂದ. ಅವನನ್ನು ನೋಡುತ್ತಲೂ ವೃದ್ಧ ಮಹಾಶಯರು ಎದ್ದುನಿಂತು ಕೈಗಳನ್ನು ಜೋಡಿಸಿದರು. ಮುಖದಲ್ಲಿ ಹಸನಾದ ನಗೆಮಲ್ಲಿಗೆ ಅರಳಿತು. ಮೈಯೆಲ್ಲಾ ಸಂತಸದ ಬೀಡಾಗಿ ನಿಂತರು—ಅವರು.

"ನೀವೇಕೆ ಏಳಬೇಕು ಕುಳಿತುಕೊಳ್ಳಿ, ಯಜಮಾನರೇ."

ಅಘೋರ ಕೈ ಜೋಡಿಸಿಕೊಂಡು ಒತ್ತಾಯಪೂರ್ವಕನಾಗಿ ನುಡಿದ. ಅವರು ಕುಳಿತುಕೊಂಡು ಕೇಳಿದರು "ನನ್ನ ನೆನಪಿದೆಯೇ ಸ್ವಾಮಿ?"

"ನನಗೂ ನಿಮ್ಮನ್ನು ಎಲ್ಲೋ ನೋಡಿದ ಹಾಗಿದೆ."

ಬೀಸಿ ಬಂದ ತಂಗಾಳಿಯೂ ಮರ್ಮರಿಸಿತು...ನನಗೂ ನಿಮ್ಮನ್ನು

ಎಲ್ಲೋ ನೋಡಿದ ಹಾಗಿದೆ!...

"ನೀವು ನನಗೆ ಜೀವದಾನ ಮಾಡಿದ್ದೀರಿ."

"ನಾನು?" ದನಿಯಲ್ಲಿ ಅಚ್ಚರಿಯಿತ್ತು. ಅಘೋರ ಅವರನ್ನೇ ನಿಟ್ಟಿಸಿದ.

"ಹೌದು ಸ್ವಾಮಿ" ಉಲ್ಲಾಸದಿಂದ ನುಡಿದರು ವೃದ್ಧ ಮಹಾಶಯ.

"ಜ್ಞಾಪಕವಿಲ್ಲ; ಏನಾಗಿತ್ತು?"

"ಎತ್ತು ಹಾದು ಕೊಂಬು ಹೊಕ್ಕಿ ಹೊಟ್ಟೆ ಕರಳುಗಳು ಹರಿದಿದ್ದುವು. ನೀವು ಆಗ ನನ್ನನ್ನು ಉಳಿಸಿದ್ದೀರಿ!"

ಅಘೋರ ಸ್ವಲ್ಪ ಹೊತ್ತು ಯೋಚಿಸಿದ. ಹಿಂದಿನ ಚಿತ್ರವೆಲ್ಲಾ ಚಲನ ಚಿತ್ರದಂತೆ ಮನದಲೆಯಲ್ಲಿ ತೇಲಿ ನಲಿಯಿತು. ಅಂದು ಆತನಿಗೆ ನೂರು ವರ್ಷ ಗಳೆಂಬುದನ್ನು ಚಾರ್ಟ್ ಸಾರಿ ಹೇಳಿತ್ತು. ಮೇಲಾಗಿ, ರತನನೂ ಶತಾಯುಷಿ ಯೆಂದು ಹೇಳಿಕೊಂಡಿದ್ದ. ಬಹುಶಃ ಅವರೇ ಇವರಿರಬಹುದೇ? ಹೇಗೆ?..... ಮನಸ್ಸು ಚಡಪಡಿಸಿತು.

"ಹೌದು. ಅವರು ನಮ್ಮ ಆಸ್ಪತ್ರೆಯಲ್ಲಿ ಇದ್ದು ಆಪರೇಶ್ ಮಾಡಿಸಿ ಕೊಂಡಿದ್ದಾರಂತೆ." ರತನ್ ನಕ್ಕು ನುಡಿದ "ಬಹುಶಃ ನೀನೆ ಆಪರೇಶನ್ ಮಾಡಿರಲಿಕ್ಕೂ ಸಾಕು."

"ಹೌದು. ಸ್ವಾಮಿ, ನನಗೆ ಚೆನ್ನಾಗಿ ಜ್ಞಾಪಕವಿದೆ." ಕಣ್ಣರಳಿಸಿ ನುಡಿದರು ವೃದ್ಧಮಹಾಶಯ.

ಅಘೋರ ತನ್ನ ಮರೆವಿಗೆ ತಾನೇ ನಾಚಿದ. ವೃದ್ಧಮಹನೀಯರೇ ಅಷ್ಟೊಂದು ಜ್ಞಾಪಕವಿಟ್ಟುಕೊಂಡಿರುವಾಗ ತಾನು ಮರೆತುದು ಹೇಗೆ? ಮುಗುಳ್ನಗೆ ಬೀರಿ ಅವನೆಂದ "ದಯಮಾಡಿ ಕ್ಷಮಿಸಿರಿ. ನಾನೇ ಮರೆತು ಬಿಟ್ಟಿದ್ದೆ."

"ನೀವೆಲ್ಲಿ ಜ್ಞಾಪಕವಿಟ್ಟುಕೊಳ್ಳಲಾಗುತ್ತೆ ಸ್ವಾಮಿ? ದಿನವೂ ನೂರಾರು ಮಂದಿಯನ್ನು ನೋಡುತ್ತಿರುತ್ತೀರಿ." ಸುಕ್ಕುಕಟ್ಟಿದ ಕೆನ್ನೆಗಳ ಮೇಲೆ ಮಂದ ಹಾಸ ನಲಿಯಿತು.

ಅಘೋರ ನಸುನಕ್ಕು ಅದೇ ವಿಚಾರವನ್ನೇ ಮೆಲುಕು ಹಾಕಿದ...ಈ ಮನುಷ್ಯ ಇಲ್ಲಿಗೆ ಅರೆಜೀವವಾಗಿ ಬರುವುದಕ್ಕಿಂತ ಸ್ಥಳದಲ್ಲೇ ಸತ್ತು ಹೋಗಿದ್ದಿ

ದ್ದರೆ ದೇಶಕ್ಕೆ ಏನು ನಷ್ಟವಾಗುತಿತ್ತು?...ಎಂದು ತನಗೆ ತಾನೇ ಅಂದು ಕೊಂಡುದುದೂ ಇನ್ನೂ ಕಲಿಕೆಯ ತರುಣ ಡಾಕ್ಟರಿಗೆ ಕಾರ್ಯಭಾರವನ್ನು ನಿಶ್ಚಿಂತೆಯಿಂದ ವಹಿಸಿಕೊಟ್ಟುದುದೂ ಮನದಲೆಯಲಿ ಸುಳಿಸುಳಿದಳಿಯಿತು. ಮೈಯಲ್ಲೆಲ್ಲಾ ನಸು ಕಂಪನದ ಅಲೆ ಮೆಲ್ಲನೆ–ಬಹು–ಮೆಲ್ಲನೆ ಹರಿದಾಡಿ ಹೋದಂತಾಯಿತು. ತಕ್ಷಣ ಅವನು ವಿಷಯವನ್ನು ಮುಂದಿಟ್ಟ "ಆಪರೇಶ‌ ಮಾಡಿದ್ದು ನಾನಲ್ಲ. ಮಾಡಿದವರು ಇನ್ನೊಬ್ಬರು, ಮಾಡುವಾಗ ಬಳಿಯ ಲ್ಲಿದ್ದು ನೋಡಿಕೊಂಡೆ."

"ಅಷ್ಟಾದರೆ ಬೇಕಾದಷ್ಟಾಯಿತು." ಅಂದರು ಅವರು.

"ಪಾಪ, ಬಹಳ ಶ್ರಮ ತೆಗೆದುಕೊಂಡಿರಿ. ಈ ವಯಸ್ಸಿನಲ್ಲಿ ಅಲ್ಲಿಂದಿಲ್ಲಿಗೆ ಬರುವುದೆಂದರೆ ಸಾಮಾನ್ಯವಲ್ಲ."

"ಅಂಥಾದ್ದೇನಿಲ್ಲ. ಅವರು ಸಾಕಷ್ಟು ಚಟುವಟಿಕೆಯನ್ನಿಟ್ಟುಕೊಂಡಿದ್ದಾರೆ. ನನ್ನ ಚಿಕ್ಕಮ್ಮನಿಗೆ ಅವರು ಇಲ್ಲಿಗೆ ಬಂದೇ ಔಷಧ ಕೊಟ್ಟದ್ದು." ರತನ್ ನುಡಿದ.

"ಅಷ್ಟಿಲ್ಲದೆ ಹೋದರೆ ನಾನು ಹಾಸಿಗೆಹಿಡಿಯಬೇಕಾಗುತ್ತೆ. ದಿನವೂ ಹತ್ತಿರದ ಗದ್ದೆತೋಟಗಳಲ್ಲಿ ನಿರಾಯಾಸವಾಗಿ ಅಡ್ಡಾಡಿಬರುತ್ತೇನೆ. ದನಕರುಗಳ ಸಾಕಾಣಿಕೆಯು ಈಗಲೂ ನನಗೇನೇ ಬಿಟ್ಟದ್ದು. ಅವುಗಳಿಗೆ ಬರುವ ರೋಗರುಜಿನಗಳಿಗೆ ಬೇಕಾಗುವ ಮದ್ದಿಗೆ ನಾವು ಡಾಕ್ಟರ ಬಳಿಗೋಡು ವುದಿಲ್ಲ. ನಮಗೆ ಬೇಕಾದದ್ದು ಮನೆಯಲ್ಲೇ ಮಾಡಿಕೊಳ್ಳುತ್ತೇವೆ".

ಅಘೋರ ತಲೆದೂಗಿದ. ರತನ್ ಮುಗುಳುನಕ್ಕ.

"ಅಜ್ಜಿಗೆ ಔಷಧಿ ಕೊಡುವುದಾಗಿ ಆಗಲೇ ಹೇಳಿದ್ದಾರೆ." ತಿಲೋತ್ತಮ ಕಣ್ಣರಳಿಸಿ ನುಡಿದ.

"ಅದಕ್ಕಾಗಿಯೇ ಕರೆತಂದುದು."

"ನನಗೆ ಆಯುರ್ವೇದದಲ್ಲಿ ನಂಬಿಕೆಯಿಲ್ಲ. ರತನ್ ಮಿಶ್ರನ ಚಿಕ್ಕಮ್ಮನಿಗೆ ಪೂರ್ಣಗುಣವಾಗಿದೆಯೆಂದು ತಿಳಿದಮೇಲೆ ಒಪ್ಪಿಕೊಂಡೆ."

"ನಾನು ಆಯುರ್ವೇದ ಪಂಡಿತನಲ್ಲ. ನಮ್ಮ ಹಿರಿಯರಿಂದ ಕಲಿತ ಕೆಲವು ಮದ್ದುಗಳನ್ನು ನಾನೇ ತಯಾರಿಸಿ ಬಯಸಿದವರಿಗೆ ಕೊಡವೆ ಅಷ್ಟೆ." ಮುಗುಳುನಕ್ಕರು ಹಿರಿಯವ್ಯಕ್ತಿ.

"ಅವರ ದೃಷ್ಟಿಯೂ ಚೆನ್ನಾಗಿದೆ. ಹಲ್ಲುಗಳೂ ಗಟ್ಟಿಯಾಗಿವೆ. ಅವರಿಗೆ ಬೇಕುಬೇಕಾದ ಬೇರು ಗಿಡ ಗೆಂಟೆಗಳನ್ನು ಅವರೇ ಹೋಗಿ ಆರಿಸಿ ತರುತ್ತಾರೆ. ಜ್ಞಾಪಕ ಶಕ್ತಿಯೂ ಚೆನ್ನಾಗಿದೆ. ತಯಾರಿಸುವ ವಿಧಾನವನ್ನು ಅವರು ಬರೆದಿಡುವ ತೊಂದರೆ ತೆಗೆದುಕೊಳ್ಳುವುದಿಲ್ಲ." ರತನ್ ಮಿಶ್ರ ಕಣ್ಣರಳಿಸಿ ಸಂತಸದಿಂದ ವಿಷಯವನ್ನು ಮುಂದಿಟ್ಟ.

ಬಿಸಿಬಿಸಿ ಚಹದೊಡನೆ ಕಾರ ಸಿಹಿ ತಿಂಡಿತಿನಿಸುಗಳೂ ಅಣಿಯಾಗಿ ಬಂದುವು. ಅಘೋರ ತಾನೇ ಎದ್ದು ಎಲ್ಲರಿಗೂ ನೀಡಿದ. ಚಹ ಮುಗಿದ ನಂತರ ಖಾಲಿ ಬಸಿ ಬಟ್ಟಲುಗಳನ್ನು ತಿಲೋತ್ತಮ ಒಳಗೊಯ್ದು ಇಟ್ಟು ಬಂದ. ವೃದ್ಧ ಮಹಾಶಯರನ್ನು ನಂದಾ "ನಿಮ್ಮ ಆರೋಗ್ಯದ ಒಳಗುಟ್ಟೇನು?" ಎಂದು ಆಸಕ್ತಿಯಿಂದ ಕೇಳಿದಳು.

ವೃದ್ಧ ಮಹಾಶಯರು ನಸುನಕ್ಕು ನಂದಾದೇವಿಯ ಸಮಸ್ಯೆಗೆ ಉತ್ತರ ನೀಡಿದರು,

"ನಾನು ಯಾವುದನ್ನೂ ಮನಸ್ಸಿಗೆ ಹಚ್ಚಿಕೊಳ್ಳುವುದಿಲ್ಲ. ಕಷ್ಟವೇ ಬರಲಿ ಸುಖವೇ ಬರಲಿ ಹಿಗ್ಗುತಗ್ಗುಗಳಿಲ್ಲದೆ ಹಾಯಾಗಿರುವೆ. ಅದೇ ನನ್ನ ಒಳಗುಟ್ಟು."

ಅಘೋರ ತಲೆದೂಗಿದ. ಅಕ್ಷಿ ಪಟಲದ ಮೇಲೆ ಅರವಿಂದಾ ಮೂಡಿ ನಿಂತಳು. ಎದೆಯಾಳದಿಂದ ಬಿಸಿಯುಸಿರೊಂದು ಹರಿದುಬಂತು.

ವೃದ್ಧ ಮಹಾಶಯರು ತಮ್ಮಲ್ಲಿದ್ದ ನಾಲ್ಕಾರು ಔಷಧಿಗಳಲ್ಲಿ ಒಂದನ್ನು ಆರಿಸಿಕೊಂಡು ತಾವು ತಯಾರಿಸಿ ತಂದಿದ್ದ ಲೇಹ್ಯಕ್ಕೆ ಬೆರೆಸಿಕೊಟ್ಟು ಔಷಧಿಯ ಪ್ರಮಾಣವನ್ನೂ ಪಥ್ಯಪಾನಾದಿಗಳನ್ನೂ ಹೇಳಿ ಎಲ್ಲರಿಗೂ ಕರಜೋಡಿಸುವುದರೊಂದಿಗೆ ತಿಲೋತ್ತಮನಿಗೂ ಕರಜೋಡಿಸಿ ಕಾರು ಹತ್ತಿದರು. ಅವರ ಸೌಜನ್ಯಕ್ಕೆ ಮೂವರೂ ಮಾರುಹೋಗಿ ಮಂತ್ರಮುಗ್ಧರಂತೆ ನಿಂತು ಬೀಳ್ಕೊಟ್ಟರು.

ತಿಲೋತ್ತಮ ಅಚ್ಚರಿಯಿಂದ ಅಂದ "ಅವರಿಗೆ ನೂರು ವರ್ಷ ಎನ್ನುವಂತೆಯೇ ಇಲ್ಲ."

"ಅವರಿಗೆ ಹದಿನಾರು ವರ್ಷ ವಯಸ್ಸಾದಾಗ ಮದುವೆಯಾಗಿತ್ತಂತೆ.

ಎಪ್ಪತ್ತೈದರ ಮಕ್ಕಳಿದ್ದಾರೆಂದು ಅಂದೇ ಆಸ್ಪತ್ರೆಯಲ್ಲಿದ್ದಾಗ ಹೇಳಿದ್ದರು." ಎಂದ ಅಘೋರ.

"ಎಪ್ಪತ್ತೈದರ ಮಕ್ಕಳು ಆಗ ಅವರೊಂದಿಗೆ ಬಂದಿದ್ದರೆ ಅಘೊ ? ಅವರೂ ಹೀಗಿದ್ದಾರೆಯೆ ?"

"ನಲವತ್ತು–ಐವತ್ತರ ಮೊಮ್ಮಗ ಬಂದಿದ್ದ!"

"ಇದ್ದರೆ ಹಾಗಿರಬೇಕು." ತಿಲೋತ್ತಮ ಹುಬ್ಬೇರಿಸಿ ಅಂದ. "ಎಷ್ಟು ಗಟ್ಟಿಮುಟ್ಟಾಗಿದ್ದಾರೆ?"

"ದೇವರು ಇನ್ನೂ ಹತ್ತುವರ್ಷ ಅವರನ್ನು ಚೆನ್ನಾಗಿಟ್ಟಿರಲಿ." ನಂದಾ ಮನ ತುಂಬಿ ಹರಸಿದಳು.

ಅಘೋರ ಮಾತಾಡಲಿಲ್ಲ. ಮುಖದಲ್ಲಿ ಸಂತಸದ ಮುದ್ರೆಯೊತ್ತಿದ್ದರೂ ಯೋಚನೆಯಲೆಯಲ್ಲಿ ಮನಸ್ಸು ಸಿಕ್ಕಿಕೊಂಡಿತ್ತು.

ಮರುದಿನ ಅಘೋರ ಅರವಿಂದಳನ್ನು ನೋಡಲು ಮೆಂಟಲ್ ಆಸ್ಪತ್ರೆಗೆ ಹೋದಾಗ ಅರವಿಂದಾ ನಿದ್ದೆಹೋಗಿದ್ದಳು. ಸದ್ದು ಮಾಡದೆ ಬಳಿಯಲ್ಲಿ ಕುಳಿತುಕೊಂಡ. ನಿದ್ದೆ ತಿಳಿದನಂತರ ಅವಳು ಕಣ್ತೆರದು ನೋಡಿದಾಗ ಮೊದಲು ನೋಟಕ್ಕೆ ಅವನು ಕಣ್ಣಿಗೆ ಬೀಳುತ್ತಲೂ ಮಾತಾಡದೆ ಆತ್ತ ಹೊರಳಿ ಮಲಗಿದಳು. ಕಾಂತಿಯಳಿದ ಕಣ್ಣುಗಳ ಹಿಂದೆ ಅಡಗಿದ್ದ ಅಪರಿಮಿತ ನೋವು ಭಯ ದುಃಖಗಳು ಛಾಯೆಯಂತೆ ಹೊರಹೊಮ್ಮುತ್ತಿದ್ದುವು. ಹೃದಯದಾಳದಲ್ಲಿ ಎದ್ದ ತಳಮಳವನ್ನು ಹಾಗೇ ಹತ್ತಿಕ್ಕಿ ಹಣೆಯ ಮೇಲೆ ಕೈಯಿಟ್ಟು "ಅರೂ." ಎಂದ ಅಘೋರ.

ಅವಳು ಸ್ವಲ್ಪ ಹೊತ್ತು ಮಾತಾಡದೆ ಇದ್ದು ಅನಂತರ ಒಂದೇ ಉಸುರಿಗೆ– "ಅಘೂ, ನಾನೂ ಮನೆಗೆ ಬರುವೆ. ತಿಲೋನನ್ನು ನೋಡಬೇಕು."

"ಹ್ಞೂ, ಹೋಗೋಣ."

"ಈಗಲೇ." ಎನ್ನುತ್ತಾ ಎದ್ದು ಕುಳಿತಳು. ಕಣ್ಣುಗಳು ಫಳಫಳ ಮಿಂಚಿದುವು "ಅಘೂ..."

"ನಾನೀಗಷ್ಟೆ ಬಂದಿದ್ದೇನೆ, ಅನಂತರ ಹೋಗೋಣ."

"ಅಂದರೆ ?"

"ಡಾಕ್ಟರನ್ನು ಕೇಳಿ ಹೋಗೋಣ."

"......"

ಅವಳನ್ನೇ ಅಘೋರ ನೆಟ್ಟದಿಟ್ಟಿಯಿಂದ ನಿಟ್ಟಿಸಿದ. ಮುಖದ ಮಾಧುರ್ಯವಳಿದು ಚರ್ಮ ಸುಕ್ಕುಗಟ್ಟತೊಡಗಿತ್ತು. ಹೇರಳವಾದ ಕಪ್ಪು ಕೂದಲ ರಾಶಿಯಲ್ಲಿ ಬೆಳ್ಳಿಯಂತೆ ಮಿನುಮಿನುಗುವ ಬಿಳಿಯ ಕೂದಲುಗಳು ದಟ್ಟೈಸಿದ್ದುವು. ಮುಂಗುರುಳುಗಳ ನಯವಳಿದು ಒರಟೊರಟಾಗಿ ಹಗ್ಗದಂತೆ ಇಳಿಬಿದ್ದಿದ್ದುವು. ಹೊಂದಾವರೆಯನ್ನಣಕಿಸುವ ಮೈಬಣ್ಣ ಬೆಣ್ಣೆಯನ್ನಣಕಿಸುವ ಮೃದು ಪಯಣದ ಹಾದಿಯಲ್ಲಿ ಪೈಪೋಟಿಗಿಳಿದಿದ್ದುವು. ಹಾಗೇ ನೋಡುನೋಡುತಿದ್ದಂತೆ ಎದೆಯಾಳದಿಂದ ನಿಟ್ಟುಸಿರೊಂದು ಮೆಲ್ಲನೆ ತಪ್ಪಿಸಿಕೊಂಡಿತು.

ಅಘೋರ ತಾನು ತಂದಿದ್ದ ತಿಂಡಿತಿನಿಸುಗಳನ್ನು ಮುಂದಿಟ್ಟು ತಿನ್ನಲು ಹೇಳಿದ. ಅವಳು ಮುಟ್ಟದೆ ಒಂದೇ ಉಸುರಿಗೆ ಏರಿದ ದನಿಯಲ್ಲಿ–"ಅಘೂ, ಮೊದಲು ತಿಲೋ ಬರಲಿ, ಅನಂತರ ತಿನ್ನೋಣ."

"ನೀನು ತಿನ್ನು. ಅವನನ್ನು ನಾಳೆ ನೋಡಿದರಾಯಿತು."

"ಉಹ್ಞೂ."

ಪುನಃ ಹೂಂಕರಿಸಿ ಅವಳೆಂದಳು "ತಾತನನ್ನು ಕರೆತರಲು ಹೋಗಿದ್ದಾನೆ. ಇಬ್ಬರೂ ಬರಲಿ, ಅನಂತರ ತಿನ್ನೋಣ."

"ಅವರೀಗ ಬರುವುದಿಲ್ಲ ಅರೂ."

"ಬಿಮಲ್‌ಮಾಮ ಬರದೆ ತಿನ್ನುವುದೇ"

"ನೀನು–ಬೇರೆಯವರ ವಿಷಯ ಮನಸ್ಸಿಗೆ ತೆಗೆದುಕೊಳ್ಳಬೇಡ ಅರವಿಂದಾ."

"ತಿಲೋ ಬಿಮಲ್‌ಮಾಮನನ್ನು ಕರೆತರಲು ಹೋಗಿದ್ದಾನಲ್ಲ?"

"ನೀನಷ್ಟು ತೆಗೆದುಕೊ. ಅವರು ಅನಂತರ ತೆಗೆದುಕೊಳ್ಳುತ್ತಾರೆ."

"ಉಹ್ಞೂ. ಇಬ್ಬರೂ ಬರಲಿ."

"ಅವರು ಬರುವುದು ನಿಧಾನವಾದೀತು."

"ಇಲ್ಲ. ಇಷ್ಟರೊಳಗಾಗಿ ಬಂದಾರು." ಎದ್ದುನಿಂತು ಕಿಟಕಿಯಲ್ಲಿ ಹಣಿಕಿನೋಡಿ ಉದ್ವೇಗದಿಂದ ಕೂಗಿದಳು "ಅದೋ ಬರುತಿದ್ದಾರೆ!"

ಅಘೋರ ಕಿಟಕಿಯ ಕಡೆ ಕಣ್ಣು ಹೊರಳಿಸಿದ. ದೂರದ ತಿರುವಿನಲ್ಲಿ

ಸ್ತ್ರೀಪುರುಷರು ಬರುತಿದ್ದರು. ಅವರಿಗೂ ಬಿಮಲ್‌ದಾಸನಿಗೂ ಯಾವ ಸಾಮ್ಯವೂ ಇರಲಿಲ್ಲ. ನೋಡಿದೊಡನೆ ಮುಖ ತುಸು ಬಾಡಿತು.

"ಅವರು ಬಂದರೆ ಬರಲಿ, ನೀನು ತೆಗೆದುಕೊ."

"ಬೇಡ, ಬೇಡ."

ಅಘೋರ ಮಾತಾಡದೆ ಸ್ವಲ್ಪಹೊತ್ತು ಕುಳಿತುಕೊಂಡ. ಕಣ್ಣ ನೋಟ ಅವಳನ್ನು ಪರೀಕ್ಷಿಸುತಿತ್ತು. ಅವಳು ಸ್ವಲ್ಪ ಹೊತ್ತು ಸುಮ್ಮನಿದ್ದು "ಬಿಮಲ್ ಮಾಮ ಬರುವುದೆಂದು ಅಘೂ?" ಆತುರದಿಂದ ಕೇಳಿದಳು.

"ಗೊತ್ತಿಲ್ಲ."

"ಏಕೆ ಸರಿಯಾಗಿ ಹೇಳುವುದಿಲ್ಲ ?...ಓಡಿಸಿಬಿಟ್ಟೆಯೋ ಹೇಗೆ ?"

ಉದ್ವೇಗದಿಂದ ಕಣ್ಣುಗಳು ಅರಳಿದುವು. ಅಂತರಂಗದ ನೋವನ್ನು ಮುಖ ಪ್ರತಿಬಿಂಬಿಸಿತು. ಎರಡೂ ಕೈಗಳಿಂದ ತಲೆಯನ್ನು ಪರಪರನೆ ಕೆರೆದು ಕೊಂಡಳು.

ಮಾತು ಮರೆಸಲೆಂದು "ನೀನಿಂದು ಸ್ನಾನ ಮಾಡಿದೆಯಾ?" ಎಂದ.

"ಎಲ್ಲಿದ್ದಾರೆ ಮಾಮ?...ಮಾಮನನ್ನು ತೋರಿಸು."

"ಆ ಮರದ ಮೇಲೆ ಹಕ್ಕಿ ಕುಳಿತಿದೆ. ನೋಡಿದೆಯಾ?"

ಅವಳ ಕಣ್ಣುಗಳು ಆರಕ್ತವಾದುವು. ಮೈಯ ರಕ್ತವೆಲ್ಲಾ ಒಮ್ಮೆಲೇ ಮುಖಕ್ಕೆ ನುಗ್ಗಿಬಂದಂತೆ ಕೆನ್ನೆಗಳು ರಂಗೇರಿದುವು. ಉಕ್ಕಿಬಂದ ರೇಜಿನಿಂದ ಅವಳು ನುಡಿದಳು "ಅದಕ್ಕಿಷ್ಟು ಜೆಂಕಿ ಹಾಕು!" ಅಘೋರ ಮಾತಾಡದೆ ಸುಮ್ಮನಾದ. ಅವಳು ತುಸುತಡೆದು ಮುಂದುವರಿದಳು "ಮಾಮನನ್ನೂ ಮುಗಿಸಿಬಿಟ್ಟೆ ? ತಿಲೋನನ್ನೂ ತಿಂದುಬಿಟ್ಟೆ! .ಇನ್ನೇನಿದ್ದೀತು ಮನೆಯಲ್ಲಿ ...ಆಸ್ಪತ್ರೆಯಿಂದ ಬರುವಾಗಲಾದರೂ ಮಾಮನನ್ನು...ಅಯ್ಯೊ, ತಿಲೋ ಮಿಠಾಯಿ ತಿಂದುಬಿಟ್ಟ! ಕೊಳಕು ಮಿಠಾಯಿ! ಹಾದಿಬೀದಿಗಳಲ್ಲಿ ಮಾರು ವುದನ್ನು ತಿಂದರೆ ಆಗುವುದೇ ಹೀಗೆ. ತಿಲೋ...ತಿಲೋ...ತಿನ್ನಬೇಡ ತಿಲೋ"

"ಅರೂ..."

"ತಿಲೋ....ತಿಲೋ."

"ಅರೂ...."

"ಗಿಡುಗಾ ಗಿಡುಗಾ! ಅಯ್ಯೋ, ಗಿಣಿಯನ್ನು ಕಚ್ಚಿಕೊಂಡೇ

ಹೋಯಿತು !"

"........."

ಅರವಿಂದಾ ತುಸುಹೊತ್ತು ಮಾತಾಡದೆ ಕುಳಿತಿದ್ದು ಅನಂತರ ಚೀರು ದನಿಯಲ್ಲಿ ಕೂಗಿದಳು "ಕನಕ ರಂಗೀ ಚಟ್ನಿ ತಾರೆ! ಬರೀ ಅನ್ನ ತಿನ್ನೋದು ಹೇಗೆ ?"

"ಅರವಿಂದಾ, ರೇಜಿಗೇಳದೆ ಶಾಂತವಾಗಿರುವುದನ್ನು ಅಭ್ಯಾಸಮಾಡು. ಶಾಂತವಾಗಿದ್ದರೆ ನಿನ್ನನ್ನು ಮನೆಗೆ ಕಳುಹಿಸಲು ಡಾಕ್ಟರು ಒಪ್ಪುತ್ತಾರೆ. ನೀನು ಮನೆಗೆ ಬಂದರೆ ಅದೆಷ್ಟು ಸಂತೋಷ? ನಿನಗೂ ಅದು ಸಂತೋಷ ವಲ್ಲವೆ ?"

ಅರವಿಂದಾ ಮಾತಾಡಲಿಲ್ಲ. ಅವಳ ಗಮನ ಎತ್ತಲೋ ಹರಿದಿತ್ತು. ಎರಡು ಕೈಗಳಿಂದಲೂ ತಲೆಯನ್ನು ಪರಪರನೆ ಕೆರೆದುಕೊಂಡಳು. ಬಾಯಿ ಸೊಟ್ಟ ಮಾಡಿ ಅಣಕಿಸಿ ಅಡಿಗಣ್ಣಿನಿಂದ ನೋಡುತ್ತಾ ಹಲ್ಕಿರಿದಳು.

ಅಘೋರ ಮೌನ ತಾಳಿದ.

ಕೈಬೆರಳುಗಳನ್ನು ಮಡಿಚಿ ಲಟಲಟನೆ ಲಟಿಕೆ ತೆಗೆದು ಏರಿದ ದನಿ ಯಲ್ಲಿ ಕೂಗಿದಳು "ಅಯ್ಯೊ, ಅಯ್ಯೊ, ಚನ್ನರಂಗಿ ಸತ್ತೇ ಹೋದಳೇ ?"

ವರ್ತಮಾನ ಪತ್ರಿಕೆಯೊಂದನ್ನು ತೆರೆದುಹಿಡಿದು "ಇದನ್ನೋದು ಅರೂ." ಎಂದ. ಅದನ್ನೋಡಿಯೂ ನೋಡದವಳಂತೆ ಸುಮ್ಮನಾದಳು ಅವಳು. ಡಾ|| ಜಗಜೀವನ್ ಒಳಬಂದಾಗ ಪತ್ರಿಕೆಯನ್ನು ಬದಿಗಿಟ್ಟು ಎದ್ದುನಿಂತ ಅಘೋರ. ಬಗೆಗೆಟ್ಟ ಅವನ ಮುಖವನ್ನು ನೋಡಿ ಅವ ರೆಂದರು "I feel sorry for you Doctor."

ಅಘೋರನ ಮೌನವೇ ಉತ್ತರವಾಯಿತು.

o o o o o

ಮರುದಿನ ಡಾ|| ಅಘೋರ ಆಪರೇಶನ್ ಥಿಯೇಟರಿನ ಒಳಗಡೆ ಹೋದಾಗ ಡಾ|| ಭಾರ್ಗವಾ ಆಪರೇಶನ್ ಮಾಡುತಿದ್ದರು. ಮೇಜಿನ ಮೇಲೆ ಐವತ್ತಕ್ಕೂ ಮೀರಿದ ವ್ಯಕ್ತಿ ಮಲಗಿತ್ತು. ಕತ್ತಿನಲ್ಲಿ ಉರುಳುಗೆಡ್ಡೆಯ ಗಾತ್ರಕ್ಕೆ ಮೊಳೆತ ಹೆಮಾಂಜಿಯೋಮಾ (Hemangioma) ಗೆಡ್ಡೆಯನ್ನು ಆಪರೇಶನ್

ನಡೆಸಲು ಅದೇ ತಾನೇ ಅವರು ಕೈ ಹಚ್ಚಿದ್ದರು. ಕತ್ತರಿ ಪ್ರಯೋಗವಾದೊಡನೆಯೇ ನೆತ್ತರಿನ ಕೋಡಿಯು ಹರಿಯಲಾರಂಭಿಸಿತು. ಡಾ|| ಭಾರ್ಗವಾ ತಮ್ಮ ಚಾತುರ್ಯವನ್ನೆಲ್ಲಾ ಉಪಯೋಗಿಸಿದರೂ ಪ್ರಯೋಜನವಾಗಲಿಲ್ಲ. ನೆತ್ತರಿನ ಹೊಳೆ ಏಕಪ್ರಕಾರವಾಗಿ ಹರಿಯತೊಡಗಿತು. ಬಳಿಯಲ್ಲಿ ನಿಂತು ಗಮನಿಸುತ್ತಿದ್ದ ಅಘೋರ ಅಂದ...

"ಇನ್ನು ಪ್ರಯೋಜನವಿಲ್ಲ. ಮುಚ್ಚಿ ಬಿಡಿ ಸಾರ್."

"ಅದೇ ಸರಿಯೆಂದು ತೋರುತ್ತದೆ."

"ಇನ್ನೇನು ಮಾಡೋಣ ? ಬೇರೆ ದಾರಿಯೇ ಇಲ್ಲ ಸಾರ್."

ಅಘೋರ ಮುಖವಾಡ ತೊಟ್ಟು ನೆತ್ತರು ಶ್ರವಿಸುವ ನರವನ್ನು ಅದುಮಿ ಹಿಡಿದುಕೊಂಡ. ಸುತ್ತುವರಿದು ನಿಂತಿದ್ದ ಸಹಡಾಕ್ಟರುಗಳೂ ಕಲಿಕೆಯ ತರುಣ ಡಾಕ್ಟರುಗಳೂ ಸಹಕರಿಸಿದ್ದರೂ ಹರಿಯುವ ನೆತ್ತರಿನ ಕೋಡಿಯನ್ನು ನಿಲ್ಲಿಸಲಾಗಲಿಲ್ಲ.

ಸಮಯಕ್ಕೆ ಸರಿಯಾಗಿ ಮದನನೊಡನೆ ಡಾ|| ಭಗವಾನ್ ಆಗಮಿಸಿದರು. ನರ್ಸೊಬ್ಬಳು ಅವರಿಗೂ ಕೈಚೀಲ ಮುಖವಾಡಗಳನ್ನು ಮುಂದಿಟ್ಟಳು. ಡಾ|| ಭಾರ್ಗವಾ ರಕ್ತದ ಕೋಡಿಹರಿಯದಂತೆ ಹತ್ತಿಯಿಂದ ಅದುಮಿ ಹಿಡಿದಿದ್ದರು. ಕೆಲವು ನಿಮಿಷಗಳನಂತರ ರಕ್ತಹರಿಯುವಿಕೆ ನಿಂತಿತು. ಎಲ್ಲರ ಸಹಕಾರ ಹಸ್ತದೊಡನೆ ಆಪರೇಶನ್ ಮುಂದುವರಿಯಿತು. ಅನೇಕ ವೇಳೆ ಇಂತಹ ಸಂದರ್ಭಗಳಲ್ಲಿ ಆಪರೇಶನ್ ಮಾಡಲು ಸಾಧ್ಯವಾಗದೇನೇ ಹಾಗೇ ಮುಚ್ಚಿಬಿಡುತಿದ್ದುದುಂಟು—ಅಪಾಯ ಸಂಭವಿಸುತ್ತಿದ್ದುದೂ ಉಂಟು. ಆದರಿಂದು ಅವೆರಡರ ಗಡುವನ್ನೂ ಸುಸೂತ್ರವಾಗಿ ದಾಟಿತು—ಆಪರೇಶನ್.

...ಭಗವಂತನ ಕೃಪಾ ಕಟಾಕ್ಷ...

ಅಘೋರ ಹಾಗೇ ಯೋಚಿಸಿದ. ಆಪರೇಶನ್ ಮಾಡುವುದು ಸಾಧ್ಯವಿಲ್ಲೆಂಬ ತೀರ್ಮಾನಕ್ಕೆ ಬಂದ ವ್ಯಕ್ತಿಯ ಆಪರೇಶನ್ ಸುಸೂತ್ರವಾಗಿಯೇ ನಡೆದಿತ್ತು. ಇನ್ನು ಅಪಾಯದ ಅಂಚನ್ನು ದಾಟುವುದರಲ್ಲಿ ಸಂಶಯವಿಲ್ಲ. ನಾವೊಂದು ನೆನೆದರೆ ಆಗುವುದು ಇನ್ನೊಂದು. ಭಗವಂತನ ಲೀಲೆಯ ಮುಂದೆ ನಮ್ಮ ಆಟಾಟೋಪಗಳು ನಡೆಯುವುದುಂಟೆ ? ಯೋಚನೆ ಸಾಧುವಾಗಿದ್ದರೂ ಸಾಧನೆಯ ಸೂತ್ರ ಭಗವಂತನ ಕೈಯಲ್ಲಿ—ಅಂದಮೇಲೆ ಎಲ್ಲ

ವನ್ನೂ ಆತನಿಗೇ ಅರ್ಪಿಸಿಬಿಡುವುದು ಲೇಸು ಎನ್ನಿಸಿತು.

ಕಣ್ಣನೋಟ ಮೇಜಿನ ಮೇಲೆ ಮಲಗಿದ್ದ ವ್ಯಕ್ತಿಯ ಕಡೆಗೆ ಹರಿಯಿತು. ದಟ್ಟಪುಷ್ಟವಾದ ಮೈಯಿನ ವ್ಯಕ್ತಿ ಅಲುಗದೆ ಮಲಗಿತ್ತು. ನಾಡಿ ಹಿಡಿದು ರಕ್ತಒತ್ತಡವನ್ನು ತೋರುವ ಯಂತ್ರದ ಕಡೆ ದಿಟ್ಟಿಹರಿಸಿದಾಗ ಮನಸ್ಸಿಗೆ ಸಮಾಧಾನ ಮೂಡಿತು. ಎಲ್ಲರೂ ಹಾಯಾಗಿ ಉಸಿರಾಡಿದರು. ಎಲ್ಲರ ಪರಿ ಶ್ರಮವೂ ಸಾರ್ಥಕವಾಯಿತೆನ್ನಿಸಿದಾಗ ಎದೆ ಹಗುರವಾಯಿತು.

ಡಾ|| ಭಾರ್ಗವಾ ಡಾ|| ಭಗವಾನ್‌ರವರು ಕೂಡಿ ಹೊರಟರು. ಪೂರ್ವಾರ್ಧವನ್ನು ಪೂರ್ಣಮನಸ್ಸಿನಿಂದ ಮುಗಿಸಿದ ಅವರು ಉತ್ತರಾರ್ಧ ಕಾರ್ಯಭಾರ ವನ್ನು ಕಿರಿಯ ವೈದ್ಯರಿಗೆ ವಹಿಸಿದ್ದರು. ಪ್ರಜ್ಞೆ ಬಂದ ನಂತರ ಅವರನ್ನು ವಾರ್ಡಿಗೆ ಕಳುಹಿಸಿ ಮುಂದಿನ ವ್ಯವಸ್ಥೆಯನ್ನು ಮಾಡಿ ಮದನನೊಂದಿಗೆ ಅಘೋರ ಹೆಜ್ಜೆಹಾಕಿದ.

ಹಾದಿ ಸಾಗುತಿದ್ದಂತೆ ಕಣ್ಣುಗಳು ಅಡುಗೆಯ ಮನೆಯತ್ತ ಹರಿದುವು. ಹಿರಿಯ ಸಿಸ್ಟರ್ ಮೇಲ್ವಿಚಾರಣೆಯಲ್ಲಿ ರೋಗಿಗಳಿಗೆ ಊಟದ ಹಂಚಿಕೆ ಯಾಗುತಿತ್ತು. ಗುಬ್ಬಿಗಳ ಹಿಂಡು ಯಾರ ಬೆದರಿಕೆಯೂ ಇಲ್ಲದೆ ಆ ಊಟ ದಲ್ಲಿ ಪಾಲುದಾರರಾಗಿದ್ದುವು. ಹೆಂಚಿನ ಮೇಲೆ ಮಂಗಗಳೂ ರೊಟ್ಟಿಯ ಚೂರಿಗಾಗಿ ಕಾಯುತಿದ್ದುವು. ಅಘೋರ ನೆಟ್ಟದಿಟ್ಟಿಯಿಂದ ನೋಡಿ ಮುಂದುವರಿದ. ಮನದಲೆಯಲ್ಲಿ ಯೋಚನೆಯ ತೆರೆಗಳು ತುಯ್ಯಲಾಡ ತೊಡಗಿದುವು.

ಮದನ್ ಕೇಳಿದ "ಹೇಗಿದ್ದಾರೆ ನಿಮ್ಮ ತಾಯಿ? ಆಯುರ್ವೇದ ಔಷಧ ವೇನಾದರೂ ಕೆಲಸ ಮಾಡಿದೆಯೇ?"

"ಈಗ ಸ್ವಲ್ಪ ಉತ್ತಮವಿದೆ. ಹಾಗೆಂದೇ ಹೇಳುವುದಕ್ಕಾಗುವುದಿಲ್ಲ. ಮೊದಲೂ ಅದು ಆಗಾಗ್ಗೆ ಕಡಿಮೆಯಾಗುತ್ತಿದ್ದುದು ಉಂಟು. ಕೆಲವು ಕಾಲ ಕಾದು ನೋಡಬೇಕು."

"ರತನನ ಚಿಕ್ಕಮ್ಮನಿಗೆ ಪೂರ್ಣ ಗುಣವಾಗಿದೆಯಂತಲ್ಲ."

"ಇವರಿಗೂ ಗುಣವಾದರೆ ಸಾಕೆನಿಸಿದೆ. ಅಂತೂ ಔಷಧ ಆರಂಭಿಸಿದಾಗಿ ನಿಂದ ದಿನೇದಿನೇ ಕಡಿಮೆಯಾಗಿದೆ."

"ಹಾಗಿದ್ದರೆ ಆದೀತು."

"ಸಧ್ಯ ದೇವರು ಅಷ್ಟು ದಯಾಮಯನಾದರೆ ಸಾಕು."

"ಯೋಚಿಸಬೇಡ. ನಿಜವಾಗಿಯೂ ಅವನು ದಯಾಮಯ."

ಅಘೋರ ಮಾತಾಡಲಿಲ್ಲ. ಮುಗುಳು ನಗೆ ಪಸರಿಸಿದ.

"ಈಚೆಗೆ ಅರವಿಂದಾ ಮನೆಗೆ ಬಂದಿದ್ದರೇ ?"

"ಭಾನುವಾರ ಬೆಳಿಗ್ಗೆ ಕರೆತಂದು ಸಂಜೆಯಲ್ಲಿ ಹಿಂದಿರುಗಿಸಿದೆ. ಅಲ್ಲಿದ್ದಾಗಿನ ರೀತಿಯೇ ಬೇರೆ, ಇಲ್ಲಿ ಇರುವಾಗಿನ ರೀತಿಯೇ ಬೇರೆ. ಒಮ್ಮೊಮ್ಮೆ ಪ್ರೇಮದ ಅರಗಿಣಿ. ಇನ್ನೊಮ್ಮೆ ಹಿಂಸ್ರಪಶು. ಮತ್ತೊಮ್ಮೆ ಚಿರ ದುಃಖಿನಿ. ಅವಳನ್ನು ಹೀಗೇ ಎಂತ ಹೇಳುವುದಕ್ಕಾಗುವುದಿಲ್ಲ. ಏನೋ ಒಂದು ರೀತಿ ಇದ್ದಾಳೆ ಮದನ್."

"ಕಾದುನೋಡೋಣ. ದೇವರು ದೊಡ್ಡವನು."

ತನುಮನಗಳ ನೋವು ಮುಖದಲ್ಲಿ ಮುದ್ರೆಯೊತ್ತಿತು. ಅಘೋರ ಮಾತಾಡದೆ ತಲೆಬಾಗಿ ಹೆಜ್ಜೆಹಾಕಿದ. ಮದನನ ಎದೆಯಾಳದಿಂದ ನಿಟ್ಟುಸಿರೊಂದು ಮೆಲ್ಲನೆ ತಪ್ಪಿಸಿಕೊಂಡಿತು.

ಅಧ್ಯಾಯ

೩೬

ನಂದಾದೇವಿಯ ಸಂಧಿವಾತವು ಕ್ರಮಕ್ರಮೇಣ ಕಡಿಮೆಯಾಗುತ್ತಾ ಬಂದು ಅನಂತರ ಅದರ ಹುಟ್ಟಡಗಿಹೋಯಿತು. ಒಮ್ಮೆಲೇ ಚಕಮಕಿಯಾಗಿ ಎಳೆಯರಂತೆ ಓಡಾಡತೊಡಗಿದ ಅವಳನ್ನು ನೋಡುನೋಡುತ್ತಿದ್ದಂತೆ ಅಘೋರನಿಗೆ ಎಲ್ಲಿಲ್ಲದ ಸಂತಸವುಂಟಾಗಿ ಈಗ ತನಗೂ ಸ್ವರ್ಗಕ್ಕೂ ಮೂರೇ ಗೇಣು ಎಂಬಷ್ಟು ಉಬ್ಬಿಹೋದ. ಔಷಧ ನೀಡಿದ ಮಹನೀಯರನ್ನೂ ರತನನನ್ನೂ ಮನಸಾರೆ ವಂದಿಸಿದ.

ತಿಲೋತ್ತಮ ಓಡೋಡಿಬಂದು ಕೇಳಿದ "ಈಗ ಬಟ್ಟೆ ಕೊಳ್ಳಲು ಹೋಗೋಣವೇ, ಬಿಡುವಾಗಿದ್ದೀರಾ ಅಪ್ಪಾ ?"

"ಇಂದೇ ಬೇಕೆ, ತಿಲೋ ?"

"ಹೌದಪ್ಪಾ, ಇಂದೇ ತೆಗೆದರೆ ಅನುಕೂಲ."

"ಹೊರಡು ಹಾಗಿದ್ದರೆ, ನನಗೂ ಬಟ್ಟೆ ಬೇಕು. ಕೊಂಡುಕೊಂಡ ನಂತರ ಹಾಗೇ ಆಸ್ಪತ್ರೆಗೆ ಹೋಗುವೆ. ಈ ದಿನ ಮುಂಚಿತವಾಗಿಯೇ ಅಲ್ಲಿರಬೇಕು."

"ಐದೇ ನಿಮಿಷ. ಬಂದು ಬಿಡುವೆ."

ತಿಲೋತ್ತಮ ಚಂಗನೆ ಒಳಗಡೆ ಹಾರಿದ. ಹಿಂದಿನಿಂದ ತಂದೆಯ ಕಣ್ಣುಗಳೆರಡೂ ಹಿಂಬಾಲಿಸಿದುವು. ಆಳೆತ್ತರಕ್ಕೆ ಬೆಳೆದ ಅವನ ನಿಲುವು ಮನ ವನ್ನು ಸೂಜಿಗಲ್ಲಿನಂತೆ ಸೆಳೆದಿತ್ತು. ಅಘೋರ ಹೆಮ್ಮೆಯಿಂದ ನಿಟ್ಟುಸಿರಿಟ್ಟ.

ಕೈಯಲ್ಲಿ ಬಿಸಿಬಿಸಿ ಹಾಲಿನ ಲೋಟಿಯೊಡನೆ ನಂದಾ ಆಗಮಿಸಿದಳು.

"ಇದೇನು ಅಘೂ ? ಈಗಷ್ಟೆ ಬಂದಿದ್ದಿ, ಆಗಲೇ ಹೊರಟುಬಿಟ್ಟೆ ?"

"ಆಗಲೇ ನಾಲ್ಕುವರೆಯಾಯಿತಲ್ಲಮ್ಮಾ. ತಿಲೋತ್ತಮನಿಗೆ ಬಟ್ಟೆ ಬೇಕಂತೆ, ಕೊಂಡುಕೊಂಡು ಆಸ್ಪತ್ರೆಗೆ ಹೋಗುವಾಗ ಐದಾಗುತ್ತೆ."

"ಮನೆಗೆ ಬಂದು ಅರ್ಧ ಗಂಟೆಯೂ ಆಗಲಿಲ್ಲವಲ್ಲಾ ?"

"ಆಪರೇಶನ್ ಮಾಡಿದ ದಿನ ಅಲ್ಲಿ ಮುಂಚಿತವಾಗಿ ಇರುವುದು ಲೇಸು."

"ನನಗಂತೂ ಒಬ್ಬಳೇ ಇದ್ದೂ ಇದ್ದೂ ಬೇಜಾರು." ಸಪ್ಪೆಮೋರೆಯಿಂದ ನುಡಿದಳು ನಂದಾ.

ಹೊರಡಲು ತಯಾರಾಗಿ ಬಂದ ತಿಲೋತ್ತಮ ಕಣ್ಣರಳಿಸಿ ಅಂದ "ಒಬ್ಬರೇ ಇರಲಿಕ್ಕೆ ಬೇಜಾರು ಅಂದರೆ ಏನು ಮಾಡೋಣ?"

"ನೀನು ಮದುವೆ ಮಾಡಿಕೊಂಡರೆ ಎಲ್ಲಾ ತಾಪತ್ರಯವೂ ಪರಿಹಾರ ವಾಗುತ್ತದೆ."

ತಿಲೋತ್ತಮ ಹಸನಾದ ಕಿರುನಗೆ ಬೀರಿ–"ಈ ಹುಳುಕು ಮೈಯಿನವ ನಿಗೆ ಯಾರು ಹೆಣ್ಣು ಕೊಡುತ್ತಾರಜ್ಜೀ?"

ಅಜ್ಜಿ ಮೊಮ್ಮಗನ ಸಂಭಾಷಣೆ ಅಘೋರನ ಮುಖದಲ್ಲಿ ನಗುವನ್ನು ಮೂಡಿಸಿತು.

"ಓಹೋ! ಅದಕ್ಕೇನಂತೆ? ನಿನ್ನಂಥ ಗಂಡು ಸಿಗಬೇಕಲ್ಲ?" ನಂದಾ ಹೆಮ್ಮೆಯ ಧಾಟಿಯಲ್ಲಿ ನುಡಿದಳು "ಇಂಥ ಗಂಡು ಸಿಕ್ಕಿದರೆ ಅಡ್ಡಬಿದ್ದು ಹೆಣ್ಣು ಕೊಟ್ಟಾರು!"

ತಿಲೋತ್ತಮ ಕಿಲಕಿಲನೆ ನಕ್ಕು "ಸರಿ, ಸರಿ" ಎನ್ನುತ್ತಾ ಒಳ ಗೋಡಿದ. ಬರುವಾಗ ಅಪ್ಪನ ಬ್ಯಾಗನ್ನು ಹಿಡಿದುಕೊಂಡೇ ಬಂದಿದ್ದ.

ಅದನ್ನೋಡಿ ಅಘೋರ "ಹೋಗೋಣವೇ?" ಎಂದ.

"ಹೂ." ಎಂದ ತಿಲೋತ್ತಮ ಅಜ್ಜಿಯ ಕಡೆಗೆ ತಿರುಗಿ ಹುಬ್ಬೇರಿಸಿ ನಗುನಗುತ್ತಾ ಅಂದ–

"ಬೇಗ ಬಂದುಬಿಡುವೆ ಅಜ್ಜೀ."

ಖಾಲಿ ಬಸಿಯನ್ನು ಹಿಡಿದುನಿಂತ ನಂದಾ ಮಾತಾಡದೆ ನಸುನಕ್ಕಳು. ಕಣ್ಣನೋಟ ದೂರದ ತಿರುವಿನವರೆವಿಗೂ ಹಿಂಬಾಲಿಸಿತು. ಹತ್ತು ಮಾರು ಹೋಗುವಷ್ಟರಲ್ಲಿ ಎದುರಾಗಿ ಬಂದ ಕುಬ್ಜದೇಹದ ವ್ಯಕ್ತಿಯೊಂದು ತಿಲೋತ್ತ ಮನನ್ನು ನಿಟ್ಟಿಸಿ ನೋಡಿ–"ಸ್ವಾಮಿ, ಇವರು ನಿಮ್ಮ ಮಕ್ಕಳೇ?"

"ಹೌದು."

ಬಹಿರಂಗದಲ್ಲಿ ಹಾಗೆಂದರೂ ಅಂತರಂಗದಲ್ಲಿ 'ಈತನಿಗೇಕೆ ನಮ್ಮ ವಿಷಯ?' ಎಂದುಕೊಂಡ ಅಘೋರ. ಕಣ್ಣುಗಳು ಅವನನ್ನೇ ತುಸು ಅಚ್ಚರಿಯಿಂದ ನಿಟ್ಟಿಸಿದುವು.

"ಇವರಿಗೆ ಇಸುಬು ಬಹಳ ಹಿಂದಿನಿಂದ ಇದೆಯೋ? ಅಥವಾ ಈಚೆಗೆ ಬಂದುದೋ?"

"ತುಂಬ ಹಿಂದಿಲಿಂದ ಇದೆ." ಹೇಳಲಾರದೆ ಹೇಳಿದ ಅಘೋರ.

"ನೀವು ಬಹಳ ಔಷಧಗಳನ್ನು ಉಪಯೋಗಿಸಿರಲಿಕ್ಕೂ, ಸಾಕು."

"ಹೌದು."

"ಇದು ಸಾಮಾನ್ಯ ಔಷಧಗಳಿಗೆ ಬಗ್ಗುವಂತಾದ್ದಲ್ಲ.

"........."

"ಈಗಲೂ ನೀವು ನಿರಾಶರಾಗಬೇಕಾದುದಿಲ್ಲ. ಇದಕ್ಕೊಂದು ಸೊಗಸಾದ ಔಷಧವುಂಟು."

"ಏನಿದೆ ಹೇಳಿರಿ." ಕೇಳಲಾರದೆ ಕೇಳಿತು ನಾಲಗೆ.

"ನಮ್ಮಲ್ಲೇ ಉಂಟು. ನೀವು ನನ್ನನ್ನು ನಂಬುವುದಾದರೆ ನಾನಿದನ್ನು ಗುಣಪಡಿಸುವೆ." ಪುನಃ ಅವರು ಅನುಕಂಪದಿಂದ ನುಡಿದರು "ಛೀ! ರಾಹುಗ್ರಸ್ಥನಾದ ಚಂದ್ರಸುಂತಾಗಿದ್ದಾರೆ."

"ನೀವು ಯಾರೆಂಬುದನ್ನು ತಿಳಿಯಬಹುದೇ?"

"ಆಯುರ್ವೇದ ಪಂಡಿತ."

ಅಘೋರ ಸ್ವಲ್ಪ ಯೋಚಿಸಿ ಶಿಲೋತ್ತಮನನ್ನು ಕೇಳಿದ "ಏನು ಮಾಡೋಣ?"

ಆ ಕುಬ್ಜದೇಹದ ವ್ಯಕ್ತಿಯನ್ನು ನೋಡಿದರೆ ನಂಬುಗೆ ಹುಟ್ಟುವಂತೆಯೇ ಇರಲಿಲ್ಲ. ಇಬ್ಬರಿಗೂ ಸ್ವಲ್ಪ ಅನುಮಾನಕ್ಕಿಟ್ಟುಕೊಂಡಿತು. ಆದರೂ ಸಂದಾದೇವಿಯು ಆಯುರ್ವೇದದಿಂದ ಪೂರ್ಣ ಗುಣವಾದುದರಿಂದ ಈಚೆಗೆ ಅದರಲ್ಲಿ ಸಾಕಷ್ಟು ನಂಬುಗೆ ಬಂದಿತ್ತು. ಆದರೂ, ಗೊತ್ತು ಗುರಿಯಿಲ್ಲದೆ ತೆಗೆದುಕೊಳ್ಳುವುದು ಹೇಗೆ? ಅದರಿಂದ ಇನ್ನೇನಾದರೂ ಆದರೆ? ಎಂಬ ಪ್ರಶ್ನೆಯೂ ಎದ್ದಿತು. ಇಬ್ಬರ ಮನಸ್ಸೂ ಡೋಲಾಯಮಾನವಾಯಿತು.

ಸ್ವಲ್ಪ ಯೋಚಿಸಿ ಶಿಲೋತ್ತಮ "ನೀವು ಹೇಗೆ ಹೇಳಿದರೆ ಹಾಗೆ." ಎಂದು ತಂದೆಗೆ ಅದರ ಪೂರ್ಣಭಾರವನ್ನು ವಹಿಸಿದ.

ಅಘೋರ ಪಂಡಿತನ ವಕ್ರದೇಹವನ್ನು ಅಡಿಯಿಂದ ಮುಡಿಯವರೆಗೆ

ನಿಟ್ಟಿಸಿ ನೋಡಿ ಅಂದ "ನಿಮ್ಮ ಔಷಧ ಬರಿಯ ಲೇಪನವಾದರೆ ಅಡ್ಡಿಯಿಲ್ಲ."

"ನಿಮಗೆ ಔಷಧದಲ್ಲಿ ನಂಬುಗೆಬರುವವರೆಗೆ ಲೇಪನವನ್ನು ಮಾತ್ರ ಉಪಯೋಗಿಸಿರಿ. ಅನಂತರ ಔಷಧ ಸೇವನೆ ಮಾಡಬಹುದು."

ಅಘೋರ ಅವರಿಂದ ವಿಚಾರ ವಿನಿಮಯ ಮಾಡಿಕೊಂಡು ಅವರೊಂದಿಗೆ ಔಷಧಾಲಯಕ್ಕೆ ಹೋದ. ನೋಡಿದರೆ ಸರ್ವೇಸಾಮಾನ್ಯ ಅಂಗಡಿ. ಏನೋ ಒಂದು ಬಗೆಯಲ್ಲಿ ಮನಸ್ಸು ಮಿಲಿಮಿಲಿ ಒದ್ದಾಡಿತು. ತೆಗೆದುಕೊಳ್ಳುವುದೇ? ಬೇಡವೇ? ಎಂಬ ಸಮಸ್ಯೆಯೂ ಮೂಡಿತು. ಆದರೆ, ಆಗಲೇ ಒಪ್ಪಿಕೊಂಡಿದ್ದಾಗಿದೆ. ವಿಧಿಯಿಲ್ಲದೆ ಸುಮ್ಮನಾದ.

ತಾಯಿಗೆ ಕೊಟ್ಟುದುದೂ ಸರ್ವೇಸಾಮಾನ್ಯ ಔಷಧವಷ್ಟೆ ಎನ್ನಿಸಿದರೂ ಮರುಕ್ಷಣದಲ್ಲಿ ಅವರು ಶತಾಯು ತುಂಬ ಅನುಭವಸ್ಥ. ಅದಾದರೂ ಅವರಲ್ಲಿ ಒಂದು ವಿಶೇಷವಿತ್ತು ಎಂಬ ಸಮಾಧಾನ ಮೂಡಿತು. ಹಾಗೇ ಯೋಚನೆ ಮುಂದುವರಿಯಿತು......ಅವರು ಶತಾಯು ಇವರು ಕುಬ್ಜ ಇಬ್ಬರಲ್ಲೂ ಒಂದೊಂದು ವಿಶೇಷವಿದೆ....ತಕ್ಷಣ ಅದೇಕೋ ನಗುವುಕ್ಕಿಬಂತು. ನಾನೇಕೆ ಇವರ ಮಾತಿಗೆ ಮಾರುಹೋದೆ ? ಯಾರಾದರೂ ನನ್ನನ್ನಿಲ್ಲಿ ನೋಡಿದರೆ ಏನೆಂಬಾರು ? ಎಂದೆಲ್ಲಾ ಚಡಪಡಿಸಿದ. ಅಂಗಡಿಯ ಒಳಭಾಗಕ್ಕೆ ಹೋಗಿದ್ದ ಪಂಡಿತರು ಔಷಧಿಯ ಸಹಿತ ಅಲ್ಲಿಗೆ ಬಂದು ಹೇಳಿದರು "ಮೊದಲ ಔಷಧವನ್ನು ನಾನೇ ಲೇಪಿಸುವೆ."

ಅಘೋರ ಮರುನುಡಿಯಲಿಲ್ಲ. ಮನೆಗೊಯ್ದು ಬಿಸಾಡಿದರಾಯಿತು ಎಂದು ಯೋಚಿಸುವುದರೊಳಗಾಗಿ ಅವರು ತಿಲೋತ್ತಮನ ಬಲಗೈಯ ಮೇಲೆ ಲೇಪಿಸ ತೊಡಗಿದರು. ಅಘೋರ ಅತ್ತಲೇ ಕಣ್ಣಾಡಿಸಿದ. ಪಂಡಿತರ ಮುಂಗೈ ಮೇಲೆ ಗಾಯದ ಕಲೆಯೊಂದಿತ್ತು. ನೋಡುತ್ತಲೂ ಯಾವುದೋ ಮರೆತು ಹೋದ ವಿಷಯ ಮನದಲೆಯಲ್ಲಿ ರಪ್ಪನೆ ಅಪ್ಪಳಿಸಿ ಬಂದಂತಾಯಿತು. ಯಾರಿರಬಹುದು ? ಎಲ್ಲೋ ನೋಡಿದಂತಿದೆ....ಎಷ್ಟು ಯೋಚಿಸಿದರೂ ಯಾರೆಂಬುದು ಗಮನಕ್ಕೆ ಬರಲಿಲ್ಲ. ಮನಸ್ಸು ಚಡಪಡಿಸಿತು.

ಪಂಡಿತರು ಔಷಧವನ್ನು ಲೇಪಿಸಿದನಂತರ ಮುಂದಹಾಸವನ್ನು ಬೀರಿ– "ಸ್ವಾಮಿ, ನಿಮ್ಮನ್ನೆಲ್ಲೋ ನೋಡಿದಂತಿದೆ."

"ನನಗೂ ಹಾಗೆನಿಸುತ್ತಿದೆ. ನೀವೆಂದಾದರೂ ಆಸ್ಪತ್ರೆಗೆ ಬಂದಿದ್ದಿರೇನು?"

"ಈಚೆಗೆ ಬಂದುದಿಲ್ಲ. ಹಿಂದೊಮ್ಮೆ ನನಗೆ ಆಪರೇಶನ್ ಆಗಿತ್ತು. ಆಗ ಅಲ್ಲಿ ಇದ್ದುದುಂಟು."

"ಓ, ಈಗ ಜ್ಞಾಪಕಕ್ಕೆ ಬಂತು. ನಾನೇ ನಿಮಗೆ ಆಪರೇಶನ್ ಮಾಡಿದ್ದು."

ಪಂಡಿತರ ಕೆನ್ನೆಯ ಮೇಲಿನ ಕಪ್ಪು ಮಚ್ಚೆಯನ್ನು ನೋಡಿ ಗುರುತಿಸಿದ ಅಘೋರ.

"ಇದೇ ದಾರಿಯಲ್ಲಿ ನಿಮ್ಮ ಮಗನನ್ನು ಅನೇಕ ಬಾರಿ ನೋಡಿದ್ದೇನೆ. ಹಿರಿಯರಿಲ್ಲದೆ ಔಷಧ ಕೊಡುವುದು ಸಮಂಜಸವಲ್ಲವೆಂದು ಸುಮ್ಮನಾಗಿದ್ದೆ. ಈದಿನ ನೀವು ಇದ್ದುದರಿಂದ ಮಾತನಾಡಿಸುವ ಮನಸ್ಸಾಯಿತು. ಇದು ಒಂದು ತಿಂಗಳೊಳಗಾಗಿ ಪೂರ್ಣ ಗುಣವಾಗುವುದಲ್ಲದೆ ಅದರ ಕಲೆಯೂ ಉಳಿಯುವುದಿಲ್ಲ ನೋಡಿ!"

ಪಂಡಿತರ ಆಶ್ವಾಸನೆಯಿಂದ ಮನದಲ್ಲಿ ಆಶಾಕಿರಣವೊಂದು ಮೂಡಿತು. ನಸುನಕ್ಕು—"ಇದುವರೆಗೆ ಎಷ್ಟೋ ಔಷಧಗಳನ್ನು ನೋಡಿಯಾಗಿದೆ."

"ಇದೂ ಒಂದನ್ನು ನೋಡಿಬಿಡಿರಿ. ಪ್ರಾಯಶಃ ನೀವು ಇದುವರೆವಿಗೆ ಆಯುರ್ವೇದವನ್ನು ಉಪಯೋಗಿಸಿರಲಾರಿರಿ."

"ಇಲ್ಲ."

"ಹಾಗಿದ್ದರೆ ಒಳ್ಳೆಯದಾಯಿತು." ಎಂದ ಅವರು ಪುನಃ ನುಡಿದರು. "ಆಯುರ್ವೇದದ ಎಲ್ಲಾ ಔಷಧಗಳೂ ಗುಣಮಾಡುತ್ತವೆಯೆಂದು ಹೇಳಲಾರೆ. ನೋಡಿ, ಇದು ಮಟ್ಟಿಗೆ ಅದರ ಹುಟ್ಟಡಗಿಸಿ ಬಿಡುತ್ತೆ." ದನಿಯಲ್ಲಿ ಉತ್ಸಾಹವಿತ್ತು. ಆಶ್ವಾಸನೆಯಿತ್ತು.

ಸರಿ, ನೋಡಿಯೇಬಿಡೋಣ ಅಂದುಕೊಂಡ ಅಘೋರ. ಅವರ ಮಾತಿನ ಸರಣಿ ನಂಬುಗೆಯನ್ನು ಮೂಡಿಸಿತು. ಮನದಾಳದಲ್ಲಿ ಆಶಾಕಿರಣವೂ ಮೊಳೆಯಿತು....ಹೇಗೂ ನನ್ನನ್ನು ವಿಧಿಮಹಾಶಯ ಎಳೆತಂದಿದ್ದಾನೆ.

ಅವರ ದೇಹದ ವಿರೂಪವನ್ನೇ ನಿಟ್ಟಿಸುತಿದ್ದ ತಿಲೋತ್ತಮನನ್ನು ನೋಡಿ ನಗುಮುಖದಿಂದ ನುಡಿದರು ಅವರು "ಈ ವಕ್ರ ದೇಹದಲ್ಲಿ ಪಾಂಡಿತ್ಯವಿರುವುದುಂಟೇ? ಎನಿಸಿರಲಿಕ್ಕೂ ಸಾಕು ನಿಮಗೆ. ಈ ವಿರೂಪವಿರುವುದರಿಂದಲೇ

ಜಗತ್ತಿನಲ್ಲಿ ಸುರೂಪಕ್ಕೆ ಬೆಲೆ ಮಗೂ!"

ದನಿಯಲ್ಲಿ ತಿಳಿಹಾಸ್ಯವಿತ್ತು. ಎಲ್ಲರ ಮುಖದಲ್ಲೂ ನಗು ಮಿನುಗಿತು. ಪಂಡಿತರು ಪುನಃ ಮುಂದುವರಿದರು "ಆಡಂಬರ ರೂಪ ಹಣಗಳಿಗೆ ಜನ ಮಾರುಹೋಗುವಷ್ಟು ಇನ್ನಾವುದಕ್ಕೂ ಮಾರುಹೋಗುವುದಿಲ್ಲ."

"ದೇಹ ವಕ್ರವಾದರೇನು? ಆತ್ಮ ವಕ್ರವಾಗಿರುತ್ತದೆಯೆ?" ಅಘೋರನ ನಾಲಿಗೆ ನುಡಿಯಲಾರದೆ ನುಡಿಯಿತು.

ಪಂಡಿತರು ನಸುನಕ್ಕು ಅಂದರು "ನಮ್ಮ ತಾತನ ಕಾಲದಿಂದಲೂ ನಡೆದುಬಂದಿದೆ ಈ ವೈದ್ಯವೃತ್ತಿ. ನಮ್ಮ ತಂದೆಯವರು ಇತ್ತೀಚೆಗೆ ಅಂಗಡಿಗೆ ಬರುವುದನ್ನು ಬಿಟ್ಟಿದ್ದರೂ ಮನೆಯಲ್ಲಿ ಔಷಧ ತಯಾರಿಸುವುದೆಲ್ಲಾ ಅವರೇ. ಅವರು ಆ ಬಗ್ಗೆ ಬಹಳ ಎಚ್ಚರಿಕೆ ವಹಿಸುತ್ತಾರೆ. ನಮ್ಮ ಔಷಧಗಳೆಲ್ಲಾ ಅಂದಿನಿಂದಲೂ ಒಂದೇ ವಿಧಾನದಲ್ಲಿ ತಯಾರಾಗುತ್ತಿವೆ. ಒಳ್ಳೆ ಸತ್ವಶಾಲಿ ಔಷಧಗಳು."

"ನೋಡೋಣ. ನಿಮ್ಮ ಔಷಧ ಹೇಗಾಗುತ್ತೆ?"

"ಅದರಲ್ಲಿ ಅನುಮಾನ ಇಟ್ಟುಕೊಳ್ಳಬೇಡಿರಿ. ಅಷ್ಟಲ್ಲದಿದ್ದಲ್ಲಿ ಔಷಧ ಕೊಡಲು ನಾನಾಗಿಯೇ ಮುಂದುವರಿಯುತ್ತಿರಲಿಲ್ಲ."

"ತುಂಬ ವಂದನೆಗಳು."

ಪಂಡಿತರು ಅವರನ್ನು ಬೀಳ್ಕೊಡುತ್ತಾ ನಗುಮುಖದಿಂದ ಹರಸಿದರು. "ದೇವರು ಒಳ್ಳೆಯದು ಮಾಡಲಿ."

ಇಬ್ಬರೂ ಪ್ರತಿವಂದಿಸಿ ಹೊರಬಿದ್ದರು.

೦ ೦ ೦ ೦

ಅಂದು ಚಂದ್ರಿಕಾ ಆಸ್ಪತ್ರೆಗೆ ಬಂದಾಗ ಡಾ|| ಚೆಲುವಾಂಬಾ ಡಾ|| ಸೌಮ್ಯಾ ಡಾ|| ಜಾನಕೀರಾಂ ಪರೀಕ್ಷಿಸಿದರು. ಡಾ|| ಚೆಲುವಾಂಬಾ ಮೊದಲೊಮ್ಮೆ ಪರೀಕ್ಷಿಸಿದ್ದು ಅನುಮಾನ ತೋರಿಬಂದುದರಿಂದ ಜಾನಕೀರಾಮನನ್ನು ಬರಮಾಡಿಕೊಂಡಿದ್ದಳು. ಈಚೆಗೆ ಚಂದ್ರಿಕಳ ಆರೋಗ್ಯ ಕೆಟ್ಟಿತ್ತು. ಮದುವೆಯಾದ ಮೂರು ವರ್ಷಗಳ ನಂತರ ಅವಳಿಗೊಮ್ಮೆ ಗರ್ಭಪಾತವಾಗಿತ್ತು. ಅನಂತರ ಇದೇ ಮೊದಲ ಬಾರಿಗೆ ಗರ್ಭಿಣಿಯಾಗಿದ್ದಾಳೆ. ದೇಹಾರೋಗ್ಯವನ್ನು ಎಷ್ಟೆಷ್ಟು ಮುತುವರ್ಜಿಯಿಂದ ಕಾಪಾಡಬಯಸಿದಳೋ

ಅಷ್ಟೇ ಅದು ಕುಸಿಯುತೊಡಗಿತ್ತು. ಕಳೆದಬಾರಿ ಡಾ!! ಜೆಲುವಾಂಬಾ ಪರೀಕ್ಷೆ ಮಾಡಿದಾಗ ಮಗು ಸಾಕಷ್ಟು ಬೆಳೆದಿಲ್ಲ ಎಂದಿದ್ದಳು. ಅಂದಿನಿಂದಲೂ ಚಂದ್ರಿಕಾ ಚಿಕಿತ್ಸೆಗೊಳಗಾಗಿದ್ದಳು.

ಚಂದ್ರಿಕಾ ಒಳಬಂದವಳೇ ಅಂದಳು "ನನಗೆ ಈ ವಾರವೆಲ್ಲಾ ಇದ್ದಿದ್ದೂ ಸುಸ್ತು. ಶರೀರ ದಿನೇದಿನೇ ದುರ್ಬಲವಾಗುತ್ತಿದೆ. ನೀವೆಲ್ಲರೂ ಡಾಕ್ಟರಾಗಿದ್ದೂ ಸಹಾಯವಾಗಲಿಲ್ಲ." ಮುಖ ಪ್ರೇತಕಳೆ ತಳೆದಿತ್ತು.

ಜಾನಕೀರಾಂ ಒಮ್ಮೆಲೇ ಅಂದ "ನಾವೆಲ್ಲಾ ನಿಮಿತ್ತ ಮಾತ್ರ. ತಿಜೋರಿಯ ಕೀಲಿಯ ಕೈ ಇರುವುದು ಆತನಲ್ಲಿ" ಗಗನದೆಡೆಗೆ ಬೆರಳು ತೋರಿ–"ಅವನೊಬ್ಬನೇ ಸರ್ವಶಕ್ತ."

"ಆದರೂ, ನೀವು ಕಲಿತುದಷ್ಟಾದರೂ ಪ್ರಯೋಜನವಾಗಬೇಕಲ್ಲ?"

"ಈಗಲೇ ಅಷ್ಟು ನಿರಾಶರಾದರೆ ಹೇಗೆ? ನಿಮಗೆ ಅವಸರವೊಂದೇ ಅಲ್ಲ, ಭಯವೂ ಇದೆ. ಹಾಗಿರಲೇ ಕೂಡದು. ಧೈರ್ಯವೊಂದಿದ್ದರೆ ಸರ್ವಬಲ ವಿದ್ದಂತೆ. ಮುಖ್ಯವಾಗಿ ಧೈರ್ಯಮಾಡಿಕೊಳ್ಳಿರಿ."

"......"

"ದೇವರಿದ್ದಾನೆ." ಸಮಾಧಾನಪೂರ್ವಕವಾಗಿ ನುಡಿದ ಜಾನಕೀರಾಂ.

ಲೇಬರ್ ವಾರ್ಡಿನ ಕದ ಮುಚ್ಚಿತ್ತು.

ಚಂದ್ರಿಕಳಿಗಾಗಿ ರತನ್ ಹೊರಗಡೆ ಕಾದಿದ್ದ. ಅಘೋರ ಮುಗುಳು ನಕ್ಕು ಅವನ ಕೈಯನ್ನು ಆತ್ಮೀಯತೆಯಿಂದ ಕುಲುಕಿ ಹೃತ್ಪೂರ್ವಕವಾಗಿ ಅಭಿನಂದಿಸಿದ. ಒಡನೆಯೇ ಅಭಿನಂದನೆಯ ಸುರಿಮಳೆಗಳಾದುವು. ಎಲ್ಲರನ್ನೂ ಹಸನ್ಮುಖದಿಂದ ಪ್ರತಿವಂದಿಸಿ ಚಂದ್ರಿಕಳಿಗಾಗಿ ಕಾದುನಿಂತ ರತನನಿಗೆ ನಿರಾಸೆಯ ಸುದ್ದಿ ಕಾದಿತ್ತು! ಪರೀಕ್ಷೆಯ ನಂತರ ಅವಳು ಗರ್ಭಿಣಿಯಾಗಿರದೆ ಹೈಡೆಟಿಡ್‌ಫಾರ್ಮ್ ಮೋಲ್ (Hydatidform mole) ಬೆಳೆದಿರಬಹು ದೆಂಬ ಅನುಮಾನ ತೋರಿತು–ಡಾಕ್ಟರುಗಳಿಗೆ. ಸರಿ; ಅದರ ತಪಾಸಣೆಯೂ ನಡೆಯಿತು. ಎಕ್ಸ್‌ರೇ ಚಿತ್ರ ತೆಗೆದಾಗ ಅವರ ಊಹೆ ನಿಜವಾಗಿತ್ತು. ಬಹಳ ದಿನಗಳ ಮೇಲೆ ಮಗುವೊಂದು ಬಂದು ಮನೆಯನ್ನು ಬೆಳಗಲಿದೆಯೆಂದು ಅತ್ಯಾ ನಂದದಿಂದಿದ್ದ ರತನ್‌ದಂಪತಿಗಳಿಗೆ ಆದ ನಿರಾಸೆ ಅಷ್ಟಿಷ್ಟಲ್ಲ. ಆಸೆ–ನಿರಾಸೆ ಗಳಿಂದ ತತ್ತರಿಸಿ ಹೃದಯ ಹಗುರವಾಗುವವರೆಗೂ ಕಂಬನಿಯ ಕೋಡಿ

ಹರಿಸಿದಳು ಚಂದ್ರಿಕಾ.

ಡಾಕ್ಟರುಗಳ ದಳ ಕಾರಿಡಾರಿನಲ್ಲಿ ಸಾಲಾಗಿ ಸಾಗುತಿತ್ತು. ಬಿಳಿಯ ನಿಲುವಂಗಿಗಳು ಅಚ್ಚುಕಟ್ಟನ್ನು ಸಾರಿಹೇಳುತಿದ್ದುವು. ಡಾ|| ಜಾನಕೀರಾಂ ಡಾ|| ಸುಧೀರ್ ಡಾ|| ಮದನ್ ಡಾ|| ಸೌಮಾ ಡಾ|| ಶಾರದಾ ಡಾ|| ಚೆಲುವಾಂಬ ಡಾ|| ಅಘೋರ್ ಸಾಲಾಗಿ ಹೆಜ್ಜೆಹಾಕುತಿದ್ದಾರೆ. ಡಾ|| ಅಘೋರ ಭಾರವಾದ ದನಿಯಿಂದ ನುಡಿದ "ಅರವಿಂದಾ ಈಗ ತಿಲೋತ್ತಮನನ್ನು ಗುರುತಿಸುವುದೇ ಇಲ್ಲ."

"ಪಾಪ..."

"ತಿಲೋತ್ತಮನಿಗೆ ಇಸುಬು ಬಂದುದೇ ಅವಳ ಮನೋವಿಕಲ್ಪಕ್ಕೆ ಕಾರಣ. ಈಗ ಅವನಿಗೆ ಗುಣವಾಗಿದೆಯೆಂದು ಸಂತೋಷದಿಂದ ಕರೆದುಕೊಂಡು ಹೋದರೆ ಅವಳು ಗುರುತಿಸುವುದೇ ಇಲ್ಲ. ಎಷ್ಟೆಷ್ಟು ಪ್ರಯತ್ನಪಟ್ಟರೂ ಅವಳಿಗೆ ನಂಬುಗೆ ಬರಲಿಲ್ಲ. ಆಗ ತಿಲೋತ್ತಮ ಆರೇಳು ವರ್ಷದ ಹಸುಳೆ.

"ಈಗ ಸದ್ದಿಲ್ಲದೆ ಆಳೆತ್ತರಕ್ಕೆ ಬೆಳದಿದ್ದಾನೆ. ಅವಳ ದೃಷ್ಟಿಯೆಲ್ಲಾ ಸೊಂಟದ ಕೆಳಗೆ–ಅಂದರೆ ಚಿಕ್ಕ ಮಕ್ಕಳಿಗಾಗಿ. ತಿಲೋತ್ತಮನನ್ನು ಎದುರಿಗೇ ಇಟ್ಟುಕೊಂಡು ಅವನಿಗಾಗಿ ತಡುಕಾಡುವ ಅವಳ ಕಣ್ಣುಗಳನ್ನು ನೋಡಿದರೆ ಸಂಕಟವಾಗುತ್ತದೆ."

"ದನಿ ಮಾತುಕತೆ ಯಾವುದರಲ್ಲೂ ಗುರುತಿಸುವುದಿಲ್ಲವೇ ?"

"ಇಲ್ಲವೇ ಇಲ್ಲ. ಅವನು ಪಕ್ಕದಲ್ಲಿದ್ದಾಗಲೂ ತಿಲೋನನ್ನು ನೋಡಲಿಲ್ಲವಲ್ಲಾ ಎನ್ನುತ್ತಾಳೆ." ಅಘೋರ ಗಳಿಗೆ ಕಾಲ ತಡೆದು ಪುನಃ ಮುಂದುವರಿದ "ತಿಲೋ...ತಿಲೋ...ಸದಾ ತಿಲೋತ್ತಮನ ಧ್ಯಾನವೇ ಧ್ಯಾನ. ಮನೆಗೆ ಕರೆತಂದಾಗಲೂ ಅಷ್ಟೆ. ತಿಲೋತ್ತಮನನ್ನು ಹುಡುಕುವುದೇ ಒಂದು ಕೆಲಸ. ಈಗ ಗುರುತಿಸುವುದೇ ಇಲ್ಲ ಎಂದರೆ ನನಗೇನೇ ಆಶ್ಚರ್ಯ. ಸ್ವಲ್ಪ ತಡೆದು ಉಗುಳು ನುಂಗಿ ಒಣಗಿದ ತುಟಿಗಳನ್ನು ನಾಲಗೆಯಿಂದ ಸವರಿಕೊಂಡು ಪುನಃ ಮುಂದುವರಿದ ಅಘೋರ "ನಾನು ಏನೇನೋ ಬಯಸಿದ್ದೆ. ಏನೇನೋ ಕನಸು ಕಂಡಿದ್ದೆ. ಕನಸು ನನಸಾಗುವುದೆಂಬ ಹುಚ್ಚು ಎದೆಯನ್ನೆಲ್ಲಾ ಆವರಿಸಿತ್ತು....ಈ ಜೀವನ ಕ್ಷಣ ಭಂಗುರವಷ್ಟೇ ಅಲ್ಲ; ಗೋಳಿನ ಕಣಜವೂ ಹೌದು."

ದುಃಖದ ಒತ್ತಡದಿಂದ ತಲೆ ಹಾಗಿಂದ್ಹೀಗೆ ತೂಗಿತು. ಕಣ್ಣುಗಳು ರಂಗೇರಿ ಕೆಂಪುಕೆಂಪಾದುವು. ಗೆಳೆಯರಾರೂ ಮಾತಾಡಲಿಲ್ಲ. ಸಂಗಾತಿಯ ನೊಂದೆದೆಗಾಗಿ ಎಲ್ಲರ ಹೃದಯಗಳೂ ಅನುಕಂಪದಿಂದ ಮಿಡಿದುವು. ಹಾದಿ ಮೆಲ್ಲನೆ ಸಾಗಿತು.

ಕೆಲಸ ಮುಗಿದಿತ್ತು. ಎಲ್ಲರ ಹಾದಿಯೂ ಕವಲೊಡೆದು ಹಾದಿ ಹಾದಿ ಯನ್ನು ಬೀಳ್ಕೊಟ್ಟಿತು. ನೋಟ ನೋಟವನ್ನು ಬೀಳ್ಕೊಟ್ಟಿತು. ಅಘೋರ ಒಬ್ಬನೇ ತನ್ನ ಹಾದಿತುಳಿದ. ದಣಿದ ಮೈಯನ್ನು ತಣ್ಣನೆಯ ತಿಳಿಗಾಳಿ ನೇಹದಿಂದ ನೇವರಿಸಿತು. ಅಕ್ಕ ಪಕ್ಕದಲ್ಲಿ ಜನಗಳ ಮಾತುಕತೆಯ ಗುಜು ಗುಂಪಲು, ರಸ್ತೆಯಲ್ಲಿ ಹೋಗಿ ಬರುವ ವಾಹನಗಳ ಆದಿ ಅಂತ್ಯವಿಲ್ಲದ ಗದ್ದಲ, ಎಡಬಲಗಳಲ್ಲಿ ಘೀಳಿಡುವ ಬಾನುಲಿಗಳ ಸಂಮಿಶ್ರ ದನಿಗಳ ಹುಚ್ಚು ಮೇಳ, ಇಂದೇಕೋ ಅಸಹನೆ ಮೇರೆ ಮೀರಿತು. ತಾಳಲಾರೆನೋ ಎಂದು ಚೀರಿಟ್ಟಿತು ಎದೆಯ ಹಕ್ಕಿ. ತಲೆ ಚಿಟ್ಟುಹಿಡಿದಂತಾಗಿ ಅಘೋರ ನಡಿಗೆಯನ್ನು ತೀವ್ರ ಗೊಳಿಸಿದ. ಮನೆ ಮುಟ್ಟಿದಾಗ ಶಿಲೋತ್ತಮ ಅಜ್ಜಿಗೆ ಸಿನಿಮಾ ಕತೆ ಯೊಂದನ್ನು ಬಣ್ಣಿಸಿ ಹೇಳುತಿದ್ದ. ಹಾಸ್ಯ ಮಯವಾದ ಚಿತ್ರಕತೆಗೆ ಇನ್ನಷ್ಟು ಬಣ್ಣಹಚ್ಚಿ ನಕ್ಕುನಗಿಸುತಿದ್ದ.

ಹದಿನಾಲ್ಕರ ಎಳೆಯನೊಂದಿಗೆ ಅರವತ್ತರ ಅಜ್ಜಿಯ ಚಿತ್ರ ಮನ ಮೋಹಕವಾಗಿತ್ತು. ಮೊದಲ ನೋಟಕ್ಕೆ ಅಘೋರನ ಮುಖವರಳಿತು. ಅಲ್ಲಿಂದಲೇ ಅಂದ "ಅಜ್ಜಿ ಮೊಮ್ಮಗ ಬಹಳ ಮಾತುಕತೆ ನಡೆಸಿದ್ದೀರಿ ?"

"ಹೇಗಾದರೂ ಹೊತ್ತು ಕಳೆಯಬೇಕಲ್ಲ ?"

ನಂದಾದೇವಿಯ ಮೆಲುನುಡಿ ಮನಸ್ಸಿಗೆ ಮುಳ್ಳು ನೆಟ್ಟಂತಾಯಿತು.

ಅಘೋರ ನೇರವಾಗಿ ನೀರು ಮನೆಗೆ ಹೋದ.

○ ○ ○ ○

ಅಂದು ಅಘೋರ ಹಾಸಿಗೆ ಸೇರುವಾಗ ಮಧ್ಯರಾತ್ರಿಯಾಗಿತ್ತು. ಪುಸ್ತಕವೊಂದರ ಮೇಲೆ ಗಮನವೆಲ್ಲವನ್ನೂ ಕೇಂದ್ರೀಕರಿಸಿ ಎದೆಯ ಭಾರ ವನ್ನಿಳುಹಿದ್ದ. ಇನ್ನೂ ದೀಪ ಉರಿಯುತ್ತಲೇ ಇತ್ತು. ಓದುತಿದ್ದರೂ ಹೊತ್ತು ದೀರ್ಘವಾಗಿ ಉಮುಳಿದಂತೆ ಭಾಸವಾಯಿತು. ಪುಸ್ತಕ ಹಿಡಿದ

ಕೈಗಳು ಬಳಲಿದುದರಿಂದ ಪುಸ್ತಕವನ್ನು ಹಾಗೇ ಎದೆಯ ಮೇಲಿಟ್ಟುಕೊಂಡು ಅವುಗಳಿಗೆ ವಿಶ್ರಾಂತಿ ನೀಡಿದ. ಅರವಿಂದಳ ಸ್ಥಳವನ್ನು ಆಕ್ರಮಿಸಿದ್ದ ದುಂಡನೆಯ ನೀಳವಾದ ದಿಂಬು ಮಿಸುಕದೆ ಮಲಗಿತ್ತು. ನೋಟ ಅದರತ್ತ ಹರಿಯುತ್ತಲೂ ಪುಸ್ತಕವನ್ನು ಬದಿಗಿಟ್ಟು ದೀಪ ನಂದಿಸಿದ. ಪ್ರಕಾಶಮಾನವಾದ ಬೆಳಕು ಅಳಿಯುತ್ತಲೂ ಮಿಣುಮಿಣುಗುವ ಕೆಂಪು ದೀಪ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿತು. ಕೆಂಪು ದಿಂಬನ್ನು ಎದೆಗಾಂತು ತಬ್ಬಿ ಅಘೋರ ಕಣ್ಣು ಮುಚ್ಚಿದ. ಅರವಿಂದಳ ಪ್ರತೀಕ ನೊಂದ ಮನಸ್ಸನ್ನು ಕಿಂಚಿತ್ ಅರಳಿಸಿತು. ನಿದ್ದೆಯ ಮಂಪರದಲ್ಲಿ ಅಘೋರ ಬಡಬಡಿಸತೊಡಗಿದ...ನಿಸ್ಸಾರ... ನಿಸ್ಸಾರ. ಈ ಜೀವನ ನಿಜವಾಗಿಯೂ ನಿಸ್ಸಾರ ಅರವಿಂದಾ. ಆಳವಾಗಿ ಯೋಚಿಸದ ಹೊರತು ಭ್ರಾಂತಿಯ ತೆರೆಹರಿಯದು...ಯಾವ ಒಂದು ಆಸೆಗಾಗಿ ನೀನು ಬುದ್ಧಿಭ್ರಮಣೆ ಹೊಂದಿದೆಯೋ...ಯಾವ ಒಂದು ಸಾಧನೆಗಾಗಿ ನಾನು ನಿನ್ನನ್ನು ಕಳೆದುಕೊಂಡೆನೋ...ಆ ಒಂದು ಕ್ಷಣಿಕ ಸುಖ ಬಿಸಿಲ್ಗುದುರೆಯಂತೆ ನಮ್ಮನ್ನು ಆಕರ್ಷಿಸಿ ಘೋರಕಂದಕಕ್ಕೆ ತಳ್ಳಲಿದೆಯೆಂದು ನಾವು ತಿಳಿದುಕೊಳ್ಳಲಾರದೆಹೋದೆವು ಅರವಿಂದಾ...ನಮ್ಮ ಧ್ಯೇಯಕುಸುಮ ಗಗನದೆತ್ತರದಲ್ಲಿ!...ಸಾಧನೆಯ ಸಾಸುವೆ ಮಣ್ಣಿನ ಹುಡಿಯಲ್ಲಿ!...ಮೋಹದ ಕುಟೀರ... ಮರಳಿನ ಮೇಲೆ ಕಟ್ಟಿದ ಮೋಹದ ಕುಟೀರ...ಬೀಸಿ ಬರುವ ಬಿರುಗಾಳಿಗೆ ಉಳಿದೀತೇ?...ಗುರಿ! ಗುರಿ!! ಗುರಿ!!! ಆ ಕಾಣದ ಕೇಳದ ಗುರಿಗಾಗಿ ಹಸನಾದ ಬಾಳು ಮಣ್ಣುಗೂಡಿತು ಅರವಿಂದಾ....ಅರವಿಂದಾ...

ಹೊತ್ತು ಉರುಳಿತು. ತಂಗಾಳಿ ತಣ್ಣಗೆ ಬೀಸಿತು. ಅಘೋರ ಕೊಸರಾಡಿ ಎದ್ದ. ಯಾರೋ ರಪ್ಪನೆ ಹೊಡೆದೆಬ್ಬಿಸಿದಂತಾಗಿತ್ತು. ಅಗಲವಾಗಿ ಕಣ್ತೆರೆದು ಬಿರುಬಿರನೆ ನೋಡಿದ. ಅದೇ ಕೆಂಪು ದೀಪದ ಬೆಳಕು ಪ್ರಶಾಂತವಾಗಿತ್ತು. ಗಡಿಯಾರದ ಟಿಕ್ ಟಾಕ್ ಟಿಕ್ ಟಾಕ್ ಸದ್ದು ವಿನಾ ಒಳಗಡೆ ಜೀವಂತ ವಸ್ತುಗಳೇ ಇಲ್ಲ. ಅಂದಮೇಲೆ ಹೊಡೆದೆಬ್ಬಿಸಿದವರಾರು ? ಅರವಿಂದಳಿರಬಹುದೇ? ಈ ಹೊತ್ತಿನಲ್ಲಿ ಅವಳಾದರೂ ಹೇಗೆ ಬಂದಾಳು? ಅಘೋರ ಎದ್ದು ಕುಳಿತು ಸುತ್ತಲೂ ಮಿಕಿಮಿಕಿ ನೋಡಿದ. ಯಾರೂ ಇಲ್ಲ. ಟಿಕ್ ಟಾಕ್ ಸದ್ದು ಬಗೆಗೆಟ್ಟ ಮನವನ್ನು ಮುಳ್ಳಿನಂತೆ ಚುಚ್ಚುತಿತ್ತು. ಗಂಡಸಾಗಿ ಹುಟ್ಟಿ ಇಷ್ಟೊಂದು ಬಗೆಗೆಟ್ಟರೆ ಹೇಗೆ? ...ತಿರಸ್ಕಾರದ ಕಿರುನಗೆ

ಯೊಂದು ತಕ್ಷಣ ಪಸರಿಸಿತು...ಎದೆಯಾಳದಿಂದ ನಿಟ್ಟುಸಿರೊಂದು ಹಿಂದೆಯೇ ಹೊರ ಹೊಮ್ಮಿತು. ಮತ್ತೆ ಹಾಗೇ ಹಾಸಿಗೆಯ ಮೇಲೆ ಅಡ್ಡಾದ. ಎದೆಯಾಳದಿಂದ ಅಂತರ್ವಾಣಿಯೊಂದು ಮೆಲ್ಲನೆ ಗುಣುಗುಣಿಸಿತು. ಸಾಂತ್ವನಗೈಯುವ ತೆರದಿಂದ ಹರಿದುಬಂದ ಸೂಕ್ತಿಸುಧೆಯನ್ನು ಮನಮುಟ್ಟಿ ಸವಿಯ ತೊಡಗಿದ.

ದಾರಾಃ ಪುತ್ರಾಶ್ಚ ಭೋಗಾಶ್ಚ ಧನಯೌವನೇ |
ಮಾನ್ಯಸ್ಥಿರಾಣಿ ಸರ್ವಾಣೀ ಕೀರ್ತಿರೇಕಾ ಸ್ಥಿರಾ ಭುವಿ ||

ಹೌದು. ಹೆಂಡತಿ ಮಕ್ಕಳು ಭೋಗ ಭಾಗ್ಯಗಳು ಬದುಕು ಧನ ಯೌವನ ಎಲ್ಲವೂ ಅನಿತ್ಯವಾದುವುಗಳು. ಕೀರ್ತಿಯೊಂದೇ ಭೂಮಿಯಲ್ಲಿ ಚಿರಂತನವಾಗಿರುವುದು ಅಂದಮೇಲೆ ಬಾಳಿಗಾಗಿ ಏಕೆ ಇಷ್ಟೊಂದು ಗೀಳು? ಎಂದು ತನ್ನಷ್ಟಕ್ಕೆ ತಾನೇ ಹೇಳಿಕೊಂಡ ಅಘೋರ. ಕಣ್ಣುಗಳು ತಮ್ಮಷ್ಟಕ್ಕೆ ತಾವೇ ಮುಚ್ಚಿಕೊಂಡುವು. ದೂರದ ತಿರುವಿನಲ್ಲಿದ್ದ ಚರ್ಚಿನ ಗಂಟೆ ಭಾರಿಸಿತು. ಅಘೋರ ಹಾಗೇ ಎಣಿಸಿದ. ಒಂದು ಎರಡು ಮೂರು ನಾಲ್ಕು ಐದು. ಬೆಳಗಿನ ತಂಗಾಳಿ ತಣ್ಣಗೆ ಬೀಸಿತು.

ಅಧ್ಯಾಯ
೩೭

ಮಧ್ಯರಾತ್ರಿ. ಕೃಷ್ಣಪಕ್ಷದ ಕಾಳಗಪ್ಪು ಹೆಪ್ಪುಗಟ್ಟಿ ನಿಂತಿದೆ. ಸದ್ದಿಲ್ಲದ ಶಾಂತಿಯಲ್ಲಿ ಜಗತ್ತು ಸುಖನಿದ್ದೆಯಲ್ಲಿ ಮೈಮರೆತಿತ್ತು. ಬೀಸಿ ಬರುವ ತಂಗಾಳಿಗೆ ಮೈಗೊಟ್ಟು ಅಘೋರ ಡ್ಯೂಟಿ ರೂಮಿನಲ್ಲಿ ನಿದ್ದೆ ಹೋಗಿದ್ದ. ಅದೇ ತಾನೆ ಎಮರ್ಜನ್ಸಿ ಆಪರೇಶನ್ ಮುಗಿದಿತ್ತು. ಅವಿಶ್ರಾಂತವಾಗಿ ದುಡಿದು ದಣಿದ ಮೈ ಗಾಢನಿದ್ದೆಗೆ ಬಲಿಯಾಗಿತ್ತು. ಸೆಜ್ಜೆಯನ್ನು ಸುತ್ತುವರಿದ ಸೊಳ್ಳೆಪರದೆ ಹಾಳು ಅನಿಷ್ಟಗಳಿಗೆ ತಡೆಹಾಕಿ ರಕ್ಷಣೆ ನೀಡಿತ್ತೋ ಏನೋ...ಅಂಥಾ ಸುಖನಿದ್ರೆ.

ಮೇಟ್ರನ್ ಮತ್ತು ವಾರ್ಡ್‌ಬಾಯ್ ಮಂಚದ ಬಳಿ ನಿಂತು ಕರೆದರು "ಸಾರ್. ಸಾರ್!"

"........."

"ಪಾಪ, ಇದೇ ತಾನೇ ಮಲಗಿದ್ದಾರೆ." ಮೇಟ್ರನಳ ದನಿಯಲ್ಲಿ ಮೆಲ್ಲನೆ ಮರುಕದ ಕಿರುತೊರೆ ಹರಿದುಬಂತು.

"ಸಾರ್, ಸಾರ್!"

".........."

"ಸಾರ್!"

"ಞ್ಞ!"

"ಸಾರ್!"

"ಏನಪ್ಪಾ? ಏನು ಸಮಾಚಾರ?"

"ಜನರಲ್ ವಾರ್ಡಿನ ಕೇಸೊಂದು ತುಂಬ ಸೀರಿಯಸ್ ಆಗಿದೆ."

"ಞ್ಞ! ಹೌದಾ?"

"ಹೌದು."

ಅಘೋರ ಹಾಸಿಗೆಯಿಂದ ಧಡಕ್ಕನೆದ್ದು, ತನ್ನ ತಲೆ ದಿಂಬಿನಡಿ ತಡುಕಾಡಿ ಟಾರ್ಚ್ ಲೈಟನ್ನು ಹೊರತೆಗೆದು ಪ್ರಕಾಶಮಾನವಾದ ಬೆಳಕನ್ನು

ಬೀರುತ್ತಾ–"ನಡೆಯಿರಿ, ಹೋಗೋಣ."

ಮೂವರೂ ಸಾಲಾಗಿ ಹೆಜ್ಜೆಹಾಕಿದರು. ರಾತ್ರಿಯ ಡ್ಯೂಟಿ ಹಿರಿಯ ಜವಾಬ್ದಾರಿಯನ್ನು ಅವರಿಗೆ ವಹಿಸಿತ್ತು.

"ಎಷ್ಟನೆಯ ಬೆಡ್?"

"ನಾಲ್ಕನೆಯ ಬೆಡ್."

"ಓ, ಕೈ ಬೆರಳು ಕತ್ತರಿಸಿದಾಕೆಯೇ?"

"ಹೌದು, ಅವಳೇ ತುಂಗಾ."

"ಏನಾಗಿದೆ?"

"ಕೈ ಬೆರಳುಗಳನ್ನು ತೆಗೆದಾಗಿನಿಂದ ಅವಳು ಬಹಳ ದುಃಖಕ್ಕೊಳಗಾಗಿದ್ದಾಳೆ."

"ಪಾಪ, ಅದು ಗೊತ್ತು."

"ಈಗ ತುಂಬ ಸುಸ್ತಾಗಿದ್ದಾಳೆ."

ವಿದ್ಯುಚ್ಛಕ್ತಿಯ ಅಪಘಾತಕ್ಕೆ ಒಳಗಾಗಿದ್ದ ಅವಳು ಇನ್ನೂ ಇಪ್ಪತ್ತೆರಡರ ಜವ್ವನೆ. ಮೂರು ಮಕ್ಕಳ ತಾಯಿ. ಮೂವರೂ ಹೆಣ್ಣು ಮಕ್ಕಳು. ಒಂದು ತಿಂಗಳಿನಿಂದ ಅವಳು ಚಿಕಿತ್ಸೆ ಪಡೆಯುತಿದ್ದರೂ ಬೆರಳುಗಳ ಗಾಯ ಮಾಗದೆ ಹುಣ್ಣಾಗಿ ಕೊಳೆಯಲಾರಂಭಿಸಿದೊಡನೆಯೇ....ಮುಂದೇನು?.... ಎಂಬ ಪ್ರಶ್ನೆ ಅವಳನ್ನು ಹಣ್ಣು ಮಾಡಿತ್ತು.

"ಬೆರಳನ್ನು ಕತ್ತರಿಸದ ಹೊರತು ಗತ್ಯಂತರವಿಲ್ಲ." ಡಾಕ್ಟರ ನುಡಿ ಹೊರಬೀಳುತ್ತಲೂ ಮುದುಡಿ ಮುಸುಗಿಟ್ಟು ಮಲಗಿದ ಅವಳು ಥರ ಥರ ನಡುಗಿದಳು. ಕಣ್ಣುಗಳಲ್ಲಿ ಗಂಗೆ ಯಮುನೆಯರು ಪ್ರವಹಿಸಿದರು.

"ಕೈ ಬೆರಳುಗಳನ್ನು ಕತ್ತರಿಸಿದನಂತರ ಕೆಲಸ ಮಾಡುವಂತಿಲ್ಲವಲ್ಲಾ? ಜೀವಮಾನದುದ್ದಕ್ಕೂ ನೋಡಿಕೊಳ್ಳುವವರು ಯಾರಿದ್ದಾರೆ? ನಾನು ಬೆರಳುಗಳನ್ನು ಕಳೆದುಕೊಂಡು ಬದುಕುವುದಕ್ಕಿಂತ ಸಾಯುವುದು ಲೇಸು. ದುಡಿಯದೆ ಬದುಕುವುದು ಸಾಧ್ಯವೇ ಇಲ್ಲ."

ಅವಳು ಉಕ್ಕಿಬಂದ ದುಃಖವನ್ನು ತಡೆದುಕೊಳ್ಳಲಾರದೇ ಬಿಕ್ಕಿಬಿಕ್ಕಿ ಅತ್ತಳು. ಅಂದು ಅಘೋರ ಬಹಳಷ್ಟು ಸಮಾಧಾನ ಹೇಳಿದ್ದ. ಆದರದು ಎತ್ತಲೋ ಗಾಳಿಗೆ ತೂರಿಹೋಗಿತ್ತು. ಮೂವರು ಹೆಣ್ಣು ಮಕ್ಕಳನ್ನು

ಹಾದಿಯಲ್ಲಿ ಹಾಕಿಹೋಗುವುದು ದುಃಖಕರವಾದರೂ ದುಡಿಮೆಯಿಲ್ಲದೆ ಬದುಕುವುದೆಂತು ? ಹೇಗೆ ಮಕ್ಕಳಿಗೆ ಆಧಾರವಾದೇನು ?...ಎಂಬ ಯೋಚನೆ ಅವಳನ್ನು ಹಿರಿದು ತಿನ್ನುತಿತ್ತು. ದುಃಖದ ಊಟೆಯಲ್ಲಿ ಮುಳುಗಿ ಹಣ್ಣಾಗಿದ್ದ ಅವಳು ಮೂರು ದಿನಗಳ ಹಿಂದೆ ಶಸ್ತ್ರಚಿಕಿತ್ಸೆಗೊಳಗಾಗಿದ್ದಳು. ಸುಖ ವಾಗಿದ್ದ ಅವಳಿಗೆ ಇದ್ದಕ್ಕಿದ್ದಂತೆ ಇಂದೇನಾಗಿರಬಹುದು ...?

ಅಘೋರ ಯೋಚಿಸುತ್ತಲೇ ಪ್ರಶ್ನೆಹಾಕಿದ "ಇಂದು ಸಾಯಂಕಾಲ ಸುಖವಾಗಿದ್ದಳಲ್ಲವೇ, ಮೇಟ್ರನ್ ?"

"ಹೌದು ಡಾಕ್ಟರ್. ಆದರೂ, ಮನಸ್ಸಿಗೆ ಬಹಳ ಹಚ್ಚಿಕೊಂಡಿದ್ದಾಳೆ."

...ಪಾಪ. ಎಷ್ಟೆಂದರೂ ಹೆಣ್ಣು ಜೀವ...

"ಎಲ್ಲಾ ಬೆರಳುಗಳನ್ನು ಕಳೆದುಕೊಂಡಿದ್ದಾಳೆ. ಇನ್ನು ಕೆಲಸ ಮಾಡುವಂತಿಲ್ಲ. ಪ್ರತಿಯೊಂದಕ್ಕೂ ಇತರೆಯವರನ್ನು ಆಶ್ರಯಿಸುವಂತಾಯಿತೆ? ಎಂಬುದೇ ಅವಳ ಅಗಾಧವಾದ ದುಃಖ."

"ಛೆಃ! ಛೆಃ! ಎಂಥವರಿಗೂ ಕಷ್ಟ."

"ಗಂಡ ಇದ್ದಾನೆ. ನೋಡಿಕೊಳ್ಳುವುದಾದರೆ ಕಷ್ಟವಿಲ್ಲ."

"ಅಂಥಾ ಪುಣ್ಯಾತ್ಮರು ನಮ್ಮಲ್ಲಿದ್ದಾರೆಯೆ ಎಂಬುದೇ ಅನುಮಾನ."

"ನಿಜ ಮೇಟ್ರೀನ್."

"ನಮ್ಮದು ರಾಮರಾಜ್ಯ ಡಾಕ್ಟರ್."

ಅಘೋರ ನಕ್ಕುಬಿಟ್ಟ. ಮೇಟ್ರನ್ ಮುಂದುವರಿದಳು "ಡಾಕ್ಟರ್, ವಿದ್ಯೆ ಬುದ್ಧಿ ನಾಗರಿಕತೆಗಳು ಹೆಚ್ಚಿದಷ್ಟೂ ಜೀವನ ನೆಮ್ಮದಿಯಿಂದ ಕೂಡಿರ ಬೇಕಾದುದು ನ್ಯಾಯ. ಆದರೆ, ನಮ್ಮವರ ರೀತಿಯೇ ಬೇರೆ. ಸತ್ಯ ಧರ್ಮ ಗಳಿಗೆ ಬೆಲೆಯೇ ಇಲ್ಲ."

"ಎಲ್ಲಿ ನೋಡಿದರೂ ಸಣ್ಣತನ, ಕೀಳು ಮನೋಭಾವ. ಹೀಗಿದ್ದರೆ ಸತ್ಯ ಧರ್ಮಗಳಿಗೆ ಬೆಲೆಯಾದರೂ ಹೇಗೆ ಬಂದೀತು ?"

"ಅಂತಲೇ ಅವಳಿಗೆ ಶಾಕ್ (Shock) ಬಂದಿದೆ."

"ಪಾಪ," ಬೀಸುಗಾಲು ಹಾಕಿ ನಡೆಯುತ್ತಲೇ ಅಘೋರ ಅಂದ "ನೋಡಿ, ಎಲ್ಲಾ ಅವಯವಗಳೂ ಚೆನ್ನಾಗಿದ್ದು ಕೈಗಳೆರಡೂ ಹೋದುದಕ್ಕೆ ಜೀವನದುದ್ದಕ್ಕೂ ಯಾರು ಸಾಕುತ್ತಾರೆ ಎಂಬ ದುಃಖಕ್ಕೆ ಒಳಗಾಗಿದ್ದಾ

ಳಲ್ಲಾ? ಮೇಲಾಗಿ, ಮೂರು ಪುಟ್ಟ ಹೆಣ್ಣುಮಕ್ಕಳಿವೆ. ನಾನು ಸತ್ತರೆ ಮಕ್ಕಳ ಗತಿಯೇನು ಎಂಬ ಯೋಚನೆಯೂ ಇದೆ. ಅಂದಮೇಲೆ, ಅವಳ ಮನೋವ್ಯಥೆ ಜೀವನದ ಸತ್ಯಚಿತ್ರವನ್ನು ತೋರುವುದಿಲ್ಲವೇ?"

"ನಿಜ ಡಾಕ್ಟರ್."

"ಇದು ಮಾನವ ಜೀವನ!"

ಜನರಲ್ ವಾರ್ಡಿನೊಳಗೆ ಅಘೋರ ಕಾಲಿಟ್ಟಾಗ ಕಲಿಕೆಯ ಡಾಕ್ಟರ್ ನಾಡಿ ಹಿಡಿದಿದ್ದ. ಅಘೋರ ಅವಳ ಸ್ಥಿತಿಗತಿಯನ್ನು ಗಮನಿಸಿ ಗ್ಲೂಕೋಸ್ ಡ್ರಿಪ್ ಚುಚ್ಚಿದ. ನಾಡಿಯ ಸ್ಥಿಮಿತ ತಪ್ಪಿತ್ತು. ಹೃದಯ ವ್ಯಾಪ್ತಿಗೆ ಮೀರಿ ಮಿಡಿಯುತಿತ್ತು...ಎಲ್ಲಕ್ಕೂ ಮನಸ್ಸೇ ಕಾರಣ...ಎದೆಯ ಹಕ್ಕಿ ನುಡಿಯಿತು. ನಾಲ್ಕಾರು ಸೂಜಿಮದ್ದುಗಳು ಅಣಿಯಾದುವು. ಅಘೋರ ಒಂದೊಂದಾಗಿ ಎಲ್ಲವನ್ನೂ ಚುಚ್ಚಿ, ಅವಳ ಸ್ಥಿತಿ ಉತ್ತಮವಾಗುವುದನ್ನು ನಿರೀಕ್ಷಿಸುತ್ತಾ ಅಲ್ಲೇ ನಿಂತ. ಅವಳ ತುಟಿಗಳು ಮೆಲ್ಲನೆ ಬಿರಿದುವು. ಕ್ಷೀಣವಾದ ದನಿ ಹೊರಬಿತ್ತು.

"ಡಾಕ್ಟರ್, ಇನ್ನು ನನ್ನ ಬದುಕಿನಿಂದ ಪ್ರಯೋಜನವಿಲ್ಲ. ಎರಡೂ ಕೈಗಳು ಹೋದಮೇಲೆ ನನ್ನ ಬದುಕು ನಿರರ್ಥಕ. ನೀವು ನನಗಾಗಿ ತೆಗೆದು ಕೊಳ್ಳುವ ಶ್ರಮವನ್ನು ನನ್ನ ತಬ್ಬಲಿ ಮಕ್ಕಳಿಗೆ ತೆಗೆದುಕೊಂಡು ಏನಾದರೊಂದು ವ್ಯವಸ್ಥೆ ಮಾಡಿರಿ. ನೀವು ಅಷ್ಟು ಉಪಕಾರ ಮಾಡಿದರೆ ಸಮಾಧಾನದಿಂದ ಕಣ್ಣು ಮುಚ್ಚುವೆ..." ಕಣ್ಣುಗಳು ಕಂಬನಿಯ ಕೋಡಿಯನ್ನು ಹರಿಸಿದುವು.

"ಇಷ್ಟೊಂದು ಹಚ್ಚಿಕೊಂಡರೆ ಹೇಗೆ ತಾಯಿ? ಎಂಥಾ ಕಷ್ಟಗಳು ಬಂದರೂ ಧೈರ್ಯದಿಂದ ಎದುರಿಸಬೇಕು. ಹೀಗಾದರೆ ಹೇಗೆ?"

"ಉಹೂ, ನನಗೆ ಬದುಕು ಬೇಡವೇ ಬೇಡ...ಮಕ್ಕಳನ್ನು ನಿಮ್ಮ ಕೈಗೊಪ್ಪಿಸಿ ಹೋಗುವೆ....ನೀವೇ ನೋಡಿಕೊಳ್ಳಿ ಡಾಕ್ಟರ್."

"ಮಕ್ಕಳಿಗೆ ತಂದೆ ಇದ್ದಾನಲ್ಲವೇ?..."

"ಇದ್ದರೂ....ಅವರಿಂದೂ ನೋಡಿಕೊಳ್ಳುವುದಿಲ್ಲ...ಖಂಡಿತಾ ಅವರ ಕೈಗೆ ಮಕ್ಕಳನ್ನು ಕೊಡುವುದು ಬೇಡ....ದಯಮಾಡಿ ಏನಾದರೊಂದು ವ್ಯವಸ್ಥೆ ಮಾಡಿರಿ...ದಯೆತೋರಿ...ದಯೆತೋರಿ...."

ಮೇಲುಸಿರು ಹತ್ತತೊಡಗಿತು. ಏದುತ್ತೇದುತ್ತಲೇ ಪುನಃ ಕೇಳಿ

ಕೊಂಡಳು...ದಯವಮಾಡಿ....ಉಪಕಾರವಮಾಡಿ....ಡಾಕ್ಟರ್." ಕಂಬನಿಯ ಪ್ರವಾಹ ಎಡೆಬಿಡದೆ ಹರಿಯಿತು.

ಮೇಲುಸಿರು ಹೆಚ್ಚಿ ಮಾತು ನಿಂತಿತು. ಕಣ್ಣುಗಳು ಮೇಲೆ ತೇಲಿದುವು. ಆಕ್ಸಿಜನ್ ಯಂತ್ರ ಕೆಲಸ ಮಾಡಹತ್ತಿತು. ಆದರೂ, ಶರೀರ ಯಂತ್ರ ಹವಗೆಟ್ಟು ಅಸ್ತವ್ಯಸ್ತವಾಯಿತು.

ಮುಂದೇನು?...ಮಕ್ಕಳನ್ನೇನು ಮಾಡುವುದು? ಎಂಬ ಪ್ರಶ್ನೆ ಮನದಲೆಯಲ್ಲಿ ನಿಮಿರಿ ನಿಂತಿತು. ಅಘೋರ ಹಾಗೇ ಯೋಚಿಸಿದ....ಪಾಪ, ಕೂಲಿಕಾರ ಹೆಣ್ಣು. ತಾನು ನಾಲ್ಕು ಕಾಸು ದುಡಿದು ಮಕ್ಕಳಿಗೆ ಉಣಿಸಿಕ್ಕುತಿದ್ದ ಕೈಗಳನ್ನು ಕಳೆದುಕೊಂಡುದುದರಿಂದಲೇ ಧೃತಿಗೆಟ್ಟು ಸಗ್ಗದ ಹಾದಿ ಹಿಡಿದಿದ್ದಾಳೆ. ....ವಿಷಯ ಮನೋಗತವಾದೊಡನೆಯೇ ಅಘೋರ ಮಂಜಿನಂತೆ ಕರಗಿ ಹೋದ. ಒಡನೆ ಕೂಲಿಕಾರರ ರುದ್ರಜೀವನ ಚಿತ್ರಭಿತ್ತಿಯಲ್ಲಿ ಚಲನಚಿತ್ರದಂತೆ ಸುಳಿಸುಳಿದಳಿಯಹತ್ತಿತು. ಒಂದಲ್ಲ, ಹತ್ತಲ್ಲ, ನೂರಲ್ಲ, ಸಾವಿರಾರು ದಾರುಣ ಚಿತ್ರಗಳು ಸ್ಮರಣೆಯ ಹಾದಿಯಲ್ಲಿ ಸಾಗಿಹೋದುವು....ಬಲಗೈಯಲ್ಲಿ ಕೂಲಿ ಕೊಡುವ ಸರಕಾರ ಎಡಗೈಯಲ್ಲಿ ಹೆಂಡ ನೀಡಿ ಕಾಸನ್ನು ಕಸಿದುಕೊಳ್ಳುತ್ತದೆ!....ಅಂದಮೇಲೆ, ಕೂಲಿಗಾರ ಹೆಂಡತಿ ಮಕ್ಕಳನ್ನು ಸಾಕಿಯಾನೆ?... ಮೈಯಲ್ಲಿ ಬೆಂಕಿಯ ಝುರಿ ಹರಿದಾಡಿತು. ಎದೆಯ ಹಕ್ಕಿ ಎಣೆಯಿಲ್ಲದೆ ಚೀರಿತು....ಅಯ್ಯೊ, ನಮ್ಮ ದೇಶವೇ.

ಆವಳ ಗಂಡ ಒಪ್ಪಿದರೆ ಮಕ್ಕಳನ್ನು ಅನಾಥ ಶಿಶು ರಕ್ಷಣಾಲಯಕ್ಕೆ ಸೇರಿಸುವುದೆಂಬ ನಿರ್ಧಾರಕ್ಕೆ ಬಂದ. ಬಳಿಯಲ್ಲಿದ್ದ ಹಿರಿಯ ಮೇಟ್ರನ್ ಅಂದಳು "ಎಂತಹ ಅನ್ಯಾಯ! ದೇವರು ಮಕ್ಕಳನ್ನು ಅನಾಥರನ್ನಾಗಿ ಮಾಡಿದ."

o o o o

ಅಘೋರ ಕಾರಿಡಾರಿನಲ್ಲಿ ಒಬ್ಬನೇ ಹೆಜ್ಜೆಹಾಕಿದ್ದ. ಯಾವುದೋ ಮಾನಸಿಕ ಹಿಂಸೆ ಗೊತ್ತುಗುರಿಯಿಲ್ಲದಂತೆ ಹಿಂಡುತಿತ್ತು. ಯೋಚನೆಯ ಮಂಪರದಲ್ಲಿ ಮೈಮರೆತು ಹೆಜ್ಜೆಹಾಕಿದ್ದ. ಮಗ್ಗುಲು ಹಾದಿಯಿಂದ ಅಲ್ಲಿಗೆ ಜಿಗಿದುಬಂದ ಮದನ್ ನಸುನಕ್ಕು—

"ಬಹಳವಾಗಿ ಯೋಚಿಸುತ್ತಿರುವಂತಿದೆಯಲ್ಲಾ, ಡಾಕ್ಟರ್!"

"ಏನಿಲ್ಲಪ್ಪಾ."

"ಈಗ ಬಿಡುವಾಗಿದ್ದೀಯೇನು ?"

"ಏಕೆ ?" ಎನ್ನುತ್ತಾ ಅಘೋರ ಕಣ್ಣುಗಳನ್ನು ಗಡಿಯಾರದಮೇಲೆ ಹೊರಳಿಸಿದ. ಹೊತ್ತು ಹತ್ತರ ಅಂಚನ್ನು ತಬ್ಬುವುದರಲ್ಲಿತ್ತು.

"ಬಾ. ಒಂದಿಷ್ಟು ಕಾಫಿ ಕುಡಿದುಬರೋಣ."

ಅಘೋರ ತುಸು ಯೋಚಿಸಿದ. ಇದುವರೆವಿಗೆ ಅದರ ಯೋಚನೆಯೇ ಬಂದಿರಲಿಲ್ಲವಾದರೂ ಅವನು ನೆನಪಿಸಿದೊಡನೆ ಅದರ ಆಕರ ಉಂಟಾಗಿತ್ತು. ತನ್ನ ದುರ್ಬಲತೆಗೆ ತಾನೇ ನಕ್ಕು ಅವನೊಂದಿಗೆ ಕಾಫಿ ಮನೆಯತ್ತ ಹೆಜ್ಜೆ ಹಾಕಿದ. ಇಬ್ಬರೂ ಸಾಲುಗಟ್ಟಿ ನಡೆದರು.

"ಮದನ್."

"ಏನು ಡಾಕ್ಟರ್ ?"

"ಎರಡು ಹೊತ್ತೂ ನಮ್ಮ ಮನೆಯ ಮುಂದೆ ರೋಗಿಗಳ ಸಂತೆಯೇ ನೆರೆದಿರುತ್ತೆ. ಈಗೀಗ ನಿಮಿಷವೂ ಬಿಡುವಾಗುವುದಿಲ್ಲ."

"ನನಗೂ ಹಾಗೇ ಕಣಯ್ಯಾ."

"ಆಸ್ಪತ್ರೆಗಳಲ್ಲೂ ಸಂತೆ. ಮನೆಗಳಲ್ಲೂ ಹೀಗೆ." ಅಘೋರ ಸ್ವಲ್ಪ ತಡೆದು ಪುನಃ ಮುಂದುವರಿದ "ಪಾಪ, ಜೀವನವೇ ಕಷ್ಟಕರವಾದ ಈ ಕಾಲದಲ್ಲಿ ರೋಗ ರುಜಿನಗಳಿಗೆ ಹಣ ತೆರೆವುದೆಂದರೆ ಎಂತಹವರಿಗೂ ಕಷ್ಟ."

"ದೇಶದಲ್ಲಿ ಉತ್ಪಾದನೆ ಕಡಿಮೆ. ವೆಚ್ಚ ಜಾಸ್ತಿ. ಅರಹೊಟ್ಟೆ ಊಟ ರೋಗ ರುಜಿನಗಳಿಗೆ ದಾರಿಮಾಡುತ್ತಿದೆ. ದೊರೆಯುವ ಅಲ್ಪ ಸ್ವಲ್ಪ ಆಹಾರವೂ ಕಲಬೆರಕೆಯ ಮೋಸಕ್ಕೆ ಒಳಗಾಗಿ ನಮ್ಮ ಜನ ಬಲು ಬಳಲಿದ್ದಾರೆ."

"ನಿಜ ಡಾಕ್ಟರ್. ಈಗೀಗ ಜನ ಜೀವನದಲ್ಲಿ ನೆಮ್ಮದಿ ಇಲ್ಲ." ದನಿಯಲ್ಲಿ ದುಗುಡದ ಛಾಯೆ ಹರಿದುಬಂತು.

"ಹೀಗಾಗಿಯೇ ದೇಶದ ನೆಮ್ಮದಿ ಕೆಟ್ಟಿತು. ಎಲ್ಲಿ ನೋಡಿದರೂ ಅತೃಪ್ತಿ ಮತ್ತು ಅಶಾಂತಿ."

"ದೇಶದ ಮೇಲೆ ಚೆಲ್ಲಿದ ಹೊಸ್ನು ಬೆಳೆ ಬರುವವರೆಗೆ ಒಂದಿಷ್ಟು ನೆಮ್ಮದಿ ಕೆಟ್ಟೀತಷ್ಟೆ. ಆನಂತರ ಎಲ್ಲಾ ಸರಿಹೋಗುತ್ತದೆ. ಅದುವರೆವಿಗೆ

ತಾಳಿಕೊಂಡವರು ಸವಿಯನ್ನು ಕಂಡಾರು."

...ಆಶಾ ಗೋಪುರ...!

ಸ್ವಲ್ಪ ಹೊತ್ತು ಇಬ್ಬರೂ ಮಾತಾಡಲಿಲ್ಲ. ಹಾದಿ ಸವೆದು ಇಬ್ಬರೂ ಕಾಫಿಮನೆಯನ್ನು ಸೇರಿದರು. ಮಾಣಿ ಕಾಫಿಯನ್ನು ತಂದು ಮುಂದಿಟ್ಟ. ಅಭ್ಯಾಸಬಲದಿಂದ ಅವರಿಗೆ ಏನು ಬೇಕೆಂಬುದನ್ನು ತಿಳಿದುಕೊಂಡಿದ್ದ ಅವನು ತಮಗೇನು ಬೇಕೆಂಬುದನ್ನು ಕೇಳುವ ಗೋಜಿಗೆಹೋಗದೆ ತಂದಿಟ್ಟಿದ್ದ.

"ಹೇಗಿದ್ದಾರೆ, ಶ್ರೀಮತಿ ಅಘೋರ್ ?"

"ಈಚೀಚೆಗೆ ಸ್ವಲ್ಪ ವಾಸಿ. ಸ್ವಲ್ಪ ಕಾಲ ಹಾಗೆ, ಸ್ವಲ್ಪ ಕಾಲ ಹೀಗೆ. ಅಂತೂ ಇಂತೂ ಚೇತರಿಸಿಕೊಳ್ಳುವ ಸೂಚನೆ ಇದೆ. ಹೇಗಾಗುತ್ತೋ ಕಾದು ನೋಡಬೇಕು."

"ಪಾಪ, ಇನ್ನಾದರೂ ಚೇತರಿಸಿಕೊಳ್ಳಲಿ."

"ಇನ್ನೂ ಸ್ವಲ್ಪ ಕಾಲಬೇಕು, ಈಗಲೇ ಏನೂ ಹೇಳುವುದಕ್ಕಾಗುವುದಿಲ್ಲ."

"ನಿಧಾನವಾಗಿ ಚೇತರಿಸಿಕೊಳ್ಳುವುದೇ ಒಳ್ಳೆಯದು."

"ಒಮ್ಮೊಮ್ಮೆ ನೀವೆಲ್ಲಾ ಬಂದುಹೋದುದೂ ಮಾತಾಡಿದುದೂ ಸಮರ್ಪಕವಾಗಿ ಹೇಳುತ್ತಾಳೆ. ಮತ್ತೊಮ್ಮೆ ಎಲ್ಲಾ ಕಲಸುಮೇಲೋಗರವಾಗಿರುತ್ತೆ."

"ಓಡಾಡಿಬರುವ ಮಕ್ಕಳಮೇಲೆ ತುಂಬ ಆಸೆಯಿದೆ. ನಿನ್ನೆ ನಾವು ಹೋದಾಗ ನಮ್ಮ ನಂದನ್‌–ನನ್ನು ಏಕೆ ಕರೆತರಲಿಲ್ಲ ಅಂತ ಕೇಳಿದ್ದೂ ಕೇಳಿದ್ದೆ. ಇನ್ನೊಮ್ಮೆ ಕರೆತರುವುದಾಗಿ ಹೇಳಿಬಂದಿದ್ದೇನೆ. ವಂದನಳಿಗೂ ಹೋಗಿಬರಬೇಕೆಂದು ತುಂಬ ಮನಸ್ಸು. ನಾಳೆ ಹೋಗಿ ಬರುವೆ."

"ನಾನು ಹೋದಾಗಲೆಲ್ಲ ನೋಡುವುದೇ ಕೈಕಡೆ. ತಿಲೋ ಇನ್ನೂ ಕೈ ಬೆರಳು ಹಿಡಿದುಕೊಂಡು ನಡೆದುಬರುವ ಪುಟ್ಟ ಹುಡುಗ ಎಂದೇ ಅವಳ ಭಾವನೆ ! ತಿಲೋ ಪಕ್ಕದಲ್ಲಿರುವಾಗಲೂ....ನನ್ನ ಪುಟ್ಟ ತಿಲೋ ಎಲ್ಲಿ ? ನನ್ನ ಮುದ್ದು ತಿಲೋ ಎಲ್ಲಿ? ಎನ್ನುತ್ತಾಳೆ."

"ನಿಜ....ಆ ಜ್ಞಾನ ವಿಶೇಷವೇ ವಿಶೇಷ."

"ಕ್ರಮಕ್ರಮೇಣ ಚೇತರಿಸಿಕೊಳ್ಳುವ ಸಾಧ್ಯತೆಯಿದೆ." ಮುಖದಲ್ಲಿ

ತುಸು ಪ್ರಸನ್ನಭಾವ ಮಿನುಗಿತು. ಕಷ್ಟಸುಖಗಳಲ್ಲಿ ಮಿಂದು ಮನಸ್ಸು ಹಣ್ಣಾಗಿತ್ತು. "ಅಷ್ಟಾದರೆ ಸಾಕು ಮದನ್." ಎಂದ ಅಘೋರ. ದನಿ ಎದೆಯಾಳದಿಂದ ಹರಿದುಬಂತು.

"ದೇವರಿದ್ದಾನೆ."

ಅಘೋರ ಮಾತಾಡಲಿಲ್ಲ. ಶೂನ್ಯ ದೃಷ್ಟಿ ಗೋಡೆಯ ಮೇಲೆ ಹರಿದಿತ್ತು.

"ಬಹಳ ಕಾಲದಿಂದ ಕಾದು ನೋಡಿದ್ದಿ–ತಪಸ್ಸು ಮಾಡಿದ್ದಿ. ಭಗವಂತ ನಿನ್ನ ಬಗ್ಗೆ ನಿರ್ದಯನಾಗಲಾರ ಘೋರ್." ಸಾಂತ್ವನ ನೀಡುವ ದನಿಯಲ್ಲಿ ನುಡಿದ ಮದನ್.

"ತುಂಬ ಥ್ಯಾಂಕ್ಸ್."

ಇಬ್ಬರೂ ನಗುಮುಖದಿಂದ ಕಾಫಿ ಹೀರಿ ಆಸ್ಪತ್ರೆಗೆ ಹೊರಟರು. ಇವರು ಆಸ್ಪತ್ರೆಯ ಮೆಟ್ಟಿಲು ಹತ್ತುತ್ತಿದ್ದಂತೆಯೇ ಹೊರಹೋಗಲಿದ್ದ ಜಾನಕೀರಾಂ ಎದುರಾದ.

"ಏನಪ್ಪಾ, ಎಲ್ಲಿಗೆ ಹೊರಟೆ?" ಹುಬ್ಬೇರಿಸಿ ಕೇಳಿದ ಅಘೋರ.

"ಮನೆಗೆ."

"ಇಷ್ಟು ಬೇಗನೆ?"

"ಮೈತ್ರೇಯಿಗೆ ಮೈಚೆನ್ನಾಗಿರಲಿಲ್ಲ. ಹೋಗುತ್ತಿದ್ದೇನೆ."

"ಹೆಂಡತಿಯ ಮೇಲೇನಾದರೂ ಪ್ರಯೋಗ ನಡೆಸಿದ್ದೀಯೋ ಹೇಗೆ?" ಮದನ್ ನಗೆ ಚಟಾಕಿ ಹಾರಿಸಿದ.

"ಹೇಗೆ ಹೇಳೋಣ? ಸುಪ್ರಸಿದ್ಧ ಗೈನಕಾಲಜಿಸ್ಟ್!" ಅಘೋರ ನಗುತ್ತಾ ದನಿಗೂಡಿಸಿದ.

"ಅದನ್ನೆಲ್ಲಾ ಅಘೋರ ಮಹಾಶಯರಿಗೆ ಬಿಟ್ಟುಬಿಟ್ಟಿದ್ದೇನೆ."

"ನಾನು ಅಷ್ಟುದೂರ ಹೋಗಲಿಲ್ಲಪ್ಪಾ."

ಮೂವರ ಮುಖದಲ್ಲೂ ನಗೆಮಲ್ಲಿಗೆಯರಳಿತು.

"ನಾಲ್ಕೈದು ದಿನಗಳಿಂದ ಒಂದೇಸಮನೆ ಅವಳಿಗೆ ಜ್ವರ ಬರುತ್ತಿದೆ."

"ಫ್ಲೂ ಇದ್ದಿರಬಹುದು."

"ಹೌದು."

"ಪಾಪ, ಹೋಗಿ ನೋಡು."

ಜಾನಕೀರಾಂ ನಸುನಕ್ಕು ಹೊರಹೋದ. ಇವರಿಬ್ಬರೂ ಒಳಗಡೆ ನಡೆದರು. ಕಾರಿಡಾರಿನಲ್ಲಿ ಹಾದಿಸಾಗುತಿತ್ತು. ಇದ್ದಕ್ಕಿದ್ದಂತೆ ಕೋಡ್ ಒಂಭತ್ತರ ಗಂಟೆ ಮೊಳಗಿತು. ಢನ್! ಢನ್! ಢನ್! ಢನ್! ಢನ್! ಇಬ್ಬರೂ ತಟ್ಟನೆ ನಿಂತರು. ಕಣ್ಣುಗಳು ತಕ್ಷಣ ಕೆಂಪು ದೀಪಗಳತ್ತ ಹೊರಳಿದುವು. ಆರನೆಯ ಜನರಲ್ ವಾರ್ಡನ್ನು ತೋರಿಸಿತು ಅದು...ಓ ಅದಿರುವುದು ಆ ತುದಿಯಲ್ಲಿ.

ಆದರೂ...ರಾಣಿ ಜಗತ್ತಾರಣಿಯ ತುರ್ತು ಕರೆ!

ಸರಿ. ಇಬ್ಬರೂ ಓಡತೊಡಗಿದರು. ಹತ್ತು ನಿಮಿಷಗಳ ಹಾದಿಯನ್ನು ಆರು ನಿಮಿಷಗಳಲ್ಲಿ ಕ್ರಮಿಸಿದರು. ಎಲ್ಲಿ ನೋಡಿದರೂ ಓಡುವವರೇ! ಕಿವಿ ಕಿವುಡಾಗುವಂತೆ ಪಾದರಕ್ಷೆಗಳ ಸದ್ದು. ಪಟ. ಪಟ. ಪಟ. ಪಟ.

ಆರನೆಯ ಜನರಲ್ ವಾರ್ಡಿನಲ್ಲಿ ಆರನೆಯ ಬೆಡ್ಡಿನಲ್ಲಿ ಆರು ವರ್ಷದ ಬಾಲಕನಿಗೆ ಜ್ವರವೇರಿ ಪ್ರಜ್ಞೆತಪ್ಪಿತ್ತು. ಮೈ ಹಬೆಯೇಳುವಂತಾ ಜ್ವರ. ತಕ್ಷಣ ಮಾತ್ರೆ ಔಷಧಿ ಇಂಜಕ್ಷನ್ನುಗಳ ಪ್ರಯೋಗವಾಯಿತು. ಮಗುವನ್ನು ತಣ್ಣೀರಿನಲ್ಲಿ ಅದ್ದಿ ಜ್ವರ ಇಳಿಸುವಲ್ಲಿ ಡಾಕ್ಟರುಗಳು ಕೃತಕೃತ್ಯರಾದರು. ಹುಡುಗ ಬಂದ ಗಂಡಾಂತರವನ್ನು ದಾಟಿ ಪಾರಾದ.

ಅಘೋರ ಕಣ್ಣುಗಳನ್ನು ಗಡಿಯಾರದ ಮೇಲೆ ಹೊರಳಿಸಿದ. ಹೊತ್ತು ಮೂರರ ಅಂಚನ್ನು ಮುಟ್ಟುವುದರಲ್ಲಿತ್ತು. ಹೊಟ್ಟೆಗೆ ಇನ್ನೂ ಹಿಟ್ಟಿಲ್ಲ. ಕಾಫಿ ಮನೆಯ ಹಾಳು ಕಾಫಿ ಹೊಟ್ಟೆಕಿಲುಬು ಹಿಡಿಸುವಂತೆ ಕಹಿ ರೂಪ ತಾಳಿ ಸಂಕಟ ಮೂಡಿಸಿತು; ಮಾರುಗಾಲು ಹಾಕಿ ತನ್ನ ಕೊಠಡಿಯನ್ನು ಸೇರಿ ಮುಖ ಮಜ್ಜನ ಮಾಡಿ ಊಟ ಮುಗಿಸಿದ.

....ಅದೇನು ಊಟವೇ? ನುಂಗಿದ್ದೂ ನುಂಗಿದ್ದೆ. ಇನ್ನು ಹಾಯಾಗಿ ಉಸಿರಾಡಬಹುದಲ್ಲಾ?...

ಒಂದೇ ಉಸುರಿಗೆ ತಿಂದು ಮುಗಿಸಿದ ಮೇಲೆ ತನ್ನ ಕೃತಿ ತನಗೇ ನಗು ತರಿಸಿತು. ತುಸು ವಿಶ್ರಾಂತಿಗಾಗಿ ಹಾಸಿಗೆಯ ಮೇಲೆ ಅಡ್ಡಾದ. ಬಳಿಯಲ್ಲಿನ ಮೇಜಿನ ಮೇಲಿಂದ ಕೈಗೊಂದು ಮಾಸಿಕವನ್ನೆತ್ತಿಕೊಳ್ಳಬೇಕೆನ್ನುವಷ್ಟರಲ್ಲಿ ಪುನಃ ಢನ್! ಢನ್! ಢನ್! ಢನ್! ಘಂಟಾ ನಿನಾದ.

ಎಲಾ ಇದರ! ಅಘೋರ ಹಾಸಿಗೆಯಿಂದ ಮೈಮುರಿದೆದ್ದ. ಕೈಯಲ್ಲಿದ್ದ ಮಾಸಿಕವನ್ನು ಮೇಜಿನ ಮೇಲೆ ಹಾಕಿ...ಸದ್ಯ ಊಟ ಮುಗಿದಿತ್ತು...ಎಂದು

ಕೊಂಡು ರೂಮಿನಿಂದ ಹೊರಬಿದ್ದ. ಕಣ್ಣುಗಳು ಕೆಂಪು ದೀಪದತ್ತ ಹರಿದುವು.

ಎಮರ್ಜನ್ಸಿ ವಾರ್ಡ್! ಸುಪ್ತವಾಗಿದ್ದ ಚೇತನಸಮಸ್ತವೂ ಬೆಂಕಿಯ ಹೊಳೆಯಂತೆ ಧಮನಿಗಳಲ್ಲಿ ಹರಿದಾಡತೊಡಗಿತು. ಅಘೋರ ಓಟಕಿತ್ತ.

ಮಟಮಟ ಮಧ್ಯಾಹ್ನ. ಮೂರೂವರೆ ಗಂಟೆ. ಡ್ಯೂಟಿಯ ಕಿರಿಯ ಡಾಕ್ಟರುಗಳ ವಿನಾ ಮತ್ತೆಲ್ಲರೂ ಮನೆಗೆ ಹೋಗಿದ್ದಾರೆ. ಹಿರಿಯ ಡಾಕ್ಟರುಗಳಲ್ಲಿ ಡ್ಯೂಟಿಗಾಗಿ ಉಳಿದಿದ್ದುದು ಅಘೋರ ಒಬ್ಬನೇ. ಸುಡುಬಿಸಿಲಿಗೆ ಮೈ ಮರೆತು ಆಸ್ಪತ್ರೆಗೆ ಆಸ್ಪತ್ರೆಯೇ ನಿದ್ದೆ ಹೋಗಿತ್ತೋ ಏನೋ...ಕೋಡ್ ನಂಬರ್ ಒಂಭತ್ತು ಎಲ್ಲರನ್ನೂ ಒಮ್ಮೆಲೇ ಬಡಿದೆಬ್ಬಿಸಿತು. ಅಘೋರ ಓಡುತ್ತಲೇ ಹೋದ. ಹಿಂದೆಯೇ ಡ್ಯೂಟಿಯಲ್ಲಿದ್ದ ತರುಣ ಡಾಕ್ಟರುಗಳು ಓಡೋಡಿ ಬಂದರು. ಸೇವಿಕೆಯರು ಔಷಧಿಗಳ ಟ್ರೇಯನ್ನು ಘಣಘಣ ಸದ್ದಿನೊಡನೆ ತೆಗೆದುಕೊಂಡು ಓಡಿಬಂದರು. ಸಹಾಯ ಹಸ್ತಕೂಡಿಬಂದರೂ ಅವು ಕೆಲವೇ ಕೆಲವು.

ಹೋಗಿ ನೋಡಿದರೆ ಡಿಸೆಂಟರಿ (Dysentry) ಆದ ಇಳಿ ವಯಸ್ಸಿನ ವ್ಯಕ್ತಿ ಹಾಸಿಗೆಯ ಮೇಲೆ ಮಲಗಿತ್ತು. ಅತಿ ರಕ್ತ ಸ್ರಾವವಾದುದರೊಂದಿಗೆ ಜ್ವರವೇರಿ ಪ್ರಜ್ಞೆತಪ್ಪಿತ್ತು. ಮೈಕಾವಿಗೆ ಅರಳು ಹಾಕಿದರೂ ಸಿಡಿಯುವಂತಿತ್ತು. ಅಘೋರ ಮೈಮುಟ್ಟಿನೋಡಿದ. ಹೃದಯ ನಾಡಿಗಳನ್ನು ನೋಡಿದ. ಸ್ಥಿತಿ ಏರುಪೇರಾಗಿತ್ತು. ರಕ್ತ ಒತ್ತಡವೂ ಸಮರ್ಪಕವಾಗಿರಲಿಲ್ಲ. ಕರೆತಂದವರು ಕಂಗಾಲಾಗಿದ್ದರು.

ಸೂಜಿ ಮದ್ದುಗಳನ್ನು ಕಿರಿಯ ವೈದ್ಯರುಗಳು ತುಂಬುತ್ತಿದ್ದಂತೆ ಅಘೋರ ಚುಚ್ಚತೊಡಗಿದ. ಪುನಃಪುನಃ ರಕ್ತದ ಗೆಡ್ಡೆಗೆಡ್ಡೆಗಳೇ ಬೇಧಿಯಾದುವು. ಅಘೋರ ಮೃತ್ಯುವಿನೊಡನೆ ಹೋರಾಟಕ್ಕಿಳಿದ. ಸೂಜಿಮದ್ದು ಔಷಧ ಆಕ್ಸಿಜನ್ ಯಂತ್ರ ಡ್ರಿಪ್‌ಗಳ ಸೀಸೆ ರಕ್ತ ಒತ್ತಡದ ಯಂತ್ರ ಎಲ್ಲವೂ ಕಾರ್ಯನಿರತವಾದುವು. ಅಘೋರ ಕಾರ್ಯಕರ್ತನಾದ.

ಅಂದು ರಾತ್ರಿಯವರೆಗೆ ನಡೆಸಿದ ಅವ್ಯಾಹತ ಹೋರಾಟದಿಂದ ವ್ಯಕ್ತಿ ಸಾವಿನಂಚಿನಿಂದ ಎರಡು ಹೆಜ್ಜೆ ಹಿಮ್ಮೆಟ್ಟಿ ನಿಂತಿತು. ಅನಂತರ ಉತ್ತರಾರ್ಧ ಕಾರ್ಯವನ್ನು ಅಂದಿನ ರಾತ್ರಿ ಡ್ಯೂಟಿಗೆ ನಿಯೋಜಿತರಾಗಿದ್ದ ಡಾ|| ಸುಧೀರ್ ಡಾ|| ಬಸಂತರ ತಂಡಕ್ಕೆ ವಹಿಸಿ ತುಸು ಹಾಯಾಗಿ ಉಸಿರಾಡಿದ. ದಣಿದ

ನ್ನೈ ವಿಶ್ರಾಂತಿಯನ್ನು ಬಯಸಿತ್ತು. ಮನೆಯ ಹಾದಿ ಹಿಡಿದ. ಅವಿಶ್ರಾಂತ ವಾಗಿ ದುಡಿದ ವ್ಯಕ್ತಿ ಶಾಂತಿಯನ್ನು ಬಯಸಿತು.

ಮರುದಿನ ಆಸ್ಪತ್ರೆಗೆ ಬಂದವನೇ ಎಮರ್ಜನ್ಸಿ ವಾರ್ಡಿಗೆ ಪ್ರಥಮ ಭೇಟಿ ನೀಡಿದ. ವ್ಯಕ್ತಿ ಮೃತ್ಯುವಿನ ವಜ್ರ ಮುಷ್ಟಿಯಿಂದ ಬಿಡುಗಡೆ ಹೊಂದಿದ್ದರೂ, ಅವರ ಶಕ್ತಿಸಮಸ್ತವನ್ನೂ ಮೃತ್ಯುವಿನ ಕರಾಳಕ್ಕೆ ಹಿಂಡಿಬಿಟ್ಟಿತ್ತು. ಕುಸಿದು ಬಿದ್ದಿದ್ದ ರಕ್ತ ಒತ್ತಡ ಸ್ವಲ್ಪ ಸ್ವಲ್ಪವಾಗಿ ಮೇಲೇರತೊಡಗಿತ್ತು.

....ಇಷ್ಟಾದರೂ ಆಯಿತಲ್ಲಾ...ಎನ್ನಿಸಿದಾಗ ಎದೆ ಹಗುರವಾಯಿತು. ವಾರ್ಡಿನಿಂದ ಹೊರಗೆ ಕಾಲಿಡುತಿದ್ದಂತೆ ಡಾ|| ಲಾರೆನ್ಸ್ ಡಾ|| ಗಫಾರ್ ಎದು ರಾದರು.

"ಹೇಗಿದ್ದಾರೆ ಪೇಷಂಟ್ ?" ಡಾ|| ಗಫಾರ್ ಕೇಳಿದರು.

"ಪರವಾಯಿಲ್ಲ, ಈಗೀಗ ಚೇತರಿಸಿಕೊಳ್ಳುತಿದ್ದಾರೆ."

ಅವರಿಬ್ಬರೂ ಒಳಹೋದರು. ಹಿರಿಯರಿಗೆ ನಮಿಸಿ ಅಘೋರ ಹೊರ ಬಿದ್ದ. ಯೋಚನೆಯ ಮಂಪರದಲ್ಲಿ ಹತ್ತು ಹೆಜ್ಜೆ ಸಾಗಿತು. ದೂರದಲ್ಲಿ ಎದುರುಗಡೆಯಿಂದ ರತನ್ ಚಂದ್ರಿಕಳೊಡನೆ ಬರುತ್ತಿದ್ದುದು ಕಾಣಬಂತು. ಹತ್ತಿರ ಬರುತ್ತಲೂ ಅಘೋರ ಹುಬ್ಬೇರಿಸಿ ಕೇಳಿದ "ಏನು ವಿಶೇಷ ?"

"ಚಂದ್ರಿಕಾ ಗರ್ಭಿಣಿ, ನಾಲ್ಕು ತಿಂಗಳು." ನ್ಮೈಯೆಲ್ಲಾ ಮನಸ್ಸಾಗಿ ಬಿತ್ತರಿಸಿದ ರತನ್.

ಚಂದ್ರಿಕಳ ಮುಖ ಹೂವಿನಂತರಳಿತು.

"I wish you good luck Doctor !"

"Thank you Doctor !"

ಮೂವರ ಮುಖದಲ್ಲೂ ಮಂದಹಾಸ ತಾಂಡವವಾಡಿತು. ಅಘೋರ ಮುಂದುವರಿದ. ಯೋಚನೆ ದಿನಚರಿಯ ಕಡೆಗೆ ಹರಿಯಿತು...ಎಷ್ಟೋ ಬಾರಿ ನಾವೇ ಮಾಡಿದೆವೆಂದು ಹೆಮ್ಮೆಪಟ್ಟುಕೊಳ್ಳುವುದು ಸಹಜ. ಆದರೆ.... ಹೆಜ್ಜೆಹೆಜ್ಜೆಯಲ್ಲಿಯೂ ನಾವು ಪ್ರಕೃತಿಯ ಕೈಗೊಂಬೆಗಳು...ಯೋಚನೆ ಮೂಡಿ ಬಂದೊಡನೆಯೇ ಗೀತೋಪದೇಶ ಮನೋ ಮಂದಿರದಲ್ಲಿ ವೀಣೆ ಯಂತೆ ಮಿಡಿಯಿತು.

"ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್ ।
ಕಾರ್ಯತೇ ಹ್ಯವಶಃ ಕರ್ಮ ಸರ್ವಃ ಪ್ರಕೃತಿಜೈರ್ಗುಣೈಃ ॥"

೦ ೦ ೦ ೦

"ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ ।
ಅಹಂಕಾರವಿಮೂಢಾತ್ಮಾ ಕರ್ತಾಹಮಿತಿ ಮನ್ಯತೇ ॥"

ಅಘೋರ ತಲೆಬಾಗಿ ಹೆಜ್ಜೆ ಹಾಕಿದ.

ಅಧ್ಯಾಯ

೩೮

ಅಘೋರ ಮೊಂಟಲ್ ಆಸ್ಪತ್ರೆಯನ್ನು ಮುಟ್ಟಿದೊಡನೆ ಕಣ್ಣುಗಳನ್ನು ಗಡಿಯಾರದತ್ತ ಹೊರಳಿಸಿದ. ಹೊತ್ತು ಐದರ ಅಂಚನ್ನು ದಾಟುವುದರ ಲ್ಲಿತ್ತು. ಸಂಜೆಯ ವಾತಾವರಣ ಹಿತಕರವಾಗಿತ್ತು. ತಣ್ಣನೆಯ ತಿಳಿಗಾಳಿ ಯನ್ನು ಆಸ್ವಾದಿಸುತ್ತಾ ಆಸ್ಪತ್ರೆಯ ಮೆಟ್ಟಲನ್ನೇರಿದ.

ಒಳ ಅಂಗಳದ ಮೆಟ್ಟಿಲಿನ ಮೇಲೆ ಅರವಿಂದಾ ಕುಳಿತಿದ್ದಾಳೆ. ಬಳಿ ಯಲ್ಲಿ ಎಂಟು ಹತ್ತು ವರುಷದ ಹುಡುಗಿಯರಿಬ್ಬರು ಉಡಿಯಲ್ಲಿ ಹೂವನಿಟ್ಟು ಕೊಂಡು ನಿಂತಿದ್ದಾರೆ. ಬಾಚಿ ಶುದ್ಧಿಗೊಳಿಸದ ಅವರ ತಲೆಗೂದಲು ಅಂಟು ಅಂಟಾಗಿ ಮುದ್ದೆಗಟ್ಟಿ ಇಳಿಬಿದ್ದಿತ್ತು. ಮಾಸಿದ ಬಟ್ಟೆ ಕೊಳಕು ಮೈ ಹುಡುಗಿಯರ ಸ್ಥಿತಿಗತಿಯನ್ನು ಸೂಚಿಸುತಿದ್ದುವು. ಅಘೋರ ಹೋಗಿ ಬಳಿ ಯಲ್ಲಿ ನಿಂತುಕೊಂಡ.

ಅರವಿಂದಾ ಒಮ್ಮೆ ತಲೆಯೆತ್ತಿ ನೋಡಿ ಪುನಃ ಮಕ್ಕಳ ಕಡೆ ಗಮನ ಹರಿಸಿದಳು. ಅವರಿಬ್ಬರೂ ಅಲ್ಲಿಯ ಮಾಲಿಯ ಮಕ್ಕಳೆಂಬುದನ್ನು ಅಘೋರ ನೋಡಿದೊಡನೆಯೇ ಅರಿತುಕೊಂಡ.

"ನಿನಗೆ ಹೂ ಕಟ್ಟಲು ಬರುತ್ತದೆಯೇ ?" ಅರವಿಂದಾ ಕೇಳಿದಳು.

"ಬರುತ್ತೆ ಅವ್ವಾ."

"ಕಟ್ಟು ನೋಡೋಣ."

"ಕಟ್ಟಿದೀನಿ, ನೋಡಿ ತಾಯಿ."

ಹುಡುಗಿ ಉಡಿಯಿಂದ ಕಟ್ಟಿದ ಹೂವನ್ನು ತೆಗೆದು ತೋರಿದಳು. ಕಟ್ಟಿದುದು ಸರಿಯಾಗಿರದೆ ಹೂವುಗಳು ಅಡ್ಡಾದಿಡ್ಡಿಯಾಗಿದ್ದುವು.

"ಉಹೂ, ನಿನಗೆ ಸರಿಯಾಗಿ ಕಟ್ಟಲು ಬರುವುದಿಲ್ಲ. ಸೊಟ್ಟ ಸೊಟ್ಟಗೆ ಅಡ್ಡಾದಿಡ್ಡಿ ಕಟ್ಟಿದ್ದಿ, ನನ್ನ ತಿಲೋ ಸೊಗಸಾಗಿ ಕಟ್ಟುತ್ತಾನೆ!" ಕಿಸಕ್ಕನೆ ಹಲ್ಲುಬಿಟ್ಟಳು ಅರವಿಂದಾ.

"ನಾನು ಈಗೀಗಷ್ಟೆ ಕಲಿಯುತ್ತಿದ್ದೇನೆ." ಹುಬ್ಬೇರಿಸಿ ನಸು ನಗುತ್ತ ನುಡಿದಳು ಹುಡುಗಿ.

"ನಾನು ಹೇಳಿ ಕೊಡಲೇ ?"

"ಹ್ಞೂ."

"ಕೂತುಕೊ, ಇಲ್ಲಿ."

ಹುಡುಗಿಯರಿಬ್ಬರೂ ಕುಳಿತುಕೊಂಡರು. ಅರವಿಂದಾ ಹೂಗಳನ್ನು ಕಟ್ಟುವ ವಿಧಾನವನ್ನು ತೋರುತ್ತಾ ಕಟ್ಟ ತೊಡಗಿದಳು. ಅಘೋರ ಕಣ್ಣಾಡಿಯೆ ನೋಡುತ್ತಾ ನಿಂತ. ಈಚೆಗೆ ಅವಳೆಂದೂ ಅಷ್ಟು ಹೊತ್ತು ಶಾಂತವಾಗಿದ್ದುದಿರಲಿಲ್ಲ.

ಕೆಂಪು ಹೂವನ್ನು ಮುಂದಿಟ್ಟು ಹುಡುಗಿ ಅಂದಳು "ಅದಾದ ಮೇಲೆ ಕೆಂಪು ಎಸಳು ಹಾಕಿ ಕಟ್ಟಿರಿ."

"ಕನಕಾಂಬರಕ್ಕೂ ಕೆಂಪು ಗುಲಾಬಿಗೂ ಬಣ್ಣ ಸರಿ ಹೊಂದುವುದಿಲ್ಲ. ಇನ್ನಿಷ್ಟು ಮಲ್ಲಿಗೆ ಹೂ ಕಟ್ಟಿದ ನಂತರ ಗುಲಾಬಿ ಎಸಳು ಸೇರಿಸಿದರೆ ಚೆನ್ನ."

"ನೀವು ಕಟ್ಟಿದ ಮಾಲೆ ಚೆನ್ನಾಗಿದೆ ನಾನು ಕಟ್ಟಿದ್ದು ಸೊಟ್ಟ ಸೊಟ್ಟ."

ಹುಡುಗಿಯರಿಬ್ಬರೂ ಕಿಲಕಿಲನೆ ನಕ್ಕರು.

"ನಾಲ್ಕು ದಿನ ಕಟ್ಟಿದರೆ ನಿಮಗೂ ಸರಿಯಾಗಿ ಬರುತ್ತೆ. ದಿನಾ ಹೂವನ್ನು ಇಲ್ಲಿಯೇ ತಾ. ನಾನು ಹೇಳಿಕೊಡುವೆ."

ಸರಸರನೆ ಹೂ ಕಟ್ಟುತ್ತಲೇ ನುಡಿದಳು ಅರವಿಂದಾ. ಚಿಕ್ಕ ಹುಡುಗಿ ಆಸಕ್ತಿಯಿಂದ ಕಣ್ಣುಗಳನ್ನರಳಿಸಿ–"ನಾನೂ ಕಲಿಯಬೇಕು."

"ಸರಿ ಮತ್ತೆ. ಇಬ್ಬರೂ ಇಲ್ಲಿಗೆ ತೆಗೆದುಕೊಂಡು ಬನ್ನಿ."

"ನಾಳೆ ಬೆಳಗ್ಗೆ ತರಲೇ ? ಬೆಳಗ್ಗೆ ಹೂ ಕಟ್ಟುವುದಿದೆ."

"ಹ್ಞೂ...ಆದೀತು."

"ನಿಮಗೆ ಹೊಲಿಯುವ ಕೆಲಸ ಇರುವುದಿಲ್ಲವೇ ?"

"ಊಹೂ ನನಗದು ಇಷ್ಟವಿಲ್ಲ. ಇದೇ ಚೆನ್ನ, ಅಲ್ಲವೇ ಇಂದ್ರೀ ?"

"ಹೌದಪ್ಪಾ, ಹೂ ಕಟ್ಟುವುದೆಂದರೆ ಯಾರಿಗೆ ಇಷ್ಟವಿಲ್ಲ ?"

"ನಮ್ಮ ಮನೆಯಲ್ಲಿ ದಿನವೂ ಒಂದು ಬುಟ್ಟಿ ಹೂ ಕಟ್ಟುವುದಿರುತ್ತೆ."

"ಅಷ್ಟು ತೆಗೆದುಕೊಂಡು ಬಾ. ನಾವೇ ಕಟ್ಟೋಣ. ಆಯಿತೇ?" ಹುಬ್ಬೇರಿಸಿ ಆಸಕ್ತಿಯಿಂದ ಕೇಳಿದಳು ಅರವಿಂದಾ.

"ಎಲ್ಲಾನು ನೀವೇ ಕಟ್ತೀರಾ ತಾಯಿ?"

"ಮೂವರೂ ಕಟ್ಟೋಣ. ನಿಮಗೂ ಹೇಳಿಕೊಡುತೆ."

ಹುಡುಗಿಯರಿಬ್ಬರು ಉಡಿಯಲ್ಲಿದ್ದ ಬಿಡಿ ಹೂವನ್ನು ನೆಲದ ಮೇಲೆ ಸುರಿದರು. ಅರವಿಂದಾ ಬಗೆ ಬಗೆಯ ಹೂಗಳನ್ನು ಸೇರಿಸಿ ಏರು ಪೇರು ಇಲ್ಲದಂತೆ ಕಟ್ಟ ತೊಡಗಿದಳು. ಬಣ್ಣಗಳನ್ನು ಒಪ್ಪುವಂತೆ ಜೋಡಿಸಿ ಅಂದವಾದ ಹೂಮಾಲೆ ರಚಿಸುತ್ತಿದ್ದ ಅವಳ ರೀತಿಯನ್ನು ಅಘೋರ ಅಚ್ಚರಿಯ ಕಣ್ಣುಗಳಿಂದ ನಿಟ್ಟಿಸಿದ.

ಆಸ್ಪತ್ರೆಯ ನೂತನ ವಿಭಾಗಕ್ಕೆ ವರಾಂಡದಲ್ಲಿ ಹಾದು ಹೋಗುತ್ತಿದ್ದ ಡಾ|| ಜಗಜೀವನ್ ಅಘೋರನನ್ನು ನೋಡುತ್ತಲೂ ಇತ್ತಲೇ ಬಂದರು. ಅಘೋರ ಎರಡೂ ಕೈಗಳನ್ನು ಜೋಡಿಸಿದ. ಅವರು ಹಸನ್ಮುಖದಿಂದ ಪ್ರತಿವಂದಿಸಿ—

"ನೋಡಿ ನಿಮ್ಮವರಿಗೆ ಕೈಗಾರಿಕೆಯಲ್ಲಿ ಸ್ವಲ್ಪವೂ ಮನಸ್ಸಿಲ್ಲ. ಏನೋ ಅಷ್ಟಿಷ್ಟು ಕೈಯಾಡಿಸಿದರೂ ಎಲ್ಲವನ್ನೂ ಅಲ್ಲಿಂದಲ್ಲೇ ಬಿಟ್ಟು ಎದ್ದು ಬಿಡುತ್ತಾರೆ. ಎಲ್ಲದಕ್ಕೂ ಕೈಹಾಕುವುದಷ್ಟೆ. ಯಾವುದರಲ್ಲೂ ಪೂರ್ಣ ಆಸಕ್ತಿ ಇನ್ನೂ ಬರಲಿಲ್ಲ."

ಬಳಿಯಲ್ಲಿದ್ದ ದಾದಿಯೆಂದಳು "ಅವರಿಗೆ ತೋಟಗಾರಿಕೆಯಲ್ಲಿ ಆಸಕ್ತಿಯುಂಟು. ಕಳೆ ಕೀಳುವುದು ಕಸಿ ಮಾಡುವುದು ಚೆನ್ನಾಗಿ ಗೊತ್ತು."

"ಹಾಗೆ ಮಾಡುವಾಗ ಅಡ್ಡಿ ಮಾಡಬೇಡ. ಅವರಿಷ್ಟಕ್ಕೆ ಬಿಟ್ಟುಬಿಡು."

ಡಾ|| ಜಗಜೀವನ್ ದಾದಿಗೆ ತಿಳುವಳಿಕೆ ನೀಡಿ ಅಘೋರನಿಗೆಂದರು

"ಈಗೀಗ ದಿನೇ ದಿನೇ ಸ್ವಲ್ಪಸ್ವಲ್ಪವಾಗಿ ಚೇತರಿಸಿಕೊಳ್ಳುತ್ತಿದ್ದಾರೆ. ಕ್ರಮೇಣ ಪೂರ್ಣಗುಣ ಹೊಂದಲಿಕ್ಕೂ ಸಾಕು."

"ಇಲ್ಲಿ ನೋಡಿದಿರೇನು?" ಅಘೋರ ಉತ್ಸಾಹದಿಂದ ಅಂದ.

ಅಘೋರನ ನುಡಿ ಕೇಳಿ ಡಾ|| ಜಗಜೀವನ್ ಅವಳತ್ತ ಕಣ್ಣು ಹೊರಳಿಸಿದರು. ಹೂಮಾಲೆ ಅಂದವಾಗಿ ಮೈ ತಳೆಯುತಿತ್ತು. ನೋಡಿ ಕಣ್ಣರಳಿಸಿದರು. ಇಬ್ಬರೂ ನಸು ದೂರದಲ್ಲಿ ನಿಂತು ಇತ್ತಲೇ ಗಮನವಿಟ್ಟರು.

ಅರವಿಂದಾ ಒಮ್ಮೆ ಅತ್ತ ದಿಟ್ಟಿ ಹರಿಸಿದರೂ ಪುನಃ ಹೂ ಕಟ್ಟುವುದರಲ್ಲಿ ತನ್ಮಯಳಾದಳು. ಹೂ ಕಟ್ಟುವುದರಲ್ಲಿ–ಬಣ್ಣಗಳನ್ನು ಹೊಂದಿಸುವುದರಲ್ಲಿ ಯಾವ ಲೋಪ ದೋಷವೂ ಇರಲಿಲ್ಲ.

"ಅವಳಿಗೆ ಹಿತವಾದುದರಲ್ಲೇ ಅವಳನ್ನು ತೊಡಗಿಸುವುದು ಲೇಸು."

"ಹಾ, ಅದೂ ಕೊನೆಗೆ ಹೆಚ್ಚಾಗಬಾರದು. ಹೆಚ್ಚಾದರೆ ಜುಗುಪ್ಸೆ ತಂದು ಬಿಡುತ್ತದೆ. ಎಲ್ಲದರಲ್ಲೂ ಮಿತಿ ಇರುವುದು ಒಳ್ಳೆಯದು ಡಾಕ್ಟರ್." ಎಂದರು ಜಗಜೀವನ್.

ದಾದಿಯು ಕುರ್ಚಿಗಳನ್ನು ತಂದಿಟ್ಟಳು. ಹಚ್ಚ ಹಸುರಿನ ಮೆತ್ತೆಯ ಮೇಲೆ ಅಡ್ಡಾಡುವುದು ಹಿತವೆನಿಸಿದುದರಿಂದ ಇಬ್ಬರೂ ಅಲ್ಲಿಂದಲೇ ಅರವಿಂದಳ ಮೇಲೆ ಗಮನವಿಟ್ಟುಕೊಂಡು ಅಡ್ಡಾಡ ತೊಡಗಿದರು. ಒಂದೆರಡು ಬಾರಿ ಅಕಾರಣವಾಗಿ ಅವಳು ನಕ್ಕಳು. ಒಮ್ಮೆ ಹಲ್ಕಿರಿದು ಅಣಕಿಸಿದಳು. ಹೂ ಮಾಲೆ ಮಾರುದ್ದವಾಗುತ್ತಲೂ ಅವಳೆಂದಳು "ಚಂದ್ರೀ ನನಗೆ ಸಾಕಾಯಿತು. ಇನ್ನು ನೀನೇ ಕಟ್ಟು."

ಹೂಮಾಲೆಯನ್ನು ಅಷ್ಟಕ್ಕೇ ಬಿಟ್ಟು ಅಘೋರನೆಡೆಗೆ ದಿಟ್ಟಬೀರಿ ಕಿರುನಗೆ ನಕ್ಕು ಮೇಲೇಳುವಾಗ ನೆಲಕ್ಕೆ ಅಂಗೈಯೂರಿ ಎದ್ದಳು. ಉಟ್ಟ ಸೀರೆ ಅಸ್ತವ್ಯಸ್ತವಾಗಿತ್ತು. ದಾದಿ ಸೆರಗು ಸರಿಮಾಡಿ ಮುದುರಿದ ನಿರಿಯನ್ನು ನೀವಿ ಮಡಚಿದ ಅಂಚನ್ನು ಸರಿಪಡಿಸಿದಳು.

ಅಘೋರ ಬಳಿಗೆ ಬಂದು ಮೆಲುದನಿಯಲ್ಲಿ ಅಂದ.

"ಬಾ, ಅರೂ ಸ್ವಲ್ಪ ಸುತ್ತಾಡಿ ಬರೋಣ. ಸದಾ ಕುಳಿತೇ ಇದ್ದರೆ ಮೈಭಾರ."

"ಊಹೂ."

"ಇಲ್ಲೇ ಹೂದೋಟದಲ್ಲಿ ಅಡ್ಡಾಡೋಣ ಅರೂ."

"ಹೂದೋಟದಲ್ಲೇ ಇದ್ದೇವಲ್ಲಾ. ಇನ್ನೇನು?" ದಿಟ್ಟಿ ಎತ್ತಲೋ ಹರಿದಿತ್ತು.

"ಇನ್ನೂ ಕೊಂಚ ದೂರ. ಓ....ಆ ಮರದಾಚೆಯವರೆವಿಗೆ?"

"ಊಹೂ.......ಊಹೂ." ಸ್ವಲ್ಪ ತಡೆದು ಪುನಃ ಅಂದಳು "ತಿಲೋ ಬರಲಿ."

ಅರವಿಂದಾ ಹುಲ್ಲಿನ ಮೇಲೆ ಕುಳಿತು ಕೊಂಡು ಸೆರಗಿನಿಂದ ಮುಖ ಮುಚ್ಚಿಕೊಂಡಳು. ಡಾ|| ಜಗಜೀವನ್ ಅವಳನ್ನೇ ನೋಡುತ್ತಿದ್ದರು. ಅವಳು ಗಳಿಗೆ ಕಾಲ ತಡೆದು ಅನಂತರ–"ಚಂದ್ರೀ....ಚಂದ್ರೀ."

ಹೂವನ್ನು ಜೋಡಿಸಿಕೊಳ್ಳುತಿದ್ದ ಹುಡುಗಿ ದನಿ ಕೇಳಿ ಇತ್ತಲೇ ಬಂದಳು....ಮಕ್ಕಳ ಮೇಲೆ ಅದೆಷ್ಟು ಪ್ರೇಮ ?...ಅಘೋರ ಕಣ್ಣರಳಿಸಿದ.

"ನಾಳೆ ಕಾಲೇಜಿಗೆ ಹೋಗುವಾಗ ನನಗೊಂದು ಹೂಮಾಲೆ ಬೇಕು. ಕೊಡುತ್ತೀಯಾ ?"

"ನಿಮಗೆಷ್ಟು ಮಾರು ಬೇಕು ?"

"ಎರಡು ಮಾರು."

"ಅಷ್ಟೇಕೆ ನಿಮಗೆ ?" ಹುಡುಗಿ ಕಣ್ಣರಳಿಸಿದಳು.

"ನಾಳೆ ಅಲ್ಲಿ ಸರಸ್ವತಿ ಪೂಜೆ ಕಣೆ !" ತಕ್ಷಣ ಅಘೋರನೆಡೆಗೆ ತಿರುಗಿ "ಅಘೂ, ನಾಳೆ ಹಬ್ಬ. ನೀವು ಬರುತ್ತೀರಾ ?"

"ಎಲ್ಲಿ ಅರೂ ?"

"ಕಾಲೇಜಿನಲ್ಲಿ."

"ಹ್ಞೂ, ಬರುವೆ."

ಹುಡುಗಿ ಕೇಳಿದಳು "ಈಗಲೇ ಹೂ ಕೊಡಲೇ?"

"ಹ್ಞೂ ಈಗಲೇ ಬೇಕು."

ಹೂವಿದ್ದಲ್ಲಿಗೆ ಓಡಿ ಹೋಗಿ ಹುಡುಗಿ ಎರಡು ಮಾರು ಹೂ ಮಾಲೆಯನ್ನು ತಂದು ಮುಂದೆ ಹಿಡಿದಳು. ಅದನ್ನು ತೆಗೆದುಕೊಂಡು ತಾನೇ ಮಾಲೆ ಹಾಕಿಕೊಂಡು ಗಟ್ಟಿಯಾಗಿ ಕಿಲಕಿಲನೆ ನಕ್ಕಳು. ಹುಡುಗಿಯೂ ಅವಳನ್ನೇ ನಿಟ್ಟಿಸಿ ನೋಡಿ ಕಿಲಕಿಲನೆ ನಗ ತೊಡಗಿದಳು. ಅರವಿಂದಾ ಹಲ್ಕಿರಿದು–

"ನೋಡಿಲ್ಲಿ...ಚಂದ್ರೀ !"

ಹುಡುಗಿ ಬಿದ್ದೂ ಬಿದ್ದೂ ನಕ್ಕು "ನೀವೇ ಸರಸ್ವತಿಯೇನು ?"

"ನಾನು ?"

"ಹ್ಞೂ, ನೀವೇ !" ಕಣ್ಣರಳಿಸಿದಳು ಹುಡುಗಿ.

"ನಾನು ರಾಣಿ !"

ಹುಡುಗಿಯರಿಬ್ಬರೂ ಕಿಲಕಿಲನೆ ನಕ್ಕರು. ದಾದಿ ಅವಳ ಕೊರಳಿನಿಂದ

ಹೂಹಾರವನ್ನು ತೆಗೆಯಲನುವಾದಾಗ ಅರವಿಂದಾ ತಡೆದು ಅಂದಳು "ಛೀಃ! ಛೀಃ! ಚೆನ್ನಾಗಿದೆ ನಾನೇ ಕಟ್ಟಿದ್ದು."

ಅಘೋರನ ಮುಖ ಮುದುಡಿಕೊಂಡಿತು. ದಾದಿಗೆಂದ "ಹಾಗೇ ಇರಲಿ ಬಿಡು."

ಚಂದ್ರಿ ಕಾಸಿಗಾಗಿ ಮಿಕಿ ಮಿಕಿ ನೋಡಿದಳು. ಅಘೋರ ಅವಳ ಕೈಗೆ ಕಾಸನ್ನಿಟ್ಟು ಹೇಳಿದ "ದಿನವೂ ಅಮ್ಮಾವರಿಗೆ ಬಿಡಿ ಹೂ ತಂದುಕೊಡು. ಅವರೇ ಕಟ್ಟಲಿ."

"ಒಂದೊಂದು ಸಲ ಕಟ್ಟಿಕೊಡುತ್ತಾರೆ. ಒಂದೊಂದು ಸಲ ಎಲ್ಲಾ ಹಿಸುಕಿ ಹಾಳು ಮಾಡುತ್ತಾರೆ. ಸ್ವಾಮಿ."

"ಏನಾದರೂ ಮಾಡಿಕೊಳ್ಳಲಿ. ಹೇಗೂ ನಿನಗದರ ಕಾಸು ಬರುತ್ತದೆ."

ಹುಡುಗಿ ತಲೆಯಲ್ಲಾಡಿಸಿ ಸಮ್ಮತಿ ಸೂಸಿ ಅಲ್ಲಿಂದ ಕಾಲ್ತೆಗೆದಳು. ಅವಳು ಹತ್ತು ಹೆಜ್ಜೆ ಹೋಗುವುದರೊಳಗಾಗಿ ಅರವಿಂದಾ ಕೂಗಿದಳು "ಚಂದ್ರೀ, ಚಂದ್ರೀ!".

ಅವಳು ಓಡಿ ಬಂದು ಕೇಳಿದಳು.

"ಏನು ತಾಯಿ?"

"ಈಗ ಮನೆಗೆ ಹೋಗಬೇಡ."

"ಹೋಗದಿದ್ದರೆ ರಾತ್ರಿ ಊಟ ಮಾಡಬೇಕಲ್ಲ?"

"ದಾದಿ ಇಲ್ಲೇ ಊಟ ಕೊಡುತ್ತಾಳೆ."

ಹುಡುಗಿ ಮಾತಾಡದೆ ತುಸು ನಿಂತಳು.

"ಇಂದ್ರಿ ಎಲ್ಲಿ?"

"ಓ...ಅಲ್ಲಿ. ಆ ಮರದ ಬುಡದಲ್ಲಿ ನಿಂತಿದ್ದಾಳೆ, ನೋಡಿ."

ಅರವಿಂದಾ ಅತ್ತ ಕಡೆ ಕತ್ತು ಆನಿಸಿ ನೋಡಿದಳು. ಆಗಲೇ ಹತ್ತು ಮಾರು ಹೋಗಿದ್ದ ಅವಳು ಅಕ್ಕನಿಗಾಗಿ ಕಾಯುತ್ತಾ ನಿಂತಿದ್ದಳು. ಚಪ್ಪಾಳೆ ತಟ್ಟಿ ಕೈ ಬೀಸಿ ಕರೆದಳು ಅರವಿಂದಾ. "ಇಂದ್ರೀ, ಇಂದ್ರೀ!"

ದನಿ ಕೇಳಿ ಅವಳೂ ಇತ್ತ ಕಡೆ ಬಂದಳು ಕೊರಳಲ್ಲಿದ್ದ ಹೂವಿನ ಹಾರವನ್ನು ಹರಿದು ತುಂಡು ತುಂಡು ಮಾಡಿ ಇಬ್ಬರಿಗೂ ಕೊಟ್ಟು—"ಸರಸ್ವತಿ ಪ್ರಸಾದ...." ಹಿ ಹ್ಹಿ ಹ್ಹಿ! ಗಹ ಗಹಿಸಿ ನಕ್ಕು ಪುನಃ "ದಾರಿಯಲ್ಲಿ ಜೋಕೆ!...

ತಿಲೋ ಕುದುರೆ ಮೇಲೆ ಬರುತ್ತಾನೆ!"

"ಆಗಲಿ ತಾಯಿ." ಹುಡುಗಿಯರಿಬ್ಬರೂ ಕಿಲಕಿಲನೆ ನಗತೊಡಗಿದರು.

"ನಾಳೆ ಬೆಳಿಗ್ಗೆ ಹೂ ತರುತ್ತೀಯೇನು ?"

"ಹ್ಞೂ."

ಅವರಿಬ್ಬರೂ ಹೂ ತೆಗೆದುಕೊಂಡು ಹೊರಟು ಹೋದರು. ಅರವಿಂದಳ ದಿಟ್ಟಿಯೂ ಅವರನ್ನೇ ಹಿಂಬಾಲಿಸಿತು. ಡಾ|| ಜಗಜೀವನ್ ಅಂದರು "ಹೆಚ್ಚು ಉದ್ವಿಗ್ನರಾಗದಿದ್ದಾಗ ಮನಸ್ಸು ಸ್ವಲ್ಪ ಹತೋಟಿಯಲ್ಲಿರುತ್ತೆ. ಸದಾ ಪರಿಸ್ಥಿತಿ ಶಾಂತವಾಗಿದ್ದು ವಾತಾವರಣ ಹಿತಕರವಾಗಿದ್ದರೆ ಸಮಾಧಾನವಾಗಿರುತ್ತಾರೆ. ಇನ್ನೂ ಕೆಲವು ಕಾಲ ಕಾದು ನೋಡಬೇಕು."

ಅಘೋರ ಮಾತಾಡದೆ ಅವಳನ್ನೇ ನಿಟ್ಟಿಸಿದ. ಎದೆಯು ಹಕ್ಕಿ ಚೀರಿತು "ಏಳೆಂಟು ವರ್ಷಗಳಿಂದ ಕಾದು ನೋಡುವುದೇ ಆಗಿದೆ."

ಡಾ|| ಜಗಜೀವನ್ ಅರವಿಂದಳ ಬಳಿಗೆ ಬಂದು ಅಂದರು "ಎದ್ದೇಳಿ, ಕುರ್ಚಿಯ ಮೇಲೆ ಕುಳಿತುಕೊಂಡರಾಯಿತು."

ಅರವಿಂದಾ ಅವರನ್ನೇ ತುಸು ಹೊತ್ತು ನೆಟ್ಟದಿಟ್ಟಿಯಿಂದ ನೋಡಿ ಹಲ್ಕಿರಿದು ಅಣಕಿಸಿದಳು. ಮತ್ತೆ ಅವರೆಂದರು "ಎದ್ದು ಕುರ್ಚಿಯ ಮೇಲೆ ಕುಳಿತುಕೊಳ್ಳಿ."

ಈಸಲ ಅರವಿಂದಾ ಮಂತ್ರಮುಗ್ಧಳಂತೆ ಎದ್ದು ಕುರ್ಚಿಯ ಮೇಲೆ ಕುಳಿತುಕೊಂಡಳು.

"ಹೊರಗೆಲ್ಲಾದರೂ ಅಡ್ಡಾಡಿ ಬರುತ್ತೀರೇನು ?"

"ಹೊರಗಡೆಯೇ ಇದ್ದೇನಲ್ಲಾ."

"ಡಾಕ್ಟರು ಬಂದಿದ್ದಾರೆ. ಮನೆಗೆ ಹೋಗುವಿರಾ ?"

"ಏನಿದೆ ಅಲ್ಲಿ ?"

"ಏನಿರಬೇಕು ನಿಮಗೆ?"

"ಏನೂ ಬೇಡ."

"ನಿಮಗೆ ತಿಲೋತ್ತಮನನ್ನು ನೋಡಲು ಮನಸ್ಸಿಲ್ಲವೇ ?"

"........."

"ನಂದಾದೇವಿಯವರು ನಿಮಗಾಗಿ ಕಾದಿರುತ್ತಾರೆ."

"ಪಾಪ,...."

"ಅಷ್ಟೊಂದು ಕನಿಕರವಿದ್ದರೂ ಹೋಗಿ ನೋಡಿ ಬರುವುದಿಲ್ಲವೇಕೆ?"

ಅರವಿಂದಾ ಮಾತಾಡಲಿಲ್ಲ. ಅಲಕ್ಷ್ಯದಿಂದ ಎತ್ತಲೋ ನೋಡಿದಳು. ದಿಟ್ಟಿ ಹರಿದಿದ್ದರೂ ಶೂನ್ಯತೆ ನೆಲಸಿತ್ತು. ಬಳಿಯಲ್ಲಿದ್ದ ಅಘೋರ ಅಂದ "ತಿಲೋತ್ತಮ ನಿನಗಾಗಿ ಕಾದಿರುತ್ತಾನೆ."

"ಅದೆಲ್ಲಾ ಸುಳ್ಳು." ದನಿಯಲ್ಲಿ ದಿಟ್ಟತನವಿತ್ತು.

ಪಕ್ಕನೆ ಎದ್ದು ನಿಂತುಕೊಂಡಳು. ಮನಸ್ಸು ಬಿಮ್ಮನೆ ಬಿಗಿದು ಕೊಂಡಿತು.

"ಹಾಗೆ ಒಮ್ಮೆಲೇ ಉದ್ವಿಗ್ನರಾಗಬಾರದು. ಯಾವುದೇ ವಿಚಾರವಾದರೂ ಸಾವಧಾನದಿಂದ ಯೋಚಿಸಿರಿ." ಎಂದರು ಡಾ|| ಜಗಜೀವನ್.

"ಸಾವಧಾನ!....ಸಾವಧಾನ...." ಅಟ್ಟಹಾಸದಿಂದ ನಕ್ಕಳು ಅರವಿಂದಾ.

"ಸಮಾಧಾನವಿಲ್ಲದೆ ಹೋದರೆ ಬದುಕು ಸಾಗುವುದು ಕಷ್ಟ."

"ಬದುಕಿನಿಂದ ಏನಾಗಬೇಕು ಡಾಕ್ಟರೇ?"

"ಹುಟ್ಟಿದುದಕ್ಕೆ ಬದುಕಲೇಬೇಕು ತಾಯಿ."

"ಹುಟ್ಟು—ಸಾವು ದಿನ ನಿತ್ಯ ಇದ್ದದ್ದೆ. ಅದರಲ್ಲೇನು ವಿಶೇಷ?"

"ಅಂದಮೇಲೆ ಮತ್ತೇಕೆ ಉದ್ವೇಗ?"

"ಉದ್ವೇಗ...ಎಲ್ಲುಂಟು?"

"ನಿಮ್ಮಲ್ಲಿ."

"ಶ್ಶ್! ನಾನೇನು ಅಂಗಡಿಯೆ?"

"ಅಲ್ಲಮ್ಮಾ, ನೀವು ಉದ್ವೇಗಗೊಳ್ಳಬಾರದು ಅಂದೆ."

"ಉದ್ವೇಗ...ಅದ್ವಾನ!....ಶುದ್ಧ ಮಂಕು! ಅದೋ....ಅದೋ ತಿಲೋ ಬಂದ!"

ಅವಳು ಬೆರಳು ತೋರಿದತ್ತ ಇಬ್ಬರೂ ಕಣ್ಣು ಹಾಯಿಸಿದರು. ಅಲ್ಲಿ ಏನೂ ಇರಲಿಲ್ಲ.

"ತಿಲೋ....ತಿಲೋ...."

"ಅರೂ..."

"ತಿಲೋ ನಿನ್ನೆ ಬಂದಿದ್ದ, ಅಘೂ."

"ಯಾವಾಗ?"

"ಅವನ ನಿಕ್ಕರೆಲ್ಲಾ ಹರಿದು ಹೋಗಿದೆ...ಶ್ !" ಮುಖ ತಕ್ಷಣ ಮುದುಡಿಕೊಂಡಿತು.

"ಅವನಿಗೆ ಬೇಕಾದಷ್ಟು ಬಟ್ಟೆ ಇದೆ ಅರೂ."

"ನಿನ್ನೆ ಅಮ್ಮನೊಂದಿಗೆ ಬಂದಿದ್ದ. ಅಮ್ಮ ತುಂಬ ಸೊರಗಿದ್ದಾರೆ."

"ನೀನು ಇನ್ನೊಮ್ಮೆ ನೋಡು."

"ಅಯ್ಯೋ,...."

"ಅವರು ಬಂದಿದ್ದುಂಟೇ ?" ಡಾಕ್ಟರು ಕೇಳಿದರು.

"ಯಾರನ್ನೋ ನೋಡಿರಬೇಕು." ಅಘೋರ ಸಪ್ಪೆ ಮುಖದಿಂದ ಬಿತ್ತರಿಸಿದ.

"ಇನ್ನೂ ಸ್ವಲ್ಪ ಕಾಲಾವಕಾಶಬೇಕು."

ಡಾ|| ಜಗಜೀವನ್ ಹೊರಟು ಹೋದ ನಂತರ ಅಘೋರ ಬಳಿಸಲ್ಲಿನ ಇನ್ನೊಂದು ಕುರ್ಚಿಯಲ್ಲಿ ಕುಳಿತುಕೊಂಡ. ಕೈಯಲ್ಲೊಂದು ಹಾಸ್ಯರಸ ತುಂಬಿದ ಪುಸ್ತಕವಿತ್ತು. ಅದನ್ನು ತೆರೆದು ಅವಳ ಕೈಯಲ್ಲಿಟ್ಟು—"ಓದು ಅರೂ."

"ಥೂ, ಇದೆಂತಾ ಪುಸ್ತಕ ?"

ಅದನ್ನತ್ತ ತಳ್ಳಿದಳು. ನೋಟ ಗೊತ್ತು ಗುರಿಯಿಲ್ಲದಂತೆ ಎತ್ತೆತ್ತಲೋ ಹರಿಯ ತೊಡಗಿತು. ಸ್ವಲ್ಪ ಹೊತ್ತು ಮಾತಿಲ್ಲದೆ ಉರುಳಿತು. ಅಘೋರ ಪುಸ್ತಕವನ್ನು ಮುಂದಿಟ್ಟು ಮತ್ತೆ "ಓದು" ಎಂದ.

"ಅಘೂ...ಇಂದು ಯಾರ್ಯಾರು ಬಂದಿದ್ದರು ಗೊತ್ತೆ ?"

"ಹೇಳು ಅರೂ."

"ನಮ್ಮ ಬಾಬೂಜಿ ಬಂದಿದ್ದರು !"

ಚಂದ್ರಬಾಬು ದಂಪತಿಗಳು ಮೂರು ವರ್ಷಗಳ ಹಿಂದೆ ಗತಿಸಿದ ವಿಷಯ ಅರವಿಂದಳಿಗೆ ಗೊತ್ತೇ ಇರಲಿಲ್ಲ. ಅಘೋರ ಸುಮ್ಮನೆ ಹೂಗುಟ್ಟಿದ.

"ತಿಲೋ ಐಸ್‌ಕ್ರೀಂ ಕೊಡಿಸು ಎಂದು ತಾತನಿಗೆ ದುಂಬಾಲ ಬಿದ್ದಿದ್ದ. ಬಿಮಲ್ ಮಾಮನಿಗೆ ಹೇಳು ಕೊಡಿಸುವುದೇ ಬೇಡ."

"ಅದನ್ನೆಲ್ಲಾ ಮನಸ್ಸಿಗೆ ಹಚ್ಚಿಕೊಳ್ಳಬೇಡ. ಅವನೀಗ ತುಂಬ ಚೆನ್ನಾಗಿ ಆಗಿದ್ದಾನೆ. ಓದುವುದರಲ್ಲೂ ಮುಂದೆ. ಆಟದಲ್ಲೂ ಮುಂದೆ.

ಬೆಳವಣಿಗೆಯಲ್ಲೂ ಮುಂದೆ. ಇನ್ನೇನು ಕಡಿಮೆ ನಿನಗೆ? ಚಿನ್ನದಂತಾ ಮಗ ಇದ್ದಾನೆ."

"ತಿಲೋ ಶಾಲೆಗೆ ಹೋಗುತ್ತಾನೆಯೆ?"

"ಅವನೀಗ ಕಾಲೇಜಿನಲ್ಲಿ ಓದುತ್ತಾನೆ ಅರೂ."

"ಥೂ....ಥೂ..."

ಬಾಯಿ ತೆರೆದು ಅಘೋರನೆಡೆಗೆ ಕಡೆಗಣ್ಣ ನೋಟ ಬೀರಿ ಹಿ ಹ್ಹಿ ಹ್ಹಿ! ದೊಡ್ಡದಾಗಿ ಹಲ್ಲುಕಿರಿದಳು ಅರವಿಂದಾ.

"ಹಾಗೆಲ್ಲಾ ಮಾಡಬಾರದು ಅರೂ."

"ನಿನಗೊಂದು ಹುಚ್ಚು!"

"ಅರೂ."

"ತಿಲೋ...ತಿಲೋ...."

"......."

"ಮಣ್ಣಾಡಿ ಮೈಕೈಯೆಲ್ಲಾ ಕೊಳೆ ಮಾಡಿಕೊಳ್ಳುತ್ತಿದ್ದಾನೆ. ನೀನಂತೂ ನೋಡಿಕೊಳ್ಳುವುದಿಲ್ಲ...ತಪ್ಪು ಮಾಡಿ ಹುಟ್ಟಿತು ಮಗು."

"ಮಣ್ಣಾಡುವುದಕ್ಕೆ ಅವನೇನು ಕೂಸೆ?"

"ಒಳ್ಳೆ ಚೆನ್ನಾಗಿದೆ? ಅಲ್ಲದೆ ಅವನೇನು ಮುದುಕನೇ?"

"ಏನೇ ಇರಲಿ, ಸಮಾಧಾನದಿಂದ ಯೋಚಿಸು."

"........."

"ಸಂತೋಷದಿಂದ ಹೊತ್ತು ಕಳೆಯುವುದನ್ನು ಅಭ್ಯಾಸ ಮಾಡು."

ಅರವಿಂದಾ ಮಾತಾಡಲಿಲ್ಲ. ಅನ್ಯಮನಸ್ಕಳಾಗಿ ಎತ್ತಲೋ ನೋಡುತ್ತಿದ್ದಳು.

"ನಾನಿನ್ನು ಹೊರಡಲೇ, ಅರೂ" ಮೆಲುದನಿಯಲ್ಲಿ ದುಗುಡವಿತ್ತು.

ಅವಳು ಮಾತಾಡದೆ ಹಲ್ಕಿರಿದು ಅಣಕಿಸಿದಳು.

"ಅರೂ."

ಕಣ್ಣು ಮಿಟುಕಿಸಿ–"ಕ್ಹೂ! ಕ್ಹೂ!"

ಕೈ ಹಿಡಿದೆಬ್ಬಿಸಿ ಒಳಗಡೆ ಕರೆದುಕೊಂಡು ಹೋಗಿ ಬಿಟ್ಟು ಹೊರಡಲ ನುವಾದಾಗ ಅವಳು ತಡೆದು ಹೋಗಗೊಡದೆ–"ಇಂದು ನಿನಗಿಷ್ಟು ಕೀರು

ವಡೆ ಮಾಡುವೆ. ಇರು ಅಘೊ."

"ನಿಜವಾಗಿಯೂ ಮಾಡುವೆಯಾ ?"

"ನಿನಗೆ ಸಿಹಿ ಬೇಕೆ ?"

"ಹ್ಞಾ."

"ಕುಳಿತುಕೋ."

"ಹೇಗೆ ಮಾಡುತ್ತಿ ? ಮಾಡುವ ವಿಧಾನ ಹೇಳು."

ತುಸು ಯೋಚಿಸಿ ಹೇಳಿದಳು ಅರವಿಂದಾ "ರವೆ ಜೇಕು....ತುಪ್ಪ... ಹಾಲು...ಕಾರದ ಪುಡಿ...ಇಂಗು...."

ಅಘೋರ ತಡೆದು ಹೇಳಿದ "ಸಿಹಿ ಮಾಡಲು ಕಾರದ ಪುಡಿಯೇಕೆ ?"

"ಓ...ಮರೆತ್ತಿದ್ದೆ."

"ಮತ್ತೇನು ಬೇಕು ಹೇಳು."

"ಕರ್ಪೂರ ಊದಬತ್ತಿ."

"ನೀನು ಸಿಹಿ ತಯಾರಿಸಿ ಇಟ್ಟಿರು. ನಾನು ಬರುವೆ. ರುಚಿಯಾಗಿ ಮಾಡುತ್ತಿ ತಾನೆ ?... ನಾನಿನ್ನು ಬರಲೇ ಅರೂ ?"

"ಓ...ಅಘೊ."

ಇದ್ದಕ್ಕಿದ್ದಂತೆ ಬಿಕ್ಕಿ ಬಿಕ್ಕಿ ಅಳ ತೊಡಗಿದಳು. ಎಷ್ಟೆಷ್ಟು ಸಮಾಧಾನಗೊಳಿಸಿದರೂ ಅವಳ ದುಃಖ ಆರಲಿಲ್ಲ. ಒಳ ಹೋಗಿ ಮಂಚದ ಮೇಲೆ ಬೋರಲಾಗಿ ಬಿದ್ದುಕೊಂಡಳು.

ಬೆನ್ನನ್ನು ನೇವರಿಸಿ ಸಾಂತ್ವನ ತುಂಬಿದ ದನಿಯಲ್ಲಿ–"ಅರೂ."

ಅವಳು ಮಾತಾಡಲಿಲ್ಲ.

"ನೀನು ಅಳುವುದಾದರೆ ನಾನಿರುವುದೇ ಇಲ್ಲ."

"ನಾನೂ...ಮನೆಗೆ...ಬರುವೆ."

"ನಾಳೆ ಬಂದು ಕರೆದುಕೊಂಡು ಹೋಗುವೆ."

"ಇಂದು ಶಿಲೋ....ಬರುತ್ತಾನೆಯೆ ?"

"ನಾಳೆ ನೀನೇ ಬರುತ್ತೀಯಷ್ಟೆ ? ಅಲ್ಲೇ ನೋಡಿದರಾಯಿತು."

"ನೀವು ಬೆಳಿಗ್ಗೆ ಬರುತ್ತೀರಾ ?"

"ಹೌದು ಅರೂ."

"....ನನಗಿಲ್ಲಿ....ಬೇಜಾರು."

"ನೀನು ಸಂತೋಷವಾಗಿದ್ದರೆ ಈಗಲೇ ಕರೆದುಕೊಂಡು ಹೋಗುವೆ. ಇಲ್ಲದ್ದನ್ನೆಲ್ಲಾ ಹಚ್ಚಿಕೊಂಡು ಮನಸ್ಸನ್ನು ಕೆಡಿಸಿ ಕೊಂಡಿದ್ದಿ. ಕಲಿತುದೆಲ್ಲಾ ಮರೆತು ಹೋಗಿದೆ. ಹೀಗಾದರೆ ಹೇಗೆ ಅರವಿಂದಾ?"

"ತಿಲೋ ಹೇಗಿದ್ದಾನೆ?"

"ತಿಲೋ ಚೆನ್ನಾಗಿದ್ದಾನೆ. ನೀನು ಮನಸ್ಸನ್ನು ಹತೋಟಿಯಲ್ಲಿಟ್ಟು ಕೊಂಡಲ್ಲಿ ಎಲ್ಲವೂ ಸರಿ ಹೋಗುತ್ತೆ. ಮುಖ್ಯವಾಗಿ ನೀನು ಸಂತೋಷವಾಗಿದ್ದರೆ ಇನ್ನೇನೂ ಬೇಕಿಲ್ಲ."

"ಏನು ಸಂತೋಷವೋ ಏನು ದುಃಖವೋ ನನಗೊಂದೂ ಅರ್ಥವಾಗುವುದಿಲ್ಲ, ಅಘೂ...."

ಏನೋ ಹೇಳಲು ಪ್ರಯತ್ನಿಸಿದರೂ ಹೇಳಲಾಗಲಿಲ್ಲ. ಗಂಟಲು ಬಿಗಿದು ಬಂದಿತು. ಅರವಿಂದಾ ಎದ್ದು ಕುಳಿತುಕೊಂಡಳು. ಸೆರಗು ಸರಿದು ಅಸ್ತವ್ಯಸ್ತವಾದ ಅವಳ ಉಡುಪನ್ನು ತಾನೇ ಸರಿ ಮಾಡಿ ಕಂಬನಿಯುಕ್ಕಿದ ಕಣ್ಣುಗಳನ್ನು ಕರವಸ್ತ್ರದಿಂದ ತೀಡಿ ಕೆದರಿ ಹರಡಿದ ಕೂದಲನ್ನು ನೇವರಿಸಿ— "ನಾನಿನ್ನು ಬರಲೇ?" ಹೃದಯ ಭಾರವಾಗಿತ್ತು.

ಅವಳು ಮಾತಾಡದೆ ನಿಟ್ಟಿಸಿದಳು. ಸ್ವಲ್ಪ ಹೊತ್ತಿನ ನಂತರ ಸಮಾಧಾನಗೊಂಡ ಅವಳು ಹಿಂದೆಯೇ ಬಂದು ವರಾಂಡದ ಸಾಲುಗಂಬಗಳಿಗೊರಗಿ ನಿಂತು ನೋಡುತ್ತಾ ಪುನಃ ಹನಿಗಣ್ಣಾದಳು. ಅಘೋರ ಭಾರವಾದ ಹೆಜ್ಜೆಗಳನ್ನೆಳೆದುಕೊಳ್ಳುತ್ತಾ ಹೋಗಿ ಕಾರು ಹತ್ತಿದ. ತಿರುಗಿ ನೋಡಿದಾಗ ದಾದಿಯು ಅವಳನ್ನು ಒಳಗಡೆ ಬರುವಂತೆ ಬಲಾತ್ಕರಿಸುತ್ತಿದ್ದಳು. ನೋಡಿದೊಡನೆ ಎದೆಯಾಳದಿಂದ ಬಿಸಿಯುಸಿರೊಂದು ಹೊರ ಹೊಮ್ಮಿತು. ಒಮ್ಮೆಲೇ ಶ್ರೀಕೃಷ್ಣ ಪರಮಾತ್ಮನ ಉವಾಚ ಮನದಲೆಯಲ್ಲಿ ತೇಲಿ ಬಂತು.

ಪ್ರಸಾದೇ ಸರ್ವದುಃಖಾನಾಂ ಹಾನಿರಸ್ಯೋಪಜಾಯತೇ |
ಪ್ರಸನ್ನಚೇತಸೋ ಹ್ಯಾಶು ಬುದ್ಧಿಃ ಪರ್ಯವತಿಷ್ಠತೇ ||

ಒಂದಲ್ಲ ಒಂದು ದಿನ ಅವಳ ಚಿತ್ತ ಪ್ರಸನ್ನವಾದರೆ ಸಾಕು....ಎಂದುಕೊಂಡ ಅಘೋರ.

ಅಧ್ಯಾಯ

೩೯

ಡಾ|| ಅಘೋರನಿಗೆ ತಿಲೋತ್ತಮನನ್ನು ಡಾಕ್ಟರನ್ನಾಗಿಸುವುದು ಇಷ್ಟ ವಾಗಿತ್ತು. ಆದರೆ, ಅವನು ಅದಕ್ಕೊಪ್ಪದೆ ಬಿ.ಎಸ್.ಸಿ., ಯಲ್ಲಿ ರ್‍ಯಾಂಕ್ ಪಡೆದು ಉತ್ತೀರ್ಣನಾದನಂತರ ಎಂ.ಎಸ್ಸಿ., ಹಂತಕ್ಕೆ ವಿಜಯೋತ್ಸಾಹ ದಿಂದ ಪದಾರ್ಪಣೆ ಮಾಡಿದ. ಇತ್ತೀಚಿನ ದಿನಗಳು ಸುಲಲಿತವಾಗಿ ಓಡ ತೊಡಗಿದುವು. ತಂದೆ ಮತ್ತು ಅಜ್ಜಿಯರ ಒತ್ತಾಯಕ್ಕೆ ಮಣಿದು ಕಲಿಕೆ ಯೊಂದಿಗೆ ಗೃಹಸ್ಥಾಶ್ರಮವನ್ನೂ ಸ್ವೀಕರಿಸಲು ತಿಲೋತ್ತಮ ಸಂತಸದಿಂದ ಒಪ್ಪಿಕೊಂಡ. ಬಿ.ಎಸ್ಸಿ., ಎರಡನೆ ವರ್ಷದಲ್ಲಿ ಓದುತ್ತಿದ್ದ ಓಂ ಪ್ರಭಾ ಳೊಡನೆ ಕಾರ್ತೀಕ ಮಾಸದಲ್ಲಿ ವೈಭವದಿಂದ ವಿವಾಹವೂ ಆಯಿತು. ಅಘೋರ ನೂತನ ಗೃಹಿಣಿಗೆ ಎರಡೂ ಕೈಗಳಿಂದ ಸ್ವಾಗತ ನೀಡಿದ. ಬಲು ದಿನಗಳ ಬಯಕೆ ಈಡೇರಿ ಬಂದು ಮದುವೆ ಮನೆಯಲ್ಲಿನ ಕುಲುಕುಲು ವಾತಾವರಣ ಅರವಿಂದಳಿಲ್ಲದಿದ್ದರೂ ಅಘೋರನನ್ನು ಆಕರ್ಷಿಸ ತೊಡಗಿತು. ಆನಂದದ ನೆರೆಯುಕ್ಕಿ ಬಂದ ಹೃದಯ ಹಿರಿಹಿರಿ ಹಿಗ್ಗಿತು. ಮೈಯೆಲ್ಲಾ ಮನಸ್ಸಾಗಿ ತಾನು ಅಜ್ಜನಾಗುವ ಸುದಿನಗಳಿಗಾಗಿ ಹಾ ತೊರೆದಿದ್ದ ಅಘೋರ ವಧೂವರ ರಿಗೆ ಆಶೀರ್ವದಿಸುವಾಗ "ನಿಮಗೆ ನಾಲ್ಕು ಮಕ್ಕಳಾಗುವಂತೆ ಭಗವಂತ ಅನು ಗ್ರಹಿಸಲಿ." ಎಂದು ಮನ ತುಂಬಿ ಹರಸಿದ. ಒಡನೆ ಎಲ್ಲೆಲ್ಲೂ ನಗೆಯ ಗುಲ್ಲು ಎದ್ದಿತು. ಓಂ ಪ್ರಭಾ ಲಜ್ಜೆಯ ಭರದಿಂದ ಕೆಂಪು ಕೆಂಪಾದಳು.

ಒಮ್ಮೆಲೇ ಅವನ ಗೆಳೆಯರೆಲ್ಲಾ ಧಾಳಿಯೆಬ್ಬಿಸಿದರು.

"ನಿನ್ನ ಕಾಲದಲ್ಲಿ ಒಂದೇ ಸಾಕಾಗಿದ್ದಾಗ ಈ ಕಾಲದಲ್ಲಿ ನಾಲ್ಕು ಆಗು ವುದು ಹೇಗೆ ?"

"ಈ ಧಾರಾಳ ಬುದ್ಧಿ ಯಾವಾಗಿನಿಂದ ಬಂತು ?"

"ಈಗೀಗ ಅಘೋರ ಮಹಾಶಯನಿಗೆ ದೇವರ ಮೇಲೂ ನಂಬಿಕೆ ಬಂದಿದೆ."

"ಆಗ ತಾನೇ ತಾನಾಗಿ ಮೆರೆದ ವ್ಯಕ್ತಿ ಈಗ ಮೇಣದ ಬೊಂಬೆ."

"ಜೀವನ ಅಂದರೆ ಹೂವಿನ ಹಾಸಿಗೆಯೆಂದು ತಿಳಿದುಕೊಂಡಿದ್ದ ಕಾಲ ಅದು."

"ಜೀವನಕ್ಕೆ ಕಾಲಿಡುವ ಮೊದಲು ಎಲ್ಲರೂ ತಿಳಿದುಕೊಂಡಿರುವುದೇ ಹಾಗೆ."

"ಆದರೆ ಎಲ್ಲರಿಗಿಂತ ಅಘೋರ ಮಹಾಶಯರ ತಿಳಿವಳಿಕೆ ತೀರ ಭಿನ್ನ ವಾಗಿತ್ತು."

ಎಲ್ಲರ ಟೀಕೆ ಟಿಪ್ಪಣಿಗಳಿಗೂ ಅಘೋರನ ಉತ್ತರ ಸಿಹಿ ತುಂಬಿದ ಹಿರಿ ನಗೆ. ಮಗನ ಮದುವೆಯನ್ನು ಅದ್ದೂರಿಯಿಂದ ಮುಗಿಸಿ ಗೆಳೆಯರನ್ನು ಆತ್ಮೀಯತೆಯಿಂದ ಬೀಳ್ಕೊಟ್ಟಾಗ ಹೃದಯ ಹಗುರವಾಗಿತ್ತು.

ಅಂದು ಅದೇತಾನೆ ಮನೆಗೆ ಬಂದಿದ್ದ ಅಘೋರ ತನ್ನ ದಿನಚರಿಯಲ್ಲಿ ತೀವ್ರ ಮಗ್ನನಾಗಿದ್ದಾಗ ನೆರೆ ಮನೆಯವರೊಬ್ಬರು ಬಿರುಗಾಳಿಯಂತೆ ನುಗ್ಗಿ ಬಂದರು.

"ಡಾಕ್ಟರೇ, ನನ್ನ ಮಗಳು ಮೈಸುಟ್ಟುಕೊಂಡಿದ್ದಾಳೆ. ಕಾಪಾಡಿ."

ಅವರ ದನಿಯಲ್ಲಿ ಉದ್ವೇಗವಿತ್ತು. ಮೈ ಥರಥರನೆ ನಡುಗುತಿತ್ತು. ಅವರನ್ನು ನೋಡುತ್ತಲೂ ಅಘೋರ ಮಂಜಿನಂತೆ ಕರಗಿ ಹೋದ. ಅದೇ ತಾನೇ ಮನೆಗೆ ಬಂದ ಮಗ ಮರುಗಳಿಗೆಯಲ್ಲೇ ಓಡಿ ಹೋದುದನ್ನು ನೋಡಿ ಸಂದಾ ಸಂಕಟದ ಗಣಿಯಾದಳು. "ಅಯ್ಯೊ ಇದೇ ತಾನೇ ಬಂದಿದ್ದ. ಇನ್ನೂ ಚಹ ಕುಡಿಯಲಿಲ್ಲ."

"ಚಹಕ್ಕಿಂತ ಪ್ರಾಣ ಹೆಚ್ಚವ್ವಾ." ಎಂದ ತಿಲೋತ್ತಮ.

"ಬಾಳುದ್ದಕ್ಕೂ ಇದೇ ಆಯ್ತು, ಬಿಡು."

ತಾಯಿ ಕರುಳು ನೊಂದಿತ್ತು. ಎದೆಯಾಳದಿಂದ ದೀರ್ಘವಾದ ನಿಟ್ಟುಸಿರೊಂದು ಹೊರ ಹೊಮ್ಮಿತು.

ಅಘೋರ ಅವರ ಮನೆಗೆ ಹೋಗಿ ನೋಡಿದ. ಇಪ್ಪತ್ತರ ತರುಣಿ ಮೈ ಹಲವಾರು ಕಡೆಗಳಲ್ಲಿ ಸುಟ್ಟುಕೊಂಡು ನರಳುತಿದ್ದ ರೀತಿ ಘೋರವಾಗಿತ್ತು. ಅವಳನ್ನು ತಕ್ಷಣ ಆಸ್ಪತ್ರೆಗೊಯ್ದು ಚಿಕಿತ್ಸೆ ಕೈಕೊಂಡ. ಕಾಲೇಜಿನಲ್ಲಿ ಓದುತಿದ್ದ ಅವಳು ಬಡವರ ಹುಡುಗಿಯಾಗಿದ್ದರೂ ವಿದ್ಯೆಬುದ್ಧಿಗಳಲ್ಲಿ ಶ್ರೀಮಂತೆ. ಅವರು ಅದೇ ಬೀದಿಯವರಾದುದರಿಂದ ಪರಿಚಯವೂ ಇತ್ತು. ಸ್ಟೌವ್ ಹಚ್ಚುವ ಆತುರದಲ್ಲಿ ಸೀರೆಯಸೆರಗಿಗೆ ಚೆಲ್ಲಿ ಬಟ್ಟೆಗೆ ಬೆಂಕಿ ಹತ್ತಿಕೊಂಡಿತು.

ಅಘೋರ ಅವಳ ಪ್ರಾಣ ಉಳಿಸಲು ಹೋರಾಟಕ್ಕಿಳಿದ.

ಅಘೋರನ ಗೆಳೆಯರ ಬಳಗವೆಲ್ಲಾ ಅಲ್ಲಿ ಕೂಡಿಕೊಂಡಿತು. ಎಲ್ಲರೂ ಕೂಡಿ ಹಾಸ್ಯದ ಚಟಾಕಿ ಹಾರಿಸಿ ಅವಳ ಗಮನವನ್ನು ಆಕರ್ಷಿಸಿ ಬಾಧೆ ಯಿಂದ ಅವಳನ್ನು ತುಸು ಮುಕ್ತಳನ್ನಾಗಿ ಮಾಡಿದರೂ ಅನಂತರ ಅವಳು ನರಳುತ್ತಿದ್ದ ರೀತಿ ಘೋರವಾಗಿತ್ತು.

ದಿನಗಳುರುಳಿದುವು. ಹೊತ್ತು ಗೊತ್ತು ಗುರಿಯಿಲ್ಲದಂತೆ ಕರಗಿತು. ಚಿಕಿತ್ಸೆಯ ಬಲದಿಂದ ದಿನೇದಿನೇ ಸುಟ್ಟ ಗಾಯಗಳು ಸ್ವಲ್ಪ ಸ್ವಲ್ಪ ಮಾಗ ತೊಡಗಿದಂತೆ ಅಘೋರನ ಹೃದಯವೂ ಅರಳತೊಡಗಿತು. ನಾಡಿ ಹಿಡಿದು ಉತ್ಸಾಹದ ದನಿಯಲ್ಲಿ ಅಂದ "ನಳಿನೀ! ದೇವರು ದೊಡ್ಡವನು."

ಅವಳು ಮಸುನಗೆ ಬೀರಿ "ಎಲ್ಲಾ ನಿಮ್ಮ ಶ್ರಮದ ಪ್ರತಿಫಲ ಡಾಕ್ಟರ್."

ಮುಗುಳ್ನಗೆ ಬೀರಿ ತಲೆಯಲ್ಲಾಡಿಸುತ್ತಾ ಅಘೋರ ಗಗನದೆಡೆಗೆ ಕೈದೋರಿದ.

ಅವಳ ಕಣ್ಣುಗಳು ಸಂತಸದಿಂದ ಅರಳಿದುವು.

o o o o

ಅಘೋರ ಆಫೀಸಿನಲ್ಲಿ ಕುಳಿತು ದೈನಂದಿನ ಕೆಲಸದಲ್ಲಿ ಮಗ್ನನಾಗಿ ದ್ದಾಗ ಬಾಗಿಲ ಕಡೆಯಿಂದ ಕಟಕಟ ಸದ್ದು ಕೇಳಿ ಬಂದಿತು. ಅಘೋರ ಹುಬ್ಬೆತ್ತಿ ನೋಡಿ "Yes please" ಎಂದ.

ಕದ ತೆರೆದುಕೊಂಡು ಒಳ ಬಂದವರು ಮದನ್ ಮತ್ತು ಸುಧೀರ್. ಇಬ್ಬರೂ ಎದುರಿನ ಕುರ್ಚಿಯಲ್ಲಿ ಕುಳಿತುಕೊಂಡರು. ಅವರ ಕೆಲಸವಾದ ನಂತರ ಅಘೋರ ನಗುಮುಖದಿಂದ–

"ಈಚೀಚೆಗೆ ಅರವಿಂದಾ ಉತ್ತಮವಾಗುತಿದ್ದಾಳೆ."

"ಇಷ್ಟು ದಿನಗಳ ಮೇಲೆ ಚೇತರಿಸಿಕೊಳ್ಳುವುದು ಅಪರೂಪ."

"ನಿಜ ಮದನ್, ದೇವರು ದೊಡ್ಡವನು."

"ಈಚೆಗೆ ಮನೆಗೆ ಬಂದಿದ್ದರೇ ?"

"ಹೌದು. ಎರಡು ದಿನ ಇದ್ದು ಹೋಗಿದ್ದಾಳೆ. ತಿಲೋತ್ತಮ ಇಷ್ಟು ದೊಡ್ಡವನಾಗಿದ್ದಾನೆಂದರೆ ಅವಳಿಗೆ ನಂಬುಗೆ ಬರುವುದಿಲ್ಲ. ನಾನೀಗ ಅವನ ವಿಷಯವನ್ನು ಅವಳ ಮುಂದೆ ಪ್ರಸ್ತಾಪಿಸುವುದೇ ಇಲ್ಲ. ಅವಳೂ ಅಷ್ಟಾಗಿ ಅವನನ್ನು ಕೇಳುವುದಿಲ್ಲ.

"ಇದೊಂದು ದೃಷ್ಟಿಯಿಂದ ಒಳ್ಳೆಯದಾಯಿತು."

"ಈಗ ಮೊದಲಿನಷ್ಟು ಬೇಗ ಉದ್ರೇಕಗೊಳ್ಳುವುದಿಲ್ಲ. ಹೇಳಿದುದನ್ನು ಮನಸ್ಸಿಟ್ಟು ಕೇಳುತ್ತಾಳೆ. ಇಷ್ಟವಾದರೆ ಪುಸ್ತಕಗಳನ್ನು ಓದುತ್ತಾಳೆ. ಓದಿದುದನ್ನು ಗ್ರಹಿಸುತ್ತಾಳೆ. ಎಲ್ಲಕ್ಕಿಂತ ತೋಟಗಾರಿಕೆಯಲ್ಲಿ ಬಹಳ ಆಸಕ್ತಿ. ಆಸ್ಪತ್ರೆಯ ತೋಟವೆಲ್ಲಾ ಅವಳದ್ದೆ. ಹೋಸ್ ಪೈಪ್ ಹಿಡಿದುಕೊಂಡು ಗಿಡಗಳಿಗೆ ನೀರೆರೆಯುವುದೆಂದರೆ ತುಂಬ ಸಂತೋಷ."

"ಕ್ರಮೇಣ ಅದೇ ಅವರಿಗೆ ಮನಶ್ಶಾಂತಿ ನೀಡಿದರೂ ನೀಡಬಹುದು."

"ನಾನೀಗ ದಿನವೂ ಒಂದು ಗಂಟೆ ಹೊತ್ತನ್ನು ಅವಳ ಬಳಿ ಕಳೆಯುತ್ತೇನೆ. ಅವಳು ಮಾತಾಡುವುದೆಲ್ಲಾ ತೋಟಗಾರಿಕೆಯ ವಿಚಾರ ಮನೆಗೆ ಬಂದಿದ್ದಾಗಲೂ ಅಷ್ಟೆ, ತೋಟಗಾರಿಕೆಯಲ್ಲೇ ಹೊತ್ತು ಕಳೆದಿದ್ದಾಳೆ."

"ತಿಲೋತ್ತಮ ಓಂ ಪ್ರಭಾರವರನ್ನು ಯಾರೆಂದು ಕೇಳುವುದಿಲ್ಲವೇ ?"

"ಅವರನ್ನು ಯಾರೋ ಅತಿಥಿಗಳು ಎಂದು ತಿಳಿದುಕೊಂಡಿರುವಂತಿದೆ. ಇಬ್ಬರನ್ನೂ ಬಹುವಚನದಿಂದ ಗೌರವಪೂರ್ಣವಾಗಿ ಮಾತಾಡಿಸುತ್ತಾಳೆ."

"ಪಾಪ...."

"ಅಮ್ಮನನ್ನು ಬಿಟ್ಟು ಆಸ್ಪತ್ರೆಗೆ ಹೋಗುವಾಗ ಅವಳಿಗೆ ಎಲ್ಲಿಲ್ಲದ ಮರುಕ "ಮನೆಯಲ್ಲಿ ಒಬ್ಬರೇ ಇರುತ್ತಾರೆ. ನಿಮ್ಮ ಕೆಲಸಗಳ ಹಣಾಹಣಿಯಲ್ಲಿ ಅವರನ್ನು ಮರೆಯಬೇಡಿ." ಎಂದು ನನಗೆ ಹೇಳಿ ಹೋಗಿದ್ದಾಳೆ. ಈ ಸಲ ಅಮ್ಮನಿಗೆ ಅವಳನ್ನು ಆಸ್ಪತ್ರೆಗೆ ಕಳುಹಿಸುವಾಗ ಎಲ್ಲಿಲ್ಲದ ಸಂಕಟ. ಕಂಡ ಕಂಡ ದೇವರಿಗೆಲ್ಲಾ ಹರಕೆ ಹೊತ್ತಿದ್ದಾರೆ. ತಿಲೋತ್ತಮ ಹುಟ್ಟುವ ಮುಂಚೆ ಒಮ್ಮೆ ತೀರ್ಥಯಾತ್ರೆ ಮಾಡಿಸಿದ್ದರು. ನನಗೆ ಅವರು ಇನ್ನೊಮ್ಮೆ ಯಾತ್ರೆ ಮಾಡಿಸುವುದುಂಟು."

"ದಂಪತಿಗಳು ಆರಾಮವಾಗಿ ಹೋಗಿ ಬನ್ನಿ."

ಅಘೋರ ನಕ್ಕು ಬಿಟ್ಟ.

"ದಿನಗಳು ಬರುತ್ತವೆ ಹೋಗುತ್ತವೆ. ಜೀವನವೂ ಹಾಗೆಯೇ ಕ್ಷಣಭಂಗುರ. ಯಾವುದನ್ನೂ ನೆಚ್ಚಿಕೊಳ್ಳದಿರುವುದೇ ಲೇಸು." ಎಂದ ಸುಧೀರ್.

ಮದನ್ ನಕ್ಕು ನುಡಿದ "ಆದರೆ ಐದು ಬೆರಳೂ ಒಂದೇ ರೀತಿಯಾಗಿರು

ವುದಿಲ್ಲ ಸುಧೀರ್, ಅಘೋರನ ರೀತಿಯೇ ಬೇರೆ. ಅವನ ಮನಸ್ಸು ಶಿಲೆಗಿಂತ ಕಠಿಣವಾದರೂ ಹೃದಯ ಅರಳೆಗಿಂತಲೂ ಮೃದು. ಆದುದರಿಂದಲೇ ಅವನು ಬಾಳಿನಲ್ಲಿ ಕಹಿಯನ್ನುಣ್ಣಬೇಕಾಯಿತು. ಮನಸ್ಸಿನಷ್ಟೇ ಹೃದಯವೂ ಕಠಿಣವಾಗಿದ್ದಿದ್ದರೆ ಅವನು ಪೂರ್ಣಸುಖಿಯಾಗುತಿದ್ದ."

"ನಿಜ ಮದನ್." ಅಘೋರ ಗಳಿಗೆ ಕಾಲ ತಡೆದು ಮುಂದುವರಿದ "ಅರವಿಂದಳಿಲ್ಲದ ಮನೆಯಲ್ಲಿ ತಿಲೋತ್ತಮನಿಗೆ ತಾಯಿಲ್ಲದ ಕೊರತೆಯನ್ನು ನೀಗಿಸಲು ಸಹಸಾ ಪ್ರಯತ್ನಿಸಿದ್ದೇನೆ. ಅವನಿಂದ ನನ್ನ ವಂಶೋದ್ಧಾರವಾಗಲೆಂಬ ಬಯಕೆಗೆ ಹೆಂಗಳೆಯಂತೆ ಇಂಬು ಕೊಟ್ಟಿದ್ದೇನೆ. ಈಗ ತಿಲೋತ್ತಮ ಪ್ರಭಾಳೊಂದಿಗೆ ನಲಿದಾಡಿ ಕಳೆಯುವ ಸುಖದಿನಗಳನ್ನು ನೋಡುವಾಗಲೆಲ್ಲಾ ಎದೆ ಸಂತಸದೂಟೆಯಾಗುತ್ತದೆ. ಅರವಿಂದಾ ಗೃಹಿಣಿಯಾಗಿ ಬಂದಾಗ ನನ್ನ ದಿನಗಳು ಇಷ್ಟೇ ಸುಖಮಯವಾಗಿದ್ದುವು. ಹಿಂದೊಮ್ಮೆ ಅಂಕಲ್ ಜಾರ್ಜ ಹೇಳಿದ್ದ "ನೀನು ಜೀವನ–ವೃತ್ತಿ ಎರಡರಲ್ಲೂ ಅಸುಖಿ." ಎಂದು. ನನ್ನ ಧ್ಯೇಯವೊಂದಾದರೆ ಸಾಧನೆ ಇನ್ನೊಂದು. ಯೋಚನೆಯೊಂದಾದರೆ ಆಗುವುದಿನ್ನೊಂದು. ಈ ಎಲ್ಲಾ ಜಂಝಾಟಗಳಲ್ಲೂ ಸುಖದ ತುಣುಕುಗಳನ್ನು ಆಯ್ದುಕೊಂಡು ಜೀವನದ ಸಾರವನ್ನುಳಿಸಿಕೊಳ್ಳಲು ಸಾಹಸ ಪಟ್ಟಿದ್ದೇನೆ. ಜಾರ್ಜ ಹೇಳಿದುದು ಅಕ್ಷರಶಃ ಸತ್ಯವಾದರೂ ಕಿಂಚಿತ್ ಸುಖಿಯಾಗಲು ದೈವ ಸಂಕಲ್ಪವನ್ನೆದುರಿಸಿ ಹೋರಾಡಿದ ಹೋರಾಟ ನನ್ನದು."

ಅಘೋರನ ನಯನಗಳು ನಕ್ಷತ್ರಗಳಂತೆ ಮಿನುಗಿದುವು. ಸಂತಸದ ಕಿರುತೊರೆ ಎದೆಯಿಂದ ನುಗ್ಗಿ ಮುಖಕ್ಕೆ ಬಂತು.

"ದೇವರು ಇನ್ನಾದರೂ ನಿನಗೆ ಒಳ್ಳೆಯದನ್ನು ಮಾಡಲಿ."

ಗೆಳೆಯರಿಬ್ಬರೂ ಎದ್ದು ನಿಂತರು. ಅಘೋರ ಮುಗುಳ್ನಗೆಯಿಂದ ಬೀಳ್ಕೊಟ್ಟ. ಸಂತೋಷಾತಿರೇಕದಿಂದ ಮನಸ್ಸು ಮುಗಿಲಿನೆತ್ತರಕ್ಕೆ ಏರುತಿದ್ದರೂ ಕರ್ತವ್ಯದ ಹೊರೆ ಹಿಡಿದು ಜಗ್ಗುತಿತ್ತು. ಅಘೋರ ಪುನಃ ತನ್ನ ದಿನಚರಿಗೆ ಗಮನಕೊಟ್ಟ.

ಟ್ರಿಣ್, ಟ್ರಿಣ್, ಮೇಜಿನ ಮೇಲಿದ್ದ ಟೆಲಿಫೋನು ಸದ್ದುಮಾಡಿ ಕರೆ ನೀಡಿತು. ಅಘೋರ ರಿಸೀವರನ್ನು ಕೈಗೆತ್ತಿಕೊಂಡು "ಹಲೋ !" ಎಂದ.

"ಸಾರ್, ನಳಿನಿಯ ಸ್ಥಿತಿ ತುಂಬ ಹದಗೆಟ್ಟಿದೆ."

ಸುದ್ದಿಯನ್ನು ಅತ್ತಕಡೆಯ ದನಿ ಕಳವಳದಿಂದ ಬಿತ್ತರಿಸಿತು.

ತಕ್ಷಣ ರಿಸೀವರನ್ನು ಕೆಳಗಿಟ್ಟು ಅತ್ತಕಡೆ ಧಾಪು ಕಾಲು ಹಾಕಿದ. ಸುಟ್ಟಗಾಯಗಳು ಆಗಲೇ ಮಾಯುತ್ತಾ ಬಂದಿದ್ದುವು. ಮೂರು ವಾರಗಳಿಂದ ಆಸ್ಪತ್ರೆಯಲ್ಲಿದ್ದ ಅವಳು ಇನ್ನೇನು ಬಿಡುಗಡೆ ಹೊಂದಲಿದ್ದಳು. ಆದರೂ ಹೀಗಾಯಿತೇಕೆ? ಅಘೋರ ಅಚ್ಚರಿಗೊಳಗಾದ. ಏನಿರಬಹುದು? ಏಕೆ ಹೀಗಾಯಿತು? ಹೆಣ್ಣು ಎಂದೆಂದೂ ಸೂಕ್ಷ್ಮ ಬಹುಶಃ "ಶಾಕ್" ಬಂದಿರಬಹುದು...ಯೋಚಿಸುತ್ತಲೇ ಹೆಜ್ಜೆ ಹಾಕಿದ. ಹತ್ತು ಮಾರು ಹಾದಿ ಸಾಗಿತು.

ಢನ್! ಢನ್! ಢನ್! ಢನ್! ಘಂಟಾ ನಿನಾದ ಸುಪ್ತವಾಗಿದ್ದ ಚೇತನ ಸಮಸ್ತವನ್ನೂ ಬಡಿದೆಬ್ಬಿಸುವಂತೆ ಮೊಳಗಿತು. ಕಾರಿಡಾರಿನುದ್ದಕ್ಕೂ ಅಲ್ಲಲ್ಲಿ ಕೆಂಪು ದೀಪಗಳು ಹತ್ತಿ ಅಪಾಯದ ಸುದ್ದಿಯನ್ನು ಪುನಃ ಪುನಃ ಬಿತ್ತರಿಸಿದುವು.

ರಾಣೀ ಜಗತ್ತಾರಣಿಯ ತುರ್ತುಕರೆ!

ಅಘೋರ ಕತ್ತೆತ್ತಿ ನೋಡಿದ. ವಾರ್ಡ್ ನಂಬರ್ ಒಂಭತ್ತು ಸುಳಿದಳಿಯಿತು. ಒಂಭತ್ತನೆಯ ವಾರ್ಡ್ ಹತ್ತಿರ ಇದೆಯೇ? ಏನಿಲ್ಲೆಂದರೂ ಹತ್ತು ನಿಮಿಷಗಳ ಹಾದಿ. ಅಘೋರ ಒಂದೇ ಉಸುರಿಗೆ ಓಡಿದ. ಅವನಂತೆಯೇ ಅನೇಕರು ಕರೆ ಗಂಟೆಗೆ ಓಗೊಟ್ಟಿದ್ದರು. ಸಮಯಕ್ಕೆ ಸರಿಯಾಗಿ ಔಷಧಿಗಳ ಟ್ರೇ ಓಡೋಡಿ ಬಂತು. ಡಾ|| ಘನಶ್ಯಾಮ್ ಆಗಲೇ ಅಲ್ಲಿದ್ದರು. ಒಮ್ಮೆಲೇ ಹತ್ತಾರು ಕೈಗಳು ಕೂಡಿ ನಾಲ್ಕಾರು ಇಂಜಕ್ಷನ್‌ಗಳನ್ನು ಚುಚ್ಚಿದುವು. ಅಘೋರ ನಾಡಿ ಹಿಡಿದಿದ್ದ. ಕೆಂಪು ಹೊದ್ದಿಕೆಯಡಿ ಜೀವಚ್ಛವದಂತೆ ಮಲಗಿದ್ದ ನಳಿನಿ ತುಸು ಕಣ್ತೆರೆದು ನೋಡಿ ಮತ್ತೆ ಕಣ್ಮುಚ್ಚಿದಳು. ಸಾವು ಬದುಕುಗಳೊಡನೆ ಜೀವ ಹೋರಾಟಕ್ಕಿಳಿದಿತ್ತು.

ಬಳಿಯಲ್ಲಿ ದೊಡ್ಡ ದನಿಯಲ್ಲಿ ಅಳುತಿದ್ದ ನತದೃಷ್ಟ ತಾಯಿಯನ್ನು ದಾದಿಯೊಬ್ಬಳು ಹೊರಗೆ ಕರೆದುಕೊಂಡು ಹೋದಳು. ಕೊಠಡಿಯಲ್ಲಿ ಎಳ್ಳು ಬೀಳಿದರೂ ಕೇಳಿಸುವಷ್ಟು ನಿಶ್ಶಬ್ದ ಮನೆ ಮಾಡಿತು. ವಿದ್ಯುತ್ ಸಲಕರಣೆಗಳುಳ್ಳ ವೈದ್ಯಕೀಯ ಯಂತ್ರಗಳು ಸುತ್ತುವರಿದು ಸಹಾಯ ನೀಡಿದುವು.

ಡಾಕ್ಟರುಗಳ ದಳ ಹುರುಪಿನಿಂದ ಕೆಲಸ ಮಾಡತೊಡಗಿತು. ರೋಗಿಯ ತೋಳಿಗೆ ಅಳವಡಿಸಿದ್ದ ಬ್ಲಡ್ ಪ್ರೆಜರ್ ಯಂತ್ರದ ಮೇಲೆ ಎಲ್ಲರ ಕಣ್ಣೂ ಕೇಂದ್ರೀಕರಿಸಿತ್ತು. ಸ್ವಲ್ಪ ಹೊತ್ತಿನ ನಂತರ ಕುಸಿದು ಬಿದ್ದಿದ್ದ ರಕ್ತದ ಒತ್ತಡ ಸ್ವಲ್ಪಸ್ವಲ್ಪವಾಗಿ ಮೇಲೇರ ತೊಡಗಿದುದನ್ನು ನೋಡುತಿದ್ದಂತೆ ಎಲ್ಲರೂ ಹಾಯಾಗಿ ಉಸಿರಾಡಿದರು. ಶತ ಪ್ರಯತ್ನಗಳಿಂದ ನಳಿನಿಯು ಸಾವಿನಂಚಿನಿಂದ ಒಂದು ಹೆಜ್ಜೆ ಹಿಮ್ಮೆಟ್ಟಿ ನಿಂತಳು.

ಅಘೋರ ಅಂದು ಮಧ್ಯಾಹ್ನದವರೆವಿಗೂ ಬಳಿಯಲ್ಲಿದ್ದು ರಕ್ತ ಒತ್ತಡ ಸ್ಥಿಮಿತಕ್ಕೆ ಬಂದಮೇಲೆ ಮನೆಗೆ ಹೋದ. ನೀರು ಮನೆಗೆ ಹೋಗಿ ಮುಖ ಮಜ್ಜನ ಮಾಡಿಕೊಂಡು ಹೊರ ಬಂದಾಗ ಓಂ ಪ್ರಭಾ ಕೈಯಲ್ಲಿ ಚಹದ ಬಸಿಯೊಂದಿಗೆ ಎದುರಾದಳು. ಅಘೋರ ತುಸು ಅಚ್ಚರಿಯಿಂದ–

"ಮುಖವೇಕೆ ಬಾಡಿದೆ? ಕಾಲೇಜಿಗೆ ಹೋಗಲಿಲ್ಲವೇ ಪ್ರಭಾ?"

ಮಾವನ ದನಿ ಹೊರ ಬಿದ್ದೊಡನೆಯೇ ಲಜ್ಜೆಯ ಒತ್ತಡದಿಂದ ಮೈ ನವಿರೆದ್ದಿತು. ತಲೆ ತುಸು ಬಾಗಿತು. ಬಾಡಿದ್ದ ಕೆನ್ನೆಗಳಲ್ಲೆರಡು ಚೆಂಗುಲಾಬಿಗಳು ಅರಳಿದುವು. ಆದರೂ, ಅದನ್ನು ತೋರಗೊಡದೆ ಅವಳೆಂದಳು "ಈಗ ತಾನೇ ನಿದ್ದೆಯಿಂದ ಎದ್ದು ಬಂದೆ ಮಾವಾ."

"ಕಾಲೇಜಿಗೇಕೆ ಹೋಗಲಿಲ್ಲ ಮಗೂ?"

ಹೇಳಲಾರದೇ ಹೇಳಿದಳು "ಸುಮ್ಮನೆ."

ನುಡಿ ಕೇಳಿ ಕೊಠಡಿಯಿಂದ ಹೊರ ಬಂದ ನಂದಾ ನಗುಮುಖದಿಂದ ಕಾರಣವನ್ನು ಮುಂದಿಟ್ಟಳು.

"ಅವಳಿಗೆ ಮೈ ಚೆನ್ನಾಗಿಲ್ಲ. ಬೆಳಿಗ್ಗೆಯಿಂದ ವಾಂತಿಯಾಗುತ್ತಿದೆ. ಇದು ಮೂರನೆಯ ತಿಂಗಳು. ಪಾಪ, ಚಿಕ್ಕ ಹುಡುಗಿ ತಾಳಿಕೊಳ್ಳಲಾರಳು."

ವಿಷಯವನ್ನು ಅವಳು ಮೈಯೆಲ್ಲಾ ಮನಸ್ಸಾಗಿ ಬಿತ್ತರಿಸುತ್ತಿದ್ದರೆ ಇವಳಿಗೆ ಹೇಗೆಹೇಗೋ ಆಗುತಿತ್ತು. ಒಮ್ಮೆ ಓಡಿ ಹೋಗೋಣವೆನ್ನಿಸಿತು. ಆದರೆ ಕೈಯಲ್ಲಿ ತುಂಬು ಬಟ್ಟಲ ಚಹ. ಏನೂ ಮಾಡಲಾಗದೆ ನಾಚಿಕೆಯ ಭಾರದಿಂದ ಅತ್ತ ತಿರುಗಿ ನಿಂತುಕೊಂಡಳು. ವಿಷಯ ತಿಳಿದಾಗ ಅಘೋರನಿಗಾದ ಸಂತಸ ಅಷ್ಟಿಷ್ಟಲ್ಲ. ವಿಷಯವನ್ನು ಸ್ವಾಗತಿಸಿ ಉಕ್ಕಿಬಂದ ಸಂತೋಷದಿಂದ ಅವಳ ಭುಜವನ್ನು ಅದುಮಿ ಹಿಡಿದು–

"ಅದಕ್ಕೇಕೆ ನಾಚಿಕೆ ಮಗೂ? ಸಂತೋಷದಿಂದ ಸ್ವಾಗತಿಸುವ ವಿಷಯ ಇದು. ಮುಖ್ಯವಾಗಿ ಹೆದರಿಕೊಳ್ಳಬೇಡ. ದೇವರಿದ್ದಾನೆ."

ಅವಳ ಕೈಯಿಂದ ಚಹದ ಬಸಿಯನ್ನು ತೆಗೆದುಕೊಳ್ಳುತ್ತಾ ಪುನಃ– "ಪ್ರಭಾ, ನೀನೀಗ ತಿಳಿದುಕೊಳ್ಳಬೇಕಾದ ವಿಷಯ ಬಹಳವುಂಟು. ಬಾ ಕುಳಿತುಕೊ."

ಅಘೋರ ಸೋಫಾದ ಮೇಲೆ ಕುಳಿತುಕೊಂಡು ಅವಳನ್ನೂ ಬಳಿಯಲ್ಲಿ ಕುಳ್ಳಿರಿಸಿಕೊಂಡು ಸಾನಂದದಿಂದ ಅವಳ ತಲೆಯನ್ನು ನೇವರಿಸಿದ. ಅರಳಿದ ಅಘೋರನ ಮುಖ ಅಂತರಂಗವನ್ನು ಪ್ರತಿ ಬಿಂಬಿಸುತಿತ್ತು.

ನಂದಾ ಎದುರಿನ ಸೋಫಾದ ಮೇಲೆ ಕುಳಿತುಕೊಂಡಳು. ಅರವತ್ತೈದು ವಸಂತಗಳನ್ನು ದಾಟಿ ನಿಂತರೂ ಅವಳ ಶರೀರ ಮುಪ್ಪಿಗೆ ಶರಣಾಗದೆ ಉಳಿದಿತ್ತು. ಮೂವತ್ತರ ಹರಯದವರನ್ನೂ ಅಣಕಿಸುವಷ್ಟು ಚಟುವಟಿಕೆಯ ಬೀಡಾದ ಅವಳನ್ನು ಕುರಿತು ಅಘೋರ ತನ್ನ ಗೆಳೆಯರಿಗೆ ಬಣ್ಣಿಸುವಾಗ "ನಮ್ಮ ತಾಯಿ ಇನ್ನೂ Sweet sixteen?" ಅಂದುದುಂಟು.

ಅದನ್ನೇ ಕುರಿತು ಅಘೋರ ಅಂದ "ನೀನು ಒಂದಲ್ಲ–ನಾಲ್ಕು ಹೆತ್ತರೂ ನೋಡಿಕೊಳ್ಳಲು ಅಮ್ಮ ತಯಾರಿದ್ದಾರೆ. ಯೋಚಿಸಬೇಡ ಮಗೂ."

ಚಹದ ಖಾಲಿ ಬಸಿಯನ್ನು ಮೇಜಿನ ಮೇಲಿಟ್ಟು ಪ್ರಶಾಂತ ವದನದಿಂದ ಮುಂದುವರಿದ "ಪ್ರಭಾ, ಹೆಣ್ಣು ಎಷ್ಟು ಕಲಿತರೂ ತನ್ನ ಹೆಣ್ಣುತನದಿಂದ ಹೊರಗಿರುವುದು ಸಾಧ್ಯವೇಯಿಲ್ಲ. ಹೆಣ್ಣು ಎಂದೆಂದಿಗೂ ಹೆಣ್ಣೇ. ಉದಾಹರಣೆಗಾಗಿ ಅರವಿಂದಳನ್ನು ತೆಗೆದುಕೊ. ಅವಳು ಒಂದು ಮಗುವಿಗೆ ತೃಪ್ತಿ ಹೊಂದ ಬಹುದಾಗಿತ್ತು. ಆದರದು ಅವಳಿಂದ ಸಾಧ್ಯವಾಗಲಿಲ್ಲ. ಗಂಡು ಎಷ್ಟೇ ಕಲಿತರೂ ಗಂಡು ಗಂಡೇ. ಗಂಡುತನದಿಂದ ಅವನೆಂದೂ ಹೊರಗಿರಲಾರ. ಉದಾಹರಣೆಗಾಗಿ ನನ್ನನ್ನೇ ತೆಗೆದುಕೊ. ಅವಳನ್ನು ಕೇಳಿ ಒಪ್ಪಿಗೆ ಪಡೆದ ನಂತರ ನಾನು ವಾಸೆಕ್ಟಮಿ ಮಾಡಿಸಿಕೊಳ್ಳಬಹುದಾಗಿತ್ತು. ಕೆಲವಾರು ತಿಂಗಳುಗಳು ಕಳೆದಿದ್ದರೆ ಅನಾಹುತವೇನೂ ಆಗುತ್ತಿರಲಿಲ್ಲ. ಗಂಡುತನದಿಂದ ಹೊರಗಾಗದ ನಾನು ಅವಸರದ ಕ್ರಮ ಕೈಕೊಂಡು ಅವಳ ಹೂ ಮನಸ್ಸಿಗೆ ಮುಳ್ಳನ್ನು ನೆಟ್ಟು ಮಹಪರಾಧ ಮಾಡಿದ್ದೇನೆ. ಆಗದು ನನಗೆಷ್ಟು ಸುಲಭವಾಗಿ ತೋರಿತು ಗೊತ್ತೆ? ತಿಲೋತ್ತಮನಂತಾ ಮಗನಿದ್ದಾನೆ ಇನ್ನೇನು

ಬೇಕು? ಎಂಬ ಧೀರತನದಿಂದಲೇ ಮಾಡಿಸಿಕೊಂಡೆ. ನನ್ನ ಕ್ರಮವನ್ನು ನಾನೆಂದೂ ಅಕ್ರಮ ಎಂದು ಕೊಳ್ಳಲಿಲ್ಲ. ಆದರೆ, ಆನಂತರ ಆದ ಘೋರ ಪರಿಣಾಮನೆಂಥಾದ್ದು ?

"ಪ್ರಭಾ ಈ ಜೀವನ ಎಷ್ಟು ಘೋರ ಎಂಬುದನ್ನು ಬಲ್ಲವರೇ ಬಲ್ಲರು. ಅಭ್ರಕದ ಸೆಳೆ ಮಿಂಚು ಅಕಾರಣವಾಗಿ ಕಣ್ಣನ್ನು ಸೆಳೆಯುವಂತೆ ತನುಮನ ಗಳ ಕಾವು ಯೋಚಿಸಲೂ ಅವಕಾಶ ಕೊಡದೆ ನಮ್ಮನ್ನು ಸೆಳೆದುಕೊಳ್ಳುತ್ತವೆ. ನಾವು ಕಲಿತಿದ್ದರೂ ಜೀವನ ಕ್ಷಣ ಭಂಗುರ ಎಂಬುವನ್ನು ಅರಿತಿದ್ದರೂ ವಿಧಾತನ ಮುಂದೆ ಶರಣೋ ಶರಣು !..."ಅಘೋರ ಗಟ್ಟಿಯಾಗಿ ನಕ್ಕು ಪುನಃ ಮುಂದು ವರಿದ–

"ಪ್ರಭಾ, ಎಷ್ಟೆಂದರೂ ನಾವು ವಿಧಿಯ ಕೈಗೊಂಬೆಗಳು. ಪ್ರೇಮದ ಹೆಸರಿನಲ್ಲಿ ಕಾಮವನ್ನು ಆರಾಧಿಸಿ ಪ್ರೈಕಾವು ಆರುವವರೆಗೂ ಮೋಹ ಪಾಶ ದಿಂದ ಬಂಧಿತರಾಗಿ ದಕ್ಕದ ವಸ್ತುಗಳಿಗಾಗಿ ಆಸೆ ಪಟ್ಟು ಅಗಾಧವಾದ ದುಃಖ ವನ್ನು ಪಡೆಯುತ್ತೇವೆ. ಇದೇ ಜೀವನ. ಆದ್ದರಿಂದ, ಶ್ರೀ ಕೃಷ್ಣ ಪರಮಾತ್ಮ ಹೀಗೆಂದು ಉಪದೇಶ ಮಾಡಿದ್ದಾನೆ. ಕೇಳು ಮಗೂ

"ಯಃ ಸರ್ವತ್ರಾನಭಿಸ್ನೇಹಸ್ತತ್ತತ್ ಪ್ರಾಪ್ಯ ಶುಭಾಶುಭಮ್ |
ನಾಭಿನಂದತಿ ನ ದ್ವೇಷ್ಟಿ ತಸ್ಯ ಪ್ರಜ್ಞಾ ಪತಿಷ್ಠಿತಾ ||"

ಅಂದರೆ, ಮಗೂ, ಯಾವನು ವಸ್ತು ವಸ್ತುಗಳಲ್ಲಿಯೂ ಆಸಕ್ತಿ ರಹಿತ್ನ ನಾಗಿ ಆಯಾ ಪ್ರಿಯಾಪ್ರಿಯ ವಿಷಯಗಳನ್ನು ಪಡೆದಾಗ ಸಂತೋಷಿಸುವು ದಿಲ್ಲವೋ ದ್ವೇಷಿಸುವುದಿಲ್ಲವೋ ಆತನ ಪ್ರಜ್ಞೆಯು ಸ್ಥಿರವಾದುದು. ಎಂದು ಅರ್ಥವು. ಆದ್ದರಿಂದ ಜೀವನದಲ್ಲಿ ನಾನಾ ಕಷ್ಟ ಸುಖಗಳು ಬರುವುದು ಸಹಜ. ಈಸಬೇಕು ಇದ್ದು ಜೈಸಬೇಕು. ಯಾವುದನ್ನೂ ಹೆಚ್ಚಾಗಿ ಹಚ್ಚಿಕೊಳ್ಳದೆ ಬದು ಕನ್ನು ಹಗುರ ಮಾಡಿಕೊಳ್ಳುವುದು ಲೇಸು. ನಮ್ಮಂತೆ ನೀವೂ ಜೀವನದಲ್ಲಿ ಕಹಿಯನ್ನುಣ್ಣಬಾರದೆಂದೇ ನನ್ನ ಅನುಭವವನ್ನು ಇಂದು ನಿನ್ನ ಮುಂದಿಡು ತಿದ್ದೇನೆ. ಅಷ್ಟಲ್ಲದೆ ಇದರಲ್ಲಿ ಇನ್ಯಾವ ವಿಶೇಷವೂ ಇಲ್ಲ.

"ತಿಲೋತ್ತಮಳಿಗೆ ತಾಯಿಯ ಕೊರತೆಯನ್ನು ನೀಗಿಸಲು ನಾನು

ತಾಯಿಯ ಪಾತ್ರವನ್ನೂ ತೆಗೆದುಕೊಂಡಿದ್ದೇನೆ. ಅವಳ ಮನೋ ವಿಕಲ್ಪಕ್ಕೆ ನಾನೇ ಕಾರಣನೆಂಬ ನೋವು ನನ್ನನ್ನು ಈಗಲೂ ಹಣ್ಣು ಮಾಡುತ್ತಿದೆ. ನಮ್ಮ ದಿನಗಳಂತೂ ದುಃಖದ ಬೀಡಾಗಿಯೇ ಉಳಿದುವು. ಅಂತಲೇ ನಾನು ನಿನಗೆ ಹೇಳುತಿದ್ದೇನೆ. ಜೀವನದಲ್ಲಿ ಸುಖಿಯಾಗಬೇಕಾದರೆ ಆಸೆಯನ್ನು ಬದಿಗೊತ್ತಿ ನಿಮ್ಮ ನಿಮ್ಮ ಕರ್ತವ್ಯವನ್ನು ಮಾಡುತ್ತಾ ಹೋಗಿರಿ. ಈ ವಿಚಾರದಲ್ಲೂ ಶ್ರೀ ಕೃಷ್ಣನ ಉಪದೇಶಾಮೃತವನ್ನು ಕೇಳು–

"ನಿಯತಂ ಕುರು ಕರ್ಮ ತ್ವಂ ಕರ್ಮ ಜ್ಯಾಯೋ ಹ್ಯಕರ್ಮಣಃ |
ಶರೀರಯಾತ್ರಾಪಿ ಚ ತೇ ನ ಪ್ರಸಿಧ್ಯೇದಕರ್ಮಣಃ ||"

"ಅಂದರೆ, ನೀನು ನಿತ್ಯಕರ್ಮವನ್ನು ಮಾಡು, ಏಕೆಂದರೆ ಅಕರ್ಮಕ್ಕಿಂತ ಕರ್ಮವು ಉತ್ತಮವು, ಕರ್ಮವನ್ನು ಮಾಡದೇ ಇರುವುದರಿಂದ ನಿನಗೆ ಜೀವನ ಯಾತ್ರೆಯು ಕೂಡಾ ಸಾಧ್ಯವಾಗಲಾರದು ಎಂದರ್ಥ."

ಓಂ ಪ್ರಭಾ ಮಾತಾಡಲಿಲ್ಲ. ಕಣ್ಣುಗಳಲ್ಲಿನ ಎರಡು ಹನಿ ಎದೆಯ ಮೇಲುರುಳಿದುವು. ನಂದಾದೇವಿಯ ಹೃದಯ ತುಂಬಿ ಬಂದಿದ್ದರೂ ನೋಡುತಿದ್ದಂತೆ ಆವಳಿಗಾಗಿ ಅನುಕಂಪದಿಂದ ಮಿಡಿಯಿತು. ಅವಳೆಂದಳು

"ಪಾಪ, ಈ ಸಲ ಪರೀಕ್ಷೆಗೆ ಅವಳು ಕೂಡುವಂತಿಲ್ಲ."

"ಅದಕ್ಕೇಕೆ ದುಃಖ? ಈ ತಡೆ ತಾತ್ಕಾಲಿಕ. ಈ ಸಲ ಕೂರಲಾಗದಿದ್ದರೇನಂತೆ? ಇನ್ನೊಂದಾವರ್ತಿ ಕುಳಿತರಾಯಿತು." ಎಂದ ಅಘೋರ ಪುನಃ ಸೊಸೆಯನ್ನು ಕುರಿತು–"ನೀನೊಮ್ಮೆ ಹೆತ್ತೆಯೆಂದರೆ ಸಾಕುವವರಿಗೇನು ಕಡಿಮೆ? ಅನಂತರ ನಿನ್ನ ದಿನಚರಿಯನ್ನು ಯಥಾ ರೀತಿ ಸಾಗಿಸಬಹುದು. ಮಗುವಿನ ಭಾರ ಹೊರಲು ನಮ್ಮಮ್ಮ ಇದ್ದಾರೆ. ನಿನ್ನ ಕ್ಷೇಮ ನೋಡಿಕೊಳ್ಳಲು ಸ್ವತಃ ನಿನ್ನ ತಾಯಿ ಇದ್ದಾರೆ. ಯೋಚಿಸಬೇಡ ಮಗೂ."

ಮೇಜಿನ ಮೇಲಿದ್ದ ಟೆಲಿಫೋನಿನ ಗಂಟೆ ಭಾರಿಸಿತು. ಅಘೋರ ರಿಸೀವರನ್ನು ಎತ್ತಿಕೊಂಡು "ಹಲೋ!" ಎಂದ.

"ದಯವಿಟ್ಟು ಕ್ಷಮಿಸಿ ಸಾರ್, ನಳಿನಿ ಹೋಗಿ ಬಿಟ್ಟಳು."

"ಅಯ್ಯೋ, ಪಾಪ! ಅರ್ಧ ದಿನ ಜೀವದಾನ ಮಾಡಿದಂತಾಯಿತು ಅಷ್ಟೆ. ಪಾಪ...ಹೆಣ್ಣು ಬಲು ಸೂಕ್ಷ್ಮ" ದನಿಯಲ್ಲಿ ದುಗುಡವಿತ್ತು.

ಅಧ್ಯಾಯ

೪೦

ತಿಲೋತ್ತಮನಿಗೆ ಅಮೆರಿಕೆಯಿಂದ ಸ್ಕಾಲರ್‌ಷಿಪ್ ಬಂದಾಗ ಓಂ ಪ್ರಭಾಳಿಗೆ ಸಂತೋಷವಾಗಲಿಲ್ಲ. ಹೃದಯದಾಳದಲ್ಲಿ ತಳಮಳವೆದ್ದು ಮುಖ ಕಪ್ಪಿಟ್ಟಿತು. ತಿಲೋತ್ತಮ ಬೇಕೆಂತಲೇ ಅವಳನ್ನು ರೇಗಿಸಲು ಗೋಣು ಅಲ್ಲಾಡಿಸುತ್ತಾ ಅಂದ–"ಓಂ ಪ್ರಭಾ ದೇವಿಯವರೇ, ನಾನು ನಿಮಗಾಗಿ ಕಾಯುವಂತಿಲ್ಲ!" ಕಣ್ಣುಗಳು ಅರಳಿದುವು. ಹುಬ್ಬುಗಳು ಏರಿ ಇಳಿದುವು. ಕಿಲಕಿಲ ನಗು ಹೊರಹೊಮ್ಮಿತು.

"ಓ, ಅದೆಲ್ಲಾ ಬೂಟಾಟಿಕೆ!" ನುಡಿ ಹೆಮ್ಮೆಯಿಂದ ಹೊರಬಿದ್ದರೂ ಮನಸ್ಸು ಅಳುಕಿತು.

"ಹೇಗೂ ನೀನು ಬರುವಂತಿಲ್ಲ. ನಾನಂತೂ ಹೊರಟು ಬಿಡುವೆ!" ಮುಖದಲ್ಲಿ ತುಂಟತನ ನಲಿಯುತಿತ್ತು.

"ಆಗಲೇ ಹೇಳಿದೆನಲ್ಲಾ?"

"ಧೈರ್ಯವಿದ್ದೂ ಮುಖ ಸಪ್ಪಗಾಯಿತಲ್ಲಾ, ಅದೇಕೆ? ಕಿಲಕಿಲ ನಕ್ಕು ಬಿಟ್ಟ ತಿಲೋತ್ತಮ.

ಮೌನವೇ ಉತ್ತರವಾಯಿತು. ಹುಸಿಕೋಪದಿಂದ ಹುಬ್ಬುಗಳು ಗಂಟಿಕ್ಕಿದುವು. ಕೆನ್ನೆಗಳಲ್ಲಿ ರಂಗು ಮೂಡಿತು.

"ಹೊರಡು ಹೋಗಿ ಬಿಡೋಣ. ಅಲ್ಲಿಯವರು ಹೆರುವುದಿಲ್ಲವೆ?"

ಅವಳ ಕೆಂಪು ಮುಖ ಮತ್ತಷ್ಟು ಕೆಂಪಡರಿತು. ಅತ್ತ ತಿರುಗಿ ನಿಂತು ಕೊಂಡಳು. ತಿಲೋತ್ತಮ ಕಿಲಕಿಲನೆ ನಕ್ಕು ಅವಳನ್ನು ತನ್ನೆಡೆಗೆ ತಿರುಗಿಸಿ ಕೊಂಡು ನೋಡಿದರೆ ಕಣ್ಣಿನಲ್ಲಿ ಹನಿಗಳು ಥಳ ಥಳ ಮಿಂಚುತ್ತಿವೆ.

"ಅಯ್ಯೋ ಹುಚ್ಚು ಹುಡುಗಿ! ನಮ್ಮ ಅಮ್ಮನಂತೆ ನೀನೂ ತಲೆ ಕೆಡಿಸಿಕೊಂಡೀಯಾ ಮತ್ತೆ? ನಿನಗೆ ಹೆರಿಗೆ ಆಗುವವರೆಗೆ ನನ್ನನ್ನು ದಬ್ಬಿ ದರೂ ಹೋಗುವುದಿಲ್ಲ, ಬಿಡು!"

ಕಂಬನಿಯನ್ನು ತೀಡಿಕೊಂಡು ಅವಳೆಂದಳು "ನೀವೇನಪ್ಪಾ, ಎಷ್ಟೆಂದರೂ ಗಂಡಸರು, ಹಾಯಾಗಿರುತ್ತೀರಿ. ನಮ್ಮ ಹಾಗೆ ಸದಾ ತಲೆ ಹೊರೆ ಹೊತ್ತುಕೊಳ್ಳಬೇಕೇನು ?"

"ಅದೆಷ್ಟೇ ಹೊರೆ ಇರಲಿ, ನಾನರ್ಧ ಹೊತ್ತುಕೊಳ್ಳುವೆ, ನೀನು ಯೋಚಿಸಬೇಡ."

"ಎಲ್ಲರೂ ಅನ್ನುವುದೇ ಹಾಗೆ. ಹೊರೆ ಮಾತ್ರ ನಮ್ಮ ತಲೆಗೇ ಕಟ್ಟಿಟ್ಟದ್ದು."

"ಈಗೇನು ಮಾಡಬೇಕು ಹೇಳು, ಮಾಡುವೆ." ಹಾಸ್ಯದ ಧಾಟಿ ಯಲ್ಲಿ ಕೇಳಿದ. ಕೆನ್ನೆಗಳಲ್ಲಿ ತುಂಟನಗೆ ನಲಿಯುತಿತ್ತು.

ಅವಳು ಮಾತಾಡಲಿಲ್ಲ. ಮುಖದಲ್ಲಿ ಬಿಸಿಲು ಮಳೆಗಳು ತಲೆದೋರಿ ದುವು.

"ಪರಡು ಯೂನಿವರ್ಸಿಟಿಗೆ ಇದ್ದ ವಿಷಯ ಬರೆದು ಹಾಕಿ ನಿನಗೆ ಹೆರಿಗೆಯಾಗುವವರೆಗೆ ಕಾಲಾವಕಾಶ ಬೇಡುವೆ." ಎರಡೂ ಭುಜಗಳನ್ನು ಅದುಮಿ ಹಿಡಿದುಕೊಂಡು ಕೇಳಿದ. ಕಣ್ಣುಗಳಲ್ಲಿ ತುಂಟತನ ನಲಿಯು ತಿತ್ತು.

"ಥೂ !" ಓಂ ಪ್ರಭಾ ಅಲ್ಲಿ ನಿಲ್ಲದೆ ಓಡಿಹೋದಳು. ಹಿಂದಿನಿಂದ ತುಂಟುನಗು ಹೊರಹೊಮ್ಮಿತು. ಹಿ ಹ್ಹಿ ಹ್ಹೀ !

ಓಂ ಪ್ರಭಾ ಗೃಹಿಣಿಯಾಗಿ ಬಂದಾಗಿನಿಂದ ಅಘೋರ ಮನೆಯ ಕಡೆ ಹೆಚ್ಚು ಹೆಚ್ಚು ಆಕರ್ಷಿಸಲ್ಪಡುತಿದ್ದ. ಮನೆಯಲ್ಲಿನ ಕುಲು ಕುಲು ನಗುವಿನ ವಾತಾವರಣ ತನುಮನಗಳಿಗೆ ತಂಪನ್ನೀಡುತಿತ್ತು. ತಂದೆ ಬಂದೊಡನೆಯೇ ತಿಲೋತ್ತಮ ಸತಿಯೊಡನೆ ಬಂದು ಕೂಡುತ್ತಿದ್ದ. 'ಮಾವ' ನೊಡನೆ ಹಿಂದಿನ ಅದೇ ಸಲಿಗೆಯಿಂದ ಓಂ ಪ್ರಭಾ ಮಾತುಕತೆಗಳಲ್ಲಿ ಭಾಗವಹಿಸು ತ್ತಿದ್ದಳು. ಓಂ ಪ್ರಭಾ ತಿನ್ನುವುದೇ ಇಲ್ಲವೆಂದು ನಂದಾದೇವಿಯ ದೂರು. 'ನಂದಕ್ಕ' ಮಿತಿಮೀರಿ ಬಡಿಸುತ್ತಾರೆ ಎಂದು ಓಂ ಪ್ರಭಳ ದೂರು. ಹೀಗೆ ಆರೋಪ ಪ್ರತ್ಯಾರೋಪಗಳಲ್ಲಿ ಹೊತ್ತು ಉರುಳಿದುದೇ ಗೊತ್ತಾಗುವಂತಿರ ಲಿಲ್ಲ. ಇಂಥ ಒಂದು ಸಂತೋಷಕರವಾದ ವಾತಾವರಣ ಹುಟ್ಟಳಿದು ಹೋಗಲಿದೆಯಲ್ಲಾ ಎಂದು ಅಘೋರ ಮಗನಿಗೆ ಸ್ಕಾಲರ್‌ಷಿಪ್ ಬಂದಾಗ

ಸಂತೋಷಿಸುವ ಬದಲು ಮರುಗಿದ.

ಡಾ|| ಸೌಮಾಳ ತಾಯಿ ಹಿಂದೆಯೇ ತೀರಿಕೊಂಡಿದ್ದುದರಿಂದ ಓಂಪ್ರಭಾ ತಾಯಿಯ ಮನೆಗೆ ಹೋಗದೆ ನಂದಾದೇವಿಯ ಆರೈಕೆಯಲ್ಲಿಯೇ ಉಳಿದಳು. ಡಾ|| ಸೌಮಾ ದಿನಕ್ಕೊಮ್ಮೆ ಬಂದು ಹೋಗುತ್ತಿದ್ದುದರಿಂದ ಓಂ ಪ್ರಭಾ ಬೇಸರವಿಲ್ಲದೆ ನವಮಾಸಗಳನ್ನು ಸುಲಲಿತವಾಗಿ ಕಳೆದು ಆಸ್ಪತ್ರೆಗೆ ಸೇರಿದಳು.

ಅಂದು ಸುದ್ದಿ ತಿಳಿದೊಡನೆ ಅವಳನ್ನು ನೋಡಿ ಹೋಗಲು ಅದೇ ಸಂಜೆ ವಂದನಾ ಆಗಮಿಸಿದಳು. ವಾರ್ಡಿನೊಳಗೆ ಕಾಲಿಡುತ್ತಲೇ ಒಂದು ಹೆಜ್ಜೆ ಹಿಮ್ಮೆಟ್ಟಿ ನಿಂತು—

"ಓ ಹೋ ಹೋ ! ಅರಮನೆಯ ವೈಭವವೇ ಬಂದು ಬಿಟ್ಟಿದೆಯಲ್ಲಾ ?"

ನಗು ಮುಖದಿಂದ ಹುಬ್ಬೇರಿಸಿದಳು ವಂದನಾ. ಕಣ್ಣುಗಳು ಅರಳಿದುವು.

ಓಂ ಪ್ರಭಾ ಮಾತಾಡದೆ ನಸು ನಕ್ಕಳು.

"ಮಾವ ಡಾಕ್ಟರ್ ! ಅಮ್ಮ ಡಾಕ್ಟರ್ ! ಇದ್ದರೆ ಹೀಗಿರಬೇಕು ನೋಡು !"

"ನಿಮಗೆ ತಾನೇ ಏನು ಕಡಿಮೆ ಈಗ ?"

"ಅಮ್ಮಮ್ಮ ! ಇಷ್ಟು ವೈಭವ ನಮಗೆಲ್ಲಿ ಬರಬೇಕು ?"

"ನೀವೊಂದು ಹೆಣ್ಣು ಹೆತ್ತು ಬಿಡಿ. ನಿಮಗೂ ಇಷ್ಟೇ ವೈಭವ ಒದಗಿಸುತ್ತಾರೆ ಮದನ್ ಮಾಮ !" ಹಾಸ್ಯದ ಚಟಾಕಿ ಹಾರಿಸಿದಳು ಓಂ ಪ್ರಭಾ.

ಇಬ್ಬರ ಮುಖದಲ್ಲೂ ನಗು ಮಿನುಗಿತು. ವಂದನಾ ನಕ್ಕು ನುಡಿದಳು.

"ಓ, ನೀನೀಗ ಹೆಣ್ಣು ಹೆರುತ್ತೀಯೇನು, ಹಾಗಿದ್ದರೆ ?"

ಪ್ರಭಳ ಮುಖ ಕೆಂಪು ಕೆಂಪಾಯಿತು.

"ನೋವು ಬರುವಾಗ ಹೆದರಿಕೊಳ್ಳಬೇಡ."

"ಇಲ್ಲ."

ಬಾಗಿಲ ಬಳಿ ಪಾದ ಸಪ್ಪಳದೊಂದಿಗೆ ಕಲಕಲ ನಗುವಿನ ನಿನಾದವೂ ಕೇಳಿ ಬಂದಿತು. ಡಾಕ್ಟರುಗಳು ಒಳ ಬರುವ ಮುನ್ನ ಅತ್ತರಿನ ಕೆಂಪು ನುಗ್ಗಿ ಬಂದು ಅವರ ಆಗಮನದ ಸುದ್ದಿಯನ್ನು ನಲ್ಮೆಯಿಂದ ಬಿತ್ತರಿಸಿತು. ಇಬ್ಬರ ಕಣ್ಣುಗಳೂ ಬಾಗಿಲ ಕಡೆ ಹೊರಳಿದುವು. ಡಾ|| ಚೆಲುವಾಂಬ ತನ್ನ ದಳ

ದೊಂದಿಗೆ ವಾರ್ಡಿನೊಳಗೆ ಪದಾರ್ಪಣೆ ಮಾಡಿದಳು. ಮುಖದಲ್ಲಿ ನಗೆಮಲ್ಲಿಗೆ ಅರಳಿತ್ತು. ಒಳ ಬಂದವಳೇ ಓಂ ಪ್ರಭಾಳ ಕೈಯನ್ನು ಅದುಮಿ ಹಿಡಿದು ಕೊಂಡು–

"ನಿನಗೆ ಎಂಥಾ ಮಗು ಬೇಕೆಂಬುದನ್ನು ಹೇಳಿ ಬಿಡು. ಗಂಡು ಬೇಕಾ ದರೆ ಗಂಡು! ಹೆಣ್ಣು ಬೇಕಾದರೆ ಹೆಣ್ಣು!"

"ಸೈನ್ಸ್ ಇನ್ನೂ ಅಷ್ಟು ಮುಂದೆ ಹೋಗಲಿಲ್ಲ."

ಓಂ ಪ್ರಭಾಳ ಸಲುವಾಗಿ ವಂದನಾ ಉತ್ತರಿಸುತ್ತಲೂ ಡಾ|| ಚೆಲು ವಾಂಬ ನಗುತ್ತಾ ಹುಬ್ಬೇರಿಸಿ–"ಓ, ಸ್ವಂತ ಅನುಭವ!"

ಒಡನೆ ಎಲ್ಲರೂ ನಗುವಿನ ಗುಳ್ಳೆಬ್ಬಿಸಿದರು.

ಡಾ|| ಸೌಮಾ ಡಾ|| ಚಂಪಾ ಹಾ|| ಶಾರದಾ ಡಾ|| ಹೇಮಾ ಡಾ|| ಸಕ್ಕೂರವರಿದ್ದ ದಳ ಚಕಮಕಿಯಾಗಿತ್ತು. ಡಾ|| ಶಾರದಾ ಹುಬ್ಬು ಹಾರಿಸಿ ಪ್ರಭಾಳಿಗೆ ಗೇಲಿ ಮಾಡಲು–"ಓಂ ಪ್ರಭಾ, ನನಗಿಂದು ಡ್ಯೂಟಿ ಇದೆ. ನಿನ್ನ ಡ್ಯೂಟಿಯೂ ನನಗೇ ಸೇರಿದ್ದು!"

"ಓಹೋ! ನಿನಗೆ ಸುಲಭವಾಗಿ ದಕ್ಕಿತು ಚಾನ್ಸ್!"

"ಅವಳಮ್ಮ ನನ್ನು ಬಿಟ್ಟು ನಿನ್ನನ್ನೇಕೆ ಕರೆದಾಳು?" ಚಂಪಳ ಸವಾಲು.

"ನಿನಗೆ ಯಾವ ಡಾಕ್ಟರು ಇಷ್ಟವೋ ಹೇಳಿಬಿಡು. ಅವರಿಗೆ ರಜೆ ಕೊಟ್ಟು ನಿನ್ನ ಜತೆಯಲ್ಲಿರಿಸುತ್ತೇನೆ." ಡಾ|| ಚೆಲುವಾಂಬ ಹಾಸ್ಯದ ಚಟಾಕಿ ಹಾರಿಸಿದಳು.

ಮಾತು ಹೊರಬಿತ್ತೋ ಇಲ್ಲವೋ ಸೌಮಾಳನ್ನುಳಿದು ಎಲ್ಲಾ ಡಾಕ್ಟರು ಗಳೂ ಸುತ್ತುವರಿದು ನಿಂತು ಒಂದೇ ಬಾರಿಗೆ ಕೇಳಿದರು "ನಾನು?... ನಾನು?...ನಾನಾದರೆ ಆದೀತೋ?"

ಹುಡುಗಿಯ ಫಜೀತಿಯನ್ನು ನೋಡಿ ಡಾ|| ಚೆಲುವಾಂಬ ಡಾ|| ಸೌಮಾ ಕಿಲಕಿಲನೆ ನಕ್ಕರು. ಒಡನೆ ಎಲ್ಲರ ನಗುವಿನ ಲಹರಿಯೂ ಮಾಡು ಮುಟ್ಟುವಂತೆ ಮೊಳಗಿತು.

"ನಿನಗೆ ಬೇಕಾಗಿರುವುದು ನಿನ್ನ ಅಮ್ಮ ಮಾತ್ರ." ಚಂಪಾ ಹುಬ್ಬೆತ್ತಿ ಅಣಕಿಸಿದಳು "ನೀನು ಬಹಳ ಸ್ವಾರ್ಥಿ ಕಣೆ!"

ತುಸು ಹೊತ್ತು ಉರುಳುವುದರೊಳಗಾಗಿ ಡಾ|| ಅಘೋರ ತನ್ನ ದಳ ದೊಂದಿಗೆ ಆಗಮಿಸಿದ. ಪಟ ಪಟ ಪಾದಗಳ ಸದ್ದು ಮುನ್ಸೂಚನೆ ನೀಡು

ತ್ತಲೂ ಎಲ್ಲರ ನೋಟವೂ ಬಾಗಿಲ ಕಡೆ ಹರಿಯಿತು.

"ಇಷ್ಟೊಂದು ಮಂದಿ ಡಾಕ್ಟರುಗಳನ್ನು ನೋಡಿದರೆ ಪ್ರಭಾ ಹೆದರಿ ಹೋಗುವುದೇ ಸರಿ." ಎಂದಳು ವಂದನಾ.

"ಓಹೋ ಹೋ! ಸಾಕೇ ಡಾಕ್ಟರುಗಳು? ಒಂದಲ್ಲ ಹತ್ತು ಮಕ್ಕಳನ್ನಾದರೂ ಹೆತ್ತು ಕೊಟ್ಟಾರು!" ಅಘೋರ ಸೊಸೆಗೆ ಗೇಲಿ ಮಾಡಿದ. ಪುನಃ ನಗುವಿನ ಲಹರಿ ಉಕ್ಕಿ ಹರಿಯಿತು. ನಗುಮೊಗದಿಂದ ಪುನಃ ಕೇಳಿದ "ಪ್ರಭಾ, ನಿನಗೆ ಇನ್ನೇನೂ ಭಯವಿಲ್ಲ ತಾನೆ?"

ಪ್ರಭಾ ಲಜ್ಜೆಯಿಂದ ಕೆಂಪಡರಿದಳು. ಸ್ವಲ್ಪವಾದರೂ ಮುಖಮರೆ ಮಾಡಿಕೊಳ್ಳೋಣವೆಂದು ಯಾವ ಕಡೆ ತಿರುಗಿದರೂ ಡಾಕ್ಟರುಗಳು! ಅವಳ ಸ್ಥಿತಿಯನ್ನು ನೋಡಿದೊಡನೆಯೇ ಪುನಃ ಕಿಲಕಿಲ ನಗುವಿನಲೆಯೆದ್ದಿತು.

ಬಾಗಿಲ ಬಳಿ ಕಟಕಟ ಸದ್ದು ಮಾಡಿ ತಿಲೋತ್ತಮ ಒಳ ಬಂದ. ಎಲ್ಲರ ನಗುಮುಖಗಳು ಸ್ವಾಗತ ನೀಡಿದುವು. ಡಾ|| ಚೆಲುವಾಂಬ ತಮಾಷೆಯ ಧಾಟಿಯಲ್ಲಿ–

"ತಿಲೋ, ನಿನಗೆ ಮಗ ಬೇಕೋ? ಮಗಳು ಬೇಕೋ?"

"ನನಗೆ ಮಗನೇ ಇರಲ್ಲಪ್ಪಾ."

"ತುಂಬಾ ಸ್ವಾರ್ಥಿ ನೀನು, ಪ್ರಭಾನನ್ನು ಕೇಳದೆ ಹೇಳಿಬಿಡುವುದೇ?"

"ನೀವೇ ಕೇಳಿ ನೋಡಿರಿ. ಅವಳು ಬಯಸಿದುದೂ ಅದೇ."

ನುಡಿ ಹೊರ ಬಿದ್ದಾಗ ತಿಲೋತ್ತಮನ ಮುಖವರಳಿ ಮಂದ ಹಾಸ ನಲಿಯಿತು.

ಅಘೋರ ನಡುವೆ ಬಾಯಿ ಹಾಕಿದ–

"ಅದೂ ಇದೂ ಅನ್ನಲೇ ಬಾರದು. ಯಾವುದಾದರೂ ಸರಿಯೆ."

ಒಡನೆ ಅನೇಕ ದನಿಗಳು ಒಮ್ಮೆಲೇ ಮೊಳಗಿದವು "ಈಗೀಗ ಡಾಕ್ಟರ್ ಮಹಾಶಯರು ಬಹಳ ಪಳಗಿದ್ದಾರೆ!"

ಪುನಃ ನಗುವಿನ ಲಹರಿ ಹುಚ್ಚೆದ್ದು ಮೊಳಗಿತು. ಅಘೋರ ಅಪರೊಂದಿಗೆ ತನ್ನ ದನಿಯನ್ನು ಹರಿಯಗೊಟ್ಟ.

ಮರುದಿನ ಸಾಯಂಕಾಲ ಸಮಯದಲ್ಲಿ ಓಂ ಪ್ರಭಾ ಗಂಡು ಮಗುವಿಗೆ ಜನ್ಮವಿತ್ತಾಗ ಸಂಜೆಯ ತಿಳಿಗಾಳಿ ತಣ್ಣಗೆ ಬೀಸುತಿತ್ತು. ಭಾರತದ

ನೂತನ ಭರತನಿಗೆ ಖಗಪಕ್ಷಿಗಳ ಇನಿಗಾನ ಸ್ವಾಗತ ನೀಡಿತು. ಎಲ್ಲರ ಹರ್ಷವು ಹೂಮಳೆ ಕರೆಯಿತು. ಡಾ॥ ಚೆಲುವಾಂಬಾ ಮಗುವನ್ನೆತ್ತಿ ಕೊಂಡು ಹೊರಬಂದಾಗ ಮೈಯೆಲ್ಲಾ ಮನಸ್ಸಾಗಿ ಕಾದಿದ್ದ ಅಘೋರನ ಮುಖ ಹೂವಿನಂತರಳಿತು. ಎರಡೂ ಕೈಗಳನ್ನು ನೀಡಿದ. ಮಗುವನ್ನು ಅವನ ಕೈಗಿಡುತ್ತಾ ಹರಸಿದಳು ಡಾ॥ ಚೆಲುವಾಂಬಾ–

"God bless the new soul of India!"

"Thank you Doctor." ಅಘೋರ ವಿನೀತನಾಗಿ ಅಂದ.

ಎಳೆಯ ಅಣುಗರಂತೆ ಮಗುವನ್ನೆತ್ತಿಕೊಂಡು ನಲಿದಾಡಿ ಹರ್ಷದ ಹೂಮಳೆಗರೆಯುತ್ತಾ ಹೆಮ್ಮೆಯ ಧಾಟಿಯಲ್ಲಿ ಅಘೋರ–

"ತಿಲೋ ಹುಟ್ಟಿದಾಗ ಹೀಗೇ ಇದ್ದ!"

ನುಡಿ ಹೊರ ಬೀಳುತ್ತಲೂ ಡಾ॥ ಚಲುವಾಂಬಾ ಡಾ॥ ಸೌಮ್ಯಳ ಕಡೆ ಹುಬ್ಬು ಹಾರಿಸಿ–"ನೀವೇಕೆ ಕೇಳಿಕೊಂಡು ಸುಮ್ಮನಿದ್ದೀರಿ ಡಾಕ್ಟರ್? ಓಂ ಪ್ರಭಾ ಹುಟ್ಟಿದಾಗ ಹೀಗಿರಲಿಲ್ಲವೇ?"

ಪುನಃ ಕಿಲಕಿಲ ನಗುವಿನ ನಿನಾದ ತುಂಬಿ ಹರಿಯಿತು.

ಅಘೋರ ಮಗುವನ್ನು ಎದೆಗಪ್ಪಿ ಹಿಡಿದುಕೊಂಡು ತನ್ನನ್ನು ತಾನೇ ಸಮರ್ಥಿಸಿಕೊಂಡ–

"ಇಲ್ಲ, ಇಲ್ಲ. ತಿಲೋ ಹುಟ್ಟಿದಾಗ ಮಾತ್ರ ಹೀಗಿದ್ದುದು."

ಡಾ॥ ಸೌಮ್ಯಾ ಮಾತಾಡದೆ ಮಂದಹಾಸ ಬೀರಿದಳು.

ಆದ್ದರಿಯಿಂದ ನಾಮಕರಣದ ನಂತರ ತಿಲೋತ್ತಮ ಅಮೆರಿಕೆಗೆ ಹೊರಡುವ ಮುನ್ನ ತಾಯಿಯನ್ನು ನೋಡಲು ಆಸ್ಪತ್ರೆಗೆ ಹೋದ. ಆವಳು ಎರಡುಮೂರು ವರ್ಷದ ಮಗುವೊಂದನ್ನು ಎತ್ತಿಕೊಂಡು ಹೂದೋಟದಲ್ಲಿ ಅಡ್ಡಾಡುತ್ತಾ ಮುದ್ದುಗೈಯುತಿದ್ದಳು. ತಿಲೋತ್ತಮ ಅಲ್ಲಿಂದಲೇ ತಂದೆ ಯೊಡನೆ ಒಂದು ಹೆಜ್ಜೆ ಹಿಮ್ಮೆಟ್ಟಿ ನೋಡುತ್ತಾ ನಿಂತ. ಅವರು ಬಂದು ದನ್ನು ಅರಿಯದ ಅರವಿಂದಾ ಮಗುವಿನೊಡನೆ ಲಲ್ಲೆಯಾಡುತ್ತಾ ತನ್ನಲ್ಲಿ ತಾನೇ ಏನೋ ಚಡಪಡಿಸುತ್ತಿದ್ದಳು.

"ದೊಡ್ಡಮ್ಮ ಲಾಲಾ ಎಲ್ಲಿ?" ಮಗು ಮುದ್ದು ಮಾತಿನಿಂದ ಕೇಳಿತು.

"ಎಲ್ಲೋ ಹೋಗಿದ್ದಾನೆ. ಈಗ ಬರುತ್ತಾನೆ."

"ಮಿಠಾಯಿ ತರುತ್ತಾನೆಯೇ ?"

"ನೀನು ಗಲಾಟೆ ಮಾಡದಿದ್ದರೆ ಮಾತ್ರ ಮಿಠಾಯಿ."

"ನಾನು ಗಲಾಟೆ ಮಾಡುವುದೇ ಇಲ್ಲ."

"ಹಾಗಿದ್ದರೆ ನಿನಗೆ ಮಿಠಾಯಿ ಉಂಟು."

"ಅಮ್ಮಾ ಹತ್ತಿರ ಕಾಸಿಲ್ಲವಲ್ಲಾ ?"

"ತಂದನಂತರ ಕೊಟ್ಟರಾಯಿತು."

ಅರವಿಂದಾ ಈಗೀಗ ನೈಜ ಸ್ಥಿತಿಗೆ ಬರುತ್ತಿದ್ದಾಳೆ ಎಂದೆನಿಸಿದಾಗ ಅಘೋರನ ಹೃದಯ ಉಕ್ಕೇರಿತು. ಹೆಜ್ಜೆಗಳು ಆದೇಶವಿಲ್ಲದೇನೇ ಮುಂದು ವರಿದುವು. ಹತ್ತಿರ ಹೋದವನೇ ಆಸಕ್ತಿಯಿಂದ ಕೇಳಿದ "ಅರೂ, ಅದ್ಯಾವ ಮಗೂ ?"

"ಲಾಲನ ತಮ್ಮ." ಅರವಿಂದಾ ಕಣ್ಣರಳಿಸಿ ನುಡಿದಳು.

ಅಘೋರ ಸುತ್ತಲೂ ನಿಟ್ಟಿಸಿದ. ಎಲ್ಲಿಯೂ ದಾದಿ ಕಣ್ಣಿಗೆ ಬೀಳಲಿಲ್ಲ. ಮಗುವಿನ ಕಡೆಯುವರೂ ಕಣ್ಣಿಗೆ ಬೀಳಲಿಲ್ಲ. ಅಂದಮೇಲೆ ಅರವಿಂದಳೇ ಮಗುವನ್ನು ನೋಡಿ ಕೊಳ್ಳುತ್ತಿದ್ದಾಳೆ? ಏಕೆ ಹೀಗೆ ಬಿಟ್ಟಿದ್ದಾರೆ? ಅಕ ಸ್ಮಾತ್ ರೇಜಿಗೆದ್ದು ಮಗುವನ್ನು ಏನಾದರೂ ಮಾಡಿದರೆ? ಒಮ್ಮೆಲೇ ಪ್ರಶ್ನೆ ಮನದಲೆಯಲ್ಲಿ ಮೂಡಿ ನಿಂತಾಗ ಹೃದಯ ಡಬಡಬನೆ ಮಿಡಿಯಿತು.

"ಅರೂ ದಾದಿಯೆಲ್ಲಿ ?"

"ಒಳಗಿದ್ದಾಳೆ."

ಅಘೋರನಿಗೆ ಒಮ್ಮೆಲೇ ತುಸು ಬಿಸಿಯೇರಿತು; ಒಬ್ಬಳನ್ನೇ ಬಿಟ್ಟು ಅವಳು ಒಳಗಿದ್ದು ಬಿಡುವುದೇ? ಅಘೋರ ನೇರವಾಗಿ ಒಳ ಹೋದ. ದಾದಿ ಮೆಟ್ಟಿಲ ಮೇಲೆ ಕಾಲು ಚಾಚಿ ಕುಳಿತು ಇನ್ನೊಬ್ಬ ದಾದಿಯೊಂದಿಗೆ ಹಾಯಾಗಿ ಮಾತುಕತೆ ನಡೆಸಿದ್ದಳು. ಅಘೋರನನ್ನು ಕಾಣುತ್ತಲೂ ಧಿಗ್ಗ ನೆದ್ದು ನಿಂತಳು.

"ಇದೇನು ನೀನು ಇಲ್ಲಿದ್ದಿ ? ಅರವಿಂದಾ ಒಬ್ಬಳೇ ಇದ್ದಾಳೆ ಅಲ್ಲಿ."

"ಈಗಷ್ಟೆ ಬಂದೆ."

"ಅವಳೊಂದಿಗೆ ಮಗುವನ್ನು ಬಿಟ್ಟು ಬಂದಿದ್ದೀಯಲ್ಲಾ ?"

"ಅವರ ಕೈಯೊಳ್ಳೊಂದು ಮಗುವಿದ್ದರೆ ನೋಡಿಕೊಳ್ಳುವುದೇ ಬೇಸಲ್ಲ.

ಅದರೊಂದಿಗೆ ಆಡಿಕೊಂಡು ಹಾಯಾಗಿರುತ್ತಾರೆ. ಯಾವ ತಂಟೆ ತಕರಾರೂ ಇರುವುದಿಲ್ಲ.

ಅಘೋರನಿಗೆ ತುಸು ಅಚ್ಚರಿ ಮೂಡಿತು. ಒಮ್ಮೆ ಸಮಾಧಾನದಿಂದ ಇದ್ದರೂ ಇನ್ನೊಮ್ಮೆ ಹುಚ್ಚುಚ್ಚಾಗಿ ವರ್ತಿಸುತ್ತಿದ್ದ ಅವಳು ತಾನೇ ಮಗುವನ್ನು ನೋಡಿಕೊಳ್ಳುವಂತ ಸ್ಥಿತಿಗೆ ಬಂದಳೆಂದರೆ ಪ್ರಗತಿ ಪಥದಲ್ಲಿ ಇನ್ನೊಂದು ಹೆಜ್ಜೆ ಮುಂದಿಟ್ಟಂತೆ. ಅಘೋರ ನಗುಮುಖದಿಂದ ಹೂದೋಟಕ್ಕೆ ಹಿಂದಿರುಗಿದ. ದಾದಿ ಹಿಂಬಾಲಿಸಿದಳು. ತಾಯಿ ಮಗ ಮಾತುಕತೆ ನಡೆಸಿದ್ದರು ಅಲ್ಲಿ.

"ಅಮ್ಮ, ನಾನು ಅಮೆರಿಕಾಕ್ಕೆ ಹೋಗಿ ಬರುವೆ."

"ಬರುವುದೆಂದು ?"

"ನಾಲ್ಕಾರು ವರ್ಷಗಳಾದರೂ ಆದೀತು."

"ಹೋಗಿ ಬನ್ನಿ." ದನಿಯಲ್ಲಿ ಯಾವ ಭಾವೋದ್ವೇಗವೂ ಇರಲಿಲ್ಲ.

"ಇನ್ನೊಂದು ವಾರ ಮಾತ್ರ ಇಲ್ಲಿರುವೆ. ಅಷ್ಟು ದಿನ ನೀವು ಮನೆಗೆ ಬಂದಿರುತ್ತೀರೇನು ? ನೋಡುವುದು ಇನ್ಯಾವಾಗಲೋ ?"

"ಡಾ|| ಜಗಜೀವನ್ ಸಧ್ಯಕ್ಕೆ ಎಲ್ಲಿಗೂ ಹೋಗ ಬಾರದೆಂದಿದ್ದಾರೆ."

"ಡಾ|| ಗಜಾನನರು ಬಂದಿದ್ದರೇ ?" ಅಘೋರ ಕೇಳಿದ.

"ಹೌದು."

"ಮಗುವನ್ನು ಸದಾ ಎತ್ತಿಕೊಂಡಿರುವುದೆಂದರೆ ತುಂಬ ಶ್ರಮವಲ್ಲವೇ ಅರೂ ?"

"ಏನಿಲ್ಲ."

ಅವಳು ಮಗುವನ್ನು ಎದೆಗೊತ್ತಿ ಹಿಡಿದುಕೊಂಡು ಲೊಚಲೊಚನೆ ಮುತ್ತಿಟ್ಟುಕೊಂಡಳು. ಅದು ಅಲ್ಲಿಯ ಸೇವಕಿಯ ಮಗು. ಅದರ ಪರಿಚಯವಾದಾಗಿನಿಂದ ಅದರೊಂದಿಗೆ ಬಹು ಹೊತ್ತನ್ನು ಕಳೆಯುತಿದ್ದ ಅವಳಿಂದಳ ಮನಸ್ಸು ಪ್ರಸನ್ನವಾಗಿತ್ತು.

"ಮನೆಗೆ ಹೋಗೋಣವೇ ?"

"........."

"ನೀವು ಈಚೆಗೆ ಮನೆಗೆ ಬರಲೇ ಇಲ್ಲವಲ್ಲಾ ?"

ಬಂದು ಮಾಡುವುದೇನು?...ಎಲ್ಲಿದ್ದರೂ ಒಂದೇ." ದನಿಯಲ್ಲಿ ನಿರಾಸೆ ದುಗುಡಗಳಿದ್ದುವು.

"ಹಾಗೆಂದರೆ ಹೇಗೆ ಅರೂ? ಆಸೆಯನ್ನು ಹುದುಗಿಡುವುದು ಸರಿಯಲ್ಲ."

"ಏನೂ ಇಲ್ಲ. ಸುಮ್ಮನೆ ಹಾಗೆಂದೆ."

ಹೊಸಬರ ಸಾಮಿಪ್ಯದಿಂದಲೋ ಏನೋ ಮಗು ಕೀರಲು ದನಿಯಲ್ಲಿ ಅಳಲು ಮೊದಲಿಟ್ಟಿತು. ಅದನ್ನು ಸಂತೈಸಲು ಅರವಿಂದಾ ತುಸು ಅತ್ತ ಕಡೆ ಹೋದಳು.

"ಮಗುವನ್ನು ಒಳಗಡೆ ಬಿಟ್ಟು ಬಾ ಅರವಿಂದಾ."

"ಉಹೂ."

"ಅವನು ನಿನ್ನನ್ನಿಲ್ಲಿ ಕೂರಗೊಡಿಸುವುದಿಲ್ಲ."

"ಇಷ್ಟರಲ್ಲೇ ಸರಿಹೋದಾನು."

ಅರವಿಂದಾ ಗಿಡಗಳಾಚೆಗೆ ಕರೆದುಕೊಂಡು ಹೋಗಿ ಸಂತೈಸ ತೊಡಗಿದಳು. ಎಷ್ಟು ಸಂತೈಸಿದರೂ ಅದು ಸಮಾಧಾನ ಹೊಂದದೆ ಅಳುತ್ತಲೇ ಇತ್ತು. ಅಘೋರ ಬಳಿಗೆ ಹೋಗಿ ಅಂದ "ಅವನಿಗೋಸ್ಕರ ನೀನೇಕೆ ಶ್ರಮ ತೆಗೆದು ಕೊಳ್ಳುತ್ತೀ? ಒಳಗಡೆ ಬಿಟ್ಟು ಬಾ ಅರೂ."

"ಸ್ವಲ್ಪ ಹೊತ್ತು ನೀವಾಚೆ ಇದ್ದರೆ ಅವನು ಸುಮ್ಮನಾದಾನು."

ಅವಳು ಎಷ್ಟೆಷ್ಟು ಪ್ರಯತ್ನಪಟ್ಟರೂ ಮಗು ಸುಮ್ಮನಾಗಲಿಲ್ಲ. ತನ್ನ ಯತ್ನವೆಲ್ಲಾ ವಿಫಲವಾಗುತ್ತಲೂ ಅರವಿಂದಾ ಮಗುವಿನೊಡನೆ ಹಾಗಿಂದ್ದಾಗೇ ಒಳಗಡೆ ಹೋದಳು. ಎಷ್ಟು ಹೊತ್ತಾದರೂ ಅವಳು ಹಿಂದಿರುಗಲಿಲ್ಲ. ಇಬ್ಬರೂ ಅವಳ ಕೊಠಡಿಗೆ ಹೋಗಿ ನೋಡಿದರು. ಅವಳು ಅಲ್ಲಿರಲಿಲ್ಲ. ದಾದಿಯನ್ನು ಕೇಳಲಾಗಿ ಅವಳು ಸೇವಿಕೆಯರ ಕೋಣೆಯಲಿದ್ದಾಳೆಂದು ತಿಳಿಯಿತು. ಅಘೋರ ದಾದಿಯನ್ನು ಕಳುಹಿಸಿ ಕರೆತರಲು ಹೇಳಿದ. ಅವಳು ಕರೆಯಲು ಹೋಗಿ ತುಸು ಹೊತ್ತಿನಲ್ಲಿ ಹಿಂದಿರುಗಿ ಬಂದು ವರದಿ ಮಾಡಿದಳು.

"ಮಗು ರಚ್ಚೆ ಹಿಡಿದು ಅಳುತ್ತಿದೆ. ಅಮ್ಮಾವರ ಗಮನವೆಲ್ಲಾ ಅತ್ತಲೇ ಇದೆ. ಇತ್ತ ಕಿವಿಗೊಡುವುದಿಲ್ಲ."

ತಂದೆ ಮಕ್ಕಳಿಬ್ಬರೂ ಅಲ್ಲಿಗೇನೇ ಹೋದರು. ಅರವಿಂದಾ ಮಗು

ಬಿಗೆ ಸಿಹಿ ತಿಂಡಿ ಕೊಟ್ಟು ಸಮಾಧಾನ ಪಡಿಸುವುದರಲ್ಲಿದ್ದಳು.

"ಅರೂ......"

"ಸ್ವಲ್ಪ ತಾಳಿರಿ."

ಎಷ್ಟೊತ್ತಾದರೂ ಅವಳ ಗಮನ ಇತ್ತ ಹರಿಯಲಿಲ್ಲ. ಮಗುವಿನ ತಾಯಿಯೂ ಅಲ್ಲಿರದಿದ್ದುದರಿಂದ ಇಬ್ಬರೂ ವರಾಂಡದಲ್ಲಿ ಸ್ವಲ್ಪ ಹೊತ್ತು ಕಾದರು. ಮತ್ತೆ ಅಘೋರ "ಅರೂ." ಎಂದ. ಮಗು ಸುಮ್ಮನಾಗಿತ್ತು. ಪುನಃ ಹೊಸಬರ ಮುಖ ನೋಡಿ ರಚ್ಚೆ ಹಿಡಿದೀತೆಂಬ ಭಯದಿಂದಲೋ ಏನೋ, ಅರವಿಂದಾ "ಉಹೂ." ಎಂದಷ್ಟು ನುಡಿದು ಮಗುವನ್ನೆತ್ತಿ ಕೊಂಡು ಹೊರಟೇ ಹೋದಳು.

ತಂದೆ ಮಕ್ಕಳಿಬ್ಬರೂ ಒಬ್ಬರ ಮುಖ ಒಬ್ಬರು ನೋಡಿಕೊಂಡರು.

ಅಧ್ಯಾಯ

೪೧

ತಿಲೋತ್ತಮ ಹೊರಟುಹೋಗಿ ಆರೇಳು ತಿಂಗಳುಗಳ ನಂತರ ಓಂ ಪ್ರಭಾ ಅಮೆರಿಕಾಕ್ಕೆ ಹೊರಟು ನಿಂತಾಗ ಅಘೋರನ ಮನದಾಳದಲ್ಲಿ ಎಲ್ಲಿಲ್ಲದ ಕಿನಿಸಿಗೆ ಮೂಡಿತು. ತುಂಬಿಬಂದ ಮನೆ ಮತ್ತೊಮ್ಮೆ ಬರಿದಾಗಲಿದೆಯೇ ಎನ್ನಿಸಿ ಅಘೋರ ಮರ್ಮರ ಮರುಗಿದ. ನಂದಾ ಮಗುವಿನ ಸಂಪೂರ್ಣ ಭಾರವನ್ನು ಹೊತ್ತುಕೊಂಡಿದ್ದುದರಿಂದ ಪ್ರಭಾಳ ಮನಸ್ಸು ಮುಗಿಲಿನೆತ್ತರಕ್ಕೆ ಚಿಮ್ಮಿ ನಿಂತಿತು. ಬಿ.ಎಸ್‌ಸಿ., ಪರೀಕ್ಷೆಯ ಫಲಿತಾಂಶವನ್ನು ಕಾತುರದಿಂದ ನಿರೀಕ್ಷಿಸುತಿದ್ದಂತೆ ಅದು ಉತ್ತಮ ತರಗತಿಯಲ್ಲಿ ಹೊರಬಿದ್ದು ರೊಟ್ಟಿಯ ಮೇಲೆ ತುಪ್ಪ ಹೊಯ್ದಂತಾಗಿತ್ತು. ಓಂ ಪ್ರಭಾ ಸಡಗರದಿಂದ ಹೊರಡಲು ಅಣಿಮಾಡಿಕೊಳ್ಳತೊಡಗಿದಳು. ದಿನದಿನವೂ ಬರುವ ತಿಲೋತ್ತಮನ ಕಾಗದಗಳು ಬೇಗನೆ ಹೊರಡಲು ಅವಳಿಗೆ ನಿರೂಪವನ್ನೂ ತರುತಿದ್ದುವು.

ಸೊಸೆಗಾಗಿ ಅಘೋರ ತನ್ನ ಗೆಳೆಯರನ್ನು ಆಹ್ವಾನಿಸಿ ಭಾರಿ ಔತಣ ಏರ್ಪಡಿಸಿದ. ಎಲ್ಲರೂ ಬಂದು ನೆರೆದೊಡನೆ ಅವಳನ್ನು ಎಲ್ಲರಿಗೂ ಸಾನಂದದಿಂದ ಪರಿಚಯ ಮಾಡಿಸಿ, ಅವಳು ಹೊರಡುತ್ತಿರುವ ಉದ್ದೇಶವನ್ನು ಬಲುಮೆಯಿಂದ ಬಿತ್ತರಿಸಿ, ಅವರಿಂದ ಶುಭಾಶಯಗಳ ಸುರಿ ಮಳೆಯನ್ನು ಪಡೆದುಕೊಳ್ಳುವಾಗ ಹೃದಯ ಹಿಗ್ಗಿದರೂ ಮನದಾಳದಲ್ಲಿ ಮೊನಚಾದ ಮುಳ್ಳೊಂದು ಚುಚ್ಚುತಿತ್ತು.......ಕುಲುಕುಲು ನಗೆ ತುಂಬಿದ ಮನೆ ಮತ್ತೊಮ್ಮೆ ಬರಿದಾಗಲಿದೆಯಲ್ಲಾ ?

ಹೊರಡುವಂದು ಮಗುವನ್ನು ಅಘೋರನ ಕೈಗೆ ನೀಡಿ ಒಂದೇ ನಿರ್ಧಾರದಿಂದ ಓಂ ಪ್ರಭಾ ತನ್ನಅಭಿಪ್ರಾಯವನ್ನು ಮುಂದಿಟ್ಟಳು "ಮಾಮಾ ನಾನಿನ್ನು ಹೆರಲಾರೆ. ಅವಿನಾಶನೇ ನಿಮ್ಮ ವಂಶದ ಕುಡಿ. ಅವನನ್ನು ನಿಮಗೆ ಒಪ್ಪಿಸಿ ಹೋಗುವೆ."

ಅಘೋರ ನಿಮಿಷ ಕಾಲ ಬೆಕ್ಕಸ ಬೆರಗಾಗಿ ಅವಳನ್ನೇ ನಿಟ್ಟಿಸಿದ.

ಅವಳು ಅವನ ನೋಟವನ್ನು ಎದುರಿಸಲಾರದೇ ತಲೆ ತಗ್ಗಿಸಿದಳು ಮುಖ ಭಾವ ಅಸಹಾಯಕತೆಯನ್ನು ಹೊರ ಸೂಸುತಿತ್ತು. ಅಘೋರ ಸಂತೈಸುವ ಧಾಟಿಯಲ್ಲಿ ಆವಳ ತಲೆಯ ಮೇಲೆ ಕೈಯಿಟ್ಟು–

"ಮಗೂ, ನೀನಿನ್ನೂ ಚಿಕ್ಕ ಹುಡುಗಿ. ಹಾಗೆಂದು ನಿರ್ಧಾರ ಕೈಗೊಳ್ಳಬೇಕಾದರೆ ಬಹಳವಾಗಿ ಯೋಚಿಸಬೇಕು ಮಗೂ. ಅನುಕೂಲ ವಿದ್ದವರೂ, ಆರೋಗ್ಯವಿದ್ದವರೂ ದೇಶಕ್ಕೆ ಉತ್ತಮವಾದ ಮಕ್ಕಳನ್ನು ನೀಡಬೇಕು. ಹೇಡಿಯಂತೆ ಹೆದರಿಕೊಳ್ಳಬಾರದು. ಅವಸರದ ಕ್ರಮ ಕೈಕೊಂಡು ಅನಂತರ ತೊಂದರೆಗೆ ಸಿಕ್ಕುವುದಕ್ಕಿಂತ ಮೊದಲೇ ಆಳವಾಗಿ ಯೋಚಿಸು. ಈ ಚಂಚಲ ಮನಸ್ಸು ಹೀಗೇ ಇರುತ್ತೆ ಎಂದು ಹೇಳುವುದ ಕ್ಕಾಗುವುದಿಲ್ಲ." ದನಿಯಲ್ಲಿ ಗಾಂಭೀರ್ಯವಿತ್ತು.

ಓಂಪ್ರಭಾ ಮಾತಾಡದೆ ತಲೆಯಲುಗಿಸಿದಳು.

"ನಿಮ್ಮಂತಹವರು ಹೆತ್ತರೇನೇ ದೇಶಕ್ಕೆ ಉತ್ತಮವಾದ ಪ್ರಜೆಗಳು ಲಭಿಸುತ್ತಾರೆ ಎಂಬುದನ್ನು ಮರೆಯಬೇಡಮ್ಮಾ. ಆ ಕೂಲಿಕಾರರು ಬಡಬಗ್ಗರು ಸಾಲುಗಟ್ಟಿ ಹೆತ್ತರೆ ದೇಶಕ್ಕೆ ಏನು ಬಂದ ಹಾಗಾಯಿತು? ಅವರಿಗೆ ವಿದ್ಯೆಯೂ ಇಲ್ಲ. ಸಂಸ್ಕಾರವೂ ಇಲ್ಲ. ಅಂದಮೇಲೆ, ಈ ವಿಚಾರವನ್ನು ನೀನೊಮ್ಮೆ ಪರ್ಯಾಲೋಚಿಸು ಪ್ರಭಾ." ದನಿಯಲ್ಲಿ ದುಗುಡ ವಿತ್ತು. ಸ್ವಲ್ಪ ತಡೆದು ಪುನಃ ಅಘೋರನ ವಿಚಾರ ಧಾರೆ ಮುಂದುವರಿ ಯಿತು "ಈ ಜೀವನ ಅನಿತ್ಯ, ಕ್ಷಣ ಕ್ಷಣವೂ ಕಾಲ ನದಿಯನ್ನು ನಾವು ದಾಟುವುದೇನೋ ನಿಜ. ಆದರೆ ಯಾವ ಗಳಿಗೆಯಲ್ಲಿ ಬಿರುಗಾಳಿ ಏಳಲಿದೆಯೋ ಯಾವ ಗಳಿಗೆಯಲ್ಲಿ ನಮ್ಮ ಬಾಳ ದೋಣಿ ಒಡೆದು ಪುಡಿಪುಡಿಯಾಗಲಿದೆಯೋ ಅದನ್ನು ಪರಮಾತ್ಮನೇ ಬಲ್ಲ. ಪ್ರಭಾ, ನಾವು ಸುಖವಾಗಿರುವ ದಿನಗಳಲ್ಲಿ ನಮ್ಮ ಕರ್ತವ್ಯದ ಹೊರೆಯನ್ನು ಇಳಿಸಿಕೊಳ್ಳುವುದು ಲೇಸು. ಮಾಡಲಾರೆ ನೆಂದು ಬದಿಗೊತ್ತುವುದಾಗಲೀ ನಾಳೆ ಎಂದು ಮುಂದೂಡುವುದಾಗಲೀ ಸರಿ ಯಲ್ಲ ಮಗೂ."

ಓಂ ಪ್ರಭಾ ಮಾತಾಡಲಿಲ್ಲ. ನೊಂದ ಮಾಮನಿಗೆ ಇನ್ನಿಷ್ಟು ನೋವನ್ನುಂಟು ಮಾಡುತಿದ್ದೇನೆಯೇ? ಎನ್ನಿಸಿದರೂ ಮನದಲ್ಲಿ ದೃಢ ನಿರ್ಧಾರವಿತ್ತು. ಬಾಗಿದ ತಲೆಯನ್ನು ಎತ್ತದೆ ನಿಂತಳು. ಅವಳಿಗರಿಯ

ದಂತೆಯೇ ಕಣ್ಣುಗಳಲ್ಲಿ ನೀರಾಡಿತು.

"ಮಗೂ,...ಪ್ರಭಾ!"

"........."

"ಅವಸರದ ಕ್ರಮ ಕೈಕೊಳ್ಳಬೇಡಮ್ಮಾ."

"ರಿಸರ್ಚ್ ಮಾಡುವ ಹಂಬಲವುಂಟು ಮಾವಾ."

"ನಿನ್ನ ಹುದ್ದೆಗೆ ಇದೊಂದು ಅಡ್ಡಿ ಎಂದುಕೊಳ್ಳಬೇಡ ಮಗೂ, ಎಷ್ಟೆಂದರೂ ಇದು ತಾತ್ಕಾಲಿಕ."

".........."

"ಜಗತ್ತೇ ಹಾಗೆ ಪ್ರಭಾ. ಹಲ್ಲಿದ್ದವರಿಗೆ ಕಡಲೆಯಿಲ್ಲ, ಕಡಲೆಯಿದ್ದವರಿಗೆ ಹಲ್ಲಿಲ್ಲ." ದನಿ ವಿಜಾತಿಯಾಗಿತ್ತು. ತನ್ನನ್ನೇ ತಾನು ಹತೋಟಿಯಲ್ಲಿಟ್ಟುಕೊಂಡ—ಅಘೋರ.

"ದಯಮಾಡಿ ಕ್ಷಮಿಸಿರಿ ಮಾವಾ."

ಅಘೋರನ ಭಾರವಾದ ಹೃದಯದಿಂದ ನೀಳವಾದ ಉಸಿರೊಂದು ಹೊರ ಹೊಮ್ಮಿತು. ಕೈಯಲ್ಲಿದ್ದ ಮಗುವನ್ನು ಎದೆಗಪ್ಪಿ ಹಿಡಿದ. ಓಂ ಪ್ರಭಳ ಕಣ್ಣುಗಳಲ್ಲಿ ಕಂಬನಿಗಳುಕ್ಕಿದುವು. ಮಾತಾಡದೆ ಕಾಲ್ಮುಟ್ಟಿ ನಮಸ್ಕರಿಸಿದಳು.

"ದೀರ್ಘ ಸುಮಂಗಲಿಯಾಗು." ದನಿ ಎದೆಯಾಳದಿಂದ ಹೊರ ಬಿದ್ದರೂ ದುಗುಡದಿಂದ ಕೂಡಿತ್ತು.

೦ ೦ ೦ ೦

ಬೆಳಗಿನ ಹವೆ ಹಿತಕರವಾಗಿತ್ತು. ತಣ್ಣಗೆ ಬೀಸಿ ಬರುವ ತಂಗಾಳಿಯಲ್ಲಿ ವನಸುಮಗಳ ಸೌರಭವು "ಘಂ"ನೆ ಹರಿದು ಬರುತ್ತಿದೆ. ನೀಲ ಗಗನದಲ್ಲಿ ಬಿಳಿ ಮೋಡಗಳು ಮೇಳೈಸಿ ತನುಮನಗಳನ್ನು ಆಕರ್ಷಿಸಿ ಆನಂದವನ್ನೂಡಿಸುತ್ತಿವೆ. ಬಾಲರವಿ ಮೆಲ್ಲಮೆಲ್ಲನೆ ಬಾನೇರುತಿದ್ದಾನೆ. ಸಾಸಿರ ಸಾಸಿರ ಖಗ ಪಕ್ಷಿಗಳ ಕೊರಳುಲಿಯು ಕರ್ಣಾನಂದಕರವಾಗಿ ಕೇಳಿ ಬರುತ್ತಿದೆ. ತಣ್ಣನೆಯ ತಂಗಾಳಿಗೆ ಮೈಗೊಟ್ಟು ಓಂ ಪ್ರಭಳನ್ನು ಬೀಳ್ಕೊಡಲು ಎಲ್ಲರೂ ವಿಮಾನ ನಿಲ್ದಾಣದಲ್ಲಿ ನೆರೆದಿದ್ದಾರೆ. ಕೊನೆಯ ಗಳಿಗೆಯವರೆವಿಗೆ ನಗೆ ಚಾಟಿಕೆಯ ಮಾತು ಕತೆಗಳಲ್ಲಿ ತೊಡಗಿದ್ದರೂ ವಿಮಾನದ ಮೆಟ್ಟಿಲನ್ನು ಏರ

ಲಿರುಲಾಗ ತಾನು ಬಿಟ್ಟು ಹೋಗಲಿರುವ ಕರುಳಿನ ತುಣುಕಿಗಾಗಿ ಓಂ ಪ್ರಭಳ ಕಣ್ಣುಗಳಲ್ಲಿ ನೀರಾಡಿತು. ಬಳಿಯಲ್ಲಿದ್ದ ಅಘೋರನ ಕಣ್ಣುಗಳೂ ಕೆಂಪು ಕೆಂಪಾದುವು. ಅವಳನ್ನು ಎದೆಗಪ್ಪಿ ನೆತ್ತಿಯನ್ನು ಚುಂಬಿಸಿ ಆತ್ಮೀಯತೆ ಯಿಂದ ಬೀಳ್ಕೊಡುವಾಗ ಅವನು ಅರಳೆಯಂತೆ ಮೃದುವಾದುದನ್ನು ಅಚ್ಚರಿ ತುಂಬಿದ ಕಣ್ಣುಗಳಿಂದ ನಿಟ್ಟಿಸಿದಳು—ಸೌಮಾ. ಎದೆಯಲ್ಲಿ ಬಿಸಿಯುಸಿರು ಏರಿಳಿಯಿತು. ಕಂಬನಿ ತುಂಬಿದ ಕಣ್ಣುಗಳು ಮಂಜು ಮಂಜಾದುವು. ಮಗಳನ್ನಪ್ಪಿ ಬೀಳ್ಕೊಟ್ಟಳು. ಮೆಟ್ಟಿಲೇರಿ ನಿಂತು ಕರವಸ್ತ್ರವನ್ನು ಆಡಿಸು ತಿದ್ದ ಓಂ ಪ್ರಭಳ ಕಣ್ಣುಗಳೂ ಇನ್ನೊಮ್ಮೆ ತುಂಬಿ ಬಂದವು.

೦ ೦ ೦ ೦

ಪುಟ್ಟ ಪುಟ್ಟ ಹೆಜ್ಜೆಗಳನ್ನಿಟ್ಟು ಓಡಾಡಿ ನಲಿದಾಡುವ ಮಕ್ಕಳನ್ನು ಅರವಿಂದಾ ಬಯಸುತಿದ್ದಳೇ ವಿನಃ ತೊಟ್ಟಿಲು ಮಗುವನ್ನಲ್ಲ. ಅವಳನ್ನು ಈಗಲೇ ಕರೆ ತರುವುದೇ? ಅಥವಾ ಇನ್ನೂ ಸ್ವಲ್ಪ ಕಾಲ ತಾಳುವುದೇ? ಎಂಬ ವಿಚಾರ ವೇದಿಕೆಯಲ್ಲಿ ಅಘೋರ ಅಂಡಲೆಯುತಿದ್ದಾಗ ಡಾ|| ಜಗಜೀವನ್ ಇನ್ನೂ ಸ್ವಲ್ಪ ಕಾಲ ಕಾದು ನೋಡಿರಿ ಎಂದರು. ಆದರೂ, ಅಘೋರನ ಮನಸ್ಸು ತೂಗುಯ್ಯಾಲೆಯನ್ನು ಏರಿತ್ತು.

ಏತನ್ಮಧ್ಯೆ, ಅವಿನಾಶನ ಮೈಯಲ್ಲಿ ಇಸುಬು ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿದುದರಿಂದ ಅರವಿಂದಳನ್ನು ಕರೆ ತರುವ ಯೋಚನೆಯನ್ನು ಅಷ್ಟಕ್ಕೆ ಕೈಬಿಟ್ಟು ಅಘೋರ ಪಂಡಿತರ ಮನೆಗೆ ಧಾವಿಸಿ ಔಷಧಿ ತಂದ. ಇಸುಬಿನ ಹುಟ್ಟಡಗಿ ಅದರ ಕಲೆಗಳೂ ಮಾಗಬೇಕಾದರೆ ಸ್ವಲ್ಪ ಕಾಲ ಬೇಕಾಯಿತು.

ಅವಿನಾಶ್ ಮುದ್ದು ಮುದ್ದು ಮಾತುಗಳಿಂದ ಎಲ್ಲರ ಮನವನ್ನೂ ಸೂರೆ ಗೊಂಡಿದ್ದ. ನಂದಾದೇವಿಯೊಂದಿಗೆ ಅಘೋರ ತಿಲೋತ್ತಮನ ಬಾಲ್ಯ ದಿನಗಳನ್ನು ಸ್ಮರಿಸಿಕೊಳ್ಳುತ್ತಾ ಮೈಯೆಲ್ಲಾ ಮನಸ್ಸಾಗಿ ಅಂದ—

"ಆಗ ತಿಲೋ ಹೀಗೇ ಇದ್ದ ಅಲ್ಲವೇ?" ಸಂತಸದ ಕಿರುತೊರೆ ಎದೆ ಯಿಂದ ಮುಖಕ್ಕೆ ಹರಿದು ಬಂತು.

"ನಿಜ ಅಘೂ, ಅವನೇ ಮೂರ್ತೀಭವಿಸಿದಂತಿದ್ದಾನೆ ಅವಿನಾಶ್!"

ನುಡಿ ಹೊರ ಬಿದ್ದಾಗ ಮುಖ ಹೂವಿನಂತರಳಿತ್ತು. ಮತ್ತೆ ಅವಳೆಂದಳು "ನಮ್ಮ ವಂಶ ಇವನಿಂದಲಾದರೂ ಕವಲೊಡೆಯಲಿ."

“ದೇವರಿದ್ದಾನೆ.” ನುಡಿ ಅಭ್ಯಾಸ ಬಲದಿಂದ ಹೊರಬಿತ್ತು.

೦ ೦ ೦ ೦

ಅಘೋರ ಆಸ್ಪತ್ರೆಯಿಂದ ಬಂದವನೇ ನೇರವಾಗಿ ತಾಯಿಯ ಬಳಿಗೆ ಹೋಗಿ ಮೈಯೆಲ್ಲಾ ಹರ್ಷದ ಮನೆಯಾಗಿ ವಿಷಯವನ್ನು ಮುಂದಿಟ್ಟ–

“ಅಮ್ಮಾ, ಇಂದು ಅರವಿಂದಳನ್ನು ಕರೆತರುವೆ.”

“ಈ ತಿಂಗಳು ದಿನ ಚೆನ್ನಾಗಿಲ್ಲವಂತೆ ಇಷ್ಟೇ ದಿನ ತಾಳಿದ್ದಿ ಇನ್ನೊಂದು ತಿಂಗಳು ತಾಳಿಕೊಳ್ಳಪ್ಪಾ.”

ಅಘೋರ ಮಾತಾಡದೆ ತಾಯಿಯನ್ನೇ ನಿಟ್ಟಿಸಿದ.

“ಈ ಸಲ ಹಿಂದಿನಂತೆ ಒಂದೆರಡು ದಿನಗಳಿಗೆ ಕರೆತರುತ್ತಿಲ್ಲ. ಮನೆ ದುಂಬಿಕೊಳ್ಳುವಾಗ ಶುಭ ಮೂಹೂರ್ತದಲ್ಲಿ ಕರೆತರಬೇಕು.”

ಅಘೋರ ತಾಯಿಯ ಹಿತವಚನಗಳನ್ನು ವಿನೀತನಾಗಿ ಸ್ವೀಕರಿಸಿದ. ತಿಂಗಳೊಂದನ್ನು ಕಳೆಯುವುದೆಂದರೆ ಬಲು ದೀರ್ಘವಾಗಿ ತೋರಿತಾದರೂ ತಾಯಿಯ ಮಾತನ್ನು ಮೀರುವ ಸಾಹಸ ಮಾಡಲಿಲ್ಲ. ಆ ಶುಭಮುಹೂರ್ತ ಬರುವವರೆಗೆ ಕಾದಿದ್ದು ಅವಳನ್ನು ಸಂಭ್ರಮದಿಂದ ಕರೆತಂದ. ಬಾಗಿಲಲ್ಲಿ ಎದುರಾದ ನಂದಾದೇವಿ ಅವಿನಾಶನನ್ನು ಎತ್ತಿಕೊಂಡಿದ್ದಳು. ಅಘೋರ ಅವಳಿಂದ ಮಗುವನ್ನು ಎತ್ತಿಕೊಂಡು ಅರವಿಂದಳ ಕೈಗೆ ನೀಡಿ ಉಕ್ಕಿ ಬಂದ ಸಂತೋಷದಿಂದ ಹಿಗ್ಗಿ ಒಲುಮೆಯಿಂದ ಅಂದ–

“ಹಿಂದೊಮ್ಮೆ ನಿನಗೆಂದಾದರೂ ಬಹುಮಾನ ನೀಡುವೆ ಎಂದಿದ್ದೆ. ಅದನ್ನಿಂದು ಸಂತೋಷದಿಂದ ನೀಡುತಿದ್ದೇನೆ, ಅರವಿಂದಾ.”

ಅರವಿಂದಾ ಮಗುವಿನ ಮುಖವನ್ನೇ ಬೆಕ್ಕಸ ಬೆರಗಾಗಿ ನೋಡುತ್ತಾ ಪ್ರೇಮದ ಮುತ್ತನ್ನಿಡಿದಳು. ಒಮ್ಮೆಲೇ ಅವಳಿಗೇನೆನ್ನಿಸಿತೋ ಇಪ್ಪತ್ತು ವರ್ಷಗಳ ಹಿಂದಿನ ಚೇತನ ಮೂರ್ತಿಯಾಗಿ “ತಿಲೋ !” ಎಂದಳು. ಉಕ್ಕಿ ಬಂದ ಆನಂದಪರವಶತೆಯಿಂದ ಮುಖಮಂಡಲ ಹೂವಿನಂತರಳಿತು.

ದೂರದ ಚರ್ಚಿನ ಗಂಟೆ ಶುಭವನ್ನು ಕೋರುವಂತೆ ಸಮಯಕ್ಕೆ ಸರಿಯಾಗಿ ಬಾರಿಸಿತು. ಢನ್. ಢನ್. ಢನ್. ಢನ್. ಢನ್.

ಮಂಗಳಂ

ಮಲ್ಲಿಕಾ ಕೃತಿಗಳು

(ಕಾದಂಬರಿಗಳು)

೧) ಜೀವನಗಂಗಾ
೨) ಡಾ|| ಅಘೋರ
೩) ಡಾ|| ಕಮಲೇಶ್
೪) ವಂದೇ ಮಾತರಂ
೫) ಅನಂತಾನಂತದೆಡೆಗೆ
೬) ಮನೋನ್ಮಣಿ
೭) ಸಂತ್ರಾಸಿನಿ
೮) ಆಸೆಯ ಸುಳಿಯಲ್ಲಿ

(ಕಥಾ ಸಂಕಲನ)

೯) ಬಹುರತ್ನಾವಸುಂಧರಾ
೧೦) ರತ್ನಗರ್ಭಾವಸುಂಧರಾ
೧೧) ಸುಧಾಮಣಿ
೧೨) ರಮಣೀಮಣಿ
೧೩) ಲಿಯೋನಾ
೧೪) ಶ್ರೀಮುಖಿ
೧೫) ಶ್ರೀಹರ್ಷಲಾ
೧೬) ವೈಶಾಖೀ ಪರ್ವ
೧೭) ಫಾಲ್ಗುಣೀ ಪರ್ವ
೧೮) ಮಣಿಮೇಖಲಾ
೧೯) ಮಣಿಕರ್ಣಿಕಾ

(ಕವಿತಾ ಸಂಕಲನ)

೨೦) ಪೂಜಾವಸಾನ ಸಮಯೇ....!
೨೧) ಧ್ಯಾನಾವಸಾನ ಸಮಯೇ....!
೨೨) ಗಗನ ಕುಸುಮ
೨೩) ಜೀವನ ಕುಸುಮ
೨೪) ಚಂಪಕ ರಾಜಿ
೨೫) ಬಕುಳ ರಾಜಿ
೨೬) ಕಸ್ತೂರಿ ಮಾಲಿಕಾ
೨೭) ಮಂದಾರ ಮಾಲಿಕಾ

ಮಲ್ಲಿಕಾ ಕೃತಿಗಳು

(ಕವಿತಾ ಸಂಕಲನ)

೨೮) ವಿಜಯ ಗಾಥಾ
೨೯) ಗಾನ ತೀರ್ಥ
೩೦) ನಾದ ಬಿಂದು
೩೧) ಕಾವ್ಯಾನಂದ ನಂದಿನಿ
೩೨) ಭಾವಾನಂದ ನಂದಿನಿ
೩೩) ಸಂಗೀತ ಪುಷ್ಪಾಂಜಲಿ
೩೪) ಆತ್ಮ ಗೀತಾಂಜಲಿ (ಅಚ್ಚಿನಲ್ಲಿ)

(ಸಂಜೀವನ ಕಾವ್ಯ)

೩೫) ಮಂಗಳ ಭಾರತಿ
೩೬) ಕಲ್ಯಾಣ ಭಾರತಿ
೩೭) ಉತ್ತರೋತ್ತರಣಿ
೩೮) ರಾಗಾನುರಾಗಿಣಿ
೩೯) ಪ್ರಫುಲ್ಲ ಭಾರತ

(ಪೌರಾಣಿಕ ನಾಟಕ)

೪೦) ಪುಣ್ಯಪಯೋನಿಧಿ
೪೧) ಪುಣ್ಯಾಭಿಸಾರ

(ಸಾನೆಟ್‌ಗಳು)

೪೨) ತರಂಗಿಣಿ

(ಗದ್ಯ ಕಾವ್ಯ)

೪೩) ಐಂದ್ರ ಕೀರ್ತಿ ಕೇತನಂ

(ಉಪನಿಷತ್ಕಥಾ)

೪೪) ಕೃತಂ ಸ್ಮರ ಕ್ರತುಂ ಸ್ಮರ

(ಶಿಶು ಸಾಹಿತ್ಯ)

೪೫) ದೂರ ದೇಶದಲ್ಲಿ
೪೬) ಬೆಳದಿಂಗಳ ರಾತ್ರಿ
೪೭) ರಂಗನ ಸಾಹಸ
೪೮) ಓಹಿಯೋಜ ಸರೋವರ
೪೯) ಕೌಶಿಕನ ಗೊಂಬೆ
೫೦) ವಿಶೇಷ ಸುದ್ದಿ
೫೧) ಕಲ್ಯಾಣಿ ರಾಗಿಣಿ

ಲಕ್ಷ್ಮೀ ಪ್ರಕಾಶನ
170, ಲ್ಯಾಂಗ್ ಫೋರ್ಡ್ ರೋಡ್, ಬೆಂಗಳೂರು–560 025